ಮುರುಘಾ ಪರಂಪರೆಯ ಸಾಹಿತ್ಯ : ಒಂದು ಅಧ್ಯಯನ

(ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯ ವಿಭಾಗಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು
ಪುಷ್ಪಾ ಬಸನಗೌಡರ
ಎಂ.ಎ., ಎಂ.ಫಿಲ್.
ಸಹ ಪ್ರಾಧ್ಯಾಪಕರು
ಮಹಾಂತ ಪ್ರಥಮ ದರ್ಜೆ ಮಹಾವಿದ್ಯಾಲಯ,
ರಾಯಾಪೂರ, ಧಾರವಾಡ-೧.

ಮಾರ್ಗದರ್ಶಕರು
ಡಾ॥ ವೀರಣ್ಣ ರಾಜೂರ
ಸಂಯೋಜಕರು,
ಶ್ರೀ ಬಸವೇಶ್ವರ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅಧ್ಯಯನಾಂಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ – ೫೮೩೨೭೬

ಲಿಂಗಾಯತ ಅಧ್ಯಯನ ಸಂಸ್ಥೆಯ ಸಂಶೋಧನಾ ಕೇಂದ್ರ
ತೋಂಟದಾರ್ಯ ಮಠ,
ಗದಗ.–೫೮೨೧೦೧

೨೦೧೨

ಮುರುಘಾ ಪರಂಪರೆಯ ಸಾಹಿತ್ಯ : ಒಂದು ಅಧ್ಯಯನ

(ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯ ವಿಭಾಗಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ)

ಸಂಶೋಧಕರು

ಪುಷ್ಪಾ ಬಸನಗೌಡರ

ಎಂ.ಎ., ಎಂ.ಫಿಲ್.

ಸಹ ಪ್ರಾಧ್ಯಾಪಕರು

ಮಹಾಂತ ಪ್ರಥಮ ದರ್ಜೆ ಮಹಾವಿದ್ಯಾಲಯ,

ರಾಯಾಪೂರ, ಧಾರವಾಡ-೧.

ಮಾರ್ಗದರ್ಶಕರು

ಡಾ॥ ವೀರಣ್ಣ ರಾಜೂರ

ಸಂಯೋಜಕರು,

ಶ್ರೀ ಬಸವೇಶ್ವರ ಪೀಠ,

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಅಧ್ಯಯನಾಂಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ – ೫೮೩೨೭೬

ಲಿಂಗಾಯತ ಅಧ್ಯಯನ ಸಂಸ್ಥೆಯ ಸಂಶೋಧನಾ ಕೇಂದ್ರ

ತೋಂಟದಾರ್ಯ ಮಠ,

ಗದಗ.-೫೮೨೧೦೧

೨೦೧೨

ಮಾರ್ಗದರ್ಶಕರ ಪ್ರಮಾಣಪತ್ರ

ಪುಷ್ಪಾ ಬಸನಗೌಡರ ಇವರು **"ಮುರುಘಾ ಪರಂಪರೆಯ ಸಾಹಿತ್ಯ : ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯ ವಿಭಾಗಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಪ್ರಬಂಧವು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : ೩೦/೧/೨೦೨೨
ಸ್ಥಳ : ಧಾರವಾಡ

ಡಾ. ವೀರಣ್ಣ ರಾಜೂರ
ಸಂಯೋಜಕರು,
ಶ್ರೀ ಬಸವೇಶ್ವರ ಪೀಠ,
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

ಸಂಶೋಧಕರ ಪ್ರಮಾಣಪತ್ರ

"ಮುರುಘಾ ಪರಂಪರೆಯ ಸಾಹಿತ್ಯ : ಒಂದು ಅಧ್ಯಯನ" ಎಂಬ ಶೀರ್ಷಿಕೆಯ ಪ್ರೌಢಪ್ರಬಂಧವನ್ನು ಡಾ. ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಲಿಂಗಾಯತ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ ಈ ಕೇಂದ್ರದ ಮೂಲಕ ಪಿಎಚ್.ಡಿ. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾನಿಕಾಯ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ :- ಧಾರವಾಡ.
ದಿನಾಂಕ: ೨೦.೧.೨೦೧೨.

ಮುಪ್ಪಾ ಬಸನಗೌಡರ

ಅರಿಕೆ

ಸ್ನಾತಕೋತ್ತರ ಅಧ್ಯಯನ ಪೂರೈಸಿದ ಕೆಲವೇ ದಿನಗಳಲ್ಲಿ ಧಾರವಾಡದ ಶ್ರೀ ಮಹಾಂತ ಮಹಾವಿದ್ಯಾಲಯದಲ್ಲಿ ಕನ್ನಡ ಉಪನ್ಯಾಸಕಿಯಾಗಿ ಸೇವೆ ಪ್ರಾರಂಭಿಸಿದೆ. ಮುಂದೆ ೧೯೯೫ರಲ್ಲಿ ಕರ್ನಾಟಕ ವಿಶ್ವವಿದ್ಯಾಲಯದಿಂದ ಡಾ॥ ವೀರಣ್ಣ ರಾಜೂರ ಅವರ ಮಾರ್ಗದರ್ಶನದಲ್ಲಿ ಎಂ.ಫಿಲ್. ಪದವಿಯನ್ನು ಪಡೆದುಕೊಂಡೆನು. ಆಗಿನಿಂದಲೂ ಪಿಎಚ್.ಡಿ. ಅಧ್ಯಯನ ಕೈಗೊಳ್ಳಬೇಕೆಂಬ ಮಹದಾಸೆಯೇನೋ ಇತ್ತು. ಕಾರಣಾಂತರಗಳಿಂದ ಅದು ಅಲ್ಲಿಯೇ ಸ್ಥಗಿತಗೊಂಡಿತ್ತು. ಮುಂದೆ ಅದಕ್ಕೆ ಚಾಲನೆ ದೊರೆತಿದ್ದು ೨೦೦೭ರಲ್ಲಿ. ನನ್ನ ವಿದ್ಯಾಗುರುಗಳೂ ನನ್ನ ಹಿತೈಷಿಗಳೂ ಮುಖ್ಯವಾಗಿ ನನ್ನ ಮನೆಯವರ ಒತ್ತಾಸೆಯ ಮೇರೆಗೆ ಪಿಎಚ್.ಡಿ. ಮಾಡಲು ನಿರ್ಧರಿಸಿದೆ. **ಡಾ॥ ವೀರಣ್ಣ ರಾಜೂರ** ಅವರ ಮಾರ್ಗದರ್ಶನದಲ್ಲಿ **"ಮುರುಘಾ ಪರಂಪರೆಯ ಸಾಹಿತ್ಯ : ಒಂದು ಅಧ್ಯಯನ"** ಎಂಬ ವಿಷಯವನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡೆ.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಂಶೋಧನಾ ಮಾರ್ಗಗಳು ಹತ್ತು ಹಲವು ನೂರಾರು. ಒಬ್ಬ ಕವಿಯ ಒಂದು ಕೃತಿಯ ಕುರಿತಾಗಿ ಅನೇಕ ಸಂಶೋಧನೆಗಳು ನಡೆದಿವೆ. ಆದರೆ ಒಂದು ಪರಂಪರೆಯನ್ನು ಅನುಲಕ್ಷಿಸಿ, ಅಲ್ಲಿ ಬರುವ ಕವಿಗಳು-ಕೃತಿಗಳು, ಒಟ್ಟಾರೆ ಸಾಹಿತ್ಯ ಕುರಿತಾದ ಅಧ್ಯಯನಗಳು ನಡೆದಿಲ್ಲ. ಕಾರಣ ಈ ವಿಷಯದ ಮೇಲೆ ಅಧ್ಯಯನ ಸಂಶೋಧನೆ ನಡೆಸುವುದು ಒಳ್ಳೆಯದು. ಇದರಿಂದ ಒಂದು ಪರಂಪರೆಯ ಸಾಹಿತ್ಯದ ಸಮಗ್ರ ಚಿತ್ರಣ ದೊರೆಯುತ್ತದೆ ಎಂಬ ಮಾರ್ಗದರ್ಶಕರ ಸಲಹೆಯ ಮೇರೆಗೆ ಅಧ್ಯಯನವನ್ನು ಪ್ರಾರಂಭಿಸಿದೆ.

ಮೊದಲು ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲ ಆಕರ ಸಾಮಗ್ರಿಗಳನ್ನು ಸಂಗ್ರಹಿಸುತ್ತಾ, ಕ್ಷೇತ್ರಕಾರ್ಯ ಕೈಗೊಳ್ಳುವ ಮೂಲಕ ಒಟ್ಟು ವಿಷಯವನ್ನು ಕಲೆ ಹಾಕಿದೆ. ನಂತರ ಪ್ರಬಂಧದ ಅಧ್ಯಾಯಗಳಿಗನುಗುಣವಾಗಿ ವಿಷಯವನ್ನು ಜೋಡಿಸಿ ಬರೆಯತೊಡಗಿದೆ. ಬರೆಯುತ್ತಾ ಹೋದ ಹಾಗೆ ನನ್ನ ಮೊದಲ ಬರಹಕ್ಕಿಂತ ನಂತರದ ಬರಹದಲ್ಲಿ ಖಚಿತತೆ, ಸ್ಪಷ್ಟತೆ ಹಾಗೂ ನಿರ್ದಿಷ್ಟ ಅಂಶಗಳು ಸೇರ್ಪಡೆಯಾದವು. ಪ್ರತಿಯೊಂದು ಅಧ್ಯಾಯದ ವಿಷಯವನ್ನು ಅತ್ಯಂತ ನಿಖರವಾಗಿ ತಿದ್ದಿಕೊಟ್ಟು, ತಪ್ಪುಗಳನ್ನು ತೆಗೆದುಹಾಕಿ, ಬರವಣಿಗೆಯನ್ನು ಶುದ್ಧಗೊಳಿಸಿ ಪ್ರಬಂಧಕ್ಕೆ ಅಂತಿಮ ರೂಪ ಕೊಟ್ಟವರು ನನ್ನ ವಿದ್ಯಾಗುರುಗಳೂ, ನನ್ನ ಮಾರ್ಗದರ್ಶಕರೂ ಆದ ಡಾ॥ ವೀರಣ್ಣ ರಾಜೂರ ಅವರು. ಪ್ರಬಂಧದ ಕೊನೆಯ ಘಟ್ಟದಲ್ಲಿಯೂ ನಾನು ಅವರಿಗೆ ಕೊಟ್ಟ ತೊಂದರೆ ಅಸದಳ. ಅದನ್ನು ಲೆಕ್ಕಿಸದೆ ನನ್ನ ಸಮಸ್ಯೆಗಳನ್ನು ನಿವಾರಿಸುತ್ತಾ ತಮ್ಮ ಕಾರ್ಯಕ್ಷಮತೆ, ತಾಳ್ಮೆ, ಸಹೃದಯತೆಗಳನ್ನು ತೆರೆದು ತೋರಿಸಿದ್ದಾರೆ. ಪ್ರಥಮವಾಗಿ ಮಾರ್ಗದರ್ಶಕರಾದ ಡಾ॥ ವೀರಣ್ಣ ರಾಜೂರ ಅವರಿಗೆ ನನ್ನ ತುಂಬು ಮನದ ಅನಂತಾನಂತ ಕೃತಜ್ಞತೆಗಳು.

ಪಿಎಚ್.ಡಿ. ಅಧ್ಯಯನವನ್ನು ಕೈಗೊಳ್ಳಲೇಬೇಕೆಂಬ ಉತ್ಸಾಹ, ಹುರುಪು, ಹುಮ್ಮಸ್ಸುಗಳನ್ನು ನನ್ನಲ್ಲಿ ತುಂಬಿ ನನಗೆ ಪ್ರೇರಣೆಯಿತ್ತ ಡಾ॥ ಎಂ.ಎಂ. ಕಲಬುರ್ಗಿಯವರಿಗೆ ಗೌರವಪೂರ್ವಕ ನಮನಗಳು. ಪ್ರಬಂಧ ರಚನೆಯಲ್ಲಿ ಸೂಕ್ತ ಸಲಹೆ-ಸೂಚನೆಗಳನ್ನು ನೀಡಿದ ಡಾ.ಬಿ.ವ್ಹಿ. ಶಿರೂರ ಅವರಿಗೆ, ಪ್ರಬಂಧವನ್ನು ಬೇಗ ಮುಗಿಸುವಂತೆ ಪ್ರೇರೇಪಿಸಿದ ಡಾ. ಎಫ್.ಟಿ. ಹಳ್ಳಿಕೇರಿಯವರಿಗೆ, ಪ್ರಬಂಧದ ಅಂತಿಮ ಹಂತದಲ್ಲಿ ಮುಕ್ತಮನದ ಸಲಹೆಗಳನ್ನಿತ್ತು ಮಾಹಿತಿ ಒದಗಿಸಿದ ಡಾ. ಅರ್ಜುನ ಗೊಳಸಂಗಿ ಇವರಿಗೆ ತುಂಬು ಹೃದಯದ ಕೃತಜ್ಞತೆಗಳು.

ಈ ಪ್ರಬಂಧ ರೂಪುಗೊಳ್ಳುವಂತೆ ನನ್ನನ್ನು ಆಶೀರ್ವದಿಸಿದ ಬೃಹನ್ಮಠದ ಪೀಠಾಧ್ಯಕ್ಷರಾದ ಡಾ.ಶಿವಮೂರ್ತಿ ಮುರುಘಾ ಶರಣರಿಗೆ, ಆನಂದಪುರದ ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳಿಗೆ ಹಾಗೂ ಧಾರವಾಡ ಮುರುಘಾಮಠದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳವರಿಗೆ ಭಕ್ತಿಪೂರ್ವಕ ಪ್ರಣಾಮಗಳು. ಆಕರ ಸಾಮಗ್ರಿಗಳನ್ನು ಒದಗಿಸುವಲ್ಲಿ ಸಹಕರಿಸಿದ ಚಿತ್ರದುರ್ಗ ಬೃಹನ್ಮಠದ ಆಡಳಿತಾಧಿಕಾರಿಗಳಾದ ಡಾ.ಜಿ.ಎನ್.ಮಲ್ಲಿಕಾರ್ಜುನಪ್ಪ ಹಾಗೂ ದಾವಣಗೆರೆಯ ಗೌ.ಮ. ಉಮಾಪತಿಶಾಸ್ತ್ರಿಗಳೂ, ಎಸ್. ಶಿವಣ್ಣ ಇವರುಗಳಿಗೆ ನನ್ನ ಅನಂತ ಕೃತಜ್ಞತೆಗಳು.

ಪ್ರಸ್ತುತ ಪ್ರಬಂಧಕ್ಕೆ ಆಧಾರಸ್ತಂಭವೆನಿಸಿದ ಪ್ರಾರಂಭದಿಂದ ಕೊನೆಯವರೆಗೂ ಸರ್ವ ರೀತಿಯಿಂದ ಸಹಕರಿಸಿದ ನನ್ನ ಪತಿದೇವರಾದ ಶ್ರೀ ವಿಜಯೇಂದ್ರಗೌಡ ಪಾಟೀಲ ಅವರಿಗೂ ಪ್ರಬಂಧದ ಬರವಣಿಗೆಯಲ್ಲಿ ಸಹಕರಿಸಿದ ನನ್ನ ಪೂಜ್ಯ ತಂದೆಯವರಾದ ಶಿಕ್ಷಕ, ಸಾಹಿತಿ ಫಕೀರಗೌಡ ಬಸನಗೌಡರ ಇವರಿಗೂ ತುಂಬು ಹೃದಯದ ನಮಸ್ಕಾರಗಳು.

ನನ್ನ ಸಂಶೋಧನಾ ಕಾರ್ಯಕ್ಕೆ ಸಂಪೂರ್ಣ ಬೆಂಬಲವನ್ನಿತ್ತು ನನಗೆ ಪ್ರೀತಿ, ವಾತ್ಸಲ್ಯ ತೋರುತ್ತ ನನ್ನನ್ನು ಪ್ರೋತ್ಸಾಹಿಸಿದ ನನ್ನ ಅತ್ತೆ-ಮಾವಂದಿರಿಗೂ ನಾನು ಚಿರಋಣಿಯಾಗಿರುತ್ತೇನೆ. ಹಾಗೆಯೇ ಬರವಣಿಗೆಯ ಸಂದರ್ಭದಲ್ಲಿ ಅತ್ಯಂತ ತಾಳ್ಮೆಯಿಂದ ಸಹಕರಿಸಿದ ನನ್ನ ಮುದ್ದು ಮಕ್ಕಳಾದ ಕು.ಶ್ರೀಲಕ್ಷ್ಮಿ ಹಾಗೂ ದೀಪ್ತಿ ಇವರಿಗೂ ನನ್ನ ವಂದನೆಗಳು.

ಪುಸ್ತಕ ಸೌಲಭ್ಯವನ್ನು ಒದಗಿಸಿಕೊಟ್ಟ ಲಿಂಗಾಯತ ಅಧ್ಯಯನಸಂಸ್ಥೆ, ತೋಂಟದಾರ್ಯಮಠ ಗದಗ ಇದರ ನಿರ್ದೇಶಕರಿಗೂ ಹಾಗೂ ಗ್ರಂಥಾಲಯ ವ್ಯವಸ್ಥಾಪಕರಾದ ಶ್ರೀಯುತ ಪಿಂಗ್ಟೆಯವರಿಗೂ ಧನ್ಯವಾದಗಳು.

ಸ್ಥಳ :- ಧಾರವಾಡ.
ದಿನಾಂಕ:- ೨೦.೮.೨೦೧೨.

ಪುಷ್ಪಾ ಬಸನಗೌಡರ

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ಅಧ್ಯಾಯ - ೧

ಅಧ್ಯಯನದ ಉದ್ದೇಶ ಮತ್ತು ಸ್ವರೂಪ

ವೀರಶೈವ ಧರ್ಮ ಮತ್ತು ಸಾಹಿತ್ಯವನ್ನು ಉಳಿಸಿ ಬೆಳೆಸುವಲ್ಲಿ ಗುರುಪರಂಪರೆ ಹಾಗೂ ವಿರಕ್ತ ಪರಂಪರೆಗಳು ಸಾಕಷ್ಟು ಕೊಡುಗೆಯನ್ನಿತ್ತಿವೆ. ಐತಿಹಾಸಿಕ ಹಾಗೂ ಭೌಗೋಳಿಕ ಪ್ರಸಾರದ ದೃಷ್ಟಿಯಿಂದ ತುಂಬ ಪ್ರಸಿದ್ಧಿ ಪಡೆದಿರುವ ವೀರಶೈವಧರ್ಮ ೧೨ನೆಯ ಶತಮಾನದಲ್ಲಿ ಸ್ಪಷ್ಟ ಸ್ವರೂಪವನ್ನು ಪಡೆದುಕೊಂಡಿದೆ.

"ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ" ಎಂಬ ಧೋರಣೆಯನ್ನಿಟ್ಟುಕೊಂಡು ಬಸವಣ್ಣನವರ ನೇತೃತ್ವದಲ್ಲಿ ಶರಣರ ಆಂದೋಲನ ಪ್ರಾರಂಭವಾಗುತ್ತದೆ. ವ್ಯಕ್ತಿ ಕಲ್ಯಾಣಕ್ಕಿಂತ ಸಮಾಜ ಕಲ್ಯಾಣವೇ ಮುಖ್ಯ ಎಂದು ನಂಬಿ ನಡೆದ ಅದು ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪ್ರೇರಣೆಯನ್ನೊದಗಿಸುತ್ತದೆ. ವರ್ಗಭೇದ, ವರ್ಣಭೇದ, ಲಿಂಗಭೇದಗಳನ್ನು ದೂರೀಕರಿಸಿ ಅಸಮಾನತೆಯನ್ನು ಹೊಡೆದೋಡಿಸಲು ಮುಂದಾಗುತ್ತದೆ. ಈ ತುಡಿತದಲ್ಲಿ ಮೂಡಿ ಬಂದುದು ಹೊಸ ಸಮಾಜದ ಹೊಸ ಅಭಿವ್ಯಕ್ತಿಯ ಹೊಸ ಸಾಹಿತ್ಯ ರೂಪ ವಚನ ಸಾಹಿತ್ಯ ಈ ಸಾಹಿತ್ಯದ ತೊರೆಗೆ ಅನೇಕ ಶರಣರು, ಅನಂತರ ರಾಘವಾಂಕರಾದಿ ಹರಿಹರ ಶಿವಕವಿಗಳು ತಮ್ಮ ಕೃತಿಗಳ ಮೂಲಕ ಮಹಾಪೂರವನ್ನೇ ಉಂಟು ಮಾಡಿದರು. ಇದು ವೀರಶೈವ ಧರ್ಮ ಮತ್ತು ಸಾಹಿತ್ಯದ ಮೊದಲ ಘಟ್ಟ.

ವಿಜಯನಗರ ಸಾಮ್ರಾಜ್ಯದ ಉದಯ ಕನ್ನಡ ನಾಡಿಗೂ ವೀರಶೈವಧರ್ಮಕ್ಕೂ ನೂತನ ಚೇತನವಾಗಿ ಪರಿಣಮಿಸಿತು. ಶೈವಧರ್ಮಾವಲಂಬಿಗಳಾದ ಸಂಗಮ ವಂಶದ ದೊರೆಗಳು, ಅದರಲ್ಲೂ ಪ್ರೌಢದೇವರಾಯನ ಕಾಲ ವೀರಶೈವಧರ್ಮದ ಪುನರುಜ್ಜೀವನ ಯುಗವೆನಿಸಿತು. ಈ ಕಾಲದಲ್ಲಿ ಅನೇಕ ಕವಿಗಳೂ, ಕೃತಿಗಳೂ ಹೊರಬಂದವು.

ಈ ಪರಂಪರೆಯ ಮುಂದುವರಿಕೆಗೆ ಮುಖ್ಯರಾದ ೧೬ನೆಯ ಶತಮಾನದ ತೋಂಟದ ಸಿದ್ಧಲಿಂಗರು. ೧೨ನೆಯ ಶತಮಾನದ ಅಲ್ಲಮಪ್ರಭು ಸಂಪ್ರದಾಯವನ್ನು ಸಿದ್ಧಲಿಂಗರು ಮುಂದುವರೆಸಿಕೊಂಡು ಬಂದ ಕಾರಣವಾಗಿಯೇ ವೀರಶೈವ ಕವಿಗಳು ಇವರನ್ನು ದ್ವಿತೀಯ ಅಲ್ಲಮ, ತೋಂಟದ ಅಲ್ಲಮ ಎಂದು ಕರೆದಿದ್ದಾರೆ. ಹೀಗೆ ೧೨ನೆಯ ಶತಮಾನದಲ್ಲಿ ಅಂಕುರಿಸಿದ ವಿರಕ್ತ ಸಂಪ್ರದಾಯ ತೋಂಟದ ಸಿದ್ಧಲಿಂಗರಿಂದ ನಿರ್ದಿಷ್ಟ ಆಕಾರ ಪಡೆಯುತ್ತದೆ. ಜೈನ, ಬೌದ್ಧ, ಮುಸ್ಲಿಂ ಧರ್ಮಗಳಂತೆ ಜಾಗತಿಕ ಧರ್ಮವಾಗಿ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತದೆ. ಮುಂದೆ ಅದು ಎರಡು ಪ್ರಮುಖ ಘಟ್ಟಗಳಲ್ಲಿ ಮುಂದುವರೆಯುತ್ತದೆ.

೧. ತೋಂಟದ ಸಿದ್ಧಲಿಂಗೇಶ್ವರರಿಂದ ಕಟ್ಟಿಗೆಹಳ್ಳಿ ಸಿದ್ಧಲಿಂಗರವರೆಗಿನ ಘಟ್ಟ

೨. ಕಟ್ಟಿಗೆಹಳ್ಳಿ ಸಿದ್ಧಲಿಂಗರ ತರುವಾಯದ ಘಟ್ಟ

ಇದರಲ್ಲಿ ಮೊದಲನೆಯದು ಏಕಮುಖವಾಗಿ ಬೆಳೆದರೆ, ನಂತರದ್ದು ಐದು ಶಾಖೆಗಳಾಗಿ ಒಡೆದು ಮುಂದುವರೆಯುತ್ತದೆ. ಈವರೆಗೆ ಏಕಮುಖವಾಗಿದ್ದ ವಿರಕ್ತ ಪರಂಪರೆ ಬಹುಮುಖವಾಗಿ ಬೆಳೆದುದರ ಫಸಲಾಗಿ ಐದು ಸಮಯಗಳು ರೂಪ ಪಡೆಯುತ್ತವೆ.

೧) ಸಂಪಾದನಾ ಸಮಯ

೨) ಮುರುಘಾ ಸಮಯ

೩) ಕುಮಾರ ಸಮಯ

೪) ಚೀಲಾಳ ಸಮಯ

೫) ಕೆಂಪಿನ ಸಮಯ

ವಿರಕ್ತ ಸಂಪ್ರದಾಯದಲ್ಲಿ ಉದಯವಾದ ಈ ಸಮಯಭೇದಗಳು ವೀರಶೈವಧರ್ಮದ ಉದ್ಧಾರಕ್ಕಾಗಿಯೇ ಶ್ರಮಿಸಿವೆ. ಕರ್ನಾಟಕದ ತುಂಬೆಲ್ಲ ಆವರಿಸಿದ ಚಿಕ್ಕಮಟ್ಟ ಪಾಳೇಗಾರರು ಈ ಎಲ್ಲ ಸಮಯಗಳಿಗೂ ಆಶ್ರಯವನ್ನಿತ್ತಿರುವರು. ಹೀಗೆ ಬೆಳೆದು ಬಂದ ಬಹುದಿನಗಳಿಂದ ಕರ್ನಾಟಕದ ಹೃದಯ ಸಿಂಹಾಸನವನ್ನು ಆಳುತ್ತಾ ಬಂದ ವೀರಶೈವಧರ್ಮದ ಒಂದು ಭಾಗವೇ ಮುರುಘಾ ಸಮಯ. ಈ ಮುರುಘಾ ಪರಂಪರೆಯ ಸಾಹಿತ್ಯದ ಅಧ್ಯಯನ ಈ ಮಹಾಪ್ರಬಂಧದ ಮೂಲ ಉದ್ದೇಶ.

ಶ್ರೀಮಂತ ಪರಂಪರೆಯನ್ನು ಹೊಂದಿದ ಕನ್ನಡ ಸಾಹಿತ್ಯ ಸಂಶೋಧನೆಯ ಒಂದು ಗಣಿಯೆಂದೇ ಹೇಳಬಹುದು. ಹೀಗಾಗಿ ಅದು ಆರಂಭದಿಂದಲೂ ವಿವಿಧ ದೃಷ್ಟಿಕೋನಗಳ ಹಿನ್ನೆಲೆಯಲ್ಲಿ ತನ್ನನ್ನು ಉನ್ನತ ಸಂಶೋಧನೆ ಒಡ್ಡಿಕೊಳ್ಳುತ್ತ ಬಂದಿದೆ. ಮೊದಲು ಕವಿ, ಕಾವ್ಯ ಪರಿಚಯದೊಂದಿಗೆ ಪ್ರಾರಂಭವಾದ ಅದು ಮುಂದೆ ಒಂದು ಕೃತಿಯ ಸಾಹಿತ್ಯಿಕ, ಸಾಂಸ್ಕೃತಿಕ, ಭಾಷಿಕ, ಧಾರ್ಮಿಕ, ಸಾಮಾಜಿಕ, ಚಾರಿತ್ರಿಕ, ತೌಲನಿಕ, ಆನ್ವಯಿಕ, ವೈಚಾರಿಕ, ವೈಜ್ಞಾನಿಕ ಅಧ್ಯಯನಗಳಿಗೆ ತನ್ನನ್ನು

ತೊರೆದುಕೊಳ್ಳುತ್ತ ನಡೆದಿದೆ. ಅನೇಕ ನೂತನ ಸಂಶೋಧನ ವಿಧಾನಗಳು, ಪರಿಕಲ್ಪನೆಗಳು ಹುಟ್ಟಿಕೊಂಡಿವೆ. ಇದರಲ್ಲಿ ಒಂದು ಪರಂಪರೆಯನ್ನು ಪ್ರಮುಖವಾಗಿಟ್ಟುಕೊಂಡು, ಅದರಲ್ಲಿ ಬರುವ ಪ್ರಮುಖ ಕವಿಗಳು ಹಾಗೂ ಅವರ ಸಾಹಿತ್ಯ ಕುರಿತು ವಿವೇಚಿಸಿ, ಮೌಲ್ಯಮಾಪನ ಮಾಡಿ, ಅದು ಕನ್ನಡ ಸಾಹಿತ್ಯಿಕ ಶ್ರೀಮಂತಿಕೆಯನ್ನು ಅದರ ವಿಸ್ತಾರ-ವೈವಿಧ್ಯಗಳನ್ನು ಹೆಚ್ಚಿಸುವಲ್ಲಿ ವಹಿಸಿದ ಪಾತ್ರವನ್ನು ಗುರುತಿಸುವುದು ಈ ಪ್ರಬಂಧದ ಉದ್ದೇಶವಾಗಿದೆ. ಜಗದ್ಗುರು ಪರಂಪರೆಯನ್ನು ಹೊಂದಿದ ಮುರುಘಾ ಪರಂಪರೆಯ ಕವಿಗಳು ವೀರಶೈವಧರ್ಮದ ಪ್ರಚಾರಕರಾಗಿ, ಪ್ರಸಾರಕರಾಗಿ, ಮೌಲ್ಯಗಳ ಪ್ರತಿಪಾದಕರಾಗಿ ತಮ್ಮ ಸಾಹಿತ್ಯವನ್ನು ರಚಿಸಿದ್ದಾರೆ. ಐದೂ ಸಮಯಗಳಲ್ಲಿ ಶ್ರೇಷ್ಠವಾದ ಮುರುಘಾ ಸಮಯವು ಧಾರ್ಮಿಕವಾಗಿ ಮಾತ್ರವಲ್ಲ ಸಾಹಿತ್ಯಿಕವಾಗಿಯೂ ಹಿರಿಮೆಯನ್ನು ಹೊಂದಿದೆ.

ಮುರುಘಾ ಪರಂಪರೆಯಲ್ಲಿ ಮುರಿಗಾ ಶಾಂತವೀರರು, ಇಮ್ಮಡಿ ಮುರಿಗಾ ಗುರುಸಿದ್ಧರು, ಹಾಗಲವಾಡಿ ಮುದ್ವೀರಸ್ವಾಮಿಗಳು, ಸೋಮೇಶೇಖರ ಶಿವಯೋಗಿಗಳು, ಕಂಪಿನಂಜಯ್ಯನವರು, ಜ್ವಲಕಂಠ ಮಹಾಂತಸ್ವಾಮಿಗಳು, ಮಹದೇವ ಕವಿ ಇವರು ಪ್ರಮುಖರಾಗಿದ್ದಾರೆ. ಇವರ ಸಮಗ್ರ ಬದುಕು ಮತ್ತು ಕೃತಿಗಳ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ. ಇವರು ಚಂಪೂ, ವಚನ, ಸ್ವರವಚನ, ಷಟ್ಪದಿ, ಚೌಪದಿ, ವೃತ್ತ, ಯಕ್ಷಗಾನ, ತಾರಾವಳಿ, ಟೀಕೆ, ನಾಂದ್ಯ ನಿಘಂಟು ಹೀಗೆ ವಿವಿಧ ಸಾಹಿತ್ಯ ರೂಪಗಳಲ್ಲಿ ಕೃತಿ ರಚಿಸಿದ್ದಾರೆ. ವೀರಶೈವ ಲಘುಸಾಹಿತ್ಯ ಪ್ರಕಾರಗಳಾದ ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರ, ಮಂತ್ರಗೋಪ್ಯ, ಕರಣಹಸಗೆ, ಓಕೋತ್ತರ ಶತಸ್ಥಲದಂತಹ ರೂಪಗಳಲ್ಲಿಯೂ ಕೃತಿಗಳನ್ನು ರಚಿಸಿ ವೀರಶೈವಧರ್ಮದ ತಾತ್ವಿಕಾಂಶಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ವೀರಶೈವ ಚಂಪೂ ಕವಿಗಳಲ್ಲಿ ಷಡಕ್ಷರನ ತರುವಾಯದ ಸ್ಥಾನವನ್ನು ಈ ಪರಂಪರೆಯ ಇಮ್ಮಡಿ ಗುರುಸಿದ್ಧರು, ನಂತರ ಶಾಂತವೀರರು ಪಡೆದುಕೊಳ್ಳುತ್ತಾರೆ. ಚಾಮರಸನ ಪ್ರಭುಲಿಂಗಲೀಲೆಯನ್ನು ಸಂಸ್ಕೃತ ಭಾಷೆಯಲ್ಲಿ "ಪ್ರಭುಲೀಲೆ"ಯಾಗಿ ರಚಿಸಿ ಉಭಯಭಾಷಾ ವಿಶಾರದರೆನಿಸಿದ್ದಾರೆ. ಸೋಮಶೇಖರ ಶಿವಯೋಗಿ ಅತ್ಯಂತ ವಿರಳಸಂಖ್ಯೆಯ ಟೀಕಾಕಾರರಲ್ಲಿ ಒಬ್ಬರಾಗಿದ್ದಾರೆ. ಈತ ಬಸವಣ್ಣ ಹಾಗೂ ತೋಂಟದ ಸಿದ್ಧಲಿಂಗರ ಷಟ್ಸ್ಥಲ ವಚನಗಳಿಗೆ ಟೀಕೆ ಬರೆಯುವ ಮೂಲಕ ಪ್ರಮುಖ ಟೀಕಾಕಾರನೆನಿಸಿದ್ದಾನೆ. ನಾಂದ್ಯಕಾರನೆನಿಸಿದ ಕಂಪಿನಂಜಯ್ಯ, ತಾರಾವಳಿಕಾರನಾದ ಜ್ವಲಕಂಠ ಮಹಾಂತಸ್ವಾಮಿಗಳು, ಸ್ವರವಚನಗಳ ಮೂಲಕ ವೀರಶೈವಧರ್ಮದ ಸಾರೋದ್ಧಾರ ಮಾಡಿದವ ಹಾಗಲವಾಡಿ ಮುದ್ವೀರಸ್ವಾಮಿ. ಮಹಲಿಂಗೇಂದ್ರವಿಜಯದಂಥ ಚಾರಿತ್ರಿಕ, ಪೌರಾಣಿಕ ಹಾಗೂ ಐತಿಹಾಸಿಕ ಬೃಹತ್ ಕಾವ್ಯ ಬರೆದ ಮಹದೇವಕವಿ ಈ ಪರಂಪರೆಯ ಇತರ ಕವಿಗಳಾಗಿದ್ದಾರೆ.

ಈ ಪರಂಪರೆಯ ಸಾಹಿತ್ಯ ಅನೇಕ ವೈಶಿಷ್ಟ್ಯಗಳನ್ನು ಒಳಗೊಂಡಿದೆ. ಮುರುಘಾ ಪರಂಪರೆಯ ಕವಿಗಳು- ಶಿವಯೋಗಿಗಳು, ಜ್ಞಾನಿಗಳು, ಯೋಗಿಗಳು, ಷಟ್ಸ್ಥಲ ಬ್ರಹ್ಮಿಗಳೂ ಆಗಿ ಈ ಮೂಲಕ ಧಾರ್ಮಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳೆರಡರಲ್ಲಿ ಸಿದ್ಧಿ-ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರ ಸಮಗ್ರ

ಬದುಕು ಹಾಗೂ ಸಾಹಿತ್ಯವನ್ನು ಇದುವರೆಗೆ ದೊರೆತ ಎಲ್ಲ ಇಡಿಯಾದ ಬಿಡಿಯಾದ ಆಕರ ಸಾಮಗ್ರಿ ಮತ್ತು ಹೊಸದಾಗಿ ಕ್ಷೇತ್ರಕಾರ್ಯ, ಸಂದರ್ಶನ, ಚರ್ಚೆಗಳ ಮೂಲಕ ನಾನು ಸಂಗ್ರಹಿಸಿದ ಮಾಹಿತಿಗಳ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಪೂರೈಸಲಾಗಿದೆ.

ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೆ ನಡೆದ ಅಧ್ಯಯನದ ವಿವರ ಹೀಗಿದೆ –

ಎಸ್. ಶಿವಣ್ಣ ಅವರು ಸಂಪಾದಿಸಿದ – ಮುರಿಗೆ ಶಾಂತವೀರರ ಕೃತಿಗಳು, ಮುರಿಗೆ ಶಾಂತವೀರ ಸ್ವಾಮಿಗಳ ಸ್ತೋತ್ರ ಕರಂಡಕ, ಎಂ.ಎಸ್. ಸುಂಕಾಪುರ ಅವರು ಸಂಪಾದಿಸಿದ ಹಮ್ಮೀರಕಾವ್ಯ ಸಂಗ್ರಹ, ಡಾ.ಎಸ್. ವಿದ್ಯಾಶಂಕರರು ಸಂಪಾದಿಸಿದ ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು, ಡಾ.ಬಿ.ಆರ್. ಹಿರೇಮಠರ ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಗಳ ಐದು ಕೃತಿಗಳು, ಜಿ.ಜಿ. ಮಂಜುನಾಥನ್‌ರು ಸಂಪಾದಿಸಿದ ಹಾಲಾಸ್ಯ ಪುರಾಣ, ಎಸ್.ಎಮ್. ಬಸವರಾಜಯ್ಯನವರು ಸಂಪಾದಿಸಿದ ಮುರಿಗಾ ತಾರಾವಳಿ, ಡಾ.ಜಿ. ಮರುಳಸಿದ್ಧಯ್ಯನವರು ಸಂಪಾದಿಸಿದ ಪ್ರಭುಲೀಲೆ, ಎಸ್. ಶಿವಣ್ಣ ಅವರು ಸಂಪಾದಿಸಿದ ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸ್ವರವಚನಗಳು, ಜಿ.ವಿ. ಶಿವಲಿಂಗಯ್ಯನವರ ಕೈವಲ್ಯ ಸೋಪಾನನಾಮ್ನೈಕೋತ್ತರ ಶತಸ್ಥಲ, ಡಾ.ವೀರಣ್ಣ ರಾಜೂರ ಅವರು ಸಂಪಾದಿಸಿದ ಹಾಗಲವಾಡಿ ಮುದ್ವೀರಸ್ವಾಮಿಗಳ ಸ್ವರವಚನಗಳು, ಡಾ.ಎಂ.ಎಂ. ಕಲಬುರ್ಗಿಯವರು ಸಂಪಾದಿಸಿದ ಬಸವಣ್ಣನವರ ಟೀಕಿನ ವಚನಗಳು, ಡಾ.ವೀರಣ್ಣ ರಾಜೂರರ ತೋಂಟದ ಸಿದ್ಧಲಿಂಗರ ಟೀಕಿನ ವಚನಗಳು ಹಾಗೂ ವೀರಶೈವ ತಾರಾವಳಿ ಸಂಪುಟ, ಮಹಾದೇವಕವಿ ಸಂಪಾದಿಸಿದ ಮಹಲಿಂಗೇಂದ್ರವಿಜಯ ಇವು ಈ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸಂಪಾದಿತ ಕೃತಿಗಳು. ಇನ್ನು ಲೇಖನಗಳನ್ನು ಅವಲೋಕಿಸಿದಾಗ ಜಿ.ಜಿ. ಮಂಜುನಾಥನ್‌ರ ಮುರಿಗಾ ಶಾಂತವೀರರು, ಬಿ. ರಾಜಶೇಖರಪ್ಪನವರ ಮುರಿಗಾ ಸಂಪ್ರದಾಯ ಮತ್ತು ಕೆಳದಿ ಹಾಗೂ ಕೊಡಗಿನ ಅರಸರು, ಡಾ.ಬಿ.ವಿ. ಮಲ್ಲಾಪುರ ಅವರ ಶಾಸನಗಳಲ್ಲಿ ಮುರಿಗಾ ಸಮಯ, ಮುರಿಗಾ ಮಠ ಮತ್ತು ಮುರಿಗಾಸ್ವಾಮಿಗಳು, ಡಾ.ಎಂ.ಎಂ. ಕಲಬುರ್ಗಿ ಅವರ ಚೀಲಾಳ ಸಮಯ, ಎಸ್. ಶಿವಣ್ಣರ ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಪಾದಸ್ತೋತ್ರ, ಸ್ಕಂದಕಲ್ಯಾಣಾಂತರ್ಗತ ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ, ಚಿನ್ಮೂಲಾದ್ರಿ ಚೇತನ – ರಜತ ಮಹೋತ್ಸವದ ಸ್ಮರಣ ಸಂಚಿಕೆಯ ಕೆಲವು ಲೇಖನಗಳು, ಜಂಗಮಜ್ಯೋತಿ – ಜಯದೇವ ಜಗದ್ಗುರುಗಳ ಶತಮಾನೋತ್ಸವ ಸ್ಮರಣ ಸಂಚಿಕೆಯ ಕೆಲವು ಲೇಖನಗಳು, ದಾಸೋಹಸಿರಿ ತುಮಕೂರಿನ ಸಿದ್ಧಗಂಗಾಮಠದ ಡಾ. ಶಿವಕುಮಾರ ಸ್ವಾಮಿಗಳ ಅಭಿನಂದನ ಗ್ರಂಥದಲ್ಲಿ ಕೆಲವು ಲೇಖನಗಳು, ಕಲ್ಯಾಣದ ಹಾದಿ ಗದುಗಿನ ತೋಂಟದಾರ್ಯಮಠದ ರಜತ ಮಹೋತ್ಸವದ ಅಭಿನಂದನ ಗ್ರಂಥದಲ್ಲಿಯ ಕೆಲವು ಲೇಖನಗಳು, ಡಾ.ಎಂ.ಎಂ. ಕಲಬುರ್ಗಿ ಅವರು ಸಂಪಾದಿಸಿದ ಷಟ್ಸ್ಥಲ ಶಿವಾಯಣ ಮತ್ತು ಫ.ಗು. ಹಳಕಟ್ಟಿಯವರ ನಿರಂಜನವಂಶ ರತ್ನಾಕರದಲ್ಲಿಯ ಸಮಯಭೇದಗಳ ಕುರಿತಾದ ಲೇಖನಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಹಾಗೆಯೇ ಸಂಶೋಧನಾ ಕೃತಿಗಳನ್ನು ಅವಲೋಕಿಸಿದಾಗ ಪಿ.ಎ. ಪೋಲಿಸ್‌ಪಾಟೀಲರ "ಮುರುಘಾ ಸಮಯ" ಎಂ.ಫಿಲ್. ಪ್ರಬಂಧ, ಪುಷ್ಪಾ ಬಸನಗೌಡರ ಇವರ "ಇಮ್ಮಡಿ ಮುರಿಗಾ ಗುರುಸಿದ್ಧ ಜೀವನ ಸಾಹಿತ್ಯ" – ಎಂ.ಫಿಲ್. ಪ್ರಬಂಧ, ಎ.ಚೆನ್ನಪ್ಪ ಅವರ "ಇಮ್ಮಡಿ ಮುರಿಗಾ ಗುರುಸಿದ್ಧ" – ಪಿಎಚ್.ಡಿ. ಮಹಾಪ್ರಬಂಧ ಇವೆಲ್ಲವುಗಳನ್ನು ಆಧಾರವಾಗಿಟ್ಟುಕೊಳ್ಳಲಾಗಿದೆ.

ಹೀಗೆ ಮುರುಘಾ ಪರಂಪರೆಯಲ್ಲಿ ಬರುವ ಕವಿಗಳ ಕುರಿತಾಗಿ ಕೇವಲ ಪರಿಚಯಾತ್ಮಕ ಲೇಖನಗಳು ಹಾಗೂ ಸಂಪಾದಿತ ಕೃತಿಗಳು ಪ್ರಕಟವಾಗಿವೆ. ಆದರೆ ಪ್ರಕಟಿತ ಕೃತಿಗಳ ಬಗೆಗೆ ತಲಸ್ಪರ್ಶಿ ಆಳವಾದ ಅಧ್ಯಯನ, ವಿದುಷಣ ವಿಶ್ಲೇಷಣೆ ನಡೆಯದೇ ಕೇವಲ ಸ್ಥೂಲ ಪರಿಚಯಕ್ಕೆ ಮಾತ್ರ ಸೀಮಿತವಾಗಿದೆ. ಈ ಪರಂಪರೆಯಲ್ಲಿ ಚಂಪೂ ಕವಿಗಳು, ವಚನಕಾರರು, ಸ್ವರವಚನಕಾರರು, ಷಟ್ಪದಿಕವಿಗಳು, ಟೀಕಾಕಾರರು, ನಾಂದ್ಯಕಾರರು, ಪುರಾಣ ಕವಿಗಳು ಹಾಗೂ ತಾರಾವಳಿಕಾರರಿದ್ದಾರೆ. ಮಹಾಕವಿಗಳೂ, ಮಹಾತತ್ವಜ್ಞಾನಿಗಳೂ, ಷಟ್ಸ್ಥಲ ವಿಶಾರದರೂ, ಬಹುಮುಖಿ ಪ್ರತಿಭಾಶಾಲಿಗಳೂ, ಉಭಯಭಾಷಾ ವಿಶಾರದರೂ ಆದ ಕವಿಗಳಿದ್ದಾರೆ. ಇವರುಗಳ ಸಾಹಿತ್ಯಿಕ ಅಭಿವ್ಯಕ್ತಿ, ಸಾಹಿತ್ಯದ ವೈಶಿಷ್ಟ್ಯಗಳನ್ನು ಎತ್ತಿತೋರಿಸುವ ಕಾರ್ಯ ಇದುವರೆಗೆ ನಡೆದಿಲ್ಲ. ಅದನ್ನು ಈ ಪ್ರಬಂಧದಲ್ಲಿ ಸಾಧ್ಯವಾದ ಮಟ್ಟಿಗೆ ನೆರವೇರಿಸಲು ಪ್ರಯತ್ನಿಸಲಾಗಿದೆ.

ಅಧ್ಯಯನದ ಅನುಕೂಲಕ್ಕಾಗಿ ಪ್ರಸ್ತುತ ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳನ್ನು ಮಾಡಿಕೊಳ್ಳಲಾಗಿದೆ;

ಮೊದಲನೆಯ ಅಧ್ಯಾಯವು – ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿಗಳನ್ನು ತಿಳಿಸುತ್ತದೆ. ಇಲ್ಲಿ ಮುರುಘಾ ಸಂಪ್ರದಾಯದ ಬಗೆಗೆ ಇದುವರೆಗೆ ಆದ ಮತ್ತು ಇನ್ನೂ ಆಗಬೇಕಾದ ಕಾರ್ಯದ ವಿವರಗಳನ್ನು ಕೊಡಲಾಗುವುದು. ಉಳಿದ ಸಂಪ್ರದಾಯಗಳಿಗಿಂತ ವಿಶಿಷ್ಟವೆನಿಸಿದ ಮುರಿಗಾ ಸಂಪ್ರದಾಯದ ಬಗೆಗೆ ಇದುವರೆಗೆ ನಡೆದ ಅಧ್ಯಯನ ತೀರ ವಿರಳ. ಕೆಲವು ಕವಿಗಳ ಕೆಲವು ಕೃತಿಗಳು ಮಾತ್ರ ಪ್ರಕಟಗೊಂಡಿದ್ದು, ಇನ್ನೂ ಹಲವು ಅಜ್ಞಾತವಾಗಿ, ಅಪ್ರಕಟಿತವಾಗಿ ಹಸ್ತಪ್ರತಿಗಳಲ್ಲಿಯೇ ಉಳಿದಿವೆ. ಇಲ್ಲಿ ಅಂತಹ ಕೆಲವು ಕೃತಿಗಳ ಸಮಗ್ರ ಶೋಧನೆ ಮೌಲ್ಯಮಾಪನ ಕಾರ್ಯಗಳನ್ನು ಕೈಗೊಳ್ಳಲಾಗಿದೆ. ತನ್ಮೂಲಕ ಕನ್ನಡ ಸಾಹಿತ್ಯದಲ್ಲಿ ಮುರುಘಾ ಪರಂಪರೆಯ ಸ್ಥಾನಮಾನಗಳನ್ನು ಗುರುತಿಸಲಾಗಿದೆ.

ಎರಡನೆಯ ಅಧ್ಯಾಯವು ಸಮಯಗಳ – ಹುಟ್ಟು–ಬೆಳವಣಿಗೆ ಎಂಬುದಾಗಿದೆ. ಇಲ್ಲಿ 'ಸಮಯ ಶಬ್ದದ ಅರ್ಥ–ವ್ಯಾಪ್ತಿಗಳನ್ನು ಕಾವ್ಯ–ವಚನಗಳ ಉಲ್ಲೇಖಗಳೊಂದಿಗೆ ವಿವರಿಸಲಾಗಿದೆ. ಸಮಯಗಳು ಹುಟ್ಟಲು ಕಾರಣ, ಅವು ಯಾವಾಗ ಮೈದೋರಿದವು, ಅವುಗಳ ಸಂಖ್ಯೆ, ಸ್ವರೂಪ, ಪ್ರಮುಖ ಸಮಯಗಳಾದ ಸಂಪಾದನಾ ಸಮಯ, ಮುರುಘಾ ಸಮಯ, ಕುಮಾರ ಸಮಯ, ಚೀಲಾಳ ಸಮಯ ಹಾಗೂ ಕೆಂಪಿನ ಸಮಯಗಳ ಸಂಕ್ಷಿಪ್ತ ಪರಿಚಯವನ್ನು ಕಾವ್ಯಾಧಾರಗಳ ಮೂಲಕ ಮಾಡಿಕೊಡಲಾಗಿದೆ.

ಮೂರನೆಯ ಅಧ್ಯಾಯವು – ಮುರುಘಾ ಸಮಯದ ಮಠಗಳು ಮತ್ತು ಮಠಾಧ್ಯಕ್ಷರುಗಳನ್ನು ಕುರಿತಾದುದಾಗಿದೆ. ಮಠಗಳ ಪ್ರಾಚೀನತೆ, ಮಠ ಶಬ್ದದ ಅರ್ಥ, ಮಠಗಳ ಸ್ವರೂಪ, ಮಹತ್ವ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಶಕ್ತಿಕೇಂದ್ರಗಳೆನಿಸಿದ ಮಠಗಳ ಕೊಡುಗೆ ಇತ್ಯಾದಿಗಳನ್ನು ಪ್ರಾಸ್ತವಿಕವಾಗಿ ವಿವರಿಸುತ್ತಾ, ಮುರುಘಾ ಸಮಯದಲ್ಲಿ ಬರುವ ಒಟ್ಟು ಮಠಗಳನ್ನು ಹೆಸರಿಸಲಾಗಿದೆ. ಅವುಗಳಲ್ಲಿ ಪ್ರಮುಖವೆನಿಸಿದ ಚಿತ್ರದುರ್ಗದ ಬೃಹನ್ಮಠ, ಧಾರವಾಡದ ಮುರುಘಾಮಠ, ಅಥಣಿಯ ಶಿವಯೋಗಿಗಳ ಮಠ, ಮುಳಗುಂದದ ಗವಿಮಠ, ಸೋಮವಾರಪೇಟೆಯ ಅಬ್ಬಿಮಠ, ಬೆಂಗಳೂರಿನ ಸರ್ಪಭೂಷಣಮಠ, ಕೊಲ್ಲಾಪುರದ ಚಿತ್ರದುರ್ಗಮಠ, ಮಾದಾಪುರದ ಮುರುಘಾ ಮಠ ಇವುಗಳ ಪರಿಚಯಾತ್ಮಕ ವಿವರಣೆ ನೀಡಲಾಗಿದೆ. ಈ ಎಲ್ಲ ಮಠಗಳ ಹುಟ್ಟು-ಬೆಳವಣಿಗೆ, ಪ್ರಾರಂಭದಿಂದ ಇಂದಿನವರೆಗಿನ ಮಠಾಧ್ಯಕ್ಷರು, ಅವರುಗಳ ಸಾಧನೆ, ಸಿದ್ಧಿಗಳು, ಮಠಗಳ ಧಾರ್ಮಿಕ, ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕೊಡುಗೆಗಳನ್ನು ವಿವರಿಸಲಾಗಿದೆ. ಸಮಾಜ ಸುಧಾರಣೆಯಲ್ಲಿ ಮಠಗಳು – ಮಠಾಧ್ಯಕ್ಷರು ಹೇಗೆ ಶಕ್ತಿವರ್ಧಕವಾಗಿ ಕಾರ್ಯ ನಿರ್ವಹಿಸಿದ್ದಾರೆಂಬುದನ್ನು ಇಲ್ಲಿ ತಿಳಿಸಲಾಗಿದೆ.

ಅಧ್ಯಾಯ ನಾಲ್ಕು - ಮಹಾಪ್ರಬಂಧದ ಪ್ರಮುಖ ಭಾಗ. "ಮುರುಘಾ ಪರಂಪರೆಯ ಕವಿಗಳು-ಕೃತಿಗಳು" ಎಂಬುದಾಗಿದೆ. ಮುರುಘಾ ಸಮಯದ ಮೂಲ ಕರ್ತೃಗಳೆನಿಸಿದ ಮುರಿಘಾ ಶಾಂತವೀರರು, ಇಮ್ಮಡಿ ಮುರುಗಾ ಗುರುಸಿದ್ಧರು, ಸೋಮಶೇಖರ ಶಿವಯೋಗಿಗಳು, ಹಾಗಲವಾಡಿ ಮುದ್ವೀರಸ್ವಾಮಿಗಳು, ಜ್ವಲಕಂಠ ಮಹಾಂತಸ್ವಾಮಿಗಳು, ಕಂಪಿನಂಜಯ್ಯನವರು ಹಾಗೂ ಮಹದೇವ ಕವಿಗಳು ಹೀಗೆ ಒಟ್ಟು ೭ ಕವಿಗಳ ಜೀವನ ಪರಿಚಯದೊಂದಿಗೆ ಇವರ ಕೃತಿಗಳ ಸಮಗ್ರ ವಿಶ್ಲೇಷಣೆ ಮಾಡಲಾಗಿದೆ. ಪ್ರಕಟಿತ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಅವುಗಳ ವಸ್ತು, ವೈಶಿಷ್ಟ್ಯಗಳನ್ನು ವಿವರಿಸಿದೆ. ಈ ಪರಂಪರೆಯ ಕವಿಗಳ ಪ್ರಮುಖ ಆಸಕ್ತಿ ವೀರಶೈವ ಸಾರೋದ್ಧಾರ. ಈ ಹಿನ್ನೆಲೆಯಲ್ಲಿ ಧರ್ಮಪ್ರಚಾರ, ಧರ್ಮದ ತಾತ್ವಿಕಾಂಶಗಳ ವಿವರಣೆ, ವಿವಿಧ ಸಾಹಿತ್ಯ ರೂಪಗಳ ಬಳಕೆ, ಷಡಕ್ಷರದೇವ, ಚಾಮರಸನಂಥ ಕವಿಗಳ ಅನುಕರಣೆ ಹಾಗೂ ಮಾರ್ಗದರ್ಶನ, ಉಭಯಭಾಷಾ ಪಾಂಡಿತ್ಯ, ವಿವಿಧ ಛಂದೋಬಂಧಗಳ ಬಳಕೆ, ಐತಿಹಾಸಿಕ, ಪೌರಾಣಿಕ, ಚಾರಿತ್ರಿಕ ವಿಷಯಗಳ ನಿರೂಪಣೆ, ಇವುಗಳ ಜೊತೆ ಜೊತೆಗೆ ಧರ್ಮ ಹಾಗೂ ಕಾವ್ಯಧರ್ಮಗಳ ಸಮನ್ವಯತೆ ಈ ಮೊದಲಾದ ಅಂಶಗಳನ್ನು ಕುರಿತು ವಿವರಣೆ ನೀಡಿದೆ.

ಅಧ್ಯಾಯ ಐದು – "ಮುರುಘಾ ಪರಂಪರೆಯ ಸಾಹಿತ್ಯದ ವೈಶಿಷ್ಟ್ಯಗಳು" ಎಂಬುದಾಗಿದೆ. ಇಲ್ಲಿ ಉಜ್ವಲ ಪರಂಪರೆಯನ್ನು ಹೊಂದಿದ ಮುರುಘಾ ಪರಂಪರೆಯ ಒಟ್ಟು ಸಾಹಿತ್ಯವನ್ನು ವಸ್ತು, ರೂಪ, ಭಾಷೆ, ಚಾರಿತ್ರಿಕ ಅಂಶಗಳ ಆಧಾರದ ಮೇಲೆ ವಿಶ್ಲೇಷಿಸಿದೆ. ಈ ಪರಂಪರೆಯ ಕವಿಗಳು ಧಾರ್ಮಿಕ ವಸ್ತುವನ್ನು ಬಹಳ ಪ್ರಮಾಣದಲ್ಲಿ ಬಳಸಿಕೊಂಡಿದ್ದಾರೆ. ಶಿವನ ಸ್ವರೂಪ, ಶಿವನ ಲೀಲಾ

ವಿಲಾಸ, ಶಿವಪಾರಮ್ಯ, ಶಿವಯೋಗದ ಸ್ವರೂಪ, ಶಿವಸ್ತುತಿ, ಗುರುಸ್ತುತಿ, ಮಂತ್ರ ಮಹಿಮೆ, ಕ್ಷೇತ್ರಮಹಿಮೆ, ಪೌರಾಣಿಕ, ಚಾರಿತ್ರಿಕ ವಸ್ತುವನ್ನು ಬಳಸಿಕೊಂಡಿರುವುದನ್ನು ವಿವರಿಸಲಾಗಿದೆ.

ಮುರುಘಾ ಪರಂಪರೆಯ ಕವಿಗಳು ಬಳಸಿಕೊಂಡ ಸಾಹಿತ್ಯಿಕ ರೂಪಗಳು ಅನೇಕ. ಚಂಪೂವಿನಿಂದ ಪ್ರಾರಂಭಿಸಿ ವಚನ, ಸ್ವರವಚನ, ಷಟ್ಪದಿ, ಚೌಪದಿ, ನಾಂದ್ಯ, ತಾರಾವಳಿ, ನಿಘಂಟು, ಯಕ್ಷಗಾನ, ಕೊರವಂಜಿ ಸಾಹಿತ್ಯ, ವೀರಶೈವ ಲಘು ಸಾಹಿತ್ಯ ಪ್ರಕಾರಗಳಾದ ಮಿಶ್ರಾರ್ಪಣ, ಪಂಚಾಶಿಕೆ, ಮಂತ್ರಗೋಪ್ಯ, ಕರಣಹಸಿಗೆ, ಉದ್ಧರಣೆ, ಯೋಗಕಲಾಪಸಾರ ಈ ಮೊದಲಾದ ರೂಪಗಳನ್ನು ಬಳಸಿ ಸಾಹಿತ್ಯ ರಚಿಸಿದ್ದಾರೆ. ಎಲ್ಲ ಕವಿಗಳ ಒಟ್ಟು ಕೃತಿಗಳನ್ನು ರೂಪಗಳ ಹಿನ್ನೆಲೆಯಲ್ಲಿ ವಿಭಜಿಸಿ ಪ್ರತಿಯೊಂದು ರೂಪದ ಸಂಕ್ಷಿಪ್ತ ಪರಿಚಯ ಮಾಡಿಕೊಡಲಾಗಿದೆ. ಪ್ರತಿಯೊಂದು ಕೃತಿಯು ಬಳಸಿಕೊಂಡ ರೂಪದ ವೈಶಿಷ್ಟ್ಯವನ್ನು ಎತ್ತಿ ಹೇಳಲಾಗಿದೆ.

ಉಭಯಭಾಷಾ ವಿಶಾರದರಾದ ಮುರುಘಾ ಪರಂಪರೆಯ ಕವಿಗಳು ತಮ್ಮ ಕಾವ್ಯಗಳಲ್ಲಿ ಮಾರ್ಗದೇಶಿ ಎರಡೂ ಭಾಷೆಗಳನ್ನು ಬಳಸಿದ್ದಾರೆ. ಅವರ ಭಾಷಾ ಶೈಲಿಗಳ ವೈಶಿಷ್ಟ್ಯಗಳನ್ನು ಇಲ್ಲಿ ಗುರುತಿಸಲಾಗಿದೆ.

ಚಾರಿತ್ರ್ಯ ನಿರೂಪಣಾ ಕೃತಿಗಳಾದ ಹಮ್ಮೀರಕಾವ್ಯ, ಮುರಿಗೆ ತಾರಾವಳಿ, ಮನುರಾಜೇಂದ್ರ ತಾರಾವಳಿ, ಬಿಜ್ಜಮಹಾದೇವಿ ಚಾರಿತ್ರ್ಯ, ಮಹಲಿಂಗೇಂದ್ರವಿಜಯ, ಪ್ರಭುಲೀಲೆ ಕೃತಿಗಳನ್ನು ಹಿನ್ನೆಲೆಯಾಗಿಟ್ಟುಕೊಂಡು, ಅವರ ಕಾವ್ಯಗಳಲ್ಲಿ ಮೂಡಿಬಂದ ಚಾರಿತ್ರಿಕ ಅಂಶಗಳನ್ನು ಗುರುತಿಸಲಾಗಿದೆ.

ಸಮಾರೋಪದ ಅಧ್ಯಾಯ ಆರರಲ್ಲಿ – ಮುರುಘಾ ಪರಂಪರೆಯ ಸಾಹಿತ್ಯದಲ್ಲಿ ಮೂಡಿ ಬಂದ ಧರ್ಮ ಹಾಗೂ ಕಾವ್ಯಧರ್ಮಗಳ ಸಮನ್ವಯತೆಯನ್ನು ಕುರಿತು ಚರ್ಚಿಸುತ್ತ, ಕನ್ನಡ ಸಾಹಿತ್ಯಕ್ಕೆ ಮುರುಘಾ ಪರಂಪರೆಯ ಕವಿಗಳ ಕೊಡುಗೆ ಏನೆಂಬುದನ್ನು ಗುರುತಿಸಲಾಗಿದೆ ಹಾಗೂ ಒಟ್ಟಾರೆ ಅಧ್ಯಯನದ ಫಲಶ್ರುತಿಯನ್ನು ಇಲ್ಲಿ ತಿಳಿಸಲಾಗಿದೆ. ಹೀಗೆ ಮುರುಘಾ ಪರಂಪರೆಯ ಸಮಗ್ರ ಸಾಹಿತ್ಯದ ವಿವರಣಾತ್ಮಕ ಅಧ್ಯಯನವನ್ನು ಈ ಪ್ರಬಂಧ ಒಳಗೊಂಡಿದೆ.

ಅಧ್ಯಾಯ : ಎರಡು

ಸಮಯಗಳ ಹುಟ್ಟು – ಬೆಳವಣಿಗೆ

೧) ಸಂಪಾದನ ಸಮಯ

೨) ಮುರುಘಾ ಸಮಯ

೩) ಚೀಲಾಳ ಸಮಯ

೪) ಕುಮಾರ ಸಮಯ

೫) ಕೆಂಪಿನ ಸಮಯ

ಅಧ್ಯಾಯ – ೨

ಸಮಯಗಳ ಹುಟ್ಟು – ಬೆಳವಣಿಗೆ

ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯಲ್ಲಿ ಅನೇಕ ಪರಂಪರೆಗಳಿವೆ. ಅವುಗಳಲ್ಲಿ ವಿಶೇಷವಾಗಿ ಗುರುಪರಂಪರೆ, ವಿರಕ್ತಪರಂಪರೆ ಎಂದು ಗುರುತಿಸಬಹುದು. ವೀರಶೈವ ಗುರುಪರಂಪರೆಯಲ್ಲಿ ಐದು ಪಂಚಪೀಠಗಳು ಮತ್ತು ಅನೇಕ ಶಾಖೆ–ಉಪಶಾಖೆಗಳನ್ನು ಕಾಣಬಹುದು. ಅದರಂತೆ ವಿರಕ್ತ ವರ್ಗದಲ್ಲಿಯೂ ಹಲವು ಸಮಯ ಪರಂಪರೆಗಳಿವೆ. ಇವುಗಳಲ್ಲಿ ಕೆಂಪಿನ ಸಮಯ, ಸಂಪಾದನ ಸಮಯ, ಮುರುಘಾ ಸಮಯ, ಚೀಲಾಳ ಸಮಯ, ಕುಮಾರ ಸಮಯಗಳು ತುಂಬಾ ಪ್ರಸಿದ್ಧಿಯನ್ನು ಪಡೆದಿವೆ. ಪ್ರತಿಯೊಂದು ಸಮಯಗಳು ಮೂಲಮಠದೊಂದಿಗೆ ಅನೇಕ ಶಾಖಾಮಠಗಳನ್ನು ಹೊಂದಿವೆ. ಇಂಥ ಮಠಗಳು ಕೇವಲ ಧಾರ್ಮಿಕ ಸಂಸ್ಥೆಗಳಾಗಿ ಕಾರ್ಯ ನಿರ್ವಹಿಸದೆ, ಸಾಹಿತ್ಯ–ಸಂಸ್ಕೃತಿ–ಜೀವನ ಮೌಲ್ಯಗಳ ಪ್ರಸಾರ ಕೇಂದ್ರಗಳಾಗಿವೆ. ಶಿಕ್ಷಣ, ಜನಜಾಗೃತಿ, ಸಮಾಜ ಪರಿವರ್ತನೆಗಳ ಮೂಲಕ ವ್ಯಕ್ತಿನಿರ್ಮಾಣ ಹಾಗೂ ಸಮಾಜ ನಿರ್ಮಾಣದಂತಹ ರಚನಾತ್ಮಕ ಕಾರ್ಯಗಳನ್ನು ನೆರವೇರಿಸಿರುವುದು ಮಹತ್ವದ ಸಂಗತಿಯಾಗಿದೆ.

ಸಮಯ ಪದದ ಅರ್ಥ ವಿಶ್ಲೇಷಣೆ :

'ಸಮಯ' ಎನ್ನುವ ಪದ ಅನೇಕ ಅರ್ಥ ಸಾಧ್ಯತೆಗಳನ್ನು ಪಡೆದುಕೊಂಡಿದೆ. ನಿಘಂಟು, ಕಾವ್ಯ, ವಚನ ಸಾಹಿತ್ಯದಲ್ಲಿ ಅದು ಬಳಕೆಯಾದ ರೀತಿಯನ್ನು ಹೀಗೆ ಗುರುತಿಸಬಹುದು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟಿನಲ್ಲಿ 'ಸಮಯ' ಎಂಬ ಪದಕ್ಕೆ ಕಾಲ, ವೇಳೆ ಎಂಬ ಅರ್ಥಗಳನ್ನು ಕೊಡಲಾಗಿದೆ. ಇದು ಜೊತೆಗೂಡಿ ಸಂಚರಿಸುವುದು, ಗುಂಪು, ಸಮೂಹ, ಒಪ್ಪಂದ, ಒಡಂಬಡಿಕೆ, ಸಂದರ್ಭ, ಸಿದ್ಧಾಂತ, ಸಂಪ್ರದಾಯ, ಕಟ್ಟಳೆ, ಕವಲು, ಧರ್ಮ, ಮತ ಎಂಬ ಇತರ ಅರ್ಥಗಳಲ್ಲಿಯೂ ಬಳಕೆಯಾಗಿದೆ.

"ಜಿನಪತಿಮುನಿಪತಿಗುಣವರ್ಮನ ಸಮಯಾನಂತರಂ ಕವೀಶ್ವರ ಗುಣವರ್ಮನಮುಚಿತಂ"
(ಮಲ್ಲಿನಾಥ ಪುರಾಣದಲ್ಲಿ ೧-೧೨)

"ಹರನಾಣೆಯಂ ತಾಳ್ದು ಬಾಳ್ವಪ್ಪ ಸಮಯದೊಳು ಸರಿಯದ ಕಾಲ"
(ತಿರು. ದೇ. ೧೦-೯)

"ಸಕಾಲ ಸಮಯದೊಳೆ ಬಿತ್ತಿ ಬೀಜವನಮತಫಲಂಗುಡುವ ಪೊಲನನುಳೀಯುವ ತೆರದಿಂದೆ"
(ಶಾಕುಂತ ೯೪-೧೫೫)

"ಸಮಯಕ್ಕಾಗದ ಅರ್ಥ ಸಹಸ್ರವಿದ್ದರೂ ವ್ಯರ್ಥ" (ಗಾದೆ) ಇಲ್ಲಿ ಸಮಯ ಎಂಬ ಪದ ವೇಳೆ ಎಂಬ ಅರ್ಥದಲ್ಲಿ ಬಳಕೆಯಾಗಿದೆ.

ಆಸ್ಪದ, ಅವಕಾಶ ಎಂಬ ಅರ್ಥದಲ್ಲಿ - "ಕುಡುಸಮಯಮಂ"
(ಅನಂತ ಪು- ೨-೩೦)

ಒಡಂಬಡಿಕೆ, ಒಪ್ಪಂದ ಎನ್ನುವಾಗ - "(ಶ್ರೀ ಲಕ್ಷ್ಮೀನರಸಿಂಹಪುರದ ಶೇಷಮಹಾ ಜನಂಗಳು ಹಿರಿಯಮಕ್ಷಿಯದ್ದಲ್ಲಿ ಮಹಾಸಭೆಯಾಗಿ ನೆರೆದು ಮಾಡಿದ ಸಮಯವೆಂತೆಂದಡೆ . . . . (ಮೈ. ಆರಿ. ೧೯೩೧, ೫೯-೨. ೧೨೨೬)

ಸಂಪ್ರದಾಯ, ಪದ್ಧತಿ, ರೂಢಿ ಎಂದು ಉಲ್ಲೇಖಿಸುವಾಗ - "ಆ ಕಾಲದ ವರ್ಣಕ ಕವಿಗಳದೊಂದು ಸಮಯವಾಗಿರಬೇಕು. (ಕರ್ಣಜ - ೭೨)

"ನಟರು ಆಚರಣೆಯಲ್ಲಿಟ್ಟುಕೊಂಡಿರತಕ್ಕ ಸಮಯ ಅಥವಾ ಸಂಪ್ರದಾಯ"
(ಸಂ. ನಾಟ - ೧೩)

ಧರ್ಮ, ಮತಗಳ ಹಿನ್ನೆಲೆಯಲ್ಲಿ ನೋಡಿದಾಗ "ಸಮಯಸಮುದ್ಧರಣಂ ವಿಕ್ರಮತುಂಗಾ ನಾಚಿಸೆಟ್ಟಿ" (ಕೊಲ್ಹಾಶಾ . . . ೫-೫೯-೧೧೪೭)

"ಗುರುದೀಕ್ಷೆ ಇಲ್ಲದ ನರನು ಶರಣರ ಸಮಯಕ್ಕೆ ಸಲ್ಲ" (ಅಖಂಡೇ - ೨೭೦-೧೩)

ಕುಲ, ಸಮಾಜ ಎಂದಾಗ – "ಸಮಸ್ತ ಸೆಟ್ಟಿಕಾರರ ಸಮಯದ ಸಮೀಪದಲು . . . . ದೇವರಿಗೆ ಧಾರಾಪೂರ್ವಕಂ ಮಾಡಿ"

"ಆ ಕಪಿಲ ಸುಗತ ಕಣಚರ ಲೋಕಾಯತಿಕಾದಿ ಮಾರ್ಗಭೇದಂ ಸಮಯಾ" (ಕವಿರಾ ೧–೧೦೫)

"ಇದಂ ಮಹಾಜನಂಗಳ್ ಕಂಡರೆಪ್ಪೊಡೆ ಸಭಾಜನಕ್ಕಂ ಸಹಪಂಕ್ತಿಗಾ ಪೊವಿಗೆಂದು ಸಮಯಬಾಹ್ಯನಂ ಮಾಡ್ದೀರ್ (ಪಂಚತಂ ೮ ೧೧೦–೯)" ಎಂದಿದೆ.

ಸಂಕೇತ, ಸಂಜ್ಞೆ ಎಂಬ ಅರ್ಥದಲ್ಲಿ "ಕಾಲದಲಿ, ಸಿದ್ಧಾಂತದಲಿ, ವಿಶೇಷದಲಿ, ಸಂಕೇತದಲಿ ಸಮಯಾಖ್ಯಮೆನಿಸಿರ್ಕು" (ಮಂಗರಾ ೧೫೪–೬೬)

ಒಂದು ಧರ್ಮ ಮತ್ತು ಮತಕ್ಕೆ ತಕ್ಕಂತೆ ಸಂಪ್ರದಾಯವನ್ನು ಗುರುತಿಸುವಾಗ – "ಎನಗೆಯೂ ನಿನಗೆಯೂ ಸಮಯಾಚಾರ ಸರಿ" (ಬಸವ–೯೦೪) "ಎನ್ನ ಸಮಯಾಚಾರಕ್ಕೆ ಸ್ಮಶಾನಮಂಟಪದಲ್ಲಿ ಗುರುವ ತಡೆದೆ." (ಘನವ – ೬೮–೫೫) "ಒಂದು ಧರ್ಮದ ಆಚಾರ ಮುಂತಾದ ಕಟ್ಟುಗಳನ್ನು ವಿಧಿಸುವವ, ಆಚಾರ್ಯ ಪುರುಷ (ಬಸವ ಕೋಶ)" "ಎನ್ನಲ್ಲಿ ಭಕ್ತಿ ಸಾಸುವೆಯ ಷಡ್ಭಾಗದಿನಿತಿಲ್ಲ ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿಯೆಂಬರು" (ಬಸವ–೩೮೫) "ಜಂಗಮದಲ್ಲಿ ಸಮಯಾಚಾರಿಯಾಗಿಪ್ಪನ್ನಕ್ಕರ ಮಾಡುವ ಭಕ್ತಿಗೆ ಭಿನ್ನವದೆ." (ಅವಚಂ ೨೩೪–೧೦೫೯) "ಸಮಯಾಚಾರ್ಯರಾದ ಶ್ರೀಜ್ಞಾನ ಸಂಬಂಧಮೂರ್ತಿಗಳವರ ಕೃಪೆಯಿಂದ . . . . ಪತಿಯನ್ನು ಶೈವಮತದಲ್ಲಿ ಪ್ರವರ್ತಿಸುವಂತೆ ಮಾಡಿ" (ಪುರಾವಿ – ೨೩೧)

ಸಾಮಾನ್ಯವಾಗಿ ಚಿಂತನವನ್ನು ಸಮಾಜದ ಹಿನ್ನೆಲೆಯಲ್ಲಿ ಕಂಡುಕೊಳ್ಳಬೇಕಾಗುತ್ತದೆ. ಪಾರಂಪರಿಕವಾಗಿ ಬಂದ ಸಮಾಜದ ಅನಿಷ್ಟ ಪದ್ಧತಿಗಳನ್ನು ಹೊಡೆದೋಡಿಸಬೇಕೆಂಬ ವೈಚಾರಿಕತೆಯ ಹಿನ್ನೆಲೆಯಲ್ಲಿ ಒಂದು ಧರ್ಮ ಅಥವಾ ಮತ ಒಂದು ಚೌಕಟ್ಟನ್ನು ನಿರ್ಮಿಸಿಕೊಂಡಿರುತ್ತದೆ. ಅಂತಹ ಸಮಾಜವನ್ನು ವಿಶಾಲವ್ಯಾಪ್ತಿಗೆ ತಂದವರು ಶರಣರು. ಶರಣರ ವಿಚಾರ ಲಹರಿಗಳು ಸಮಾಜದ ಜೊತೆಗೆ ಬೆಸೆದುಕೊಂಡಿರುವುದನ್ನು ಕಾಣಬಹುದು. ೧೨ನೆಯ ಶತಮಾನದಲ್ಲಿ ಬಸವಣ್ಣನವರು ಒಂದು ಹೊಸಧರ್ಮವನ್ನೇ ಹುಟ್ಟು ಹಾಕಿದರು. ಆ ಧರ್ಮಕ್ಕೆ "ಸಮಯ" ಎಂದು ಕರೆದರು.

ಬಸವಣ್ಣನವರ ವಚನಗಳಲ್ಲಿ 'ಸಮಯ' ಎಂಬ ಪದ ವಿವಿಧ ಅರ್ಥಗಳಲ್ಲಿ ಬಳಕೆಯಾಗಿದೆ. "ಸುಪ್ರಭಾತ ಸಮಯದಲ್ಲಿ ಅರ್ತಿಯಲ್ಲಿ ಲಿಂಗವ ನೆನೆದಡೆ ತಪ್ಪುವುದು ಅಪಮೃತ್ಯು ಕಾಲಕರ್ಮಂಗಳಯ್ಯಾ" (ಬಸವ–೧೭೭)

"ಬಂದ ಸಮಯವನರಿತು ಇದ್ದುದ ವಂಚಿಸದಿದ್ದಡೆ
ದೇವನೊಂದು ಸಲಹುವನು" (ಬಸವ – ೨೧೫)

"ಒಡೆಯರು ಬಂದಡೆ ಗುಡಿ ತೋರಣ ಕಟ್ಟಿ ನಂಟರು
ಬಂದರೆ ಸಮಯವಿಲ್ಲೆನ್ನಿ" (೪೪೮ – ಬಸವ)
ಇಲ್ಲಿ 'ವೇಳೆ' ಎಂಬ ಅರ್ಥವಿದೆ.

"ಆದಿಯಲ್ಲಾಗಲಿ ವೇದದಲ್ಲಾಗಲಿ
ಶಾಸ್ತ್ರದಲ್ಲಾಗಲಿ ಸಮಯದಲ್ಲಾಗಲಿ
ಎನ್ನವರೆನ್ನವರೆನ್ನವರನು . . . . ."

ಇಲ್ಲಿ ಮತ ಎಂಬ ಅರ್ಥವಿದೆ. ಆದರೆ "ಸಮಯ" ಎಂಬ ಪದದಿಂದ ಸಮಯಾಚಾರ, ಸಮಯಾಚಾರಿ ಎಂಬ ಪದಗಳು ರೂಪಿತವಾಗಿವೆ.

"ಎನ್ನಲ್ಲಿ ಭಕ್ತಿ ಸಾಸುವೆಯ ಷಡ್ಭಾಗದನಿತಿಲ್ಲ ;
ಎನ್ನ ಭಕ್ತನೆಂಬರು ಎನ್ನಸಮಯಾಚಾರಿಯೆಂಬರು
ನಾನೇನು ಪಾಪವ ಮಾಡಿದನೋ
ಬೆಳೆಯದ ಮುನ್ನವೇ ಕೊಯ್ವರೆ ಹೇಳಾ ಅಯ್ಯಾ
ಇರಿಯದ ವೀರ ಇಲ್ಲದ ಸೊಬಗ
ಎಲ್ಲಾ ಒಡೆಯರು ವರಸಿ ನುಡಿವರು
ಎನಗಿದು ವಿಧಿಯೋ ಕೂಡಲಸಂಗಮದೇವಾ"

ಒಂದು ಧರ್ಮ, ಮತ ಕುರಿತು ಮಾತನಾಡುವಾಗ ಸಂಪ್ರದಾಯ, ಪದ್ಧತಿ ವಿಧಿವಿಧಾನವನ್ನು ಅನುಸರಿಸುವವನಿಗೆ 'ಸಮಯಾಚಾರಿ' ಎಂಬ ಪದ ಬಳಸಿರುವುದನ್ನು ಕಾಣುತ್ತೇವೆ. ಇನ್ನೊಂದು ಕಡೆ ಅರ್ಥ, ಪ್ರಾಣ ಅಭಿಮಾನದಲ್ಲಿ ವಂಚನೆಯನ್ನು ಮಾಡುವ ಭಕ್ತಿ 'ಸಮಯಾಚಾರ'ವಲ್ಲ ಎಂದು ಹೇಳುತ್ತಾರೆ. ಚನ್ನಬಸವಣ್ಣನವರು "ಸಜ್ಜನ ಕಾಯಕದಿಂದ ಗುರುಲಿಂಗ ಜಂಗಮಕ್ಕೆ ಮಾಡಿ ಸತ್ಯನಾಗಿರುವುದೇ ಸಮಯಾಚಾರ" ಎನ್ನುತ್ತಾರೆ. ವ್ರತ ನೇಮ ಶೀಲವನ್ನು ಮಾಡಿಕೊಂಡು ಸಮಯಾಚಾರದಲ್ಲಿ ನಡೆದನೆಂಬ ಭಕ್ತನ ಕ್ರಮ ಹೇಗೆ ಎಂಬುದನ್ನು ಅಕ್ಕಮ್ಮ ತನ್ನ ವಚನದಲ್ಲಿ ಸ್ಪಷ್ಟಪಡಿಸುತ್ತಾಳೆ. ಹೀಗೆ ಅನೇಕ ಶಿವಶರಣರು ತಮ್ಮ ವಚನಗಳಲ್ಲಿ 'ಸಮಯ' 'ಸಮಾಯಾಚಾರ', 'ಸಮಯಭೇದ' ಎಂಬ ಪದವನ್ನು 'ಮತಧರ್ಮ' ಎಂಬ ಪರಿಕಲ್ಪನೆಯಲ್ಲಿ ಬಳಸಿ ಆ ಕುರಿತು ಚರ್ಚಿಸುತ್ತಾರೆ.

"ಬಾಲಲೀಲಾ ಮಹಾಂತ ಶಿವಯೋಗಿಗಳು ತಮ್ಮ 'ಕೈವಲ್ಯ ದರ್ಪಣ'ದಲ್ಲಿ ವಿರಕ್ತ ಪಂಥದಲ್ಲಿ ಬರುವ ಸಮಯಭೇದವನ್ನು ಪ್ರಸ್ತಾಪಿಸುತ್ತ "ವಿರತರಿಳೆಯೊಳು ಸಮಯಭೇದ

ಮಾಡುವಿರೇಕೆ?" ಎಂದು ಪ್ರಶ್ನಿಸಿದ್ದಾರೆ. ರಾಗ-ದ್ವೇಷಗಳಿಂದ ರೂಪಗೊಂಡ ಈ ಸಮಯಗಳನ್ನು ದೂರಸರಿಸಿ, ಅಪರೂಪದ ಮಾನವ ಜನ್ಮದ ಸಾರ್ಥಕತೆಯ ಸಮಯವನ್ನು ಗುರುತಿಸಿಕೊಳ್ಳಬೇಕು. ಅದುವೆ ನಿಜವಾದ ಸಮಯ ಎಂದು ಮಾರ್ಮಿಕವಾಗಿ ನುಡಿದಿದ್ದಾರೆ.

"ಕರಣ ಜಯಿಸುವ ಸಮಯ ಮರಣಗೆಲ್ಲುವ ಸಮಯ
ಮರವೆ ಮಾಯೆಗಳನ್ನು ಕಳೆವ ಸಮಯ
ವಿರತಿ ಪಿಡಿಯುವ ಸಮಯ ಹರನ ಕೂಡುವ ಸಮಯ
ನರರಿಚ್ಛೆಯನು ಬಿಡುವುದದೆ ಸಮಯವು"[೧]

ಹೀಗೆ ನಿಜವಾದ ಸಮಯದ ಮರ್ಮವನ್ನು ತಿಳಿಸುವುದರ ಜೊತೆಗೆ ಅದನ್ನು ಪ್ರಾಮಾಣಿಕ ರೀತಿಯಲ್ಲಿ ಅರ್ಥೈಸಿದ್ದಾರೆ. ಸಮಯವನ್ನು ವೈಚಾರಿಕವಾಗಿ ವಿಶ್ಲೇಷಣೆಗೆ ಒಳಪಡಿಸುತ್ತ ಶ್ರೇಷ್ಠ ಸಮಯ ಯಾವುದು ಎಂಬ ವಿಚಾರವನ್ನು ಮಾಡಿ ಹೊರ ಅರಿವಿನತ್ತ ಕೊಂಡೊಯ್ಯುತ್ತಾರೆ.

"ನವಚಕ್ರದೊಳಗಿಪ್ಪ ನವಲಿಂಗ ಮೂರ್ತಿಗಳ
ವಿವರಗಳ ತಿಳಿಯುತ್ತ ಹವಣಿನಿಂದ
ಭವದ ಭೇರನು ಕಿತ್ತು ಶಿವಮಹಂತೇಶನೊಳ್
ಸವನಿಸಿದ ಸಮರಸವೇ ವಿನುತ ಶಿವಸಮಯ"[೨]

"ನಮ್ಮ ಅಂತರಂಗದಲ್ಲಿ ಹುದುಗಿರುವ ಚೈತನ್ಯ ಸ್ವರೂಪವಾದ ಪರಮಾತ್ಮನನ್ನು ಗುರುತಿಸಿಕೊಳ್ಳುವ ಮೂಲಕ ಭವಬಂಧನದ ತೊಡಕನ್ನು ಕಿತ್ತು ಶಿವಮಹಾಂತನಲ್ಲಿ ಒಂದಾಗುವುದೇ ಅಂದರೆ ಲಿಂಗಾಂಗ ಸಾಮರಸ್ಯ ಸುಖವನ್ನು ಕಾಣುವ ಅರಿವನ್ನು ಮೂಡಿಸುವುದೇ ನಿಜವಾದ ಸಮಯ" ಎಂದು ಹೇಳುತ್ತಾರೆ.

ಸಮಯ ಭೇದಗಳ ಹುಟ್ಟು :

"ಒಂದು ಅರ್ಥದಲ್ಲಿ ಗ್ರಹಿಸಿದಾಗ ಸಮಯಭೇದಗಳು ಆರಂಭದ ಹಂತದಲ್ಲಿ ವ್ಯಕ್ತಿ ಇಲ್ಲವೇ ಸ್ಥಳದ ಹೆಸರಿನ ಒಂದು ಸಂಪ್ರದಾಯವಿದ್ದು, ಆಯಾ ಸಮಯಕ್ಕೆ ಸೇರಿದ ಮಠ ಮತ್ತು ಅಲ್ಲಿಯ ಸ್ವಾಮಿ, ಸಂತರ ಮಹಿಮೆಯಿಂದ ಪ್ರಸಿದ್ಧಿಗೆ ಬಂದಾಗ ಅವರದೇ ಆದ ಬೇರೊಂದು ಸಂಪ್ರದಾಯ ಜಾಗೃತಗೊಂಡಾಗ ಅಥವಾ ಮೂಲ ಮಠದ ಜೊತೆಗೆ ಯಾವುದೇ ಕಾರಣಕ್ಕಾಗಿ ಭಿನ್ನಾಭಿಪ್ರಾಯ ತಲೆದೋರಿದ ಸಂದರ್ಭದಲ್ಲಿ ಅದರಿಂದ ದೂರವಾಗಲು ಅಲ್ಲಿಯ ಸ್ವಾಮಿ ಬೇರೊಂದು ಮಠವನ್ನು ಹುಟ್ಟು ಹಾಕುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ."[೩] ಭಾರತೀಯ ವೈದಿಕ ಮತ್ತು ಅವೈದಿಕ ಮತಗಳಲ್ಲಿ ಇಂತಹ ಸಂಪ್ರದಾಯಗಳು ಕಂಡುಬರುತ್ತವೆ. ಪ್ರಾಚೀನ ಕಾಲದಲ್ಲಿ ಇಂತಹ ಅಂಶಗಳು ರೂಢಿಗತವಾಗಿರುವದನ್ನು ಕಾಣಬಹುದಾಗಿದೆ. ಜೈನಧರ್ಮದಲ್ಲಿ ಸಂಘ, ಗಣಗುಚ್ಛ,

ಅನ್ವಯಗಳಿರುವಂತೆ ವೈದಿಕ ಪರಂಪರೆಯಲ್ಲಿ ಗೋತ್ರ, ಸೂತ್ರಗಳು ಇದ್ದು, ವೀರಶೈವಧರ್ಮದಲ್ಲಿ ಸಮಯಭೇದಗಳಿರುವುದನ್ನು ಕಾಣಬಹುದು.

"ಬಸವಪೂರ್ವಕಾಲ ಘಟ್ಟದಲ್ಲಿ ಲಕುಲೀಶ, ಪಾಶುಪತ, ಕಾಳಾಮುಖ ಮುಂತಾದ ಶೈವಪಂಥಗಳಿದ್ದು ಮುಖ್ಯವಾಗಿ ಸಿಂಹಪರಿಷೆ, ಶಕ್ತಿಪರಿಷೆ, ಪರ್ವತಾವಳಿ, ಭುಜಂಗಾವಳಿ, ಅಗಸ್ತ್ಯೇಶ್ವರಸಂತತಿ, ಮೂವರ ಕೋಣೆಯ ಸಂತತಿ, ಇಟ್ಟಿಗೆಯ ಸಂತಾನ, ಕಾಶ್ಮೀರಸಂತಾನ ಇತ್ಯಾದಿ ಪ್ರಭೇದಗಳಿದ್ದುದರ ಬಗ್ಗೆ ಮಾಹಿತಿ ದೊರೆಯುತ್ತದೆ. ಇಂತಹ ಪ್ರಾಚೀನ ಪರಂಪರೆಯಿಂದ ಪ್ರೇರಣೆ ಹೊಂದಿ ವೀರಶೈವರಲ್ಲಿ ವೀರನಂದಿ, ಭೃಂಗಿ, ಇತ್ಯಾದಿ ಗೋತ್ರಗಳು ಪಡ್ವಿಡಿ, ವೃಷ್ಟಿ ಲಂಬನಾದಿ ಸೂತ್ರಗಳು ವಿರಕ್ತರಲ್ಲಿ ಮುರುಗಾ ಮುಂತಾದ ಮುಕಾರಾದಿ ಸಮಯಗಳು ರೂಪಗೊಂಡಿರುತ್ತವೆ".[೪] ಯಾವ ಕಾರಣಕ್ಕಾಗಿ ಇವು ಹುಟ್ಟಿಕೊಂಡವು ಎಂಬುದು ಮುಖ್ಯವಲ್ಲ. ಅವುಗಳ ಉದ್ದೇಶ, ಯೋಜನೆ, ಸಮಾಜಕ್ಕೆ ಸ್ವಾಸ್ಥ್ಯವಾಗಬೇಕೆ ಹೊರತು ಮಾರಕವಾಗಬಾರದು. ಈ ಸಮಯಭೇದಗಳು ವೈಯಕ್ತಿಕ ಭಿನ್ನಾಭಿಪ್ರಾಯದ ಮೇರೆಗೆ ಆದುವೇ ಹೊರತು ಯಾವುದೇ ತಾತ್ವಿಕ ನೆಲೆಗಟ್ಟಿನ ಮೇಲೆ ಅಲ್ಲ. ಇವುಗಳ ಆಚರಣೆಯಲ್ಲಾಗಲಿ, ಬಿರುದು ಬಾವಲಿಯಲ್ಲಾಗಲಿ ಭಿನ್ನಾಭಿಪ್ರಾಯವಿಲ್ಲ. ಹೀಗಾಗಿ ಒಂದು ಮಠವನ್ನು ಆಯಾ ಸಮಯಗಳಲ್ಲಿ ಗುರುತಿಸುವಾಗ ಅಲ್ಲಿಯ ಶ್ರೀಗಳ ಪರಂಪರಾಗತ ಹೇಳಿಕೆಗಳನ್ನು ಮಾತ್ರ ಅವಲಂಬಿಸಬೇಕಾಗುತ್ತದೆ.

ಒಟ್ಟಿನಲ್ಲಿ ಗ್ರಹಿಸುವುದೇನೆಂದರೇ ಹಿಂದಿನ ವಿರಕ್ತ ಪರಂಪರೆಗಳು ೩೦೦ ವರ್ಷಗಳ ಹಿಂದೆ ಒಂದೇ ಮೂಲವನ್ನು ಹೊಂದಿದ್ದು, ಕಾಲಾನಂತರದಲ್ಲಿ ಒಬ್ಬರ ಆಧಿಪತ್ಯವನ್ನು ಮತ್ತೊಬ್ಬರು ಒಪ್ಪದೇ ಪ್ರತಿಭಟಿಸುತ್ತಾ ಬಂದ ಸಂದರ್ಭದಲ್ಲಿ ಅನೇಕ ಸಮಯಭೇದಗಳಾಗಿರಬಹುದು.

ಸಮಯಗಳ ಬೆಳವಣಿಗೆ :

ಶೂನ್ಯಪೀಠದ ತೃತೀಯ ಘಟ್ಟದಲ್ಲಿ ಘನಮಠದಾರ್ಯರ ತರುವಾಯ ಪಟ್ಟಕ್ಕೆ ಬಂದ ಕಟ್ಟಿಗೆಹಳ್ಳಿಸ್ವಾಮಿಗಳ ಕಾಲಘಟ್ಟದಲ್ಲಿ ವಿರಕ್ತರಲ್ಲಿ ವೈಯಕ್ತಿಕ ಭೇದಗಳು ಹುಟ್ಟಿಕೊಂಡವು. ಆಗ ಏಕಮುಖವಾಗಿದ್ದ ಶೂನ್ಯಪರಂಪರೆ ಬಹುಮುಖವಾಗಿ ಪಸರಿಸುತ್ತ ನಾಡಿನ ಅನೇಕ ಭಾಗಗಳಲ್ಲಿ ಶಾಖಾಮಠಗಳ ಉದಯಕ್ಕೆ ಕಾರಣವಾಯಿತು. ಇದುವರೆಗೆ ಈ ಸಂಪ್ರದಾಯದವರು ಭಕ್ತರೋದ್ಧಾರಕ್ಕಾಗಿ ಸದಾ ಪ್ರವಾಸದಲ್ಲಿಯೇ ಇರುತ್ತಿದ್ದರಿಂದ ಒಂದು ಸ್ಥಿರವಾದ ಮಠವೆಂಬುದು ಇರುತ್ತಿರಲಿಲ್ಲ. ಆದರೆ ಇದೇ ಘಟ್ಟದಲ್ಲಿ ಪ್ರಥಮ ಬಾರಿಗೆ ಶೂನ್ಯಪೀಠದ ಸ್ಥಿರವಾದ ಒಂದು ಮಠ ಚಿತ್ರದುರ್ಗದಲ್ಲಿ ಜನ್ಮತಾಳಿತು. ಈ ಶೂನ್ಯಪೀಠದ ಪರಂಪರೆಯಲ್ಲಿ ಕೆಲವು ಕಾಲ ಗತಿಸಿದ ನಂತರ ಹಲವಾರು ಸಮಯಭೇದಗಳು ಕಾಣಿಸಿಕೊಂಡವು. ಅವುಗಳನ್ನು ಮಹಾಲಿಂಗ ಕವಿ ಮಹಾಲಿಂಗೇಂದ್ರವಿಜಯದಲ್ಲಿ ಹೀಗೆ ಗುರುತಿಸುತ್ತಾರೆ.

"ಎಂತೆನಲ್ ಚೀಲಾಳಸಮಯ ಕೆಂಪಿನಸಮಯ
ಮುಂತೆ ಸಮಯಂ ಬಿಟ್ಟು ಸ್ವಾತಂತ್ರಿಗಳ ಸಮಯ
ಮಂತೆ ತಾಮಾಯಕಟ್ಟಿನ ಸಮಯ ಗದ್ದಕಟ್ಟಿನ ಸಮಯ ಗೂಳಿಕೊಂಡ
ಕಾಂತಯ್ಯಗಳ ಸಮಯವೆಂದು ಭೇದಿಸುತಮಿವು
ಮುಂತಾಗಿ ಪದಿನಾರು ಸಮಯವಾಗಿರಲವಂ
ಶಾಂತಗುರು ಸಿದ್ಧಗುರುದೇವಂ ಬಹಿಷ್ಕರಿಸಿದಂ ಸದಾಚಾರದಿಂದಂ"[೨]

ಮಹಾಲಿಂಗಕವಿಯು ಇಲ್ಲಿ ೧೬ ಸಮಯಗಳ ಪ್ರಸ್ತಾಪ ಮಾಡುತ್ತಾನೆ. ಈ ಪದ್ಯವು ಇಮ್ಮಡಿ ಮುರಿಗಾ ಗುರುಸಿದ್ಧರ ಕಾಲಕ್ಕೆ ಸಮಯ ಭೇದಗಳಾದವು ಎಂಬ ವಿಚಾರವನ್ನು ಪ್ರಸ್ತಾಪಿಸುತ್ತದೆ. ಅಂದರೆ ಎಲ್ಲ ಕಾಲ ಘಟ್ಟದಲ್ಲಿ ಧರ್ಮದ್ರೋಹಿಗಳು ಒಂದಿಲ್ಲೊಂದು ರೀತಿಯಲ್ಲಿ ನಮ್ಮ ಮಧ್ಯದಲ್ಲೇ ಇದ್ದುಕೊಂಡು ಸಮಾಜಘಾತಕ ಕೆಲಸಗಳನ್ನು ಮಾಡುತ್ತ ಬಂದಿದ್ದಾರೆ. ಬಹುಶಃ ಅಂದಿನ ಕಾಲದಲ್ಲಿ ಇಂಥ ಧರ್ಮದ್ರೋಹಿಗಳು ಇರುವದನ್ನು ಸೂಕ್ಷ್ಮವಾಗಿ ಗಮನಿಸಿದ ಇಮ್ಮಡಿ ಮುರಿಗಾ ಗುರುಸಿದ್ಧ ಜಗದ್ಗುರುಗಳು ವೀರಶೈವ ಧರ್ಮದಿಂದಲೇ ಅಂಥವರನ್ನು ಬಹಿಷ್ಕಾರ ಮಾಡಿದ್ದಾರೆ. ಆದರೂ ಕೆಲವು ಪಟ್ಟಭದ್ರ ಹಿತಾಸಕ್ತಿಗಳ ಬೆಂಬಲದಿಂದಾಗಿ ಅದೇ ವೇಳೆಗೆ ಹಲವು ಸಮಯಗಳು ಹುಟ್ಟಿಕೊಂಡುದು ಕಂಡುಬರುತ್ತದೆ.

ಮಹಾಲಿಂಗಕವಿಯ ಹೇಳಿಕೆಯನ್ನು ಪುಷ್ಟೀಕರಿಸುವ ಬಾಲಲೀಲಾ ಮಹಾಂತ ಶಿವಯೋಗಿಗಳ 'ಕೈವಲ್ಯದರ್ಪಣ'ದ ಪದ್ಯವೊಂದು ಹೀಗಿದೆ ;

"ಮುರುಗಾಸಮಯ ಕುಮಾರವರ ಸಮಯ ಚೀಲಾಳ
ಪರಮ ಕೆಂಪಿನ ಸಮಯದವರು ನಾವೆಂದು
ಭರದಿ ರಾಗ ದ್ವೇಷವವರವರೊಳೆರೆ ಪೆರ್ಚೆ
ಕರಣ ವಿಕೃತಿಗಳಿಂದ ವಿರತಿ ಭಾವವ ತೊರೆದು"[೩]

ಬಾಲಲೀಲಾ ಮಹಾಂತ ಶಿವಯೋಗಿಗಳು ಇಲ್ಲಿ ಮುಖ್ಯವಾಗಿ ನಾಲ್ಕು ಸಮಯಗಳನ್ನು ಪ್ರಸ್ತಾಪ ಮಾಡುತ್ತಾರೆ. ಜೊತೆಗೆ ಸಮಯದವರು ತಮ್ಮ ಮುಖ್ಯ ಗುಣಗಳಾದ ವೈರಾಗ್ಯವನ್ನು ನಿರಾಕರಿಸಿ ರಾಗ-ದ್ವೇಷಗಳನ್ನು ರೂಢಿಸಿಕೊಂಡಿರುವುದನ್ನು ಖಂಡಿಸಿದ್ದಾರೆ.

ಮಹಾಲಿಂಗೇಂದ್ರ ವಿಜಯದಲ್ಲಿ ಉಲ್ಲೇಖಗೊಂಡಿರುವ ಒಟ್ಟು ಸಮಯಗಳು ೧೬. ಅವುಗಳಲ್ಲಿ ಚೀಲಾಳಸಮಯ, ಸಂಪಾದನಾಸಮಯ, ಮುರುಘಾಸಮಯ, ಕುಮಾರಸಮಯ ಹಾಗೂ ಕೆಂಪಿನಸಮಯ ಎಂಬ ಐದು ಮಾತ್ರ ಹೆಚ್ಚು ಪ್ರಸಿದ್ಧಿ ಪಡೆದಿವೆ. ಈ ಸಮಯಭೇದಗಳು ಉದ್ಭವಿಸಲು ಕಾರಣಗಳು ಹಲವು ಬಗೆಯಾಗಿವೆ. ಅವುಗಳನ್ನು ಹೀಗೆ ಕ್ರೋಡೀಕರಿಸಬಹುದು ;

ಶೂನ್ಯಪೀಠ ಪರಂಪರೆಯಲ್ಲಿ – ಅದರಲ್ಲೂ ವಿಶೇಷವಾಗಿ ಅದರ ಬೆಳವಣಿಗೆಯ ದೃಷ್ಟಿಯಿಂದ ಎರಡು ಘಟ್ಟಗಳನ್ನು ಗುರುತಿಸಿಸಬಹುದು ;

೧) ತೋಂಟದ ಸಿದ್ಧಲಿಂಗನಿಂದ ಹಿಡಿದು ಕಟ್ಟಿಗೆಹಳ್ಳಿ ಸಿದ್ಧಲಿಂಗನವರೆಗಿನ ಘಟ್ಟ

೨) ಕಟ್ಟಿಗೆಹಳ್ಳಿ ಸಿದ್ಧಲಿಂಗನಿಂದ ಮುಂದಿನ ಘಟ್ಟ

ಇವುಗಳಲ್ಲಿ ಮೊದಲನೆಯದು ಏಕಮುಖವಾಗಿ ಬೆಳೆದು ಬಂದರೆ, ಎರಡನೆಯದರಲ್ಲಿ ಅದೇ ಮುಂದೆ ಕಾಲಾಂತರದಲ್ಲಿ ಐದು ಶಾಖೆಗಳಲ್ಲಿ ಇಬ್ಭಾಗವಾಗಿ ಮುಂದುವರೆದುಕೊಂಡು ಬಂದಿರುವುದನ್ನು ಕಾಣುತ್ತೇವೆ.

ತೋಂಟದ ಸಿದ್ಧಲಿಂಗರು ಚರಜಂಗಮರಾಗಿ ಕರ್ನಾಟಕದ ಒಳಹೊರಗೆ ಸಂಚರಿಸಿ ಧರ್ಮಪ್ರಸಾರ ಕಾರ್ಯವನ್ನು ಮಾಡಿದರು. ಇವರ ತರುವಾಯ ಬೋಳಬಸವೇಶ್ವರರು ಅಧಿಕಾರಕ್ಕೆ ಬಂದರು. ತರುವಾಯ ಗುಮ್ಮಳಾಪುರದ ಸಿದ್ಧಲಿಂಗ, ಗೂಳೂರುಸಿದ್ಧವೀರಣ್ಣ, ಗಗನದಾರ್ಯ, ಕಟ್ಟಿಗೆಹಳ್ಳಿ ಸಿದ್ಧಲಿಂಗರು ಕ್ರಮವಾಗಿ ಪೀಠಾಧಿಕಾರಿಗಳಾಗಿ ಮುನ್ನೆಡೆಸಿಕೊಂಡು ಬಂದರು ಎಂದು ತಿಳಿದು ಬರುತ್ತದೆ. ಈ ಕುರಿತ ಆಕರಗಳನ್ನು ಪರಿಶೀಲಿಸಲಾಗಿ ಕೆಲವೊಂದು ವ್ಯತ್ಯಾಸಗಳು ಕಂಡುಬರುತ್ತವೆ. ಗಗನದಾರ್ಯನಿಗೆ ಉದ್ದನಾರ್ಯ ಎಂದೂ ಕರೆಯಲಾಗುತ್ತದೆ. ಹೀಗೆ ತೋಂಟದ ಸಿದ್ಧಲಿಂಗರಿಂದ ಕಟ್ಟಿಗೆಹಳ್ಳಿ ಸಿದ್ಧಲಿಂಗರ ವರೆಗೆ ಏಕಮುಖವಾಗಿ ನಡೆದುಬಂದ ಶೂನ್ಯಪೀಠ ಪರಂಪರೆಯಲ್ಲಿ ಮುಂದೆ ಸಮಯ ಭೇದಗಳು ತಲೆದೋರುತ್ತವೆ.

ಕಟ್ಟಿಗೆಹಳ್ಳಿ ಸಿದ್ಧಲಿಂಗರು ಸಂಪ್ರದಾಯದಂತೆ ದೇಶಸಂಚಾರ ಮಾಡುತ್ತ ಗುರುತತ್ವವನ್ನು ಪಾಲಿಸುತ್ತ ಮತ್ತು ಪ್ರಸಾರಗೊಳಿಸುತ್ತ ಬಂದರು. ಇವರ ಶಿಷ್ಯರಲ್ಲಿ ಕೆಲವು ಕಾರಣಗಳಿಂದಾಗಿ ಭಿನ್ನಾಭಿಪ್ರಾಯಗಳು ತಲೆದೋರಿ ಸಮಯಭೇದಗಳ ಉದಯಕ್ಕೆ ದಾರಿಯಾಗಿರಬೇಕು. ಅದರಲ್ಲಿ ಮೊದಲನೆಯದಾಗಿ ಸಂಪಾದನೆಯ ಸಿದ್ಧವೀರನು ಕಟ್ಟಿಗೆಹಳ್ಳಿ ಸಿದ್ಧಲಿಂಗರೊಡನೆ ಜಗಳವಾಡಿ ಹೋದದ್ದು.

ಸಿದ್ಧವೀರನೆಂಬ ವಿರಕ್ತನೋರ್ವನು ಕಟ್ಟಿಗೆಹಳ್ಳಿ ಸ್ವಾಮಿಗಳ ಶಿಷ್ಯನಾಗಿ ಬರುವುದು, ತಮ್ಮ ಇಷ್ಟಲಿಂಗದ ಗೋಳಕ ಸಡಿಲಗೊಂಡಿದೆ ಎಂದು ಹೇಳುವದು, ಮೂರುನಾಲ್ಕುಸಾರಿ ಕಂತೆಮಾಡಲು ಆಜ್ಞಾಪಿಸುವದು. ಸಂಪಾದನೆಯ ಸಿದ್ಧವೀರನಿಗೆ ಗುರು–ಲಿಂಗ–ಜಂಗಮಗಳಲ್ಲಿ, ಅಷ್ಟಾವರಣದಲ್ಲಿ ದೃಢವಿಲ್ಲದ ಕಾರಣ ಹೀಗಾಗುತ್ತದೆ ಎಂದು ಹೊರಹಾಕುವುದು. ಈ ಕಾರಣದಿಂದಾಗಿ ಸಂಪಾದನೆಯ ಸಿದ್ಧವೀರನು ಹತ್ತಿ ಬಣಜಿಗರನ್ನು ಕಟ್ಟಿಕೊಂಡು ಗುರುವಿನೊಂದಿಗೆ ಶಾಸ್ತ್ರಮುಖೇನ ವಾದಕ್ಕೆ ನಿಂತು ಸೋಲುವುದು. ಅವನ ಬೆನ್ನುಹತ್ತಿದ ಕೆಲವು ಹತ್ತಿ ಬಣಜಿಗರು ತಪ್ಪನ್ನೊಪ್ಪಿಕೊಂಡು ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳೊಡನೆ ಕೂಡಿಕೊಳ್ಳುವುದು. ಮತ್ತೆ ಕೆಲವರು ವೈಷ್ಣವರಾಗುವುದು.

ಸಂಪಾದನೆಯ ಸಿದ್ಧವೀರನು ಮಾತ್ರ ತಾವು ಮಾಡಿದ ತಪ್ಪನ್ನು ಒಪ್ಪದೇ ಹಾಗಲವಾಡಿಗೆ ಬಂದು, ಅಲ್ಲಿಯ ಅರಸನನ್ನು ಭಕ್ತನನ್ನಾಗಿಸಿಕೊಂಡು, ಆ ಊರಿನಲ್ಲಿಯೇ ಮಠ ಕಟ್ಟಿ, ಕೆಲವು ಕಾಲ ಅಲ್ಲಿಯೇ ಇದ್ದು ಕೊನೆಗೆ ತಮ್ಮ ಮರಿಗೆ ಚರಪಟ್ಟ ಕಟ್ಟುವ ಮೂಲಕ ಹಾಗಲವಾಡಿಯಲ್ಲಿಯೇ ಶಿವಾಧೀನನಾಗುವುದು. ಇವನು ಕಟ್ಟಿದ ಸಮಯವೇ ಸಂಪಾದನ ಸಮಯವೆಂದು ಹೆಸರಾಗುವುದು ಎಂದು ಒಂದು ಅಭಿಪ್ರಾಯ.

ಸಂಪಾದನೆಯ ಸಿದ್ಧವೀರನು ಜಗಳವಾಡಿ ಹೋದನಂತರ ಕಟ್ಟಿಗೆಹಳ್ಳಿ ಸ್ವಾಮಿಗಳು ಮಾಗಡಿಗೆ ಬಂದು ಅಲ್ಲಿಯ ಬೃಹನ್ಮಠದಲ್ಲಿ ತಮ್ಮ ಇಬ್ಬರು ಶಿಷ್ಯರನ್ನು ಕರೆಯಿಸಿ, ಹಿರಿಯ ಶಿಷ್ಯರಾದ ಮುರಿಗಾ ರುದ್ರಸ್ವಾಮಿಗಳಿಗೆ, ಸಿದ್ಧಲಿಂಗಸ್ವಾಮಿಗಳೆಂಬ ಅಭಿದಾನವನ್ನು ನೀಡಿ ಗುರುಸೇವೆ, ಜಂಗಮದಾಸೋಹ, ಲಿಂಗನಿಷ್ಠೆಯುಳ್ಳವರಾಗುವಂತೆ ಆಶೀರ್ವದಿಸಿ ಚರಪಟ್ಟ ಕಟ್ಟಿದರು. ಅವರು ಚಿತ್ರದುರ್ಗದ ತಪ್ಪಲಿನಲ್ಲಿ ಸಂಚರಿಸುತ್ತ ನಡೆದಾಗ ಒಬ್ಬ ದನಗಾಹಿ ಸಿಗುತ್ತಾನೆ. ಚಿತ್ರದುರ್ಗದ ದೊರೆಚಂದ್ರಮೌಳಿ ಮಕ್ಕಳಿಲ್ಲದೆ ಚಿಂತಾಕ್ರಾಂತರಾದಾಗ ಆ ದನಗಾಯಿ ಬಾಲಕನನ್ನೇ ಅವರಿಗೆ ಕೊಡುತ್ತಾನೆ. ಈ ಬಾಲಕನೆ ಮುಂದೆ ಬಿಚ್ಚುಗತ್ತಿ ಭರಮನಾಯಕನಾಗಿ ಚಿತ್ರದುರ್ಗ ಬೃಹನ್‌ಮಠದ ಭಕ್ತನಾಗುತ್ತಾನೆ. ರಾಜನಿಂದ ಸತ್ಕಾರವನ್ನು ಪಡೆದು ಮುರಿಗಾ ಸ್ವಾಮಿಗಳು ದೇಶ ಸಂಚಾರ ಮಾಡಿ ಪುನಃ ಚಿತ್ರದುರ್ಗಕ್ಕೆ ಮರಳಿದಾಗ ಭರಮಪ್ಪನಾಯಕನು ಸ್ವಾಮಿಗಳಿಗೆ ಒಂದು ಮಠವನ್ನು ಕಟ್ಟಿಸಿಕೊಡುತ್ತಾನೆ. ಅಲ್ಲಿ ಸ್ವಾಮಿಗಳು ದಾಸೋಹ ನಿರತರಾಗುತ್ತಾರೆ. ಮುಂದೆ ತಮ್ಮ ಶಿಷ್ಯರಲ್ಲಿ ಚೀಲಾಳಪ್ಪ ಎಂಬವನನ್ನು ಹರಪನಹಳ್ಳಿಗೆ, ಕುಮಾರಪ್ಪ ಎಂಬುವನನ್ನು ಸ್ವಾದಿಸೀಮೆಗೆ ಚರಮೂರ್ತಿಯನ್ನಾಗಿ ಕಳಿಸಿ, ಕೆಲದಿನಗಳ ನಂತರ ತಮ್ಮ ಇನ್ನೊಬ್ಬ ಶಿಷ್ಯನಾದ ಇಮ್ಮಡಿ ಗುರುಸಿದ್ಧರಿಗೆ ಪಟ್ಟಕಟ್ಟಿ ತಾವು ಬೃಹನ್ಮಠದಲ್ಲಿ ಸಮಾಧಿ ಹೊಂದುತ್ತಾರೆ.

ಇಮ್ಮಡಿ ಗುರುಸಿದ್ಧರಿಗೆ ಪಟ್ಟಾಧಿಕಾರ ಕೊಟ್ಟುದನ್ನು ಕಂಡು ಚೀಲಾಳಪ್ಪ ಕ್ರುದ್ಧನಾಗುತ್ತಾನೆ. ಆಗ ಆತನನ್ನು ಮಠದಿಂದ ಹೊರಹಾಕಲಾಗುತ್ತದೆ. ಹರಪನಹಳ್ಳಿಯ ರಾಜನ ಆಶ್ರಯವನ್ನು ಪಡೆದ ಚೀಲಾಳಪ್ಪ ಆ ಪೀಠದಲ್ಲಿಯೇ ಮುಂದುವರಿಯುತ್ತಾನೆ.

ಸ್ವಾದಿಯಲ್ಲಿದ್ದ ಕುಮಾರಸ್ವಾಮಿಯೂ ಇಮ್ಮಡಿ ಗುರುಸಿದ್ಧರ ಬೆಳವಣಿಗೆಯನ್ನು ಸಹಿಸದೇ ಹೋಗುತ್ತಾನೆ. ಆತನ ಸಣ್ಣತನವನ್ನು ಅಸಹನೀಯವಾದ ಬುದ್ಧಿಯನ್ನು ಗಮನಿಸಿದ ಸ್ವಾದಿಯ ಅರಸು ಮಠದಿಂದ ಹೊರಹಾಕುತ್ತಾನೆ. ಆಗ ಕುಮಾರಸ್ವಾಮಿ ಹುಬ್ಬಳ್ಳಿಗೆ ಬಂದು ನೆಲೆಸಿ ಅಲ್ಲಿ ಮಠವನ್ನು ಸ್ಥಾಪಿಸುತ್ತಾನೆ. ಚೀಲಾಳಪ್ಪನ ಹರಪನಹಳ್ಳಿಮಠ ಪರಂಪರೆ ಚೀಲಾಳ ಸಮಯವೆಂದೂ, ಕುಮಾರಸ್ವಾಮಿಯ ಹುಬ್ಬಳ್ಳಿಮಠ ಪರಂಪರೆ ಕುಮಾರ ಸಮಯವೆಂದೂ ಹೆಸರು ಪಡೆಯುತ್ತವೆ.

ಹೀಗೆ ಭಿನ್ನಾಭಿಪ್ರಾಯಗಳ ಮಧ್ಯೆ, ಅಸೂಯೆ ಹಾಗೂ ವೈಮನಸ್ಸುಗಳ ಪರಿಣಾಮವಾಗಿ ಅನೇಕ ಶ್ರೀಗಳಿಂದ ಕೆಂಪಿನ ಸಮಯ, ಸ್ವಾತಂತ್ರಿಗಳ ಸಮಯ ಎಂದು ಸುಮಾರು ೧೬ ಸಮಯಗಳು ಉದಯಗೊಂಡಿರುವುದನ್ನು ಕಾಣುತ್ತೇವೆ. ಆದರೆ ಅವುಗಳಲ್ಲಿ ಪ್ರಮುಖವಾಗಿ ಕಂಡುಬರುವ ಸಮಯಗಳೆಂದರೆ ಸಂಪಾದನಾ ಸಮಯ, ಚೀಲಾಳಸಮಯ, ಮುರುಘಾಸಮಯ, ಕುಮಾರಸಮಯ, ಕೆಂಪಿನಸಮಯ ಎಂಬ ಐದು ಮಾತ್ರ. ಈ ಸಮಯಗಳು ಹೀಗೆ ಅನೇಕ ಕವಲುಗಳಾಗಿ ಮೂಡಿ ಬಂದರೂ ಅವು ಸಮಾಜ ಸೇವೆಗೆ ಕೊಟ್ಟ ಕೊಡುಗೆ ಚಿರಸ್ಮರಣೀಯವಾದುದು. ವೀರಶೈವ ಧರ್ಮದ ಸಾಂಸ್ಕೃತಿಕ ಚರಿತ್ರೆಯನ್ನು ಪುನರ್ ನಿರ್ಮಿಸುವಾಗ ಅವುಗಳ ಸಾಧನೆಗೆ ವಿಶೇಷ ಸ್ಥಾನವನ್ನು ಕೊಡಬೇಕಾದುದು ಅನಿವಾರ್ಯವಾಗುತ್ತದೆ.

ಸಂಪಾದನಾ ಸಮಯ :

"೨೩ನೆಯ ಪಟ್ಟದ ಶ್ರೀಗಳಾದ ಕಟ್ಟಿಗೆಹಳ್ಳಿ ಸಿದ್ಧವೀರಸ್ವಾಮಿಗಳಿಗೆ ಸಂಪಾದನೆಯ ಸಿದ್ಧವೀರಪ್ಪ ಎಂಬ ಚರಮೂರ್ತಿಯು ಒಮ್ಮೆ ಸ್ವಾಮಿಗಳ ಪಾದಕ್ಕೆ ನಮಸ್ಕರಿಸಿ ತನ್ನ ಇಷ್ಟಲಿಂಗದ ಗೋಳಕ ಸಡಿಲಗೊಂಡಿರುವುದನ್ನು ನಿವೇದಿಸಿಕೊಂಡನು. ಆಗ ಶ್ರೀಗಳು ಕಂತೆ ಬದಲಿಸಿ ಧರಿಸಿಕೋ ಎಂದು ಅಪ್ಪಣೆ ಮಾಡಿದರು. ಹೀಗೆ ಮೂರು ನಾಲ್ಕು ಸಲ ಕಂತೆ ಬದಲಿಸಿ ಧರಿಸಿಕೊಂಡರೂ ಮತ್ತೆ ಗೋಳಕ ಸಡಿಲಗೊಂಡಿತು. ಅದು ಗುರು-ಲಿಂಗ-ಜಂಗಮದಲ್ಲಿ ದೃಢವಿಲ್ಲದ ಕುರುಹಾಗಿತ್ತು. ಒಂದು ದಿನ ಈ ಚರಮೂರ್ತಿಯು ಪ್ರಾಣ ಕಳೆದುಕೊಳ್ಳುವ ನಟನೆ ಮಾಡಿದನು. ಆಗ ಶ್ರೀಗಳು ಮಠದಿಂದ ಹೊರಹಾಕಿದರು. ಇದರಿಂದ ಸಿದ್ಧವೀರಪ್ಪನವರು ಕೋಪಗೊಂಡು ಮೈಸೂರು ಸಂಸ್ಥಾನಿಕರಿಗೆ ತಿಳಿದು ಸಭೆ ಸೇರಲು ತರ್ಕದಲ್ಲಿ ಸೋತು ಗುರುದ್ರೋಹಿಯಾದ ಸಂಪದಾನೆಯ ಸಿದ್ಧವೀರಪ್ಪನು ಹಾಗಲವಾಡಿಗೆ ಬಂದು ಅಲ್ಲಿಯ ದೊರೆ ಹಿರಿಯ ಮುದಿಯಪ್ಪ ನಾಯಕನನ್ನು ಭಕ್ತನನ್ನಾಗಿ ಮಾಡಿಕೊಂಡು, ಅವನ ಕಡೆಯಿಂದ ಮಠ-ಮಾನ್ಯಗಳನ್ನು ಪಡೆದು ಅದೇ ಸ್ಥಳದಲ್ಲಿ ಬಯಲಾಗುತ್ತಾನೆ. ಅಲ್ಲಿಂದ ಸಂಪಾದನೆಯ ಸಮಯ ಆರಂಭವಾಗುತ್ತದೆ.[೭] ಈ ಸಂಪ್ರದಾಯದ ಮಠಗಳು ಹಾಗಲವಾಡಿ, ಬೆಂಗಳೂರು, ಹುಕ್ಕೇರಿ, ಒಂಟಮೂರಿ, ನರೇಂದ್ರ, ಬಾಗೇವಾಡಿ ಮುಂತಾದ ಸ್ಥಳಗಳಲ್ಲಿ ನಿರ್ಮಾಣಗೊಂಡವು.

ಸಂಪಾದನಾ ಸಮಯ ವೀರಶೈವ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಗಮನಾರ್ಹವಾದುದು. ಇವರು ಶಿವಶರಣರ ವಚನಗಳಷ್ಟೇ ಅಲ್ಲದೆ ಶಿವಕವಿಗಳ ಪದ್ಯಕೃತಿಗಳನ್ನು ಸಂಗ್ರಹಿಸಿದ್ದಾರೆ. ಕೆಲವೊಮ್ಮೆ ಮೂಲಕೃತಿಗಳಿಗೆ ಟೀಕೆ-ವ್ಯಾಖ್ಯಾನ ಬರೆಯುವ ಕೆಲಸ ಮಾಡಿದ್ದಾರೆ. ಹೀಗಾಗಿ ನಶಿಸಿ ಹೋಗುತ್ತಿದ್ದ ವೀರಶೈವ ಸಾಹಿತ್ಯಕ್ಕೆ ಒಂದು ನೆಲೆ ದೊರಕಿದಂತಾಯಿತು. ಈ ಸಮಯದಲ್ಲಿ ಸಂಪಾದನೆಯ ಚೆನ್ನಂಜೆದೇವ, ವಿರಕ್ತ ತೋಂಟದಾರ್ಯ, ಎಳಮಲೆಯ ಗುರುಶಾಂತದೇವ, ಸಂಪಾದನೆಯ ಪರ್ವತೇಶ್ವರ, ಸಂಪಾದನೆಯ ವೀರಸಂಗಯ್ಯ, ಸಂಪಾದನೆಯ ವೀರೇಶಾಚಾರ್ಯ,

ಸಂಪಾದನೆಯ ಬೋಳಬಸವ, ಸಂಪಾದನೆಯ ಗುರುಲಿಂಗದೇವ, ಸಂಪಾದನೆಯ ಮರಿಸಂಗಯ್ಯ, ಸಂಪಾದನೆಯ ಸಣ್ಣ ಬರಹದ ಗುರುಬಸವರಾಜ ದೇವರು ಮೊದಲಾದವರು ಪ್ರಮುಖರೆನಿಸಿದ್ದಾರೆ.

ಸಂಪಾದನಾ ಸಮಯದ ಮಠಗಳು ಇಂದಿಗೂ ಅಲ್ಲಲ್ಲಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಪರಂಪರೆಯನ್ನು ಬೆಳೆಸಲು-ಉಳಿಸಲು ಮುಂದಾಗುತ್ತಿವೆ. ಈ ಸಮಯದ ಒಟ್ಟು ಮಠಗಳು ೩೬೦ ಎಂದು ಅಭಿಪ್ರಾಯಪಡಲಾಗಿದೆ. ಯೋಗ್ಯ ನಿರ್ದೇಶನವಿಲ್ಲದ ಕಾರಣ ಇವುಗಳಲ್ಲಿ ಹೆಚ್ಚಿನ ಮಠಗಳು ಹಾಳಾಗಿ ಹೋಗಿವೆ. "ಈಗ ತಿಳಿದು ಬರುವಂತೆ ಗೋಕಾಕ, ಬಡಕಲಾಟ, ಘೋಡಗೇರಿ, ಅಜರಾ, ಚಿಕ್ಕೋಡಿ, ಬೆಲ್ಲದ ಬಾಗೇವಾಡಿ, ಒಂಟಮುರಿ, ಕಬ್ಬೂರ ಪಕ್ತಾನಟ್ಟಿ, ಯಮಕನಮರಡಿ, ಮಮದಾಪುರ, ಗಡಹಿಂಗ್ಲಂಜ್, ತುಮಕೂರು, ಬೀರೂರು, ಹಾಗಲವಾಡಿ, ನರೇಂದ್ರಗಳಲ್ಲಿ ಈ ಸಂಪ್ರದಾಯದ ಮಠಗಳು ಕಂಡುಬರುತ್ತಿವೆ."[೮]

ಒಟ್ಟಿನಲ್ಲಿ ಸಂಪಾದನಾ ಕಾರ್ಯವನ್ನು ಮಾಡಿ, ಅಳಿದು ಹೋಗುತ್ತಿದ್ದ ವಚನ ಸಾಹಿತ್ಯದ ನಿಧಿಯನ್ನೇ ಉಳಿಸಿಕೊಟ್ಟು ಸಂಪಾದನಾ ಸಮಯದವರು ಕೃತಾರ್ಥರಾಗಿದ್ದಾರೆ. ಹೀಗಾಗಿ ಈ ಸಮಯದವರಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವಿಶೇಷವಾದ-ವಿಶಿಷ್ಟವಾದ ಸ್ಥಾನಮಾನಗಳು ಮೀಸಲಾಗಿವೆ.

ಮುರುಘಾ ಸಮಯ :

ವಿರಕ್ತ ಪರಂಪರೆಯಲ್ಲಿ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳ ನಂತರ ಬಂದ ಮುರುಘರಾಜೇಂದ್ರ ಸ್ವಾಮಿಗಳು (೧೬೫೬-೧೭೦೩) ಕಾಲಿಗೆ ಬಿದ್ದವರನ್ನು ಉದ್ಧರಿಸುತ್ತ, ಸಂಸಾರಿಗೆ ಸರಿಯಾಗಿ ಬಾಳೆಂದೂ, ಸನ್ಯಾಸಿಗೆ ಸರಿಮಿಗಿಲಾಗಿ ಬದುಕೆಂದೂ, ಬೋಧಿಸುತ್ತಾ ದೇಶ-ದೇಶವನ್ನು ಸಂಚರಿಸುತ್ತ ಕನ್ನಡ ದೇಶದಲ್ಲಿ ಅವರು ಶ್ರೀಪಾದವಿಟ್ಟರು.[೯] ಪೂಜ್ಯರು ಚಿನ್ಮೂಲಾದ್ರಿಯ ತಪ್ಪಲಿನ ವನಾರಣ್ಯ ಪ್ರದೇಶದಲ್ಲಿ ಏಕಾಂಗಿಯಾಗಿ ಸಂಚರಿಸುವಾಗ ಒಬ್ಬ ದನಗಾಹಿ ಹುಡುಗನಿಗೆ ಕಾರುಣ್ಯದಿಂದ ಕೃಪೆ ಮಾಡಿ ಆ ಬಾಲಕನಿಗೆ ಬಿಚ್ಚುಕತ್ತಿ ಭರಮನಾಯಕನೆಂದು ನಲ್ಮೆಯ ನಾಮಧಾರಣೆ ಮಾಡಿದರು. ಆ ಅನಾಥ ಬಾಲಕನನ್ನು ಸಾಕಿ-ಸಲುಹಿ ಮಮತೆಯಿಂದ ಬೆಳೆಸಿ, ಮಕ್ಕಳಿಲ್ಲದೆ ಮರುಗುತ್ತಿದ್ದ ದೊರೆ ಚಂದ್ರಮೌಳಿಗೆ ಆಶೀರ್ವದಿಸಿ "ಇನ್ನಿವನು ನಿನ್ನ ಪುತ್ರ, ಇವನಿಂದಲೇ ನಿನಗೆ ಉತ್ತರೋತ್ತರ ಅಭ್ಯುದಯ"[೧೦] ಎಂದು ಹರಿಸಿದರು. ಅವನೇ ಮುಂದೆ ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮನಾಯಕನಾದನು.

ಈ ಘಟನೆಯಾದ ಮೇಲೆ ಮುರುಘರಾಜೇಂದ್ರ ಸ್ವಾಮಿಗಳು ಎಂದಿನಂತೆ ಲೋಕಸಂಚಾರ ಹೊರಟು ಶಿವಭಕ್ತಿಯನ್ನು ಪ್ರಚಾರ ಮಾಡಿ ಹತ್ತಾರು ವರ್ಷಗಳಾದ ಮೇಲೆ ಮರಳಿ ಚಿತ್ರದುರ್ಗಕ್ಕೆ ಬಂದರು.[೧೧] ಆಗ ಅಲ್ಲಿ ಬಿಚ್ಚುಗತ್ತಿ ಭರಮನಾಯಕನು ರಾಜ್ಯಭಾರ ಮಾಡುತ್ತಿದ್ದನು. ಆ

ಮಹಾಚೇತನದ ಆಗಮನದ ವಾರ್ತೆಯನ್ನು ತಿಳಿದು ಆನಂದಗೊಂಡನು. ಅವರನ್ನು ಅರಮನೆಗೆ ಗೌರವದಿಂದ ಬರಮಾಡಿಕೊಂಡು ಪಾದಪೂಜೆ ಮಾಡಿ ಸ್ವಾಮಿಗಳನ್ನು ಇನ್ನು ಮೇಲೆ ಚಿತ್ರದುರ್ಗದಲ್ಲೇ ನೆಲೆಸಬೇಕು. ತನಗೆ ಅನುದಿನ ದರ್ಶನಾವಕಾಶವನ್ನು ಕೊಡಬೇಕು ಎಂದು ಬೇಡಿಕೊಂಡನು. "ಬೆಟ್ಟದ ತನ್ನ ಅರಮನೆಯ ಬದಿಗೆ ಇದ್ದ ಚಂಪಕಸಿದ್ಧೇಶನ ದೇವಾಲಯದ ಹತ್ತಿರವೇ ಕುಸುರಿಕಲೆಯ ಕಲ್ಲಿನ ಒಂದು ದೊಡ್ಡ ಮಠವನ್ನು ಕಟ್ಟಿಸಿಕೊಟ್ಟನು. ಅದರ ವಿಸ್ತಾರ ೩೬೦ ಅಂಕಣ. ಆದ್ದರಿಂದಲೇ ಅದು ಬೃಹನ್ಮಠ ಎಂದಾಯಿತು."[೧೨] ಇಲ್ಲಿಂದ ಮುಂದೆ ಮುರುಘಾ ಸಮಯ ಆರಂಭವಾಗಿರಬೇಕು.

ಚಿತ್ರದುರ್ಗದಲ್ಲಿ ಮುರುಘಾಮಠವು ಸ್ಥಾಪನೆಗೊಂಡು ೨-೩ ದಶಕಗಳಲ್ಲಿ ಮುರುಗಾ ಸಂಪ್ರದಾಯದ ಅನೇಕ ಶಾಖಾಮಠಗಳು ಚಿತ್ರದುರ್ಗ ಪ್ರಾಂತವಷ್ಟೇ ಅಲ್ಲ, ಅದರ ಸುತ್ತಲಿನ ಹಾಗೂ ದೂರದ ಪ್ರಾಂತಗಳಲ್ಲೂ ಮತ್ತು ಬೇರೆ ಬೇರೆ ಸಮಯದ ಮಠಗಳಿದ್ದ ಎಡೆಯಲ್ಲೂ ಸಹ ಬಹುಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದವು. ಇದಕ್ಕೆ ಕಾರಣ ಬೇರೆ ಬೇರೆ ಪ್ರಾಂತಗಳ ಅರಸರು, ಪ್ರಜೆಗಳು ಈ ಸಂಪ್ರದಾಯದ ಬಗ್ಗೆ ಭಕ್ತಿಯಿಂದ ನಡೆದುಕೊಂಡಿದ್ದು ಮತ್ತು ಅನೇಕ ದಾನದತ್ತಿ ಕಾಣಿಕೆಗಳನ್ನು ಅರ್ಪಿಸಿ ಪ್ರೋತ್ಸಾಹಿಸಿದ್ದು. ಶಾಖಾ ಮಠಗಳ ಸಂಖ್ಯೆ ಮತ್ತು ಅವು ಇರುವ ಸ್ಥಳಗಳ ಭೌಗೋಳಿಕ ವಿಸ್ತಾರ ಇವುಗಳಿಂದಾಗಿ ಚಿತ್ರದುರ್ಗದ ಪೀಠಾಧೀಶರು ಎಲ್ಲ ಶಾಖಾಮಠಗಳಿಗೂ ಭೇಟಿ ಕೊಡಲು ಸಾಧ್ಯವಿಲ್ಲವಾದುದರಿಂದ ಅವರ ಪರವಾಗಿ, ಅವರ ಒಪ್ಪಿಗೆಯಂತೆ ಅಲ್ಲಲ್ಲೆ ಮೊದಲಿಗೆ ಆಗಿದ್ದ ಮಠಗಳೇ ಆಯಾ ಭಾಗದ ಮುಖ್ಯ ಮಠಗಳೆನಿಸಿ ಅವುಗಳ ಹಿರಿಯ ಚರಮೂರ್ತಿಗಳೇ ತಮ್ಮ ಮಠಗಳ ನಿರ್ವಹಣೆಯ ಜೊತೆಗೆ ಹೊಸದಾಗಿ ಆಗುತ್ತಿದ್ದ ಮಠಗಳ ಉಸ್ತುವಾರಿ, ಅವುಗಳಿಗೆ ಚರಮೂರ್ತಿಗಳ ನೇಮಕ ಮುಂತಾದ ಕಾರ್ಯಗಳನ್ನು ನಡೆಸುತ್ತಿದ್ದಂತೆ ತಿಳಿಯುತ್ತದೆ. ಹಾಗೆಯೇ ಆಯಾಭಾಗದ ಜನಗಳು ಸಹ ಈ ಶಾಖಾಮಠಗಳನ್ನು ಮುರುಗಾಮಠಗಳೆಂದೂ ಅವುಗಳ ಚರಮೂರ್ತಿಗಳನ್ನು ಮುರುಗಾಸ್ವಾಮಿಗಳೆಂದೂ, ಅವರು ಅತ್ಯಂತ ಮಹಿಮಾನ್ವಿತರೆಂದು ಭಾವಿಸಿ ಭಕ್ತಿ, ಗೌರವ, ಶ್ರದ್ಧೆಗಳಿಂದ ನಡೆದುಕೊಂಡಂತೆ ಕಂಡುಬರುತ್ತದೆ. ಒಟ್ಟಿನಲ್ಲಿ ಆ ಕಾಲದಲ್ಲಿ ಈ ಸಮಯದ ಶಾಖಾಮಠಗಳು ಬಹು ಸಂಖ್ಯೆಯಲ್ಲಿ ದೇಶದ ಉದ್ದಗಲಕ್ಕೂ ಹರಡಿದವು.[೧೩] ಒಟ್ಟಿನಲ್ಲಿ ಮುರುಘಾ ಸಮಯವು ವಿರಕ್ತ ಪರಂಪರೆಯಲ್ಲಿ ಒಂದು ಮಹತ್ವದ ಸಮಯವಾಗಿ ಬೆಳೆದು ಬಂದಿದೆ.

ಕುಮಾರ ಸಮಯ :

ಸ್ವಾದಿಯಲ್ಲಿದ್ದ ಮುರುಗೇಂದ್ರರ ಇನ್ನೊಬ್ಬ ಶಿಷ್ಯ ಕುಮಾರಸ್ವಾಮಿ. ಇಮ್ಮಡಿ ಗುರುಸಿದ್ಧ ಜಗದ್ಗುರುಗಳಿಗೆ ವಿರುದ್ಧವಾಗಿ ಸ್ವಾದಿಯ ರಾಜನಾದ ಸದಾಶಿವರಾಯನಿಗೆ ದುರ್ಬೋಧೆ ಮಾಡಿ ಚಿತ್ರದುರ್ಗದ ಶೂನ್ಯ ಸಿಂಹಾಸನದ ಸಂಬಂಧವಾಗಿ ಉದಾಸೀನ ಹುಟ್ಟುವಂತೆ ಮಾಡಿದನು. ಈ

ಅಹಿತಕರ ಸಂಬಂಧವನ್ನು ತಿದ್ದಲೆಂದು ಇಮ್ಮಡಿ ಗುರುಸಿದ್ಧ ಜಗದ್ಗುರುಗಳು ದೇಶದುದ್ದಕ್ಕು ಸಂಚರಿಸುತ್ತ ಸ್ವಾದಿ ಸೀಮೆಗೆ ಬಂದರು. ಆದರೆ ಅಲ್ಲಿಯ ರಾಜನು ಕುಮಾರಸ್ವಾಮಿಯ ಚಾಡಿ ಮಾತುಗಳಿಗೆ ಜೋತುಬಿದ್ದು, ಜಗದ್ಗುರುಗಳನ್ನು ಕಂಡೂ ಕಾಣದಂತೆ ವರ್ತಿಸಿದನು. ಗುರುಸಿದ್ಧ ಸ್ವಾಮಿಗಳು ತಮ್ಮ ದಿವ್ಯದೃಷ್ಟಿಯನ್ನು ಆತನ ಮೇಲೆ ಹರಿಸಿ, ಆತನ ಅಂತರಂಗದಲ್ಲಿ ಮನೆ ಮಾಡಿಕೊಂಡಿದ್ದ ಕತ್ತಲೆಯನ್ನು ಹೊಡೆದೋಡಿಸಿದರು. ಅರಿವಿನ ಕಣ್ಣನ್ನು ತೆರೆದ ರಾಜನು ಗುರುಸಿದ್ಧ ಸ್ವಾಮಿಗಳ ಪೂಜ್ಯಪಾದದಲ್ಲಿ ಸರ್ವಾಂಗವನ್ನು ಚೆಲ್ಲಿ ಕ್ಷಮೆ ಕೇಳಿದನು. ಒಡನೆಯೇ ಗುರುದ್ರೋಹಿಯಾದ ಕುಮಾರಸ್ವಾಮಿಯನ್ನು ತನ್ನ ಗಡಿಗಳಿಂದಾಚೆಗೆ ತಳ್ಳಿಸಿದನು.

ಹೀಗೆ ರಾಜನಿಂದಲೂ, ಗುರುರಾಜನಿಂದಲೂ ದೂರೀಕೃತನಾದ ಕುಮಾರಸ್ವಾಮಿಯು ಹುಬ್ಬಳ್ಳಿಯನ್ನು ಸೇರಿ ಅಲ್ಲಿಯ ಪಟ್ಟಣಶೆಟ್ಟಿಗೆ ಗುರುವಾದನು. ಸಮಯ ಕಾದು ಗುರುಸಿದ್ಧ ಜಗದ್ಗುರುಗಳನ್ನು ಕೊಲೆ ಮಾಡುವ ಸಂಚಿನಲ್ಲಿ ಮಾನಹೀನನಾದನು. ಅವಮಾನವನ್ನು ಸಹಿಸಲಾರದೆ ಎಸಳೂರಿಗೆ ಬಂದು ತನ್ನನ್ನು ತಾನೇ ಇರಿದುಕೊಂಡು ಸತ್ತುಹೋದನು.

"ಕುಮಾರಸ್ವಾಮಿಯನ್ನು ತನ್ನ ಗುರುವೆಂದೋ, ಜಗದ್ಗುರುವೆಂದೋ ಭ್ರಮಿಸಿದ್ದ, ಸೆಟ್ಟರ ನೇತೃತ್ವದ ಒಂದು ಗುಂಪು ಕುಮಾರಸ್ವಾಮಿಯ ಸಮಯದವರೆಂದು - ಚಿನ್ಮೂಲಾದ್ರಿಯ ಶೂನ್ಯಸಿಂಹಾಸನದ ಮೂಲ ಗುರುಪೀಠದಿಂದ ಬೇರೆಯಾಗಿಯೇ ಉಳಿದರು."[೧೪] ಅಂದು ಕುಮಾರಸ್ವಾಮಿಗಳು ಸ್ಥಾಪಿಸಿದ ಮಠ ಮೂರುಸಾವಿರ ಮಠವೆಂದು ಪ್ರಸಿದ್ಧಿ ಪಡೆದು ಕುಮಾರ ಸಮಯದ ಕೇಂದ್ರ ಪೀಠವೆನಿಸಿದೆ.

ಮುರುಘಾ ಹಾಗೂ ಕುಮಾರ ಸಮಯ :

ಈ ಎರಡೂ ಸಮಯಭೇದಗಳನ್ನು ಕುರಿತು ನಿರಂಜನ ವಂಶ ರತ್ನಾಕರ ಭಾಗ-೧ ರಲ್ಲಿ ಹೀಗೆ ಹೇಳಿದೆ. ೨೩ನೆಯ ಪಟ್ಟದ ಅಧಿಪತಿಗಳಾದ ಕಟ್ಟಿಗೆಹಳ್ಳಿ ಸ್ವಾಮಿಗಳು ತಾವು ಸಲುಹಿದ ಇಬ್ಬರು ಮರಿಗಳನ್ನು ಕರೆದು, ಅವರಲ್ಲಿ ಒಬ್ಬರಿಗೆ ತಮ್ಮ ಗುರುಗಳಾದ ತೋಂಟದ ಸಿದ್ಧಲಿಂಗಯತಿಗಳ ಹೆಸರನ್ನು ಇಟ್ಟರು. ಶಾಸ್ತ್ರ ಸಂಪಾದಿಸಿದ ಕಾರಣ ಆತನಿಗೆ ಶಿವಾನುಭವ ಚರಂತಿಗೆ ಪಟ್ಟವನ್ನು ಕೊಟ್ಟು, ತಮ್ಮ ಈರ್ವರೂ ಶಿಷ್ಯರನ್ನು ಉದ್ದೇಶಿಸಿ ಈ ರೀತಿ ಆದೇಶಿಸುತ್ತಾರೆ.

ಪೂರ್ವಜರಾದ ಪ್ರಭುಸ್ವಾಮಿಗಳ ಸುವರ್ಣದ ಶೂನ್ಯಪೀಠ ಶಿಖಾಶೀಲ ಇವುಗಳನ್ನು ಚೆನ್ನಬಸವೇಶ್ವರರು ದಿಲ್ಲಿ ಅರಸನಾದ ಮಲ್ಲೂಖಾನ ಎಂಬುವನಿಗೆ ಕೊಟ್ಟಿರುತ್ತಾರೆ. ನೀವು ಅಲ್ಲಿಗೆ ಹೋಗಿ ಸತ್ತ ಆನೆಯನ್ನು ಜೀವಂತಗೊಳಿಸಿ ಪವಾಡ ಮೆರೆದು ತಂದು ಮುರುಘರಾಜೇಂದ್ರರಿಗೆ ಶಿಖಾಪಟ್ಟ ಮಾಡಿರಿ ಎಂದರು. ಆ ಪ್ರಕಾರ ಹೋಗಿ ದಿಲ್ಲಿಯಿಂದ ಅರಸನಾದ ಮಲ್ಲೂಖಾನನ

ವಂಶೀಯರಿಂದ ಶಿಖಾ-ಶೈಲಗಳನ್ನು ಪಡೆದು ತಿರುಗಿ ಬರುವಾಗ ನೋಡ ಸಿದ್ಧಲಿಂಗರು ಸೋದೆಸೀಮೆಯಲ್ಲಿ ತಮ್ಮ ಅಂತ್ಯವನ್ನು ತಿಳಿದು, ತಮ್ಮ ಜೊತೆಯಲ್ಲಿದ್ದ ಮುರುಘರಾಜೇಂದ್ರರನ್ನು ಉದ್ದೇಶಿಸಿ ಪ್ರಭುದೇವರ ಪೀಠಕ್ಕೆ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳ ತರುವಾಯ ನಾವು ಅಧಿಪತಿಗಳಾಗಿದ್ದೆವು. ಈ ಮೊದಲು ನಮ್ಮಲ್ಲಿ ಶಿಖಾಪಟ್ಟ, ಶಿವಾನುಭವ ಚರಂತಿಗೆ ಪಟ್ಟ ಎಂದು ಭೇದಗಳಿದ್ದರೂ ನಾವು ಇರದ ಹಾಗೆ ಇದ್ದೆವು. ಈ ಭಾರ ಇನ್ನು ನಿಮ್ಮ ಮೇಲಿದೆ ಎಂದು ಹೇಳಿ ಕೈಲಾಸವಾಸಿಗಳಾಗುತ್ತೇವೆಂದರು. ನೆರೆದ ಸೋದೆಸೀಮೆಯ ಜನ "ನಿಮ್ಮ ಶಿವಾನುಭವ ಚರಂತಿಗೆ ಪಟ್ಟವನ್ನು ಯಾರಿಗಾದರೂ ಮಾಡಿರಿ" ಎಂದಾಗ ನೋಡಸಿದ್ಧಲಿಂಗರು ಅದನ್ನು ವಾಚ್ಯದ ಕುಮಾರ ದೇಶಿಕೇಂದ್ರ ಎಂಬುವರಿಗೆ ಮಾಡಿದರು. ಸ್ವಾದಿಯ ಜನ ಮುರುಘರಾಜೇಂದ್ರರು ಕಾರಣತ್ವಕ್ಕೆ ಗುರುಗಳು, ಕಾರ್ಯಕರ್ತಕ್ಕೆ ಕುಮಾರ ದೇಶೀಕೇಂದ್ರರೆಂದು ತಿಳಿದುಕೊಂಡರು.

ಮೇಲಿನ ಉಲ್ಲೇಖದಿಂದ ಕಟ್ಟಿಗೆಹಳ್ಳಿ ಸಿದ್ಧಲಿಂಗರಿಗೆ ನೋಡಸಿದ್ಧಲಿಂಗ, ಮುರುಘರಾಜೇಂದ್ರ ಎಂಬ ಇಬ್ಬರು ಶಿಷ್ಯರು ಇದ್ದರೆಂದೂ ಇವರಲ್ಲಿ ಶಿಖಾಪಟ್ಟ, ಶಿವಾನುಭವ ಚರಂತಿಗೆ ಎಂಬ ಎರಡು ಪಟ್ಟಗಳಿದ್ದವೆಂದೂ ಇವುಗಳಲ್ಲಿ ಭೇದ ಇರಲಿಲ್ಲವೆಂದೂ ತಿಳಿದುಬರುತ್ತದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗರ ಈ ಶಿಷ್ಯರು ಮಲ್ಲೂಖಾನನ ವಂಶೀಯರಿಂದ ಶೂನ್ಯ ಸಿಂಹಾಸನದ "ಶಿಖಾ-ಶೈಲ-ಸಿಂಹಾಸನಗಳನ್ನು ತಿರುಗಿ ತಂದರೆಂಬ ವಿಷಯ ಸ್ಪಷ್ಟವಾಗುತ್ತದೆ. ಈ ಕಥೆಯನ್ನು ನಂಬುವುದಾದರೆ ಚೆನ್ನಬಸವಣ್ಣನವರ ತರುವಾಯ ಶಿಖಾಪಟ್ಟವಿಲ್ಲದೆ ಷಟ್‌ಸ್ಥಲಪಟ್ಟವು ಮುಂದುವರೆಯಿತು ಎನಿಸುತ್ತದೆ.

ಮುರಿಗಾ ಹಾಗೂ ಕುಮಾರ ಸಮಯ ಕುರಿತ ವಿವರಣೆಯು ನಿರಂಜನ ವಂಶರತ್ನಾಕರ ಭಾಗ-೨ರಲ್ಲಿ ಮುಂದುವರೆದಿದೆ. ಈ ಇಬ್ಬರೂ ಸ್ವಾಮಿಗಳು ಚಿತ್ರದುರ್ಗದ ಭರಮನಾಯಕನಿಂದ ಮಠಗಳನ್ನು ಕಟ್ಟಿಸಿಕೊಂಡು ಸಖ್ಯದಿಂದ ಇದ್ದರು ಒಮ್ಮೆ ಕಲ್ಲುಮಠದ ಬಸವದೇವರ ಮಗ ಕಲ್ಯಾಣಿ ಎನ್ನುವವನು ಮಾದರ ತಿಮ್ಮಿಯ ಸಂಗವ ಮಾಡಿದ ಕಾರಣ ಅವನೊಂದಿಗೆ ಬಳಕೆ ಮಾಡಬಾರದೆಂದು ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳು ಹೊರಹಾಕಿದರು. ದಾಸೋಹದ ದೆಸೆಯಿಂದ ಹಳೇಬೀಡಿಗೆ ಬಂದ ಮುರುಘ ರಾಜೇಂದ್ರರು ತಮ್ಮಂತ್ಯಕಾಲ ತಿಳಿದು ಭರಮನಾಯಕನನ್ನು ಕರೆಸಿ, ಆತನ ಸಮಕ್ಷಮ ಹಳೆಬೀಡು ಕಲ್ಲುಮಠದ ಸಂಬಂಧವುಳ್ಳ ರುದ್ರಪ್ಪ ಎಂಬುವನಿಗೆ ಇಮ್ಮಡಿ ಗುರುಸಿದ್ಧನೆಂಬ ನಾಮಕರಣವನ್ನು ಮಾಡಿ ಪಟ್ಟವನ್ನು ಕಟ್ಟಿದರು. ಮತ್ತು ಕುಮಾರಸ್ವಾಮಿಗಳ ಕೂಡ ಭೇದ ಇರದಂತೆ ವರ್ತಿಸಿರೆಂದು ಉಪದೇಶಿಸಿದರು. ಆದರೆ ಕುಮಾರಸ್ವಾಮಿಗಳು ತಮ್ಮನ್ನು ಕೇಳದೆ ಮುರಿಗಾ ಸ್ವಾಮಿಗಳು ಕಲ್ಲುಮಠದ ಸಂಬಂಧವುಳ್ಳವರಿಗೆ ಪಟ್ಟ ಮಾಡಿದರೆಂದು, ಇನ್ನು ಮುಂದೆ ಕಲ್ಯಾಣಿ ವಂಶದವರ ಬಳಕೆ ಮಾಡಿದರೆ ಅಪರಾಧ ಎಂದು ಭಾವಿಸಿ, ಸೋದೆಯ ಸದಾಶಿವನಾಯಕನನ್ನು ಕರೆದು, ಇನ್ನು ಈ ಲೋಕದಲ್ಲಿ ಇರಬಾರದೆಂದು ಆತನ ಸಮಕ್ಷಮ

ಸಿದ್ಧರಾಮಪ್ಪನೆಂಬ ಶಿಷ್ಯನಿಗೆ ಕೆಂಪಿನ ಸಿದ್ಧಬಸವಪ್ಪ ಎಂದು ಹೆಸರಿಟ್ಟು ಶಿವಾನುಭವ ಚರಂತಿಗೆಯನ್ನು ಮಾಡಿದರು. ಮತ್ತು ದುರ್ಗದ ಬಳಕೆ ಮಾಡಬಾರದೆಂದು ಉಪದೇಶಿಸಿದರು. ಒಟ್ಟಿನಲ್ಲಿ ಎರಡೂ ಪೀಠದವರಲ್ಲಿ ವೈಮನಸ್ಸು ಉಲ್ಬಣಕ್ಕೆ ಮುಟ್ಟಿತೆಂದೂ, ಸೋದೆ ಹಾಗೂ ಚಿತ್ರದುರ್ಗದ ಅರಸರು ಈರ್ವರಲ್ಲಿಯ ವೈಮನಸ್ಸನ್ನು ತೊಲಗಿಸುವ ಕಾರ್ಯಕ್ಕೆ ಮುಂದಾದರು. ಕೆಂಪಿನ ಸಿದ್ಧಬಸವಪ್ಪನವರು ತಮ್ಮ ಗುರುಗಳ ವಚನಕ್ಕೆ ಬದ್ಧರಾದ ಕಾರಣ ಸಂಧಾನ ವಿಫಲಗೊಂಡವೆಂದೂ ಈ ಕಾರಣದಿಂದ ಮುರಿಗಾ ಹಾಗೂ ಕುಮಾರ ಸಮಯಗಳು ಬೇರ್ಪಟ್ಟವೆಂದು ಸ್ಪಷ್ಟವಾಗುತ್ತದೆ.[೧೫]

'ಮಹಾಲಿಂಗೇಂದ್ರ ವಿಜಯ'ದಲ್ಲಿ ಇದಕ್ಕಿಂತ ಭಿನ್ನವಾದ ನಿರೂಪಣೆಯಿದೆ. ಮುರುಗಾ ಶಾಂತವೀರರ ಶಿಷ್ಯನಾದ ಕುಮಾರಸ್ವಾಮಿಯು ಶೂನ್ಯಪೀಠ ಪರಂಪರೆಗೆ ಇಮ್ಮಡಿ ಗುರುಸಿದ್ಧರನ್ನು ನೇಮಿಸಿದಾಗ ಕೋಪಗೊಂಡು ಸ್ವಾದಿಯ ಅರಸ ಸದಾಶಿವನಲ್ಲಿ ಬಂದು ಆಶ್ರಯ ಪಡೆಯುತ್ತಾನೆ. ಅಲ್ಲದೆ ಚಿತ್ರದುರ್ಗದ ಮಠದ ಮೇಲೆ ಇಲ್ಲಸಲ್ಲದ ಚಾಡಿ ಮಾತುಗಳನ್ನು ಹೇಳಿ ರಾಜನ ಮನಸ್ಸನ್ನು ಕೆಡಿಸುತ್ತಾನೆ. ಇಮ್ಮಡಿ ಗುರುಸಿದ್ಧರು ಅವನ ಆಸ್ಥಾನಕ್ಕೆ ಹೋದಾಗ ಸ್ವಾಗತಿಸುವುದಿರಲಿ, ಕಂಡೂ ಕಾಣದಂತೆ ಮರ್ಯಾದೆ ಕೊಡದೆ ಸುಮ್ಮನೆ ಕುಳಿತಿರುತ್ತಾನೆ. ಆದರೆ ಗುರುಸಿದ್ಧರು ಕೋಪಗೊಳ್ಳದೆ ನಡೆದ ವಿಷಯವನ್ನೆಲ್ಲ ರಾಜನ ಮುಂದೆ ಹೇಳಿದಾಗ, ಮನಸ್ಸಿನಲ್ಲಿ ಉಂಟಾಗಿದ್ದ ತಪ್ಪು ಕಲ್ಪನೆಗಳನ್ನು ತೊಡೆದು ಹಾಕುತ್ತಾನೆ. ಆಗ ಕುಮಾರಸ್ವಾಮಿಯು ಎಸಳೂರಿನಲ್ಲಿ ತಂಗಿದ್ದ ಗುರುಸಿದ್ಧರನ್ನು ಕೊಲೆ ಮಾಡಿಸಲು ಸ್ವಾದಿಯ ಕೆಲವು ಮಂಡ ಜನರನ್ನು ಆಯುಧ ಸಮೇತವಾಗಿ ಮಠಕ್ಕೆ ಕಳುಹಿಸುತ್ತಾನೆ. ಆ ಜನರು ಮಠದಲ್ಲಿಯ ಗರ್ಭಿಣಿಯನ್ನು ಮತ್ತು ಚರಮೂರ್ತಿಯನ್ನು ಇರಿದು ಕೊಲ್ಲುತ್ತಾರೆ. ಇದನ್ನು ತಿಳಿದ ಗುರುಸಿದ್ಧರು ಸ್ವಾಧಿಯ ಅರಸರಲ್ಲಿಗೆ ಹೋಗಿ ಸ್ತ್ರೀಹತ್ಯೆ, ಭ್ರೂಣಹತ್ಯೆ ಮತ್ತು ಜಂಗಮಹತ್ಯೆಗೆ ಕಾರಣನಾದ ಕುಮಾರಸ್ವಾಮಿಗೆ ಬಹಿಷ್ಕಾರ ಹಾಕಿ ಗಡಿಪಾರು ಮಾಡುತ್ತಾನೆ. ಆಗ ಕುಮಾರಸ್ವಾಮಿ ಸೋದೆಯಿಂದ ಹುಬ್ಬಳ್ಳಿ ಪಟ್ಟಣಕ್ಕೆ ಹೋಗಿ ನೆಲಸಿ ಅಲ್ಲಿಯ ಪಟ್ಟಣಶೆಟ್ಟಿಯ ಸಹಾಯದಿಂದ ಮಠವನ್ನು ಕಟ್ಟಿಸಿಕೊಳ್ಳುತ್ತಾನೆ. ಅಂದು ಕುಮಾರಸ್ವಾಮಿಗಳು ಸ್ಥಾಪಿಸಿದ ಮಠವೇ ಇಂದಿನ ಮೂರುಸಾವಿರ ಮಠವಾಗಿದ್ದು, ಕುಮಾರಸಮಯದ ಕೇಂದ್ರ ಪೀಠವೆನಿಸಿದೆ.

ಈ ಮೇಲಿನ ವಿಷಯಕ್ಕೆ ಪೂರಕವೆನ್ನುವಂತೆ "ಶ್ರೀಮದನಾದಿ ಅಲ್ಲಮಪ್ರಭು" ಗ್ರಂಥದ ಒಂದು ಕಥೆಯಲ್ಲಿ ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳಿಗೆ ನೋಡಸಿದ್ಧಲಿಂಗ, ಮುರುಘರಾಜೇಂದ್ರ ಎಂಬ ಇಬ್ಬರು ಶಿಷ್ಯರಿದ್ದರು. ಅವರು ದೆಹಲಿಗೆ ಹೋಗಿ ಶಿಖಾಪಟ್ಟ ತಂದು ಕೆಲಕಾಲ ಸಖ್ಯದಿಂದ ಇದ್ದರು. ತರುವಾಯ ಮುರುಘರಾಜೇಂದ್ರನ ಮನೆತನದವನೊಬ್ಬ ಭವಿ ಜನರ ಸಂಗಡ ಬಳಕೆ ಮಾಡಿದವರನ್ನು ಕಂಡು ಮುರುಘರಾಜೇಂದ್ರರು ಅವನನ್ನು ಶುದ್ಧಿ ಮಾಡಿದರು. ಆದ್ದರಿಂದ ನೋಡಸಿದ್ಧಲಿಂಗರು ಖಿನ್ನಗೊಂಡರು. ಇದೇ ಮುಂದುವರೆದು ಮುರುಘರಾಜೇಂದ್ರರು ಇಮ್ಮಡಿ

ಗುರುಸಿದ್ಧರನ್ನು, ನೋಡಸಿದ್ಧಲಿಂಗರು ಕುಮಾರಸ್ವಾಮಿಗಳನ್ನು ಉತ್ತರಾಧಿಕಾರಿಯಾಗಿ ಮಾಡಿಕೊಂಡರು. ಈ ಉತ್ತರಾಧಿಕಾರಿಗಳಲ್ಲಿ ವೈಮನಸ್ಸು ಬೆಳೆಯಿತು. ಒಮ್ಮೆ ಇಮ್ಮಡಿ ಗುರುಸಿದ್ಧರು ಕುಮಾರಸ್ವಾಮಿಗಳ ಶಿಷ್ಯನೊಬ್ಬನಿಗೆ ಪ್ರಸಾದ ನೀಡಲು ಮುಂದಾದಾಗ ಆ ಶಿಷ್ಯನು ಅದನ್ನು ತಿರಸ್ಕರಿಸಿದನು. ಇಮ್ಮಡಿ ಗುರುಸಿದ್ಧರು ಆತನಿಗೆ "ನಿನ್ನ ಮನೆ ಹೊಲಗೇರಿಯಾಗಲಿ" ಎಂದು ಶಾಪಕೊಟ್ಟರು. ಹುಬ್ಬಳ್ಳಿಯ ಈ ಬಸಪ್ಪಶೆಟ್ಟಿಯು ತನ್ನ ಮನೆಯನ್ನು ಹೊಲಗೇರಿಯಾಗಿಸಿ ಹೊಸ ಹುಬ್ಬಳ್ಳಿಯೆಂಬ ಗ್ರಾಮವನ್ನು ಕಟ್ಟಿಸಿದನು. ಅಲ್ಲದೆ ಕುಮಾರಸ್ವಾಮಿಗಳಿಗೆ ಮೂರು ಭವ್ಯವಾದ ಮಠಗಳನ್ನು ಕಟ್ಟಿಸಿಕೊಟ್ಟನು. ಕುಮಾರಸ್ವಾಮಿಗಳು ತಮ್ಮ ಉತ್ತರಾಧಿಕಾರವನ್ನು ಬಸಪ್ಪಶೆಟ್ಟಿಯ ಮಗನಿಗೆ ಇತ್ತರೆಂದು ಆತನು ಹುಟ್ಟು ಗುರುಸಿದ್ಧನೆಂದು ಪ್ರಸಿದ್ಧಿ ಪಡೆದನೆಂದು ಈ ಕಥೆ ತಿಳಿಸುತ್ತದೆ.

ಒಟ್ಟಾರೆ ನಿರಂಜನ ವಂಶ ರತ್ನಾಕರದ ಪ್ರಕಾರ ಮುರುಘರಾಜೇಂದ್ರರ ಶಿಷ್ಯರು ಕಲ್ಯಾಣಿ ವಂಶದವರ ಶುದ್ಧಿ ಮಾಡಿದುದನ್ನು ಸಹಿಸದೆ ಕುಮಾರಸಮಯ ಭಿನ್ನಗೊಂಡಿತೆಂದೂ, ಮಹಾಲಿಂಗೇಂದ್ರ ವಿಜಯದ ಪ್ರಕಾರ ಸ್ತ್ರೀಹತ್ಯೆ ಭ್ರೂಣಹತ್ಯೆ ಮತ್ತು ಜಂಗಮಹತ್ಯೆ ಮಾಡಿದ ಕಾರಣಕ್ಕಾಗಿ ಸ್ವಾದಿಯಿಂದ ಹುಬ್ಬಳ್ಳಿಗೆ ಬಂದ ಕುಮಾರಸ್ವಾಮಿಯಿಂದ ಕುಮಾರಸಮಯವಾಯಿತೆಂದೂ, ಶ್ರೀಮದನಾದಿ ಅಲ್ಲಮಪ್ರಭು ಗ್ರಂಥದ ಪ್ರಕಾರ ಮುರುಘರಾಜೇಂದ್ರರು ತಮ್ಮ ಮನೆತನದ ಒಬ್ಬ ಭವಿಯನ್ನು ಶುದ್ಧಗೊಳಿಸಿದ ಕಾರಣ ನೋಡ ಸಿದ್ಧಲಿಂಗರು ಭಿನ್ನಗೊಂಡರೆಂದು ತಿಳಿದುಬರುತ್ತದೆ. ಈ ಮೇಲಿನ ವಿಷಯಗಳಿಂದ ಮುರುಘಾ ಹಾಗೂ ಕುಮಾರ ಸಮಯದವರು ಕೆಲಕಾಲ ಸಖ್ಯದಿಂದ ಇದ್ದು ತರುವಾಯದ ದಿನಗಳಲ್ಲಿ ಬೇರ್ಪಟ್ಟರೆಂದು ಹೇಳಬಹುದು.

ಚೀಲಾಳ ಸಮಯ :

ಮುರುಘರಾಜೇಂದ್ರ ಮಹಾಸ್ವಾಮಿಗಳು ಗುರುಸಿದ್ಧ, ಕುಮಾರಸ್ವಾಮಿ, ಚೀಲಾಳರೆಂಬ ತಮ್ಮ ಮೂವರು ಶಿಷ್ಯರಲ್ಲಿ ಗುರುಸಿದ್ಧರನ್ನೇ ತಮ್ಮ ಉತ್ತರಾಧಿಕಾರಿಯೆಂದು ನಿರ್ಣಯಿಸಿ, ಅವರಿಗೆ ಪಟ್ಟಗಟ್ಟಿ ಸಮಾಧಿಸ್ಥರಾದರು. ಶೂನ್ಯ ಸಿಂಹಾಸನದ ಪಟ್ಟ ತಮಗಾಗಬೇಕಿತ್ತೆಂದು ಚೀಲಾಳಪ್ಪ ಇಮ್ಮಡಿ ಗುರುಸಿದ್ಧ ಜಗದ್ಗುರುಗಳನ್ನು ಪ್ರತಿಭಟಿಸಿದರು. ಅನಿವಾರ್ಯವಾಗಿ ಇಮ್ಮಡಿ ಗುರುಸಿದ್ಧ ಜಗದ್ಗುರುಗಳು ಚೀಲಾಳಪ್ಪನವರನ್ನು ಮಠದಿಂದ ಹೊರದೂಡಿದರು.

"ಹರಪನಹಳ್ಳಿಗೆ ಮರಳಿದ ಚೀಲಾಳಪ್ಪನಿಗೆ ಅಲ್ಲಿಯ ಅರಸನು ಭೇದ ಮೂಲವಾದ ರಾಜನೀತಿಗಾಗಿಯೋ, ಅರಿಯದೆ ಅನಾಥ ಮೂಲವಾದ ಶರಣಾಗತ ರಕ್ಷಣೆಗಾಗಿಯೋ, ಚಿತ್ರದುರ್ಗದ ಬ್ರಹನ್ಮಠದ ಮೇಲಣ ಪೈಪೋಟಿಗಾಗಿಯೋ, ಅತಿಶಯವಾಗಿ ದಾನದತ್ತಿ ಬಿಟ್ಟು ಮಠವೊಂದನ್ನು ಕಟ್ಟಿಸಿಕೊಟ್ಟನು. ಅಂದಿನಿಂದ ವೀರಶೈವ ಸಮಾಜ ಒಡೆದು ಅದರ ಒಂದು

ಹೋಳು 'ಚೀಲಾಳ ಸಮಯ'[೧೬] ಎಂದು ಬೇರಾಯಿತು. ಇದು ಮಹಾಲಿಂಗೇಂದ್ರ ವಿಜಯದಲ್ಲಿ ದೊರೆಯುವ ವಿವರಣೆ.

"ಷಟ್‌ಸ್ಥಲ ಶಿವಾಯಣ" ಎಂಬ ಕೃತಿಯು ಚೀಲಾಳ ಸಮಯವನ್ನು ಕುರಿತು ಮೇಲಿನ ವಿವರಣೆಗೆ ವಿರುದ್ಧವಾದ ಅಭಿಪ್ರಾಯಗಳನ್ನು ಒದಗಿಸುತ್ತದೆ. ಚೀಲಾಳ ಸಮಯದ ಆದ್ಯಪ್ರವರ್ತಕ ಬಸವಪ್ರಭು ಚೀಲಾಳಸ್ವಾಮಿ. ಇಂದಿನ ತುಮಕೂರು ಜಿಲ್ಲೆಯ ಗುಬ್ಬಿ ಸುಪ್ರಸಿದ್ಧ ವೀರಶೈವ ಕೇಂದ್ರವಾಗಿತ್ತು. ಈ ಗ್ರಾಮಕ್ಕೆ ಅಮರಗುಂಡ ಎಂಬ ಹೆಸರೂ ಇದೆ. ಈ ಗ್ರಾಮದ ಮಲ್ಲಿಕಾರ್ಜುನಸ್ವಾಮಿ-ಮಹದೇವಮ್ಮ ದಂಪತಿಗಳಿಗೆ ಚೀಲಾಳಸ್ವಾಮಿ ಜನಿಸಿದ. ಈತನ ಜನನ ಕ್ರಿ.ಶ. ೧೬೧೫ ರಲ್ಲಿ ಆಗಿರಬಹುದೆಂದು ಡಾ॥ ಎಂ.ಎಂ. ಕಲಬುರ್ಗಿಯವರ ಅಭಿಪ್ರಾಯ. ಏಳನೆಯ ವರ್ಷಕ್ಕೆ ಚೀಲಾಸ್ವಾಮಿಗೆ ಊರ್ಧ್ವಗಿರಿ ಸಿಂಹಾಸನದ ಗುರು ಗದ್ದುಗೆಯ ಪಟ್ಟಾಭಿಷೇಕ ಜರುಗಿತು.

ಕೆಲವು ಕಾಲದ ಬಳಿಕ ಕೂಡಲಸಂಗಮಕ್ಕೆ ಬಂದು ಅತ್ತಿಕಟ್ಟೆಗೆ ಹೊರಟ ಚೀಲಾಳಸ್ವಾಮಿಗೆ ಸಂಗಮೇಶ್ವರನು ಪ್ರತ್ಯಕ್ಷನಾಗಿ ಹರಮುರದಲ್ಲಿ ಷಟ್ಸ್ಥಲ ಪಟ್ಟಾಧಿಕಾರಿಯಾಗುವಂತೆ ಸೂಚಿಸುತ್ತಾನೆ. ಮತ್ತು ಇವನನ್ನು ಕರೆತಂದು ಪಟ್ಟಕಟ್ಟಲು ಹರಪನಹಳ್ಳಿಯ ಶಮಿತಮುರಾಧೀಶನಿಗೆ ಓಲೆಯ ಮೂಲಕ ತಿಳಿಸುತ್ತಾನೆ. ಅದೇ ವೇಳೆಗೆ ಗಗನದಿಂದ ಇಳಿದ ಬೇರೊಂದು ಓಲೆಯೂ ಶಮಿತಮುರಾಧೀಶನ ಕೈ ಸೇರುತ್ತದೆ. ಅದರಲ್ಲಿ ಪ್ರಥಮಪಟ್ಟದ ನಿರಂಜನಪ್ರಭು, ದ್ವಿತೀಯ ಪಟ್ಟದ ಅಲ್ಲಮಪ್ರಭು, ತೃತೀಯ ಪಟ್ಟದ ತೋಂಟದ ಸಿದ್ಧಲಿಂಗ, ಚತುರ್ಥ ಪಟ್ಟದ ಬೋಳ ಬಸವೇಶ್ವರ, ಪಂಚಮಪಟ್ಟದ ಚನ್ನಂಜೆ ದೇಶಿಕ, ಷಷ್ಠ ಪಟ್ಟದ ಶಮಿತಮುರಾಧೀಶ, ಸಪ್ತಮ ಪಟ್ಟ ಚೀಲಾಳ ಸ್ವಾಮಿಗೆ ಸಲ್ಲುವುದರಿಂದ ಶಿಖಿನಿರೂಪದ ಉಡುಗೊರೆ ಸಹಿತ ಹರಪನಹಳ್ಳಿ ಬಸವಂತನಾಯಕನನ್ನು ಕಳುಹಿಸಿ, ಅವನನ್ನು ಕರೆತಂದು, ಷಟ್ಸ್ಥಲ ಪಟ್ಟ ಕಟ್ಟಬೇಕು"[೧೭] ಎಂದು ಬರೆಯಲಾಗಿತ್ತು. ಆ ಓಲೆಯ ನಿರೂಪದಂತೆ ಚೀಲಾಳ ಸ್ವಾಮಿಯನ್ನು ಕರೆತರಲು ಶಮಿತಮುರಾಧೀಶನು ಬಸವಂತರಾಯನಿಗೆ ಆಜ್ಞಾಪಿಸುತ್ತಾನೆ. ಬಸವಂತರಾಯ ಶ್ರೀಶೈಲ ಸಮೀಪದ ಅತ್ತಿಕಟ್ಟೆಗೆ ಬಂದು ಚೀಲಾಳಸ್ವಾಮಿಯನ್ನು ಕಂಡು ಹರಪನಹಳ್ಳಿಗೆ ಆಗಮಿಸಲು ಬಿನ್ನವಿಸಿಕೊಳ್ಳುತ್ತಾನೆ. ಹರಪನಹಳ್ಳಿಗೆ ಚೀಲಾಳಸ್ವಾಮಿ ಬರುವನೆಂಬ ಸುದ್ದಿ ಕೇಳಿ ಶಮಿತಮುರಾಧೀಶ ಸಂತುಷ್ಟನಾಗುತ್ತಾನೆ. ತರುವಾಯ ಚೀಲಾಳ ಸ್ವಾಮಿಯು ರಾಚೋಟಿಯಿಂದ ಹೊರಟು ನಾಡಿನ ಅನೇಕ ಭಾಗಗಳಲ್ಲಿ ಧರ್ಮಪ್ರಚಾರ ಮಾಡಿ ಗೌರವವನ್ನು ಹೊಂದಿ ಎಡೆಯೂರು, ಸೊರಬ, ಬಳ್ಳಾರಿ, ಉಜ್ಜಯಿನಿಯ ಮೂಲಕ ಚಿತ್ತರಕಲ್ಲು ಗ್ರಾಮಕ್ಕೆ ಬರುತ್ತಾನೆ. ಅಲ್ಲಿಯ ಸಂಪಿಗೆ ಸಿದ್ಧೇಶ್ವರನು ಜಂಗಮನಾಗಿ ಬಂದು ಬೆಳ್ಳಿಯ ಪೀಠ ಚಿನ್ನದ ಗದ್ದುಗೆ ಒಪ್ಪಿಸಿದನು. ಚೀಲಾಳಸ್ವಾಮಿ ಅಲ್ಲಿ ಆಳುವ ದೊರೆಗೆ ಆಶೀರ್ವದಿಸಿದನು. ನಂತರ ಹರಪನಹಳ್ಳಿ ಪ್ರಾಂತದ ಕೊನೆಯ ಗ್ರಾಮವಾದ ಅರಸೀಕೆರೆಗೆ ಬಂದನು. ಬಳಿಕ

ಶಿಖಿಪುರಕ್ಕೆ ಆಗಮಿಸಿ ಅಲ್ಲಿಯ ಮೂರುಕಲ್ಲು ಶಿವಾಲಯದಲ್ಲಿ ಬೀಡುಬಿಟ್ಟನು. ಇದನ್ನು ತಿಳಿದ ಬಸವಂತರಾಯ, ಶಮಿತಪುರಾಧೀಶರನ್ನು ಹರಪನಹಳ್ಳಿಗೆ ಬರಮಾಡಿಕೊಂಡರು. ಆ ಗ್ರಾಮದ ಗುಡ್ಡದ ಜರೆಯಲ್ಲಿರುವ ಭವ್ಯ ಮಠದ ಕಮಲ ಮಂದಿರದಲ್ಲಿ ಚೀಲಾಳಸ್ವಾಮಿ ವಿರಾಜಿಸಿದನು.

"ಚೀಲಾಳಸ್ವಾಮಿಯು ಹರಪನಹಳ್ಳಿಯಲ್ಲಿ ಷಟ್ಸ್ಥಲ ಪೀಠಸ್ಥನಾಗಿ ಅನುಭವ ಮಂಟಪದಲ್ಲಿ ಶೋಭಿಸುತ್ತಿರಲು ಅತೃಪ್ತರಾದ ಕೆಲವರು . . . . . . ಬೇರೆ ಸಮಯವ ಮಾಡಿಕೊಂಡರು."[೧೮] ಚೀಲಾಳಸ್ವಾಮಿ ಮೂರು ಸಾವಿರ ಶಿಷ್ಯರಿಂದ ಶೋಭಿಸಿದನು.

ಚೀಲಾಳ ಸಮಯದ ಅನೇಕ ಮಠಗಳು ಈ ನಾಡಿನಲ್ಲಿ ಅಲ್ಲಲ್ಲಿ ಕಂಡುಬರುತ್ತಿವೆ. ಅವುಗಳಲ್ಲಿ ಪ್ರಮುಖವಾದವು ಡಂಬಳ, ಗದಗ, ಇಳಕಲ್ಲು, ಕೊಪ್ಪಳ, ಗುಬ್ಬಿ, ಕೊಟ್ಟೂರು, ಸೊಂಡೂರು, ಹಾಳಕೆರೆ, ಗಂಗಾವತಿ, ಉರವಕೊಂಡ ಮುಂತಾದ ಊರುಗಳಲ್ಲಿವೆ. ಚೀಲಾಳ ಸಮಯದ ಈ ಮಠಗಳೆಲ್ಲ ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಸಮಾಜದ ಸಮಗ್ರ ಅಭಿವೃದ್ಧಿಗಾಗಿ ಪ್ರಾಮಾಣಿಕವಾಗಿ ಶ್ರಮಿಸುತ್ತಿವೆ.

ಚೀಲಾಳ ಸಮಯವನ್ನು ಕುರಿತಾಗಿ ಇನ್ನೂ ಭಿನ್ನ ಹೇಳಿಕೆಗಳಿವೆ. ಅವುಗಳಲ್ಲಿ ನಿರಂಜನವಂಶ ರತ್ನಾಕರ ಭಾಗ-೨ರಲ್ಲಿ ಹಾಗೂ ಮಹಾಲಿಂಗೇಂದ್ರ ವಿಜಯಗಳಿಂದ ಒಂದು ಅಭಿಪ್ರಾಯ ಮೂಡಿ ಬಂದರೆ, ಷಟ್ಸ್ಥಲ ಶಿವಾಯಣ, ವೀರಶೈವಾಮೃತ ಪುರಾಣದ ತಾಳೆ ಪ್ರತಿಯ ಅಂತ್ಯ ಪ್ರಶಸ್ತಿ ಮತ್ತು ಶ್ರೀಮದನಾದಿ ಅಲ್ಲಮಪ್ರಭು ಗ್ರಂಥಗಳು ಬೇರೆ ಅಭಿಪ್ರಾಯಗಳನ್ನು ಮೂಡಿಸುತ್ತವೆ.

'ನಿರಂಜನವಂಶರತ್ನಾಕರ' ಕೃತಿಯಲ್ಲಿ ಚೀಲಾಳ ಬುಡಕಟ್ಟಿನ ತೋಟಪ್ಪನವರು ಚಿತ್ರದುರ್ಗಕ್ಕೆ ಬಂದು ಮುರುಘರಾಜೇಂದ್ರರನ್ನು ಸಂಬೋಧಿಸಿ ನಾವು ಯೋಗ್ಯ ಚರಮೂರ್ತಿಗಳಾಗಿರಲಿಕ್ಕೆ ಯಾವ ಆಧಾರದ ಮೇಲೆ ಬೇರೆಯವರಿಗೆ (ಇಮ್ಮಡಿ ಗುರುಸಿದ್ಧ) ಶೂನ್ಯಪೀಠದ ಪಟ್ಟವನ್ನು ಕೊಟ್ಟಿರಿ ಎಂದು ಕೇಳಿದರು. ಅದರಿಂದ ಮುರುಘರಾಜೇಂದ್ರರ ಅನುಯಾಯಿಯಾದ ಮದಕರಿನಾಯಕನು ತೋಟಪ್ಪನವರನ್ನು ಗಡಿಪಾರು ಮಾಡಿದನು. ಅಲ್ಲಿಂದ ಹೊರಟ ತೋಟಪ್ಪನವರು ಚೀಲಾಳ ಬುಡಕಟ್ಟಿನ ೧೦, ಬಳ್ಳಾರಿ ಬುಡಕಟ್ಟಿನ ೧೫, ಚಿತ್ತರಗಿ ಬುಡಕಟ್ಟಿನ ೧೦, ತಾಡವಾಲಿ ಬುಡಕಟ್ಟಿನ ೨೫, ಗದಗ ಬುಡಕಟ್ಟಿನ ೧೫, ಆದಿವಾಸಿ ಬುಡಕಟ್ಟಿನ ೧೮, ಕಡಲೆ ಬುಡಕಟ್ಟಿನ ೫ ಹೀಗೆ ಒಟ್ಟು ೮೮ ಚರಮೂರ್ತಿಗಳನ್ನು ಕೂಡಿಸಿಕೊಂಡು, ಹರಪನಹಳ್ಳಿ ಬಸವಂತ ನಾಯಕ ದೊರೆಯಿಂದ ಮಠವನ್ನು ಕಟ್ಟಿಸಿಕೊಂಡ ಬಗ್ಗೆ ತಿಳಿದುಬರುತ್ತದೆ.

"ಮಹಾಲಿಂಗೇಂದ್ರ ವಿಜಯ"ದಲ್ಲಿ ಮುರುಘಾ ಸಂಪ್ರದಾಯದ ಪ್ರವರ್ತಕರಾದ ಮುರುಘರಾಜೇಂದ್ರರು ತಮ್ಮ ಪಟ್ಟವನ್ನು ಇಮ್ಮಡಿ ಗುರುಸಿದ್ಧರಿಗೆ ಕಟ್ಟಿದಾಗ ಹರಪನಹಳ್ಳಿಯಲ್ಲಿದ್ದು, ಚೀಲಾಳ ಮೂರ್ತಿಗಳು ಅದನ್ನು ವಿರೋಧಿಸಿದರು. ಹೀಗೆ ವಿರೋಧಿಸಿದ ಚೀಲಾಳಪ್ಪನವರನ್ನು ಚಿತ್ರದುರ್ಗದ ಅರಸು ಭರಮನಾಯಕನು ತನ್ನ ಸೀಮೆಯಿಂದ ಹೊರಹಾಕಿಸಿದನು. ನಂತರ ಚೀಲಾಳಪ್ಪನವರಿಗೆ ಹರಪನಹಳ್ಳಿಯ ಬಸವಂತ ಭೂಪಾಲ ಆಶ್ರಯ ನೀಡಿ ಮಠವೊಂದನ್ನು ಕಟ್ಟಿಸಿಕೊಟ್ಟನು.

ಶ್ರೀಮದನಾದಿ ಅಲ್ಲಮಪ್ರಭು ಗ್ರಂಥದಲ್ಲಿ ಕಟ್ಟಿಗೆಹಳ್ಳಿ ಸ್ವಾಮಿಗಳಿಗೆ ಮುರುಘರಾಜೇಂದ್ರ ಎಂಬ ಶಿಷ್ಯನಿದ್ದನು. ಇವರು ಆತನನ್ನು ಪಟ್ಟದ ಮೊಹರು ತರಲು ದಿಲ್ಲಿಗೆ ಕಳುಹಿಸಿದರು. ಮುರುಘರಾಜೇಂದ್ರರು ದೆಹಲಿಯ ಅರಸನಾದ ಮಲ್ಲೂಖಾನನ ಸತ್ತ ಆನೆಯನ್ನು ಜೀವಂತಗೊಳಿಸಿ ಚೆನ್ನಬಸವೇಶ್ವರರು ಕೊಟ್ಟಿದ್ದ ಮೊಹರುಗಳನ್ನು ಹಿಂತಿರುಗಿಸಿ ತಂದರು. ಅಷ್ಟರಲ್ಲೇ ಕಟ್ಟಿಗೆಹಳ್ಳಿ ಸಿದ್ಧಲಿಂಗರು ತಮ್ಮ ಪಟ್ಟವನ್ನು "ಮಹಾಂತ" ಎಂಬುವನಿಗೆ ನೀಡಿದ್ದರು. ದಿಲ್ಲಿಯಿಂದ ಹಿಂತಿರುಗಿ ಬಂದ ಮುರುಘರಾಜೇಂದ್ರರು ಹರಪನಹಳ್ಳಿ ಸೀಮೆಯ ತಾಮ್ರಹಳ್ಳಿಯಲ್ಲಿ ನಿದ್ರಾವಸ್ಥೆಯಲ್ಲಿದ್ದ ಗುರುಗಳನ್ನು ಮಂಚಸಮೇತವಾಗಿ ಹೊತ್ತು ತರುತ್ತಿರುವಾಗ ತಿಳುವಳ್ಳಿಯಲ್ಲಿ ಎಚ್ಚರಗೊಂಡರು. ಆಗ ತಮ್ಮ ಹತ್ತಿರ ಮುರುಘರಾಜೇಂದ್ರರಿದ್ದುದನ್ನು ಕಂಡು ಕಳವಳಗೊಂಡರು. ಮುರುಘರಾಜೇಂದ್ರರು ಅವರನ್ನು ಶಿವಾನುಭವ ಚರಂತಿಗೆ ಕೊಡಿರೆಂದು ಅಂಗಲಾಚಿ ಬೇಡಿದರು.

ಈಗಾಗಲೇ ಶಿವಾನುಭವ ಚರಂತಿಗೆಯನ್ನು ಮಹಾಂತ ಎಂಬುವರಿಗೆ ಕೊಡಲಾಗಿದೆ ಎಂದು ಸಿದ್ಧಲಿಂಗರು ನುಡಿಯಲು, ಅದರಿಂದ ಮುರುಘರಾಜೇಂದ್ರರು ಕೆಲ ಅನುಯಾಯಿಗಳೊಡನೆ ತಾವೇ ಮುಖ್ಯ ಗುರುಗಳು ಎಂದು ಕರೆದುಕೊಂಡು ಚಿತ್ರದುರ್ಗದ ಮದಕರಿನಾಯಕನ ಆಶ್ರಯದಲ್ಲಿ ಮಠ ಕಟ್ಟಿಸಿಕೊಂಡರು. ಇತ್ತ ಮಹಾಂತಸ್ವಾಮಿಗಳು ಸ್ವತಂತ್ರರಾಗಿ ಭಕ್ತೋದ್ಧಾರ ಮಾಡುತ್ತಿದ್ದು ನಂತರ ಅರ್ಧನಾರೀಶ್ವರ ಸ್ವಾಮಿಗಳಿಗೆ ಶಿವಾನುಭವ ಚರಂತಿಗೆಯನ್ನು ವಹಿಸಿಕೊಟ್ಟರು. ಅದೇ ವೇಳೆಗೆ ರಾಜಕೀಯ ಅವ್ಯವಸ್ಥೆಯಲ್ಲಿದ್ದ ಬಸವಂತನಾಯಕನು ತನ್ನ ಅಪಾರ ಸಂಪತ್ತನ್ನು ಗುರುಗಳ ಬಳಿಗೆ ಹೇರಿ ಕಳುಹಿಸಿದನು. ಕೆಳದಿ ಸೀಮೆಯಲ್ಲಿದ್ದ ಅರ್ಧನಾರೀಶ್ವರರ ಶಿಷ್ಯ ಮಂತೂರಶೆಟ್ಟಿ ಎಂಬುವವನ ಸಹಾಯದಿಂದ ಚೀಲಾಳಸಮಯ ಗದುಗಿಗೆ ಬಂದು ನೆಲೆಸಿತು.

'ಷಟ್ಸ್ಥಲ ಶಿವಾಯಣ' ಎಂಬ ಗ್ರಂಥದಲ್ಲಿ ಸಂಗಮೇಶನು ಕಟ್ಟಿಗೆಹಳ್ಳಿ ಸ್ವಾಮಿಗೆ ಕನಸಿನಲ್ಲಿ ಬಸವಪ್ರಭು ಚೀಲಾಳ ಸ್ವಾಮಿಗಳನ್ನು ಷಟ್ಪಕ್ಕೆ ತರಲು ಆದೇಶಿಸಿದರು. ಪ್ರಥಮಪಟ್ಟ ನಿರಂಜನಪ್ರಭು, ದ್ವಿತಿಯಪಟ್ಟ ಅಲ್ಲಮಪ್ರಭು, ತೃತೀಯಪಟ್ಟ ತೋಂಟದ ಸಿದ್ಧಲಿಂಗ, ಚತುರ್ಥಪಟ್ಟ ಬೋಳಬಸವೇಶ್ವರ, ಪಂಚಮಪಟ್ಟ ಚೆನ್ನಂಜಿದೇಶಿಕ, ಷಷ್ಠಮಪಟ್ಟ ಶಮಿತಮುರಾಧೀಶ್ವರ, ಸಪ್ತಮಪಟ್ಟ

ಚೀಲಾಳಸ್ವಾಮಿಗೆ ಸಲ್ಲುವುದೆಂದು ಗಗನದಿಂದ ಬಂದ ಪತ್ರವೊಂದು ತಿಳಿಸಿತಂತೆ. ಕಾರಣ ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳು ಸಂಗಮೇಶ್ವರನ ಆದೇಶದಂತೆ ಅತ್ತಿಕಟ್ಟೆಯಲ್ಲಿ ಇದ್ದ ಬಸವಪ್ರಭು ಚೀಲಾಳಸ್ವಾಮಿಗಳನ್ನು ಕರೆತರಲು ಶಿಖಿನಿರೂಪ ಹಾಗೂ ಸಕಲ ಚರಮೂರ್ತಿಗಳ ಜೊತೆ ಹರಪನಹಳ್ಳಿ ಬಸವಂತನಾಯಕನನ್ನು ಕಳಿಸಿದನು. ಆ ಪ್ರಕಾರ ಬಸವಪ್ರಭುಗಳು ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳ ಬಳಿ ಬಂದು, ಷಟ್ಸ್ಥಲಪಟ್ಟದ ಉತ್ತರಾಧಿಕಾರವನ್ನು ಪಡೆದು, ಹರಪನಹಳ್ಳಿಯ ಗುಡ್ಡದ ಪಕ್ಕದಲ್ಲಿರುವ ಭವ್ಯಮಠದಲ್ಲಿ ವಿರಾಜಿಸಿದರು. ಈ ಹೇಳಿಕೆಗಳಿಂದ ಬಸವಪ್ರಭುಗಳು ಕಟ್ಟಿಗೆಹಳ್ಳಿ ಸಿದ್ಧಲಿಂಗರಿಂದ ಉತ್ತರಾಧಿಕಾರಿಗಳಾದರೆಂಬುದು ಖಚಿತವಾಗುತ್ತದೆ.

'ಮಹಲಿಂಗೇಂದ್ರ ವಿಜಯ'ದ ಪ್ರಕಾರ ಮುರುಘರಾಜೇಂದ್ರ ಸ್ವಾಮಿಗಳು ಇಮ್ಮಡಿ ಗುರುಸಿದ್ಧರಿಗೆ ಪಟ್ಟಕಟ್ಟಲು ಅಸಂತುಷ್ಟರಾಗಿ ಚೀಲಾಳಸ್ವಾಮಿಗಳು ಹರಪನಹಳ್ಳಿಗೆ, ಕುಮಾರಸ್ವಾಮಿಗಳು ಸ್ವಾದಿಗೆ ಹೋಗಿ ಅಲ್ಲಿಂದ ಹುಬ್ಬಳ್ಳಿಗೆ ಬಂದು ನೆಲೆಸಿದರೆಂದು ತಿಳಿದು ಬರುತ್ತದೆ.

ಷಟ್ಸ್ಥಲಶಿವಾಯಣದ ಪ್ರಕಾರ ಬಸವಪ್ರಭು ಚೀಲಾಳಸ್ವಾಮಿಗಳು ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯರು. ಮುರುಘರಾಜೇಂದ್ರರ ಶಿಷ್ಯ ಚೀಲಾಳಸ್ವಾಮಿಯಲ್ಲದುದರಿಂದ ಇಬ್ಬರೂ ಸಮಕಾಲೀನರೆಂದು ಸ್ಪಷ್ಟವಾಗುತ್ತದೆ. ಬಸವಪ್ರಭು ಚೀಲಾಳಸ್ವಾಮಿಗಳು ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳಿಂದ ಉತ್ತರಾಧಿಕಾರಿಗಳಾದ ತರುವಾಯ ಅಸಂತುಷ್ಟಗೊಂಡ ಕೆಲವರು ಬೇರೆ ಸಮಯವ ಮಾಡಿಕೊಂಡರೆಂಬುದು 'ಷಟ್ಸ್ಥಲಶಿವಾಯಣ'ದ 'ಕೆಲವರು ಪಾತಕವ ಹಿಡಿದು ಬೇರೆ ಸಮಯವ ಮಾಡಿಕೊಂಡರು' ಎಂಬ ಮಾತಿನಿಂದ ಸ್ಪಷ್ಟವಾಗುತ್ತದೆ.

ಕೆಂಪಿನ ಸಮಯ :

ನಿರಂಜನವಂಶ ರತ್ನಾಕರ (ಭಾಗ-೨)ವು ಕೆಂಪಿನ ಸಮಯವನ್ನು ಕುರಿತು ಈ ರೀತಿ ಹೇಳಿದೆ. ಕೆಂಪಿನ ಬುಡಕಟ್ಟಿನ ಸಂಗನಬಸಪ್ಪನವರು, ಸೋಮಕಟ್ಟೆ ಬುಡಕಟ್ಟಿನ ಚನ್ನಬಸಪ್ಪನವರು, ಗದ್ದೆಕಟ್ಟಿನ ಬುಡಕಟ್ಟಿನ ರುದ್ರಪ್ಪನವರು ಮತ್ತು ಆಯಕಟ್ಟಿನ ಬುಡಕಟ್ಟಿನ ಸಿದ್ಧಲಿಂಗಸ್ವಾಮಿಗಳು ಮೂರು ಹಾಗೂ ಕುಮಾರಸ್ವಾಮಿಗಳು ಸಿಂಹಾಸನಾರೂಢರಾಗಿದ್ದನ್ನು ಕಂಡು, ಅವರ ಸಮ ಮರ್ಯಾದೆ ನಮಗೇಕೆ ಇಲ್ಲ ಎಂದು ಮಹಾನವಮಿ ಸಭೆಯ ದಿನದಂದು ಪ್ರಶ್ನಿಸಿದರು. ವಿಷಯ ತಿಳಿದು ಸಿಟ್ಟಿಗೆದ್ದ ಮುರುಗರಾಜೇಂದ್ರ ಹಾಗೂ ಕುಮಾರಸ್ವಾಮಿಗಳು ಇವರನ್ನು ಚಿತ್ರದುರ್ಗದ ಭರಮನಾಯಕನಿಂದ ಹೊರಹಾಕಿಸಿದರು. ಆಗ ಕೆಂಪಿನ ಸಮಯ ಉದ್ಭವವಾಯಿತು ಎಂದು ತಿಳಿದುಬರುತ್ತದೆ. ಈ ಸಮಯದ ಮಠಗಳು ಕಲ್ಯಾಣ, ಬಗ್ಗುಂಟೆ ಮುಂತಾದ ಕಡೆಗಳಲ್ಲಿ ಇವೆಯೆಂದು ನಿರಂಜನ ವಂಶ ರತ್ನಾಕರ ಭಾಗ-೨ರಿಂದ ಸ್ಪಷ್ಟವಾಗುತ್ತದೆ.

ಮಹಾಲಿಂಗೇಂದ್ರ ವಿಜಯದಲ್ಲಿ ಕೆಂಪಿನ ಸಮಯ ಭಿನ್ನಗೊಂಡ ಉಲ್ಲೇಖ ಮಾತ್ರ ಬರುತ್ತದೆ. ಅಲ್ಲಿ ಈ ಸಮಯದ ಬಗ್ಗೆ ಹೆಚ್ಚಿನ ವಿವರವಿಲ್ಲ. ಬುದ್ಧಯ್ಯ ಪುರಾಣಿಕರು ಸಂಪಾದಿಸಿದ ಶ್ರೀಮದನಾದಿ ಅಲ್ಲಮಪ್ರಭು ಗ್ರಂಥದ ಒಂದು ಕಥೆಯಲ್ಲಿ ಮುರುಗಾ ಶಾಂತವೀರರ ಶಿಷ್ಯರಾದ ಕೆಂಪಿನ ನಂಜದೇವರು ಕಲ್ಯಾಣಕ್ಕೆ ಹೋಗಿ ಪ್ರಭುದೇವರು ಸ್ಥಾಪಿಸಿದ ಮಠದಲ್ಲಿ ನೆಲಸಿ 'ಕೆಂಪಿನ ಸಮಯ' ಸ್ಥಾಪಕರಾದರೆಂದು ಹೇಳಲಾಗಿದೆ. ಇದಕ್ಕಿಂತ ಹೆಚ್ಚಿನ ವಿಷಯಗಳು ಈ ಸಮಯದ ಬಗ್ಗೆ ಏನೂ ತಿಳಿದು ಬರುವುದಿಲ್ಲ.

ಈ ಎಲ್ಲ ಅವಲೋಕನೆಯಿಂದ ವೈಯಕ್ತಿಕ ಭಿನ್ನಾಭಿಪ್ರಾಯ ಹಾಗೂ ಪ್ರತಿಷ್ಠೆಗಳಿಂದಾಗಿ ಈ ಸಮಯಭೇದಗಳಾದವೇ ಹೊರತು ಯಾವುದೇ ಗಟ್ಟಿಯಾದ ತಾತ್ವಿಕ ನೆಲಗಟ್ಟಿನ ಮೇಲೆ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ. ಈ ಸಮಯಗಳ ಯಾವುದೇ ಆಚರಣೆಗಳಲ್ಲಾಗಲಿ ಅಥವಾ ಬಿರುದು ಬಾವುಲಿಗಳಲ್ಲಾಗಲಿ ಹೇಳಿಕೊಳ್ಳುವ ವ್ಯತ್ಯಾಸಗಳು ಕಂಡುಬರುವುದಿಲ್ಲ. ಹೀಗಾಗಿ ಒಂದು ಮಠವನ್ನು ಆ ಸಮಯಗಳಲ್ಲಿ ಗುರುತಿಸುವಾಗ ಅಲ್ಲಿಯ ಶ್ರೀಗಳವರ ಪರಂಪರಾಗತ ಹೇಳಿಕೆಗಳನ್ನು ಮಾತ್ರ ಅವಲಂಬಿಸಬೇಕಾಗುತ್ತದೆ. ಒಟ್ಟಿಗೆ ಇಂದಿನ ಈ ವಿರಕ್ತ ಪರಂಪರೆ ಮುನ್ನೂರು ವರ್ಷಗಳ ಮೊದಲು ಒಂದಾಗಿದ್ದು ಒಬ್ಬರ ಅಧಿಪತ್ಯವನ್ನು ಮತ್ತೊಬ್ಬರು ಒಪ್ಪದೆ ಪ್ರತಿಭಟಿಸಿದುದರ ಫಲವಾಗಿ ಅನೇಕ ಪೀಠಪರಂಪರೆಗಳನ್ನು ಹೊಂದಿತೆಂದು ಹೇಳಬಹುದು.

ಸಮಯಭೇದಗಳ ಕಾಲ ನಿರ್ಣಯ :

ಸಮಯಗಳ ಕಾಲ ನಿರ್ಣಯಿಸುವ ಸಂದರ್ಭದಲ್ಲಿ ನಮಗೆ ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳ ಕಾಲ ಮುಖ್ಯವಾಗುತ್ತದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳು – ತೋಂಟದ ಸಿದ್ಧಲಿಂಗಯತಿಗಳಿಂದ ೫ನೆಯ ಉತ್ತರಾಧಿಕಾರಿಗಳು. ಸಿದ್ಧಲಿಂಗ ಶಿವಯೋಗಿಗಳ ಕಾಲ ಕ್ರಿ.ಶ. ೧೬೦೦ ಎಂದು ನಿರ್ಧರಿತವಾಗಿದ್ದು, ತಲೆಮಾರಿಗೆ ೨೫ ವರ್ಷಗಳನ್ನು ಹಿಡಿದು ಲೆಕ್ಕ ಮಾಡಿದರೆ "ಕಟ್ಟಿಗೆಹಳ್ಳಿ ಸಿದ್ಧಲಿಂಗ ಸ್ವಾಮಿಗಳು ಸುಮಾರು ಕ್ರಿ.ಶ. ೧೬೫೦ರ ವೇಳೆಗೆ ಷಟ್ಸ್ಥಲ ಪಟ್ಟವನ್ನು ಹೊಂದಿದ್ದರೆಂದು ಭಾವಿಸಬಹುದು.[೧೮] ಇವರ ಶಿಷ್ಯರಿಂದಲೇ ಸಮಯಭೇದ ಪ್ರಕ್ರಿಯೆ ನಡೆದಿದೆ. ಚೀಲಾಳಸ್ವಾಮಿಗಳು ಹರಪನಹಳ್ಳಿ ಬಸವಂತನಾಯಕ ಹಾಗೂ ಚಿತ್ರದುರ್ಗದ ಮುಮ್ಮಡಿ ಮದಕರಿನಾಯಕ ಭರಮನಾಯಕರ ಆಳ್ವಿಕೆಯಲ್ಲಿ ಜನಿಸಿದ್ದರು. ಷಟ್ಸ್ಥಲ ಶಿವಾಯಣವು ಚೀಲಾಳ ಸ್ವಾಮಿಗಳು ಸುಮಾರು ೧೬೮೮-೯೧ರ ಅವಧಿಯಲ್ಲಿ ಜೀವಿಸಿರಬಹುದು ಎಂದು ಹೇಳುತ್ತದೆ. ಇವರು ಷಟ್ಸ್ಥಲಪಟ್ಟದ ಉತ್ತರಾಧಿಕಾರಿಗಳಾದ ತರುವಾಯ ಇವರ ಸಮಕಾಲೀನರಲ್ಲಿ ವೈಮನಸ್ಸು ಉಂಟಾಗಿ ಉಳಿದ ಸಮಯಗಳು ಕಾಣಿಸಿಕೊಂಡವು. ಮೊದಲು ಸಂಪಾದನಾ ಸಮಯ ಅನಂತರ, ಮುರುಗಾ, ಕುಮಾರ, ಚೀಲಾಳ ಸಮಯ ಅಂತಿಮವಾಗಿ ಕೆಂಪಿನ ಸಮಯ ಕಾಣಿಸಿಕೊಂಡವೆಂದು ತೋರುತ್ತದೆ.

ಅಡಿ ಟಿಪ್ಪಣಿಗಳು :

[೧] ಕೈವಲ್ಯದರ್ಪಣ, ಸಂ.–ಶಿ.ಶಿ. ಬಸವನಾಳ, ಪದ್ಯ–೯, ಪು–೧೭೯.

[೨] ಕೈವಲ್ಯದರ್ಪಣ, ಸಂ.–ಶಿ.ಶಿ. ಬಸವನಾಳ, ಪದ್ಯ–೧೧, ಪು–೧೮೦.

[೩] ಡಾ॥ ಬಿ.ವಿ. ಮಲ್ಲಾಪೂರ, ಶಾಸನಗಳಲ್ಲಿ ಮುರಿಗೆಯ ಸಂಪ್ರದಾಯ, ಮುರುಗಾ ಮತ್ತು ಮುರುಗ ಸ್ವಾಮಿಗಳ ಉಲ್ಲೇಖ "ಚಿನ್ಮೂಲಾದ್ರಿ ಚೇತನ", ಸಂ.– ಜಿ. ಶಿವಕುಮಾರ, ಪೀಠಾರೋಹಣ ರಜತ ಮಹೋತ್ಸವ ಸಮಿತಿ, ಚಿತ್ರದುರ್ಗ, ೧೯೮೯, ಪು–೩೨.

[೪] ಅದೇ ಪುಟ ೩೨.

[೫] ಮಹಾದೇವನ ಮಹಾಲಿಂಗೇಂದ್ರ ವಿಜಯ : ಸಂ.–ಡಾ॥ ಎಲ್. ಬಸವರಾಜು, ಮುರುಗರಾಜೇಂದ್ರ ಬೃಹನ್ಮಠ, ಚಿತ್ರದುರ್ಗ, ೧೯೭೧, ೧೮ನೇ ಅಧ್ಯಾಯ, ಪದ್ಯ–೩೪.

[೬] ಕೈವಲ್ಯದರ್ಪಣ, ಸಂ.–ಶಿ.ಶಿ. ಬಸವನಾಳ, ಪದ್ಯ–೯, ಪು–೧೭೯.

[೭] ನಿರಂಜನವಂಶರತ್ನಾಕರ ಭಾಗ–೧, ಮಹಾಲಿಂಗೇಂದ್ರ ವಿಜಯ, ಅಧ್ಯಾಯ–೧೬, ಪದ್ಯ–೩ ಮತ್ತು ೨೨ ಎರಡಲ್ಲೂ ಇದೆ ವಿವರಣೆ ಇದೆ.

[೮] ಸಂಪಾದನಾ ಸಮಯ – ವಿಜಯಶ್ರೀ ಹಿರೇಮಠ, ಲಿಂಗಾಯತ ಅಧ್ಯಯನ ಸಂಸ್ಥೆ, ವಿರಕ್ತಮಠ, ದೇಶನೂರು, ೧೯೯೯, ಪು–೧೫.

[೯] ಮಹಲಿಂಗೇಂದ್ರ ವಿಜಯ ಪು–೬೬

[೧೦] ಅದೇ ಪೀಠಿಕೆ ಪುಟ–೬೯.

[೧೧] ಅದೇ ಪೀಠಿಕೆ ಪುಟ–೭೧.

[೧೨] ಅದೇ ಪೀಠಿಕೆ ಪುಟ–೭೨.

[೧೩] ಪ್ರೊ॥ ಬಿ. ರಾಜಶೇಖರಪ್ಪ, ಮುರಿಗಾ ಸಂಪ್ರದಾಯ ಕೆಳದಿ ಹಾಗೂ ಕೊಡಗಿನ ಅರಸರು, ಚಿನ್ಮೂಲಾದ್ರಿ ಚೇತನ, ಸಂ.–ಜಿ. ಶಿವಕುಮಾರ, ಪೀಠಾರೋಹಣ ರಜತ ಮಹೋತ್ಸವ ಸಮಿತಿ, ಚಿತ್ರದುರ್ಗ, ೧೯೮೯, ಪು–೬೬.

[೧೪] ಮಹಾದೇವನ ಮಹಲಿಂಗೇಂದ್ರ ವಿಜಯ, ಪು–೮೩.

[೧೫] ಚೀಲಾಳ ಸಮಯ – ಒಂದು ಅಧ್ಯಯನ, ಸಂ. ಎಸ್.ವಿ. ಮನಗುಂಡಿ.

[೧೬] ಮಹಲಿಂಗೇಂದ್ರ ವಿಜಯ ಪೀಠಿಕೆ ಪು–೭೯.

[೧೭] ಷಟ್‌ಸ್ಥಲ ಶಿವಾಯಣ : ಸಂ.–ಡಾ॥ ಎಂ.ಎಂ. ಕಲಬುರ್ಗಿ ಮತ್ತು ಡಾ॥ ಸಿ.ಕೆ. ಪ್ರ–ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಡಂಬಳ–ಗದಗ, ೧೯೯೯, ಪೀಠಿಕೆ, ಪು–xii

[೧೮] ಅದೇ ಪುಟ– xvi

[೧೯] ಹಾಗಲವಾಡಿ ಮುದ್ದೀರಸ್ವಾಮಿಯ ಸ್ವರ ವಚನಗಳು, ಸಂ.–ಡಾ॥ ವೀರಣ್ಣ ರಾಜೂರ, ಪು–೧೫.

ಅಧ್ಯಾಯ : ಮೂರು

ಮುರುಘಾ ಪರಂಪರೆಯ ಮಠಗಳು ಮತ್ತು ಮಠಾಧ್ಯಕ್ಷರು

೧) ಚಿತ್ರದುರ್ಗದ ಬೃಹನ್ಮಠ

೨) ಧಾರವಾಡದ ಮುರುಘಾಮಠ

೩) ಅಥಣಿಯ ಶಿವಯೋಗೀಶ್ವರಮಠ

೪) ಮುಳಗುಂದದ ಗವಿಮಠ

೫) ಬೆಂಗಳೂರಿನ ಸರ್ಪಭೂಷಣಮಠ

೬) ದಾವಣಗೆರೆಯ ವಿರಕ್ತಮಠ

೭) ಕೊಲ್ಲಾಪುರದ ಚಿತ್ರದುರ್ಗಮಠ

೮) ಸೋಮವಾರಪೇಟೆಯ ಅಬ್ಬಿಮಠ

೯) ಮಾದಾಪುರದ ಮುರುಘಾಮಠ

೧೦) ಆನಂದಪುರದ ಮುರುಘರಾಜೇಂದ್ರಮಠ

ಅಧ್ಯಾಯ – ೩

ಮುರುಘಾ ಪರಂಪರೆಯ ಮಠಗಳು ಹಾಗೂ ಮಠಾಧ್ಯಕ್ಷರು

ಮಠದ ಪ್ರಾಚೀನತೆ, ಅರ್ಥ, ಸ್ವರೂಪ ಹಾಗೂ ಮಹತ್ವ

ಮಠದ ಪ್ರಾಚೀನತೆ :

ಹಿಂದೂ ಧರ್ಮ ಅನೇಕ ಸಂಸ್ಕೃತಿ, ಸಂಪ್ರದಾಯ ಆಚರಣೆಗಳ ಸಂಗಮ. ವೈದಿಕ ಸಂಪ್ರದಾಯ ಪ್ರಬಲವಾದ ಸಂದರ್ಭದಲ್ಲಿ ಅದಕ್ಕೆ ಪರ್ಯಾಯವಾದ ಆಗಮಿಕ ಸಂಪ್ರದಾಯವು ಜನ್ಮತಾಳಿತು. ಈ ಆಗಮಿಕ ಸಂಪ್ರದಾಯದ ಮಠಗಳು ಪುರಾಣ ಕಾಲಕ್ಕಿಂತ ಪೂರ್ವದಲ್ಲಿ ಅಸ್ತಿತ್ವದಲ್ಲಿದ್ದವೆಂಬುದಾಗಿ ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದರೆ ಮಠದ ಪರಿಕಲ್ಪನೆ ಅಧಿಕೃತವಾಗಿ ದೊರೆಯುವುದು ಶಂಕರಾಚಾರ್ಯರಿಂದ ಇವರಿಗಿಂತ ಪೂರ್ವದಲ್ಲಿ ಮಠಗಳ ಬಗ್ಗೆ ಉಲ್ಲೇಖವಿದ್ದರೂ ಸಹಿತ ಅಸ್ಪಷ್ಟ ಬಿಡಿ ಬಿಡಿಯಾದ ಪ್ರಾಸಂಗಿಕ ವಿವರಗಳು ಶಾಸನಗಳಲ್ಲಿ ದೊರೆಯುತ್ತವೆ. ಎಂಟನೆಯ ಶತಮಾನದ ಕೊನೆಯವರೆಗೂ ಜೈನ, ಬೌದ್ಧ, ಸನ್ಯಾಸಿಗಳಲ್ಲದೆ, ಕಾಳಾಮುಖರು, ಕಾಪಾಲಿಕರು, ಪಾಶುಪತರು ಮೊದಲಾದ ವಿವಿಧ ಪಂಥಗಳಿಗೆ ಸೇರಿದ ಸನ್ಯಾಸಿಗಳಿದ್ದರು. ಆದರೆ ಮಠಗಳ ಅಗತ್ಯವನ್ನು ಗ್ರಹಿಸಿ ಭಾರತ ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸಿದ ಶ್ರೇಯಸ್ಸು ಶ್ರೀ ಶಂಕರಾಚಾರ್ಯರಿಗೆ ಸಲ್ಲುತ್ತದೆ.

ಹಿಂದೂ ಧರ್ಮದ ತತ್ವಗಳನ್ನು ಜನರಿಗೆ ತಿಳಿಸಲು ದ್ವಾರಕಾ, ಪುರಿ, ಬದರಿ, ಶೃಂಗೇರಿ, ಹರಿದ್ವಾರ, ವೃಂದಾವನ, ಪ್ರಯಾಗ, ಕಾಶಿ ಮೊದಲಾದ ಸ್ಥಳಗಳಲ್ಲಿ ಮಠಗಳು ಸ್ಥಾಪಿತವಾದವು. ಮಠದ ಮುಖ್ಯಸ್ಥನನ್ನು ಸ್ವಾಮಿ ಅಥವಾ ಮಹಂತ ಎಂದು ಕರೆಯುತ್ತಿದ್ದರು. ಮಧ್ಯಯುಗದ ಕಾಲದಲ್ಲಿ ದೇವಸ್ಥಾನಗಳು, ಮಠಗಳು ಜ್ಞಾನಪ್ರಸಾರದ ಕೇಂದ್ರಗಳಾಗಿದ್ದವು. ವಿದ್ಯಾಕೇಂದ್ರಗಳಾಗಿದ್ದವು. ವಿದ್ಯೆಯೆಲ್ಲವೂ ಬಹುತೇಕವಾಗಿ ಧಾರ್ಮಿಕ ವಿಚಾರಗಳಿಗೆ ಸೀಮಿತವಾಗಿತ್ತು.

ಮಠಗಳ ಕಾರ್ಯವು ಪ್ರಮುಖವಾಗಿ ಎರಡು ರೀತಿಯಲ್ಲಿ ವಿಂಗಡಣೆಯಾಗಿದ್ದವು;

೧. ಪರಂಪರಾಗತವಾಗಿ ಬಂದ ಹಿಂದೂ ಧರ್ಮದ ವಿವಿಧ ಉದ್ಗ್ರಂಥಗಳ ಅಧ್ಯಯನ.
೨. ಹಿಂದೂ ಧರ್ಮದ ತತ್ವಗಳ ವ್ಯವಸ್ಥಿತ ಪ್ರಚಾರ.

ಇವಲ್ಲದೆ ಮಠಕ್ಕೆ ಬಂದ ಅತಿಥಿಯನ್ನು ಸತ್ಕರಿಸುವ ಸಂಪ್ರದಾಯವೂ ಕಂಡುಬರುತ್ತದೆ.

ಈ ಮಠಗಳು ಆಯಾ ಧರ್ಮಕ್ಕೆ ಸಂಬಂಧಿಸಿದಂತೆ ಈಗಲೂ ಕಾರ್ಯೋನ್ಮುಖವಾಗಿ ಸಮಾಜದ ಮೇಲೆ ತಮ್ಮ ಪ್ರಭಾವ ಬೀರುವುದರೊಂದಿಗೆ ಸಮಾಜದ ಹಿಡಿತವನ್ನು ಸಾಧಿಸಿವೆ.

'ಮಠ' ಅರ್ಥ :

'ಮಠ' ಎಂಬ ಪದವನ್ನು ಸಾಮಾನ್ಯ ಅರ್ಥದಲ್ಲಿ ಗ್ರಹಿಸುವುದಾದರೆ ಸ್ವಾಮಿಗಳು ಇರುವ ಸ್ಥಳ ಎಂದು ಕರೆಯುತ್ತೇವೆ. ನಿಘಂಟಿನಲ್ಲಿ ಅದು ಸನ್ಯಾಸಿ, ಗುರು, ಯೋಗಿ, ತಪಸ್ವಿ ಇರುವ ಸ್ಥಳ ಎಂಬ ಅರ್ಥದಲ್ಲಿ ಅದು ಪ್ರಯೋಗಗೊಂಡಿದೆ. ಇನ್ನೊಂದು ಅರ್ಥದಲ್ಲಿ 'ಪಾಠಶಾಲೆ' ಎಂಬ ಪರಿಕಲ್ಪನೆಯೂ ಹೆಚ್ಚು ಪ್ರಖರತೆಯನ್ನು ಪಡೆದುಕೊಂಡಿದೆ. 'ಪಾಠ' ಎಂದು ಗ್ರಹಿಸುವಾಗ ಬೋಧನೆ ಮಾಡುವ ಸ್ಥಳ, ತಿಳುವಳಿಕೆ ನೀಡುವ, ಅಜ್ಞಾನ ಅಂಧಕಾರವನ್ನು ತೊಡೆದು ಹಾಕುವ ಪಾವಿತ್ರ್ಯತೆಯನ್ನು ಹೊಂದಿರುವ ಸ್ಥಳವೆಂದು ಕರೆಯಬಹುದು.

'ಮಠ' ಎಂಬ ಪದವನ್ನು ಮೂಲತಃ ಸಂಸ್ಕೃತದಿಂದ ಕನ್ನಡಕ್ಕೆ ತೆಗೆದುಕೊಳ್ಳಲಾಗಿದೆ. ಮಠ–ಮಠತಿ ಎಂದರೆ 'ವಾಸಿಸು' ಎಂಬ ಅರ್ಥವನ್ನು ಹೊಂದಿದೆ. ಮಠ ಎಂಬ ಪದಕ್ಕೆ ಮೂಲ ಅರ್ಥ ವಾಸಸ್ಥಾನ. ಕೆಲ ವರ್ಷಗಳ ನಂತರ ವಿದ್ಯಾರ್ಥಿಗಳ ಇಲ್ಲವೆ ಗುರುಗಳ ವಾಸಸ್ಥಾನ ಎಂದು ಬಳಕೆಗೊಂಡಿರುವುದನ್ನು ಕಾಣಬಹುದು. ಈ ಹಿನ್ನೆಲೆಯಲ್ಲಿ ಅರ್ಥೈಸಿದಾಗ ಶಾಲೆ, ಕಾಲೇಜು, ವಿದ್ಯಾಕೇಂದ್ರ, ದೇವಾಲಯ ಎಂಬ ಅರ್ಥಗಳು ಹೊಂದಿಕೊಂಡು ಪಾವಿತ್ರ್ಯವನ್ನು ಪಡೆದುಕೊಂಡು ಬಂದಿವೆ. ವಿಶ್ವವಿದ್ಯಾಲಯವನ್ನು Temple of learning ಎಂದು ಕರೆದಿರುವುದೂ ಗಮನಾರ್ಹವಾಗಿದೆ.

ಅಮರಕೋಶದ ಪ್ರಕಾರ ಮಠ – "ಛಾತ್ರಾದಿನಿಲಯ" ಮತ್ತು "ಮಠಂತಿಛಾತ್ರಾದಯ; ಅತ್ರಮಠ;" ಎಂದಿರುವುದರಿಂದ ವಿದ್ಯಾರ್ಥಿಗಳು ವಾಸಿಸುವ ಸ್ಥಳವೆಂದು ಮಠಕ್ಕೆ ಅರ್ಥೈಸಲಾಗಿದೆ.

ಆಧುನಿಕ ನಿಘಂಟುಕಾರರಾದ ಡಾ. ಆಪ್ಟೆಯವರು ತಮ್ಮ ನಿಘಂಟಿನಲ್ಲಿ ಮಠ ಎಂಬ ಪದಕ್ಕೆ "The hut of an ascetic, a place of learning a college, a temple monastery" ಎಂದು ಅರ್ಥೈಯಿಸಿದ್ದಾರೆ. ಡಾ. ರೆವೆರೆಂಡ್ ಕಿಟಲ್‌ರ ಪ್ರಕಾರ "ಮಠ A hut, a devotees call, residence of a company of asceties, a residence of Guru, a school" ಇತ್ಯಾದಿ ಅರ್ಥಗಳನ್ನು ಕಂಡುಕೊಳ್ಳಬಹುದು.

"ತಟದಲ್ಲಾಗಲಿ ಮಠದಲ್ಲಾಗಲಿ ಹಠದ ಜಂಗಮನ ಕಾಟ ತಪ್ಪುವುದಿಲ್ಲ" ಎಂಬ ಗಾದೆ ಮಾತನ್ನು ಉದಾಹರಣೆಗಾಗಿ ತೆಗೆದುಕೊಂಡಾಗ ಮಠದಲ್ಲಿ ಜಂಗಮರು ಅಥವಾ ಗುರುಗಳು ವಿಧಿ-ವಿಧಾನಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರೆಂಬ ಅಂಶ ವಿದಿತವಾಗುತ್ತದೆ. ಬಿ.ಕೆ. ಮುಖರ್ಜಿಯವರ ಪ್ರಕಾರ "ಕಾನೂನಿನ ವ್ಯವಹಾರಗಳಲ್ಲಿ ಮಠವೆಂದರೆ ಆತ್ಮವಿದ್ಯೆಯಲ್ಲಿ ಸಾಧನೆಯನ್ನು ಗಳಿಸಿದ ಒಬ್ಬ ಮಹಾವ್ಯಕ್ತಿಯ ಹಿರಿತನದಲ್ಲಿ ನಡೆಯುವ ಒಂದು ಧಾರ್ಮಿಕ ಸಂಸ್ಥೆ. ಒಂದು ವಿಶಿಷ್ಟ ಪಂಗಡಕ್ಕೆ ಸೇರಿದ ಸೃಷ್ಟಿಕರ ಅನುಕೂಲಕ್ಕಾಗಿ ಸ್ಥಾಪಿತವಾದದ್ದು. ಇವರು ಅಂಥ ಮಠದ ಅಧಿಪತಿಯ ಶಿಷ್ಯರಾಗಿ, ಆಧ್ಯಾತ್ಮಿಕ ವಿದ್ಯೆಯ ಜಿಜ್ಞಾಸುಗಳಾಗಿರುತ್ತಾರೆ.

ಮಠಗಳನ್ನು ಆಂಗ್ಲ ಭಾಷೆಯಲ್ಲಿ "ಮೊನೆಸ್ಟರಿಸ್(monasteris)" ಎಂದು ಕರೆಯುತ್ತಾರೆ. ಇಂಗ್ಲೀಷ ಶಬ್ದದ ಮೂಲವಾದ ಗ್ರೀಕ್ ಶಬ್ದವನ್ನು ಪರಿಶೀಲಿಸಿದರೆ ಇದರ ಅರ್ಥ 'ಏಕಾಂತತೆ'. ಪ್ರಪಂಚ ಬಂಧನಗಳಿಂದ ಹೊರಗಾಗಿ, ಏಕಾಗ್ರಚಿತ್ತದಿಂದ ಧ್ಯಾನದಲ್ಲಿ ನಿರತವಾಗಲು ಏಕಾಂತತೆಯ ಅಗತ್ಯವೆಂಬ ಭಾವನೆ ಎಲ್ಲ ಧರ್ಮಗಳಲ್ಲಿಯೂ ಮೂಡಿ ಬಂದಿದೆ.

ಪಾಶ್ಚಾತ್ಯರ ದೃಷ್ಟಿಯಲ್ಲಿ ಮಠವನ್ನು ಕುರಿತು ವಿವೇಚಿಸುವುದಾದರೆ 'ಮಠ'ವನ್ನು 'ಧರ್ಮ' ಎಂಬ ಅರ್ಥದಲ್ಲಿ ವ್ಯಾಖ್ಯಾನಿಸುತ್ತಾರೆ. 'ಧರ್ಮ' ಎಂಬ ಪದಕ್ಕೆ ಆಂಗ್ಲಭಾಷೆಯಲ್ಲಿ 'ರಿಲಿಜನ್' ಎಂಬ ಪದವಿದೆ. ಈ ಪದದ ಮೂಲ ಶಬ್ದವನ್ನು ಪರಿಶೀಲಿಸಿದರೆ 'ಧರ್ಮ' ಎನ್ನುವ 'ಕಾನಸೆಪ್ಟ್'ನ ಪರಿವ್ಯಾಪ್ತಿ ತಿಳಿಯುತ್ತದೆ. 'ರಿಲಿಜನ್' ಎಂಬ ಆಂಗ್ಲ ಪದವು ಲ್ಯಾಟಿನ್ ಭಾಷೆಯ 'ರೆಲಿಗಾರ' ಎಂಬ ಪದದಿಂದ ಬಂದಿದ್ದು, ಇದರ ಅರ್ಥ ಬಂಧಿಸುವುದು ಅಥವಾ ಸೇರಿಸಿ ಕಟ್ಟುವುದು ಎಂದು ಸೂಚಿಸುತ್ತದೆ.

೧೨ನೇ ಶತಮಾನದ ಶಿವಶರಣರು 'ಮಠ'ದ ಬಗ್ಗೆ ಇಟ್ಟುಕೊಂಡಿರುವ ಪರಿಕಲ್ಪನೆಯನ್ನು ಹೀಗೆ ಗುರುತಿಸಬಹುದು.

"ತನ್ನ ಮಠಕ್ಕೆ ತಾ ಬಹಡೆ ಮುನಿಸುಂಟೇ ?
ಕೂಡಲಸಂಗನ ಶರಣರ ಮನೆಯ ಬಾಗಿಲುಗಾಹಿ ನಾನಾಗಿರ್ದು
ಕರ್ತರು ಗೃಹಕ್ಕೆ ಬಂದೆಡೆ ಬೇಕು ಬೇಡೆನ್ನೆ . . . . . !"[೧]

ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಮಠ-ಮನೆ-ಗೃಹ ಮೂರು ಶಬ್ದಗಳು ಬಳಕೆಯಾಗಿದ್ದು ಜೊತೆಗೆ ಅವುಗಳ ಪದಪುಂಜ ಬೇರೆಯಾಗಿದ್ದರೆ ಅರ್ಥವ್ಯಾಪ್ತಿಯಿಂದ ಗ್ರಹಿಸಿದಾಗ ಅವೆಲ್ಲವೂ 'ವಾಸ'ದ ಅರ್ಥ ಕಲ್ಪನೆಯನ್ನೇ ಸೂಚಿಸುತ್ತವೆ.

"ಭಕ್ತನ ಮಠವೆಂದು ಮುನ್ನವೆ ಅಳಿದಳುದು ಬಂದು
ಮತ್ತೊಂದ ಮತ್ತೊಂದು ನೆನೆವರೆ ?"[೨]

ಎಂಬ ಹಡಪದಪ್ಪಣ್ಣನ ವಚನದಲ್ಲಿಯೂ ಮಠವೆಂದರೆ 'ಮನೆ' ಎಂಬ ಅರ್ಥವನ್ನೇ ವ್ಯಕ್ತಪಡಿಸಲಾಗಿದೆ.

"ಲಿಂಗಾರ್ಚನೆಯ ಮಾಡುವೆನಯ್ಯ
ಜಂಗಮು ಮಠಕ್ಕೆ ಬರಬೇಕೆಂದು
ಆ ಜಂಗಮವೆನ್ನ ಮಠಕ್ಕೆ ಬಂದಡೆ
ಲಿಂಗಾರ್ಚನೆಯ ಮಾಡಿ ಜಂಗಮಾರ್ಚನೆಯ ಮಾಡುವೆನು".[೩]

ಎಂಬಲ್ಲಿ ಸಹ ಮಠದ ಅರ್ಥ ಭಿನ್ನತೆಯನ್ನು ಸೂಚಿಸುವುದಿಲ್ಲ. ಚೆನ್ನಬಸವಣ್ಣನವರು ಕಲ್ಯಾಣದ ಮಹಾತ್ಮೆ ಕುರಿತು ರಚಿಸಿದ ಶಾಸನ ವಚನದಲ್ಲಿ ಮಠದ ಕುರಿತು ವಿವರಿಸುತ್ತಾ –

"ಎರಡು ಲಕ್ಷ ಎಂಬತ್ತೈದು ಸಾವಿರದ ಏಳನೂರ ಇಪ್ಪತ್ತು
ದಾಸೋಹದ ಮಠಂಗಳು"[೪] . . . .

ಎನ್ನುವಾಗ 'ಮಠ'ಗಳು ದಾಸೋಹದ ಮುಖ್ಯ ಕೇಂದ್ರಗಳಾಗಿ, ಶರಣರ ವಾಸದ ಮನೆಯೆಂಬ ಹಿನ್ನೆಲೆಯಲ್ಲಿ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ.

"ಜಡರುಗಳ ಮನದ ಕತ್ತಲೆಯ ಕಳೆಯಬೇಕೆಂದು
ಕಟ್ಟಿತ್ತು ಕಲ್ಯಾಣದಲ್ಲಿ ಮಹಾಮಠವು"[೫] . . . .

ಎಂಬ ಚೆನ್ನಬಸವಣ್ಣನವರ ವಚನದಲ್ಲಿ 'ಮಠ' ಎಂದರೆ 'ಮಹಾಮನೆ' ಅಥವಾ 'ಅನುಭವ ಮಂಟಪ' ಎಂಬ ಅರ್ಥವನ್ನು ಪಡೆದುಕೊಂಡಿದ್ದು, ಶರಣರ ಸಾಮೂಹಿಕ ವೈಚಾರಿಕ ಚರ್ಚೆಗಳ ಕೇಂದ್ರವಾಗಿತ್ತೆಂದು ತಿಳಿಯಲು ಅವಕಾಶವಿದೆ. ಹೀಗಾಗಿ 'ಮಠ' ವ್ಯಾಪ್ತಿ ವಿಶಾಲತೆಯನ್ನು ಪಡೆದುಕೊಂಡಿದೆ.

ಮಠಗಳ ಸ್ವರೂಪ :

ಮಠಗಳು ಧಾರ್ಮಿಕ ಸಂಸ್ಥೆಗಳಾಗಿ ಹುಟ್ಟಿಕೊಂಡು ಸಾಹಿತ್ಯ ಶಿಕ್ಷಣವನ್ನು ಕೊಡುವ ವಿದ್ಯಾಕೇಂದ್ರಗಳಾಗಿದ್ದವು. ಕೆಲವು ಮಠಗಳು ಧರ್ಮ ಪ್ರಚಾರದ ಕೇಂದ್ರಗಳಾಗಿದ್ದವು. ಹೀಗೆ ಮಠಗಳ ಸ್ವರೂಪ ವೇದಕಾಲದಲ್ಲಿ ಧರ್ಮಛತ್ರಗಳ ರೂಪದಲ್ಲಿ, ಉಪನಿಷತ್ತುಗಳ ಕಾಲದಲ್ಲಿ ಗುರು-ಶಿಷ್ಯರ ಮೂಲಕ ಗುರುಕುಲಗಳ ರೂಪದಲ್ಲಿ, ತದನಂತರ ವಿದ್ಯಾಕೇಂದ್ರಗಳ ರೂಪದಲ್ಲಿ ಬೆಳೆದು ಬಂದಿವೆ. ಜೈನ, ವೈದಿಕ ಧರ್ಮಗಳಿಗಿಂತ ಶೈವಧರ್ಮದಲ್ಲಿ ಮಠಗಳ ಸಂಖ್ಯೆ ಹೆಚ್ಚಾಗಿದೆ. ವೀರಶೈವದಲ್ಲಿ ಊರಿಗೊಂದು ಮಠ, ಓಣಿಗೊಂದು ಮಠ, ಮನೆಗೊಂದು ಮಠಗಳಿರುವುದನ್ನು ಕಾಣುತ್ತೇವೆ. ಶರಣರ ಆಂದೋಲನದಲ್ಲಿ ಮಠಗಳು ಸಾಮಾಜಿಕ ಸ್ವರೂಪವನ್ನು ಪಡೆದುಕೊಂಡು ಸಾಲಿಮಠ, ಓದಿಸೂಮಠ ಹಾಗೂ ವಿರಕ್ತಮಠ ಎಂಬ ರೂಪದಲ್ಲಿ ಬೆಳೆದು ಬಂದಿವೆ.

೧] **ಸಾಲಿಮಠ** : ಸಾಲಿ ಎಂದರೆ ಕೇವಲ ವಿದ್ಯಾಭ್ಯಾಸ ನೀಡುವ ಸಂಸ್ಥೆ ಎಂಬ ಸೀಮಿತ ಅರ್ಥವನ್ನು ಪಡೆಯದೆ, ಕೈಗಾರಿಕೆಯ ಸ್ಥಳ, ಕೆಲಸದ ಮನೆ ಎಂಬರ್ಥದಲ್ಲಿ ಸಾಲಿಮಠಗಳು ಕೈಗಾರಿಕೆಯ ಶಾಲೆಗಳಾಗಿದ್ದವು. ಇಲ್ಲಿ ವೃತ್ತಿಗೆ ಸಂಬಂಧಿಸಿದ ವಿಷಯವನ್ನು ಕಲಿಸಿಕೊಡಲಾಗುತ್ತಿತ್ತು.

ಉದಾ:- ರುದ್ರಾಕ್ಷಿ, ವಿಭೂತಿ, ತಾಡೋಲೆ, ಕಂಬಳಿ, ಕಂಥೆ, ಚೌಕ, ಪತ್ರಿ ಮಾರುವ ಬುಟ್ಟಿ ಇವುಗಳನ್ನು ತಯಾರಿಸುವ ಜ್ಞಾನವನ್ನು ನೀಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಬಂದವುಗಳೇ – ರುದ್ರಾಕ್ಷಿಮಠ, ಓಲೆಮಠ, ಘಟ್ಟಿಮಠ, ಕಂತಿಮಠ, ಚೌಕಿಮಠ ಮುಂತಾದವು.

೨] **ಓದಿಸುಮಠ** : ಹೆಸರೇ ಸೂಚಿಸುವಂತೆ ಇವು ವಿದ್ಯಾಭ್ಯಾಸದ ಇನ್ನೊಂದು ವ್ಯವಸ್ಥೆಯಾಗಿದ್ದವು. ಸಾಲಿಮಠದಲ್ಲಿ ಮೂಲಶಿಕ್ಷಣ ಪಡೆದರೆ, ಇಲ್ಲಿ ಪ್ರೌಢಶಿಕ್ಷಣ ಪಡೆಯಲವಕಾಶವಿತ್ತು. ಓದಿಸುಮಠಗಳಲ್ಲಿ ಸಾಹಿತ್ಯ ಸೃಷ್ಟಿಯೂ ಆಗುತ್ತಿತ್ತು. ಏಕಪ್ರತಿಯಲ್ಲಿರುವ ಪ್ರಾಚೀನ ಕೃತಿಗಳನ್ನು ಇಲ್ಲಿ ಅನೇಕ ಪ್ರತಿಗಳಾಗಿ ಮಾಡುತ್ತಿದ್ದ ಕಾರಣ ಇವು ಸಾರ್ವಜನಿಕ ಗ್ರಂಥಾಲಯಗಳಾಗಿ ಕಾರ್ಯ ನಿರ್ವಹಿಸುತ್ತಿದ್ದವು.

೩] **ವಿರಕ್ತಮಠ** :

ಸಾಲಿಮಠಗಳಲ್ಲಿ	–	ಮೂಲಶಿಕ್ಷಣ
ಓದಿಸುಮಠಗಳಲ್ಲಿ	–	ಪ್ರೌಢಶಿಕ್ಷಣ ಪಡೆದ ಮೇಲೆ
ವಿರಕ್ತಮಠಗಳಲ್ಲಿ	–	ಉನ್ನತ ಶಿಕ್ಷಣ ಪಡೆಯುತ್ತಿದ್ದರು.

ಸಮಾಜದ ಮೇಲೆ ಪ್ರಭುತ್ವ ಸಾಧಿಸಿಕೊಂಡ ಈ ಮಠಗಳು ಧರ್ಮಸಮ್ಮೇಳನ, ವಿಚಾರಗೋಷ್ಠಿ ಹಾಗೂ ಉಪನ್ಯಾಸ ಶಿಬಿರಗಳನ್ನು ನಡೆಸುತ್ತಿದ್ದವು. ಅಲ್ಲದೇ ವಿರಕ್ತಮಠಗಳು ಸಾಹಿತ್ಯಸೃಷ್ಟಿ ಮತ್ತು ಸಾಹಿತ್ಯ ಸಂಪಾದನೆಯಲ್ಲಿಯೂ ತೊಡಗಿಕೊಂಡಿವೆ.

ಒಟ್ಟಿನಲ್ಲಿ ಕೇವಲ ಧರ್ಮಪ್ರಚಾರಕ್ಕೆ ಮಾತ್ರ ಮೀಸಲಾಗಿದ್ದ ಮಠಗಳು ಕಾಲಕಾಲಕ್ಕೆ ಸಾಮಾಜಿಕ, ಸಾಹಿತ್ಯಿಕ ನೆಲೆಗಳಲ್ಲಿ ನಿಂತು ಕೆಲಸ ಮಾಡುವುದರ ಮೂಲಕ ಸಾಂಸ್ಕೃತಿಕ ಕೇಂದ್ರಗಳಾಗಿ ರೂಪತಳೆದಿರುವುದು ಕಂಡುಬರುತ್ತದೆ.

ಮಠದ ಮಹತ್ವ :

ಐತಿಹಾಸಿಕ ಪರಂಪರೆಯನ್ನು ಹೊಂದಿದ ಮಠಗಳು ಸಮಾಜದ ಅವಿಭಾಜ್ಯ ಅಂಗಗಳೆಂದೇ ಹೇಳಬಹುದು. ಸಮಷ್ಠಿ ಜೀವನದ ಒಳಿತಿಗಾಗಿ ದುಡಿಯುವ ಹಿನ್ನೆಲೆಯಲ್ಲಿ ಮಠಗಳು ಸಾಮಾಜಿಕ ವಲಯವನ್ನು ಆವರಿಸಿಕೊಂಡಿವೆ. ಮಾನವನ ಜೀವನವು ಸುಸಂಘಟಿತವಾಗಿ ಬೆಳೆಯುವುದಕ್ಕೆ ಅರಮನೆಯಷ್ಟೇ ಪ್ರೇರಣೆಯನ್ನು ನೀಡಿದವುಗಳು – ಗುರುಮನೆಗಳೆಂದು ಹೇಳಬಹುದು. ಸಮಾಜದೊಂದಿಗೆ ನಿಕಟ ಸಂಬಂಧವನ್ನು ಇಟ್ಟುಕೊಂಡ ಮಠಮಾನ್ಯಗಳು ಸಮಾಜದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಭಾರತದ ಪ್ರಥಮ ರಾಷ್ಟ್ರಪತಿ ಡಾ॥ ಬಾಬು

ರಾಜೇಂದ್ರಪ್ರಸಾದ ಅವರು ಹೇಳುವಂತೆ – "ಮಠವೆಂದರೆ ಕೇವಲ ಒಂದು ಭವ್ಯ ಕಟ್ಟಡವಲ್ಲ. ಅದೊಂದು ಧಾರ್ಮಿಕ ಸಾಧನವಾಗಿ ಸಮಸ್ತ ಸಮಾಜವೇ ಸಾಂಘಿಕವಾಗಿ ವಿಕಾಸಗೊಳ್ಳುವಂತೆ ಮಾಡುವ ಪೂಜಾಗೃಹ ಎನ್ನಬಹುದು. ಮಠಗಳು ಮಾನವ ಕುಲದ ನಂದಾದೀಪಗಳು, ಮಠಗಳಿಂದಲೇ ಭಾರತದ ಸಂಸ್ಕೃತಿ ಉಳಿದಿರುವುದು. ಎಂಬುದು ಸತ್ಯ."[೬]

ಸನಾತನ ಧರ್ಮದ ತಳಹದಿಯ ಮೇಲೆ ವಿಶ್ವಧರ್ಮದ ವೇದಿಕೆ ರಚಿಸಲು ಪ್ರಯತ್ನಿಸಿದವು ಮಠಗಳು. ಮಠಗಳಲ್ಲಿ ದಾಸೋಹ ಪದ್ಧತಿ ಆದರ್ಶವಾಗಿ ಬೆಳೆಯಿತು. ಮಠಗಳಲ್ಲಿ ಊಟಕ್ಕೆ ಬಂದವರಿಗೆ ಜಾತಿ-ಮತದ ಪ್ರಶ್ನೆ ಇರಲಿಲ್ಲ. ಪಾಠಕ್ಕೆ ಬಂದವರಿಗೆ ಕುಲ-ಗೋತ್ರ ಇರಲಿಲ್ಲ. ಇದರ ಮುಖ್ಯ ಉದ್ದೇಶವೇನೆಂದರೆ – ಸಮಾಜದ ಘಟಕಗಳಾದ ವ್ಯಕ್ತಿಗಳು ಸುಧಾರಿಸದೇ ಇದ್ದಲ್ಲಿ ಸಮಾಜ ಎಂದಿಗೂ ಸುಧಾರಿಸುವುದಿಲ್ಲ. ಶುದ್ಧ, ಸಿದ್ಧ, ಸಮೃದ್ಧ ಸಮಾಜ ರಚನೆಯಾಗಬೇಕಾದರೆ ವ್ಯಕ್ತಿಗೆ ಶಿಕ್ಷಣ ಬೇಕು. ಶಿಕ್ಷಣ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿ ಸಾಧಿಸುತ್ತದೆ. ಈ ಘನ ಉದ್ದೇಶದ ಹಿನ್ನೆಲೆಯಲ್ಲಿ ಮಠಗಳು ಉದಾತ್ತ ಸೇವೆಯನ್ನು ಸಲ್ಲಿಸಿವೆ.

ಮಠಗಳು ಸಮಾಜದಲ್ಲಿ ಸೌಹಾರ್ದತೆ, ಶಾಂತಿ, ಸಮಾಧಾನ ನೆಲೆಸಲು ಕಾರಣೀಭೂತವಾಗಿವೆ. ಸುಶಿಕ್ಷಿತ ವ್ಯಕ್ತಿಗಳೇ ಪ್ರಜಾಪ್ರಭುತ್ವದ ಅಡಿಗಲ್ಲು ಎಂಬುದನ್ನು ಮಠಗಳು ಅರಿತುಕೊಂಡು ಧರ್ಮಾಭಿಮಾನದ ಜೊತೆಗೆ ರಾಷ್ಟ್ರಾಭಿಮಾನ ಬೆಳೆಸಲು ಪ್ರಯತ್ನಿಸುತ್ತಿವೆ. ವ್ಯಕ್ತಿ ಸುಸಂಸ್ಕೃತನಾದರೆ, ವ್ಯಕ್ತಿಗಳ ಸಮೂಹ, ಸಮಾಜ ಸುಸಂಸ್ಕೃತವಾಗುತ್ತವೆ. ಸುಸಂಸ್ಕೃತ ಸಮಾಜದಿಂದ ರಾಜ್ಯ, ರಾಷ್ಟ್ರ, ಸಮೃದ್ಧವಾಗಿರಲು ಸಾಧ್ಯ. ಸಮಾಜದ ಘಟಕಗಳಾದ ವ್ಯಕ್ತಿಗಳು ಸುಧಾರಿಸದೇ ಇದ್ದಲ್ಲಿ ಸಮಾಜ ಎಂದಿಗೂ ಸುಧಾರಿಸುವುದಿಲ್ಲ ಎಂಬುದನ್ನು ಮನಗಂಡು ಮಠದ ಸ್ವಾಮಿಗಳು ಕ್ರೀಯಾಶೀಲ, ಸತ್ಯಶೀಲ ಸಮಾಜ ರಚನೆಯಲ್ಲಿ ತೊಡಗಿಕೊಳ್ಳುವುದರ ಮೂಲಕ ಸಮಾಜಕ್ಕೆ ಮಾದರಿಯಾಗಿದ್ದಾರೆ. ಶಿವಾನುಭವ ಗೋಷ್ಠಿ, ಧರ್ಮ ಸಮ್ಮೇಳನ, ಚರ್ಚಾಗೋಷ್ಠಿಗಳನ್ನು ಏರ್ಪಡಿಸುವ ಮೂಲಕ ಜನಜಾಗೃತಿಯನ್ನುಂಟು ಮಾಡಿದ್ದಾರೆ. ಕೇವಲ ಸಾಮಾಜಿಕವಾಗಿ ಮಾತ್ರ ತಮ್ಮ ಕರ್ತವ್ಯ ನಿರ್ವಹಿಸದೇ ಸಾಹಿತ್ಯ ಸೇವೆಗೂ ತಮ್ಮನ್ನು ಮುಡುಪಾಗಿರಿಸಿಕೊಂಡಿದ್ದಾರೆ.

"ಸಾಹಿತ್ಯ ಸೇವೆಯಲ್ಲಂತೂ ಮಠಗಳದ್ದು ಸಿಂಹಪಾಲು ಎಂದೇ ಹೇಳಬಹುದು. ಕನ್ನಡ ಸಾಹಿತ್ಯಕ್ಕೆ ಮಠಗಳು ಒಲಿದು ಬಂದ ಭಾಗ್ಯವಾದವು. ಕವಿಗಳಿಗೆ ಮಠಗಳೇ ಗರಡಿಮನೆಯಾದವು. ಮಠಗಳು ಸಾಹಿತ್ಯ ಪ್ರಸಾರದ ಪ್ರಚುರ ಮಾಧ್ಯಮಗಳಾದವು."[೭] ಹಸ್ತಪ್ರತಿ ಭಂಡಾರಗಳಾದವು. ಅಹಿಂಸಾ ಪ್ರತಿಪಾದನೆಯತ್ತ ಹೆಜ್ಜೆ ಹಾಕಿದ ಕೆಲವು ಮಠಗಳು ನ್ಯಾಯಪೀಠಗಳಾದವು. ಪ್ರಸಾದನಿಲಯಗಳ ಮೂಲಕ ಅನ್ನದಾಸೋಹ, ಜ್ಞಾನದಾಸೋಹ ಪದ್ಧತಿಗಳನ್ನು ಅನುಷ್ಠಾನಗೊಳಿಸಿದವು. ಮಠದ ಸ್ವಾಮಿಗಳು ಸ್ಥಾವರ ಮೂರ್ತಿಗಳಾಗದೇ ಸದಾ ಚಲಿಸುವ ಚೈತನ್ಯಶೀಲ ವ್ಯಕ್ತಿಗಳಾಗಿ ಕಾರ್ಯ ನಿರ್ವಹಿಸಿದುದು. ಶಿಕ್ಷಣ, ಸಾಹಿತ್ಯ, ಧಾರ್ಮಿಕ

ಕಾರ್ಯಕ್ರಮಗಳು, ಕೋಮು ಸೌಹಾರ್ದಕ್ಕಾಗಿ ಶಾಂತಿಸಭೆಗಳು, ಸರ್ವಧರ್ಮಕಲ್ಯಾಣ ಮಂಟಪಗಳು, ಬರಗಾಲದಲ್ಲಿ ಗಂಜಿ ಕೇಂದ್ರಗಳು, ಪರಿಹಾರನಿಧಿ ಸಂಗ್ರಹ ಕಾರ್ಯಗಳನ್ನು ಕೈಗೊಳ್ಳುವ ಮೂಲಕ ಮಠಗಳು ಸಮಾಜದ ಶಕ್ತಿ ಕೇಂದ್ರಗಳಾಗಿವೆ.

ಶೂನ್ಯ ಪರಂಪರೆಯಲ್ಲಿ ಹುಟ್ಟಿಕೊಂಡ ಐದು ಸಮಯಗಳಲ್ಲಿ ಮುಂದೆ ಅನೇಕ ಶಾಖಾಮಠಗಳು ಹುಟ್ಟಿಕೊಂಡವು. ಅವುಗಳಲ್ಲಿ ಮುರುಘಾ ಪರಂಪರೆಯ ಮಠಗಳ ಸಂಖ್ಯೆ ಹಿರಿದಾದುದು. ಇದುವರೆಗೆ ಎಲ್ಲ ಸಮಯಗಳು ಸೇರಿ ೧೪೦ ಮಠಗಳನ್ನು ಗುರುತಿಸಲಾಗಿದೆ. ಅವುಗಳಲ್ಲಿ ೮೫ ಮುರುಘಾ ಪರಂಪರೆಗೆ ಸೇರಿದವಾಗಿರುವುದು ಅದರ ಸಂಖ್ಯಾ ಬಲಕ್ಕೆ ಸಾಕ್ಷಿಯಾಗಿದೆ.

ಪ್ರಸ್ತುತ ಅಧ್ಯಯನ ಮುರುಘಾ ಪರಂಪರೆಗೆ ಸೀಮಿತವಾದ ಕಾರಣ ಈ ಪರಂಪರೆಯಲ್ಲಿ ಬರುವ ೮೫ ಮಠಗಳಲ್ಲಿ ಪ್ರಮುಖವಾದ ಮಠಗಳನ್ನು ಕುರಿತು ಮಾತ್ರ ಇಲ್ಲಿ ವಿವೇಚನೆ ಮಾಡಲಾಗಿದೆ. ಅವು ಕೆಳಗಿನಂತಿವೆ.

ಚಿತ್ರದುರ್ಗದ ಬೃಹನ್ಮಠ

ಧಾರವಾಡದ ಮುರುಘಾಮಠ

ಅಥಣಿಯ ಶಿವಯೋಗೀಶ್ವರ ಮಠ

ಮುಳಗುಂದದ ಗವಿಮಠ

ಬೆಂಗಳೂರಿನ ಸರ್ವಭೂಷಣಮಠ

ಸೋಮವಾರಪೇಟೆಯ ಅಬ್ಬಿಮಠ

ಕೊಲ್ಲಾಪುರದ ಚಿತ್ರದುರ್ಗಮಠ

ದಾವಣಗೆರೆಯ ವಿರಕ್ತಮಠ

ಮಾದಾಪುರದ ಮುರುಘಾಮಠ

ಆನಂದಪುರಂದ ಮುರುಘರಾಜೇಂದ್ರ ಸಂಸ್ಥಾನಮಠ

ಚಿತ್ರದುರ್ಗದ ಬೃಹನ್ಮಠ

ಕರ್ನಾಟಕದ ಸುಪ್ರಸಿದ್ಧ ಮಠಗಳಲ್ಲಿ ಒಂದಾದ ಚಿತ್ರದುರ್ಗದ ಬೃಹನ್ಮಠವು ಮುರುಘಾ ಸಮಯದ ಮೂಲಮಠ. ಮೂರು ಶತಮಾನಗಳಿಗೂ ಹೆಚ್ಚು ಪ್ರಾಚೀನತೆಯನ್ನು ಹೊಂದಿರುವ ಈ ಮಠ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಸಮಾಜಕ್ಕೆ ಒಂದು ಹೊಸ ಆಯಾಮವನ್ನು ಕಲ್ಪಿಸಿಕೊಟ್ಟಿದೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಈ ಮಠದ ಹೆಸರು ಹಲವು ರೂಪಗಳಲ್ಲಿ ಅರ್ಥವ್ಯಾಪ್ತಿಯನ್ನು ಪಡೆದುಕೊಂಡಿದೆ.

"ಮುರಿಗೆಮಠ, ಮುರಿಗಾಮಠ, ಮುರುಗಿಮಠ, ಮುರುಘಾಮಠ, ವಿಶಾಲಮಠ, ಮಹಾಮಠ, ಬೃಹನ್ಮಠ ಮುಂತಾದ ಹೆಸರಿನ ರೂಪಗಳುಳ್ಳ ಈ ಮಠ ಮಹಾಶರಣ ಅಲ್ಲಮಪ್ರಭುವಿನಿಂದ ಮೊದಲ್ಗೊಂಡು ಚೆನ್ನಬಸವಣ್ಣನಿಂದ ಮುಂದುವರೆದು ಮತ್ತೆ ಅನೇಕರಿಂದ ಬೆಳೆದು ಬಂದು ಶೂನ್ಯಮಠ ಎಂದು ಹೆಸರು ಪಡೆದಿದೆ. ಶರಣರು ಪ್ರತಿಪಾದಿಸಿದ ಶೂನ್ಯತತ್ವದ ಮಾರ್ಗದಲ್ಲಿ ಬಂದದ್ದೆನ್ನುವ ಅರ್ಥದಲ್ಲಿ ಆ ಹೆಸರು ಇದಕ್ಕೆ ಸಲ್ಲುತ್ತದೆ."[೮] ಈ ಪೀಠ ಪರಂಪರೆಯು ಅಲ್ಲಮಪ್ರಭು, ಚೆನ್ನಬಸವಣ್ಣ, ಮುಂದೆ ತೋಂಟದ ಸಿದ್ಧಲಿಂಗಯತಿಗಳು, ಅವರ ಶಿಷ್ಯರಾದ ಬೋಳ ಬಸವೇಶ್ವರ, ಗುಮ್ಮಳಾಪುರದ ಸಿದ್ಧಲಿಂಗದೇವರು, ಗೂಳೂರು ಸಿದ್ಧವೀರಣ್ಣೊಡೆಯರು, ಗಗನದಯ್ಯಗಳು, ಕಟ್ಟಿಗೆಹಳ್ಳಿ ಸಿದ್ಧಲಿಂಗರು, ಮುರಿಗೆ ಶಾಂತವೀರರು, ಇಮ್ಮಡಿ ಮುರಿಗಾ ಗುರುಸಿದ್ಧರು, ಜಯದೇವಸ್ವಾಮಿಗಳು, ಜಯವಿಭವಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು, ಸಧ್ಯಕ್ಕೆ ಡಾ॥ ಶಿವಮೂರ್ತಿ ಮುರುಘಾ ಶರಣರ ಅಧ್ಯಕ್ಷತೆಯಲ್ಲಿ ಶ್ರೀಮಠವು ಮುಂದೆ ಸಾಗುತ್ತದೆ.

ಹೆಸರಿಗೆ ತಕ್ಕಂತೆ ಬೃಹನ್ಮಠವು ಬೃಹತ್ ಮತ್ತು ಮಹತ್ ಸಾಧನೆಗಳಿಂದ ವಿಶಿಷ್ಟ ಸ್ಥಾನವನ್ನು ಪಡೆದುಕೊಂಡಿದೆ. ಇಬ್ಬರು ಪಾಶ್ಚಿಮಾತ್ಯ ವಿದ್ವಾಂಸರು ಹೇಳಿರುವ ಮಾತುಗಳು ಶ್ರೀಮಠದ ಸ್ಥಾನ, ಹಿರಿಮೆ-ಗರಿಮೆಯನ್ನು ಗುರುತಿಸುವ ದಾಖಲೆಗಳಾಗಿವೆ.

ಇತಿಹಾಸಕಾರರಾದ ಇ.ಪಿ. ರೈಸರು ವೀರಶೈವ ಧರ್ಮದ ಕುರಿತು ಚರ್ಚಿಸುತ್ತಾ ೧೩೯೯ ರಿಂದ ೧೬೧೦ರ ವರೆಗೆ ಆಳ್ವಿಕೆ ನಡೆಸಿದ ಮೈಸೂರು ಮತ್ತು ಉಮ್ಮತ್ತೂರಿನ ಒಡೆಯರು ಹಾಗೂ ೧೫೫೦ ರಿಂದ ೧೭೬೩ರ ವರೆಗೆ ಆಳಿದ ಕೆಳದಿ, ಇಕ್ಕೇರಿ ನಾಯಕರು ಲಿಂಗಾಯತ ಧರ್ಮವನ್ನು ಸಂಸ್ಥಾನದ ಧರ್ಮವನ್ನಾಗಿ ಸ್ವೀಕರಿಸಿದ್ದರೆಂದು ದಾಖಲಿಸುತ್ತಾರೆ. ಹಾಗೆಯೇ ಮೈಸೂರು ಸಂಸ್ಥಾನದಲ್ಲಿ ವೀರಶೈವದ ಪ್ರಮುಖ ಮಠ ಚಿತ್ರದುರ್ಗದಲ್ಲಿತ್ತೆಂದು ಉಲ್ಲೇಖ ಮಾಡುತ್ತಾರೆ.[೯] ದಕ್ಷಿಣ ಭಾರತದ ಜಾತಿ-ಜನಾಂಗಗಳ ಕುರಿತು ಸರ್ವೇಕ್ಷಣೆ ಮಾಡಿದ ಎಡ್ಗರ್ ಥರ್ಸ್ಟನ್ ಎಂಬುವರು ಲಿಂಗಾಯತ ಮಠಗಳ ಕುರಿತು ಪ್ರಸ್ತಾಪಿಸುತ್ತಾ "ಎಲ್ಲಾ ವಿರಕ್ತ ಮಠಗಳು ಚಿತ್ರದುರ್ಗದ ಮುರುಗಾ ಮಠಕ್ಕೆ ನೇರವಾಗಿ ಸಂಬಂಧ ಇಟ್ಟುಕೊಂಡಿದ್ದವು"[೧೦] ಎಂದು ದಾಖಲಿಸುತ್ತಾನೆ.

ಶ್ರೀಮಠವು ಸ್ಥಾಪನೆಗೊಂಡ ಮೂರುದಶಕಗಳಲ್ಲಿ ಜನರ ಮೇಲೆ ಗಾಢವಾದ ಧಾರ್ಮಿಕ ಪ್ರಭಾವ ಬೀರಿದ್ದರ ಫಲವಾಗಿ ದಕ್ಷಿಣ ಭಾರತದ ಅನೇಕ ಕಡೆಗಳಲ್ಲಿ ನೂರಾರು ಶಾಖಾಮಠಗಳು ಜನ್ಮ ತಾಳಿದವು. ಸ್ಥಳೀಯ ಭಕ್ತಾದಿಗಳು ಆಯಾ ಶಾಖಾಮಠಗಳನ್ನು ಭಕ್ತಿ ಪ್ರೀತಿಯ ದ್ಯೋತಕವಾಗಿ ಮುರಿಗಿ ಮಠಗಳೆಂದೇ ಕರೆಯಲಾರಂಭಿಸಿದರು. ಈ ಮಠದ ಸ್ವಾಮಿಗಳು ಅನೇಕ ರಾಜಮನೆತನಗಳಿಗೆ, ಸಾಮಂತ ಅರಸರಿಗೆ, ಮಾಂಡಲೀಕರಿಗೆ, ಪಾಳೇಗಾರರಿಗೆ ಆಸ್ಥಾನ ಗುರುಗಳಾದ ಕಾರಣ ಹೆಚ್ಚು ಗೌರವ, ಮನ್ನಣೆಯ ಜೊತೆಗೆ ಮಠದ ವ್ಯಾಪ್ತಿ ವಿಸ್ತಾರಗೊಂಡಿತು. ಕೆಳದಿಯ ಅರಸರು, ಕೊಡಗು, ಸೋದೆ, ಹರಪನಹಳ್ಳಿ, ಮತ್ತೋಡು, ತರೀಕೆರೆ, ಹಾಗಲವಾಡಿ, ಸವಣೂರು, ಶಿರಸಂಗಿ, ಲಕ್ಷ್ಮೇಶ್ವರ, ಮೈಸೂರು, ಉಮ್ಮತ್ತೂರು, ಪುಂಗನೂರು, ಕೊಲ್ಲಾಪುರ ಮುಂತಾದ ಸಂಸ್ಥಾನಗಳ ದೊರೆಗಳು, ಮುಸ್ಲಿಂ ನವಾಬರು, ಎಲ್ಲಾ ಸಮುದಾಯಗಳ ಜನರು ವಿರಕ್ತ ಮಠಗಳಿಗೆ ಗೌರವಾದರ ತೋರಿಸುವ ಜೊತೆಗೆ ಧನಸಹಾಯವನ್ನು ಮಾಡಿದ್ದಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಬೃಹನ್ಮಠ ಒಂದು ಜಾತ್ಯಾತೀತ ಮಠ ಎಂಬುದು ವೇದ್ಯವಾಗುತ್ತದೆ.

ಶ್ರೀಮಠದ ಗುರುಪರಂಪರೆಯು ಸುಮಾರು ೧೭ ನೇ ಶತಮಾನದಿಂದ ಇಂದಿನವರೆಗೂ ಅವಿಚ್ಛಿನ್ನವಾಗಿ ನಡೆದು ಬಂದಿದೆ. ಈ ಪೀಠದ ಇತಿಹಾಸವನ್ನು ತಿಳಿಯುವಲ್ಲಿ ಗುರುಪೀಠದ ಶಿಷ್ಯಪರಂಪರೆಯಲ್ಲಿ ಬರುವ ಜ್ವಲಕಂಠ ಮಹಂತಸ್ವಾಮಿಗಳ ನಾಂದ್ಯ, ಸೋಮಶೇಖರ ಶಿವಯೋಗಿಯ ಪಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನದ ಟೀಕೆ ಮತ್ತು ಮಹಾದೇವನ 'ಮಹಲಿಂಗೇಂದ್ರವಿಜಯ'ಗಳು ಬಹುಮುಖ್ಯ ಆಕರಗಳಾಗಿವೆ. ಇವುಗಳ ನಿರೂಪಣೆಯಂತೆ ಶೂನ್ಯಪೀಠ ಪರಂಪರೆಯನ್ನು ಹೀಗೆ ಸಂಗ್ರಹಿಸಬಹುದು.

(೧)ಜ್ವಲಕಂಠ ಮಹಂತಯ್ಯನಂತೆ ಗುರುಪರಂಪರೆ –

ಸಿದ್ಧಲಿಂಗ
↓
ಬೋಳಬಸವ
↓
ಗಗನದಾರ್ಯ
↓
ಸಿದ್ಧ ಕಟ್ಟಿಗೆಹಳ್ಳಿದೇವ
↓
ಮುರಿಗೆಯದೇವ (ಮುರಿಗೆ ಶಾಂತವೀರ)

(೨) ಸೋಮಶೇಖರ ಶಿವಯೋಗಿಯ ಪ್ರಕಾರ ಗುರುಪರಂಪರೆ –

ತೋಂಟದ ಸಿದ್ಧಲಿಂಗೇಶ್ವರ
↓
ಬೋಳ ಬಸವೇಶ್ವರ
↓
ಗೂಳೂರ ಸಿದ್ಧಲಿಂಗಯ್ಯ
↓
ಗುಮ್ಮಳಾಪುರದ ಸಿದ್ಧಲಿಂಗಯ್ಯ
↓
ಗಗನದಯ್ಯ
↓
ಕಟ್ಟಿಗೆಹಳ್ಳಿ ಸಿದ್ಧಲಿಂಗ
↓
ಮುರಿಗೆ ಶಾಂತವೀರೇಶ್ವರ

(೩) ಮಹದೇವಕವಿ ನಿರೂಪಿಸಿದಂತೆ ಗುರುಪರಂಪರೆ –

ಚೆನ್ನಬಸವ
↓
ತೋಂಟದ ಸಿದ್ಧಲಿಂಗ
↓
ಬೋಳಬಸವ
↓
ಸಿದ್ಧವೀರೇಶ
↓
ಗೂಳೂರು ಸಿದ್ಧವೀರೇಶ
↓
ಗಗನದಸ್ವಾಮಿ
↓
ಕಟ್ಟಿಗೆಹಳ್ಳಿ ಸ್ವಾಮಿ
↓
ಮುರಿಗೆ ರಾಜೇಂದ್ರ (ಮುರಿಗೆ ಶಾಂತವೀರ)[೧೧]

(೪)ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಮಹಾಮಠದ ಮುರುಘಾಸಮಯ ಪಟ್ಟವಲ್ಲರಿ

	ಸ್ವಾಮಿಗಳು	ಐಕ್ಯಸ್ಥಳ	ಕಾಲ
೧.	ಶ್ರೀ ಮುರಿಗಾ ಶಾಂತವೀರಸ್ವಾಮಿಗಳು	ಚಿತ್ರದುರ್ಗ	೧೬೪೦-೧೭೦೩
೨.	ಶ್ರೀ ಇಮ್ಮಡಿ ಮುರಿಗಾ ಗುರುಸಿದ್ಧರು	ಆನಂದಪುರ	೧೭೦೩-೧೭೨೯
೩.	ಶ್ರೀ ಸ್ವಾದಿ ಚೆನ್ನಬಸವಸ್ವಾಮಿಗಳು	ಹಿರೇಮಾಗಡಿ	೧೭೨೯-೧೯೩೦
೪.	ಶ್ರೀ ಶಿರಹಟ್ಟಿ ಸಿದ್ಧಲಿಂಗಸ್ವಾಮಿಗಳು	ಚಂಗಡಹಳ್ಳಿ	೧೭೩೦-೧೭೫೭
೫.	ಶ್ರೀ ಗುರುಪಾದಸ್ವಾಮಿಗಳು	ಗುರುಮಠಕಲ್ಲು	೧೭೫೭-೧೭೬೦
೬.	ಶ್ರೀ ಮೂರುಸಾವಿರದ ಸಣ್ಣಗುರುಪಾದ ಸ್ವಾಮಿಗಳು	ಚಿತ್ರದುರ್ಗ	೧೭೬೦-೧೭೭೯
೭.	ಶ್ರೀ ಮೂರುಸಾವಿರದ ಸಿದ್ಧಲಿಂಗಸ್ವಾಮಿಗಳು	ಹಿರೇಮಾಗಡಿ	೧೭೭೯-೧೭೯೦
೮.	ಶ್ರೀ ಒಪ್ಪತ್ತಿನ ಚನ್ನವೀರಸ್ವಾಮಿಗಳು	ತಿಳವಳ್ಳಿ	೧೭೯೦
೯.	ಶ್ರೀ ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು	ಹಿರೇಮಾಗಡಿ	೧೭೯೦-೧೮೦೦
೧೦.	ಶ್ರೀ ನೈಘಂಟಿನ ಸಿದ್ಧಬಸವಸ್ವಾಮಿಗಳು	ಹಾವೇರಿ	೧೮೦೦-೧೮೨೦
೧೧.	ಶ್ರೀ ಸಣ್ಣಬರಹದ ರಾಚವಟಿಸ್ವಾಮಿಗಳು	ಚಿತ್ರದುರ್ಗ	೧೮೨೦-೧೮೩೦
೧೨.	ಶ್ರೀ ಸಾವಳಿಗೆ ಗುರುಶಾಂತಸ್ವಾಮಿಗಳು	ಚಿತ್ರದುರ್ಗ	೧೮೩೫-೧೮೪೦
೧೩.	ಶ್ರೀ ಸಣ್ಣಪಾದದ ಚೆನ್ನವೀರಸ್ವಾಮಿಗಳು	ಚಿತ್ರದುರ್ಗ	೧೮೪೦-೧೮೫೪
೧೪.	ಶ್ರೀ ಮಹಾಲಿಂಗಸ್ವಾಮಿಗಳು	ಶಿರಸಂಗಿ	೧೮೫೪-೧೮೭೦
೧೫.	ಶ್ರೀ ಹೆಬ್ಬಾಳು ರುದ್ರಸ್ವಾಮಿಗಳು	ಚಿತ್ರದುರ್ಗ	೧೮೭೦-೧೮೮೧
೧೬.	ಶ್ರೀ ಮುಪ್ಪಿನೇಂದ್ರ ಸ್ವಾಮಿಗಳು	ಬ್ಯಾಡಗಿ	೧೮೮೧-೧೯೦೨
೧೭.	ಶ್ರೀ ಜಯದೇವಸ್ವಾಮಿಗಳು	ದಾವಣಗೆರೆ	೧೯೦೩-೧೯೪೯
೧೮.	ಶ್ರೀ ಜಯವಿಭವ ಸ್ವಾಮಿಗಳು	ಚಿತ್ರದುರ್ಗ	೧೯೪೯-೧೯೬೪
೧೯.	ಶ್ರೀ ಶಿವಮೂರ್ತಿ ಶರಣರು	-	-

ಮುರಿಗಾ ಶಾಂತವೀರಸ್ವಾಮಿಗಳು – ಚಿತ್ರದುರ್ಗ ಬೃಹನ್ಮಠದ ಪ್ರಥಮ ಪೀಠಾಧ್ಯಕ್ಷರು. ಇವರು ಮುರುಗೆಯದೇಶಿಕ, ಮುರಿಗೆಗುರು, ಮುರಿಗೆಸ್ವಾಮಿ, ಮುರಿಗೆ ರಾಯ ಎಂಬ ಬೇರೆ ಬೇರೆ ಹೆಸರುಗಳಿಂದ ಪ್ರಸಿದ್ಧರಾಗಿರುವರು. ಮುರಿಗೆ ಶಾಂತವೀರರ ಜೀವನದ ವಿವರಗಳನ್ನು ಇಮ್ಮಡಿ ಗುರುಸಿದ್ಧರ 'ಮುರಿಗೆ ತಾರಾವಳಿ', ಮಹದೇವಕವಿಯ "ಮಹಲಿಂಗೇಂದ್ರವಿಜಯ" ಹಾಗೂ ಅಜ್ಞಾತ

ಕರ್ತೃವಿನ "ಮುರಿಗೆಸ್ವಾಮಿಗಳ ಯಕ್ಷಗಾನ" ಈ ಕೃತಿಗಳಿಂದ ಸಂಗ್ರಹಿಸಬಹುದು. (ಶಾಂತವೀರರ ಕುರಿತಾದ ವಿವರಣೆಯನ್ನು ಅಧ್ಯಾಯ -೪ರಲ್ಲಿ ವಿವರಿಸಿದೆ.)

ಚಿತ್ರದುರ್ಗದ ಪಾಳೆಗಾರರಾಧ ಭರಮಣ್ಣನಾಯಕನು ಶಾಂತವೀರರ ಅನುಗ್ರಹಕ್ಕೆ ಪಾತ್ರನಾಗಿ, ತನ್ನ ಭಕ್ತಿ-ಗೌರವಗಳ ಧ್ಯೋತಕವಾಗಿ ಎರಡು ಮಠಗಳನ್ನು ಕಟ್ಟಿಸಿಕೊಟ್ಟನು. ಒಂದು ಬೆಟ್ಟದ ಮೇಲೆ ಚಂಪಕ ಸಿದ್ದೇಶನ ದೇವಾಲಯದ ಹತ್ತಿರದಲ್ಲಿ ೩೬೦ ಅಂಕಣದ ಬೃಹತ್‌ಮಠ, ಇನ್ನೊಂದು ಪೂಜ್ಯರು ಯಾವತ್ತೂ ಚಿತ್ರದುರ್ಗದಲ್ಲಿಯೇ ನೆಲೆಸಬೇಕು. ಅನುದಿನವೂ ಅವರ ದರ್ಶನವಾಗಬೇಕೆಂಬ ಉದ್ದೇಶದಿಂದ ಬೆಟ್ಟದ ಪಶ್ಚಿಮಭಾಗದಲ್ಲಿ ಇನ್ನೊಂದು ಮಠವನ್ನು ಕಟ್ಟಿಸಿಕೊಡುತ್ತಾನೆ. ಹೀಗೆ ಶಾಂತವೀರರ ಕಾಲದಲ್ಲಿಯೇ ಚರವಾಗಿದ್ದ ಶೂನ್ಯಮಠವು ಸ್ಥಿರೀಕರಣಗೊಳ್ಳುತ್ತದೆ. ಬೆಟ್ಟದ ತಪ್ಪಲಿನಲ್ಲಿರುವ ಮಠದಲ್ಲಿ ವಾಸವಾಗಿದ್ದ ಸ್ವಾಮಿಗಳು ಜುಲೈ ೫, ೧೭೦೩ ರಲ್ಲಿ ಲಿಂಗೈಕ್ಯರಾಗುತ್ತಾರೆ. ಅದೇ ಸ್ಥಳದಲ್ಲಿ ಶ್ರೀಗಳ ಸಮಾಧಿ ಮಾಡಿ, ಆ ಮಂಟಪದ ಮೇಲೆ ಗದ್ದುಗೆ ನಿರ್ಮಿಸಲಾಗಿದೆ.

ಗುರುಗಳು ತಮ್ಮ ಜೀವಿತಾವಧಿಯಲ್ಲಿ ಧಾರ್ಮಿಕ ಪ್ರವಾಸ ಕೈಕೊಂಡ ಸಂದರ್ಭಧಲ್ಲಿ ಮೈಸೂರಿನ ದೊಡ್ಡದೇವರಾಜ, ಚಿಕ್ಕದೇವರಾಜ ಅರಸರು ಭಾಗಾ ನಗರದ (ಗೋಲ್ಕಂಡ) ಕುತುಬ್ ಬಾದಷಾಹ, ಮರಾಠ ಛತ್ರಪತಿ ಶಿವಾಜಿ, ಗದಗದ ಡಾ. ಕಿನದೇಸಾಯಿ, ಹರಪನಹಳ್ಳಿಯ ಬಸವಂತನಾಯಕ, ಹಾವನೂರಿನ ರಾಜ ಮುಂತಾದವರು ಶ್ರೀಗಳನ್ನು ಗೌರವಿಸಿ ಸತ್ಕರಿಸಿದ್ದನ್ನು ಇತಿಹಾಸದುದ್ದಕ್ಕೂ ತಿಳಿದುಕೊಂಡಿದ್ದೇವೆ. ಇಷ್ಟೇ ಅಲ್ಲದೇ ಬೇರೆ ಬೇರೆ ರಾಜ್ಯಗಳ ಭಕ್ತರು ಸಹ ಸ್ವಾಮಿಗಳ ಕೃಪೆಗೆ ಪಾತ್ರರಾಗಿರುವುದುಂಟು. ಗುರು ನಮನ, ಭಕ್ತಿ ಪುರಸ್ಕಾರಗಳನ್ನು ಸಲ್ಲಿಸಿದ್ದುಂಟು. ಹೀಗೆ ಸ್ವಾಮಿಗಳು ಅನೇಕ ಧಾರ್ಮಿಕ ಕೆಲಸ ಕಾರ್ಯಗಳ ಜೊತೆಗೆ ವೇದಾಂತ ಮತ್ತು ಸಾಹಿತ್ಯದ ಕುರಿತು ಅನೇಕ ಕೃತಿಗಳನ್ನು ರಚಿಸಿದ್ದಾರೆ. ವಾಗ್ಮಿಗಳು, ಜ್ಞಾನ ಸಂಪನ್ನರು, ಪೂಜಾನಿಷ್ಠರು, ತಪಸ್ವಿಗಳೂ ಆಗಿದ್ದ ಇಂತಹ ಶ್ರೇಷ್ಠ ಗುರುಗಳಿಂದ ಚಿತ್ರದುರ್ಗದ ಘನತೆ ಹೆಚ್ಚಿದೆ.

ಇಮ್ಮಡಿ ಮುರಿಗಾ ಗುರುಸಿದ್ಧರು : ಶ್ರೀ ಮುರಿಗಾಶಾಂತವೀರ ಸ್ವಾಮಿಗಳ ತರುವಾಯ ಈ ಪೀಠವನ್ನು ಮುಂದುವರೆಸಿಕೊಂಡು ಹೋದವರು. ಶ್ರೀ ಇಮ್ಮಡಿ ಮುರುಗಿ ಸ್ವಾಮಿಗಳೆಂದೇ ಪ್ರಸಿದ್ಧಿ ಪಡೆದಿರುವ ಶ್ರೀ ಗುರುಸಿದ್ಧಸ್ವಾಮಿಗಳು ಈ ಪೂಜ್ಯರನ್ನು "ಭರಮಣ್ಣ ನಾಯಕ ಮತ್ತು ಈತನ ಮಗ ಹಿರೇಮದಕರಿನಾಯಕ (೧೭೨೧-೧೭೪೮) 'ರಾಜಗುರು' ಎಂಬ ಅಭಿದಾನವನ್ನಿತ್ತು ಗೌರವಿಸಿದರು. ಮಠದ ಅಧಿಕಾರಿಗಳಾಗಿ, ಪೀಠದ ಒಡೆಯರಾಗಿ ೧೭೫೯ರ ವರೆಗೂ ಮುಂದುವರೆಸಿಕೊಂಡು ಬಂದ ಪೂಜ್ಯರು ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಕಾಂಡ ಪಂಡಿತರು. ಕಾವ್ಯ ರಚನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಪ್ರಸಿದ್ಧ ಕವಿವರ್ಯರು. ಕನ್ನಡ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲಿಯೂ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಲೋಕವನ್ನು ಶ್ರೀಮಂತಗೊಳಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ.

ಇವರ ಮುಂದಿನ ಉತ್ತರಾಧಿಕಾರಿಗಳಾದ ಶ್ರೀ ಸ್ವಾದಿ ಚನ್ನಬಸವಸ್ವಾಮಿಗಳು ಶಿರಹಟ್ಟಿ ಶ್ರೀ ಸಿದ್ಧಲಿಂಗ ಸ್ವಾಮಿಗಳು, ನಾಯಕನಹಟ್ಟಿ ದೊಡ್ಡ ಗುರುಪಾದ ಸ್ವಾಮಿಗಳು, ಮೂರುಸಾವಿರದ ಶ್ರೀ ಸಣ್ಣ ಗುರುಪಾದ ಸ್ವಾಮಿಗಳನ್ನು ಚಿತ್ರದುರ್ಗದ ಪಾಳೆಗಾರರಾದ ಹಿರೇಮದಕರಿನಾಯಕ, ಕಸ್ತೂರಿ ರಂಗಪ್ಪ ನಾಯಕ (೧೭೫೪-೧೭೭೯), ಕಡೇ ಮದಕರಿನಾಯಕರು (೧೭೫೪-೧೭೭೯) ರಾಜಗುರುಗಳೆಂಬ ಅಭಿದಾನವನ್ನಿತ್ತು ಗೌರವಾದಗಳಿಂದ ಸ್ಮರಿಸುತ್ತಾ ಬಂದಿದ್ದಾರೆ. ೧೭೭೯ರಲ್ಲಿ ಚಿತ್ರದುರ್ಗದ ಪಾಳೇಗಾರಿಕೆ ಪತನಗೊಂಡ ನಂತರವೂ ಮಠದ ಪರಂಪರೆ ಮುಂದುವರೆದುಕೊಂಡು ಬಂದಿದೆ."[೧೨] ಇವರುಗಳ ಕುರಿತಾಗಿ ಹೆಚ್ಚಿನ ಮಾಹಿತಿ ಲಭ್ಯವಿಲ್ಲದ ಕಾರಣ ಜಯದೇವ ಸ್ವಾಮಿಗಳಿಂದ ಮುಂದುವರೆಸಲಾಗಿದೆ.

ಜಯದೇವ ಸ್ವಾಮಿಗಳು : ಶ್ರೀ ಜಯದೇವ ಸ್ವಾಮಿಗಳು ಅಧಿಕಾರವಹಿಸಿಕೊಂಡ ನಂತರ ಬೃಹನ್ಮಠ ಕರ್ನಾಟಕ ಅಷ್ಟೇ ಅಲ್ಲದೇ ಮುಂಬೈ ಪ್ರಾಂತದಲ್ಲೂ ಹೆಚ್ಚು ಪ್ರಸಾರ ಪಡೆದುಕೊಂಡಿತು. ಆ ಭಾಗದಲ್ಲಿ ಸಂಚಾರ ಕೈಗೊಂಡ ಶ್ರೀಗಳು ಅನೇಕ ವಿದ್ಯಾಸಂಸ್ಥೆಗಳು, ವಾಚನಾಲಯಗಳು, ಪ್ರಸಾದ ನಿಲಯಗಳು, ಆಸ್ಪತ್ರೆ ಮುಂತಾದ ಜನೋಪಯೋಗಿ ಕಾರ್ಯಗಳನ್ನು ಮಾಡಿ ಸಮಾಜವನ್ನು ಮುನ್ನಡೆಸಿದರು. ಇವರ ಸಾಮಾಜಿಕ ಕಾರ್ಯ ಚಟುವಟಿಕೆಯನ್ನು ಅರಿತ ಮಹಾತ್ಮ ಗಾಂಧೀಜಿಯವರು ೧೯೩೪ರಲ್ಲಿ ಹಾವೇರಿಯಲ್ಲಿ ಶ್ರೀ ಜಯದೇವ ಸ್ವಾಮಿಗಳು ಭೇಟಿ ಮಾಡಿ ರಾಷ್ಟ್ರದ ಸ್ವಾತಂತ್ರ್ಯ ಚಳುವಳಿ ಹಾಗೂ ಅಸ್ಪೃಶ್ಯತೆ ನಿವಾರಣೆ ಮುಂತಾದ ವಿಚಾರಗಳ ಕುರಿತು ಗಂಭೀರವಾದ ಚರ್ಚೆ ನಡೆಸಿದ್ದು ಮಠದ ಇತಿಹಾಸದಲ್ಲಿ ದಾಖಲಾರ್ಹ ವಿಚಾರವಾಗಿದೆ. ಗುರುಗಳು ಗಾಂಧೀಜಿಯವರ ಪ್ರಭಾವಕ್ಕೆ ಒಳಗಾಗಿ ಸ್ವಯಂ ಖಾದಿಧಾರಿಗಳಾಗಲು ನಿರ್ಧರಿಸಿ ಗಾಂಧಿ ಚಳುವಳಿಯನ್ನು ಬೆಂಬಲಿಸಿದ ಕೀರ್ತಿಯೂ ಇದೆ. ಧಾರ್ಮಿಕ ಕಾರ್ಯಗಳ ಜೊತೆಗೆ ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕಾರ್ಯಗಳಿಗೆ ಶ್ರಮಿಸಿದ ಜಯದೇವ ಸ್ವಾಮಿಗಳು ಆಧ್ಯಾತ್ಮದ ಜೊತೆಗೆ ಆದರ್ಶ ವ್ಯಕ್ತಿಗಳಾಗಿ ನಮ್ಮ ಮುಂದೆ ನಿಲ್ಲುತ್ತಾರೆ.

ಜಯವಿಭವ ಸ್ವಾಮಿಗಳು : ೧೫೫೭ರಲ್ಲಿ ಶ್ರೀ ಜಯದೇವ ಸ್ವಾಮಿಗಳು ಲಿಂಗೈಕ್ಯರಾದ ನಂತರ ಅವರ ಉತ್ತರಾಧಿಕಾರಿಗಳಾಗಿ "ಶ್ರೀ ಜಯವಿಭವ ಸ್ವಾಮಿಗಳು ಬಂದರು. ೧೯೧೨ ಮೇ ೨೩ ರಂದು ನವಲಗುಂದ ತಾಲೂಕಿನ ಬಲ್ಲರವಾಡದಲ್ಲಿ ಜನಿಸಿದ ಇವರು, ಗದಗ ತಾಲೂಕಿನ ಮುಳುಗುಂದದ ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ಮಠದಲ್ಲಿ ಸಂಸ್ಕಾರವನ್ನು ಪಡೆದರು. ನಂತರ ಶ್ರೀ ಜಯದೇವ ಸ್ವಾಮಿಗಳ ಕೃಪಾಶೀರ್ವಾದದಿಂದಾಗಿ ೧೯೪೯ರಲ್ಲಿ ಮುರುಘಾಮಠದ ಉತ್ತರಾಧಿಕಾರಿಯಾಗಿ ಶೂನ್ಯಸಿಂಹಾಸನಪೀಠವನ್ನು ಅಲಂಕರಿಸಿಕೊಂಡರು. ಜಯದೇವ ಸ್ವಾಮಿಗಳಲ್ಲಿರುವ ಅಂತಃಕರಣ ಮಾನವೀಯ ಮೌಲ್ಯಗಳನ್ನು ಶ್ರೀ ಜಯವಿಭವ ಸ್ವಾಮಿಗಳು ಕರಗತಮಾಡಿಕೊಂಡರು. ೧೯೬೨ರಲ್ಲಿ ಭಾರತ ಚೀನಾ ಆಕ್ರಮಣದ ಸಂಕಷ್ಟದಲ್ಲಿದ್ದಾಗ ಮಠದ

ಚಿನ್ನದ ಕಿರೀಟ, ಉಂಗುರಗಳು ಹಾಗೂ ಸಾವಿರಾರು ರೂಪಾಯಿ ಬೆಲೆಬಾಳುವ ಆಭರಣಗಳನ್ನು, ನಗದು ರೂಪದ ಹಣವನ್ನು ಸರಕಾರಕ್ಕೆ ದೇಣಿಗೆಯಾಗಿ ನೀಡಿದರು. ಇದು ಅವರ ರಾಷ್ಟ್ರಾಭಿಮಾನಕ್ಕೆ ಹಿಡಿದ ಕನ್ನಡಿಯಾಗಿದೆ. ಇವರ ಅವಧಿಯಲ್ಲಿ ಮಠ ಆರ್ಥಿಕವಾಗಿ ಸದೃಢತೆಯನ್ನು ಪಡೆದು ಪ್ರಸಿದ್ಧಿ ಹೊಂದಿತು. ತಮ್ಮ ಜೀವಿತಾವಧಿಯ ಕೊನೆಯ ಹಂತದವರೆಗೂ ಬಸವಾದಿ ಶಿವಶರಣರ ತತ್ವಗಳನ್ನು ಪಾಲಿಸುತ್ತ ಇತರರಿಗೂ ಪಾಲಿಸುವಂತೆ ಪ್ರೇರೆಪಿಸಿದ ಜಯವಿಭವ ಸ್ವಾಮಿಗಳು ೧೯೬೪ರಲ್ಲಿ ಲಿಂಗೈಕ್ಯರಾದರು.

ಮಲ್ಲಿಕಾರ್ಜುನ ಸ್ವಾಮಿಗಳು: ಶ್ರೀ ಜಯವಿಭವ ಸ್ವಾಮಿಗಳ ತರುವಾಯ ಉತ್ತರಾಧಿಕಾರಿಯಾದವರು ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು. ಕಾಶಿಯಲ್ಲಿ ಸಂಸ್ಕೃತ, ತತ್ವಶಾಸ್ತ್ರ ಮತ್ತು ಶಿವಶರಣರ ಸಾಹಿತ್ಯದಲ್ಲಿ ಪರಿಣಿತಿ ಪಡೆದುಕೊಂಡವರು. ಶೈಕ್ಷಣಿಕ ಚಟುವಟಿಕೆಗಳಿಗೆ ಹೊಸ ತಿರುವನ್ನು ಹಾಕಿಕೊಟ್ಟವರು. ಎಸ್.ಜೆ.ಎಂ. ವಿದ್ಯಾಪೀಠವನ್ನು ಸ್ಥಾಪಿಸಿ ಇದರ ಮೂಲಕ ಕಲಾ, ವಾಣಿಜ್ಯ, ವಿಜ್ಞಾನ, ಫಾರ್ಮಸಿ, ಇಂಜನಿಯರಿಂಗ್, ದಂತ ವಿಜ್ಞಾನ ಕಾಲೇಜುಗಳಲ್ಲದೆ ರಾಜ್ಯದ ಎಲ್ಲಾ ಕಡೆ ವೃತ್ತಿಪರ ಶಿಕ್ಷಣ ಸಂಸ್ಥೆಗಳನ್ನು, ವಿದ್ಯಾರ್ಥಿನಿಲಯಗಳನ್ನು ಸ್ಥಾಪನೆ ಮಾಡಿದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಪ್ರತಿಭಾವಂತ ವಿದ್ಯಾರ್ಥಿಗಳನ್ನು, ಸಂಶೋಧಕರನ್ನು, ಲೇಖಕರನ್ನು, ವ್ಯಕ್ತಿಗಳನ್ನು ಪ್ರೋತ್ಸಾಹಿಸಿ ಪ್ರೇರೇಪಿಸಿದವರು. ೧೯೯೧ ರಲ್ಲಿ ಶಿವಮೂರ್ತಿ ಸ್ವಾಮಿಗಳಿಗೆ ಅಧಿಕಾರ ವಹಿಸಿ ೩ ವರ್ಷಗಳ ಕಾಲ ವಿಶ್ರಾಂತ ಜೀವನ ನಡೆಸಿ ೧೯೯೪ರಲ್ಲಿ ವಿರಾಜಮಾನರಾದರು.”[೧೩]

ಡಾ॥ ಶಿವಮೂರ್ತಿ ಮುರುಘಾ ಶರಣರು : “೧೯೯೧ರಲ್ಲಿ ಶಿವಮೂರ್ತಿ ಶರಣರು ಬೃಹನ್ಮಠದ ಅಧಿಕಾರ ವಹಿಸಿಕೊಂಡರು. ಅದಕ್ಕೂ ಮೊದಲು ಶಿರ್ಶಿ, ಹಾವೇರಿ ಶಾಖಾಮಠಗಳ ಉಸ್ತುವಾರಿಯನ್ನು ನೋಡಿಕೊಂಡಿದ್ದರು. ಹಾವೇರಿಯಲ್ಲಿ ಅಂಧ-ಅನಾಥರ ವಸತಿಶಾಲೆಯನ್ನು ತೆರೆದರು. ಸಾಮಾಜಿಕ, ಸಾಹಿತ್ಯಿಕ ಹಾಗೂ ವೈಚಾರಿಕ ವಿಚಾರಧಾರೆಗಳಿಂದ ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದರು. ೧೯೯೪ರಲ್ಲಿ ಹಿರಿಯ ಸ್ವಾಮಿಗಳ ನಿಧನಾ ನಂತರ ಹಿರಿಯ ಮಠದ ದೊಡ್ಡ ಹೊರೆ ಹೆಗಲ ಮೇಲೆ ಬಿತ್ತು. ಉತ್ಸಾಹಿಗಳೂ, ಶರಣಪಂಥದ ಕಟ್ಟಾ ಅನುಯಾಯಿಗಳೂ ಆಗಿರುವ ಇವರು ಅನೇಕ ಯೋಜನೆಗಳನ್ನು ಪೂರೈಸಿ ಹೊಸಮಾರ್ಗವನ್ನು ತೋರಿಸಿಕೊಟ್ಟರು. ಹಳ್ಳಿಗರಿಗೆ ಪ್ರಯೋಜನವಾಗುವ ದೃಷ್ಟಿಯಿಂದ ಶ್ರೀ ಬಸವೇಶ್ವರ ಗ್ರಾಮ ವಿಕಾಸ ವೇದಿಕೆಯನ್ನು ಸ್ಥಾಪಿಸಿ ಗ್ರಾಮಗಳಲ್ಲಿ ಪಾದಯಾತ್ರೆಯನ್ನು ಹಮ್ಮಿಕೊಂಡು ಉಪದೇಶ, ದೃಶ್ಯರೂಪಕಗಳನ್ನು ನೀಡುತ್ತಾ ಜನರಲ್ಲಿ ಜಾಗೃತಿಯನ್ನುಂಟು ಮಾಡಿದರು. ವರದಕ್ಷಿಣೆ, ಮೂಢನಂಬಿಕೆ, ದುಶ್ಚಟಗಳನ್ನು ಬಿಡುವಂತೆ ಸಲಹೆ ನೀಡಿದರು. ಸಾಕ್ಷರತೆ, ವೈಚಾರಿಕತೆ, ಪರಿಸರ ಸಂರಕ್ಷಣೆ ಇವುಗಳ ಕುರಿತು ತಿಳುವಳಿಕೆ ನೀಡುವುದರ ಮುಖಾಂತರ ಚಳುವಳಿಯನ್ನೇ ಆರಂಭಿಸಿದರು. ಬಸವಕೇಂದ್ರವನ್ನು ಸ್ಥಾಪಿಸಿ, ನಾಡಿನ ನಾನಾ ಭಾಗಗಳಲ್ಲಿ ಇದರ ಉಪಶಾಖೆಗಳನ್ನು ಪ್ರಾರಂಭಿಸಿ “ಶರಣರ

ಸಂದೇಶಗಳನ್ನು ಸಾರುವ ವೇದಿಕೆಗಳನ್ನಾಗಿ ರೂಪಿಸಿ ವಚನ ಸಾಹಿತ್ಯವನ್ನು ಸಾಮಾನ್ಯರಿಗೂ ತಿಳಿಸುವ ಕಾರ್ಯವನ್ನು ಮಾಡಿದ್ದಾರೆ.[೧೪]

ಶ್ರೀ ಶಿವಮೂರ್ತಿ ಶರಣರು ಪ್ರಾರಂಭಿಸಿದ 'ಶರಣ ಸ್ಮರಣೋತ್ಸವ' ಕಾರ್ಯಕ್ರಮ ವಿಶೇಷತೆಯಿಂದ ಕೂಡಿದ್ದು, ಶರಣರ ಜೀವನ ಭೋದನೆ, ಸಂದೇಶಗಳನ್ನು ಜೊತೆಗೆ ಸಾಧನೆಗಳನ್ನು ಸ್ಮರಿಸಿ ಶರಣ ಸಾಹಿತ್ಯ ಸಂವರ್ಧನೆಗೆ ಶರಣ ಸ್ಮರಣೋತ್ಸವವನ್ನು ಪ್ರಾರಂಭಿಸುವ ಮೂಲಕ ಪ್ರತಿತಿಂಗಳು ೫ ರಂದು ಸಾಯಂಕಾಲ ಮಠದ ಆವರಣದಲ್ಲಿ ಕಾರ್ಯಕ್ರಮವನ್ನು ರೂಪಿಸಿ ವೈಚಾರಿಕ ಉಪನ್ಯಾಸಗಳು, ಶರಣತತ್ವ ಪ್ರಸಾರ ಮಾಡುವ ವೇದಿಕೆಯನ್ನಾಗಿ ರೂಪಿಸಿಕೊಂಡಿದ್ದಾರೆ. ಈ ಕಾರ್ಯಕ್ರಮವನ್ನು ನಾಡಿನ ತಮ್ಮ ಎಲ್ಲಾ ಶಾಖಾಮಠಗಳಲ್ಲಿಯೂ ಇಂತಹ ಶರಣರ ವಿಚಾರಧಾರೆಗಳನ್ನು ಸಮಾಜಕ್ಕೆ ತೋರ್ಪಡಿಸುವ ಮೂಲಕ ಅವುಗಳನ್ನು ಪಾಲಿಸಲು ತಿಳುವಳಿಕೆಯನ್ನು ಮೂಡಿಸಿದರು.

ವೀರಶೈವ ಧರ್ಮದ ಕುರಿತು ತಿಳುವಳಿಕೆ ನೀಡುವ ಸಲುವಾಗಿ ಸಹಜ ಶಿವಯೋಗ ಶಿಬಿರವನ್ನು ಪ್ರಾರಂಭಿಸಿ ಆ ಮೂಲಕ ೧೦ ದಿನಗಳ ಕಾಲ ಈ ಶಿಬಿರದಲ್ಲಿ ಶರಣರ ಆಚಾರ-ವಿಚಾರ, ಪಂಚಾಚಾರ, ಷಟ್‌ಸ್ಥಲ, ಅಷ್ಟಾವರಣ ಲಿಂಗಪೂಜೆ, ಶಿವಯೋಗ ಮುಂತಾದ ಧಾರ್ಮಿಕ ತತ್ವಗಳನ್ನು ಮನವರಿಕೆ ಮಾಡಿಕೊಡುವ ಮೂಲಕ ಅರಿವನ್ನು ಮೂಡಿಸುವದು. ಶಿಬಿರದಲ್ಲಿ ಎಲ್ಲಾ ಜಾತಿ-ಧರ್ಮ, ಮತ-ಪಂಥದವರಿಗೂ ಮುಕ್ತ ಅವಕಾಶ ನೀಡುವುದರ ಜೊತೆಗೆ ಶರಣ ಧರ್ಮ ಅಧ್ಯಯನ ಆಸಕ್ತರಿಗೆ ಬಸವ ತತ್ವ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಮನೆಯಲ್ಲಿ ಮಹಾಮನೆ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆಸಕ್ತರ ಗಮನ ಸೆಳೆದಿದ್ದಾರೆ. ಪ್ರಸಿದ್ಧ ದಸರ ಉತ್ಸವವನ್ನು ಶರಣ ಸಾಂಸ್ಕೃತಿಕ ಉತ್ಸವ ಎಂದು ಮರುನಾಮಕರಣ ಮಾಡಿ ಅದರ ಅಡಿಯಲ್ಲಿ ಅನೇಕ ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಂಡು ಸಮಾಜದ ಶ್ರೇಯಸ್ಸಿಗೆ ಕಾರಣೀಭೂತರಾಗಿದ್ದಾರೆ.

ಶ್ರೀ ಶಿವಮೂರ್ತಿ ಶರಣರು ಅವೈಜ್ಞಾನಿಕ, ವಾಸ್ತವಿಕವಲ್ಲದ ವಿಚಾರಗಳ ವಿರೋಧಿಗಳು ಸಂಪ್ರದಾಯ, ಮೂಢನಂಬಿಕೆಗಳನ್ನು ಧಿಕ್ಕರಿಸಿ ವೈಚಾರಿಕ ಪ್ರಜ್ಞೆಯಿಂದ ವಾಸ್ತವ ಬದುಕನ್ನು ರೂಢಿಗತಮಾಡಿಕೊಂಡವರು. ಪರಂಪರೆಯನ್ನು ಮುರಿದು ಕಟ್ಟುವ ಆಲೋಚನೆ ಶರಣರ ನಿಲುವುಗಳಲ್ಲೊಂದಾಗಿ ರೂಪಗೊಂಡಿದೆ. "ಜಗದ್ಗುರು" ಎಂಬ ಪದವನ್ನು ತ್ಯಜಿಸುವ ಮೂಲಕ ಬಸವೇಶ್ವರರೇ ಜಗದ್ಗುರು ಅವರ ಅನುಯಾಯಿಗಳಾಗಿ ತತ್ವ ಪ್ರಚಾರಕರು ನಾವು ಎಂದು ಹೇಳುವ ಶರಣರ ವಾಣಿ ದೂರ ದೃಷ್ಟಿತ್ವಕ್ಕೆ ನೀಡಿದ ಕನ್ನಡಿಯಾಗಿದೆ. 'ಸ್ವಾಮಿ' ಎಂಬ ಪದದ ಬದಲು

'ಶರಣ' ಎಂಬ ತತ್ವಕ್ಕೆ ಬದ್ಧರಾದವರು ಯಾವಾಗಲೂ ಸಂಚಾರಮೂರ್ತಿಗಳಾಗಿ 'ಜಂಗಮ' ಪದಕ್ಕೆ ನಿಜರೂಪವಾಗಿ ನಡೆದುಕೊಂಡು ಬಂದಿದ್ದಾರೆ.

ಕೇವಲ ಪೂಜೆ, ಪುನಸ್ಕಾರ, ಯಜ್ಞ, ಯಾಗ, ಹೋಮ ಮಾಡುವುದರಿಂದ ಆತ್ಮೋದ್ಧಾರ ಸಾಧ್ಯವಿಲ್ಲ. ಕಾಯಕದಿಂದ ಆತ್ಮೋದ್ಧಾರ ಸಾಧ್ಯವೆಂಬುದನ್ನು ನಂಬಿರುವರು. 'ಅಡ್ಡಪಲ್ಲಕ್ಕಿ'ಯನ್ನು ನಿರಾಕರಿಸುತ್ತ ಪಾದಯಾತ್ರೆಗೆ ಒತ್ತು ಕೊಟ್ಟವರು. ಸಮಾಜವೇ ನಮ್ಮ ಉಸಿರು ಎಂದುಕೊಂಡು ಹಿಂದುಳಿದ ದಲಿತರು, ನಾಯಕರು, ಕುರುಬರು ಮುಂತಾದವರಿಗೆ ಸಂಸ್ಕಾರ ಎಂಬ ಲಿಂಗದೀಕ್ಷೆಯನ್ನು ನೀಡುವ ಮೂಲಕ ವಿಶಾಲತೆಗೆ ಸಾಕ್ಷಿಯಾದವರು. ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನಲ್ಲಿ ವಾಸಿಸುತ್ತಿರುವ 'ಬಗ್ಗರು' ಎಂಬ ಸಮುದಾಯಕ್ಕೆ ಸಾಮೂಹಿಕವಾಗಿ ಲಿಂಗದೀಕ್ಷೆಯನ್ನು ನೀಡಿ ವೀರಶೈವರನ್ನಾಗಿ ಪರಿವರ್ತನೆ ಮಾಡಿರುವುದು ಅವರ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳಲ್ಲಿ ಅತೀ ಮುಖ್ಯವಾದ ಸಾಧನೆಯಾಗಿದೆ. ಪೂಜೆಯಂತಹ ಧಾರ್ಮಿಕ ವಿಧಿ-ವಿಧಾನಗಳಲ್ಲಿ ಸಂಸ್ಕೃತದ ಮಂತ್ರದ ಬದಲಾಗಿ ಶರಣರ ವಚನಗಳಿಗೆ ಆದ್ಯತೆ ನೀಡುತ್ತಾರೆ. ಹಿಂದೂ-ಮುಸ್ಲಿಂರ ಗಲಭೆಗಳು ಸಂಭವಿಸಿದಾಗ ಸಮಾಜದಲ್ಲಿ ಶಾಂತಿ, ಸಹನೆ ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಶರಣರು ಶ್ರಮಿಸುತ್ತಾ ಬಂದಿದ್ದಾರೆ. ನೆರೆಸಂತ್ರಸ್ಥರಿಗೆ ಅಕ್ಷರ ದಾಸೋಹದ ಜೊತೆಗೆ ಅನ್ನದಾಸೋಹವನ್ನು ಉಣಬಡಿಸಿ ಸಮಾಜಕ್ಕೆ ಮಾದರಿಯಾಗಿ ನಿಂತವರು.

ಪ್ರಗತಿಪರರು ಹಾಗೂ ವಿಚಾರವಂತರಾಗಿರುವ ಶರಣರು ಅನೇಕ ವೈಚಾರಿಕ ಕೃತಿಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಚಿಂತನ ತರಂಗ, ಭಾಗ-೧, ೨ ವಚನ ಸುಮನ, ನಿಮ್ಮೊಂದಿಗೆ, ನಮ್ಮ ಸುತ್ತ, ಅರಿವಿನ ಗುರು, ಶ್ರೀ ಜಯದೇವ ಜಗದ್ಗುರುಗಳು ಮತ್ತು ಬೆಳಕಿನಡೆಗೆ ಹೀಗೆ ಮುಂತಾದ ಕೃತಿಗಳು ಅವರ ವೈಚಾರಿಕ ಪ್ರಜ್ಞೆಯನ್ನು ಸಾಬೀತುಪಡಿಸುತ್ತವೆ. ಅವುಗಳಲ್ಲಿ ಕೆಲವು ಆಂಗ್ಲ ಭಾಷೆಗೆ ಅನುವಾದಗೊಂಡಿವೆ.[೧೫] ಕುವೆಂಪು ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪದವಿ ಪಡೆದಿರುವರು. 'ಅಗ್ನಿಗಾನ' ಎಂಬ ಆತ್ಮಚರಿತ್ರೆ ಬರೆದಿರುವರು.

ಬೃಹನ್ಮಠದ ಶಿಕ್ಷಣ ಸೇವೆ :

"ಜ್ಞಾನದ ಬಲದಿಂದ ಅಜ್ಞಾನದ ಕೇಡು ನೋಡಯ್ಯಾ" ಎಂಬ ಬಸವಣ್ಣನವರ ಮಾತು ಬಹುಶಃ ಶಿಕ್ಷಣ ಪ್ರಸಾರವನ್ನು ಕುರಿತು ಹೇಳಿದಂತಹದಾಗಿರಬೇಕು. ಶಿಕ್ಷಣ ಪ್ರಸಾರವೇ ಸಮಾಜದ ಏಳಿಗೆಗೆ ಕಾರಣ ಎಂಬುದನ್ನು ಬೃಹನ್ಮಠ ಪ್ರಾಚೀನ ಕಾಲದಿಂದಲೂ ನಂಬಿಕೊಂಡು ಬಂದಿದೆ. ೧೯ನೆಯ ಶತಮಾನದ ಉತ್ತರಾರ್ಧದಲ್ಲಿ ಶ್ರೀಮಠದ ಪೀಠಾಧಿಪತಿಗಳಾಗಿದ್ದ ಮಹಾಲಿಂಗ ಸ್ವಾಮಿಗಳು ಉತ್ತರ ಕರ್ನಾಟಕದಲ್ಲಿ ಕನ್ನಡ ಶಾಲಾ ಶಿಕ್ಷಣಾಭಿವೃದ್ಧಿಗೆ ಶ್ರಮಿಸುತ್ತಿದ್ದ ಡೆಪ್ಯೂಟಿ

ಚೆನ್ನಬಸಪ್ಪನವರಂಥ ಶಿಕ್ಷಣ ತಜ್ಞರಿಗೆ ನೆರವಾದರೆಂಬುದನ್ನು ಸ್ಮರಿಸಲೇಬೇಕು. ೨೦ನೆಯ ಶತಮಾನದ ಪೂರ್ವಾರ್ಧದಲ್ಲಿ ಜಯದೇವ ಸ್ವಾಮಿಗಳು ಶಿಕ್ಷಣ ಪ್ರಸಾರದಲ್ಲಿ ವಹಿಸಿದ ಪಾತ್ರ ಮಹತ್ವಪೂರ್ಣವಾದದ್ದು. ಅದರ ಜೊತೆಗೆ ಮಲ್ಲಿಕಾರ್ಜುನ ಸ್ವಾಮಿಗಳು ಮಹಾವಿದ್ಯಾಲಯಗಳನ್ನು, ಪ್ರಸಾದನಿಲಯಗಳನ್ನು, "ಎಸ್.ಜೆ.ಎಂ. ವಿದ್ಯಾಪೀಠ"ವನ್ನು ಸ್ಥಾಪಿಸಿ ನಾಡಿನ ಅನೇಕ ವಿದ್ಯಾರ್ಥಿಗಳ ಬಾಳಿಗೆ ಬೆಳಕಾದವರು. ಶಿರಸಂಗಿ ಮಹಾಲಿಂಗಸ್ವಾಮಿಗಳ ಕಾಲದಲ್ಲಿ ಅಂಕುರಿಸಿದ ಈ ಸಂಸ್ಥೆ ಜಯದೇವ ಸ್ವಾಮಿಗಳ ಕಾಲದಲ್ಲಿ ಪಲ್ಲವಿಸಿ, ಮಲ್ಲಿಕಾರ್ಜುನ ಸ್ವಾಮಿಗಳ ಕಾಲದಲ್ಲಿ ಶಾಖೋಪ ಶಾಖೆಗಳಲ್ಲಿ ವಿಸ್ತರಿಸಿ, ಈಗ ಶಿವಮೂರ್ತಿ ಸ್ವಾಮಿಗಳ ಕಾಲದಲ್ಲಿ ಸಮೃದ್ಧ ಸ್ಥಿತಿಯನ್ನು ಮುಟ್ಟಿದೆ. ಇದು ಶ್ರೀಮಠದ ಶಿಕ್ಷಣ ಪ್ರಸಾರ ನೀಡುವ ಕಲ್ಪವೃಕ್ಷವಾಗಿ ಬಿಂಬಿತಗೊಂಡಿದೆ.

ಕರ್ನಾಟಕದಲ್ಲಿ ಬಹುದೊಡ್ಡ ಪ್ರಮಾಣದಲ್ಲಿ ಶಾಲಾ-ಕಾಲೇಜು, ಪ್ರಸಾದನಿಲಯಗಳನ್ನು ನಡೆಸುತ್ತಿರುವ ಕೆಲವೇ ಧಾರ್ಮಿಕ ಸಂಸ್ಥೆಗಳಲ್ಲಿ ಚಿತ್ರದುರ್ಗ ಬೃಹನ್ಮಠವೂ ಒಂದು. ಶ್ರೀಮಠದ ಒಂದು ಅಂಗಸಂಸ್ಥೆಯಾದ ಎಸ್.ಜೆ.ಎಂ. ವಿದ್ಯಾಪೀಠವು ಶಿಶುವಿಹಾರಗಳು, ಪ್ರಾಥಮಿಕ, ಮಾಧ್ಯಮಿಕ, ಪ್ರೌಢಶಾಲೆಗಳು, ಪದವಿಪೂರ್ವ ಮತ್ತು ಕಲಾ, ವಿಜ್ಞಾನ, ವಾಣಿಜ್ಯ, ಕಾನೂನು ಲಲಿತ ಕಲಾ ಪದವಿ ಕಾಲೇಜುಗಳು ಜೊತೆಗೆ ಚಿತ್ರಕಲಾ, ಶುಶ್ರೂಷೆ, ವೃತ್ತಿಶಿಕ್ಷಣದ ವಿವಿಧ ವಿದ್ಯಾಲಯಗಳು, ತಂತ್ರಜ್ಞಾನ, ದಂತ ವೈದ್ಯಕೀಯ, ಔಷಧಿ ವಿಜ್ಞಾನ ಮಹಾವಿದ್ಯಾಲಯಗಳು, ಅಂಗವಿಕಲ ಮಕ್ಕಳ ವಸತಿನಿಲಯಗಳು, ಶಾಲೆಗಳು ಮುಂತಾದವುಗಳನ್ನು ಪ್ರಾರಂಭಿಸಿ ಸಾವಿರಾರು ಬಡ ವಿದ್ಯಾರ್ಥಿಗಳಿಗೆ ಕಾಯಕಲ್ಪವನ್ನು ಒದಗಿಸಿಕೊಟ್ಟಿದೆ. ಈ ವಿದ್ಯಾಪೀಠದಲ್ಲಿ ವಿವಿಧ ಭಾಗಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಸುಮಾರು ಮುಕ್ಕಾಲು ಪಾಲು ಗ್ರಾಮಾಂತರ ಪ್ರದೇಶದವರೇ ಆಗಿರುವುದು ವಿಶೇಷ.

ಸಾಮಾಜಿಕ ಕಾರ್ಯಗಳು :

ಮುರುಘರಾಜೇಂದ್ರ ಬೃಹನ್ಮಠವು ಅಪಾರ ಜನಪ್ರಿಯತೆಯ ಜೊತೆಗೆ ಪ್ರಸಿದ್ಧಿಯನ್ನು ಪಡೆದ ಬಹುದೊಡ್ಡ ಮಠ ಎಂಬ ಖ್ಯಾತಿಗೆ ಪಾತ್ರವಾದದ್ದು ಅದರ ಸಾಮಾಜಿಕ ಕಾರ್ಯಗಳಿಂದ. "ಕೆರೆಯ ನೀರನ್ನು ಕೆರೆಗೆ ಚೆಲ್ಲಿದಂತೆ ಬೃಹನ್ಮಠವು ಜನರಿಂದ ಭಕ್ತಿರೂಪವಾಗಿ ಪಡೆದ ಯಾವುದೇ ರೀತಿಯ ದಾನವನ್ನು ಮರಳಿ ಸಮಾಜಕ್ಕೆ ಕೊಡುತ್ತ ಬಂದಿದೆ."[೬] ಜನರ ಸಂಕಷ್ಟಗಳಿಗೆ ಸದಾ ಸ್ಪಂದಿಸುತ್ತ ಬಂದಿದೆ. ಹಿಂದೊಮ್ಮೆ ಭೀಕರ ಬರಗಾಲ ಬಿದ್ದ ಸಂದರ್ಭದಲ್ಲಿ ಗಂಜಿ ಕೇಂದ್ರಗಳನ್ನು ಸ್ಥಾಪಿಸಿ, ಅನೇಕ ಜನರ ಪ್ರಾಣವನ್ನು ಉಳಿಸಿದ್ದು ಒಂದು ಇತಿಹಾಸವೇ ಸರಿ. ಆ ಪ್ರಸಾದವನ್ನು ಸ್ವೀಕರಿಸಿದ ಅನೇಕ ವಯೋವೃದ್ಧರು ಇಂದಿಗೂ ಅದನ್ನು ಮರೆತಿಲ್ಲ. ಕೋಮುಗಲಭೆಯಲ್ಲಿ ನೊಂದವರಿಗೆ ಸಾಂತ್ವನ ನೀಡುವುದರ ಜೊತೆಗೆ ಆಶ್ರಯವಿಲ್ಲದ ಬಡವರು, ದೀನದಲಿತರು, ಅಸಹಾಯಕರಿಗೆ ಮನೆಕಟ್ಟಿಸಿಕೊಳ್ಳಲು ಶ್ರೀ ಮಠವು ಉಚಿತವಾಗಿ ನಿವೇಶನ ನೀಡಿರುವದು. ಹಲವು ವರ್ಷಗಳಿಂದ ಉಚಿತ ಸರಳ ಸಾಮೂಹಿಕ ವಿವಾಹಗಳನ್ನು ನಡೆಸುವಲ್ಲಿ ದಾಖಲೆಯನ್ನು ನಿರ್ಮಿಸಿದೆ. ಶ್ರೀಮಠಕ್ಕೆ

ಬಂದು ಹೋಗುವ ಪರಸ್ಥಳದ ಭಕ್ತಾದಿಗಳಿಗೆ ನಿತ್ಯ ದಾಸೋಹ, ವಸತಿ ಸರ್ವಮತೀಯರಿಗೆ, ವಿವಿಧ ಸಂಘ-ಸಂಸ್ಥೆಗಳಿಗೆ ಉದಾರವಾದ ಧನ ಸಹಾಯ ಮಾಡಿರುವುದು ಶ್ರೀಮಠದ ಹೆಗ್ಗಳಿಕೆ.

ಕುರುಡರು, ಕುಂಟರು, ಮೂಕರು ಮೊದಲಾದ ಅಂಗವಿಕಲರಿಗೆ ಅನಾಥಾಲಯಗಳು, ಧರ್ಮಛತ್ರಗಳು, ಮಹಿಳಾ ಸಮಾಜ, ಅಂಜುಮನ್-ಎ-ಇಸ್ಲಾಂದಂಥ ಸಂಸ್ಥೆಗಳಿಗೆ, ಆಸ್ಪತ್ರೆ ನಿರ್ಮಾಣಕ್ಕೆ, ಕ್ರೀಡಾಂಗಣಕ್ಕೆ ಹಲವು ರೀತಿಯ ದೇಣಿಗೆಯನ್ನು ಶ್ರೀ ಮಠ ನೀಡಿದೆ. "೧೯೯೨ ರಲ್ಲಿ ಶ್ರೀ ಶಿವಮೂರ್ತಿ ಸ್ವಾಮಿಗಳು ಗ್ರಾಮೀಣ ಜನರಿಗೆ ವೈಜ್ಞಾನಿಕ ಆಲೋಚನಾ ಕ್ರಮ ಮತ್ತು ಜಾಗೃತಿಯನ್ನು ಮೂಡಿಸುವ ಸಲುವಾಗಿ ಗ್ರಾಮ ವಿಕಾಸ ವೇದಿಕೆಯನ್ನು ಸ್ಥಾಪಿಸಿದರು. ಈ ವೇದಿಕೆಯ ಮುಖ್ಯ ಉದ್ದೇಶ.

೧) ಮಧ್ಯಸೇವನೆ, ಧೂಮಪಾನ, ವರದಕ್ಷಿಣೆ, ಮಹಿಳೆ ಮತ್ತು ದಲಿತರ ಬಗೆಗಿನ ತಾತ್ಸಾರ ಭಾವನೆ ಮುಂತಾದವುಗಳ ನಿವಾರಣೆ.

೨) ಸಂಪೂರ್ಣ ಸಾಕ್ಷರತೆ, ಮಹಿಳಾ ಶಿಕ್ಷಣ ಅಂತರ ಜಾತೀಯ ವಿವಾಹಗಳು, ವಿಧವಾ ವಿವಾಹಗಳು, ಕರ್ತವ್ಯದ ಬಗ್ಗೆ ಮಹೇಶ್ವರ ನಿಷ್ಠೆ, ಸ್ವಚ್ಛತೆ, ಪರಿಸರ ಸಂರಕ್ಷಣೆ, ಸಣ್ಣ ಉಳಿತಾಯ ಯೋಜನೆ, ಪುರಾತನ ವಸ್ತುಗಳು, ಸ್ಮಾರಕಗಳು ಮತ್ತು ತಾಳೆಗರಿಗಳ ಸಂಗ್ರಹಣೆ, ಸಂರಕ್ಷಣೆ, ಶರಣರ ತತ್ವಗಳನ್ನು ಪ್ರಸಾರ ಮಾಡುವುದು ಮುಂತಾದವುಗಳು ಪ್ರಮುಖವಾಗಿವೆ.

ಈ ವೇದಿಕೆಯು ತನ್ನ ಧ್ಯೇಯೋದ್ದೇಶಗಳನ್ನು ಹಾಡುಗಳು, ನಾಟಕಗಳು, ರೂಪಕಗಳು, ಭಿತ್ತಿಪತ್ರ, ಉಪನ್ಯಾಸ, ಮುಂತಾದವುಗಳ ಮೂಲಕ ಮನವರಿಕೆ ಮಾಡಿಕೊಡುವ ದೃಷ್ಟಿಯಿಂದ ಹಳ್ಳಿಯ ಬೀದಿ ಬೀದಿಗಳಲ್ಲಿ, ದಲಿತರ ಕಾಲೋನಿಗಳಲ್ಲಿ ಪಾದಯಾತ್ರೆ ನಡೆಸುತ್ತದೆ.

ಗ್ರಾಮೀಣಾಭಿವೃದ್ಧಿಯ ಯೋಜನೆ ಅಡಿಯಲ್ಲಿ ಗೃಹಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಎಸ್.ಜೆ.ಎಂ. ಗ್ರಾಮೀಣಾಭಿವೃದ್ಧಿ ಪ್ರತಿಷ್ಠಾನ ಮತ್ತು ಎಸ್.ಜೆ.ಎಂ. ಖಾದಿ ಗ್ರಾಮೋದ್ಯೋಗ ಸಹಕಾರಿ ಸಂಘ ಸ್ಥಾಪಿಸಿ ತೋಟಗಾರಿಕೆ, ಹೈನುಗಾರಿಕೆ, ಕೃಷಿ ಸಂಬಂಧಿ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಸ್ವಾವಲಂಬನೆಯ ಬದುಕನ್ನು ರೂಪಿಸಲು ನೆರವಾಗಿದ್ದಾರೆ. ಜನರನ್ನು ಜಾಗೃತ ಮಾಡುವ ಉದ್ದೇಶದಿಂದಾಗಿ ಶ್ರೀ ಬಸವೇಶ್ವರ ಗ್ರಾಮ ವಿಕಾಸ ವೇದಿಕೆಯನ್ನು ಸ್ಥಾಪಿಸಿ ಮಧ್ಯಪಾನ, ದುಶ್ಚಟಗಳ ನಿರ್ಮೂಲನೆ, ವರದಕ್ಷಿಣೆ ನಿರ್ಮೂಲನೆ, ದಲಿತರು ಮತ್ತು ಸ್ತ್ರೀಯರ ಬಗೆಗಿನ ಕೀಳರಿಮೆ ನಿವಾರಣೆ, ಸಾಕ್ಷರತೆ, ವಿಧವಾ ವಿವಾಹ, ಸಾಮೂಹಿಕ ವಿವಾಹಗಳು, ಅಂತರ ಜಾತಿ ವಿವಾಹಗಳು, ಪರಿಸರ ಸಂರಕ್ಷಣೆ, ಶರಣತತ್ವ ಪ್ರಸಾರ ಮುಂತಾದ ಕಾರ್ಯಗಳನ್ನು ಹಮ್ಮಿಕೊಳ್ಳುತ್ತಾ ಬಂದಿದೆ.

ಎಸ್.ಜೆ.ಎಂ. ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘವು ಚಟುವಟಿಕೆಯಿಂದ ಕಾರ್ಯ ನಿರ್ವಹಿಸುತ್ತಿದ್ದು, ಯುವಕಸಂಘ, ರಕ್ತದಾನ ಶಿಬಿರಗಳು, ಕ್ರೀಡಾಮೇಳಗಳು, ಉಚಿತ ಸರಳ ಸಾಮೂಹಿಕ ವಿವಾಹ, ಆಡಳಿತ ಭಾಷೆಯಾಗಿ ಕನ್ನಡ ಬಳಕೆ, ಯುವ ಕಲಾವಿದರು ಮತ್ತು ಬರಹಗಾರರಿಗೆ ಕಾರ್ಯಾಗಾರಗಳು, ರಾಜ್ಯಮಟ್ಟದ ಯುವ ಮೇಳಗಳು ಮತ್ತು ನಾಟಕೋತ್ಸವಗಳನ್ನು ನಡೆಸಿಕೊಂಡು ಬರುತ್ತಿದೆ. ಇವುಗಳಲ್ಲದೆ ರಂಗಭೂಮಿ ಪ್ರದರ್ಶನಗಳು, ಕಲಾವಿದರಿಗೆ ನಾಟಕ ನಿರ್ದೇಶಕರುಗಳಿಂದ ತರಬೇತಿ ಕೊಡಿಸುವುದು. ಪ್ರಭುದೇವ, ಜಗಜ್ಯೋತಿ ಬಸವೇಶ್ವರ, ರಾಜವೀರ ಮದಕರಿ ನಾಯಕ ಇವು ಅಪರೂಪದ ಕಲಾಕುಸುಮಗಳು. ಇವು ಕರ್ನಾಟಕ ಮತ್ತು ಹೊರನಾಡುಗಳಲ್ಲಿಯೂ ಅಭಿನಯಗೊಂಡಿವೆ. ಮೊದಲು ದಲಿತನಾಗಿದ್ದು, ಕಳ್ಳತನದಿಂದ ಜೀವನ ಹೊರೆಯುತ್ತಿದ್ದ ಉರಿಲಿಂಗ ಪೆದ್ದಿಯ ಜೀವನವನ್ನು ಆಧರಿಸಿದ ನಾಟಕ 'ಬೆಳಕಿನೆಡೆಗೆ' ಎಂಬ ಕೃತಿಯನ್ನು ಶ್ರೀ ಶಿವಮೂರ್ತಿ ಸ್ವಾಮಿಗಳೇ ರಚಿಸಿರುವುದು ಅವರ ಸಾಹಿತ್ಯ ಪ್ರೀತಿ ಮತ್ತು ಸಮಾಜ ಪ್ರೀತಿಯನ್ನು ಇಮ್ಮಡಿಗೊಳಿಸುತ್ತದೆ."[೨೭]

ಪ್ರಕಟಣೆಗಳು :

ಬೃಹನ್ಮಠದ ಜಗದ್ಗುರುಗಳು ಪಾರಂಪರಿಕವಾದ ಧರ್ಮ ತತ್ವಗಳಲ್ಲಷ್ಟೇ ಪರಿಣಿತಿ ಪಡೆಯದೆ ಕನ್ನಡ-ಸಂಸ್ಕೃತ ಭಾಷೆಗಳ ಮೇಲೆ ಅಪಾರ ಪ್ರಭುತ್ವ ಸಾಧಿಸಿದ್ದರು. ಬೃಹನ್ಮಠ ರೂವಾರಿಗಳೆನಿಸಿದ ಶ್ರೀ ಮುರಿಗೆಯ ಶಾಂತವೀರ ದೇಶಿಕರು, ಇವರ ನಂತರ ಬಂದ ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳು, ಸ್ವಾದಿ ಚೆನ್ನಬಸವ ಸ್ವಾಮಿಗಳು, ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು, ನೈಘಂಟಿನ ಸಿದ್ಧಬಸವಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು ಇಂದಿನ ಪೀಠಾಧಿಪತಿಗಳಾದ ಶಿವಮೂರ್ತಿ ಸ್ವಾಮಿಗಳು ಪ್ರತಿಭೆ-ಪಾಂಡಿತ್ಯಗಳ ಸಂಗಮವಾಗಿದ್ದು ಅನೇಕ ವೈವಿಧ್ಯಮಯ ಕೃತಿಗಳನ್ನು ಬರೆಯುವ ಮೂಲಕ ಅಂದಿನ ಕಾಲದ ಸಾಮಾಜಿಕ ಜನಜೀವನವನ್ನು ಸಾಹಿತ್ಯದ ಮೂಲಕ ಕಟ್ಟಿಕೊಟ್ಟಿದ್ದಾರೆ. ಮಲ್ಲಿಕಾರ್ಜುನ ಸ್ವಾಮಿಗಳಿಂದ ಪ್ರಾರಂಭವಾದ 'ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ' ಈವರೆಗೂ ಸಾಗಿ ಬಂದಿದ್ದು, ಅದರ ಅಡಿಯಲ್ಲಿ ಅನೇಕ ಮಹತ್ವಪೂರ್ಣ ಕೃತಿಗಳು ಪ್ರಕಟಗೊಂಡಿವೆ. ಅವುಗಳಲ್ಲಿ "ಕನ್ನಡ ಹಾಗೂ ಸಂಸ್ಕೃತ ಕೋಶ, ತತ್ವಶಾಸ್ತ್ರ, ಶಾಸ್ತ್ರ ಸಾಹಿತ್ಯ ಕೃತಿಗಳು ಸೇರಿವೆ. ಶಿವಗಣಪ್ರಸಾದಿ ಮಹಾದೇವಯ್ಯನ ಶೂನ್ಯಸಂಪಾದನೆ, ಕೇಶಿರಾಜನ ಶಬ್ದಮಣಿದರ್ಪಣ, ಮಹಾದೇವ ಕವಿಯ ಮಹಾಲಿಂಗೇಂದ್ರ ವಿಜಯ, ಮುರಿಗೆ ಶಾಂತವೀರ ಸ್ವಾಮಿಗಳ ಕೃತಿಗಳು, ಇಮ್ಮಡಿ ಮುರಿಗಾ ಗುರುಸಿದ್ಧರ ಕೃತಿಗಳು, ಜಂಗಮಜ್ಯೋತಿ, ಚಿನ್ಮೂಲಾದ್ರಿ ಚೇತನ, ಹಸ್ತ ಪ್ರತಿಸೂಚಿ, ವೃತ್ತ ರತ್ನಾಕರ, ಕರ್ನಾಟಕ ವೃತ್ತಿ, ಶ್ರೀ ಜಗದ್ಗುರು ಜಯದೇವ ದಿಗ್ವಿಜಯ, ಅರಿವಿನ ಗುರು, ವಚನ ಕ್ರಾಂತಿ, ಜಗವ ಸುತ್ತಿದೆ, ಸಾಹಿತ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ, ರಾಜಾ ಬಿಚ್ಚುಗತ್ತಿ ಭರಮಣ್ಣನಾಯಕ, ವಚನ ಸುಮನ, ಭಗವದ್ಗೀತಾ ವೀರಶೈವ ಭಾಷ್ಯ, ಮುರಿಗೆ

ಶಾಂತವೀರ ಸ್ವಾಮಿಗಳ ಸ್ತೋತ್ರ ಕರಂಡ ಮುಂತಾದ ಕೃತಿಗಳು ಈ ಗ್ರಂಥಮಾಲೆಯಲ್ಲಿ ಪ್ರಕಟಗೊಂಡಿವೆ.

ಶ್ರೀಮಠವು 'ಗುರುಕುಲ' ಎಂಬ ತ್ರೈಮಾಸಿಕ ಪತ್ರಿಕೆಯನ್ನು ಪ್ರಾರಂಭಿಸಿತ್ತು. ಆದರೆ ಕಾರಣಾಂತರಗಳಿಂದ ನಿಂತಿತು. ಮುಂದೆ ೧೯೯೦ರಲ್ಲಿ 'ಸತ್ಯಶುದ್ಧ ಕಾಯಕ' ಎಂಬ ಹೆಸರಿನ ತ್ರೈಮಾಸಿಕ ವಿದ್ವತ್ ಪತ್ರಿಕೆ ಪ್ರಾರಂಭವಾಗಿ, ಅದು ಕೇವಲ ಧಾರ್ಮಿಕ ವಿಷಯಕ್ಕೆ ಮಾತ್ರ ಸೀಮಿತವಾಗದೇ ಸಾಹಿತ್ಯ, ಇತಿಹಾಸ, ಸಂಶೋಧನೆ, ವಿಮರ್ಶೆ, ಚಿಂತನೆಯ ಗಂಭೀರ ಲೇಖನಗಳಿಗೂ ಅವಕಾಶ ನೀಡಿ ವಿಶ್ವವಿದ್ಯಾಲಯಗಳು ಹೊರತರುತ್ತಿರುವ ತ್ರೈಮಾಸಿಕ ಮಾದರಿಯಲ್ಲಿ ಸಂಗ್ರಹ ಯೋಗ್ಯ ಪತ್ರಿಕೆಯಾಗಿ ಹೊರಹೊಮ್ಮುತ್ತಿದೆ.

೧೯೯೭ರಲ್ಲಿ ಬೃಹನ್ಮಠದ ವತಿಯಿಂದ 'ಜನವಾಹಿನಿ' ಎಂಬ ದೈನಿಕ ಪತ್ರಿಕೆ ಆರಂಭವಾಗಿ ಚಿತ್ರದುರ್ಗ, ದಾವಣಗೇರಿ, ಹಾವೇರಿ ಜಿಲ್ಲೆಗಳನ್ನು ಒಳಗೊಂಡು ತನ್ನ ಪ್ರಚಾರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದೆ. ಶರಣರ ವಚನಗಳನ್ನು ಹಿಂದಿ ಮತ್ತು ಆಂಗ್ಲ ಭಾಷೆಗೆ ಭಾಷಾಂತರಿಸಲು ಮೈಸೂರು ವಿಶ್ವವಿದ್ಯಾಲಯಕ್ಕೆ ಒಂದುವರೆ ಲಕ್ಷ ದೇಣಿಗೆ, ಶರಣ ಸಾಹಿತ್ಯ ಕುರಿತಂತೆ, ಶರಣರ ಬದುಕು, ಸಾಧನೆ ಬಿಂಬಿಸುವ ಪ್ರತಿಗಳನ್ನು ಪ್ರಕಟಿಸಲು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇವರಿಗೆ ಒಂದು ಲಕ್ಷ ರೂಪಾಯಿ, ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಹಾಯ ಹಸ್ತ, ಚಿತ್ರದುರ್ಗದ ಹಸ್ತಪ್ರತಿ ಮತ್ತು ಇತಿಹಾಸ ವಿಭಾಗಗಳನ್ನು ತೆರೆಯಲು ಉದಾರ ಧನಸಹಾಯ, ಮೂರು ಲಕ್ಷ ರೂಪಾಯಿ ಮೊತ್ತದ ಬಸವ ಪ್ರಶಸ್ತಿ'ಯನ್ನು ಸೃಜನೇತರ ಸಾಹಿತ್ಯಕ್ಕೆ ಸಂಬಂಧಿಸಿದ ಅತ್ಯುತ್ತಮ ಕೃತಿಗೆ ಯೋಜನೆಯನ್ನು ಶ್ರೀಮಠವು ಹಾಕಿಕೊಂಡಿದೆ."[೧೮]

"ಕನ್ನಡ, ಸಂಸ್ಕೃತ ಮತ್ತು ತೆಲಗು ಸಾಹಿತ್ಯಿಕ ಮತ್ತು ವೇದಾಂತದ ಕೃತಿಗಳನ್ನು ಒಳಗೊಂಡ ೪ ಸಾವಿರ ಸಂಖ್ಯೆಯಷ್ಟಿರುವ ತಾಳೆಗರಿ ಮತ್ತು ಕಾಗದ ಕೈಬರಹಗಳ ಪ್ರಾಚೀನ ಕಾಲದ ಪರಿಸರವನ್ನು ಸಾಬೀತುಪಡಿಸುವ ಅಮೂಲ್ಯ ಗ್ರಂಥ ಭಂಡಾರವೇ ಇಲ್ಲಿದೆ."[೧೯] ಬೃಹನ್ಮಠವು ಅನೇಕ ಮೌಲಿಕ ಕೃತಿಗಳನ್ನು ಪ್ರಕಟಿಸುವುದರ ಜೊತೆಗೆ ಕೆಲವು ಉಪಯುಕ್ತ ಕೃತಿಗಳಿಗೆ ಧನಸಹಾಯವನ್ನು ನೀಡಿದ್ದುಂಟು. "೧೮ನೇ ಶತಮಾನದಿಂದ ಈವರೆಗಿನ ಕನ್ನಡ, ಮರಾಠಿ, ಪರ್ಶಿಯನ್, ಇಂಗ್ಲೀಷ್ ಭಾಷೆಗಳಲ್ಲಿರುವ ವಿವಿಧ ದೊರೆಗಳು, ಅಧಿಕಾರಿಗಳು, ಮಠಾಧಿಪತಿಗಳು ಮತ್ತು ಪ್ರಜೆಗಳು ಬರೆದಿರುವ ಸಹಸ್ರಾರು ಸಂಖ್ಯೆಯ ಐತಿಹಾಸಿಕ ಕಾಗದಪತ್ರಗಳು, ಕಡತಗಳು ಜೊತೆಗೆ ಕೆಲವು ತಾಮ್ರಶಾಸನಗಳು ಇದ್ದು, ಚಾರಿತ್ರಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಮಹತ್ವದ ಸಂಗತಿಗಳನ್ನು ಓದುಗರ ಅರಿವಿಗೆ ತಂದು ಕೊಡುತ್ತವೆ."[೨೦]

ಶ್ರೀ ಶಿವಮೂರ್ತಿ ಶರಣರು ಮಠದ ಪಕ್ಕದಲ್ಲಿಯೇ ಫಲಪುಷ್ಪ ಬಿಡುವ ತರುಲತೆಗಳ ಚಿದಾರಣ್ಯ ತೋಟವನ್ನು ಸ್ಥಾಪಿಸಿದ್ದಾರೆ. ಆ ತೋಟಕ್ಕೆ "ಮುರುಘಾ ವನ" ಎಂದು ನಾಮಕರಣ ಮಾಡಲಾಗಿದೆ. ಅಲ್ಲಿ ರಚಿಸಿರುವ ಕೂಡಲಸಂಗಮ ಐಕ್ಯ ಮಂಟಪದ ಪ್ರತಿರೂಪವೆಂಬಂತಿರುವ ಸರೋವರ, ವಚನಗಳನ್ನು ರಚನೆ ಮಾಡುತ್ತ ಕುಳಿತಿರುವ ಬಸವೇಶ್ವರರ ವಿಗ್ರಹ, ಶ್ರೀ ಮುರಿಗಾ ಶಾಂತವೀರ ಸ್ವಾಮಿಗಳು ಮತ್ತು ಭರಮಣ್ಣ ನಾಯಕರ ವಿಗ್ರಹಗಳು ಪ್ರಾಚೀನತೆಗೆ ಕರೆದುಕೊಂಡು ಹೋಗುತ್ತವೆ. ಗಿಡಮರಗಳಿಂದ ಕೂಡಿದ ವನ, ತರುಲತೆಗಳ ಬಳ್ಳಿ, ಹಚ್ಚಹಸಿರು ಹುಲ್ಲುಗಾವಲು ಮುಂತಾದವುಗಳು ಜನಮನವನ್ನು ರಂಜಿಸುತ್ತಿವೆ. ೪೦೦೦ಕ್ಕೂ ಹೆಚ್ಚು ಔಷಧೀಯ ಗುಣಗಳುಳ್ಳ ಸಸ್ಯ ಸಂಪತ್ತು ಇಲ್ಲಿದೆ.[೨೧]

ಬೃಹನ್ಮಠದ ಭವಿಷ್ಯದ ಯೋಜನೆಗಳು :

ಚಿತ್ರದುರ್ಗ ಮುರುಗರಾಜೇಂದ್ರ ಬೃಹನ್ಮಠವು ಈಗಾಗಲೇ ಸಮಾಜದ ಅಭಿವೃದ್ಧಿಗಾಗಿ ಸಾಕಷ್ಟು ಕೆಲಸ ಕಾರ್ಯಗಳನ್ನು ಮಾಡಿದೆ. ಇನ್ನೂ ಹತ್ತು ಹಲವು ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೆಂಬ ಹಂಬಲ ಶ್ರೀಮಠಕ್ಕಿದೆ. ಒಂದು ಸಂಘ ಅಥವಾ ಸಂಸ್ಥೆ ಪರಿಣಾಮಕಾರಿಯಾಗಿ ಕೆಲಸಗಳನ್ನು ಕಾರ್ಯಗತ ಮಾಡಿ ಗುರಿ ಮುಟ್ಟಬೇಕಾದರೆ ಕೆಲವು ಯೋಜನೆಗಳನ್ನು ಹಾಕಿಕೊಳ್ಳಬೇಕಾಗುತ್ತದೆ. ಶ್ರೀಮಠವು ಈ ಹಿನ್ನೆಲೆಯಲ್ಲಿ ಅನೇಕ ಉಪಯುಕ್ತ ಯೋಜನೆಗಳನ್ನು ರೂಪಿಸಿಕೊಂಡಿದೆ. ಅವು ಕೆಳಗಿನಂತಿವೆ.

1. An Institute for the study of Lingayatism
2. A Research Centre of Manuscripts
3. A big new gate infront of Mutt
4. A Dasoha Mandira modern equipment
5. A Well equipped health club
6. A residential school for the students from 5th to 10th stds.
7. Restoration of branch mutts.[೨೨]

ಬೃಹನ್ಮಠವು ಈ ಎಲ್ಲ ಯೋಜನೆಗಳನ್ನು ಭವಿಷ್ಯದಲ್ಲಿ ಕಾರ್ಯಗತಗೊಳಿಸುವ ನಿಟ್ಟಿನಲ್ಲಿ ಈಗಾಗಲೇ ಗಂಭೀರವಾಗಿ ಯೋಚಿಸತೊಡಗಿದೆ. ಅವುಗಳನ್ನು ಕಾರ್ಯಗತಗೊಳಿಸುವ ಕಳಕಳಿ ಹಾಗೂ ಸಾಮರ್ಥ್ಯ ಖಂಡಿತವಾಗಿಯೂ ಬೃಹನ್ಮಠಕ್ಕಿದೆ. ಇವುಗಳಲ್ಲಿ ಕೆಲವನ್ನು ಸಾಕಾರಗೊಳಿಸಲಾಗಿದೆ. ಉಳಿದವುಗಳನ್ನು ಇನ್ನು ಕೆಲವೇ ವರ್ಷಗಳಲ್ಲಿ ಪೂರ್ಣಗೊಳಿಸುವುದರಲ್ಲಿ ಸಂಶಯವಿಲ್ಲ.

ಮುರುಘಾಮಠ ಧಾರವಾಡ

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಧಾರವಾಡಕ್ಕೆ ಹೆಚ್ಚಿನ ಮಹತ್ವ ಮತ್ತು ಗೌರವ ಸಲ್ಲುತ್ತವೆ. ಈ ಗೌರವವನ್ನು ತಂದುಕೊಡುವಲ್ಲಿ ಮುರುಘಾಮಠದ ಕೊಡುಗೆಯು ವಿಶೇಷವಾದುದು. ಮುರುಘಾಸಮಯದ ಬಹುಮುಖ್ಯ ಮಠಗಳಲ್ಲೊಂದಾದ ಇದು ಧಾರ್ಮಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಹಿತ್ಯಿಕವಾಗಿ ಅಪೂರ್ವ ಕಾರ್ಯವನ್ನು ಮಾಡುತ್ತ ಬಂದಿದೆ. ಮೃತ್ಯುಂಜಯ ಮಹಾಶಿವಯೋಗಿಗಳ ಪಾದಸ್ಪರ್ಶದಿಂದ ಧಾರವಾಡ ಅವಿಮುಕ್ತ ಕ್ಷೇತ್ರವಾಗಿ ಪರಿಣಮಿಸಿದೆ.

ಮೃತ್ಯುಂಜಯಪ್ಪಗಳು :

"ಅಥಣಿಯ ಆಧ್ಯಾತ್ಮ ಸೂರ್ಯ ಮುರಿಗೇಂದ್ರ ಮಹಾಶಿವಯೋಗಿಗಳ ಪರಿಸರದಲ್ಲಿ ಬೆಳೆದ ಪೂಜ್ಯ ಲಿಂ.ಮೃತ್ಯುಂಜಯಪ್ಪಗಳು ೧೯೧೬ರಲ್ಲಿ ಶ್ರೀ ಮುರುಘಾಮಠದ ಅಧಿಕಾರವನ್ನು ವಹಿಸಿಕೊಂಡರು."[೨೩] ಶಿವಯೋಗಿಗಳ ಸಾನಿಧ್ಯದಲ್ಲಿರುವಾಗಲೇ ಚಿತ್ರದುರ್ಗ ಬೃಹನ್ಮಠಾಧ್ಯಕ್ಷರಾಗಿದ್ದ ಶ್ರೀ ಜ.ಜಯದೇವ ಮುರುಘರಾಜೇಂದ್ರ ಸ್ವಾಮಿಗಳು ಶ್ರೀ ಮೃತ್ಯುಂಜಯಪ್ಪಗಳನ್ನು ದಾವಣಗೇರಿಯ ವಿರಕ್ತ ಮಠದ ಅಧಿಕಾರವನ್ನು ವಹಿಸಿಕೊಳ್ಳಲು ಅಪ್ಪಣೆ ನೀಡಿದರು. ದಾವಣಗೇರಿ ವಿರಕ್ತ ಮಠಾಧ್ಯಕ್ಷರಾಗಿ ಬಡಮಕ್ಕಳಿಗೆ ವಿದ್ಯಾರ್ಥಿನಿಲಯಗಳನ್ನು ಆರಂಭಿಸಿದರು. ೭೦ ಸಾವಿರ ರೂಪಾಯಿಗಳ ನಿಧಿಯನ್ನು ಕೂಡಿ ಹಾಕಿ ದಾವಣಗೇರಿ ವಿದ್ಯಾವರ್ಧಕ ಫಂಡನ್ನು ಸ್ಥಾಪಿಸಿದರು. ಹಿತೋಪದೇಶ ಸಂಘವೊಂದನ್ನು ತೆರೆದು ವಚನ ಸಾಹಿತ್ಯದ ಸಂಪತ್ತನ್ನು ಮನೆಮನೆಗೆ ತಲುಪಿಸಿದರು. ೧೯೦೬ ರಿಂದ ೧೯೧೬ರ ಕಾಲಾವಧಿಯಲ್ಲಿ ಶ್ರೀ ಮೃತ್ಯುಂಜಯಪ್ಪಗಳಿಂದ ದಾವಣಗೇರಿ ಪ್ರದೇಶ ವಿದ್ಯಾಸಂಸ್ಕೃತಿಯ ಪ್ರಸಾರಕೇಂದ್ರವಾಗಿ ಬೆಳೆಯಿತು.[೨೪]

"ಮೃತ್ಯುಂಜಯಪ್ಪಗಳು ಜನಿಸಿದ್ದು ೧೮೮೮ ಏಪ್ರೀಲ್‌ನಲ್ಲಿ ಧಾರವಾಡ ಜಿಲ್ಲೆಯ ಹುಬ್ಬಳ್ಳಿ ತಾಲೂಕಿನ ಇಂಗಳಹಳ್ಳಿಯ ಗ್ರಾಮದಲ್ಲಿ ತಂದೆ ಶ್ರೀ ಶಾಂತಪ್ಪಯ್ಯ, ತಾಯಿ ಚನ್ನವೀರಮ್ಮ. ಶಿವನ ಅನುಗ್ರಹದಿಂದ ಜನಿಸಿದ ಮೃತ್ಯುಂಜಯ ಸ್ವಾಮಿಗಳನ್ನು ವಚನ ಕೊಟ್ಟಂತೆ ಮಗುವಿಗೆ ಹತ್ತು ವರ್ಷ ತುಂಬಿದ ಕೂಡಲೇ ಗದುಗಿನ ಶ್ರೀ ತೋಂಟದಾರ್ಯ ಮಠಕ್ಕೆ ತಂದು ಒಪ್ಪಿಸಿದರು. ಶ್ರೀಮಠದಲ್ಲಿ ಪೂಜ್ಯ ಗುರುಗಳಿಂದ ಸಂಸ್ಕೃತ, ಕನ್ನಡ, ಸಂಗೀತಶಾಸ್ತ್ರ ಅಭ್ಯಾಸ ಮಾಡಿದರು. ಜೊತೆಗೆ ಮಗ್ಗೆಯ ಮಾಯಿದೇವರ ಶತಕತ್ರಯ. ನಿಜಲಿಂಗ ಶತಕ ಅಭ್ಯಾಸ ಮಾಡಿ, ಶಾಸ್ತ್ರೀಯ ಸಂಗೀತವನ್ನು ಅಭ್ಯಾಸ ಮಾಡಿ ಶ್ರೀ ಮುಪ್ಪಿನ ಷಡಕ್ಷರಿಗಳು, ಶ್ರೀ ನಿಜಗುಣ ಶಿವಯೋಗಿಗಳು, ಶ್ರೀ ಸರ್ಪಭೂಷಣ ಶಿವಯೋಗಿಗಳು, ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳ ತತ್ವಪದಗಳನ್ನು ರಾಗಬದ್ಧವಾಗಿ ಹಾಡಲು ಕಲಿತರು. ಆದರೆ ಶ್ರೀಗಳಿಗೆ ಆ ಮಠ ಯಾವುದೇ ರೀತಿಯ ಪ್ರಭಾವ ಬೀರದೆ ಹೋದ ಸಂದರ್ಭದಲ್ಲಿ, ಅದನ್ನು ತ್ಯಜಿಸಿ ಲೋಕಸಂಚಾರ ಮಾಡುತ್ತ ಅಂಕಲಗಿಯ ಅಡವಿ ಸ್ವಾಮಿಗಳ ಮಾರ್ಗದರ್ಶನದಂತೆ ಅಥಣಿಗೆ ಬಂದು ಶ್ರೀ ಮುರುಘ ರಾಜೇಂದ್ರ ಸ್ವಾಮಿಗಳ ದರ್ಶನ ಪಡೆದು

ಶಿವಯೋಗಿಗಳಲ್ಲಿ ಸರ್ವಾರ್ಪಣ ಮನೋಭಾವದಿಂದ ಸಂಪೂರ್ಣವಾಗಿ ತಮ್ಮನ್ನು ಸಮರ್ಪಿಸಿಕೊಂಡರು."[೨೫]

ಅನೇಕ ತೀರ್ಥ ಕ್ಷೇತ್ರಗಳನ್ನು ಸಂದರ್ಶನ ಮಾಡಿ ಮಹಾತ್ಮರ ಹಾಗೂ ಶಿವಶರಣರ ದರ್ಶನ ಪಡೆದು ಸಂಸ್ಕಾರಗೊಂಡರು. ಸಂಚಾರ ಕಾಲದಲ್ಲಿ ಶ್ರೀ ಸಕ್ಕರಿ ಕರಡಪ್ಪನವರ ಪಾಠಶಾಲೆಯಲ್ಲಿ ಕೆಲವು ದಿನ ಇದ್ದು ಸಂಸ್ಕೃತವನ್ನು ಅಭ್ಯಾಸ ಮಾಡಿದರು. ಸೊನ್ನಲಾಪುರ, ರೇವಣಸಿದ್ಧೇಶ್ವರ ಬೆಟ್ಟ, ಬಳಗಾನೂರು, ಉಜ್ಜಯಿನಿ, ಹರಪನಹಳ್ಳಿ ಮುಂತಾದ ಕ್ಷೇತ್ರಗಳಿಗೆ ಸಂದರ್ಶಿಸಿ ಅನೇಕ ಅನುಭವಗಳನ್ನು ಕರಗತಮಾಡಿಕೊಂಡರು. ಕಾಶಿ ವಿಶ್ವನಾಥನ ದರ್ಶನಕ್ಕೆ ಹೋಗಬೇಕೆಂಬ ಹಂಬಲವನ್ನು ಹೊಂದಿದ್ದ ಶ್ರೀ ಮೃತ್ಯುಂಜಯ ಸ್ವಾಮಿಗಳು ಅಥಣಿಯ ಶ್ರೀ ಮುರುಘೇಂದ್ರ ಶಿವಯೋಗಿಗಳ ದರ್ಶನ ಪಡೆದು ಗುರುಗಳ ಸೇವೆಯನ್ನು ಮಾಡಿದ ಬಳಿಕ 'ಅಥಣಿಗಿಂತ ಕಾಶಿ ದೊಡ್ಡದಲ್ಲ' ಎಂದು ತಿಳಿದುಕೊಂಡು ಅಥಣಿ ಶಿವಯೋಗಿಗಳ ಶಿಷ್ಯರಾದಾಗ ಶ್ರೀಮೃತ್ಯುಂಜಯ ಸ್ವಾಮಿಗಳಿಗೆ ಜೋಳಿಗೆ ಹಾಗೂ ರುದ್ರಾಕ್ಷಿ ಸರವನ್ನು ನೀಡುವುದರ ಮೂಲಕ ಧಾರವಾಡಕ್ಕೆ ಹೋಗಿ ಸಮಾಜವನ್ನು ಉದ್ಧರಿಸು ಎಂದು ಆಶೀರ್ವದಿಸಿ ಕಳುಹಿಸಿದರು. "೧೯೧೬ರಲ್ಲಿ ಭಕ್ತರ ಅಭಿಪ್ರಾಯದ ಮೇರೆಗೆ ಶ್ರೀಮಠವನ್ನು ಮುನ್ನಡೆಸಿಕೊಂಡು ಜಾಗೃತ ಸ್ಥಾನವನ್ನಾಗಿ ಪರಿವರ್ತಿಸಿದರು. "ನೀನಿಂದಲ್ಲಿ ನಿಂದಪೆಂ. ನೀ ಕುಳಿತಲ್ಲಿ ಕುಳಿತಪೆಂ, ನೀ ನುಡಿದಲ್ಲಿ ನುಡಿದಪೆಂ . . . ಪೋಗು ಬಸವ ಬಸವರಸ ಬಸವೇಶ ಪೊಡವಿಗಧಿಪತಿಯಾಗಿ ಬಾಳು . . . . ." ಎಂದು ಸಂತೈಸಿ ಬಸವಣ್ಣನನ್ನು ಕೂಡಲಸಂಗಮದಿಂದ ಕಲ್ಯಾಣಕ್ಕೆ ಕಳಿಸಿದಂತೆ ಇಲ್ಲಿ ಶ್ರೀ ಶಿವಯೋಗಿಗಳು "ನೀನಿದ್ದಲ್ಲಿಯೇ ನಾನಿರುತ್ತೇನೆ ನಿನ್ನೊಳಗೆ ಇರುತ್ತೇನೆ, ನೀನಲ್ಲದೆ ಎನಗೆ ಬೇರೆ ಠಾವಿಲ್ಲ" ಎಂದು ಹೇಳಿ ಸಮಾಜವನ್ನು ಉದ್ಧರಿಸಲು ಮೃತ್ಯುಂಜಯ ಸ್ವಾಮಿಗಳನ್ನು ಧಾರವಾಡಕ್ಕೆ ಕಳಿಸಿಕೊಡುತ್ತಾರೆ."[೨೬]

ಅಧಿಕಾರ ವಹಿಸಿಕೊಂಡ ನಂತರ ಶ್ರೀ ಜ.ಮುರುಘರಾಜೇಂದ್ರ ಪ್ರಸಾದ ನಿಲಯವನ್ನು "೧೯೧೭ರ ಮಾರ್ಚ ೨೭ರಂದು ಪ್ರಾರಂಭಿಸಿ ಅನೇಕ ಬಡಮಕ್ಕಳಿಗೆ ಆಶ್ರಯ ಕಲ್ಪಿಸಿ, ಶೈಕ್ಷಣಿಕ ಪ್ರಗತಿಗೆ ನಾಂದಿ ಹಾಡಿದರು. ನಂತರ ಕೆಲವು ದಿನಗಳು ಗತಿಸಿದ ಮೇಲೆ ಮುಳಗುಂದ, ಹಂಸಭಾವಿ, ಹಿರೇಕೆರೂರು, ಶಿರಾಳಕೊಪ್ಪ, ಸಾಗರ, ಸೂಳೀಬಾವಿ, ಗುರುಮಠಕಲ್ಲು, ಮುಂಬೈ ಹಾಗೂ ಮಡಗಾಂವ್ ಮುಂತಾದ ಪ್ರದೇಶಗಳಲ್ಲಿ ಶೈಕ್ಷಣಿಕ ಸಂಸ್ಥೆಗಳು, ಧಾರ್ಮಿಕ ಹಾಗೂ ಸಾಮಾಜಿಕ ಸಂಸ್ಥೆಗಳನ್ನು ಪ್ರಾರಂಭಿಸಿ ಧರ್ಮ ಮತ್ತು ಶಿಕ್ಷಣವನ್ನು ಬೆಳೆಸುವ ಮೂಲಕ ಸಮಾಜವನ್ನು ಅಭಿವೃದ್ಧಿಪಡಿಸಿದರು. ಮಠದ ಪ್ರಸಾದನಿಲಯವನ್ನು ಸುಸಜ್ಜಿತವಾಗಿ ನಿರ್ಮಿಸಿ ಐದುನೂರು ವಿದ್ಯಾರ್ಥಿಗಳ ವಸತಿ ವ್ಯವಸ್ಥೆಗೆ ಅನುಕೂಲ ಮಾಡಿಕೊಟ್ಟರು. ನಂದಿಧ್ವಜಸ್ತಂಭ, ಶಿವಾನುಭವ ಮಂಟಪ, ಬಾಲಲೀಲಾ ಮಹಾಂತ ಶಿವಯೋಗೀಶ್ವರ ಮಂಟಪ ಹಾಗೂ ಗ್ರಂಥಮಾಲೆ

ಕಟ್ಟಡವನ್ನು ನಿರ್ಮಿಸಿ ಮಠದ ಸಮುಚ್ಚಯವನ್ನು ಶ್ರೀಮಂತಗೊಳಿಸಿದರು. ಶ್ರೀಮೃತ್ಯುಂಜಯ ಸ್ವಾಮಿಗಳು ಕೈಗೊಂಡ ಧಾರ್ಮಿಕ ಜಾಗೃತಿ ಹಾಗೂ ಸಾಮಾಜಿಕ ಸುಧಾರಣೆಯಿಂದ ವೀರಶೈವ ಸಮಾಜ ಶ್ರೀಮಂತಗೊಳ್ಳಲಿಕ್ಕೆ ಕಾರಣೀಭೂತವಾಯಿತು."[೨೭]

ಶ್ರೀ ಮೃತ್ಯುಂಜಯಪ್ಪಗಳು ಧಾರ್ಮಿಕ ಕಾರ್ಯಗಳನ್ನು ಕೈಗೊಂಡು ಶರಣರ ತತ್ವಗಳನ್ನು ಜನರ ಮನೆ ಮತ್ತು ಮನಗಳಿಗೆ ತಲುಪಿಸುವ ಹೊಣೆ ಹೊತ್ತರು. ಶರಣ ಹರ್ಡೇಕರ ಮಂಜಪ್ಪನವರ ಸಹಾಯದಿಂದ ೧೯೧೧ರಲ್ಲಿ ಮೊದಲ ಬಾರಿಗೆ ಬಸವಜಯಂತಿಯನ್ನು ದಾವಣಗೇರಿಯಲ್ಲಿ ಆಚರಣೆಗೆ ತಂದರು. ಸರ್ವರಿಗೂ ಪ್ರಮುಖವಾಗಿ ಬಾಲಕ-ಬಾಲಕಿಯರಿಗೂ ಧರ್ಮದ ಸಾಮಾನ್ಯ ಸ್ವರೂಪ ತಿಳಿಯಬೇಕೆಂಬ ಸದಿಚ್ಛೆಯಿಂದ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗಿ "ಅಖಿಲ ಭಾರತ ಶಿವಾನುಭವ ಸಂಸ್ಥೆಯನ್ನು ೧೯೪೦ರಲ್ಲಿ ಸ್ಥಾಪನೆ ಮಾಡಿದರು."[೨೮] ಅದರ ಕಾರ್ಯಗಳನ್ನು ನಾಲ್ಕು ಭಾಗವಾಗಿ ವಿಂಗಡಿಸಿ, ಪ್ರತಿಯೊಂದನ್ನು ಒಬ್ಬೊಬ್ಬ ಹಿರಿಯ ಚೇತನಗಳಿಗೆ ವಹಿಸಿಕೊಟ್ಟರು. ೧) ಪತ್ರಿಕೆ ಶಾಖೆ ಪೂಜ್ಯ ಮ.ನಿ.ಪ್ರ. ಮಹಾಂತಸ್ವಾಮಿಗಳು ಮುರುಘಾಮಠ ೨) ಪ್ರಚಾರ ಶಾಖೆ ಕರ್ಜಗಿಯ ಮ.ನಿ.ಪ್ರ. ರುದ್ರಸ್ವಾಮಿಗಳು ೩) ಅಕ್ಕನಬಳಗ ಶಾಖೆ ಶ್ರೀಮತಿ ಸರಸ್ವತಿದೇವಿ ಗೌಡರ, ಧಾರವಾಡ ೪) ಪರೀಕ್ಷಾ ಮಂಡಳಿ ಶ್ರೀ ಮ.ನಿ.ಪ್ರ. ಮಲ್ಲಿಕಾರ್ಜುನ ಸ್ವಾಮಿಗಳು ಹೊಸಮಠ, ಹಾವೇರಿ.

"ಅಖಿಲ ಭಾರತ ಶಿವಾನುಭವ ಸಂಸ್ಥೆಯ ಮುಖವಾಣಿಯಾಗಿ 'ಸಾವಧಾನ' ಪಾಕ್ಷಿಕ ಪತ್ರಿಕೆ ೧೯೪೭ರಲ್ಲಿ ಮುರುಘಾಮಠದಲ್ಲಿ ಪ್ರಾರಂಭವಾಯಿತು. ಪಂ.ನಾಗಭೂಷಣಶಾಸ್ತ್ರಿಗಳು ಇದರ ಸಂಪಾದಕರಾಗಿ ಕೆಲಸವನ್ನು ನಿರ್ವಹಿಸಿದರು. ಅದು ಸಂಸ್ಥೆಯ ಸಂದೇಶಗಳನ್ನು ನಾಡಿನ ಅನೇಕ ಭಾಗಗಳಿಗೆ ಮುಟ್ಟಿಸುವ, ಸಮಾಜದಲ್ಲಿ ಜಟಿಲ ಸಮಸ್ಯೆಗಳಿಗೆ ಸೂಕ್ತವಾದ ಮಾರ್ಗದರ್ಶನವನ್ನು ನೀಡುವ ಕಾರ್ಯ ಮಾಡುತ್ತ ಬಂದಿತು. ಪ್ರಚಾರ ಶಾಖೆಯು ಸಂಸ್ಥೆಯ ಧ್ಯೇಯ-ಧೋರಣೆಗಳನ್ನು ಜನರಿಗೆ ತಿಳಿಯಪಡಿಸುತ್ತಾ, ವೀರಶೈವರೆಲ್ಲರೂ ತಮ್ಮ ಧರ್ಮವನ್ನು 'ಲಿಂಗಾಯತ' ಎಂಬ ಒಂದೇ ಹೆಸರಿನಿಂದ ಹೇಳಬೇಕು. ಒಳಪಂಗಡವನ್ನು ಮರೆತು ಒಂದಾಗಬೇಕು ಎಂಬ ಗೊತ್ತುವಳಿಗಳನ್ನು ಕಾರ್ಯಗತ ಮಾಡುವಲ್ಲಿ ವಿಶೇಷವಾಗಿ ಶ್ರಮಿಸಿತು.

ಅಕ್ಕನ ಬಳಗವು "ನಮ್ಮ ಸಂಸ್ಕೃತಿಯನ್ನು ಕಾಪಾಡುವವರು ಪ್ರಮುಖವಾಗಿ ತಾಯಂದಿರು, ಅವರಿಗೆ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲಗಳ ಅರಿವು ಆಚರಣೆ ರೂಢಿಗತವಾದರೆ ಪ್ರತಿ ಮನೆಯೂ ಶಿವಾನುಭವ ಪಾಠಶಾಲೆಯಾಗುತ್ತದೆ" ಎಂಬ ಧೋರಣೆಯನ್ನು ಇಟ್ಟುಕೊಂಡು ಮುನ್ನಡೆಯಿತು. ಈ ಹಿನ್ನಲೆಯಲ್ಲಿ ಪ್ರತಿವರ್ಷ ಸುಮಾರು ಎರಡು ನೂರು ಹೆಣ್ಣುಮಕ್ಕಳು ಶಿವಾನುಭವ ಅಭ್ಯಾಸ ಮಾಡಿ ಆಯಾ ಪರೀಕ್ಷೆಗಳಲ್ಲಿ ಉತ್ತಮ ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಬಹುಮಾನಗಳನ್ನು ಪಡೆಯುವಂತಾಯಿತು. ಆ ಮೂಲಕ ಮಹಿಳೆಯರಲ್ಲಿ ಜಾಗೃತಿ ಉಂಟಾಯಿತು.

ಅಖಿಲ ಭಾರತ ಶಿವಾನುಭವ ಸಂಸ್ಥೆಯು ಶಿವಾನುಭವ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಸಂಸ್ಥೆಯಿಂದ ಒದಗಿಸುವ ಕಾರ್ಯವನ್ನು ಹಮ್ಮಿಕೊಂಡಿತು. ತನ್ನಿಮಿತ್ತವಾಗಿ ಕೆಳಗಿನ ಕೃತಿಗಳು ಪ್ರಕಟವಾದವು.

೧) ಶಿವಾನುಭವ ಬಾಲಬೋಧಿನಿ ೨) ವೀರಶೈವ ಧರ್ಮಬೋಧಿನಿ

೩) ಶಿವಾನುಭವ ಪದ್ಯಸಂಕಲನ ೪) ಪ್ರಚಾರದೀಪಿಕೆ

೫) ಷಟ್‌ಸ್ಥಲ ದರ್ಪಣ ೬) ಇಷ್ಟಲಿಂಗೋಪಾಸನೆಕ್ರಮ

೭) ಶಿವಯೋಗ ೮) ಶಿವಾನುಭವ ಗದ್ಯಸಂಗ್ರಹ

೯) ಅಷ್ಟಾವರಣ ವಿವೇಕ ೧೦) ಪಂಚಾಚಾರ ಪ್ರಣಾಳಿಕೆ ೧೧) ವಚನಮಧು

ಇವುಗಳಲ್ಲದೇ ಅನೇಕ ಪುಸ್ತಕಗಳನ್ನು ಪ್ರಕಟಿಸಿ ಸಾವಿರಾರು ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲಾಯಿತು.

ಪ್ರಸಾದ ನಿಲಯದಲ್ಲಿ ಪ್ರಸಾದ ಸ್ವೀಕರಿಸುವ ವಿದ್ಯಾರ್ಥಿಗಳು ಕಟ್ಟುನಿಟ್ಟಾಗಿ ಧಾರ್ಮಿಕ ಆಚರಣೆಗಳನ್ನು ಪಾಲಿಸಬೇಕಾಗುತ್ತದೆ. ಪ್ರಾರ್ಥನಾ ಮಂದಿರದಲ್ಲಿ ಬೆಳಗ್ಗೆ ಐದು ಗಂಟೆ ಹಾಗೂ ಸಾಯಂಕಾಲ ಏಳು ಗಂಟೆಗೆ ವಿದ್ಯಾರ್ಥಿಗಳು ಸಾಮೂಹಿಕ ಪ್ರಾರ್ಥನೆಯಲ್ಲಿ ನಿರತರಾಗಿರುತ್ತಾರೆ. ಇಲ್ಲಿ ವರ್ಷದ ತುಂಬ ಧಾರ್ಮಿಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತದೆ. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಧಾರ್ಮಿಕ ಮೌಲ್ಯಗಳನ್ನು ಬೋಧಿಸಿ ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ತಿಳುವಳಿಕೆ ನೀಡಲಾಗುತ್ತದೆ. ಶ್ರಾವಣಮಾಸದಲ್ಲಿ ಒಂದು ತಿಂಗಳವರೆಗೆ ಪುರಾಣ, ಪ್ರವಚನ, ಕೀರ್ತನೆ, ಉಪನ್ಯಾಸಗಳು, ಸಂಗೀತ ಕಾರ್ಯಕ್ರಮಗಳನ್ನು ನೆಡೆಸುವುದರ ಮೂಲಕ ಧಾರ್ಮಿಕ ಭಾವನೆಗಳನ್ನು ಜನತೆಯ ಹೃದಯದಲ್ಲಿ ಗಟ್ಟಿಗೊಳ್ಳುವಂತೆ ಮಾಡಲಾಗುತ್ತದೆ. ಜಾತ್ರೆಯ ಸಂದರ್ಭದಲ್ಲಿ ಸಾಹಿತ್ಯ, ಧಾರ್ಮಿಕ, ಶೈಕ್ಷಣಿಕ ಕಾರ್ಯಕ್ರಮಗಳನ್ನು ನಡೆಸಿ, ಸಮಾಜದ ಅಭಿವೃದ್ಧಿಗೆ ಶ್ರಮಿಸಲಾಗುತ್ತದೆ.

ಸಮಾಜದ ಭವಿತವ್ಯವನ್ನು ಅರಿತ ಶ್ರೀ ಮೃತ್ಯುಂಜಯಪ್ಪಗಳು ಯುವಪೀಳಿಗೆಯನ್ನು ಎಚ್ಚರಿಸುವ, ಸಂಘಟಿಸುವ, ಸನ್ಮಾರ್ಗದಲ್ಲಿ ನಡೆಯುವಂತೆ ಮಾಡುವ ದೃಷ್ಟಿಯಿಂದ ಅನೇಕ ಸ್ಥಳಗಳಲ್ಲಿ 'ವೀರಶೈವ ತರುಣ ಸಂಘ'ಗಳನ್ನು ಸ್ಥಾಪಿಸಿದರು.[೨೯] ವಾಚನಾಲಯ, ಗ್ರಂಥಪ್ರಕಟಣೆ, ಶರಣ ಧರ್ಮಪ್ರಚಾರ ಈ ತರಹದ ಕಾರ್ಯಗಳನ್ನು ಸಂಘ ಸಿದ್ಧಮಾಡಿಕೊಂಡು ಸಮಾಜದ ಗಣ್ಯ ಮಾನ್ಯರನ್ನು, ಪಂಡಿತರನ್ನು, ಸಾಹಿತಿಗಳನ್ನು, ಸಂಶೋಧಕರನ್ನು ಆಹ್ವಾನಿಸಿ ಬೇರೆ ಬೇರೆ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಉಪನ್ಯಾಸಗಳನ್ನೇರ್ಪಡಿಸಿ ಸಮಾಜದ ಪ್ರಗತಿಗೆ ಕಾರಣೀಭೂತರಾದರು.

ಬಡವರಿಗೆ ಅನುಕೂಲವಾಗುವಂತೆ ಸಾಮೂಹಿಕ ವಿವಾಹ, ಅಯ್ಯಾಚಾರ, ಶಿವಾನುಭವ ಪರೀಕ್ಷೆಗಳು, ಬಂದವರಿಗೆ ವಸತಿ ಮತ್ತು ದಾಸೋಹ ವ್ಯವಸ್ಥೆ, ನೊಂದು ಬಂದ ಬಡವರನ್ನು ಸಂತೈಸುವ, ಮಾರ್ಗದರ್ಶನ ಮಾಡುವ ಮೂಲಕ ಶ್ರೀಗಳು ಮಠವನ್ನು ಜಾತ್ಯಾತೀತ ಕ್ಷೇತ್ರವನ್ನಾಗಿ ಮಾಡಿ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಪಡೆಯುವಂತೆ ಮಾಡಿದ್ದಾರೆ. ಈ ಪರಂಪರೆ ಇಂದಿಗೂ ನಡೆದುಕೊಂಡು ಬಂದಿದೆ.

ಶ್ರೀ ಬಾಲಲೀಲಾ ಮಹಾಂತ ಶಿವಯೋಗಿ ಗ್ರಂಥಮಾಲೆ ೧೯೪೩ರಲ್ಲಿ ಅಸ್ತಿತ್ವಕ್ಕೆ ಬಂದ ನಂತರ ಕನ್ನಡ ನಾಡಿನಲ್ಲಿ ಸುದೀರ್ಘ ಕಾಲದವರೆಗೆ ನಿರಂತರವಾಗಿ ಶರಣಸಾಹಿತ್ಯ ಪ್ರಕಟಣೆ ಕಾರ್ಯವನ್ನು ಮುನ್ನಡೆಸಿಕೊಂಡು ಬಂದಿದೆ. ಇದರ ಮೂಲಕ ಸುಮಾರು ೧೫೦ಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ.

ಈ ಯೋಜನೆಗಳ ಅವಶ್ಯಕತೆಯನ್ನು ಮನಗಂಡ ಪೂಜ್ಯರು ಆಯಾ ಕಾಲಕ್ಕೆ ತಕ್ಕಂತೆ ಸಾಹಿತ್ಯ ಶ್ರೇಷ್ಠರನ್ನು ಶ್ರೀಮಠಕ್ಕೆ ಕರೆಯಿಸುವ ಮೂಲಕ ಪ್ರೊ.ಶಿ.ಶಿ. ಬಸವನಾಳ, ಡಾ.ಶಿ.ಚೆ. ನಂದಿಮಠ, ಉತ್ತಂಗಿ ಚೆನ್ನಪ್ಪ, ಸ.ಸ. ಮಾಳವಾಡ, ಸಂ.ಶಿ. ಭೂಸನೂರಮಠ, ಡಾ.ಆರ್.ಸಿ. ಹಿರೇಮಠ, ಡಾ.ಎಂ.ಎಸ್. ಸುಂಕಾಮರ, ಡಾ.ಎಂ.ಎಂ. ಕಲಬುರ್ಗಿ ಮೊದಲಾದ ಅನೇಕ ವಿದ್ವಾಂಸರನ್ನು ಪರಿಚಯಿಸುವ ಮತ್ತು ಅವರಿಂದ ಉಪಯುಕ್ತವಾಗುವಂತಹ ಗ್ರಂಥಗಳನ್ನು ಬರೆಯಿಸುವ ಕಾರ್ಯ ಮಾಡಿದರು. ಆ ಮೂಲಕ ಅನೇಕ ವಚನಸಾಹಿತ್ಯ, ಗೀತಸಾಹಿತ್ಯ, ಶಾಸ್ತ್ರಸಾಹಿತ್ಯ ಕೃತಿಗಳು ಲೋಕಾರ್ಪಣೆಗೊಳ್ಳುವಂತೆ ಮಾಡಿದರು.[೩೦]

ಪುರಾಣಗಳನ್ನು ಬರೆಯುವ ಪರಂಪರೆ ಕನ್ನಡದಲ್ಲಿ ಪ್ರಾಚೀನ ಕಾಲದಿಂದಲೂ ನಡೆದುಕೊಂಡು ಬಂದಿದೆ. ಅದನ್ನು ಮುಂದುವರೆಸಿದ ಪೂಜ್ಯರು ಶ್ರೀಮಠದಿಂದ ಆಧುನಿಕ ಶಿವಯೋಗಿಗಳ ಪುರಾಣಗಳನ್ನು ಬರೆಸಿ ಪ್ರಕಟಿಸಿದರು. ಅವುಗಳಲ್ಲಿ ಬಾಲಲೀಲಾ ಮಹಾಂತೇಶ್ವರ ಪುರಾಣ, ಶ್ರೀ ಅಥಣಿ ಶಿವಯೋಗೀಶ್ವರ ಚರಿತ್ರೆ, ಜಯದೇವಲೀಲೆ ಪ್ರಮುಖವಾದವು. ಅದರ ಜೊತೆ ಪ್ರಾಚೀನ ವೀರಶೈವ ಪುರಾಣಗಳಾದ ಮಹಾಲಿಂಗಲೀಲೆ, ಪ್ರೌಢರಾಯನ ಕಾವ್ಯ, ರಾಘವಾಂಕನ ಚರಿತ್ರೆ, ಗುರುರಾಜ ಚಾರಿತ್ರೆ, ಪದ್ಮರಾಜ ಪುರಾಣಗಳನ್ನೂ ಪರಿಷ್ಕರಣಗೊಳಿಸಿ ಪ್ರಕಟಿಸಿ ಓದುಗರಿಗೆ ದೊರೆಯುವಂತೆ ಮಾಡಿದರು.

ಕನ್ನಡದಲ್ಲಿ ನಿಜಗುಣಾದಿಗಳು ರಚಿಸಿದ ಕೈವಲ್ಯ ಸಾಹಿತ್ಯ ಪ್ರಸಿದ್ಧ. ಅದಕ್ಕೆ ಚೈತನ್ಯವನ್ನು ನೀಡಿ, ಭಾವಜೀವನವನ್ನು ಶಿವಜೀವನಕ್ಕೆ ತಿರುಗುವಂತೆ ಮಾಡುವ ಸಂಜೀವಿನಿ. ಕೈವಲ್ಯ ಪದ್ಧತಿ, ಕೈವಲ್ಯದರ್ಪಣ, ಭಕ್ತಿಸುಧಾಸಾರ, ಸುಭೋಧಸಾರ, ಕೈವಲ್ಯಕಲ್ಪವಲ್ಲರಿ, ಮೈಲಾರಬಸವಲಿಂಗ ಶರಣರ

ಕೃತಿಗಳು ಕೈವಲ್ಯ ಸಾಹಿತ್ಯದ ಮಹತ್ವದ ರಚನೆಗಳು. ಅವುಗಳನ್ನು ಈ ಮಾಲೆಯಲ್ಲಿ ಪ್ರಕಟಿಸಿ ಕನ್ನಡಿಗರ ಆತ್ಮವನ್ನು ಶುದ್ಧೀಕರಿಸುವ ಕಾರ್ಯವನ್ನು ಶ್ರೀಗಳು ಮಾಡಿದರು.

ಮಹಾಂತಪ್ಪಗಳು :

ಮೃತ್ಯುಂಜಯಪ್ಪಗಳ ತರುವಾಯ ಮುರುಘಾಮಠದ ಉತ್ತರಾಧಿಕಾರಿಗಳಾಗಿ, ಗುರುಗಳ ದಿವ್ಯಪರಂಪರೆಯನ್ನು ಶ್ರದ್ಧೆಯಿಂದ ಅನುಸರಿಸಿಕೊಂಡು ಬಂದ ಮಹಾತೇಜೋಮೂರ್ತಿಗಳೇ ಪೂಜ್ಯ ಮಹಾಂತಪ್ಪಗಳು. ಮುರುಘಾಮಠವನ್ನು ಮಹಾಮಠವನ್ನಾಗಿ, ಜ್ಞಾನದಾಸೋಹದ ಮಹಾಮನೆಯನ್ನಾಗಿ ಬೆಳೆಸಿ, ಘನತೆ–ಗೌರವಗಳನ್ನು ಹೆಚ್ಚಿಸಿದ ಕೀರ್ತಿ ಶ್ರೀಮಹಾಂತಪ್ಪಗಳದು.

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಪಶುಪತಿಹಾಳದ ಶರಣ ಶ್ರೀ ಶಿವಸಂಗಯ್ಯ ಶರಣೆ ಕರಿಬಸಮ್ಮ ದಂಪತಿಗಳ ಪುತ್ರರತ್ನವೇ ಮಹಾಂತಪ್ಪಗಳು. ಶ್ರೀಮೃತ್ಯುಂಜಯಪ್ಪಗಳ ಮಾನಸಪುತ್ರರೆಂದೇ ಕರೆಯಲ್ಪಡುವ ಶ್ರೀಗಳು ಮೃತ್ಯುಂಜಯಪ್ಪಗಳ ಕರಸಂಜಾತರು. ೧೯೩೩ ಮಾಘಶುದ್ಧ ಪಂಚಮಿಯಂದು ಶಿವಯೋಗೀಶ್ವರ ಜಾತ್ರಾ ಮಹೋತ್ಸವದಂದು ಶ್ರೀಮಠದ ಚರಪಟ್ಟಾಧಿಕಾರವನ್ನು ಪಡೆದು ಶ್ರೀ ಮ.ನಿ.ಪ್ರ ಮಹಾಂತಸ್ವಾಮಿಗಳಾದರು.[೩೧]

"ಶಿವಯೋಗಿಯ ಶರೀರಂ ವೃಥಾ ಸವೆಯಲಾಗದು, ಅನುಗೊಂಬಿನಿತು ಕಾಯಕಂ ನಡೆಯುತ್ತಿರಬೇಕು" ಎಂಬ ತತ್ವವನ್ನು ಅಳವಡಿಸಿಕೊಂಡು ಶ್ರೀಗಳು ತಮ್ಮ ತನು–ಮನಗಳನ್ನು ಸಮಾಜದ ಹಿತಕ್ಕಾಗಿ, ಮಾನವತೆಯ ಉದ್ಧಾರಕ್ಕಾಗಿ ಶ್ರೀಗಂಧದಂತೆ ಸವೆಸಿದರು. ಶ್ರೀಮಠದ ಪ್ರಸಾದನಿಲಯ, ಅಖಿಲ ಭಾರತ ಶಿವಾನುಭವ ಪ್ರಚಾರ, ಕಲಾವಿದರಿಗೆ ಪುರಸ್ಕಾರ, ಧರ್ಮಗ್ರಂಥಗಳ ಪ್ರಕಟಣಾ ಕಾರ್ಯವನ್ನು ಕೈಗೊಂಡರು. ಮೃತ್ಯುಂಜಯ ಮಾಸಿಕ ಶಿವಾನುಭವ ಕಾರ್ಯಕ್ರಮವನ್ನು ಪ್ರಾರಂಭಿಸಿದರು. ಹಂಚಿನ ಮನೆಯ ಮುರುಘಾಮಠಕ್ಕೆ ನೂತನ ಕಟ್ಟಡ ನಿರ್ಮಿಸಿದರು. ೨೫ ಸಾವಿರ ರೂಪಾಯಿಗಳ ಮೃತ್ಯುಂಜಯ ವ್ಯಾಖ್ಯಾನಮಾಲೆ ಸ್ಥಾಪಿಸಿದರು. ೬೩ ಕೋಣೆಗಳ ಸಂಖ್ಯೆಯನ್ನು ೧೨೬ ಸಂಖ್ಯೆಗೇರಿಸಿದರು. ಹೀಗೆ ಹಲವಾರು ನೂತನ ಕಾರ್ಯಕ್ರಮಗಳನ್ನು ಕೈಗೊಂಡರು.[೩೨]

೧೪ ಸಹಸ್ರ ಘಟ್ಟಿ ರೂಪಾಯಿಗಳ ನಾಣ್ಯದೊಂದಿಗೆ ಡಾ॥ ಪುಟ್ಟರಾಜ ಗವಾಯಿಗಳ ತುಲಾಭಾರವನ್ನು ಪ್ರಪ್ರಥಮವಾಗಿ ನೆರವೇರಿಸಿ ಕನ್ನಡ ನಾಡಿಗೆ ಗವಾಯಿಗಳನ್ನು ಪರಿಚಯಿಸಿದರು. ಈ ಪ್ರೇರಣೆಯೇ ಪುಟ್ಟರಾಜರ ೨೭೦೦ ತುಲಾಭಾರಗಳು ನಡೆದು ವಿಶ್ವದಾಖಲೆಯಾಯಿತು.

ಪೂಜ್ಯ ಮೃತ್ಯುಂಜಯಪ್ಪಗಳ ಕ್ರಿಯಾಸಮಾಧಿಯ ಗದ್ದುಗೆಯನ್ನು ನವೀಕರಣಗೊಳಿಸಿ, ಅಮೃತ ಶಿಲಾಮೂರ್ತಿಯನ್ನು ಸ್ಥಾಪಿಸಿದರು.

ಮಠದ ಆವರಣದಲ್ಲಿ ೨.೫೦ ಲಕ್ಷ ರೂಪಾಯಿಗಳ ವಾಚನಾಲಯದ ಕಟ್ಟಡ ನಿರ್ಮಿಸಿ ವಿದ್ಯಾರ್ಥಿಗಳ ಶಿಕ್ಷಣದೊಂದಿಗೆ ಅವರ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುವ ಗ್ರಂಥಾಲಯ ಸ್ಥಾಪನೆಗೆ ಕಾರಣರಾದರು.

ಬಾಲಲೀಲಾ ಮಹಾಂತ ಶಿವಯೋಗಿಗಳ ಗ್ರಂಥಮಾಲೆಯಿಂದ ಪುಸ್ತಕಗಳ ಮುದ್ರಣ, ಮರುಮುದ್ರಣ ಕಾರ್ಯಗಳನ್ನು ಮಾಡುವ ಮೂಲಕ ಶರಣ ಸಾಹಿತ್ಯ ಪ್ರೇಮಿಗಳೆನಿಸಿದರಲ್ಲದೆ, ಒಂದು ವಿಶ್ವವಿದ್ಯಾಲಯವು ಮಾಡುವಷ್ಟು ಸಾಹಿತ್ಯ ಪ್ರಕಟಣಾ ಕಾರ್ಯ ಕೈಗೊಂಡರು.

ಹೀಗೆ ಅನೇಕ ಸತ್ಕಾರ್ಯಗಳನ್ನು ಕೈಗೊಂಡು ಸಮಾಜಕ್ಕೆ ಗೌರವವನ್ನು ತರುವ ಮೂಲಕ ಮುರುಘಾಮಠವನ್ನು ಪೂಜ್ಯ ಪಾವನಕ್ಷೇತ್ರ, ಧಾರ್ಮಿಕ ಶ್ರದ್ಧಾಕೇಂದ್ರ, ಪುಣ್ಯ ಪರಂಪರೆಯ ಸುಕ್ಷೇತ್ರವನ್ನಾಗಿಸಿದ್ದಾರೆ. ಸರಳ ಸಜ್ಜನಿಕೆ, ನಿರಾಡಂಬರ ಶೈಲಿ, ಸದುವಿನಯ, ಮೃದುವಚನ, ಗುರುವಿನಂತೆ ತ್ರಿವಿಧ ದಾಸೋಹಮೂರ್ತಿಗಳೇ ಮಹಾಂತಪ್ಪಗಳು. ಸ್ವಾಮಿಗಳೆಲ್ಲರಿಗೂ ಆದರ್ಶಪ್ರಾಯರಾಗಿರುವ ಇವರು ಮುರುಘಾಮಠದ ಸಿದ್ಧಿ-ಪ್ರಸಿದ್ಧಿಗಳಿಗೆ ಕಾರಣಕರ್ತರೆಂದೇ ಹೇಳಬಹುದು.

ಮಲ್ಲಿಕಾರ್ಜುನ ಸ್ವಾಮಿಗಳು :

೨೦೧೦ರ ಜನೇವರಿಯಲ್ಲಿ ಮುರುಘಾಮಠದ ಪಟ್ಟಾಧಿಕಾರ ವಹಿಸಿಕೊಂಡ ಮಲ್ಲಿಕಾರ್ಜುನ ಸ್ವಾಮಿಗಳು ಗುರು ಮಹಾಂತಪ್ಪಗಳ ಕಾರುಣ್ಯದ ಶಿಶುಗಳು. ಸ್ವಾಮಿತ್ವದ ಸಾಧನೆಗೈದ ಸಾತ್ವಿಕ ಸಂಪನ್ನರು, ಪ್ರತಿಭಾಶಾಲಿ ಪ್ರವಚನ ಪ್ರವೀಣರು, ಶಿವಯೋಗ ಸಾಧಕರು, ತ್ರಿವಿಧ ದಾಸೋಹಿಗಳು, ತ್ರಿಭಾಷಾ ಪಂಡಿತರು, ಸಮರ್ಥ ಸಂಘಟಕರು, ಉತ್ಕಟ ಸಾಹಿತ್ಯ ಸಂಸ್ಕೃತಿ ಪ್ರೇಮಿಗಳು.

೧೯೫೪ರಲ್ಲಿ ಬಿಜಾಪುರ ಜಿಲ್ಲೆಯ ಬಾದಾಮಿ ತಾಲೂಕಿನ ಕೆರೂರಲ್ಲಿ ಶಿವಸಂಗಯ್ಯ-ರಾಚಮ್ಮ ದಂಪತಿಗಳ ಪುತ್ರರಾಗಿ ಜನಿಸಿದರು. ಕೆರೂರು, ಬಾಗಲಕೋಟೆಯಲ್ಲಿ ವಿದ್ಯಾಭ್ಯಾಸ ಕೈಗೊಂಡು, ಕೆರೂರಿನ ವಿರಕ್ತಮಠದ ಉತ್ತರಾಧಿಕಾರಿಗಳಾದರು. ಬಾದಾಮಿಯ ಶಿವಯೋಗ ಮಂದಿರ, ಗದುಗಿನ ವೀರೇಶ್ವರ ಪುಣ್ಯಾಶ್ರಮ, ಮುಂಡರಗಿ ಅನ್ನದಾನೀಶ್ವರ ಮಠ, ಮುರುಘಾಮಠಗಳಿಂದ ತಮ್ಮ ಶಿಕ್ಷಣ ಸಂಸ್ಕೃತಿ, ಸಂಸ್ಕಾರಾಭ್ಯಾಸವನ್ನು ಕೈಗೊಂಡರು.

೧೯೭೪ ರಲ್ಲಿ ಮುಳಗುಂದದ ಬಾಲಲೀಲಾ ಮಹಾಂತ ಶಿವಯೋಗಿಗಳ ಗವಿಮಠದ ಉತ್ತರಾಧಿಕಾರಿಗಳಾದರು. ೧೯೮೫ರಲ್ಲಿ ಬೆಂಗಳೂರಿನ ಸರ್ಪಭೂಷಣಮಠದ ಮಠಾಧ್ಯಕ್ಷರಾದರು.[೩೩] ರಾಜಧಾನಿಯಲ್ಲಿಯೂ ಮಠಸಂಸ್ಕೃತಿಯ ಹಿರಿಮೆ-ಗರಿಮೆಗಳನ್ನು ಹೆಚ್ಚಿಸಿದರು. ಸದ್ಯ ಮುರುಘಾಮಠದ ಅಧ್ಯಕ್ಷರಾಗಿ ಪೂಜ್ಯ ಮಹಾಂತಪ್ಪಗಳ ಮಾರ್ಗವನ್ನು ಮುಂದುವರೆಸಿಕೊಂಡು ನಡೆದಿದ್ದಾರೆ. ಅನೇಕ ನೂತನ ಯೋಜನೆಗಳನ್ನು ಹಾಕಿಕೊಂಡು ಶ್ರೀಮಠದ ಕೀರ್ತಿಯನ್ನು

ಹೆಚ್ಚಿಸುವ ದಿಶೆಯಲ್ಲಿ ಸಾಗಿದ್ದಾರೆ. ಅಧಿಕಾರ ವಹಿಸಿಕೊಂಡ ಕೆಲವೇ ದಿನಗಳಲ್ಲಿ ಮಠದಲ್ಲಿ ಹೊಸ ಚೈತನ್ಯ ಮೂಡಿಸಿದ್ದಾರೆ. ಏಕಕಾಲಕ್ಕೆ ಆರು ಗ್ರಂಥಗಳನ್ನು ಪ್ರಕಟಿಸಿದ್ದಾರೆ. ಸಾವಧಾನ ಪತ್ರಿಕೆಗೆ ಹೊಸಜೀವ ತುಂಬಿದ್ದಾರೆ.

ಅಥಣಿಯ ಶಿವಯೋಗಿಗಳ ಮಠ

ಬೆಳಗಾವ ಜಿಲ್ಲೆಯ ಅಥಣಿ ತಾಲೂಕು ಕೇಂದ್ರವಾಗಿದ್ದು, ೨೫ ಕಿ.ಮೀ. ದೂರದಲ್ಲಿದೆ. ಜ್ಞಾನ, ಆಧ್ಯಾತ್ಮಕ್ಕೆ ಇನ್ನೊಂದು ಹೆಸರು ಶ್ರೀ ಅಥಣಿ ಶಿವಯೋಗಿಗಳದ್ದು. ಕರ್ನಾಟಕದ ಗಡಿಭಾಗದಲ್ಲಿರುವ ಈ ನಗರ ಧಾರ್ಮಿಕ ಕೇಂದ್ರವಾಗಿ ರೂಪಗೊಂಡಿದೆ. ಇಲ್ಲಿ ಅನೇಕ ವೀರಶೈವ ಲಿಂಗಾಯತ ಮಠಗಳಿದ್ದು ಅವುಗಳಲ್ಲಿ ಮುಖ್ಯವಾಗಿ ಶ್ರೀಗಚ್ಚಿನಮಠ, ಶ್ರೀ ಗೊಟಕಿಂಡಿಮಠ, ಶ್ರೀ ಮೋರಟಗಿಮಠ, ಶ್ರೀ ಹಿರೇಮಠ ಹಾಗೂ ಶ್ರೀ ಕುಮಾರಮಠ ಮುಂತಾದವುಗಳು. ಅದರಲ್ಲಿ ಅಥಣಿಯ ಮಧ್ಯಭಾಗದಲ್ಲಿ ಸ್ಥಾಪನೆಗೊಂಡಿರುವ ಶ್ರೀಗಚ್ಚಿನಮಠದ ಕೀರ್ತಿ ನಾಡಿನಾದ್ಯಂತ ಪ್ರಸಾರಗೊಂಡಿದೆ. ಪ್ರಮುಖ ವೀರಶೈವ ಮಠಗಳಲ್ಲಿ ಒಂದಾಗಿರುವ ಇದು ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿ ಬೆಳೆದು ಧಾರ್ಮಿಕ ಚಟುವಟಿಕೆಗಳ ಕೇಂದ್ರಬಿಂದುವಾಗಿದೆ. ಈ ಮಠವನ್ನು ಗಚ್ಚಿನಿಂದ ನಿರ್ಮಿಸಿರುವುದರಿಂದ ಗಚ್ಚಿನಮಠ ಎಂಬ ಹೆಸರು ಪ್ರಾಪ್ತವಾಗಿದೆ.[೩೪] ಹದಿನಾರನೆ ಶತಮಾನದಲ್ಲಿ ಶ್ರೀ ರೇವಣಸಿದ್ಧ ಸ್ವಾಮಿಗಳು ಲೋಕಸಂಚಾರ ಕೈಗೊಂಡು ಇಲ್ಲಿಗೆ ಬರುವ ಮೂಲಕ ಧರ್ಮೋಪದೇಶ ಕಾರ್ಯಕೈಗೊಂಡು ಜನರಲ್ಲಿ ಧರ್ಮಜಾಗೃತಿಯನ್ನು ಮೂಡಿಸಿದರು.

ಅನೇಕ ವೀರಶೈವಮಠಗಳನ್ನು ಸ್ಥಾಪಿಸುವುದರ ಜೊತೆಗೆ ಧಾರ್ಮಿಕ ಕಾರ್ಯ, ಅನ್ನದಾಸೋಹ ನಡೆಯುವಂತೆ ವ್ಯವಸ್ಥೆಗೊಳಿಸಿಕೊಂಡರು. ಅಂದು ಸ್ಥಾಪನೆಗೊಂಡ ಮಠವು ಶ್ರೀಮುರುಘೇಂದ್ರ ಶಿವಯೋಗಿಗಳ ಕಾಲದಲ್ಲಿ ಹೆಚ್ಚು ಮಹತ್ವ ಪಡೆದುಕೊಂಡಿತು. ಶ್ರೀಮಠವು ಇದುವರೆಗೂ ೧೩ ಸ್ವಾಮಿಗಳ ಆಡಳಿತವನ್ನು ಕಂಡಿದ್ದು ಪರಂಪರೆ ಈ ಕೆಳಗಿನಂತಿದೆ.

ಶ್ರೀ ಮ.ನಿ.ಪ್ರ. ರೇವಣಸಿದ್ಧಸ್ವಾಮಿಗಳು, ಮರುಳಶಂಕರಸ್ವಾಮಿಗಳು, ಚನ್ನಬಸವಸ್ವಾಮಿಗಳು, ಮುರುಘೇಂದ್ರಸ್ವಾಮಿಗಳು, ಗುರುಶಾಂತಸ್ವಾಮಿಗಳು, ಎರಡನೆಯ ಮರುಳಶಂಕರಸ್ವಾಮಿಗಳು, ಎರಡನೆಯ ಗುರುಶಾಂತಸ್ವಾಮಿಗಳು, ಎರಡನೆಯ ಚನ್ನಬಸವಸ್ವಾಮಿಗಳು, ಸಿದ್ಧಲಿಂಗಸ್ವಾಮಿಗಳು, ಮೂರನೆಯ ಚನ್ನಬಸವಸ್ವಾಮಿಗಳು, ಶಿವಲಿಂಗ ಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು, ನಾಲ್ಕನೆಯ ಚನ್ನಬಸವ ಸ್ವಾಮಿಗಳು ಮುಂತಾದವರು.

ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ಚಿತ್ರದುರ್ಗ ಬೃಹನ್ಮಠದ ಜಗದ್ಗುರು ಶ್ರೀ ಜಯವಿಭವ ಸ್ವಾಮಿಗಳ ಕೃಪಾಶೀರ್ವಾದಕ್ಕೆ ಒಳಗಾಗಿ ಬೃಹನ್ಮಠದ ಪೀಠಾಧಿಪತಿಗಳಾಗಿ ೧೯೬೪ರಲ್ಲಿ ಅಧಿಕಾರ ವಹಿಸಿಕೊಂಡರು. ಅಥಣಿ ಶಿವಯೋಗಿಗಳು ೧೭೫೮ ರಲ್ಲಿ ಅಥಣಿ ತಾಲೂಕಿನ "ಇಂಗಳಗಾವಿ"

ಎಂಬ ಚಿಕ್ಕಗ್ರಾಮದಲ್ಲಿ ರಾಚಯ್ಯ–ನೀಲಾಂಬಿಕೆಯರ ಉದರದಲ್ಲಿ ಜನಿಸಿದರು.[೩೫] ಇವರ ಬಾಲ್ಯನಾಮ ಗುರುಲಿಂಗಯ್ಯ. ಬಾಲ್ಯದಿಂದಲೂ ಚುರುಕುಬುದ್ಧಿಯ ಅಧ್ಯಯನಶೀಲ ಗುಣ ಹೊಂದಿದ ಇವರು ಇಂಗಳಗಾವಿಯಲ್ಲಿಯೇ ಪ್ರೌಢಶಿಕ್ಷಣ ಪೂರೈಸಿದರು. ನಂತರ ಎರಡನೆಯ ಶ್ರೀಮರುಳ ಶಂಕರ ಸ್ವಾಮಿಗಳ ವಾಣಿಯಂತೆ ಶ್ರೀ ಅಥಣಿ ಕ್ಷೇತ್ರಕ್ಕೆ ಬಂದು ನೆಲೆಸಿದರು. ಎರಡನೆಯ ಶ್ರೀ ಗುರುಶಾಂತ ಸ್ವಾಮಿಗಳಿಂದ ತಮ್ಮ ಹದಿನಾರನೆ ವರ್ಷದಲ್ಲಿ ಅನುಗ್ರಹ ಪಡೆದುಕೊಂಡು ದೇಶ ಸಂಚಾರಕ್ಕೆ ಹೊರಟರು. ಸು. ೩೧ ವರ್ಷಗಳ ಕಾಲ ದೇಶ ಸಂಚಾರ ಕೈಗೊಂಡು ವೀರಶೈವ ಧರ್ಮವನ್ನು ಪ್ರಚಾರಪಡಿಸಿ ಅಥಣಿಗೆ ಬಂದರು. ಇವರು ಬರುವ ವೇಳೆಗಾಗಲೇ ಎರಡನೆಯ ಶ್ರೀ ಗುರುಶಾಂತಸ್ವಾಮಿಗಳು ಲಿಂಗೈಕ್ಯರಾಗಿದ್ದರು.

ಎರಡನೆಯ ಶ್ರೀಚನ್ನಬಸವ ಸ್ವಾಮಿಗಳು ಅಧಿಕಾರವಹಿಸಿಕೊಂಡು ಶ್ರೀ ಶಿವಯೋಗಿಗಳ ಆಗಮನವನ್ನು ಎದುರು ನೋಡುತ್ತಿದ್ದರು. ಶಿವಯೋಗಿಗಳು ಬಂದ ನಂತರ ಮಠದ ಅಧಿಕಾರವನ್ನು ವಹಿಸಿಕೊಂಡು ಮಠ ಮತ್ತು ಭಕ್ತರನ್ನು ಉದ್ಧರಿಸು ಎಂದು ಬಿನ್ನವಿಸಿಕೊಳ್ಳುತ್ತಾರೆ. ಶಿವಯೋಗಿಗಳು ಇಷ್ಟಪಡದೆ ಶ್ರೀ ಸಿದ್ಧಲಿಂಗಸ್ವಾಮಿಗಳಿಗೆ ಪಟ್ಟಕಟ್ಟಿ ಕ್ಷೇತ್ರದಲ್ಲಿ ಉಳಿಯಲು ನಿರ್ಧರಿಸಿ ನಿತ್ಯ ಧರ್ಮೋಪದೇಶವನ್ನು ನೀಡಿ ಜನರನ್ನು ಜಾಗೃತಗೊಳಿಸಿದರು. ಬಹುಬಗೆಯ ಇತಿಹಾಸವನ್ನು ಹೊಂದಿರುವ ಶ್ರೀಮಠದ ಆವರಣದಲ್ಲಿ ನಾಲ್ಕೂ ಶ್ರೀಗಳ ಗದ್ದುಗೆ ಇದ್ದು ಪ್ರತಿನಿತ್ಯ ಅಭಿಷೇಕ, ಪೂಜೆ, ಭಜನೆ ನಡೆಯುತ್ತಲೇ ಬಂದಿದೆ. ಜೊತೆಗೆ ಶ್ರೀ ಮುರುಘೇಂದ್ರ ಶಿವಯೋಗಿಗಳ ಪುಣ್ಯಾರಾಧನೆಯನ್ನು ನಡೆಸಲಾಗುತ್ತಿದೆ. ವಿಚಾರಯುತವಾದ ಉಪನ್ಯಾಸ ಕಾರ್ಯಕ್ರಮಗಳು ನಾಡಿನ ಅನೇಕ ವಿದ್ವಾಂಸರಿಂದ ನಡೆಯುತ್ತಲೇ ಬಂದಿರುವುದು ವಿಶೇಷವೆನಿಸುತ್ತದೆ.

ಮುಳಗುಂದ ಗವಿಮಠ

ಗದಗ ತಾಲೂಕಿನ ಮುಳಗುಂದ ಗ್ರಾಮವು ಹೋಬಳಿ ಕೇಂದ್ರವಾಗಿದ್ದು, ತಾಲೂಕು ಕೇಂದ್ರದಿಂದ ದಕ್ಷಿಣಕ್ಕೆ ೨೦ ಕಿ.ಮೀ. ದೂರದಲ್ಲಿದೆ. ಚಾರಿತ್ರಿಕವಾಗಿ ಈ ಗ್ರಾಮ ಪುರಾಣ ಪ್ರಸಿದ್ಧಿಯನ್ನು ಪಡೆದುಕೊಂಡಿದೆ. ಗ್ರಾಮದ ಮಧ್ಯಭಾಗದಲ್ಲಿರುವ ಶ್ರೀಮಠ ೧೯೪೫ರಲ್ಲಿ ಸ್ಥಾಪನೆಗೊಂಡಿದ್ದು ಈ ಮಠವನ್ನು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು ಸ್ಥಾಪನೆ ಮಾಡಿದ್ದಾರೆ. ಶ್ರೀಗಳು ೧೮೨೨ರಲ್ಲಿ ಬಿಜಾಪುರ ಜಿಲ್ಲೆಯ ಆಲಮಟ್ಟಿಯ ಶ್ರೀ ಚನ್ನಮಲ್ಲಿಕಾರ್ಜುನ ಮತ್ತು ಶ್ರೀಮತಿ ಅನ್ನಪೂರ್ಣಾಂಬೆಯವರ ಪುತ್ರರಾಗಿ ಜನಿಸಿದರು. ಬಾಲ್ಯದಲ್ಲಿಯೇ ಆಧ್ಯಾತ್ಮವನ್ನು ಮೈಗೂಡಿಸಿಕೊಂಡು ಬಂದಿರುವ ಶ್ರೀಗಳು ಲೋಕಸಂಚಾರ ಮಾಡುತ್ತ ಮುಳಗುಂದ ಗ್ರಾಮದ ಬೆಟ್ಟದ ಮೇಲೆ ಬಂದು ನೆಲೆಸಿ ತಪಸ್ಸನ್ನು ಕೈಗೊಂಡು ಮಠವನ್ನು ಸ್ಥಾಪಿಸಿದ್ದಾರೆ. ಶ್ರೀ ಬಾಲಮಹಾಂತ ಶಿವಯೋಗಿಗಳು ಮುಳಗುಂದದಲ್ಲಿ ಮಠವನ್ನು ಸ್ಥಾಪಿಸಿದ ನಂತರ ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಶ್ರೀಗಳು ಧಾರ್ಮಿಕ ಕಾರ್ಯಗಳ ಜೊತೆಗೆ

ವಚನಗಳನ್ನು ರಚಿಸಿ ಕೈವಲ್ಯದರ್ಪಣದಂಥ ಶ್ರೇಷ್ಠ ಕೃತಿಯನ್ನು ನೀಡುವ ಮೂಲಕ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ್ದಾರೆ. ಇಂತಹ ಪಾವಿತ್ರತೆಯಿಂದ ಕೂಡಿದ ಮಠವನ್ನು ಮುನ್ನಡೆಸಿದವರು ಶ್ರೀ ಬಾಲಲೀಲಾ ಮಹಾಂತ ಶಿವಯೋಗಿಗಳು, ಶ್ರೀ ಮುದಿ ಮಹಾಂತ ಸ್ವಾಮಿಗಳು, ಬಸವಲಿಂಗ ಸ್ವಾಮಿಗಳು, ಮೃತ್ಯುಂಜಯಸ್ವಾಮಿಗಳು, ಶಿವಲಿಂಗದೇವರು, ಮಲ್ಲಿಕಾರ್ಜುನ ಸ್ವಾಮಿಗಳು. ಈ ರೀತಿಯಾದ ಪರಂಪರೆಯು ಈ ಮಠಕ್ಕಿದ್ದು, ಬಾದಾಮಿ ತಾಲೂಕಿನ ಕೆರೂರು ಗ್ರಾಮದಲ್ಲಿ ಶ್ರೀ ಶಿವಸಂಗಯ್ಯ ಮತ್ತು ಶ್ರೀಮತಿ ರಾಚಮ್ಮನವರ ಪುತ್ರರಾಗಿ ಜನಿಸಿದ ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು ೧೯೭೪ರಲ್ಲಿ ಅಧಿಕಾರವನ್ನು ವಹಿಸಿಕೊಂಡು ಅಂದಿನಿಂದ ಇಂದಿನವರೆಗೆ ಧಾರ್ಮಿಕ, ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾ ಬಂದಿದ್ದಾರೆ.[೩೬]

ಗುರು ಮಹಾಂತರಾಗಲಿ, ಬಾಲಲೀಲಾ ಮಹಾಂತರಾಗಲಿ ಅನುಸರಿಸಿದ್ದು ಬೋಧನೆ ಮಾಡಿದ್ದು, ಬಸವಾದಿ ಶಿವಶರಣರು ಆಚರಿಸಿ ತೋರಿಸಿದ ಉದಾತ್ತ ಧರ್ಮವನ್ನು, ಸಕಲ ಜೀವರಾಶಿಗಳಿಗೆ ಲೇಸ ಬಯಸುವ ಉದಾರ ಧರ್ಮವನ್ನು. ಶ್ರೀಮಠ ಸ್ವಾಮಿಗಳು ತಮ್ಮ ಹಿತನುಡಿಯ ಮೂಲಕ ಜನರಲ್ಲಿ ಅಜ್ಞಾನವನ್ನು ಹೋಗಲಾಡಿಸಿ ಸುಜ್ಞಾನವನ್ನುಂಟು ಮಾಡಿದ್ದಾರೆ. ಉತ್ತಮ ಸದ್ಗುಣಗಳನ್ನು ನಿಜಜೀವನದಲ್ಲಿ ಅಳವಡಿಸಿಕೊಳ್ಳಲು ಪ್ರೇರೇಪಿಸಿದ್ದಾರೆ. ಬಾಲಲೀಲಾ ಮಹಾಂತ ಸ್ವಾಮಿಗಳು ವಿಶಿಷ್ಟ ವಾಗ್ಮಿಗಳಾಗಿದ್ದು ಅವರು ಬರೆದು ಹಾಡಿದ ತತ್ವಪದಗಳು ಒಂದು ಧಾರ್ಮಿಕ ಅಂದೋಲನವನ್ನೇ ಸೃಷ್ಟಿ ಮಾಡಿದವು. ಒಬ್ಬರ ನಾಲಗೆಯಿಂದ ಇನ್ನೊಬ್ಬರ ಕಿವಿಗೆ ಸಾಗಿ ಬರುವುದರ ಮೂಲಕ ಸಂಪರ್ಕ ಸೇತುವೆಯನ್ನೇರ್ಪಡಿಸಿದವು.

ಶ್ರೀಮಠದ ಧಾರ್ಮಿಕ ಚಟುವಟಿಕೆಗಳಲ್ಲಿ ಜಾತಿಮತ ಭೇದವಿಲ್ಲದೆ ಎಲ್ಲರೂ ಭಾಗವಹಿಸುತ್ತಿದ್ದುದು ಒಂದು ವೈಶಿಷ್ಟ್ಯ. ಕರ್ನಾಟಕದ ಎಲ್ಲಾ ಮಠಾಧಿಪತಿಗಳು ಶ್ರೀಗಳ ಮೇಲೆ ಅಪಾರ ಪ್ರೀತಿ ವಾತ್ಸಲ್ಯವನ್ನು ಇಟ್ಟುಕೊಂಡು ಬಂದಿದ್ದಾರೆ. ವರ್ಷಕ್ಕೊಮ್ಮೆ ನಡೆಯುವ ಪುಣ್ಯತಿಥಿ ಕಾರ್ಯಕ್ರಮವು ಜಾತ್ರೆಯಂತೆ ಸಂಭ್ರಮದಿಂದ ನಡೆಯುತ್ತದೆ. ಶ್ರಾವಣ ಮತ್ತು ಕಾರ್ತಿಕ ಮಾಸಗಳಲ್ಲಿ ಹಬ್ಬ ಹರಿದಿನಗಳಲ್ಲಿ ವಿಶೇಷ ಧಾರ್ಮಿಕ ಗೋಷ್ಠಿಗಳು ನಡೆಯುತ್ತಲೇ ಬಂದಿವೆ. ದೀಕ್ಷಾ ಸಂಸ್ಕಾರದಂತ ಕಾರ್ಯಗಳು, ಪ್ರವಚನಗಳು ಸಾಗುತ್ತ ಬಂದಿದ್ದು ಶ್ರೀಮಠ ಧಾರ್ಮಿಕವಾಗಿ ಮಹತ್ವವನ್ನು ಪಡೆದುಕೊಂಡಿದೆ.[೩೭]

ಬಾಲಲೀಲಾ ಮಹಾಂತ ಶಿವಯೋಗಿಗಳ ಶತಮಾನೋತ್ಸವ ಸಂದರ್ಭದಲ್ಲಿ 'ವೈರಾಗ್ಯದಲರು' ಶ್ರೀಮಠದ ಪಾವನ ಪರಂಪರೆಯ ಕುರಿತ ಧಾರ್ಮಿಕ ವಿಚಾರಗಳನ್ನೊಳಗೊಂಡ ಗ್ರಂಥವನ್ನು ಶ್ರೀ ಜಯಚಾಮರಾಜ ಒಡೆಯರು ಬಿಡುಗಡೆಗೊಳಿಸಿದ್ದು, ಮಠದ ಪುಸ್ತಕ ಪ್ರೀತಿಯನ್ನು ಸ್ಪಷ್ಟಪಡಿಸುತ್ತದೆ. ಗವಿಮಠವು ಧರ್ಮಜಾಗೃತಿಯ ಜೊತೆಗೆ ಸಾಂಸ್ಕೃತಿಕವಾಗಿ ಸಮಾಜಪರ

ಕಾರ್ಯಗಳನ್ನು ಮಾಡುತ್ತಲೇ ಬಂದಿದೆ. ಅನುಭಾವಿಗಳು, ಮುತ್ಸದ್ದಿಗಳು, ವಿದ್ವಾಂಸರು, ಕಲಾವಿದರನ್ನು, ಹಾಡುಗಾರರನ್ನು, ಜಾನಪದರನ್ನು ಕರೆಯಿಸಿ ವೇದಿಕೆಗಳನ್ನು ನಿರ್ಮಿಸಿ ಅನೇಕ ಗ್ರಾಮೀಣ ಪ್ರದೇಶದ ಪ್ರತಿಭೆಗಳು ವೇದಿಕೆಯನ್ನು ಹಂಚಿಕೊಳ್ಳಲಿಕ್ಕೆ ಅವಕಾಶ ಮಾಡಿಕೊಟ್ಟು ತನ್ಮೂಲಕ ಸತ್ಕರಿಸಿದ್ದುಂಟು. ಒಂದು ಕಡೆ ಜ್ಞಾನದಾಸೋಹ ಮತ್ತೊಂದೆಡೆ ಕಲಾರಂಜನೆ ಹೀಗೆ ಕರ್ನಾಟಕದ ಲಲಿತ ಕಲೆಗಳನ್ನು ಅರಮನೆಯಿಂದ, ಗುರುಮನೆಗೆ ಪ್ರಸರಿಸುವುದು ಶ್ರೀಮಠದ ಉತ್ತಮ ಕಾರ್ಯಗಳಲ್ಲೊಂದು. ಪ್ರಸಿದ್ಧ ಸಂಗೀತಗಾರರಾದ ಮಲ್ಲಿಕಾರ್ಜುನ ಮನ್ಸೂರ, ಬಸವರಾಜ ರಾಜಗುರು, ಗಂಗೂಬಾಯಿ ಹಾನಗಲ್, ಪಂಚಾಕ್ಷರಿ ಗವಾಯಿಗಳು, ಸಿದ್ಧರಾಮ ಜಂಬಲದಿನ್ನಿ ಮುಂತಾದವರನ್ನು ಕರೆಯಿಸಿ ಸಂಗೀತ ಕಛೇರಿ ಏರ್ಪಡಿಸಿ ಜನರಿಗೆ ತಣಿಸಿದ್ದು ಮಠದ ಶ್ರೇಯಸ್ಸಿಗೆ ಕಾರಣೀಭೂತವಾಗಿದೆ.[೩೮]

"ಜಾತ್ರೆಯ ಸಮಯದಲ್ಲಿ ನಡೆಯುವ ಒಂದು ವಿಶಿಷ್ಟ ಕಾರ್ಯಕ್ರಮವನ್ನು ಕುರಿತು ಇಲ್ಲಿ ಹೇಳುವುದು ಅನಿವಾರ್ಯ. 'ಕಡುಬಿನಕಾಳಗ' ಹಳೆಯ ಮೈಸೂರು ಭಾಗಕ್ಕೆ ಈ ಕುರಿತು ಪರಿಚಯವಿಲ್ಲ. ಉತ್ತರ ಕರ್ನಾಟಕದ ಕಡೆ ಮಠಗಳ ಮೂಲಕ ನಡೆಯುವ ರಥೋತ್ಸವಾದಿ ಸಂದರ್ಭದಲ್ಲಿ ಈ ಕಾರ್ಯ ಆಚರಣೆಗೆ ಬರುತ್ತದೆ. ಮಠದ ಸ್ವಾಮಿಗಳು ಕುದುರೆಯನ್ನೇರಿ ರಾಜಬೀದಿಯಲ್ಲಿ ಉತ್ಸವ ಮೆರವಣಿಗೆಯಲ್ಲಿ ಬರುವುದು. ಅಲ್ಲಿ ನಿಂತ ಜನಸ್ತೋಮದತ್ತ ಸ್ವಾಮಿಗಳು ತಮ್ಮ ಜೋಳಿಗೆಯಲ್ಲಿ ತುಂಬಿದ್ದ ಕಡುಬುಗಳನ್ನು (ಈಗ ಬೆಲ್ಲದ ಚೂರು) ತೂರುತ್ತಾರೆ. ಜನರು ಅದನ್ನು ಮುಗಿಬಿದ್ದು ಆರಿಸಿಕೊಂಡು ಪ್ರಸಾದವೆಂದು ಸೇವಿಸುತ್ತಾರೆ. 'ಕಡುಬಿನ ಕಾಳಗ' ಪದಗಳಲ್ಲಿ 'ಕಾಳಗ' ಪದಕ್ಕೆ ಸ್ಪರ್ಧೆ, ಮೇಲಾಟ ಎಂದು ಅರ್ಥಮಾಡಿಕೊಳ್ಳುವುದು ಸೂಕ್ತ. ನಮ್ಮಲ್ಲಿ ವಿಜಯದಶಮಿಯದಿನ (ದಸರಾ) ಬನ್ನಿಪತ್ರೆಯನ್ನು ಸಿಕ್ಕಿಸಿದ ಬಾಳೆಕಂಬವನ್ನು ದೇವರು 'ಅಂಬಾಯ್ದು' ಮೇಲೆ ಬನ್ನಿ ಬಂಗಾರಕ್ಕಾಗಿ ಜನರು ಮುಗಿಬೀಳುವ ದೃಶ್ಯವನ್ನು ಇದು ಜ್ಞಾಪಕಕ್ಕೆ ತರುತ್ತದೆ."[೩೯] ಇವು ಎಲ್ಲ ಜನಸಮುದಾಯವನ್ನು ಸೇರಿಸುವ ಮೂಲಕ ಒಗ್ಗಟ್ಟನ್ನು ತೋರಿಸುವ ಜನಪರವಾದ ಆಚರಣೆಯಾಗುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಜಾತ್ರೆಯ ಸಂದರ್ಭದಲ್ಲಿ ಕೈಗೊಳ್ಳುವ ಹೈನುಗಾರಿಕೆ, ಗೃಹೋದ್ಯೋಗಗಳ ಪರಿಚಯ, ಉತ್ತಮವಾದವುಗಳಿಗೆ ಬಹುಮಾನ ನೀಡಿ ಪ್ರೋತ್ಸಾಹಿಸುವ ಕಾರ್ಯಕ್ರಮಗಳು, ಇವುಗಳಲ್ಲದೇ ಹೆಣ್ಣುಮಕ್ಕಳ ಸಂಘಟನೆ ಹಾಗೂ ಪ್ರತಿಭಾ ಅಭಿವ್ಯಕ್ತಿಗಾಗಿ 'ಅಕ್ಕನ ಬಳಗ' ಸ್ಥಾಪನೆಯಾಗಿದ್ದು ಇದರ ಮೂಲಕ ಟೈಲರಿಂಗ್, ಕಸೂತಿ, ಕರಕುಶಲ ಕಲೆಗಳ ತರಬೇತಿ ಶ್ರೀಮಠದ ಸಾಂಸ್ಕೃತಿಕ ಕಾರ್ಯಕ್ರಮಗಳ ಬಹುದೊಡ್ಡ ಚಿಂತನೆಯಾಗಿದೆ. ಯುವಸಂಘಟನೆಯನ್ನು ಜಾಗೃತಗೊಳಿಸುವ ದೃಷ್ಟಿಯಿಂದ "ಬಾಲಲೀಲಾ ಮಹಾಂತ ಶಿವಯೋಗಿ ತರುಣ ಸಂಘ" ಸ್ಥಾಪನೆಗೊಂಡಿದ್ದು

ಕಲಾಭಿವೃದ್ಧಿಗೆ, ಪ್ರತಿಭಾ ಪ್ರದರ್ಶನಕ್ಕೆ ಅವಕಾಶ ನೀಡುವ ಆಟಪಾಟ ಸ್ಪರ್ಧೆಗಳನ್ನು ನಡೆಸಿ ಸೂಕ್ತ ಬಹುಮಾನ ನೀಡಿ ಪ್ರೋತ್ಸಾಹಿಸುವ ಕಾರ್ಯಕ್ರಮಗಳು ಪ್ರಮುಖವಾದವುಗಳು.

ಉತ್ತರ ಕರ್ನಾಟಕದಲ್ಲಿ ಸರ್ಕಾರ ಶೈಕ್ಷಣಿಕ ಸಂಸ್ಥೆಗಳ ವ್ಯವಸ್ಥೆಗೆ ಕೈ ಹಚ್ಚಿದ್ದು ಅಪರೂಪ. ಈ ಹಿನ್ನೆಲೆಯಲ್ಲಿ ಮಠಗಳ ಪಾತ್ರ ಅನನ್ಯವಾಗಿದ್ದು, ಮಠಗಳು ಜನತಾ ಶಿಕ್ಷಣ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳದಿದ್ದರೆ ಆ ಭಾಗದ ನಾಡು ಕತ್ತಲೆಯಲ್ಲಿ ಮುಳಗಬೇಕಾಗುತ್ತಿತ್ತು. ಮಠಗಳು ಓದಿಸುವ, ಬರೆಸುವ ಕಾರ್ಯ ಮಾಡಿದ್ದರಿಂದ ಮಠಗಳ ಹೆಸರು ಶ್ರೀಮಂತಗೊಂಡಿರುವುದನ್ನು ಕಾಣುತ್ತೇವೆ. ಶ್ರೀಮಠದ ಆಶ್ರಯದಲ್ಲಿ ಬಾಲಲೀಲಾ ಮಹಾಂತ ಶಿವಯೋಗಿಗಳ ಶಿಕ್ಷಣ ಸಮಿತಿ ಸ್ಥಾಪಿಸಲ್ಪಟ್ಟಿದ್ದು, ಅದು ಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಗಮನಹರಿಸಿತು. ಗದಗ ತಾಲೂಕಿನಲ್ಲಿಯೇ ಮೊದಲ ಬಾರಿಗೆ ೧೯೪೨ರಲ್ಲಿ ಹೈಸ್ಕೂಲನ್ನು ಸ್ಥಾಪಿಸಿದ ಕೀರ್ತಿ ಶ್ರೀಮಠದ ಶಿಕ್ಷಣ ಸಂಸ್ಥೆಯದ್ದಾಗಿದೆ. ನರ್ಸರಿ, ಪ್ರೈಮರಿ ಶಾಲೆಗಳಿಂದ ಹಿಡಿದು ಪ್ರಥಮ ದರ್ಜೆ ಕಾಲೇಜು, ತಾಂತ್ರಿಕ ಶಿಕ್ಷಣ ಸಂಸ್ಥೆ ಮೊದಲಾದ ಸಂಸ್ಥೆಗಳು ಕೆಲಸ ಮಾಡುತ್ತಿವೆ. ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದನಿಲಯ, ಬಡವರಿಗೆ ಉಚಿತ ವೈದ್ಯಕೀಯ ತಪಾಸಣೆ, ಕಣ್ಣುಗಳ ಪರೀಕ್ಷೆ ಮತ್ತು ಔಷಧೋಪಚಾರ ಸೇವೆ ಒದಗಿಸಿದೆ. ಈ ಎಲ್ಲಾ ಜನಪರ ಕಾರ್ಯಗಳು ಶ್ರೀಗವಿಮಠದಿಂದ ನೆರವೇರಿಸಲ್ಪಟ್ಟಿರುವುದರಿಂದ ಇದರ ಇತಿಹಾಸ ಅಜರಾಮರವಾಗಿದೆ.

ಸರ್ಪಭೂಷಣ ಶಿವಯೋಗಿಗಳ ಮಠ

ಬೆಂಗಳೂರಿನ ವಾತಾವರಣ ಇಂದು ಕಲುಷಿತಗೊಂಡಿರುವ ಸಂಗತಿ ಬಹುತೇಕ ಎಲ್ಲರೂ ಒಪ್ಪುವ ವಿಷಯವೇ ಆಗಿದೆ. ನಮ್ಮ ಸಂಸ್ಕೃತಿಯನ್ನು ಪ್ರೀತಿಸುವ, ಗೌರವಿಸುವ ಜನರು ಬೆಂಗಳೂರಿನಲ್ಲಾಗುತ್ತಿರುವ ಇತ್ತೀಚಿನ ಬೆಳವಣಿಗೆಗಳನ್ನು ಕಂಡು ನೊಂದಿದ್ದಾರೆ. ಇಂಥ ಉಸಿರು ಕಟ್ಟುವ ವಾತಾವರಣದ ಮಧ್ಯೆ ಮರಳುಗಾಡಿನಲ್ಲಿ ಓಯಸಿಸ್ ಇರುವಂತೆ ಮೆಜೆಸ್ಟಿಕ್ ಪರಿಸರದಲ್ಲಿ ಸರ್ಪಭೂಷಣ ಶಿವಯೋಗಿಗಳ ಮಠ ಇದೆ. ಬಹಳ ಹಿಂದಿನ ಕಾಲದಿಂದಲೂ ನಮ್ಮ ಸಂಸ್ಕೃತಿಯನ್ನು ಉಳಿಸಿ ಬೆಳೆಸಿಕೊಂಡು ಬಂದಿರುವ ಶ್ರೀಮಠವು ಕೈಗೊಂಡಿರುವ ಕಾರ್ಯಗಳನ್ನು ಗಮನಿಸಿದಾಗ ಆಶ್ಚರ್ಯವಾಗುತ್ತದೆ. ಸಾಹಿತ್ಯ, ಸಂಸ್ಕೃತಿ, ಧರ್ಮದ ದೃಷ್ಟಿಯಿಂದ ನಾಡಿಗೆ ಇದರ ಕೊಡುಗೆ ಅಪಾರ.

"ಶ್ರೀಮಠವನ್ನು ಹಿಂದೆ ಸಪ್ಪಣ್ಣ ಸ್ವಾಮಿಗಳ ಮಠ ಎಂದು ಕರೆಯುತ್ತಿದ್ದರು. ದಾಖಲೆಯೊಂದರಲ್ಲಿ ಈ ಮಠವನ್ನು ಕೆರೆ ನಂಜುಂಡಯ್ಯನ ಮಠವೆಂದು ಕರೆಯುತ್ತಿದ್ದಂತೆ ತಿಳಿಸಿದೆ. ಈಗ ಸದ್ಯಕ್ಕೆ ಸರ್ಪಭೂಷಣ ಶಿವಯೋಗಿಗಳ ಮಠವೆಂದೆ ಪ್ರಸಿದ್ಧಿ ಪಡೆದಿದೆ. ಈ ಮಠದ ಸ್ಥಾಪಕರು ಸರ್ಪಭೂಷಣ ಶಿವಯೋಗಿಗಳು. ಇವರು ಸ್ವತಂತ್ರ ಸಿದ್ಧಲಿಂಗೇಶ್ವರರ

ಪರಂಪರೆಯವರೆಂದು ದಾಖಲೆಯೊಂದರಿಂದ ತಿಳಿದುಬಂದಿದೆ. ಸರ್ಪಭೂಷಣರ ತಂದೆ ಮಲ್ಲಿಕಾರ್ಜುನಪ್ಪ ತಾಯಿ (ಮಹಾದೇವಮ್ಮ) ಚೆನ್ನಮ್ಮ. ಇವರು ಬೆಂಗಳೂರಿಗೆ ಸಮೀಪದಲ್ಲಿರುವ ಚಿಕ್ಕಬಾಣಾವರ ಗ್ರಾಮದವರು. ಇದು ಹೆಸರಘಟ್ಟದ ರಸ್ತೆಯಲ್ಲಿ ಬರುತ್ತದೆ. ವ್ಯಾಪಾರಿಗಳಾದ ಇವರಿಗೆ ನಾಲ್ಕು ಜನ ಗಂಡುಮಕ್ಕಳು. ಎರಡನೆಯ ಪುತ್ರನಾಗಿ ಸಪ್ಪಣ್ಣನವರು ಕ್ರಿ.ಶ. ೧೭೯೫ರಲ್ಲಿ ಜನಿಸಿದರು. ಕಾಲಾನಂತರ ವ್ಯಾಪಾರದ ವೃದ್ಧಿಗಾಗಿ ಚಿಕ್ಕಬಾಣಾವರವನ್ನು ಬಿಟ್ಟು ಬೆಂಗಳೂರಿನ ಮಾಮೂಲು ಪೇಟೆಗೆ ಬಂದು ನೆಲೆ ನಿಂತರು. ಇವರು ತಿಪ್ಪಶೆಟ್ಟಿಮಠದ ಹಿಂದಿನ ಗುರುಗಳಾಗಿದ್ದ ಶ್ರೀ ಗುರುಸಿದ್ಧ ಸ್ವಾಮಿಗಳಿಂದ ಶಿವದೀಕ್ಷೆ ಪಡೆದು ಶ್ರೀ ಸರ್ಪಭೂಷಣ ಶಿವಯೋಗಿಗಳೆಂದು ಅಭಿಧಾನ ಪಡೆದು, ಆಧ್ಯಾತ್ಮ ಸಾಧನೆಗೆ ಲೋಕಸಂಚಾರಕ್ಕೆ ಹೊರಟರು."[೪೦] ಶ್ರೀ ಸರ್ಪಭೂಷಣ ಶಿವಯೋಗಿಗಳು ಅನೇಕ ಪವಿತ್ರ ಕ್ಷೇತ್ರಗಳನ್ನು ಸಂಚರಿಸಿ ೧೮೨೮ರ ಸುಮಾರಿಗೆ ಬೆಂಗಳೂರಿಗೆ ಬಂದಾಗ ಗುರುಗಳಾದ ಶ್ರೀ ಗುರುಸಿದ್ಧಸ್ವಾಮಿಗಳು ಲಿಂಗೈಕ್ಯರಾದರು.

ಕೊನೆ ದಿನಗಳಲ್ಲಿ ಗುರುಗಳ ಸಾನಿಧ್ಯದಲ್ಲಿದ್ದು ಸೇವೆಗೈದಿದ್ದ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳಿಗೆ ತಿಪ್ಪಶೆಟ್ಟಿಮಠದ ಅಧಿಕಾರವನ್ನು ಕೊಡಿಸಿದ ಶ್ರೀ ಸರ್ಪಭೂಷಣ ಶಿವಯೋಗಿಗಳು ಅಧ್ಯಯನ ನಿರತರಾದರು. ಕೆಲವು ದಿನಗಳು ಗತಿಸಿದ ನಂತರ ಪುನಃ ಲೋಕಸಂಚಾರ ಕೈಗೊಂಡು ಶ್ರೀಶೈಲ, ಉರುವಕೊಂಡ ಮುಂತಾದ ಸ್ಥಳಗಳಲ್ಲಿ ಸಂಚರಿಸಿ ಮೂಲಸ್ಥಳವಾದ ಬೆಂಗಳೂರಿಗೆ ಆಗಮಿಸಿದರು. ಬರುವಾಗ ಶ್ರೀಶೈಲದಲ್ಲಿ ದೊರೆತ ಫಾಲಲೋಚನ ಸ್ವಾಮಿಗಳನ್ನು ಕರೆದುಕೊಂಡು ಬಂದರು. ಭಕ್ತರು ಇವರಿಗಾಗಿ ಒಂದು ಮಠವನ್ನು ಕಟ್ಟಲು ಪ್ರಾರಂಭಿಸಿದರು. ಕ್ರಿ.ಶ. ೧೮೩೬ರಲ್ಲಿ ಸರ್ಪಭೂಷಣ ಶಿವಯೋಗಿಗಳು ಲಿಂಗೈಕ್ಯವಾದಾಗ, ಭಕ್ತರು ಫಾಲಲೋಚನಸ್ವಾಮಿಗಳನ್ನು ನೂತನ ಮಠದ ಪೀಠಾಧಿಪತಿಗಳನ್ನಾಗಿ ನೇಮಿಸಿದರು. ಶ್ರೀಮಠಕ್ಕೆ ಸಣ್ಣಪ್ಪಣ್ಣನವರ ಮಠವೆಂಬ ಹೆಸರು ಹಾಗೆಯೇ ಮುಂದುವರಿದುಕೊಂಡು ಬಂದಿದೆ.

ಶ್ರೀಮಠದ ಗುರುಪರಂಪರೆಯನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

ಶ್ರೀ ಸರ್ಪಭೂಷಣ ಶಿವಯೋಗಿಗಳು	–	(೧೭೯೫-೧೮೩೯)
ಶ್ರೀ ಫಾಲಲೋಚನ ಶಿವಯೋಗಿಗಳು	–	(೧೮೪೦-೧೮೬೭)
ಶ್ರೀ ಗುರುಸ್ವಾಮಿಗಳು	–	(೧೮೬೮-೧೮೯೯)
ಶ್ರೀ ಚನ್ನಬಸವ ಸ್ವಾಮಿಗಳು	–	(೧೮೯೯-೧೯೨೨)
ಶ್ರೀ ಬಸವಲಿಂಗ ಸ್ವಾಮಿಗಳು	–	(೧೯೨೨-೧೯೨೮)
ಶ್ರೀ ಮಹದೇವ ಸ್ವಾಮಿಗಳು	–	(೧೯೩೮-೧೯೬೧)
ಶ್ರೀ ಶಿವಕುಮಾರ ಸ್ವಾಮಿಗಳು	–	(೧೯೬೩-೧೯೮೫)
ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು[೪೧]	–	(೧೯೮೯-)

ಹೀಗೆ ಸರ್ಪಭೂಷಣ ಶಿವಯೋಗಿಗಳ ಆದಿಯಾಗಿ ಎಂಟು ಜನ ಸ್ವಾಮಿಗಳ ನೇತೃತ್ವದಲ್ಲಿ ಶ್ರೀಮಠವು ಸಮಾಜಕ್ಕೆ ತನ್ನದೇ ಆದ ಕೊಡುಗೆಯನ್ನು ನೀಡುತ್ತಾ ಬಂದಿದೆ. ಬೆಂಗಳೂರಿನಂತಹ ಜನನಿಬಿಡ ಸ್ಥಳದ ವೀರಶೈವ ಲಿಂಗಾಯತ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಕಾರ್ಯ ಮಾಡಿದೆ. ಶಿವಪೂಜೆ, ಪೂಜಾವಿಧಾನ, ವೀರಶೈವ ಮಹಾಪುರುಷರ ಬಗ್ಗೆ ಉಪನ್ಯಾಸ ಏರ್ಪಡಿಸುವದು. ಜಯಂತಿ ಉತ್ಸವ, ದಾಸೋಹ ಎಲ್ಲ ಸಮಾಜದ ಬಂಧುಗಳನ್ನು ಒಂದು ಕಡೆ ನೆಲೆಗೊಳ್ಳುವಂತೆ ಮಾಡುವುದು, ವಿದ್ಯಾಭ್ಯಾಸ, ವಸತಿ, ಪ್ರಸಾದ ಶ್ರೀಮಠದ ಮಹಾಕಾರ್ಯಗಳಾಗಿವೆ.

ಬಡವರಿಗೆ ವಾಹನ ಚಾಲನಾ ಕಲಿಕಾ ಶಿಬಿರ, ಪಿ.ಯು.ಸಿ., ಡಿಪ್ಲೋಮಾ ಇನ್ನಿತರ ಕೋರ್ಸುಗಳನ್ನು ಕಲಿಯುತ್ತಿರುವ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉಚಿತ ಊಟ-ವಸತಿ ಕಲ್ಪಿಸಿ ಕೊಟ್ಟಿದೆ. ಶ್ರೀ ಮಹದೇವ ಸ್ವಾಮಿಗಳ ಕಾಲದಿಂದಲೂ ಮಠದಲ್ಲಿ ಹಲವಾರು ರೀತಿಯ ಸಾಹಿತ್ಯಿಕ ಕಾರ್ಯಕ್ರಮಗಳು ನಡೆಯುತ್ತಲೇ ಬಂದಿವೆ. ತಿಂಗಳ ಉಪನ್ಯಾಸ ಮಾಲೆ, ಶ್ರಾವಣಮಾಸ ಕಾರ್ಯಕ್ರಮ, ಯುಗಾದಿ ಕಾರ್ಯಕ್ರಮ, ಅಕ್ಕಮಹಾದೇವಿ, ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಸಿದ್ಧರಾಮ ಮುಂತಾದ ಶಿವಶರಣರ ವಚನಗಳನ್ನು ಕುರಿತು ಒಂದು ತಿಂಗಳ ಪೂರ್ತಿ ೩೦ ಜನ ವಿದ್ವಾಂಸರಿಂದ ೩೦ ವಿಷಯಗಳ ಮೇಲೆ ಉಪನ್ಯಾಸ ಮಾಡಿಸುವಂಥ ಕಾರ್ಯ ಶ್ರೀಮಠದಿಂದ ನಡೆದಿದೆ.

೧೯೯೩ರಲ್ಲಿ ಹದಿನಾಡು ವೀರಶೈವ ಅರಸು ಮನೆತನದ ಬಗೆಗೆ ಮೂರು ದಿನದ ವಿಚಾರಗೋಷ್ಠಿಯನ್ನು ಏರ್ಪಡಿಸಿ ಅರಸರಿಗೆ ಸಂಬಂಧಿಸಿದ ಸ್ಮಾರಕಗಳು, ದಾಖಲೆಗಳು ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಅಂಶಗಳ ಕುರಿತು ಚರ್ಚೆ ನಡೆಯಿತು. ಇದು ಅನೇಕ ಸಂಶೋಧಕರಿಗೆ ಮಾಹಿತಿ ಕಣಜವಾಗಿ ರೂಪಗೊಳ್ಳಲು ಮುಖ್ಯ ವೇದಿಕೆಯಾಗಿತ್ತು. ಈ ಎಲ್ಲ ಕಾರ್ಯ ಚಟುವಟಿಕೆಗಳು ಶ್ರೀಮಠದ ಇತಿಹಾಸ ಪ್ರಜ್ಞೆಗೆ ಸಾಕ್ಷಿಯಾಗಿವೆ.

ಶ್ರೀ ಸರ್ಪಭೂಷಣ ಶಿವಯೋಗಿಗಳು ಶಿವಜ್ಞಾನಿಗಳಾಗಿದ್ದು ಕೈವಲ್ಯ ಕಲ್ಪವಲ್ಲರಿ, ಜ್ಞಾನಶತಕಂ, ಭುಜಂಗಮಾಲಾ, ಶಿವಕೀರ್ತನಂ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀ ಮಹದೇವ ಸ್ವಾಮಿಗಳ ಕಾಲದಿಂದ ಇಂದಿನವರೆಗೂ ಅತ್ಯುತ್ತಮವಾದ ಪ್ರಕಟಣೆಗಳು ಶ್ರೀಮಠದಿಂದ ಬಂದಿವೆ. ೧೯೩೭ರಲ್ಲಿ ಟಿ.ಎನ್. ಮಹದೇವಯ್ಯನವರು ರಚಿಸಿದ ಶ್ರೀ ಮಹಾದೇವಿಯಕ್ಕನವರ ಜೀವನಚರಿತೆ, ೧೯೩೬ ರಲ್ಲಿ ಬಿ. ನಂಜುಡಪ್ಪನವರು ರಚಿಸಿದ ಶ್ರೀ ಬಸವಣ್ಣನವರ ಅಭಯ ಸಂಪತ್ತು ಹೀಗೆ ಇಲ್ಲಿಯವರೆಗೂ ಸುಮಾರು ೩೭ಕ್ಕೂ ಹೆಚ್ಚು ಕೃತಿಗಳು ಲೋಕಾರ್ಪಣೆಗೊಂಡಿವೆ.

"ಕೈವಲ್ಯ ಕಲ್ಪವಲ್ಲರಿ (ಸಂ. ಎಸ್.ಎಸ್. ಬಸವನಾಳ ೧೯೪೯), ಪ್ರಭುಸಂದೇಶ (ಶ್ರೀ ಮಹದೇವ ಸ್ವಾಮಿಗಳು ೧೯೪೯), ಶಿವ-ಶಕ್ತಿ (೧೯೫೯), ಅಭಿನವ ಅಲ್ಲಮ, ಭಾರತೀಯ ಸಂಸ್ಕೃತಿ, ಆಡುಮುಟ್ಟಿದ ಸೊಪ್ಪು, ಶ್ರೀ ಸರ್ಪಭೂಷಣ ಶಿವಯೋಗಿಗಳು, ವಚನ ವೈಭವ, ವಚನ ಚಳುವಳಿ, ಜ್ಞಾನಶತಕ, ಶಂಕರದೇವರ ಕಂದ, ಶ್ರೀ ಸರ್ಪಭೂಷಣ ಶಿವಯೋಗಿಗಳ ಸುಪ್ರಭಾತ, ಶ್ರೀ ಅಕ್ಕಮಹಾದೇವಿ ಸುಪ್ರಭಾತ, ಅಭವಕಂದ ಮತ್ತು ಇಷ್ಟಲಿಂಗ ಚಾರಿತ್ರ, ಶ್ರೀ ಬಸವಾಷ್ಟೋತ್ತರ ಶತನಾಮಾವಳಿ, ಭುಜಂಗಮಾಲಾ ಶಿವ ಸಂಕೀರ್ತನಂ, ಉಪನ್ಯಾಸ ಸಂಚಯ (ಸಂ. ಟಿ.ಆರ್. ಮಹಾದೇವಯ್ಯ), ವಚನ ಚಿಂತನ (ಸಂ. ಗೊ.ರು.ಚ), ಹದಿನಾಡು ವೀರಶೈವ ಅರಸು ಮನೆತನ (ಸಂ. ಡಾ.ಎಸ್. ವಿದ್ಯಾಶಂಕರ), ಕೈವಲ್ಯ ಕಲ್ಪವಲ್ಲರಿ (ಸಂ. ಶ್ರೀ ಎಸ್. ಶಿವಣ್ಣ), ಶ್ರೀ ಸರ್ಪಭೂಷಣರ ಜೀವನ ಚರಿತ್ರೆ (ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ), ಕೈವಲ್ಯ (ದ್ವಿತೀಯ ಶತಮಾನೋತ್ಸವ ಸಂಪುಟ) ಹೀಗೆ ಪುಸ್ತಕವೆಂಬ ಜ್ಞಾನ ಭಂಡಾರ ವಿಸ್ತೃತಗೊಳ್ಳುತ್ತಾ ಸಹೃದಯರ ಜ್ಞಾನ ಚಿಂತನೆಗೆ ಇಂಬುಕೊಟ್ಟಿದೆ."[೪೨]

ಶ್ರೀಮಠವು ಕನ್ನಡ ನಾಡು-ನುಡಿ ಚಿಂತನೆಗೆ ಆದ್ಯತೆ ಕೊಟ್ಟಂತೆ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಕನ್ನಡ ಚಳುವಳಿಗೂ ಪ್ರೋತ್ಸಾಹ ನೀಡಿದೆ. ಮ. ರಾಮಮೂರ್ತಿ, ಅ.ನ. ಕೃಷ್ಣರಾಯರ ಕಾಲದಲ್ಲಿ ಶ್ರೀಮಠ ಕನ್ನಡ ಚಳುವಳಿಗೆ ಅಪರಿಮಿತ ಪ್ರೋತ್ಸಾಹ ನೀಡಿತ್ತು. ನಂತರ ಡಾ. ಎಂ. ಚಿದಾನಂದ ಮೂರ್ತಿಗಳು ಕಟ್ಟಿದ ಸಾಹಿತಿಗಳು, ಕಲಾವಿದರ ಬಳಗ, ಕನ್ನಡ ಶಕ್ತಿಕೇಂದ್ರವೆಂಬ ಸಂಘಟನೆಗಳಿಗೆ ಆಶ್ರಯ ನೀಡಿತು. ೧೮೮೨ ಕನ್ನಡ ನಾಡಿನ ಪ್ರಮುಖ ಚಳುವಳಿಯಲ್ಲಿ ಒಂದಾದ ಗೋಕಾಕ ಚಳುವಳಿಯಲ್ಲಿ ಈ ಸಂಘಟನೆಯ ಪಾತ್ರ ಹಿರಿದಾಗಿದೆ. ಬೆಂಗಳೂರಿನಲ್ಲಿ ಬದುಕನ್ನು ಗಂಭೀರವಾಗಿ ಸ್ವೀಕರಿಸುವ ಜನರಿಗಂತೂ ಈ ಮಠವು ಕೆಸರಿನಲ್ಲಿ ಕಮಲವನ್ನು ಕಂಡಂತಾಗುತ್ತಿತ್ತು. ಉಸಿರು ಕಟ್ಟಿಸುವ ವಾತಾವರಣದ ನಡುವೆಯೂ ಧಾರ್ಮಿಕ, ಸಾಹಿತ್ಯಿಕ ಸೇವೆಯನ್ನು ನಡೆಸಿಕೊಂಡು ಬಂದ ಶ್ರೀಮಠದ ಕಾರ್ಯವೈಖರಿಯನ್ನು ಮೆಚ್ಚಲೇಬೇಕು.

ಅಬ್ಬಿಮಠ (ಸೋಮವಾರ ಪೇಟೆ)

ಚರಿತ್ರೆಯ ಕಾಲಘಟ್ಟದಲ್ಲಿ 'ಮುರುಘಾ' ಸಂಪ್ರದಾಯದ ಮಠಗಳಿಗೆ ಬಹುದೊಡ್ಡ ಪರಂಪರೆಯೇ ಪ್ರಾಪ್ತವಾಗಿದೆ. ಬಹುತೇಕ ಅಧ್ಯಯನದ ಮೂಲಕ ನಾವು ಕಂಡುಕೊಂಡಂತೆ ಕರ್ನಾಟಕ ಮತ್ತು ಕರ್ನಾಟಕೇತರ ವಿವಿಧ ಭಾಗಗಳಲ್ಲಿ ಈ ಸಂಪ್ರದಾಯದ ಮಠಗಳು, ಶಾಖಾಮಠಗಳು ವಿಸ್ತಾರವನ್ನು ಪಡೆದುಕೊಂಡಿವೆ. ಅಂತಹ ಪ್ರಮುಖವಾದ ಮಠಗಳಲ್ಲಿ ಅಬ್ಬಿಮಠವೂ ಒಂದು.

ದೊಡ್ಡವೀರಪ್ಪ ಒಡೆಯನು ಕ್ರಿ.ಶ. ೧೭೨೪ರಲ್ಲಿ ಯಡವನಾಡು ಅಬ್ಬಿಮಠಕ್ಕೆ ಪ್ರಾಕು ನಡೆದು ಬರುತ್ತಿದ್ದ ಗ್ರಾಮ ಹೊಸಳ್ಳಿ ಗ್ರಾಮವೆಂದು, ಜಿಗಟಳ್ಳಿ ಗ್ರಾಮವೆಂದು (ಜಿಗಟಳ್ಳಿ) ಉಭಯ ಗ್ರಾಮಗಳನ್ನು ದೊಡ್ಡ ವಿರೂಪಾಕ್ಷಸ್ವಾಮಿಗೆ ನೀಡಿದ ಸಂಗತಿ ಇದೆ. ಇದರ ಜೊತೆಗೆ ಗಣಾರಾಧನೆ, ಶಿವಪೂಜೆಗಾಗಿ ಹಿಂದಿನ ಗ್ರಾಮಗಳ ಜೊತೆಗೆ ಹೊಸಗ್ರಾಮಗಳು ಸ್ಥಿರಚರ ಆದಾಯಗಳನ್ನು ಅಬ್ಬಿಮಠದ ನಿರಂಜನದೇವರ ಪಾದಕ್ಕೆ ಹೊಸದಾದ, ಜೀರ್ಣೋದ್ಧಾರದ ಸಂಗತಿಯ ದಾನ ಶಾಸನದಲ್ಲಿ ಕ್ರಿ.ಶ. ೧೭೯೬ ರಲ್ಲಿ ನಮೂದಿಸಿ ದೊಡ್ಡ ವೀರರಾಜೇಂದ್ರ ಒಡೆಯನು ಮುರುಘಾ ಸ್ವಾಮಿಗಳನ್ನು ಸ್ಮರಿಸಿ ನೀಡಿದ್ದಾನೆ. ಈ ಹಿನ್ನೆಲೆಯಲ್ಲಿ ಸೂಕ್ಷ್ಮವಾಗಿ ಅವಲೋಕಿಸಿದಾಗ ಕ್ರಿ.ಶ. ೧೭೯೪ರ ಮುನ್ನವೇ ಅಬ್ಬಿಮಠ ಅಸ್ತಿತ್ವದಲ್ಲಿತ್ತೆಂದು ತಿಳಿದು ಬರುತ್ತದೆ.[೪೩] ಕ್ರಿ.ಶ. ೧೭೯೦ರ ಕಾಲಘಟ್ಟದಲ್ಲಿ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಮುರುಘಾ ಸ್ವಾಮಿಗಳ ಶಿಷ್ಯ ಎಂದು ಹಲಸೇ ಗ್ರಾಮದ ಜಂಗಮ ಈಶ್ವರಯ್ಯ ತನ್ನ 'ಅಬ್ಬಿಮಠ ವೃತ್ತಾಂತ'ದಲ್ಲಿ ಬರೆದಿದ್ದಾನೆ. ಇವರು ಈ ಪ್ರದೇಶದಲ್ಲಿ ಮಠದ ಚೌಕಿಯನ್ನು ಕಟ್ಟಿಸಿದ್ದು, ತಲೆತೊರೆ (ಅಬ್ಬಿ ಜಲಪಾತ) ಪಕ್ಕ ಇರುವ ಜಯ ಮಲ್ಲಿಕಾರ್ಜುನ ಗುಡಿಯ ಬಲ ತಗ್ಗಿನಲ್ಲಿರುವ ಗುಹೆಯಲ್ಲಿ ವಾಸವಾಗಿದ್ದು ಗದ್ದುಗೆಯ ಪೂಜೆಯ ಸಮಯದಲ್ಲಿ ಹೊರಗೆ ಬರುತ್ತಿದ್ದರು ಎಂಬ ವಿಚಾರವನ್ನು ಕೊಡಗಿನ ವೀರಶೈವ ಮಠಗಳ ಕೊಡುಗೆ ಎಂಬ ಸಂಶೋಧನ ಲೇಖನದಲ್ಲಿ ಚರ್ಚಿಸುತ್ತಾ ಎಂ.ಜಿ. ನಾಗರಾಜ ಅವರು ಹೀಗೆ ಅಭಿಪ್ರಾಯಪಡುತ್ತಾರೆ. ತಲ್ತರೆ ಶೆಟ್ಟಳ್ಳಿ ಗ್ರಾಮಕ್ಕೆ ಗುಡಿ ಸೇರುತ್ತದೆ. 'ಅಬ್ಬಿ' ಎನ್ನುವ ಶಬ್ದಕ್ಕೆ ಸುಂದರ ಎಂದು ಅರ್ಥ. ಇದರ ಇನ್ನೊಂದು ಅರ್ಥವತ್ತಾದ ಕನ್ನಡ ರೂಪ 'ತಲೆತೊರೆ' ಎಂಬುದು.

ಶಿವರಾತ್ರಿ ಇಲ್ಲಿ ಮುಖ್ಯ ಹಬ್ಬವಾಗಿದ್ದು, ದೀಪಾವಳಿಯಲ್ಲಿ ಸಾಲುದೀಪ ಉರಿಸುತ್ತಾರೆ. ಈ ಗುಡಿಮಠಕ್ಕೆ ಜೋಗಿಮನೆಯೆಂದು ಗೌಡ ಜನಾಂಗದವರು ಮತ್ತು ದಲಿತರು ಕರೆಯುತ್ತಾರೆ. ಗ್ರಾಮಸ್ಥರು ಮಠದ ಗುರುಗಳ ಜೊತೆ ಸೇರಿ ಕಡೆ ಕಾರ್ತಿಕ ಮಾಸದ ದಿನ ಮಲ್ಲಿಕಾರ್ಜುನ ಪರ್ವ, ಮಾದೇಶ್ವರ ಪರ್ವ ಮಾಡುತ್ತಾರೆ. ದಲಿತರು ಈ ಗುಡಿಗೆ ಬರಲು ಐತಿಹ್ಯವಿದೆ. ತನ್ನ ಹಸು ಗುರುಗಳಿದ್ದ ನೆಲೆಗೆ ಹೋಗಿ ಹಾಲು ಕರೆಯುತ್ತಿತ್ತು. ಅದನ್ನು ಕಂಡ ಹರಿಜನ ಕೇರಿಯ ಜೋಗಿ ಪ್ರಭಾವಿತನಾಗಿ ಗುರುಗಳಿಗೆ ಗೋವನ್ನು ಅರ್ಪಿಸುತ್ತಾನೆ. ಗುರುಗಳ ಇಷ್ಟಲಿಂಗ ಪೂಜೆಗೆ ಚೌಕಿಯನ್ನು ಕಟ್ಟಿ ಕೊಡುತ್ತಾನೆ. ಆ ಗುರುಗಳು ಬೇರೆ ಯಾರು ಅಲ್ಲ ಶಾಂತಮಲ್ಲಿಕಾರ್ಜುನ ಸ್ವಾಮಿಗಳೆನ್ನಲಾಗಿದೆ.[೪೪] ಜನರ ಕಷ್ಟನಷ್ಟಗಳಿಗೆ ನೆರವಾಗುತ್ತಿರುವ ಶ್ರೀಗಳು ಪುಷ್ಪಗಿರಿಗೆ ತಪಸ್ಸಿಗೆ ಹೋಗಿರುವುದು, ತಪಸ್ಸಿಗೆ ಹೊರಟಾಗ ಮಠದ ಸೇವೆಯಲ್ಲಿರುವ ಪಟ್ಟೆ ಪಾರಿ ಎಂಬ ಶಿವಶರಣೆ ಅವರನ್ನು ಹಿಂಬಾಲಿಸುವುದು (ಈಕೆಗೆ ಪಂಡರಬಾಯಿ ಎಂಬ ಹೆಸರು) ಆಗ ಹಾದಿಯ ಹೊಳೆಯವರೆಗೆ ಬಂದದ್ದು ಸಾಕು ಇಲ್ಲಿ ಲಿಂಗಪೂಜೆ ಮಾಡಿಕೊಂಡು ಇರು ಎಂದು ಆದೇಶ ನೀಡಿರುವದು, ಆಕೆ ಅಲ್ಲೇ ನೆಲೆ ನಿಂತು ಪೂಜಿಸಿದ ಕಾರಣ ಆಕೆಯಿಂದಾಗಿ 'ಲಿಂಗದ ಹೊಳೆ'

ಎಂಬ ಹೆಸರು ಪ್ರಾಪ್ತವಾಗಿದ್ದು, ಕತ್ತಿನ ಕರೀಮಣಿಗೆ ಏರಿ ಬರುವ ಶಕ್ತಿ ಇದೆ ಎಂದು ಪುಷ್ಪಗಿರಿಯಲ್ಲಿ ಗುರುಗಳ ಪಾದದ ಬಳಿ ವೈಜ್ಞಾನಿಕ ಬದಲಾವಣೆಗಳಿಂದ ರೂಪುಗೊಂಡ ಷಡ್ಭುಜಾಕಾರದ ಹರಳುಗಳಿಗೆ 'ಷಣ್ಮುಖೇಶ್ವರ' ಎಂದು ಕರೆದು ಜನಪದ, ಪಟ್ಟೆಪಾರಿಯ ಕರೀಮಣಿಯ ಪ್ರತೀಕ ಎಂದು ಆರಿಸಿ ತರಲಾಗುತ್ತದೆ. ಈ ಪಟ್ಟೆಪಾರಿ ಹರಿಜನ ಹೆಣ್ಣು ಎಂಬ ಪ್ರತೀತಿ ಇದ್ದು ಬಹುಶಃ ಹರಿಜನ ಜೋಗಿಯ ಮಗಳೇ ಮಠದ ಸೇವೆಯಲ್ಲಿ ತೊಡಗಿರಬೇಕು. ಈ ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಹಾಗೂ ಮಠದ ಮಹಿಳೆ (ಪಟ್ಟೆ ಪಾರಿ) ಬರೆದಿದ್ದ ಗ್ರಂಥದ ಓಲೆಗರಿ ಪ್ರತಿಗಳು ಅಬ್ಬಿಮಠದಲ್ಲಿತ್ತೆಂದು ಹೇಳಲಾಗಿದೆ. 'ಪಟ್ಟೆ ಪಾರಿ ಕಲ್ಲು' ಎಂಬ ಪೇರಿಸಿದ ಕಲ್ಲುಗಳ ಸ್ತಂಭ ರೂಪಗಳು ಪುಷ್ಪಗಿರಿ ಬೆಟ್ಟದ ಬುಡದ ಹೆಗ್ಗಡೆ ಮನೆ ಗ್ರಾಮದ ಬಳಿ ಬಂಡೆಗಳ ಮೇಲೆ ಆಕೆಯ ಹೆಸರಿರುವುದನ್ನು ಕಾಣಬಹುದು.[೪೫]

ಶಾಂತಮಲ್ಲಿಕಾರ್ಜುನ ಸ್ವಾಮಿಗಳು ಶ್ರೀಮಠದ ಕಾರ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ದೀನದಲಿತರ, ಬಡವರ ಉದ್ಧಾರ ಮಾಡಿದ್ದಾರೆ. ಅಬ್ಬಿಮಠಕ್ಕೆ ಹುತ್ತರಿದಿನ ವಾದ್ಯ ಸಮೇತ ಭತ್ತದ ಕದಿರು ತಂದು ಮಠಕ್ಕೆ ಮುಟ್ಟಿಸಿ ಗದ್ದುಗೆ ಪೂಜೆ ಮಾಡಿ ಕೊಡವರು, ಗೌಡರು, ಹರಿಜನರಾದಿಯಾಗಿ ಎಲ್ಲರೂ ಕದಿರನ್ನು ಮನೆಗೆ ಒಯ್ಯುತ್ತಿದ್ದರು. ಕೊಡವರಿಗಂತು ಆ ಕಾಲಕ್ಕೆ ವೀರಶೈವ ಮಠಗಳನ್ನು ಕಂಡರೆ ಬಹಳ ಪ್ರೀತಿ ಮತ್ತು ಭಕ್ತಿ ಇತ್ತು. ಹುಟ್ಟು-ಸಾವುಗಳ ಸಂದರ್ಭದ ಸೂತಕ ಕಳೆದುಕೊಳ್ಳಲು ಈ ಮಠಕ್ಕೆ ಬಂದು ತೀರ್ಥ ತೆಗೆದುಕೊಂಡು ಹೋಗುತ್ತಿದ್ದರು. ೬೦ ವರ್ಷಗಳ ಹಿಂದೆ ಆ ಮಠದ ಗುರುಗಳಾಗಿದ್ದು ವೀರಸಿಂಹಾಸನ ಹಾಗೂ ಶೂನ್ಯ ಸಿಂಹಾಸನ ಒಂದಾಗಿ 'ವೀರಸಿಂಹಾಸನ ಮುರುಘಾ ಬ್ರಹ್ಮತರ್ಕ' ಎಂಬ ಎರಡು ಹೆಸರಿರುವ ನೆಲೆ ಎಂದು ಪ್ರತೀತಿ ಹೊಂದಿರುವ ಪೆರಿಯ ಮಠಕ್ಕೆ ಪೀಠಾಧಿಕಾರಿಗಳಾಗಿ ಹೋದ ಶ್ರೀ ಜ.ಶಾಂತದೇವ ಸಾರಂಗ ದೇಶೀಕೇಂದ್ರರು ಅಭಿಪ್ರಾಯಪಡುತ್ತಾರೆ. ಇವರ ಕಾಲದಲ್ಲಿ ಮೈಸೂರಿನ ಮಹಾರಾಜರು (ಕ್ರಿ.ಶ. ೧೯೩೦) ಅಬ್ಬಿಮಠಕ್ಕೆ ಬಂದು ಗೌರವಿಸಿ ನಂತರ ಪಟ್ಟೆ ಪಾರಿ ಬಂಡೆಯ ಮೇಲೆ ಹರಕೆಯ ಕಲ್ಲುಬಂಡೆ ಸ್ತಂಭವನ್ನು ನಿಲ್ಲಿಸಿದರಂತೆ. ಈ ಗುರುಗಳ ವಾಕ್ಯದಿಂದ ವ್ಯಕ್ತವಾದ ಇನ್ನೊಂದು ಮುಖ್ಯ ಅಂಶವೇನೆಂದರೇ 'ವೀರ ಸಿಂಹಾಸನ ಮುರುಘ ತರ್ಕದ ನೆಲೆ' ಎಂಬ ಸಂಗತಿ ಅಬ್ಬಿಮಠದ ಶಾಸನ ೬೩ ರಲ್ಲಿ ಬರುವ ಶಬ್ದಗಳಲ್ಲಿ ಅಭಿವ್ಯಕ್ತಿ ಪಡೆದಿದ್ದರೆ, ನಿಜಕ್ಕೂ ಕೊಡಗಿನ ವೀರಶೈವ ಗುರು-ವಿರಕ್ತ ಮಠಗಳ ಒಂದು ಪ್ರಾಚೀನ ಸಾಂಸ್ಕೃತಿಕ ಸಮನ್ವಯದ ಕೊಡುಗೆ ಎಂದಾಗುತ್ತದೆ. ಈ ಮಠದ ಜೋಗಿ ಕತೆ ಹಾಲೇರಿ ಅರಸರ ಮುಂದಿನ ಕಾಲದಿಂದಲೂ ರೂಢಿಗತವಾಗಿದ್ದು, ದಲಿತರ ಕುರಿತ ಕಾಳಜಿಯ ಸಾಂಕೇತಿಕ ಕತೆ ಎನಿಸುತ್ತದೆ. ಇಂದು ಅಬ್ಬಿಮಠವು ಚಿತ್ರದುರ್ಗದ ಬೃಹನ್ಮಠದ ನೇರ ನಿರ್ವಹಣೆಗಿರುವ ಸೋಮವಾರ ಪೇಟೆ ತಾಲೂಕಿನ ಪ್ರಸಿದ್ಧ ಮಠವಾಗಿದೆ.[೪೬] ಹಿಂದೂ ಇಸ್ಲಾಮಿಕ್ ಶೈಲಿಯ ಕಟ್ಟಡ ಹೊಂದಿದೆ. ಇದಿಷ್ಟು ಮಲೆನಾಡ ಸಿರಿಯ ತಾಣವಾದ ಅಬ್ಬಿಮಠದ ಒಟ್ಟು ಸಾಂಸ್ಕೃತಿಕ ನೋಟ.

ಕೊಲ್ಲಾಪುರದ ಚಿತ್ರದುರ್ಗ ಮಠ

ಕೊಲ್ಲಾಪುರವು ಸ್ವಾತಂತ್ರ್ಯ ಪೂರ್ವದಲ್ಲಿ ಕರ್ನಾಟಕದ ಒಂದು ಭಾಗವಾಗಿತ್ತು. ಸ್ವಾತಂತ್ರ್ಯ ನಂತರ ಹರಿದು ಹಂಚಿ ಹೋದ ಕರ್ನಾಟಕದ ಪ್ರಮುಖ ಭಾಗಗಳಲ್ಲಿ ಕೊಲ್ಲಾಪುರ, ಸೊಲ್ಲಾಪುರ, ಕೇರಳದ ಕಾಸರಗೋಡು ಮುಂತಾದವುಗಳನ್ನು ಗುರುತಿಸಬಹುದು. ಚಿತ್ರದುರ್ಗ ಬೃಹನ್ಮಠ ಕರ್ನಾಟಕದ ಮಟ್ಟಿಗೆ ಸೀಮಿತಗೊಂಡ ಮಠವಲ್ಲ ಕರ್ನಾಟಕೇತರ ರಾಜ್ಯಗಳಲ್ಲಿ ತನ್ನ ವ್ಯಾಪ್ತಿಯನ್ನು ಒಳಗೊಂಡಿದೆ. ಈ ಮಠ ಸಮಾಜಮುಖಿ, ಜನಮುಖಿಯಾಗಿರುವ ಕಾರಣ "ಬೃಹನ್ಮಠದ ಪೀಠಾಧಿಪತಿಗಳಾದ ಜಯದೇವ ಜಗದ್ಗುರುಗಳು ಮಹಾರಾಷ್ಟ್ರದ ಗಡಿಭಾಗದಲ್ಲಿ ಸಂಚಾರ ಕೈಗೊಂಡಿದ್ದರು. ಜಗದ್ಗುರುಗಳು ತಮ್ಮ ಸಂಸ್ಥಾನಕ್ಕೆ ದಯಮಾಡಿಸಬೇಕೆಂದು ಅಲ್ಲಿಯ ಮಹಾರಾಜರು ಭಕ್ತಿಯಿಂದ ಬಿನ್ನಹ ಮಾಡಿಕೊಂಡರು. ಆಮಂತ್ರಣ ಒಪ್ಪಿಕೊಂಡ ಜಗದ್ಗುರುಗಳು ಕೊಲ್ಲಾಪುರಕ್ಕೆ ಆಗಮಿಸಿದರು. ಮಹಾರಾಜರು ತೋರಿದ ಆದರ-ಅಭಿಮಾನ, ಭಕ್ತಿ ಗೌರವವನ್ನು ಗಮನಿಸಿದ ಜಗದ್ಗುರುಗಳು ಮಹಾರಾಷ್ಟ್ರದ ಈ ಭಾಗದಲ್ಲಿ ತಮ್ಮದೊಂದು ಶಾಖಾಮಠವಿದ್ದರೆ ಇಲ್ಲಿಯ ಸಾಮಾಜಿಕ ಮತ್ತು ಧಾರ್ಮಿಕ ಕಾರ್ಯಕಲಾಪಗಳು ಉತ್ತಮವಾಗಿ ನಡೆಯುತ್ತವೆ ಎಂದು ಭಾವಿಸುತ್ತಾರೆ. ಮಹಾರಾಜರು ಸ್ವತಃ ಧಾರ್ಮಿಕ ಪ್ರವೃತ್ತಿಯವರಾಗಿದ್ದರು. ಹೀಗಾಗಿ ಅವರಿಂದ ಅನುಕೂಲಕರ ಪ್ರತಿಕ್ರಿಯೆ ದೊರೆಯಿತು. ಮಠ ಕಟ್ಟಲು ವಿಶಾಲವಾದ ನಿವೇಶನ, ಅದಕ್ಕೆ ಬೇಕಾದ ಉಂಬಳಿ, ದತ್ತಿಗಳನ್ನು ಕೊಟ್ಟು ತಮ್ಮ ಗುರುಭಕ್ತಿಯನ್ನು ತೋರಿದರು. ಇಲ್ಲಿ ೧,೩೦,೦೦೦ ರೂಪಾಯಿಗಳನ್ನು ಖರ್ಚು ಮಾಡಿ ಭವ್ಯವಾದ ಹಾಗೂ ವಿಶಾಲವಾದ ಕಲ್ಲಿನ ಮಠವನ್ನು ನಿರ್ಮಿಸಲಾಯಿತು. ಅದು ಈಗ ಕೊಲ್ಲಾಪುರದ ದಸರಾ ಚೌಕದಲ್ಲಿದ್ದು ಚಿತ್ರದುರ್ಗದ ಮಠವೆಂದು ಹೆಸರು ಪಡೆದಿದೆ.[೪೬] ವಿದ್ಯೆ ಹಾಗೂ ವಿದ್ಯಾರ್ಥಿ ಪ್ರೇಮಿಗಳಾಗಿದ್ದ ಜಗದ್ಗುರುಗಳು ಬಡಮಕ್ಕಳಿಗೆ ಅನುಕೂಲವಾಗಲೆಂದು ಮಠದಲ್ಲೊಂದು ಪ್ರಸಾದನಿಲಯವನ್ನು ಪ್ರಾರಂಭಿಸಿದರು.

ಇಲ್ಲಿಯ ಪ್ರಸಾದನಿಲಯವು ಸಾವಿರಾರು ವಿದ್ಯಾರ್ಥಿಗಳು ಜ್ಞಾನಾರ್ಜನೆಯನ್ನು ಪಡೆದುಕೊಳ್ಳಲಿಕ್ಕೆ ಅನುಕೂಲವಾಗಿದೆ. ನಮ್ಮ ದೇಶದ ಶ್ರೇಷ್ಠ ಮುತ್ಸದ್ದಿಗಳಾಗಿದ್ದ ಶ್ರೀ ಬಿ.ಡಿ. ಜತ್ತಿಯವರು ಇಲ್ಲಿಯೇ ವ್ಯಾಸಂಗ ಮಾಡಿದ್ದು. ಇಂಥ ಅನೇಕ ಪ್ರತಿಭಾವಂತ ವಿದ್ಯಾರ್ಥಿಗಳು ಈ ಪ್ರಸಾದನಿಲಯದಲ್ಲಿದ್ದು ವ್ಯಾಸಂಗ ಮಾಡಿ ತಮ್ಮ ಬದುಕನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ.

ವರ್ಷವಿಡಿ ಶ್ರೀಮಠದಲ್ಲಿ ನಡೆಯುವ ಧಾರ್ಮಿಕ ಹಾಗೂ ಸಾಮಾಜಿಕ ಪರವಾದ ಕಾರ್ಯ ಚಟುವಟಿಕೆಗಳಲ್ಲಿ ಈ ಪ್ರದೇಶದ ಭಕ್ತ ಸಮೂಹ ಬಹು ಆಸಕ್ತಿಯಿಂದ ಪಾಲ್ಗೊಂಡು ಸಾಮಾಜಿಕ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ಹೀಗಾಗಿ ಇಂದಿಗೂ ಕೊಲ್ಲಾಪುರದ ಜನ ಚಿತ್ರದುರ್ಗದ ಬೃಹನ್ಮಠವನ್ನು ಭಕ್ತಿ ಗೌರವದಿಂದ ಕೊಂಡಾಡುತ್ತಾರೆ, ಸ್ಮರಿಸುತ್ತಾರೆ.

ದಾವಣಗೆರೆಯ ವಿರಕ್ತಮಠ

ಮುರುಗಾ ಸಮಯದ ಪ್ರಮುಖ ಮಠಗಳಲ್ಲಿ ಚಿತ್ರದುರ್ಗದ ಬೃಹನ್ಮಠದ ಶಾಖಾಮಠವಾಗಿರುವ ದಾವಣಗೆರೆಯ ವಿರಕ್ತಮಠವು ಒಂದು. ಈ ಮಠದ ಅಧಿಪತಿಗಳಾಗಿದ್ದ ಮೃತ್ಯುಂಜಯಸ್ವಾಮಿಗಳು ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಗಳನ್ನು ಅತ್ಯಂತ ವ್ಯವಸ್ಥಿತವಾಗಿ ರೂಪಿಸಿದರು. ಶ್ರೀಗಳು ಸಮಾಜದ ಜೊತೆಗೆ ಬೆರೆತು, ಅನೇಕ ಪ್ರತಿಷ್ಠಿತರನ್ನು ಬಲ್ಲವರನ್ನು ಮಠಕ್ಕೆ ಕರೆಯಿಸಿ ಅನೇಕ ವಿಷಯಗಳ ಕುರಿತು ಚರ್ಚೆ ಚಿಂತನೆ-ವಿಚಾರ ವಿನಿಮಯ ಮಾಡತೊಡಗಿದರು. ಮನೆಯ ಸ್ವಚ್ಛತೆಯ ಜೊತೆಗೆ ಮನದ ಶುದ್ಧೀಕರಣಕ್ಕೆ ಮಹತ್ವ ಕೊಡಬೇಕು. ಹಿರಿಯ ಕಿರಿಯರೆಲ್ಲರೂ ಲಿಂಗಧಾರಣೆ ಮಾಡಬೇಕು. ಅಷ್ಟಾವರಣ, ಷಟ್‌ಸ್ಥಲ ಮುಂತಾದ ವಿಷಯಗಳನ್ನು ಮನನ ಮಾಡಿಕೊಳ್ಳುವುದರ ಜೊತೆಗೆ ಶಿವಶರಣರ ವಚನಗಳನ್ನು ಪಠಿಸಬೇಕು ಎಂದು ಭಕ್ತರಿಗೆ ಉಪದೇಶಾಮೃತ ನೀಡುತ್ತಿದ್ದರು. ಆ ಕಾರಣಕ್ಕಾಗಿಯೇ ಭಜನಾ ಸಂಘಗಳನ್ನು ಸಂಘಟಿಸುತ್ತ ಕಾರ್ಯಕ್ರಮವನ್ನು ಹಮ್ಮಿಕೊಂಡರು. ಈ ಸಂದರ್ಭದಲ್ಲಿ ಶ್ರೀ ಹರ್ಡೇಕರ ಮಂಜಪ್ಪನವರು ತಮ್ಮ ಶಿಕ್ಷಕ ಹುದ್ದೆಗೆ ರಾಜೀನಾಮೆ ನೀಡಿ ದಾವಣಗೇರಿಗೆ ಆಗಮಿಸಿದ್ದರು. ಸಮಾಜಸೇವೆ ಬುದ್ಧಿಯುಳ್ಳವರೊಡನೆ ಶ್ರೀ ಮೃತ್ಯುಂಜಯ ಸ್ವಾಮಿಗಳು ಸಮಾಲೋಚನೆ ಮಾಡುವ ಮೂಲಕ ವೀರಶೈವ ತರುಣರ ಸಂಘಗಳಿಗೆ ಪ್ರೋತ್ಸಾಹಿಸುವ, ಸ್ಥಾಪನೆಗೆ ಅನುಮತಿ ನೀಡುವ ಕಾರ್ಯಕ್ಕೆ ಮುಂದಾದರು. ಈ ಕಾರ್ಯಗಳು ಮಂಜಪ್ಪನವರ ಮಾರ್ಗದರ್ಶನದಲ್ಲಿ ಆರಂಭಗೊಂಡವು.

ವೀರಶೈವ ಸಮಾಜದ ಮಕ್ಕಳು ಆಂಗ್ಲ ವಿದ್ಯಾಭ್ಯಾಸ ಮಾಡಬೇಕೆಂದು ಆಲೋಚಿಸಿದರು. ಶ್ರೀಮಠದಲ್ಲಿ ಉಚಿತ ಪ್ರಸಾದನಿಲಯವನ್ನು ಪ್ರಾರಂಭಿಸುವ ಮೂಲಕ ವೀರಶೈವಭಕ್ತರು, ವರ್ತಕರು ಚೀಲಕ್ಕೊಂದು ಮುಷ್ಠಿಯಂತೆ ಧಾನ್ಯ ನೀಡುವ ವ್ಯವಸ್ಥೆಯು ರೂಪಗೊಂಡಿತು. ಶಾಲೆ-ಕಾಲೇಜುಗಳಲ್ಲಿ ವಿದ್ಯಾರ್ಜನೆ ಮಾಡುತ್ತಿರುವ ವಿದ್ಯಾರ್ಥಿಗಳಿಗಾಗಿ ಶಿಷ್ಯವೇತನಗಳನ್ನು ಕೊಡುವ ಯೋಜನೆಯನ್ನು ರೂಪಿಸಿದರು. ಈ ಕಾರ್ಯ ನಿರ್ವಹಣೆಗಾಗಿ ದಾವಣಗೇರಿಯಲ್ಲಿ 'ವೀರಶೈವ ವಿದ್ಯಾವರ್ಧಕ ಫಂಡ್' ಎಂಬ ಸಂಸ್ಥೆಯನ್ನು ಪ್ರಾರಂಭಿಸಿದರು. ಪ್ರಸಾದನಿಲಯದಲ್ಲಿ ಧಾರ್ಮಿಕ ಹಾಗೂ ನೈತಿಕ ವಿದ್ಯಾಪ್ರಸಾರವೂ ನಡೆಯಿತು.

ವೀರಶೈವ ಧರ್ಮದ ತತ್ವಗಳಿಗೆ ವಿಶಿಷ್ಟ ಸ್ವರೂಪ ಕೊಟ್ಟು ಉದ್ಧರಿಸಿದ ದಿವ್ಯಜ್ಯೋತಿ ಶ್ರೀ ಬಸವೇಶ್ವರರ ಜಯಂತಿಯನ್ನು ಆಚರಿಸುವ ಕ್ರಮವನ್ನು ಪ್ರಥಮತಃ ದಾವಣಗೇರಿ ವಿರಕ್ತಮಠದಲ್ಲಿ ಆರಂಭಿಸಲಾಯಿತು. ಈ ಎಲ್ಲ ಕಾರ್ಯಕ್ರಮದಲ್ಲಿ ಹರ್ಡೇಕರ ಮಂಜಪ್ಪನವರು ಪಾಲ್ಗೊಂಡಿದ್ದರು.

ಹೀಗೆ ಶ್ರೀಗಳು ಸಂಘಟನೆ ಮಾಡಿದ ಭಜನಾ ಮೇಳಗಳು, ತರುಣಸಂಘಗಳು, ವಿದ್ಯಾವರ್ಧಕ ಸಂಘ ಉಚಿತ ಪ್ರಸಾದನಿಲಯ, ಇವುಗಳ ಜೊತೆಗೆ ದಾವಣಗೇರಿಯ ಸುತ್ತಮುತ್ತಲಿನ

ಗ್ರಾಮಸ್ಥರಲ್ಲಿ ಧರ್ಮಜಾಗೃತಿ, ಸಮಾಜ ಸುಧಾರಣೆ, ವಿದ್ಯಾಪ್ರಸಾರಗಳಿಗೆ ಹೊಸಚೈತನ್ಯ ನೀಡುವುದರ ಮೂಲಕ ನವಜಾಗೃತಿಯನ್ನು ಮೂಡಿಸಿದರು. ಸುಮಾರು ಹತ್ತು ವರ್ಷಗಳ ಕಾಲ ಶ್ರೀಗಳು ದಾವಣಗೇರಿಯಲ್ಲಿ ಧರ್ಮ, ಶಿಕ್ಷಣ, ಸಂಸ್ಕೃತಿ ಇವುಗಳ ರಕ್ಷಣೆ-ಪೋಷಣೆ ಮಾಡಿದರು. ಅಂದು ಹಾಕಿಕೊಟ್ಟ ಮಾರ್ಗದಲ್ಲಿಯೇ ಇಂದಿನವರೆಗೂ ಸಾಂಗೋಪಾಂಗವಾಗಿ ನಡೆದುಕೊಂಡು ಬಂದಿರುವುದನ್ನು ಇಲ್ಲಿ ಸ್ಮರಿಸಬಹುದು.[೪೮] ಈ ಎಲ್ಲ ಕಾರ್ಯಗಳಿಗೆ ಪ್ರೋತ್ಸಾಹಿಸುವ ಚಿತ್ರದುರ್ಗ ಬೃಹನ್ಮಠದ ಶ್ರೀ ಶಿವಮೂರ್ತಿ ಸ್ವಾಮಿಗಳು ರಚನಾತ್ಮಕ ಕಾರ್ಯಗಳಿಗೆ ಮಾರ್ಗದರ್ಶನ, ನೆರವು ನೀಡುವ ಮೂಲಕ ಸಮಾಜದ ಅಭಿವೃದ್ಧಿಗೆ ಶ್ರಮಿಸಿದ್ದಾರೆ.

ಮಾದಾಪುರದ ಮುರುಘಾಮಠ

ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನ ಮಾದಾಪುರ ಗ್ರಾಮವು ತಾಲೂಕು ಕೇಂದ್ರದಿಂದ ಆಗ್ನೇಯಕ್ಕೆ ೧೩ ಕಿ.ಮೀ. ದೂರದಲ್ಲಿದೆ. ಪ್ರಕೃತಿ ಸೌಂದರ್ಯದ ಮಡಿಲಲ್ಲಿರುವ ಈ ಗ್ರಾಮವು ಹಾಲೇರಿ ಅರಸರ ಧಾರ್ಮಿಕ ಕೇಂದ್ರ ಸ್ಥಳವಾಗಿತ್ತು. ಇಂದಿಗೂ ಸಹ ವೀರಶೈವರ ತತ್ವ ಆದರ್ಶಗಳನ್ನು ಪ್ರತಿಪಾದಿಸುವ ಧಾರ್ಮಿಕ ಕೇಂದ್ರವಾಗಿ ರೂಪಗೊಂಡಿದೆ. ಚಿತ್ರದುರ್ಗ ಬೃಹನ್ಮಠದ ಶಾಖಾಮಠವಾಗಿರುವ ಮುರುಘಾಮಠವು ಶ್ರೀ ಮುರಿಗಾ ಶಾಂತವೀರ ಸ್ವಾಮಿಗಳು ಲೋಕ ಸಂಚಾರ ಕೈಗೊಂಡು ಅದೇ ಪ್ರದೇಶದಲ್ಲಿ ಅನುಷ್ಠಾನ ಕೈಗೊಂಡರು. ಅನೇಕ ಪವಾಡಗಳನ್ನು ಮಾಡಿ ಭಕ್ತರನ್ನು ಉದ್ಧರಿಸಿದರು. ಧರ್ಮೋಪದೇಶ, ಸಂಸ್ಕಾರ, ಹಿತವಚನದ ನುಡಿಗಳು ಶ್ರೀಗಳ ಮಹತ್ವಾಕಾಂಕ್ಷೆಯ ಕಾರ್ಯಗಳಾಗಿದ್ದವು. ಈ ಎಲ್ಲಾ ಕಾರ್ಯಗಳಿಂದ ಸಂತೋಷಗೊಂಡ ಶ್ರೀ ದೊಡ್ಡವೀರ ರಾಜೇಂದ್ರರು (೧೭೮೧-೧೮೦೯) ಗುರುಗಳ ಆಶೀರ್ವಾದ ಪಡೆದು ೧೭೯೯ ರಲ್ಲಿ ಮಾದಾಪುರದಲ್ಲಿ ಮಠವನ್ನು ಸ್ಥಾಪನೆ ಮಾಡುವ ಮೂಲಕ ಬೇಳೂರು ಮತ್ತು ಮಾದಾಪುರ ಗ್ರಾಮಗಳಲ್ಲಿ ಮೂರು ಸಾವಿರದ ಐದನೂರು (೩೫೦೦) ಎಕರೆ ಜಮೀನನ್ನು ಮಠಕ್ಕೆ ಉಂಬಳಿಯಾಗಿ ನೀಡಿದರು. ಈ ಗ್ರಾಮಗಳ ವ್ಯಾಪ್ತಿಗೆ ಬರುವ ಕಂದಾಯದ ಹಣವನ್ನು ಮಠದ ಧಾರ್ಮಿಕ ಕಾರ್ಯಗಳಿಗೆ ಸದ್ವಿನಿಯೋಗವಾಗಬೇಕು ಎಂಬ ಉದ್ದೇಶದಿಂದ ತಾಮ್ರಶಾಸನವನ್ನು ಬರೆಯಿಸಿಕೊಟ್ಟರು.[೪೯]

ಶ್ರೀ ಮುರಿಗಾ ಶಾಂತವೀರ ಸ್ವಾಮಿಗಳು ಮಾದಾಪುರ, ಬೇಳೂರಿನಲ್ಲಿ ಮಠವನ್ನು ಸ್ಥಾಪಿಸಿ ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕಾರ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟರು. ಜೊತೆಗೆ ಅಬ್ಬಿಮಠವನ್ನು ಬೆಳೆಸಿ ಈ ಮೂರು ಮಠಗಳು ಈ ಭಾಗದಲ್ಲಿ ಶ್ರೇಷ್ಠತೆಯನ್ನು ಪಡೆಯುವಂತೆ ಶ್ರಮಿಸಿದರು. ಈ ಮಠದ ಪರಂಪರೆಯು ಈ ಕೆಳಗಿನಂತೆ ನಡೆದುಕೊಂಡು ಬಂದಿದೆ. ಶ್ರೀ ಮ.ನಿ.ಪ್ರ. ಮುರಿಗಾ ಶಾಂತವೀರ ಸ್ವಾಮಿಗಳು, ಗುರುಪಾದ ಸ್ವಾಮಿಗಳು, ಶಾಂತಮಲ್ಲ ಸ್ವಾಮಿಗಳು, ವೀರಭದ್ರ ಸ್ವಾಮಿಗಳು, ಶಾಂತವೀರ ಸ್ವಾಮಿಗಳು, ಜಯವಂತ ಸ್ವಾಮಿಗಳು, ಮೋಕ್ಷಪತಿ ಸ್ವಾಮಿಗಳು.

ಶ್ರೀ ಗುರುಪಾದ ಸ್ವಾಮಿಗಳು ಎರಡು ಮಠಗಳ ಆಡಳಿತವನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಬಂದು ಅಭಿವೃದ್ಧಿಪಡಿಸಿ ಮಾದಾಪುರದಲ್ಲಿ ಲಿಂಗೈಕ್ಯರಾದರು. ಮುಂದೆ ಬಂದ ಶ್ರೀ ಶಾಂತಮಲ್ಲ ಸ್ವಾಮಿಗಳು, ವೀರಭದ್ರ ಸ್ವಾಮಿಗಳು ಈ ಮಠದ ಶಾಖಾಮಠವಾದ ಅಬ್ಬಿಮಠದಲ್ಲಿ ಲಿಂಗೈಕ್ಯರಾದರು. ಈ ಉಭಯ ಶ್ರೀಗಳ ಗದ್ದುಗೆ ಅಬ್ಬಿಮಠದಲ್ಲಿದ್ದು ಅಲ್ಲಿಯೇ ಪೂಜೆಗೊಳ್ಳುತ್ತಿದ್ದಾರೆ. ಶ್ರೀ ಮಠವು ಖಾಲಿ ಇರುವ ಆ ಸಂದರ್ಭದಲ್ಲಿ ಚಿತ್ರದುರ್ಗದ ಬೃಹನ್ಮಠವು ಶಾಂತವೀರ ಸ್ವಾಮಿಗಳನ್ನು ನೇಮಿಸಿತು. ಮಠದ ಆಸ್ತಿಯು ಬೇಳೂರಿನಲ್ಲಿ ಇದ್ದ ಕಾರಣ ಆಸ್ತಿಯ ನಿರ್ವಹಣೆಗಾಗಿ ಮಾದಾಪುರ ಮಠದ ಆಡಳಿತವು ಬೇಳೂರಿಗೆ ವರ್ಗಾವಣೆಗೊಂಡಿತು. ಶಾಂತವೀರ ಸ್ವಾಮಿಗಳು ಮಠವನ್ನು ಅಭಿವೃದ್ಧಿಪಡಿಸಿ ಲಿಂಗೈಕ್ಯರಾದ ನಂತರ ಜಯವಂತ ಸ್ವಾಮಿಗಳು ನಂತರ ಮೋಕ್ಷಪತಿ ಶ್ರೀಗಳು ಧಾರ್ಮಿಕ, ಶೈಕ್ಷಣಿಕ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಡೆಸಿಕೊಂಡು ಬಂದರು. ಮಠದ ಆವರಣದಲ್ಲಿರುವ ಗದ್ದುಗೆಗೆ ನಿತ್ಯಪೂಜೆ, ಹಾಗೆಯೇ ಮಾದಾಪುರ ಮಠದಲ್ಲಿ ಶ್ರೀ ದೊಡ್ಡವೀರ ರಾಜೇಂದ್ರರ ಧರ್ಮಪತ್ನಿ ಶ್ರೀಮತಿ ಮಹದೇವಮ್ಮನವರ ಗದ್ದುಗೆ ಸ್ಥಾಪಿಸಿ ನಿತ್ಯ ಪೂಜೆ ಮಾಡುವರು. ಬೇಳೂರು ಮಾದಾಪುರ, ಅಬ್ಬಿಮಠದ ಕೇಂದ್ರವಾದ ಮೇಲೆ ಹೆಚ್ಚಿನ ಧಾರ್ಮಿಕ ಕಾರ್ಯಗಳು ನಡೆದವು. ವಿಶಾಲವಾದ ಕಟ್ಟಡವನ್ನು ಹೊಂದುವುದರ ಜೊತೆಗೆ ಮಾದಾಪುರದಲ್ಲಿ ಉತ್ತರಿ ಹಬ್ಬವನ್ನು ಪ್ರತಿವರ್ಷ ವಿಶೇಷವಾಗಿ ಆಚರಿಸುವುದು ಮುಂತಾದ ಮಹತ್ವದ ಕಾರ್ಯಗಳು ಶ್ರೀಮಠದಿಂದ ನಡೆದುಕೊಂಡು ಬಂದವು. ಬೇಳೂರು ಮಠದ ಆವರಣದಲ್ಲಿ ವೀರರಾಜೇಂದ್ರ ಪ್ರೌಢಶಾಲೆ ಪ್ರಾರಂಭಿಸುವ ಮೂಲಕ ಗ್ರಾಮಾಂತರ ಪ್ರದೇಶದ ಬಡಮಕ್ಕಳಿಗೆ ಕಲಿಯಲು ಅನುಕೂಲ ಮಾಡಿಕೊಟ್ಟಿರುವುದು ಶ್ರೀ ಮಠದ ಹೆಗ್ಗಳಿಕೆಯಾಗಿದೆ.

ಆನಂದಪುರಂ ಮುರುಘರಾಜೇಂದ್ರ ಮಠ

ಶಿವಮೊಗ್ಗ ಜಿಲ್ಲೆಯ ಸಾಗರ ತಾಲೂಕಿನ ಐತಿಹಾಸಿಕ ಪಟ್ಟಣ ಆನಂದಪುರಂ ಇದು ನಗರದಿಂದ ಪೂರ್ವದಿಕ್ಕಿನಲ್ಲಿದೆ. ಹಿಂದೆ ಈ ಪಟ್ಟಣಕ್ಕೆ ಮಾಚರಾಜಪುರ ಎಂದು ಕರೆಯಲಾಗಿತ್ತು. ಕಾಲಾಂತರದಲ್ಲಿ ಆಚಪುರವಾಗಿ, ಕೆಳದಿ ಸೋಮಶೇಖರ ನಾಯಕನ ಕಾಲದಲ್ಲಿ (ಕ್ರಿ.ಶ. ೧೭೦೦) ಆನಂದಪುರಂ ಆಗಿ ನಾಮಾಂತರಗೊಂಡಿರುವುದು ವಿಶೇಷವೆನಿಸುತ್ತದೆ. ಇಂತಹ ಪ್ರದೇಶದಲ್ಲಿ ಶ್ರೀ ಮುರುಘರಾಜೇಂದ್ರ ಮಠವು ಜನ್ಮತಾಳಿರುವುದು ಹೆಮ್ಮೆ ಎನಿಸುತ್ತದೆ. ಇಲ್ಲಿ ಶ್ರೀ ಮಠ ಸ್ಥಾಪನೆಗೊಳ್ಳಲಿಕ್ಕೆ ವಿಶೇಷ ಆಸಕ್ತಿ ವಹಿಸಿದವರು ಕೆಳದಿ ಅರಸರು. "ಕೆಳದಿಯ ಸೋಮಶೇಖರ ನಾಯಕನು ಚಿತ್ರದುರ್ಗದ ಮುರುಘಾಮಠದ ಶ್ರೀ ಇಮ್ಮಡಿ ಗುರುಸಿದ್ಧ ಸ್ವಾಮಿಗಳನ್ನು ರಾಜಮರ್ಯಾದೆ ಗೌರವದಿಂದ ಕರೆಯಿಸಿ, ಆನಂದಪುರಂನಲ್ಲಿ ಪಟ್ಟ ಕಟ್ಟಿ ಮುರುಘಾಮಠದ ಮೂಲಮಠವೆಂದು ಮನ್ನಣೆ ಕೊಟ್ಟು ಎಂಬತ್ತೆರಡು ಬಿರುದುಗಳನ್ನು ನೀಡಿ ಗೌರವಿಸಿ ಶಾಸನವನ್ನು ಬರೆಯಿಸಿಕೊಡುತ್ತಾನೆ. ಅಂದಿನಿಂದ ಆನಂದಪುರಂ ಮಠಕ್ಕೆ ಮುರುಘಾ ಸಮಯದ

ಮಠಗಳಲ್ಲಿಯೇ ಹೆಚ್ಚಿನ ಆದ್ಯತೆಯನ್ನು ಕೊಡಲಾಗಿದೆ. ಇದೇ ಸಂದರ್ಭದಲ್ಲಿ ಸೋಮಶೇಖರ ನಾಯಕ ಶಿವಮೊಗ್ಗದ ಬೆಕ್ಕಿನಕಲ್ಮಠದ ಆಡಳಿತವನ್ನು ಆನಂದಪುರಂಗೆ ವರ್ಗಾಯಿಸುವ ಮೂಲಕ ಧಾರ್ಮಿಕ ಚಟುವಟಿಕೆಗಳಿಗೆ ತೊಂದರೆಯಾಗದಂತೆ ನಡೆದುಕೊಂಡು ಹೋಗಲು ಮೂರು ಗ್ರಾಮಗಳನ್ನು ದತ್ತಿಯಾಗಿ ಬರೆದುಕೊಡುತ್ತಾನೆ.

ಶಿವಮೊಗ್ಗದ ಬೆಕ್ಕಿನಕಲ್ಮಠದ ಪರಂಪರೆಯಲ್ಲಿ ಆರು ತಲೆಮಾರುಗಳ ತರುವಾಯ ವರ್ಗಾವಣೆಗೊಂಡ ಮಠದ ಪರಂಪರೆಯ ಕೊಂಡಿಯಾಗಿ ಏಳನೆಯ ಗುರುಗಳಾದ ಗುರುಸಿದ್ಧ ಸ್ವಾಮಿಗಳು ಅಧಿಕಾರ ವಹಿಸಿಕೊಂಡು ಮುರುಘಾರಾಜೇಂದ್ರ ಸಂಸ್ಥಾನಮಠದ ಗುರುಪರಂಪರೆಯನ್ನು ಮುಂದುವರೆಸಿದರು. ಈ ಪರಂಪರೆಯಲ್ಲಿ ೨ನೆಯ ಜ.ಇಮ್ಮಡಿ ಗುರುಸಿದ್ಧಸ್ವಾಮಿಗಳು ಇವರ ತರುವಾಯ ಬಸವಲಿಂಗ ಸ್ವಾಮಿಗಳು, ಗುರುಬಸವಲಿಂಗ ಸ್ವಾಮಿಗಳು, ಲಿಂಗಸ್ವಾಮಿಗಳು, ಸಿದ್ಧಲಿಂಗ ಸ್ವಾಮಿಗಳು, ಇಮ್ಮಡಿ ಮುದ್ದವೀರ ಸ್ವಾಮಿಗಳು, ಇಮ್ಮಡಿ ಶಾಂತವೀರ ಸ್ವಾಮಿಗಳು, ಗುರುಬಸವ ಸ್ವಾಮಿಗಳು, ಇಮ್ಮಡಿ ಲಿಂಗಸ್ವಾಮಿಗಳು, ಸಚ್ಚಿದಾನಂದ ಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು ಹೀಗೆ ೧೭೧೦ ರಿಂದ ಇಂದಿನವರೆಗೆ ಈ ಪರಂಪರೆ ಸಾಗಿಕೊಂಡು ಬಂದಿರುವುದನ್ನು ಕಾಣಬಹುದು.

ಈ ಮಠದಲ್ಲಿ ಲಿಂಗೈಕ್ಯರಾದ ಹದಿನಾರು (ಬೆಕ್ಕಿನ ಕಲ್ಮಠವೂ ಸೇರಿ) ಜನ ಗುರುಗಳ ಪೈಕಿ ಇಮ್ಮಡಿ ಗುರುಸಿದ್ಧ ಸ್ವಾಮಿಗಳು, ಇಮ್ಮಡಿ ಮುದ್ವೀರ ಸ್ವಾಮಿಗಳು, ಇಮ್ಮಡಿ ಲಿಂಗ ಸ್ವಾಮಿಗಳು ಹಾಗೂ ಸಚ್ಚಿದಾನಂದ ಸ್ವಾಮಿಗಳ ಗದ್ದುಗೆಗಳು ಈ ಮಠದ ಆವರಣದಲ್ಲಿ ಸ್ಥಾಪನೆಗೊಂಡಿದ್ದು, ಉಳಿದ ಹನ್ನೆರಡು ಜನ ಶ್ರೀಗಳ ಗದ್ದುಗೆಗಳು ಕಂಡುಬರುವುದಿಲ್ಲ. ಈ ಪರಂಪರೆಯ ಮೂಲಸ್ಥಳ ಎಲವಟ್ಟಿಯ ಬೆಕ್ಕಿನಕಲ್ಮಠವಾದರೂ, ಈಗ ಎಲವಟ್ಟಿ ಶಾಖಾ ಮಠವಾಗಿ ರೂಪಗೊಂಡಿದೆ. ಸಾಗರ ತಾಲೂಕಿನ ತಾರೆಕಟ್ಟೆ, ಹಾರ್ನಳ್ಳಿ, ಅತ್ತಿಗುಂದ, ಮುದ್ದಾನಕೊಪ್ಪ ಹಾಗೂ ಮಳಲಿಯಲ್ಲಿ ಈ ಪೀಠದ ಶಾಖಾಮಠಗಳು ಅಸ್ತಿತ್ವದಲ್ಲಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲೂಕಿನ ಮತ್ತಿನಕೊಪ್ಪ, ಧಾರವಾಡ ಜಿಲ್ಲೆಯ ಅಬ್ಬಿಗೇರಿ, ಸಂಶಿ ಹಾಗೂ ಮಹಾರಾಷ್ಟ್ರದ ಸೊಲ್ಲಾಪುರ ಮಠ ಶಾಖಾಮಠಗಳಾಗಿವೆ.

ಕೆಳದಿ ಅರಸರ ರಾಜಾಶ್ರಯದೊಂದಿಗೆ ಬೆಳೆದ ಶ್ರೀಮಠವು ಅವರ ಕಾಲದಲ್ಲಿ ಸ್ವಾಮಿಗಳ ಪೂಜೆ ಸಂದರ್ಭದಲ್ಲಿ ಉಪಯೋಗಿಸಲು ರುದ್ರಾಕ್ಷಿಯಲ್ಲಿ ಮಾಡಿಸಿದ ದೊಡ್ಡ ಮಂಟಪ, ಕಂಚಿನ ದೀಪದ ರಥ ಮುಂತಾದವು ಮಠದ ಅಪರೂಪದ ಕಲಾಕೃತಿಗಳಾಗಿವೆ. ಕೆಳದಿ ಅರಸರು ಮಾಡಿಸಿಕೊಟ್ಟ ರುದ್ರಾಕ್ಷಿ ಮಂಟಪದಲ್ಲಿ ಸ್ವಾಮಿಗಳು ಕುಳಿತು ಪ್ರತಿನಿತ್ಯ ಪೂಜೆ ನಡೆಸುತ್ತಾ ಬಂದಿದ್ದಾರೆ. ಹಾಗೆಯೇ ಪರಂಪರೆಯಿಂದ ಬಂದ ನಂದಿವಿಗ್ರಹ ಇದ್ದು, ಅದನ್ನು ಅಭಿಷೇಕದ

ಸಂದರ್ಭದಲ್ಲಿ ಬಳಸಿಕೊಳ್ಳುವರು. ಈ ಎಲ್ಲಾ ವಿಶೇಷ ಕೊಡುಗೆಗಳ ಜೊತೆಗೆ ರಾಜ ಉಂಗುರ, ಬಿರುದಾವಳಿಗಳು ರಾಜವಂಶಸ್ಥರಿಂದ ದೊರೆತ ಬಳುವಳಿಯಾಗಿವೆ.

ಈ ಪರಂಪರೆಯಲ್ಲಿ ಬರುವ ಬಹುತೇಕ ಶ್ರೀಗಳು ಸಾಹಿತ್ಯ ಆಸಕ್ತರು. ಲಿಂಗೈಕ್ಯ ಇಮ್ಮಡಿ ಗುರುಸಿದ್ಧ ಸ್ವಾಮಿಗಳು ಸ್ವತಃ ಕವಿಗಳಾಗಿದ್ದು ಇಪ್ಪತ್ತಾರು ಕೃತಿಗಳನ್ನು ರಚಿಸಿದ್ದು, ಇವುಗಳಲ್ಲಿ ವೀರಶೈವ ಅಧ್ಯಯನ ಸಂಸ್ಥೆಯು ಏಳು ಕೃತಿಗಳನ್ನು ಪ್ರಕಟಿಸಿದೆ. ಹಾಲಾಸ್ಯ ಪುರಾಣ ಮೈಸೂರು ವಿಶ್ವವಿದ್ಯಾಲಯದಿಂದ ಪ್ರಕಟವಾಗಿದೆ. ಕೈವಲ್ಯನಾಮ್ಯೆಕೋತ್ತರ ಶತಸ್ಥಲ ಶ್ರೀಮಠದಿಂದ ಪ್ರಕಟವಾಗಿದೆ.

ಸಧ್ಯದ ಶ್ರೀಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳಿಗೆ ಸಾಹಿತ್ಯದ ಮೇಲೆ ಎಲ್ಲಿಲ್ಲದ ಪ್ರೀತಿ. ಹೀಗಾಗಿ ಅವರೇ ಸ್ವತಃ ಆಸಕ್ತಿ ವಹಿಸಿ "ಮಲೆನಾಡು ವೀರಶೈವ ಅಧ್ಯಯನ ಸಂಸ್ಥೆ"ಯನ್ನು ಹುಟ್ಟು ಹಾಕಿ, ಅದರ ಅಡಿಯಲ್ಲಿ ಸುಮಾರು ಇಪ್ಪತ್ತೈದು ಮೌಲಿಕ ಕೃತಿಗಳನ್ನು ಹೊರತಂದಿದ್ದಾರೆ. ಕೆಳದಿ ಸಂಸ್ಥಾನದ ಸಮಗ್ರ ಅಧ್ಯಯನ ಮಾಡಿಸಿ ಕೆಳದಿ ಅರಸರ ಇತಿಹಾಸದ ಮೇಲೆ ಬೆಳಕು ಚೆಲ್ಲುವಂತಹ ಕೃತಿಗಳನ್ನು ಹೊರತಂದಿದ್ದಾರೆ. ನಾಗರಖಂಡ ಎಪ್ಪತ್ತು, ವಚನ ಸಂಗ್ರಹಗಳು, ನಾ ಕಂಡ ಮಲೆನಾಡು ಕೃತಿಗಳು ಪ್ರಕಟಗೊಂಡಿವೆ.[೩೦]

ಇವುಗಳಲ್ಲದೆ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಧಾರ್ಮಿಕ, ಸಂಶೋಧನಾತ್ಮಕ ಗ್ರಂಥಗಳನ್ನು ನೀಡಿ ವಿಚಾರ ಸಂಕಿರಣಗಳು, ಚರ್ಚೆಗಳು, ಇತಿಹಾಸ ಸಮ್ಮೇಳನಗಳನ್ನು ನಡೆಸಿ ಅನೇಕ ವಿಷಯಗಳ ಮೇಲೆ ಬೆಳಕು ಚೆಲ್ಲುವಂತಹ ಕೆಲಸ ಮಾಡಿದ್ದಾರೆ.

೧೯೭೧ ರಲ್ಲಿ ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮಿಗಳು ಅಧಿಕಾರ ವಹಿಸಿಕೊಂಡ ನಂತರ ಸಾಕಷ್ಟು ಪ್ರಗತಿಯನ್ನು ಮಾಡುತ್ತಲೇ ಬಂದಿದ್ದಾರೆ. ೧೯೮೦ರಲ್ಲಿ ಗುರುಬಸವೇಶ್ವರ ವಿದ್ಯಾಪೀಠವನ್ನು ಸ್ಥಾಪಿಸಿ ಆನಂದಪುರಂ, ಶಿವಮೊಗ್ಗ, ಹಾರನಹಳ್ಳಿ, ನ್ಯಾಮತಿಯಲ್ಲಿ ಸಂಸ್ಕೃತ ಪಾಠಶಾಲೆಗಳು, ಆನಂದಪುರಂ, ಎಲವಟ್ಟಿ, ಮಲವಕೊಪ್ಪದಲ್ಲಿ ನಾಲ್ಕು ಪ್ರೌಢಶಾಲೆಗಳು, ಶಿವಮೊಗ್ಗ, ಎಲವಟ್ಟಿಯಲ್ಲಿ ಎರಡು ಪ್ರಾಥಮಿಕ ಶಾಲೆಗಳು, ಶಿವಮೊಗ್ಗ ಮತ್ತು ಆನಂದಪುರಂನಲ್ಲಿ ಎರಡು ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸಿದ್ದಾರೆ. ಅಲ್ಲದೆ ಆನಂದಪುರಂನಲ್ಲಿ ಅನಾಥಾಶ್ರಮ, ಉಚಿತ ವಿದ್ಯಾರ್ಥಿನಿಲಯ, ಸಂಗೀತ ಪಾಠಶಾಲೆಗಳನ್ನು ನಡೆಸುತ್ತಿದ್ದಾರೆ.

ಆನಂದಪುರಂ ಸೇರಿ ಇತರೆ ನಾಲ್ಕು ಶಾಖಾಮಠಗಳನ್ನು ಜೀರ್ಣೋದ್ಧಾರ ಮಾಡಿ ಮಧ್ಯಪಾನ ಮುಂತಾದ ದುಶ್ಚಟಗಳನ್ನು ನಿರ್ಮೂಲನೆಗೊಳಿಸಿ, ವೀರಶೈವ ಮಹಾಸಭೆಯ ಗೌರವಾಧ್ಯಕ್ಷರಾಗಿ ಸಾಮಾಜಿಕ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಮೂಲಕ ಅನೇಕ ಸಾಹಿತಿಗಳಿಗೆ, ಕಲಾವಿದರಿಗೆ, ಆಶ್ರಯ ನೀಡಿ ಗೌರವಿಸಿ ಪ್ರೋತ್ಸಾಹಿಸಿದ್ದನ್ನು ಮರೆಯುವಂತಿಲ್ಲ. ಮಠದಲ್ಲಿ ಪ್ರತಿ

ಅಮವಾಸ್ಯೆಯ ದಿನ ಶಿವಾನುಭವ ಗೋಷ್ಠಿ, ಕಾರ್ತಿಕ ಮಾಸದಲ್ಲಿ ಲಕ್ಷ ದೀಪೋತ್ಸವ, ವಿದ್ವಾಂಸರಿಂದ ಉಪನ್ಯಾಸ, ನಾಡಿನ ವಿವಿಧ ಕ್ಷೇತ್ರಗಳಲ್ಲಿ ದುಡಿದ ಹಿರಿಯರಿಗೆ ಸನ್ಮಾನ ನಡೆಸುತ್ತಾ ಬಂದಿದೆ. ಪ್ರತಿನಿತ್ಯ ತ್ರಿಕಾಲ ಪೂಜೆ, ಮಠಕ್ಕೆ ಬರುವ ಭಕ್ತರಿಗೆ ದಾಸೋಹ, ವಸತಿ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಹೀಗೆ ಶ್ರೀಮಠ ಸಾಮಾಜಿಕವಾಗಿ ಉನ್ನತ ಸ್ಥಾನದಲ್ಲಿರುವುದನ್ನು ಕಾಣಬಹುದು.

ಹೀಗೆ ಮುರುಗಾ ಸಮಯದ ಮಠಗಳು ಈ ನಾಡಿನಲ್ಲಿ ಮತ್ತು ಹೊರನಾಡುಗಳಲ್ಲಿ ವ್ಯಾಪಿಸಿಕೊಂಡಿವೆ. ಈ ಸಮಯದ ಬಹಳಷ್ಟು ಮಠಗಳು ಸಮಾಜದ ಧಾರ್ಮಿಕ, ಸಾಹಿತ್ಯಿಕ, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತ ಬಂದಿವೆ.

ಅಡಿ ಟಿಪ್ಪಣಿಗಳು :

---

[೧] ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ – ಸಂ. ಡಾ॥ ಆರ್.ಸಿ. ಹಿರೇಮಠ, ಪು ೧೩೩.

[೨] ಅದೇ ಪುಟ ೧೩೩.

[೩] ಅದೇ ಪುಟ ೧೪೦.

[೪] ಅದೇ ಪುಟ ೧೧೭.

[೫] ಅದೇ ಪುಟ ೩೦೧.

[೬] ರಜತದೀಪ್ತಿ – ಸಂ. ಪ್ರೊ॥ ಜಿ.ಎಚ್. ಹನ್ನೆರಡುಮಠ ಹಾಗೂ ನಿರ್ಮಲಾ ಪಟ್ಟಣಶೆಟ್ಟಿ, ಪು. ೨.

[೭] ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ – ಡಾ॥ ಕೆ. ರವೀಂದರನಾಥ, ಪು. ೪೦.

[೮] ಬಿ. ರಾಜಶೇಖರಪ್ಪ – ಮುರುಘರಾಜೇಮದ್ರ ಬೃಹನ್ಮಠ, ಚಿತ್ರದುರ್ಗ. ಕಲ್ಯಾಣದ ಹಾದಿ – ಸಂ. ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರ. ತೋಂಟದಾರ್ಯಮಠ, ಗದಗ, ೧೯೯೯, ಪು. ೩೭೨.

[೯] ಅದೇ ಪುಟ ೩೭೩.

[೧೦] ಅದೇ ಪುಟ ೩೭೪.

[೧೧] ಮುರಿಗೆ ಸ್ವಾಮಿಗಳ ಸ್ತೋತ್ರಕರಂಡ, ಸಂ. ಎಸ್. ಶಿವಣ್ಣ, ಪ್ರ. ಬೃಹನ್ಮಠ, ಚಿತ್ರದುರ್ಗ, ೧೯೮೪, ಪು. ೪, ೫.

[೧೨] ಕರ್ನಾಟಕ ವೀರಶೈವ ಮಠಗಳು – ಚಂದ್ರಶೇಖರ ನಾರಣಾಪುರ, ಗೆಳೆಯ ಪ್ರಕಾಶನ, ಚಿಕ್ಕಮಗಳೂರು, ಪು–೩೦೧.

[೧೩] ಅದೇ ಪುಟ ೩೯೨.

[೧೪] ಅದೇ ಪುಟ ೩೬೧.

[೧೫] ಅದೇ ಪುಟ ೩೯೩.

[೧೬] ಕಲ್ಯಾಣ ಸಂಗಮ – ಡಾ॥ ಬಿ. ರಾಜಶೇಖರಪ್ಪ, ಮುರುಘರಾಜೇಂದ್ರ ಬೃಹನ್ಮಠ ಚಿತ್ರದುರ್ಗ, ಲೇ. ಪು. ೨೨೦.

[೧೭] ಅದೇ ಪುಟ ೨೧೮.

[೧೮] ಕರ್ನಾಟಕದ ವೀರಶೈವ ಮಠಗಳು – ಚಂದ್ರಶೇಖರ ನಾರಣಾಪುರ, ಗೆಳೆಯ ಪ್ರಕಾಶನ, ಚಿಕ್ಕಮಗಳೂರು, ಪು ೩೯೬, ೩೯೭

[೧೯] ಅದೇ ಪುಟ ೩೯೮.

[೨೦] ಅದೇ ಪುಟ ೩೯೭–೩೯೮.

[೨೧] ಟಿ.ಆರ್. ಮಹಾದೇವಯ್ಯ, ಚಿತ್ರದುರ್ಗದ ಶ್ರೀ ಬೃಹನ್ಮಠದ ಸಾಂಸ್ಕೃತಿಕ ಕೊಡುಗೆ, ದಾಸೋಹಸಿರಿ, ಪು.೪೩೭.

[೨೨] Jagadguru Muragharajendra Brihanmatha, Glimpse - Sri. Jagadguru Muragarajendra Vidya Peeta, Chitradurga.

೨೩ ಪ್ರೊ॥ ಪಂಚಾಕ್ಷರಿ ಹಿರೇಮಠ – ಧಾರವಾಡ ಶ್ರೀ ಮುರುಗಾಮಠದ ಕೊಡುಗೆ "ದಾಸೋಹಸಿರಿ" ಸಂ. ಪಂ. ಚೆನ್ನಪ್ಪ, ಎರೆಸೀಮೆ, ಶ್ರೀ ಸಿದ್ಧಗಂಗಾ ಕ್ಷೇತ್ರ, ತುಮಕೂರು, ೧೯೯೭, ಪು. ೪೭೩.

೨೪ ಅದೇ ಪುಟ ೪೭೩.

೨೫ ಅದೇ ಪುಟ ೪೭೩.

೨೬ ಅದೇ ಪುಟ ೪೭೩.

೨೭ ದಾರ್ಶನಿಕ ಮೃತ್ಯುಂಜಯ ಮಹಾಸ್ವಾಮಿಗಳು – ಶ್ರೀ ಮ.ಗು. ಹಂದ್ರಾಳ ಬಾಲಲೀಲಾ ಮಹಾಂತ ಶಿವಯೋಗಿಗಳ ಗ್ರಂಥಮಾಲೆ, ಮುರುಗಾಮಠ, ಧಾರವಾಡ, ಪು. ೩೦.

೨೮ ಅದೇ ಪುಟ ೩೦.

೨೯ ಡಾ॥ ಚೆನ್ನಕ್ಕ ಪಾವಟೆ – ಮುರುಘಾಮಠ, ಧಾರವಾಡ, ಕಲ್ಯಾಣದ ಹಾದಿ, ಸಂ. ಸಿದ್ಧಲಿಂಗ ಪಟ್ಟಣಶೆಟ್ಟಿ, ಪ್ರ. ತೋಂಟದಾರ್ಯಮಠ, ಗದಗ, ೧೯೯೯, ಪು. ೪೨೦.

೩೦ ಅದೇ ಪುಟ ೪೨೨.

೩೧ ಮಾತೃಹೃದಯಿ ಮಹಾಂತಪ್ಪಗಳು – ಮಲ್ಲಿಕಾರ್ಜುನ ಮಹಾಸ್ವಾಮಿಗಳು, ಮುರುಘಾಮಠ, ಧಾರವಾಡ.

೩೨ ಅದೇ ಪುಟ

೩೩ ಅದೇ ಪುಟ

೩೪ ಶ್ರೀಮತಿ ಲೀಲಾವತಿ ಆರ್. ಪ್ರಸಾದ – ಅಥಣಿಯ ಶ್ರೀ ಶಿವಯೋಗಿಶ್ವರ ಮಠದ ಕೊಡುಗೆ, "ದಾಸೋಹ ಸಿರಿ", ಸಂ. ಚೆನ್ನಕ್ಕ ಎರೆಸೀಮೆ, ಪ್ರ. ಸಿದ್ಧಗಂಗಾಕ್ಷೇತ್ರ, ತುಮಕೂರು, ೧೯೯೭, ಪು. ೪೯೪.

೩೫ ಅದೇ ಪುಟ ೪೯೫.

೩೬ ಓ.ಆರ್. ಮಹದೇವಯ್ಯ – ಮುಳಗುಂದದ ಗವಿಮಠದ ಸಾಂಸ್ಕೃತಿಕ ಕೊಡುಗೆ, 'ದಾಸೋಹಸಿರಿ' ಸಂ. ಚೆನ್ನಪ್ಪ ಎರೇಸಿಮೆ, ಪ್ರ. ಸಿದ್ಧಗಂಗಾಕ್ಷೇತ್ರ, ತುಮಕೂರು, ೧೯೯೭, ಪು. ೫೧೩.

೩೭ ಅದೇ ಪುಟ ೫೧೪.

೩೮ ಅದೇ ಪುಟ ೫೧೪.

೩೯ ಅದೇ ಪುಟ ೫೧೫.

೪೦ ಡಾ. ಡಿ.ಪಿ. ಪರಶಿವಮೂರ್ತಿ, ಶ್ರೀ ಸರ್ಪಭೂಷಣ ಶಿವಯೋಗೀಶ್ವರಮಠದ ಕೊಡುಗೆ, "ದಾಸೋಹಸಿರಿ", ಸಂ. ಚೆನ್ನಪ್ಪ ಎರೇಸಿಮೆ, ಪ್ರ. ಸಿದ್ಧಗಂಗಾಕ್ಷೇತ್ರ, ತುಮಕೂರು, ೧೯೯೭, ಪು. ೫೨೦.

೪೧ ಅದೇ ಪುಟ ೫೨೧.

೪೨ ಅದೇ ಪುಟ ೫೨೩.

೪೩ ಎಂ.ಜಿ. ನಾಗರಾಜ – ಕೊಡಗಿನ ವೀರಶೈವ ಮಠಗಳ ಕೊಡುಗೆ, ದಾಸೋಹಸಿರಿ, ಪು. ೫೫೪.

[೪೪] ಅದೇ ಪುಟ ೫೫೫.

[೪೫] ಅದೇ ಪುಟ ೫೫೮.

[೪೬] ಅದೇ ಪುಟ ೫೫೮.

[೪೭] ಜಯದೇವ ಜಗದ್ಗುರುಗಳು ಶ್ರೀ ಮ.ನಿ.ಪ್ರ. ಶಿವಮೂರ್ತಿ ಸ್ವಾಮಿಗಳು, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯಮಠ ಗದಗ, ೧೯೯೦, ಪು. ೩೭.

[೪೮] ದಾರ್ಶನಿಕ ಮೃತ್ಯುಂಜಯ ಮಹಾಸ್ವಾಮಿಗಳು, ಶ್ರೀ ಮ.ಗು. ಹಂದ್ರಾಳ, ಮಹಾಂತ ಶಿವಯೋಗಿಗಳ ಗ್ರಂಥಮಾಲೆ, ಮುರುಘಾಮಠ, ಧಾರವಾಡ, ಪು. ೧೩.

[೪೯] ಎಂ.ಜಿ. ನಾಗರಾಜ – ಕೊಡಗಿನ ವೀರಶೈವ ಮಠಗಳ ಕೊಡುಗೆ, ದಾಸೋಹಸಿರಿ, ಸಂ. ಚೆನ್ನಪ್ಪ ಎರೇಸಿಮೆ, ಪು. ೫೬೦.

[೫೦] ಡಾ. ಕೆ. ರವೀಂದ್ರನಾಥ – ಕರ್ನಾಟಕ ಮಠಗಳು ಮತ್ತು ಕನ್ನಡ ಸಾಹಿತ್ಯ, ಪು. ೧೯೦.

ಅಧ್ಯಾಯ : ನಾಲ್ಕು

ಮುರುಘಾ ಪರಂಪರೆಯ ಕವಿಗಳು ಮತ್ತು ಕೃತಿಗಳು

೧) ಮುರಿಗಾ ಶಾಂತವೀರರು

೨) ಇಮ್ಮಡಿ ಮುರಿಗಾ ಗುರುಸಿದ್ಧರು

೩) ಹಾಗಲವಾಡಿ ಮುದ್ವೀರ ಸ್ವಾಮಿಗಳು

೪) ಸೋಮಶೇಖರ ಶಿವಯೋಗಿ

೫) ಜ್ವಲಕಂಠ ಮಹಾಂತಸ್ವಾಮಿ

೬) ಕಂಪಿನಂಜಯ್ಯ

೭) ಮಹದೇವ ಕವಿ

ಅಧ್ಯಾಯ – ೪

ಮುರುಘಾ ಪರಂಪರೆಯ ಕವಿಗಳು ಮತ್ತು ಕೃತಿಗಳು

ಮುರಿಗಾ ಶಾಂತವೀರರು (೧೬೫೬–೧೭೦೩) :

ಮುರಿಗಾ ಶಾಂತವೀರರು – ಮುರುಘಾ ಪರಂಪರೆಯ ಮೊದಲ ಮತ್ತು ಮಹತ್ವದ ಕವಿಗಳು, ಚಿನ್ಮೂಲಾದ್ರಿಯ ಪ್ರಭುಪೀಠದ ಪರಂಪರೆಗೆ ಸೇರಿದ ಕಟ್ಟಿಗೆಹಳ್ಳಿ ಸಿದ್ಧಲಿಂಗರ ಕರಕಮಲ ಸಂಜಾತರು. ಗುರುಕುಲತಿಲಕರು, ಮಂಗಳಚರಿತರು, ಸರಸಕವಿತ್ವವಿಲೋಲರು, ಸತ್ಯಾಲಾಪರು, ಸುಧರ್ಮಪಾತಕರು. ಬೃಹನ್ಮಠದ ಪ್ರಥಮ ಪೀಠಾಧ್ಯಕ್ಷರಾದ ಶಾಂತವೀರರು ಕೇವಲ ಒಬ್ಬ ಸ್ವಾಮಿಗಳಾಗದೆ, ಪ್ರಕಾಂಡ ಪಂಡಿತರಾಗಿ, ಹಲವು ವಿಚಾರಗಳ ಜ್ಞಾನಶಕ್ತಿಯಾಗಿ ಕಂಡುಬರುತ್ತಾರೆ. ಸ್ವಾಮಿಗಳಾಗಿ, ಕವಿಗಳಾಗಿ, ಸಾಹಿತ್ಯದ ಆರಾಧಕರಾಗಿ, ಸಮಾಜ ಸುಧಾರಕರಾಗಿ ತಮ್ಮನ್ನು ಗುರುತಿಸಿಕೊಳ್ಳುವ ಮೂಲಕ ವೈವಿಧ್ಯಮಯ ವ್ಯಕ್ತಿತ್ವ ಹೊಂದಿದ್ದಾರೆ. ಶಾಂತವೀರರು ಸ್ವಕೀಯ ವಿಚಾರವಾಗಿ ಯಾವುದೇ ಖಚಿತ ಮಾಹಿತಿಯನ್ನು ತಿಳಿಸಿರುವುದಿಲ್ಲ. ಇವರ ಕುರಿತಾಗಿ ಮಾಹಿತಿಯನ್ನು ಸಂಗ್ರಹಿಸಲು ಇಮ್ಮಡಿ ಮುರಿಗಾ ಗುರುಸಿದ್ಧರ ಮುರಿಗೆ ತಾರಾವಳಿ, ಸೋಮಶೇಖರ ಶಿವಯೋಗಿಗಳ ಷಟ್ಸ್ಥಲ ಜ್ಞಾನ ಸಾರಾಮೃತದ ಬೆಡಗಿನ ವಚನ ಟೀಕೆ, ಅಜ್ಞಾತಕೃತ ಮುರಿಗೆಯ ಸ್ವಾಮಿಗಳ ಯಕ್ಷಗಾನ, ಜ್ವಲಕಂಠಮಹಾಂತಸ್ವಾಮಿಗಳ ನಾಂದ್ಯ, ಮಹಾದೇವನ ಮಹಲಿಂಗೇಂದ್ರವಿಜಯ ಮೊದಲಾದ ಕೃತಿಗಳು ಪ್ರಮುಖ ಆಕರಗಳಾಗಿವೆ. ಹಾಗೆಯೇ ಬೃಹನ್ಮಠದ 'ಪಟ್ಟವಲ್ಲರಿ' ನಿರಂಜನ ವಂಶರತ್ನಾಕರ ಭಾಗ–೧, ೨ ರಲ್ಲಿ ಆನುಷಂಗಿಕವಾದ ಕೆಲವು ವಿವರಗಳು ದೊರೆಯುತ್ತವೆ.

ಮುರಿಗಾ ಶಾಂತವೀರರಿಗೆ ಮುರಿಗೆರಾಯ, ಮುರಿಗೆಸ್ವಾಮಿ, ಮುರಿಗೆಯ ದೇಶಿಕೇಂದ್ರ, ಮುರಿಗೆಯ ರುದ್ರ ಎಂದು ಮುಂತಾದ ನಾಮಾಂತರಗಳಿವೆ. ಈ ಪರಂಪರೆಯ ಎಲ್ಲ ಜಗದ್ಗುರುಗಳಿಗೂ "ಮುರಗಿ" ಅಥವಾ 'ಮುರಿಗಾ' ಎಂಬ ಅಭಿದಾನವು ಅವರವರ ಪಟ್ಟಾಭಿನಾಮದೊಡನೆ ಸೇರಿಕೊಂಡಿದೆ. ಈ ಅಭಿದಾನಕ್ಕೆ ಪಾತ್ರರಾದವರಲ್ಲಿ ಮೊದಲಿಗರು ಶಾಂತವೀರರು. ಇವರ ಶಿಷ್ಯರಾದ ಇಮ್ಮಡಿ ಗುರುಸಿದ್ಧಸ್ವಾಮಿಗಳು ತಮ್ಮ "ಪ್ರಭುಲೀಲಾ" ಸಂಸ್ಕೃತ ಗ್ರಂಥದ ಪೀಠಿಕಾ ಭಾಗದಲ್ಲಿ ತನ್ನ ಗುರುವಿನ ಹೆಸರನ್ನು ಅರ್ಥೈಸುತ್ತಾ,

"ಮುರಶ್ಚರ್ಮಾವೃತ್ತಿರ್ಜಾತಾ ಧಾತುನಾಮುರವೇಷ್ಟನೇ
ವೇತಿ ತದ್ವಾನ್ ಭವೇದ್ದೇಹಿ ಮುರೀತಿ ಪರಗೀಯತೆ
ತಂಗಚ್ಛತ್ಯರ್ಥಸ್ತ್ಯಸ್ಮಾದದ್ಗಂಭವೇದ್ವ್ಯಾಕೃತೌ ಧ್ರುವಂ
ಗಮೇರ್ಡ ಇತಿ ಸೂತ್ರೇಣ ಟಿಲೋಪಾತ್ ಸ್ತ್ರೀತಯಾ ಸ ಗಾ
ತಯಾ ಮುರಿಗಯಾ ಚಿತ್ಯಾ ವೀರಾಖ್ಯೇಂದ್ರಿಯಸಂತತಿಃ
ಶಾಂತೋ ಯೇನ ಪರಿವ್ರಾಜಮಾಸಿ ತನ್ನಾಮ್ನಕೋ ಗುರುಃ"[೧]

ಶರೀರಸ್ಥವಾದ ಚಿತ್ತಿನಿಂದ ಇಂದ್ರಿಯಗಳ ಉಪಟಳವನ್ನು ಶಮನಗೊಳಿಸಿದವನು ಮುರಿಗಾ ಶಾಂತವೀರನು ಎಂದು ವಿವರಣೆ ಕೊಟ್ಟಿರುವನು. ಇದು ವಿದ್ವತ್ತಿನ ವಿವರಣೆಯಾಯಿತೇ ಹೊರತು "ಮುರುಗ" ಎಂಬ ಪದದ ವಾಸ್ತವವಾದ ಉತ್ಪತ್ತಿಯಲ್ಲ. ಇನ್ನೊಂದು ಕಡೆ 'ಮಹಲಿಂಗೇಂದ್ರವಿಜಯ'ದಲ್ಲಿ ಮಹದೇವನು ಮುರುಗರಾಜೇಂದ್ರರ ಅಭಿದಾನದಲ್ಲಿ ಸೇರಿರುವ 'ಮುರಿಗೆ'ಯನ್ನು ಕುರಿತು ಆ ಸ್ವಾಮಿಗಳ ಕೈಯಲ್ಲಿ ಮುರಿಗೆಯ ಮುದ್ಗರವಿತ್ತು. ಅವರು ತಲೆಗೆ ಮುರಿಗೆ ಮುರಿಗೆಯಾಗಿ ಒಂದು ವಸ್ತ್ರವನ್ನು ಸುತ್ತುತ್ತಿದ್ದರು. ಎದೆ, ಬೆನ್ನಿಗೆ ಮುರಿಗೆಯಾಗಿ ಒಂದು ಶಾಲನ್ನು ಹೊಂದಿದ್ದರು ಎಂದು ಮುಂತಾಗಿ ವರ್ಣಿಸುತ್ತಾ, ಮುರಿಗೆಯೆಂದರೆ ನುಲಿನುಲಿಯಾಗಿರುವುದು ಎಂಬ ರೀತಿಯಲ್ಲಿ ಅಭಿಪ್ರಾಯಪಟ್ಟಿದ್ದಾರೆ. ಬಹುಶಃ ಈ ಮಾತು ಶಿವಪುತ್ರನಾದ ಷಣ್ಮುಖನಿಗೆ ಪರ್ಯಾಯವಾಗಿ ತಮಿಳಿನಲ್ಲಿ ಅನ್ವಯಿಸುವ "ಮುರುಗನ್" ಎಂಬುದರಿಂದ ಬಂದಿರಬೇಕು. ಷಣ್ಮುಖನು ಶೈವಜ್ಞಾನಕ್ಕೆ ಅಧಿದೇವತೆ ಅವನು ಪ್ರಣವಕ್ಕೆ, ಪಂಚಾಕ್ಷರಿಗೆ ಹೇಳಿದ ಅರ್ಥ ಅದ್ಭುತವೂ ಅಪಾರವೂ ಆದುದೆಂಬ ಭಾವನೆ ಶೈವ ಮತ್ತು ವೀರಶೈವ ಪುರಾಣಗಳಲ್ಲಿ ಪ್ರಚುರವಾಗಿದೆ. ಇಲ್ಲಿ ಶಾಂತವೀರರು ಭೂಲೋಕದಲ್ಲಿ ಕಾಣಿಸಿಕೊಳ್ಳುವುದು, ಕೈಯಲ್ಲಿ ಹಿಡಿದ ವೀಣೆಯ ಶೃತಿಗನುಗುಣವಾಗಿ ಪಂಚಾಕ್ಷರಿಯನ್ನು ಜಪಿಸುವುದು. ಈ ವಿವರಣೆಯ ಜೊತೆಗೆ ಇಮ್ಮಡಿ ಗುರುಸಿದ್ಧರು ತಮ್ಮ 'ಹಾಲಾಸ್ಯಪುರಾಣ'ದಲ್ಲಿ ಆಶ್ವಾಸಾದಿಯಾಗಿ ಅಲ್ಲಲ್ಲಿ ಸುಂದರ (ಷಣ್ಮುಖ)ನನ್ನು ಸ್ತುತಿಸಿರುವುದನ್ನು ಹೋಲಿಸಿ ನೋಡಿದಾಗ ಮುರುಗನ್, ಮುರುಗ (ಷಣ್ಮುಖ, ಕುಮಾರಸ್ವಾಮಿ) ಲಾಂಛನದವರು ಮುರುಗಿಯವರು ಇತ್ಯಾದಿಯಾಗಿರಬೇಕು. ಇಲ್ಲಿನ ರಾಜೇಂದ್ರ ಎಂಬುದು ಈ ಶೂನ್ಯಸಿಂಹಾಸನದ ಪ್ರಥಮ ಪ್ರವರ್ತಕರಾದ

ಅಲ್ಲಮಪ್ರಭುದೇವನ ಗುರುವಾದ ಅನಿಮಿಷನನ್ನು ಕುರಿತುದೇ ಆಗಿದೆ ಎಂಬುದನ್ನು ಗಮನಿಸಬೇಕು. ಹೀಗಾಗಿ ಚಿನ್ಮೂಲಾದ್ರಿಯ ಬೃಹನ್ಮಠದ ಪ್ರಥಮ ಪ್ರವರ್ತಕರಾದ ಜಗದ್ಗುರುಗಳ ಮುರುಘರಾಜೇಂದ್ರ ಎಂಬ ಹೆಸರು ಸಂಪೂರ್ಣವಾಗಿ ಪ್ರಶಸ್ತಿ ರೂಪವಾದುದು. ಅವರ ನಿಜವಾದ ಹೆಸರು 'ಶಾಂತವೀರ' ಎಂದು. ಅವರು ಜಗದ್ಗುರುಗಳೂ ಮುರುಗನ ಸಂಪ್ರದಾಯದವರೂ ಆದುದರಿಂದ ಅವರು ಜಗದ್ಗುರು ಮುರಿಗಾ ಶಾಂತವೀರ ಸ್ವಾಮಿಗಳು ಎಂದು ಪ್ರಖ್ಯಾತರಾದರು.

ಮುರಿಗಾ ಶಾಂತವೀರರ ಜನ್ಮಸ್ಥಳ ಹಾಗೂ ತಂದೆ-ತಾಯಿಗಳ ಕುರಿತಾದ ಯಾವ ವೈಯಕ್ತಿಕ ವಿಚಾರಗಳಿಗೂ ಸ್ಪಷ್ಟ ದಾಖಲೆಗಳಿಲ್ಲ. ಅವರ ಶಿಷ್ಯರಾದ ಇಮ್ಮಡಿ ಮುರಿಗಾ ಗುರುಸಿದ್ಧರು 'ಮುರಿಗೆ ತಾರಾವಳಿ'ಯಲ್ಲಿ ಶಾಂತವೀರರ ಅವತಾರವನ್ನು ಹೀಗೆ ಚಿತ್ರಿಸಿದ್ದಾರೆ;

"ಮುದದೊಳನಾದಿ ಭಕ್ತನ ದಿವ್ಯ ಮಂಜಿಲ
ಹೃದಯಪಯೋರುಹಸದನದೊಳಿರುತಿರ್ದು
ಮದರಿಟ್ಟು ತನ್ನೊಳುದಯವಾದ ಜಗವನು
ಪದುಳದೆ ಸಲಹಲಯೋನಿಸಂಭವನಾಗಿ
ವಿಧಿತ ಧರೆಯೊಳಷ್ಟವರುಷದ ಹರೆಯದೆ
ಸದಮಲ ಗೊಸಲೇಶತನ ಕರದೊಳು ಮುಟ್ಟಿ
ಬಿದಿಗೆಯ ಶಶಿಯಂತೆ ಕಳೆವೆಚ್ಚಿ ಕಡೆಯಲ್ಲಿ
ಪುದಿದ ಷಟ್ಸ್ಥಲ ಮಾರ್ಗವನು ನೆಲೆಗೊಳಿಸಲು
ಮದವಿರಹಿತ ತೋಂಟದಯ್ಯ ತಾನೆನಿಸಿ ನ
ಡೆದು ನಾಡೆ ಎಡೆಯೂರೊಳಗೆ ಲಿಂಗವಾಗೆ ಮ
ತ್ತದು ಮಸುಳಿಸಿ ಬರುತಿರಲೆಂದಿನಂದದಿ
ಚಿದಚಿದ್ವಿವೇಕದೇಶಿಕನರುವಿನೊಳು ತಾ
ನುದಿಸುತ ಮುರಿಗೆಯ ಶಾಂತವೀರೇಶನೆಂ
ಬುದಧಿಗಭೀರನಾಮದೆ ಬಂದು ನಿಂದು ನಿ
ರ್ಗದನಾಗಿ ಚರಿಸುತಿರಲು ಸರ್ವಲೋಕವು
ಸದರವಲ್ಲೀತನಲ್ಲಮನಪ ದಧೋಚನೊ
ಪದೆದ ಕುಂಭಜಮುನಿಯೋ ರೇಣುಕೇಶನೊ
ಒದವಿ ಸದಾನಂದನೊ ಸಾನಂದನೊ
ಮೊದಲಾದವರೊಳಗಾರೊ ಎಂದು ಭಾವಿಸುತಿರೆ"

ಎಂದು ವರ್ಣಿಸಿದ್ದಾನೆ. ಹಾಗೆ ಮುಂದುವರೆದು ಮುರಿಗೆ ಶಾಂತವೀರರು ನಂದಿಗೋತ್ರಜರು, ಮಂದರಗಿರಿ ಧೈರ್ಯರು, ಪಯೋನಿಧಿ ಗಾಂಭೀರ್ಯರು, ಗುರುಕುಲತಿಲಕರು, ಸುಧರ್ಮಪತಾಕರು,

ಭಕ್ತಸಮೂಹ ಸುರಭೂಜರು, ಸರಸಕವಿತ್ವವಿಲೋಲರು, ನಿಗಮತತಿ ಪಾರಂಗತರು, ಚಿದಾನಂದರೂಪರು, ಸತ್ಯಾಲಾಪರು, ಚಿದ್ವಿವೇಕದೇಶಿಕರ ಅರುವಿನಲಿ ಉದಿಸಿದವರು ಶಾಂತವೀರರು ಎಂದು ಹೇಳಿದ್ದಾನೆ.

ಮಹದೇವಕವಿ ಅಲ್ಲಮನ ಅಪರಾವತಾರದಂತಿದ್ದ ಶಾಂತವೀರರು ಹಸ್ತದಲ್ಲಿ ವೀಣಾನಾದದೊಡನೆ ದೇಶಗಳ ಸಂಚಾರ ಮಾಡುತ್ತ ಚಿನ್ಮೂಲಗಿರಿಯ ಬಳಿಗೆ ಬಂದಂತೆ ಚಿತ್ರಿಸಿದ್ದಾನೆ. ಅವರ ಬಹಿರ್ವೇಶದ ವರ್ಣನೆ ಇಂತಿದೆ.

"ಅಂಬಕಯುಗಂ ಲೋಹಿತಂ ಶ್ಮಶ್ರುತೋಹಿತಂ
ಶುಂಭದಖಿಲಾಂಗರೋಮಾಳಿಯೂರ್ಧ್ವಂ ಕರಾ
ಲಂಬಿತದ್ವಯತರಿತ್ರಿವೀಣಾರವಂ ದಕ್ಷಿಣೋರುಹಸ್ತಾಬ್ಜದಲ್ಲಿ
ಇಂಬಿನಿಂ ತಾಳ್ದ ಮುರಿಗೆಯ ಮುದ್ಗರಂ ಮಸ್ತ
ಕಾಂಬುಜಕೆ ಮುರಿಗೆಯಾಕಾರಕೃತಕೌಶೇಯ
ದಂಬರಂ ದೇಹದೋಳ್ ಮುರಿಗೆಯಾಗಿರೆ ಪೊದೆದ ಶಾಲು ಮದು ರಂಜಿಸುತ್ತಿರೆ"(೧೭-೬)

ಮುರಿಗೆಯಾಗಿರಲನಿತು ಚಿಹ್ನಂಗಳಂಗದೊಳ್
ಧರಿಸಿದ ವಳರ್ಕ್ಷಭಸ್ಮೋದ್ಧೂಳನಂ ಗಳದೊ
ಳಿರಿಸಿದ ಶಿವಾಕ್ಷಮಣಿಮಾಲಿಕಾವಿಸರಮುಂ ಕರದ ಕಿನ್ನರಿಯರವದಿಂ
ಸ್ಮರಿಸುತಂ ಶುದ್ಧಪಂಚಾಕ್ಷರಿಯ ಮನುವನಂ
ತಿರೆ ನಿಜಾನಂದದಿಂ ಚರಿಸುವನಮೂರ್ವತರಿ
ಪರಮಮುನಿಯಾಕಾರದಿಂದಮಾ ಮುರಿಗೇಂದ್ರ ರಾಜೇಂದ್ರ ಪಂಚಾನನಂ (೧೭-೭)

ಇಲ್ಲಿಯ ವರ್ಣನೆಗಳು ಶಾಂತವೀರರ ಸನ್ಯಾಸಿ ತೇಜಸ್ಸನ್ನು ಬಿಂಬಿಸುತ್ತವೆ. ಅವರ ದೃಷ್ಟಿತೇಜೋಮಯವಾಗಿದ್ದು ಕಣ್ಣುಗಳು ದಾಸವಾಳದ ಹೂವಿನಂತೆ ರಾಗರಂಜಿತವಾಗಿದ್ದು, ದೇಹ ಶಿವಾನಂದದಿಂದ ಪ್ರಫುಲ್ಲತೆಯನ್ನು ಪಡೆದಂತಿವೆ. ಭಸ್ಮಧಾರಣೆ, ಕೊರಳಲ್ಲಿ ಧರಿಸಿದ ರುದ್ರಾಕ್ಷಿ ಮಾಲೆ, ಎಡಗೈಯಲ್ಲಿ ಹಿಡಿದಿರುವ ಕಿನ್ನರವೀಣೆ, ಜಪಿಸುವ ಪಂಚಾಕ್ಷರಿಯ ಮಂತ್ರ, ಬಲಗೈಯಲ್ಲಿ ಮುರಿಗೆಯ ಮುದ್ಗರ, ತಲೆಗೆ ಸುತ್ತಿದ ಕೇಶಾಂಬರ, ಬಿಗಿದು ಕಟ್ಟಿರುವ ಕೌಪೀನದ ಜೀಲು, ಎದೆಬೆನ್ನಿಗೆ ಮುರಿಗೆಯಾಗಿ ಹೊದ್ದ ಶಾಲು ಇಂತಹ ವ್ಯಕ್ತಿತ್ವವನ್ನು ನೋಡುವುದರಿಂದ ಧನ್ಯತಾಭಾವ ಜಾಗೃತವಾಗುತ್ತದೆ.

ಶಾಂತವೀರರ ಶಿಷ್ಯರಾದ – ಜ್ವಲಕಂಠ ಮಹಾಂತಸ್ವಾಮಿ, ಕಂಪಿನಂಜಯ್ಯನವರು ಸಹಿತ ತಮ್ಮ ಸ್ತೋತ್ರ, ನಾಂದ್ಯಗಳಲ್ಲಿ ಗುರುವಿನ ವ್ಯಕ್ತಿತ್ವವನ್ನು ವಿವರಿಸಿದ್ದಾರೆ. ಇವರುಗಳಲ್ಲದೆ, ಅಜ್ಞಾತ ಕತೃವಿನ ಯಕ್ಷಗಾನ, ಕಂದ, ಅಷ್ಟಕ, ತರಳವೃತ್ತ, ಸ್ವರವಚನ, ಷಟ್ಪದಿ, ನಾಂದ್ಯ, ಸ್ತೋತ್ರ ಈ

ರೂಪಗಳಲ್ಲಿಯೂ ಶಾಂತವೀರರ ಮಹಿಮಾತಿಶಯಗಳ ಉನ್ನತ ವ್ಯಕ್ತಿತ್ವ ಅಡಕವಾಗಿರುವುದನ್ನು ಕಾಣುತ್ತೇವೆ. ಉದಾಹರಣೆಗೆ ಒಂದೊಂದು ಪದ್ಯವನ್ನು ನೋಡಬಹುದು.

(೧) ತರಳವೃತ್ತ –

"ಶರಣು ಸನ್ನುತ ಭಕ್ತಪೋಷಣ ಭದ್ರವಾಹನ ಶಂಕರಾ
ದುರಿತ ಭೂಧರ ಶಂಭು ಮನ್ಮಥ ಭವ್ಯ ಕಳೇವರಾ
ವರದ ಸಜ್ಜನ ವಂದ್ಯ ಪಾದಪಯೋಜಯುಗ್ಮ ಶುಭಕರಾ
ಕರುಣೆ ಮದ್ಗುರು ಶಾಂತವೀರಮಹೇಶ ಪಾಲಿಸು ನಿನ್ನರಾ"[೩]

(ಒಟ್ಟು ೮ ಪದ್ಯ ಮೇಲೊಂದು ಕಂದಪದ್ಯವಿದೆ.)

(೨) ಕಂದ ಪದ್ಯ –

"ಬಾರೆನ್ನಾಯುವೆ ಸಿರಿಯೇ
ಬಾರೆನ್ನಯ ಭಾಗ್ಯನಿಧಿಯೆ ಬಾ ಭಕ್ತಾಣ್ಮನೆ
ಬಾರೆನ್ನ ಪೊರೆವ ದೇವನೆ
ಬಾರೆನ್ನಯ ಮನದ ಈಶ ಶಾಂತವೀರೇಶ."[೪]

(ಒಟ್ಟು ೨೫ ಕಂದಪದ್ಯಗಳಿವೆ)

(೩) ಸ್ವರವಚನ –

"ಜಯ ಜಯ ಶ್ರೀ ಮುರಿಗೇಶ
ಜಯ ಜಯ ಜಂಗಮಧೀಶ
ಜಯಧೃತಲಿಂಗ ಶಮಿತಾನಂದ
ಕುಯಮಿಭಂಗ ಕುಧರೋತ್ತುಂಗ
ವಿಯದಾಕಾರ ವಿದ್ಯಾಧಾರ
ಭಯತತಿದೂರ ಭಜಕಮಂದಾರ"[೫]

(ಒಟ್ಟು ೭ ಸ್ವರವಚನಗಳಿವೆ)

(೪) ಅಷ್ಟಕ –

"ಮುಕ್ತಿದಾಯಕ ಮೂರುಲೋಕದಕರ್ತ ದೇಶಿಕರಾಯಗ
ಭಕ್ತರಂಗಮನಂಗಳಲ್ಲಿ ವಿರಾಜಿಪಾಮಳ ಸ್ವಾಮಿಗೆ
ಶಕ್ತಿಯರುಗಳೆಲ್ಲ ಕೂಡಿ ವಿರಕ್ತ ಶಾಂತವೀರೇಶಗೆ
ವ್ಯಕ್ತದಿಂ ವರ ಮುತ್ತಿನಾರತಿ ಎತ್ತಿರೇ ಶಿವಮೂರ್ತಿಗೆ"[೬]

(ಒಟ್ಟು ೯ ಪದ್ಯಗಳಿವೆ)

ಮುರಿಗೆಶಾಂತವೀರರು ಕಟ್ಟಿಗೆಹಳ್ಳಿ ಸಿದ್ಧಲಿಂಗರ ಕರಸಂಜಾತರು. "ಶಿವಧರ್ಮ ಮತ್ತು ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯಗಳಲ್ಲಿ ನಿಷ್ಣಾತರಾಗಿದ್ದು ಸರಸಕವಿತ್ವ ವಿಲೋಲರೆನಿಸಿದ್ದರು. ಇವರಿಗೆ 'ಕರಿಬಸವರಾಜ' ಹಾಗೂ 'ಮುರಿಗೆಯರುದ್ರ' ಎಂಬ ಹೆಸರುಗಳು ಇವೆ" ಎಂದು ಎಂ.ಎಸ್. ಬಸವರಾಜಯ್ಯನವರು ಹೇಳುತ್ತಾರೆ.[೭]

ಶಾಂತವೀರದೇಶಿಕ ವಿರಚಿತ 'ಶಿವಲಿಂಗ ಚಾರಿತ್ರ' ಕೃತಿಯಲ್ಲಿ ಪ್ರಸ್ತಾಪಗೊಂಡಂತೆ – ಪೆನಗೊಂಡೆ ದೇಶದ ಅಪ್ಪೆಯಕೆರೆ ಶಾಂತವೀರರ ಪೂರ್ವಜರ ಜನ್ಮಸ್ಥಳ. ಆಳ್ವೇರಿ, ಕೋಟೆಕೊತ್ತಳಗಳಿಂದ ಆವರಿಸಿಕೊಂಡಿರುವ ಈ ಪ್ರದೇಶದಲ್ಲಿ ನೆಲೆಸಿರುವ ಶಾಸ್ತ್ರಕಲಾಪರಿಣತನೂ ದಯಾಪರನೂ, ಪಂಡಿತನೂ ಆದ ಶಿವಲಿಂಗಾರ್ಯ ಶಾಂತವೀರರ ಮೂಲಪುರುಷ. ಭಕ್ತರಿಂದ ವಿಶೇಷಪೂಜೆ ಸತ್ಕಾರ ಪಡೆದ ಈತನು ತನ್ನ ಮಗನಾದ ವೀರಣಾರಾಧ್ಯನಿಗೆ ಗುರುಪಟ್ಟವನ್ನು ಕಟ್ಟಿ ಲಿಂಗೈಕ್ಯನಾಗುತ್ತಾನೆ.

ಒಂದು ಸಲ ವೀರಣಾರ್ಯನು ಶಿಷ್ಯರಿಂದ ಪೂಜೆಯನ್ನು ಕೈಕೊಳ್ಳುವೆನೆಂದು ಅಪ್ಪೆಯಕೆರೆಯಿಂದ ಹೊರಟು ಬಿಜ್ಜಾವರಕ್ಕೆ ಬರುತ್ತಾನೆ. ಶಿಷ್ಯರ ಮನೆಯಲ್ಲಿ ಪೂಜೆ ಕೈಗೊಂಡು ಇರುವಾಗ, ಬೊಮ್ಮ, ತಿಮ್ಮ, ಎರಕಾಟಿ, ಜಕ್ಕಿಣಿ, ಯಕನಾತಿ, ಮೈಲಾರಿ, ಉರಿಮಾರಿ, ಮಾಧವ ಮೊದಲಾದ ಅನೇಕ ಕಿರುಕುಳ ದೈವಗಳು ಆ ಮನೆಯಲ್ಲಿರುವುದನ್ನು ನೋಡಿ ದೇಶ ಮಾಡಿದ ಪಾಪ ರಾಜನಿಗೆ, ರಾಜ ಮಾಡಿದ ಪಾಪ ಮಂತ್ರಿಗೆ, ಹೆಂಡತಿಯ ಪಾಪ ಗಂಡನಿಗೆ, ಶಿಷ್ಯಕೃತ ಪಾಪ ಗುರುವಿಗೆ ಎಂದು ಪುರಾಣಗಳು ಹೇಳುತ್ತವೆ ಎಂಬ ಸತ್ಯವನ್ನು ಮನಗಂಡು ವೀರಣಾರಾಧ್ಯ ಮೂರು ವಿಧವಾದ ಲಿಂಗವನ್ನು ಏಕೋಭಾವದಲ್ಲಿ ಅರ್ಚಿಸುತ್ತ ಮುಕ್ತಿಯನ್ನು ಪಡೆಯುವಂತೆ ಶಿಷ್ಯರಿಗೆ ಉಪದೇಶ ನೀಡುತ್ತಾನೆ. ಮುಂದೆ ಪದಿನಾಡಿನ ಉಯ್ಯಂಬಳ್ಳಿಗೆ ಬಂದು, ಶಿವಪೂಜೆಯಲ್ಲಿ ನಿರತನಾದ ಅರಸನನ್ನು ಕಂಡು "ಭೂಪರದೇವನಾಗು, ಬುಧ ಸಂತತಿ ಪಾಲಕನಾಗು, ಸತ್ಯಸಲ್ಲಾಪ ವಿಚಾರನಾಗು, ಸಕಲೈಶ್ವರ ಸಂಯುತನಾಗು, ಸಂತತಂ ಪಾಪ ವಿದೂರನಾಗು, ಪರಮೇಶನ ಪಾದಪಯೋಜಯುಗ್ಮ ಪೂಜಾಪರನಾಗು" (೨–೧೪) ಎಂದು ಹರಸುತ್ತಾರೆ.

ಒಂದು ದಿನ ಶಿವಪೂಜೆಯರಸನು ವೀರಣಾರಾಧ್ಯನಿಗೆ ಒಬ್ಬ ಸುಂದರಿಯನ್ನು ತಂದು ಮದುವೆ ಮಾಡಲು ಯೋಚಿಸುತ್ತಾನೆ. ಗುರುಮಠದಲ್ಲಿ ಹೋಗಿ ಕನ್ಯೆಯನ್ನು ಕೇಳುತ್ತಾನೆ. ಅವರು ಗುರುವಂಶವನ್ನು ಅರಿಯದವರಿಗೆ ಮಗಳನ್ನು ಕೊಡುವುದು ಹೇಗೆ? ಎಂದು ಪ್ರಶ್ನಿಸುತ್ತಾರೆ. ಈ ವಿಷಯವನ್ನು ತಿಳಿದ ವೀರಣಾರಾಧ್ಯ ಕರಣಿಕ, ಮಂತ್ರಿ ಮನ್ನೆಯರು, ಮಹಾಕವಿ ಸಂತತಿ, ವಾದಿ, ವಾಗ್ಮಿಗಳ ಮಧ್ಯದಲ್ಲಿ ಓಲಗಗೊಟ್ಟಿದ್ದ, ದೊರೆಯ ಸಭೆಗೆ ಬಂದು "ಆರಾಧ್ಯರಲ್ಲವೆಂದು ನಮ್ಮನ್ನು ಹಾಸ್ಯ ಮಾಡಿದ ಪಾಪಿಯ ಬಾಯಲ್ಲಿ ಎಡದ ಕಾಲಿನ ಕೆರ್ಪು" ಎಂದು ಉಗ್ಗಡಿಸುತ್ತ ವೀರಣಾರಾಧ್ಯ ಉಗ್ರಾಕಾರನಾಗಿ ಎಡದ ಕಾಲ ಕೆರಹನ್ನು ಕಳೆದು ಸಭಾ ಮಧ್ಯದಲ್ಲಿಟ್ಟನು. ಇದರಿಂದ ಸಭೆ, ದೊರೆ

ಎಲ್ಲರು ಬೆದರಿದರು. ಮುಂದೆ ಶಿವಪೂಜೆಯರಸ ಮೊದಲಾದವರು ವೀರಣಾರಾಧ್ಯನಲ್ಲಿಗೆ ಬಂದು ಕ್ಷಮೆಯಾಚಿಸಿ ಆ ಊರಿನ ಗುರುಕನ್ಯೆ ನಂಜಾಂಬಿಕೆಯನ್ನು ತಂದು ವಿವಾಹಮಾಡಿದರು. ಅವರಿಬ್ಬರ ಮಗನಾಗಿ ಚೆನ್ನವೀರದೇವ ಜನಿಸುತ್ತಾನೆ. ವೀರಣಾರಾಧ್ಯನು ಕೆಲವು ದಿನಗಳ ನಂತರ ಉಯ್ಯಂಬಳ್ಳಿಯನ್ನು ಬಿಟ್ಟು ಹೆಂಡತಿ ಮಕ್ಕಳೊಡನೆ ಬೆಂಗಳೂರಿಗೆ ಬಂದು ನೆಲೆನಿಲ್ಲುತ್ತಾನೆ. ಅಲ್ಲಿಯ ದೊರೆ ಕೆಂಪೇಗೌಡನಲ್ಲಿ ಆಶ್ರಯವನ್ನು ಪಡೆಯುತ್ತಾನೆ. ಕೆಂಪೇಗೌಡನ ರಾಣಿಯೊಡನೆ ವಿಚಾರ ಮಾಡಿ ಬಸವಾರ್ಯನ ಮಗಳು ಗಿರಿಜಾಂಬಿಕೆಯನ್ನು ತಂದು ತನ್ನ ಮಗ ಚೆನ್ನವೀರನಿಗೆ ಮದುವೆ ಮಾಡುತ್ತಾನೆ. ಮುಂದೆ ಚೆನ್ನವೀರಾರ್ಯನು ಭಸಿತೋದ್ಧೂಲನಗೈದು, ರುದ್ರಾಕ್ಷಿಯನ್ನು ಧರಿಸಿ, ಕೈಯಲ್ಲಿ ದಂಡಿಗೆಯನ್ನು ಹಿಡಿದು ಮೀಟುತ್ತ ಬಂದನು. ಹರೀಶ, ಶಂಕರ, ಗುಹೇಶ್ವರ, ನಿಜಗುಣ, ವೀರಣ, ನಾಗಿದೇವ ಮುಂತಾದವರ ಪುರಾಣೋಕ್ತಿಗಳನ್ನು, ವಚನಗಳನ್ನು ಹಾಡಿ ಮಹೇಶ ಭಕ್ತ ಜನರನ್ನು ಸಂತೋಷಪಡಿಸುತ್ತಿದ್ದನು. ಅಷ್ಟಾವರಣ ಮಹತ್ವ, ಶಿವಾಚಾರನಿಷ್ಠೆ, ಲಿಂಗ ಪೂಜಾವಿಧಿ, ಇಷ್ಟಲಿಂಗಾರ್ಪಿತಗಳನ್ನು ಚೆನ್ನವೀರ ತಿಳಿಸುತ್ತ ಕಾಯಕವನ್ನು ಕೈಕೊಂಡು ಬಂದು ಜಂಗಮಾರ್ಚನೆಯನ್ನು ಮಾಡುತ್ತಿದ್ದನು. ಒಂದು ದಿನ ಚೆನ್ನವೀರದೇವನು ಮೈಸೂರು ದೇಶವನ್ನು ಹೊಕ್ಕು ಹರಿಣಪುರ, ತೃಣಪುರ ಎಂಬ ಹೆಸರನ್ನು ಪಡೆದುಕೊಂಡಿರುವ ಹುಲ್ಲಹಳ್ಳಿಗೆ ಬರುತ್ತಾನೆ. ಅಲ್ಲಿಯ ದೊರೆ ಬಸವೇಂದ್ರನ ಮಗ ವೀರಮಹೇಂದ್ರನ ಪ್ರೀತಿಗೆ ಪಾತ್ರವಾಗಿ ಚನ್ನವೀರನು ಹುಲ್ಲಹಳ್ಳಿಯಲ್ಲಿ ಮಠವನ್ನು ಕಟ್ಟಿ ನಂತರ ಹುಣಸನಹಾಳಿಗೆ ಬರುತ್ತಾನೆ. ಅಲ್ಲಿಯ ರಾಜ ನಂಜರಾಜೇಂದ್ರನಿಂದ ಗೌರವವನ್ನು ಸ್ವೀಕರಿಸುತ್ತಾನೆ. ಚರಪಾದತೀರ್ಥವನ್ನು, ಶೇಷಪ್ರಸಾದವನ್ನು ಸೇವಿಸುತ್ತ ಶಿವನನ್ನು ಪೂಜಿಸಿ ಕೀರ್ತಿಸುತ್ತ ಅನುದಿನ ಚೆನ್ನವೀರನು ಒಪ್ಪುತ್ತಿರಲು ಶಿವನು ಅವನನ್ನು ಕೈಲಾಸಕ್ಕೆ ಕರೆತರಲು ನಂದಿ ಮುಖ್ಯಗಣರನ್ನು ಕಳಿಸುತ್ತಾನೆ.

ಅದರಲ್ಲಿ ಮುಖ್ಯವಾಗಿ ಮಡಿವಾಳ ಮೋಳಿಗೆಯ್ಯ, ಕಿನ್ನರಯ್ಯ, ಸುಂಕದ ಬಂಕಿದೇವ, ಮಾರುಡಿಗೆಯ ನಾಚಿತಂದೆ, ನಂಬಿಯಣ್ಣ, ಚೇರರು, ಕಡವಲ ನಂಬಿ, ಕಲಿಕಾಮ ಮುಂತಾದ ಗಣಾದ್ಯರೆಲ್ಲರು ಜಯಘೋಷ ಮಾಡುತ್ತ ಭೂತಳಕ್ಕೆ ಬಂದು ಪುಷ್ಪಕವನ್ನೇರಿಸಿ ಕೈಲಾಸಕ್ಕೆ ತರುತ್ತಾರೆ. ಆ ಸಂದರ್ಭದಲ್ಲಿ ಮಲುಹಣಿ, ಮಾದಲಾಂಬೆ, ಶಿವದೇವಿ, ನಾಗಲೆ, ನಂಬಿಯಕ್ಕ, ತಿಲಕವ್ವೆ, ಕಮಲಾಂಬಿಕೆ, ಕಾಚಲದೇವಿ, ದುಗ್ಗಳೆ ಮುಂತಾದವರು ದೇವಗಣಕಾಂತೆಯರು ಬಂದು ಚೆನ್ನವೀರದೇವನನ್ನು ಇದಿರುಗೊಳ್ಳುತ್ತಾರೆ. ಈಶ್ವರನು ತನ್ನ ಗಣರಿಗೆ ಚನ್ನವೀರನ ವ್ಯಕ್ತಿತ್ವವನ್ನು ಗುಣಗಾನ ಮಾಡುತ್ತ ಸಾಯುಜ್ಯ ಪದವಿಯನ್ನು ಕೊಡುತ್ತಾನೆ. ಈ ಚೆನ್ನವೀರನ ಮಗನೇ ಶಾಂತವೀರ.

ಈ ಮೇಲಿನ ವಿಷಯವನ್ನು ಗಮನಿಸಿದಾಗ 'ಶಿವಲಿಂಗಚಾರಿತ್ರ' ಕೃತಿಯು ಶಿವಪಾರಮ್ಯವನ್ನು ಜಗತ್ತಿಗೆ ಸಾರಲೆಂದೇ ರಚಿತವಾಗಿದ್ದರೂ ಅದರಲ್ಲಿ ಅನೇಕ ಚಾರಿತ್ರಿಕ ಅಂಶಗಳು

ಅಡಕವಾಗಿವೆ ಎಂಬುದು ವೇದ್ಯವಾಗುತ್ತದೆ. ಈ ಕಾವ್ಯದಿಂದ ಶಾಂತವೀರನ ತಂದೆ ಚೆನ್ನವೀರ, ಅಜ್ಜ ವೀರಣಾರಾಧ್ಯ ಹಾಗೂ ಮುತ್ತಜ್ಜ ಶಿವಲಿಂಗಾಚಾರ್ಯ ಎಂಬ ವಿಚಾರ ಸ್ಪಷ್ಟವಾಗುತ್ತದೆ. ಕೃತಿಯ ಕಡೆಯ ಪದ್ಯದ ಸಾಲುಗಳು ಹೀಗಿವೆ.

"ಚಂದ್ರಾದಿತ್ಯ ಸಮಿರಬಾಂಧವ ಸದಾ ತ್ರೈನೇತ್ರನೊಲ್ದೊಪ್ಪಿದಂ
ಕಂದರ್ಪಾಚಲ ವಜ್ರದಂಡ ಗಿರಿಜಾವಾಮಾಂಗನಂದೊಪ್ಪಿದಂ
ಇಂದ್ರೋಪೇಂದ್ರ ವಿರಿಂಚಿ ಪೂಜಿತದಾಂಭೋಜಾತ ತಾನೊಪ್ಪಿದಂ
ಸೌಂದರ್ಯಂ ಮಿಗಲೊಪ್ಪಿದಂ ಸರಸದಿಂದಂ ಶಾಂತವೀರೇಶ್ವರಂ" (೩-೩೨)

ಇಲ್ಲಿ ಕವಿ ಶಿವಸ್ತುತಿ ಮಾಡಿರುವಂತೆ ಕಂಡುಬಂದರೂ ಶಾಂತವೀರನನ್ನು ವಿವಿಧ ನಾಮ ವಿಶೇಷಣಗಳಿಂದ ವರ್ಣನೆ ಮಾಡಿರುವುದು ವ್ಯಕ್ತವಾಗುತ್ತದೆ. ಕಾವ್ಯದಲ್ಲಿ ಉಲ್ಲೇಖಗೊಂಡ ಊರು ಮತ್ತು ರಾಜರುಗಳ ಹೆಸರು ವಿಶೇಷವಾಗಿದ್ದು ಪೆನುಗೊಂಡೆಯ ದೇಶದ ಅಪ್ಪೆಯಕೆರೆಯು ಮಧುಗಿರಿ ತಾಲೂಕು, ದೊಡ್ಡೇರಿ ಹೋಬಳಿ, ಅಪ್ಪನಹಳ್ಳಿ ಇರಬೇಕು. ಈ ಊರು ಬಿಜ್ಜಾವರಕ್ಕೆ ಸಮೀಪದಲ್ಲಿದೆ. ಶಿವಲಿಂಗಚಾರಿತ್ರದಲ್ಲಿ

"ಇಂತಿರುತಿರ್ದಂದಿನಂತೆ ಒಂದಾನೊಂದು ದಿನಂ ನಿಜಶಿಷ್ಯರಿಂದ ಪೂಜೆಯಂ
ಕೈಕೊಂಬೆನೆಂದು ಪುರವಂ ಪೊರಟು ಪೋಗುತ್ತಿರಲುಂ –
ಕಾಣಿಸಿ ಬಿಜ್ಜಾವರವಂ
ಬಾಗರಿಯೊಳ್ಳೈದಿ ಕುಳಿತು ಶಿಷ್ಯರ ಮನೆಯೊಳ್" (೨-೩)

ಈ ಸಾಲುಗಳು ಮೇಲೆ ಸೂಚಿಸಿದ ಸ್ಥಳಗಳಾಗಿದ್ದು, ಉಯ್ಯಂಬಳ್ಳಿಯು ಮೈಸೂರು ಜಿಲ್ಲೆಯ ಹೆಗ್ಗಡದೇವನ ಕೋಟೆ ತಾಲೂಕಿನಲ್ಲಿದೆ. ಬೆಂಗಳೂರು ಪ್ರಸಿದ್ಧ ಮಹಾನಗರವಾಗಿದ್ದು, ಹುಲ್ಲಹಳ್ಳಿ ಮತ್ತು ಹುಣಸನಾಳುಗಳು ನಂಜನಗೂಡು ತಾಲೂಕಿನಲ್ಲಿವೆ. ಕ್ರಿ.ಶ. ೧೬೪೦ರ ಹುಣಸನಾಳು ಶಾಸನ ನಂಜರಾಜನು ಚನ್ನವೀರನನ್ನು ಸನ್ಮಾನಿಸಿದ ಕುರಿತು ಮಾಹಿತಿಯನ್ನು ಒದಗಿಸುತ್ತದೆ. ಇದಕ್ಕೆ ಪೋಷಕವಾಗಿ ತುಮಕೂರು ತಾಲೂಕಿನ ೨೪ನೆಯ ಶಾಸನ ಹೆಬ್ಬೂರು ಗ್ರಾಮಕ್ಕೆ ಸೇರಿದ್ದು "ಹುಣಸನಾಳು ನಂಜರಾಜವಡೆಯರ ಮಗ ದೊಡ್ಡಯ್ಯನವರ ಕುಟುಂಬ ದೇವಾಜಮ್ಮ ಎನ್ನುವ ಉಲ್ಲೇಖ ದೊರೆಯುತ್ತದೆ. ಚನ್ನವೀರದೇಶಿಕ ಈತನ ತಂದೆಯನ್ನು ಕಂಡದ್ದು ಸುಮಾರು ೧೬೮೦ ಸುಮಾರಿಗೆ. ಶಿವಗಣಚಾರಿತ್ರದಲ್ಲಿ ತನ್ನ ತಂದೆಯು –

ಚಾಮರಾಜೇಂದ್ರನ ಸಭೆಯೊಳು ತರ್ಕಿಸುವ ರಾಮದೀಕ್ಷಿತನ ಭಂಜಿಸಿದ
ಶ್ರೀಮದ್ವೀರಣಾರಾಧ್ಯ ತನುಜ ಗುಣ । ಧಾಮ ಚೆನ್ನಾರ್ಯ ರಕ್ಷಿಪುದು ॥೮ (೧-೧೩)

ಎಂದು ಹೇಳುವ ವಿಚಾರಗಳು ಮೇಲಿನ ಮಾತಿಗೆ ಪುಷ್ಟಿಯನ್ನು ಕೊಡುತ್ತವೆ.

ಜಿ.ಜಿ. ಮಂಜುನಾಥನ್ ಅವರು – ಮುರಿಗಾಶಾಂತವೀರರ ಪೂರ್ವಿಕರ ಪರಂಪರೆಯನ್ನು ಶಿವಲಿಂಗಚಾರಿತ್ರದ ಆಧಾರದಿಂದ ಹೀಗೆ ನಿರೂಪಿಸಿದ್ದಾರೆ.

(ಮೂಲಸ್ಥಳ)

↓

ಅಪ್ಪೆಯಕೆರೆ

↓

(ಮುತ್ತಜ್ಜ) – ಶಿವಲಿಂಗಾರ್ಯ

↓

(ಅಜ್ಜ) – ವೀರಣಾರ್ಯ + ನಂಜಾಂಬಿಕೆ

↓

(ತಂದೆ) – ಚೆನ್ನವೀರದೇವ + ಗಿರಿಜಾಂಬಿಕೆ

↓

(ಮಗ) – ಶಾಂತವೀರ (ಮುರಿಗಾ ಶಾಂತವೀರರು)

ಮುರಿಗಾಶಾಂತವೀರರು ೧೨ನೆಯ ಶತಮಾನದ ಶೂನ್ಯ ಸಿಂಹಾಸನಾಧೀಶನಾದ ಅಲ್ಲಮ ಪ್ರಭುವಿನ ಮಾದರಿಯಂತೆ ವೇಷ-ಭೂಷಣಗಳನ್ನು, ಅವರ ವಿಚಾರಧಾರೆಗಳನ್ನು ಅಳವಡಿಸಿಕೊಂಡಂತೆ ಭಾಸವಾಗುತ್ತದೆ. ಶಾಂತವೀರರ ಆತ್ಮಚರಿತ್ರೆಯನ್ನು ನೋಡಿದಾಗ ಸಂಸಾರ ಸಾಗರವನ್ನು ತ್ಯಜಿಸಿ 'ವಿರಕ್ತ' ಎಂಬ ತನ್ಮಯತೆಯನ್ನು ಆವರಿಸಿಕೊಂಡು ಸ್ವಯಂಭು ವಿರಾಟ ವಿಪ್ಲವನಾಗಿ ಸಕಲ ಇಂದ್ರಿಯಗಳನ್ನು ತ್ಯಜಿಸಿದ ಶ್ರೇಷ್ಠ ಶರಣರಾಗಿ ನಮಗೆ ಕಂಡುಬರುತ್ತಾರೆ.

ಶೂನ್ಯಪೀಠ ಪರಂಪರೆಯಲ್ಲಿ ತೋಂಟದ ಸಿದ್ಧಲಿಂಗ ಯತಿಗಳಿಂದ ಹಿಡಿದು ಮುರಿಗಾ ಶಾಂತವೀರರವರೆಗೂ ಸ್ಥಿರಪೀಠ ವ್ಯವಸ್ಥೆ ಇರಲಿಲ್ಲ. ಜಂಗಮರಾಗಿ ನಿಂತಲ್ಲಿ ನಿಲ್ಲದೆ ಜನ ಸೇವೆಗಾಗಿ ಸದಾ ಸಂಚಾರಶೀಲರಾಗಿರುತ್ತಿದ್ದರು. ಮುರಿಗಾ ಶಾಂತವೀರರು ಸಹ ಇದಕ್ಕೆ ಹೊರತಾಗಿಲ್ಲ. ಸಂಚಾರ ಮಾಡುತ್ತ ಚಿತ್ರದುರ್ಗದ ವನಾರಣ್ಯ ಪ್ರದೇಶಕ್ಕೆ ಬರುತ್ತಾರೆ. ಅಲ್ಲಿ ನಡೆದ ಒಂದು ಘಟನೆಯನ್ನು ಹೀಗೆ ಸಂಗ್ರಹಿಸಬಹುದು.

ಶಾಂತವೀರರು ವನಾರಣ್ಯದ ಮರವೊಂದರ ಕೆಳಗೆ ಕುಳಿತು ವೀಣೆಯನ್ನೆತ್ತಿ ಮೀಟುತ್ತ ಪಂಚಾಕ್ಷರಿಯ ಆಲಾಪಗೈಯುತ್ತಿರುವಾಗ ದನಕಾಯುವ ಹುಡುಗನೊಬ್ಬನ ಮೇಲೆ ಸರ್ಪವೊಂದು ಆಕ್ರಮಿಸಿ ತನ್ನ ಹೆಡೆಯಿಂದ ಅವನ ಮುಖದ ಮೇಲಿನ ಬಿಸಿಲನ್ನು ದೂರ ಮಾಡುತ್ತಿತ್ತು. ಇಂತಹ ರೋಮಾಂಚನವಾದ ದೃಶ್ಯವನ್ನು ಕಂಡ ಶಾಂತವೀರರು ಬಾಲಕನ ಬಳಿಗೆ ಬಂದು ಪುತ್ರ ನಿನಗೆ ಶಿವನ ಕೃಪೆಯಾಗಿದೆ. "ನೀನು ಈ ದುರ್ಗದ ದೊರೆಯಾಗುವೆ" ಎಂದು ಹರಸಿ ತಮ್ಮ ಮುದ್ಗರದಿಂದ ಅವನ ಹಣೆ ಮುಟ್ಟಿ ಆಶೀರ್ವಾದ ಮಾಡುತ್ತಾರೆ. ಬಾಲಕ ಆಶ್ಚರ್ಯಚಕಿತನಾಗುತ್ತಾ ಮುರುಗೇಂದ್ರರಿಗೆ ನಮಸ್ಕರಿಸಿ "ಸ್ವಾಮಿ ! ನಾನೊಬ್ಬ ಬೇಡರ ಜಾತಿಯ ಹುಡುಗ ನಿಮ್ಮ ಶ್ರೀರಕ್ಷೆ ನನ್ನ

ಭಾಗ್ಯದ ಬೆಳ್ಗೊಡೆಯಂತಾಯಿತು. ನನಗೆ ಕರುಣಿಸಿದ ಈ ರಾಜ್ಯ ನಿಮ್ಮದೆ ನಿಮ್ಮ ಪರವಾಗಿ ಆಳುವ ಆಳು ನಾನು"[೧೦] ಎಂದು ವಿನೀತನಾಗಿ ನುಡಿಯುತ್ತಾನೆ.

ಹೀಗೆ ದನಗಾಯಿ ಬಾಲಕನೊಬ್ಬನಿಗೆ ಶಾಂತವೀರರು ಕೃಪಾಶೀರ್ವಾದ ಕಲ್ಪಿಸಿದ್ದರಿಂದ ಆತನೇ ಚಿತ್ರದುರ್ಗದ ದೊರೆ ಬಿಚ್ಚುಗತ್ತಿ ಭರಮಪ್ಪನಾಯಕನಾದನೆಂದು ಹೇಳಲಾಗಿದೆ. ಮುಂದೆ ತಮ್ಮ ಧರ್ಮ ಪ್ರಚಾರ ಕೈಗೊಂಡ ಶ್ರೀಗಳು ದೆಹಲಿಗೆ ಬರುತ್ತಾರೆ. ಆ ಸಂದರ್ಭದಲ್ಲಿ ಬಾದಷಹಾನ ಪಟ್ಟದ ಆನೆ ವಿನಾಕಾರಣ ಕುಸಿದು ಪ್ರಾಣ ತ್ಯಾಗ ಮಾಡಲು ಇದನ್ನು ಅರಿತ ಶಾಂತವೀರರು ತಮ್ಮ ಕೈಯಲ್ಲಿರುವ ಮುದ್ಗರದಿಂದ ಆನೆಗೆ ಪುನರ್ ಜನ್ಮ ನೀಡಿ ಬದುಕಿಸುತ್ತಾರೆ. ಆಗ ಅಲ್ಲಿಯ ರಾಜ ಧನ್ಯತೆಯಿಂದ ಶ್ರೀಗಳಿಗೆ ಏನು ಬೇಕು ಕೇಳಿ ಸ್ವಾಮಿ ಎಂದಾಗ ಶ್ರೀಗಳು ಮುರುಗರಾಜೇಂದ್ರರು – 'ಅಯ್ಯ ಇಂದಿಗೆ ಸುಮಾರು ೫೦೦ ವರ್ಷಗಳ ಹಿಂದೆ ನಮ್ಮ ಪರಂಪರೆಯ ಪರಂಜ್ಯೋತಿ ಸ್ವರೂಪರಾದ ಚೆನ್ನಬಸವೇಶ್ವರರು ಆಗ ತಮ್ಮೊಡನಿದ್ದ ನಿಮ್ಮ ಧರ್ಮೀಯನೊಬ್ಬನಿಗೆ ಸಿಂಹಾಸನ, ಶಿಖಾಶೈಲವೆಂಬ ಶೂನ್ಯ ಸಿಂಹಾಸನ ಪಟ್ಟಾಧಿಕಾರದ ಚಿನ್ನತ್ರಯಗಳನ್ನು ನ್ಯಾಸವಾಗಿ ಕೊಟ್ಟಿದ್ದರು. ಅವುಗಳನ್ನು ಇಟ್ಟುಕೊಂಡಿದ್ದವ ಸುಲ್ತಾನ ಮಲ್ಲೂಖಾನ ಎಂದು ಹೇಳುತ್ತಾರೆ. ಈಗ ಅವುಗಳನ್ನು ನಮಗೆ ಮರಳಿಸಬೇಕೆಂದು ಕೇಳಿಕೊಂಡರು. ಕೂಡಲೇ ಔರಂಗಜೇಬನು ಭಕ್ತಿಪೂರ್ವಕವಾಗಿ ತನ್ನ ವಶದಲ್ಲಿದ್ದ ಆ ಚಿನ್ನತ್ರಯಗಳನ್ನು ಪೂಜ್ಯರಿಗೆ ಹಿಂತಿರುಗಿಸುತ್ತಾನೆ. ಜೊತೆಗೆ ಶ್ರೀಗಳಿಗೆ ಗೌರವಭಕ್ತಿಯ ಕಾಣಿಕೆಯನ್ನು ನೀಡಿ 'ಕಲಂದರ್ ಬಾದಷಹಾ ಅಲ್ಲಾ ಖುದಾಪರ್' ಎಂಬ ಬಿರುದನ್ನು ಸಮರ್ಪಿಸಿ ಶೃಂಗರಿಸಿದ ಪುರದ ಬೀದಿಗಳಲ್ಲಿ ಮೆರವಣಿಗೆ ಮಾಡಿ ೧೨,೦೦೦ ಸೈನ್ಯವನ್ನು ಪೂಜ್ಯರಿಗೆ ನೀಡಿ ಬೀಳ್ಕೊಡುತ್ತಾನೆ. ಹಾಗೆಯೇ ಸಂಚಾರ ಮಾಡುತ್ತ ಹೈದ್ರಾಬಾದ್‌ಗೆ ಬರುತ್ತಾರೆ. ಅಲ್ಲಿಯೂ ಸಹ ನವಾಬರ ಆನೆಗಳಿಗೆ ಅನೇಕ ಬಗೆಯ ರೋಗಗಳು ಬಂದು ಬಳಲುತ್ತಿರುವ ಸಂದರ್ಭದಲ್ಲಿ ಶ್ರೀಗಳು ತಮ್ಮ ಅಮೃತಹಸ್ತದಿಂದ ನಿವಾರಣೆ ಮಾಡುತ್ತಾರೆ. ಇದರಿಂದ ನವಾಬ ಮುರುಗೇಂದ್ರರ ಹೆಸರಿನಲ್ಲಿ ಒಂದು ವಿರಕ್ತಮಠವನ್ನು ಸ್ಥಾಪಿಸಿ ಶ್ರೀಗಳಿಗೆ ೨೨ ಬಗೆಯ ಬಿರುದುಗಳನ್ನು ಕೊಟ್ಟು ಸನ್ಮಾನಿಸುತ್ತಾನೆ.[೧೧]

ಹೀಗೆ ಶಾಂತವೀರರು ದೆಹಲಿ, ಹೈದ್ರಾಬಾದ್ ಮುಂತಾದ ಪ್ರದೇಶಗಳಲ್ಲಿ ಸಂಚಾರ ಮಾಡುತ್ತ ಶಿವಭಕ್ತಿಯನ್ನು ಸಾರುತ್ತ ಚಿತ್ರದುರ್ಗಕ್ಕೆ ಬರುತ್ತಾರೆ. ಆ ಸಮಯದಲ್ಲಿ ಭರಮನಾಯಕ ಆಳ್ವಿಕೆ ನಡೆಸುತ್ತಿದ್ದ. ಪೂಜ್ಯರ ಆಗಮನದ ಸುದ್ದಿಯನ್ನು ಕೇಳಿ ಆನಂದಭರಿತನಾಗುತ್ತಾನೆ. ಕರು ಹಸುವನ್ನು ಅರಸಿಕೊಂಡು ಹೋಗುವಂತೆ ಪೂಜ್ಯರನ್ನು ಅರಸಿಕೊಂಡು ಅವರಲ್ಲಿಗೆ ಬರುತ್ತಾನೆ. ಅತ್ಯಂತ ಭಕ್ತಿಪೂರ್ವಕವಾಗಿ ಬೇಡಿಕೊಂಡು "ಇನ್ನು ಮುಂದೆ ಸ್ವಾಮಿಗಳು ಚಿತ್ರದುರ್ಗದಲ್ಲಿಯೇ ನೆಲೆಸಬೇಕು. ದಿನಂಪ್ರತಿ ದರ್ಶನ ಭಾಗ್ಯ ಕಲ್ಪಿಸಿಕೊಡಬೇಕು"[೧೨] ಎಂದು ಕೇಳಿಕೊಂಡಾಗ ಶ್ರೀಗಳ ಅಣತಿಯಂತೆ ಬೆಟ್ಟದ ಮೇಲಣ ತನ್ನ ಅರಮನೆಗೆ ಹೊಂದಿಕೊಂಡಂತೆ ಚಂಪಕ ಸಿದ್ಧೇಶನ

ದೇವಾಲಯದ ಹತ್ತಿರವೆ ಒಂದು ಕುಸುರಿ ಕಲೆಯ ಕಲ್ಲಿನಿಂದ ಕೂಡಿದ ದೊಡ್ಡ ಮಠವನ್ನು ಕಟ್ಟಿಸಿಕೊಡುತ್ತಾನೆ. ಅದರ ವಿಸ್ತಾರ ೩೬೦ ಅಂಕಣ ಇದ್ದು ಬೃಹನ್ಮಠವೆಂದೇ ಪ್ರಸಿದ್ಧಿಯನ್ನು ಪಡೆಯಿತು.

ಮುರಿಗಾ ಶಾಂತವೀರರು ನಿತ್ಯದಾಸೋಹ ವ್ಯವಸ್ಥೆ ಕೈಗೊಂಡು ಭಕ್ತರ ಪ್ರೀತಿಗೆ ಪಾತ್ರವಾಗುತ್ತಿದ್ದ ಸಂದರ್ಭ ಮುಂದೊಂದು ದಿನ ಭರಮನಾಯಕನು ಶತ್ರುರಾಜರ ಮೇಲೆ ದಂಡೆತ್ತಿ ಹೋಗಬೇಕಾಗಿರುವುದರಿಂದ ತಮಗೆ ಏನಾದರೂ ಕಾಣಿಕೆ ಕೊಡಬೇಕೆಂಬ ಇಚ್ಛೆಯಾಗಿದೆ. ದಯವಿಟ್ಟು ಅಪ್ಪಣೆ ಕೊಡಬೇಕೆಂದು ವಿನಂತಿ ಮಾಡಿಕೊಂಡಾಗ ಶ್ರೀಗಳು ತಮ್ಮ ಮನದಾಳದ ಇಂಗಿತವನ್ನು ಪ್ರಕಟಪಡಿಸಿದರು. ಅಂತೆಯೇ ಚಿತ್ರದುರ್ಗದ ಗಿರಿಯ ತಪ್ಪಲಿನಲ್ಲಿ ಭರಮ ನಾಯಕನು ಜಗದ್ಗುರುಗಳ ಅಪ್ಪಣೆಯಂತೆ ಮತ್ತೊಂದು ಮಠವನ್ನು ಕಟ್ಟಿಸಿಕೊಟ್ಟನು. ಮುರುಗರಾಜೇಂದ್ರರು ಅಲ್ಲಿ ಕಾಯಬೆರಸಿ ಸಮಾಧಿಸ್ಥರಾಗುವ ಮುನ್ನ ತಮ್ಮ ಧರ್ಮ ಸಂಸ್ಥಾನದ ದಿವ್ಯ ಪರಂಪರೆಗೆ ಸೂಕ್ತವಾದ ಇಮ್ಮಡಿ ಮುರಿಗಾ ಗುರುಸಿದ್ಧ ಮಹಾಪ್ರಭುಗಳನ್ನು ಶೂನ್ಯ ಸಿಂಹಾಸನದಲ್ಲಿ ಕುಳ್ಳಿರಿಸಿ ಶಿಖಾಶೈಲಗಳನ್ನು ಒಪ್ಪಿಸಿ ಅವರಿಗೆ ಷಟ್ಸ್ಥಲ ಪಟ್ಟವನ್ನು ಕಟ್ಟಿ ತಮ್ಮ ದಿವ್ಯಶಕ್ತಿಯನ್ನು ಅವರಿಗೆ ಸಂಕ್ರಮಿಸಿ ಬೆಟ್ಟವಿಳಿದು ಬಂದು ತಪ್ಪಲಿನ ಪರಿಸರದಿಂದಾವೃತವಾದ ಶ್ರೀ ಮಠದಲ್ಲಿ ಜೀವಂತವಾಗಿ ಶಿವಸಮಾಧಿಗೆ ಸಂದರು.

ಶಾಂತವೀರರು ಚಿತ್ರದುರ್ಗದ ಬೆಟ್ಟದ ತಪ್ಪಲಿನಲ್ಲಿ ವಿರಾಜಮಾನರಾಗಿದ್ದ ಭಕ್ತರ ಹೃದಯ ಮಂದಿರದಲ್ಲಿ ಸದಾ ನೆಲೆಗೊಂಡಿದ್ದಾರೆ. ಬೃಹನ್ಮಠವು ಸಮಾನತೆ, ಭರವಸೆ, ಸಮೃದ್ಧಿಗೆ ಕಾರಣವಾಗಿದ್ದು ಇದಕ್ಕೆ ಪೂರಕ ಮತ್ತು ಪ್ರೇರಕಶಕ್ತಿ ಮುರಗಾಶಾಂತವೀರರು. ಪ್ರತಿಷ್ಠಿತ ಮಠಗಳಲ್ಲಿ ಒಂದಾದ ಮುರುಘಾಮಠವು ಕನ್ನಡ ನಾಡಿನ ಸಂಸ್ಮರಣೀಯ ಸಂಸ್ಕೃತಿಯ ಪಳೆಯುಳಿಕೆಗಳಲ್ಲಿ ಒಂದಾಗಿ ಇತಿಹಾಸವನ್ನು ಮರುಕಳಿಸುವಂತಿದೆ.

ಇದುವರೆಗೂ ಚರ್ಚಿಸಿದ ಮುರಿಗಾ ಶಾಂತವೀರರ ಜೀವನದ ಬಗೆಗೆ ವಿಫುಲವಾದ ಮಾಹಿತಿಯನ್ನು ಒದಗಿಸಿದ ಮಹಾದೇವ ಕವಿಯ ಮಹಲಿಂಗೇಂದ್ರವಿಜಯವು ಸಮಕಾಲೀನ ಪರಿಸರವನ್ನು ಶ್ರೀಗಳ ಬಹು ಬಗೆಯ ಘಟನೆಗಳನ್ನು, ವಾಸ್ತವ ಸಂಗತಿಗಳನ್ನು ಚಿತ್ರಿಸುವುದರ ಜೊತೆಗೆ ಅವರ ಮಹಿಮೆಯನ್ನು ಕೊಂಡಾಡಲು ರೂಪಿಸಿದ ಸಾಂಪ್ರದಾಯಿಕ ಪವಾಡ ಸದೃಶ್ಯ ಘಟನೆಗಳು ಶಿವಪಾರಮ್ಯ ಭಕ್ತಿ, ಜ್ಞಾನ, ಧರ್ಮ ಪ್ರಸಾರವನ್ನು ಮಾಡುವ ಉದ್ದೇಶವೇ ಹೊರತು ಬೇರೆ ರೀತಿಯಾದ ಆಲೋಚನೆ ಏನು ಇಲ್ಲವೆನಿಸುತ್ತದೆ.

ಶಾಂತವೀರರ ಶಿಷ್ಯರಾದ ಇಮ್ಮಡಿ ಗುರುಸಿದ್ಧರ "ಮುರಿಗೆ ತಾರಾವಳಿಯು ಹೆಚ್ಚು ವಿಶ್ವಾಸಾರ್ಹ ಕೃತಿಯಾಗಿದ್ದು, ಅದರಲ್ಲಿ ಬರುವ ಚಿತ್ರದುರ್ಗಕ್ಕೆ ಸಂಬಂಧಿಸಿದ ಸಂಗತಿಗಳು ಸಾಕಷ್ಟು

ಪ್ರಮಾಣದಲ್ಲಿ ಚಾರಿತ್ರಿಕ ಸತ್ಯವನ್ನು ಪ್ರತಿಪಾದನೆ ಮಾಡುತ್ತವೆ. ಶಾಂತವೀರರ ವಯೋಮಾನ, ಚಿತ್ರದುರ್ಗಕ್ಕೆ ಆಗಮಿಸಿದ ಕಾಲ, ನೆಲೆನಿಂತ ಸಂದರ್ಭ, ಪರಸ್ಪರ ಪೂರಕ ಹಿನ್ನೆಲೆಯಲ್ಲಿದ್ದು ಸಮರ್ಥಿಸಬೇಕಾದ ಅಂಶಗಳೇ ಆಗಿವೆ.

ತಾರಾವಳಿಯಲ್ಲಿ ಪ್ರಸ್ತಾಪಗೊಂಡಂತೆ – ದೇಶ ಸಂಚಾರ ಕೈಗೊಂಡ ಶಾಂತವೀರರು ಒಂದು ವರ್ಷ ಸೋದಾಪುರದ ಸದಾಶಿವರಾಯರ ಅರಮನೆಯಲ್ಲಿ ವಾಸ್ತವ್ಯ ಹೂಡಿದ್ದಾಗ ಭರಮನಾಯಕನು ಶ್ರೀಗಳ ಮೇಲಿನ ಭಕ್ತಿಯಿಂದಾಗಿ ಉಡುಗೊರೆ ಸಹಿತ ಭಿನ್ನವತ್ತಳೆಯನ್ನು ಕಳುಹಿಸಿ ಚಿಮ್ಮುಲಗಿರಿ ದುರ್ಗಕ್ಕೆ ಆಗಮಿಸಬೇಕೆಂದು ಬಿನ್ನವಿಸಿಕೊಂಡಾಗ ಅದನ್ನು ಅಂಗೀಕರಿಸಿದ ಶಾಂತವೀರರು ತನ್ನಲ್ಲಿಯೇ ಉಳಿಯಬೇಕೆಂದು ಅಂಗಲಾಚಿದ ಸದಾಶಿವರಾಯನನ್ನು ಸಂತೈಸಿ ಸೋದೆಯಿಂದ ತೆರಳಿ ಗುತ್ತೊತ್ತಳಲಪುರ, ಹಾವನೂರು, ಹರಿಹರ, ಬೇತೂರು ಮಾರ್ಗವಾಗಿ ಅಣಜಿಯನ್ನು ಸೇರಿ ಅಲ್ಲಿ ಮುಕ್ಕಾಂ ಮಾಡುತ್ತಾರೆ. ಮುಂದೆ ಚಿತ್ರದುರ್ಗಕ್ಕೆ ತೆರಳುವ ಮಾರ್ಗದಲ್ಲಿ ಕಳ್ಳಹುಣಸೆಯ ದೇವಣಗೌಡನ ಮನೆಯಲ್ಲಿ ಆತನ ಭಕ್ತಿಯನ್ನು ಮೆಚ್ಚಿ ಅಲ್ಲಿಯೇ ಉಳಿದುಕೊಳ್ಳುತ್ತಾರೆ. ಇದನ್ನು ಅರಿತ ಭರಮ ಭೂಪಾಲನು ಪರಿವಾರ ಸಮೇತ ಆಗಮಿಸಿ ಶಾಂತವೀರರನ್ನು ಭಕ್ತಿಯಿಂದ ಪಾಲಿಕೆಯಲ್ಲಿ ಮೆರವಣಿಗೆ ಸಮೇತ ಚಿತ್ರದುರ್ಗಕ್ಕೆ ಕರೆತರುತ್ತಾನೆ. ಕಾಲಗಳು ಗತಿಸಿದ ನಂತರ ಭರಮಣ್ಣನು ಗುರುವಿನ ಅಪ್ಪಣೆ ಪಡೆದು ಹಂಪೆಯ ಲಿಂಗದ ದರ್ಶನ ಪಡೆಯಬೇಕೆಂದು ಯಾತ್ರೆಗೆ ಹೊರಟನು. ಶಾಂತವೀರರು ಆ ಸಮಯದಲ್ಲಿ ಐಕ್ಯಪದವಿ ಹೊಂದಲು ನಿರ್ಧರಿಸಿ ಚರಮೂರ್ತಿ ಸಮೂಹಕ್ಕೆ ಸಮಾಧಾನ, ಹಿತವಚನವನ್ನು ನೀಡಿ ಸ್ವಭಾನು ಸಂವತ್ಸರ ಅಧಿಕ ಶ್ರಾವಣ ಬಿದಿಗೆ ಸೋಮವಾರ ಕ್ರಿ.ಶ. ೧೭೦೩ ಜುಲೈ, ೫ ರಂದು ರಾತ್ರಿ ಮೂರುವರೆ ಗಂಟೆಗೆ ಶಿವಲಿಂಗದಲ್ಲಿ ಬೆರೆತು ಬಯಲಾಗುತ್ತಾರೆ.

ಕವಿ ಮಹಾದೇವನು ತನ್ನ ಮಹಾಲಿಂಗೇಂದ್ರವಿಜಯದಲ್ಲಿ ಉಲ್ಲೇಖಿಸಿದ ಕೆಲವು ಘಟನೆಗಳು ಇಮ್ಮಡಿ ಗುರುಸಿದ್ಧರ "ಮುರಿಗೆ ತಾರಾವಳಿ"ಯಲ್ಲಿ ಕಂಡು ಬರುವುದಿಲ್ಲ. ಈ ಎರಡು ಕೃತಿಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಮುರಿಗಾ ಶಾಂತವೀರರು ಒಬ್ಬ ಅಲೌಕಿಕ ವ್ಯಕ್ತಿಯಾಗಿ ಧರ್ಮಪ್ರಚಾರವನ್ನು ಮಾಡುತ್ತ ಅದ್ಭುತ ಲೀಲೆಗಳನ್ನು ಮಾಡಿ ತೋರಿಸಿದ ಮಹಾನುಭಾವಿಗಳಾಗಿ ಕಂಡು ಬರುತ್ತಾರೆ. ಚಿತ್ರದುರ್ಗದ ಬೃಹನ್ಮಠದ ಕೀರ್ತಿ ಈ ನಾಡಿನಲ್ಲಿ ಹರಡಬೇಕಾದರೆ ಅದಕ್ಕೆ ಘನವ್ಯಕ್ತಿತ್ವ ಬೇಕಾಗುತ್ತದೆ. ಆ ಕೀರ್ತಿ ಶರಣರದ್ದಾಗಿತ್ತು.

ಮುರಿಗಾ ಶಾಂತವೀರರ ಕಾಲದಲ್ಲಿ ಮೈಸೂರು ಜಿಲ್ಲೆ ಮಳವಳ್ಳಿ ತಾಲೂಕಿನ ಧನಗೂರು, ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೈದ್ರಾಬಾದ್ ಮುಂತಾದ ಕಡೆಗಳಲ್ಲಿ ಮುರುಘಾಮಠಗಳು ಸ್ಥಾಪಿತಗೊಂಡವು.

ಮುರಿಗೆ ತಾರಾವಳಿಯಲ್ಲಿ ಪ್ರಸ್ತಾಪಗೊಂಡಂತೆ -

ಶಾಂತವೀರರ ಶಿಷ್ಯರಲ್ಲಿ ಅನೇಕ ರಾಜಮಹಾರಾಜರು ಇರುವುದು ವಿಶೇಷ. ಮೈಸೂರು ಅರಸರು, ಭಾಗಾನಗರದ ಕುತುಬ್‌ಬಾದ್‌ಷಾ, ಮಹಾರಾಷ್ಟ್ರದ ಛತ್ರಪತಿ ಶಿವಾಜಿ ಮಹಾರಾಜ, ಹರಪನಹಳ್ಳಿಯ ಬಸವಂತ ಭೂಪಾಲ, ಗದುಗಿನ ಡಾಕಿನ ದೇಸಾಯಿ, ಸೋದೆಯ ಸದಾಶಿವರಾಯ, ಶಿವದ್ವಿಜಕುಲದೀಪನಾದ ಗುತ್ತೊಳಲಪುರದ ಹನುಮರಾಯ, ಹಾವನೂರ ಪ್ರವೀರಭೂಪತಿ, ಲಕ್ಷ್ಮೇಶ್ವರದ ಕಾನಭೂಮೀಶನಣುಗ ಕೆಂಚನಗೌಡ, ಬೇತೂರಿನ ಅಧಿಪತಿ, ಅಣಿಜೆ-ಅಧಿಪತಿ, ಕಳ್ಳ ಹುಣಸೆ ಗ್ರಾಮದ ದೇವಣಗೌಡ, ಚಿತ್ರದುರ್ಗದ-ಕಸ್ತೂರಿ ಭರಮಭೂಪಾಲ ಮುಂತಾದವರು ಶಾಂತವೀರರ ಶಿಷ್ಯರಾಗಿದ್ದರು ಎಂಬ ವಿಷಯ ತಿಳಿದುಬರುತ್ತದೆ. ಹಾಗೆಯೇ ಬಸವಲಿಂಗ ಸಿಂಧೂಜಿ, ಹಾಗಲವಾಡಿ, ಬಿಜ್ಜಾವರ, ಮದ್ದಗಿರಿ, ಮತ್ತೋಡು, ಕೆಳದಿ ಮೊದಲಾದ ರಾಜರೂ ಸಹ ಶ್ರೀಗಳ ಆಪ್ತ ಶಿಷ್ಯರಾಗಿದ್ದರು ಎಂಬ ಆಧಾರಗಳು ಕಂಡುಬರುತ್ತವೆ.

ಈ ಎಲ್ಲ ವಿವರಗಳಿಂದ – ಶ್ರೀ ಮುರಿಗಾ ಶಾಂತವೀರದೇಶಿಕೇಂದ್ರರು ಚಿತ್ರದುರ್ಗ ಬೃಹನ್ಮಠದ ಕರ್ತೃಗಳೆಂದೂ, ರಾಜಾಧಿರಾಜಪೂಜಿತವಾದವರೆಂದೂ ಹಿಂದೂ-ಮುಸ್ಲಿಂರೆಲ್ಲರಿಗೂ ಪೂಜ್ಯರಾಗಿ, ಭಕ್ತಿಯ ಕೇಂದ್ರಬಿಂದುವಾಗಿ, ಪ್ರಭಾವಶಾಲಿ ಧರ್ಮಪ್ರಸಾರಕರಾಗಿ ದಕ್ಷಿಣಾಮೂರ್ತಿಯಂತೆ ಜ್ಞಾನ ಸಿಂಹಾಸನರೂಢರಾಗಿ ಭಕ್ತರ ಬಾಳು ಬೆಳಗಿದ ಮಹಾ ಕಾರಣಿಕರಾಗಿದ್ದರು ಎಂದು ಹೇಳಬಹುದು.

ಕೃತಿಗಳು :

ಮುರಿಗಾಶಾಂತವೀರರು ಕೇವಲ ಒಂದು ಮಠದ ಪೀಠಾಧಿಪತಿಗಳಾಗದೆ ಸಮಾಜ ಸುಧಾರಕರಾಗಿ, ಧರ್ಮ ಪ್ರಚಾರಕರಾಗಿ, ದಿವ್ಯಜ್ಞಾನಿಗಳಾಗಿ, ತಪಸ್ವಿಗಳಾಗಿ, ಅಷ್ಟೇ ಅಲ್ಲದೆ ಶ್ರೇಷ್ಠ ಸಾಹಿತ್ಯ ಚಿಂತಕರಾಗಿ ಸಾಧನೆ ಮಾಡಿದರು. "ಕೋಟಿಗೊಬ್ಬ ಶರಣ ಲಕ್ಷಕ್ಕೊಬ್ಬ ಭಕ್ತ" ಎಂಬ ಮಾತು ಶಾಂತವೀರರ ವ್ಯಕ್ತಿತ್ವಕ್ಕೆ ಸಾಕ್ಷಿಯಾಗುತ್ತದೆ. ಕಟ್ಟಿಗೆಹಳ್ಳಿ ಸಿದ್ಧಲಿಂಗರ ಕರಕಮಲ ಸಂಜಾತರಾಗಿದ್ದ ಇವರು ಸಂಸ್ಕೃತ ಹಾಗೂ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನಿಷ್ಣಾತರಾಗಿದ್ದರು. ಸಾಹಿತ್ಯ ಮತ್ತು ಸಮಾಜ ಸುಧಾರಣೆ ಅವರ ಬದುಕಿನ ಬಹುಮುಖ್ಯ ಮಣಿಹಗಳಾಗಿದ್ದವು. ಶ್ರೀಗಳು ಕೈಗೊಂಡ ದೇಶ ಪರ್ಯಟನ, ಲೋಕಾನುಭವ, ಗಳಿಸಿದ ಪ್ರತಿಭೆ-ಪಾಂಡಿತ್ಯ ಅವರೊಬ್ಬ ಶ್ರೇಷ್ಠ ಕವಿಗಳಾಗಿ ರೂಪುಗೊಳ್ಳಲು ಕಾರಣವಾಗಿವೆ. ಈವರೆಗಿನ ಶೋಧನೆಯಿಂದ ಅವರ ಒಟ್ಟು ೧೭ ಕೃತಿಗಳು ದೊರೆತಿವೆ. ಅದರಲ್ಲಿ ೧೦ ಕೃತಿಗಳು ಪ್ರಕಟಗೊಂಡಿವೆ. ಉಳಿದ ೭ ಕೃತಿಗಳು ಹಸ್ತಪ್ರತಿಯಲ್ಲಿಯೇ ಉಳಿದುಕೊಂಡಿದ್ದು, ಅವುಗಳ ಸಂಪಾದನಾ ಕಾರ್ಯ ಇನ್ನೂ ವ್ಯವಸ್ಥಿತವಾಗಿ ಆಗಬೇಕಾಗಿದೆ. ಎಸ್. ಶಿವಣ್ಣ ಅವರು ಸಂಪಾದಿಸಿದ ೧೦ ಪ್ರಕಟಿತ ಕೃತಿಗಳು ಹಾಗೂ ಅಪ್ರಕಟಿತ ಕೃತಿಗಳು ಕೆಳಗಿನಂತಿವೆ.

ಪ್ರಕಟಿತ ಕೃತಿಗಳು :

೧. ಹಮ್ಮೀರ ಕಾವ್ಯ

೨. ಪ್ರಭುಲಿಂಗದ ಕಂದ

೩. ನೀಲಾಂಬಿಕಾ ಲಲಿತ ಪಂಚವಿಂಶತಿ

೪. ವೈರಾಗ್ಯ ಷಟ್ಪದಿ

೫. ಮನುರಾಜೇಂದ್ರ ತಾರಾವಳಿ

೬. ಕಟ್ಟಿಗೆಯ ತಾರಾವಳಿ

೭. ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ

೮. ಶಬ್ದ ರತ್ನಾಕರ

೯. ಏಕೋನವಿಂಶತಿ ಪದ

೧೦. ಷಡ್ವಕ್ತ್ರಸ್ತೋತ್ರ (ಸಂಸ್ಕೃತ ಕೃತಿ ೯ ವೃತ್ತಗಳಿವೆ)

ಅಪ್ರಕಟಿತ ಕೃತಿಗಳು :

೧. ಪಾರಿಜಾತ

೨. ಮುರಿಗೆ ಸ್ವಾಮಿಗಳ ಮುಕ್ತಿ ಪ್ರದೀಪಿಕೆ

೩. ಮುರಿಗೆ ಸ್ವಾಮಿಗಳ ವಚನ

೪. ಮುರಿಗೆ ಸ್ವಾಮಿಗಳ ಸಮಾಧಿಕ್ರಿಯೆ

೫. ಲಿಂಗಸಾವಧಾನ ಪ್ರಾಣ ಸಂಬಂಧಿ ಸಮಾಧಿ ಕ್ರಿಯೆಯ ಉದ್ಧರಣೆ

೬. ಲಿಂಗದ ಮಹಿಮೆ

೭. ಏರ್ದೆಗೊಂಡ ಮರಾಣ

ಇವುಗಳಲ್ಲದೆ ಜಿ.ಜಿ. ಮಂಜುನಾಥನ್‌ರು ಈ ಕೆಳಗಿನ ಕೃತಿಗಳೂ ಶಾಂತವೀರರು ರಚಿಸಿದವೆಂದು ಹೇಳುತ್ತಾರೆ. ಅವುಗಳ ಶೋಧ ಪರಿಷ್ಕರಣ-ಪ್ರಕಟಣ ಕಾರ್ಯವಿನ್ನೂ ನಡೆಯಬೇಕಾಗಿದೆ.

೧) ಶಿವಗಣ ಚಾರಿತ್ರ

೨) ಸೌಂದರೇಶ್ವರ ಯಕ್ಷಗಾನ

೩) ಶಿವಮಹತ್ವರಸಾರ ಶಿಖಾಮಣಿ ಸಂಗ್ರಹ ಶತಕ

೪) ಗಿರಿಜಾದೇವಿಯ ಸಂಕೀರ್ತನ

೫) ನಂಜುಂಡ ಚಾರಿತ್ರ

೬) ಮುಗ್ಧರ ಚಾರಿತ್ರ

೭) ಅಮ್ಮವ್ವೆಯ ಚರಿತ

೮) ಬಿಲ್ಲಮೇಶ್ವರ ತಾರಾವಳಿ

೧. ಹಮ್ಮೀರ ಕಾವ್ಯ :

ಹಮ್ಮೀರಕಾವ್ಯ ಶಾಂತವೀರರ ಮಹತ್ವದ ಕೃತಿ. ಚಂಪೂರೂಪದಲ್ಲಿ ರಚಿತವಾದ ಇದರಲ್ಲಿ ೯ ಪ್ರಕರಣ, ೬೯೯ ಪದ್ಯಗಳಿವೆ. ವಿವಿಧ ವೃತ್ತಗಳ ಪ್ರಯೋಗ ಮಾಡಿದ್ದಾರೆ. ಈ ಕಾವ್ಯಕ್ಕೆ 'ರಾಜೇಂದ್ರ ವಿಜಯ' ಎಂಬ ಇನ್ನೊಂದು ಹೆಸರೂ ಇದೆ. ಕೃತಿಯ ವಸ್ತು ಅಲ್ಲಮಪ್ರಭುಗಳ ಗುರುಗಳಾದ ಪಟ್ಟದಕಲ್ಲಿನ ಅನಿಮಿಷದೇವರ ಚರಿತ್ರೆಯಾಗಿದೆ. ಈ ತರಹದ ಶಿವಶರಣರ ಚರಿತ್ರೆ ಬಂದಿರುವುದು ವಿರಳ. ಒಬ್ಬ ಶರಣ ಇನ್ನೊಬ್ಬ ಶರಣನ ಕುರಿತು ಮಾತನಾಡುವುದೆಂದರೆ ಅದು ನಿಜವಾಗಿಯೂ ಶ್ರೇಷ್ಠತೆಯ ಪ್ರತಿರೂಪ. "ಶರಣರ ಮಾತು ಶರಣರಿಗೆ ಗೊತ್ತು ನರಮನುಷ್ಯರಿಗೆ ಏನು ಗೊತ್ತು" ಎಂಬ ವಿಚಾರ ಈ ಸಂದರ್ಭದ ವಿಚಾರಗಳಿಗೆ ಹತ್ತಿರವಾಗುತ್ತದೆ.

ಕವಿ ಹೇಳುವಂತೆ ಈ ಕೃತಿಗೆ ಮುಖ್ಯ ಆಕರವೆಂದರೆ ಸಿಂಗಿರಾಜ ಪುರಾಣ, ಇದನ್ನು ಹೊರತುಪಡಿಸಿದರೆ ನಮಗೆ ಪೋಷಕ ಆಕರಗಳಾಗಿ ಕಂಡುಬರುವವು ಪ್ರಭುದೇವರ ವಚನಗಳು, ಹರಿಹರನ ಪ್ರಭುದೇವರ ರಗಳೆ, ಶೂನ್ಯಸಂಪಾದನೆ, ಚಾಮರಸನ ಪ್ರಭುಲಿಂಗಲೀಲೆ, ವಿರೂಪಾಕ್ಷ ಪಂಡಿತನ ಚೆನ್ನಬಸವ ಪುರಾಣ. ಈ ಬಹುಬಗೆಯ ಆಕರಗಳನ್ನು ಕ್ರೋಡೀಕರಿಸಿಕೊಂಡು ಮುರಿಗಾ ಶಾಂತವೀರರು ಅನಿಮಿಷದೇವನ ಕಥೆಯನ್ನು ಸಮಗ್ರವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ.

ಹಮ್ಮೀರನಿಗೆ ರಾಜೇಂದ್ರನೆಂದು ಕರೆದಿರುವ ಹಿನ್ನೆಲೆಯಲ್ಲಿ ಕಾವ್ಯಕ್ಕೆ ಈ ಹೆಸರು ಪ್ರಮುಖವಾಗಿದೆ. "ಈ ನರದೇವನು ಹರದೇವನಾಗಿ ಹೇಗೆ ಮೆರೆದನೆಂಬುದೆ" ಈ ಕಾವ್ಯದ ಮೂಲ ಆಶಯವಾಗಿದೆ.

'ಅ'ನಿಮಿಷದೇವನ ವೃತ್ತಾಂತವನ್ನು ಬಿಂಬಿಸುವುದು ಈ ಕಾವ್ಯದ ತಿರುಳಾಗಿದ್ದು, ಕಥಾವಸ್ತು ಹೀಗೆ ನಿರೂಪಿತವಾಗಿದೆ.

ಕರ್ನಾಟಕ ರಾಜ್ಯದ ಮಧ್ಯಭಾಗದಲ್ಲಿರುವ ಪವಿತ್ರ ಪುಣ್ಯ ಭೂಮಿಯೆನಿಸಿರುವ ಕೃಷ್ಣ ಮತ್ತು ಮಲಪ್ರಭೆಯರ ನಡುವಿನ ಭಾಗವೇ ಪಟ್ಟಶಿಲಾಪುರ (ಪಟ್ಟದಕಲ್ಲು). ಇದಕ್ಕೆ ಹಮ್ಮೀರಪುರವೆಂತಲೂ ಕರೆಯುತ್ತಾರೆ. ಸುಂದರವಾದ ಪರಿಸರ, ಅನೇಕ ಕೋಟೆಕೊತ್ತಲಗಳಿಂದ ರಾರಾಜಿಸುವ ಈ ಪುರದ ಅರಸ ತ್ರೈಲೋಕ್ಯಚೂಡಾಮಣಿ. ಈತನ ಪಟ್ಟದ ಅರಸಿ ಮಹಾದೇವಿ. ಆಕೆಗೆ ಬಹುದಿನ ಮಕ್ಕಳಾಗುವುದಿಲ್ಲ. ಶಿವಧ್ಯಾನ, ಸ್ಮರಣೆ ಮಾಡಿ ಶಿವನ ಪ್ರಸಾದ ಪಡೆದು ಯೋನಿಜನಲ್ಲದ ರಾಜಕುಮಾರನನ್ನು ಪಡೆಯುತ್ತಾಳೆ. ಆತನೇ ಈ ಕಥೆಯ ನಾಯಕ. ಹಮ್ಮೀರ, ಮನುರಾಜ, ರಾಜೇಂದ್ರ ಇತ್ಯಾದಿ ಹೆಸರುಗಳಿಂದ ಕರೆಯಿಸಿಕೊಳ್ಳುತ್ತಾನೆ.

ಮುಂದೆ ಯುವರಾಜನಾಗಿ ಪಟ್ಟಾಭಿಷಕ್ತನಾದ ನಂತರ ಸದ್ಗುಣಶೀಲೆಯಾದ ಕಾಂಭೋಜರಾಜನ ಪುತ್ರಿ ಕಾಂತಗೌರಿದೇವಿಯ ಜೊತೆ ವಿವಾಹವಾಗುತ್ತದೆ. 'ಸತಿಪತಿಗಳೊಂದಾದ

ಭಕ್ತಿ ಹಿತವಪ್ಪುವದು ಶಿವಂಗೆ' ಎನ್ನುವ ಹಾಗೆ ಸುಖ ಸಂಸಾರ ನಡೆಸುತ್ತಾರೆ. ಹಮ್ಮೀರನು ತನ್ನ ಶಕ್ತಿ ಸಾಮರ್ಥ್ಯದಿಂದಾಗಿ ಜಗತ್ತಿನಾದ್ಯಂತ ಶಾಂತಿ ಸಾಮ್ರಾಜ್ಯ ನೆಲೆಗೊಳ್ಳುವಂತೆ ಮಾಡುತ್ತಾನೆ. ಜನಸಾಮಾನ್ಯರು ಪ್ರಶಂಸಿಸುತ್ತಾರೆ.

"ವೀರವಿತರಣ ವಿದ್ಯಾಭಿಲೋಲಂ ಶಿವಗುರುಚರಲಿಂಗ ಸದ್ಭಕ್ತಿ ಸಂಪದ್ಭಾವ ಸುರಶೀಲಂ ಸಕಲಜನ ಪರಿಪಾಲನಾನುಕೂಲಂ ವಿಲಸಿತಕೀರ್ತಿ ವಿಶಾಲ ಸುಚರಿತ್ರ" ಎಂದು ಕವಿ ಹೊಗಳಿರುವುದನ್ನು ನೋಡಿದರೆ ಮನುರಾಜೇಂದ್ರನ ಕೀರ್ತಿ ದಶ ದಿಕ್ಕುಗಳಿಗೆ ಹರಡಿರುವುದು ವಿದಿತವಾಗುತ್ತದೆ. ಅವನ ಶ್ರೇಷ್ಠತೆಯನ್ನು ಒಪ್ಪಿಕೊಳ್ಳದೆ, ಏಳ್ಗೆಯನ್ನು ಸಹಿಸಲಾರದೆ ಚಂಡಕೋದಂಡನು ಮನುರಾಜನ ಮೇಲೆ ಯುದ್ಧವನ್ನು ಸಾರುತ್ತಾನೆ. ವೀರಭದ್ರನವತಾರನಾದ ಹಮ್ಮೀರ ಕದನಕೋಲಾಹಳನಾದಾಗ ಆ ರಣರಂಗದಲ್ಲಿ ಹೆಣಗಳ ರಾಶಿಯೇ ಬೀಳುತ್ತದೆ. ಧೀರೋದಾತ್ತನಾದ ಹಮ್ಮೀರ ಮುರಾರಿಯಾಗಿ ಮೆರೆಯುತ್ತಾನೆ. ಮನುರಾಜನ ರಾಜ್ಯವಿಸ್ತಾರದಂತೆ ಮನಸ್ಸು ಕೂಡ ವಿಲಾಸಗೊಂಡು ವಿನೋದಕ್ಕೆಂದು ಬೇಟೆಯಾಡಲು ಕಾಡಿಗೆ ಹೋಗುತ್ತಾನೆ. ಅಲ್ಲಿ ಅಪ್ಪಟ ಶಿವಭಕ್ತನಾದ ಹಮ್ಮೀರನಿಗೆ ಶಿವಲಿಂಗ ದರ್ಶನವಾಗಬೇಕೆಂಬ ಅಪೇಕ್ಷೆ ಉಂಟಾಗುತ್ತದೆ. "ಕಣ್ಣರಿಯದಿದ್ದರೂ ಕರುಳರಿಯದೇ" ಎಂಬಂತೆ ಲಿಂಗಮುದ್ರೆಯಿರುವ ವೃಷಭನ ದರ್ಶನವಾಗುತ್ತದೆ. ಮನುರಾಜ ತನ್ನ ಚಿತ್ತವೃತ್ತಿಯಿಂದ ಏಕಾಂತದಲ್ಲಿ ಪೂಜಿಸುತ್ತಾ ಶಿವಧ್ಯಾನದಲ್ಲಿ ಮಗ್ನನಾಗುತ್ತಾನೆ. ಅಲ್ಲಿರುವ ನಂದಿ ಶಿಷ್ಯೋತ್ತಮನಿಗೆ ಲಿಂಗ ನೀಡಿದ ಕಾರಣ ಕೈಲಾಸಕ್ಕೆ ತೆರಳುತ್ತದೆ. ಮುಂದೆ ಈತ ಅನಿಮಿಷ ದೃಷ್ಟಿಯಿಂದ ತದೇಕಚಿತ್ತದಿಂದ ಲಿಂಗವನ್ನು ನೋಡಲಾರಂಭಿಸುತ್ತಾನೆ. ಆ ದಿನದಿಂದಲೇ ಈತನಿಗೆ ಅನಿಮಿಷದೇವನೆಂಬ ಹೆಸರು ಪ್ರಾಪ್ತವಾಗುತ್ತದೆ. ಇಷ್ಟು ದಿನಗಳವರೆಗೆ ಕೇವಲ ಶಿವಭಕ್ತನಾಗಿದ್ದ ಅರಸ ಮುಂದೆ ಲಿಂಗದೀಕ್ಷೆಯಿಂದ ಲಿಂಗದೇವನಾಗಿ ಯೋಗೀಶ್ವರನಾಗುತ್ತಾನೆ. ಕಾಲ ಗತಿಸಿದ ಮೇಲೆ ಶಿವಶರಣನಾದ ಅನಿಮಷದೇವರಿಗೆ ಅನಿಮಿಷಾರಣ್ಯವೇ ತಪೋಭೂಮಿಯಾಗುತ್ತದೆ.

ಇಂತಹ ಸಂದರ್ಭದಲ್ಲಿ ಶಿವಶರಣನಾದ ಅಲ್ಲಮಪ್ರಭು ಭೂಲೋಕಕ್ಕೆ ಬರುತ್ತಾನೆ. ಬನವಾಸಿಯ ಮಧುಕೇಶ್ವರ ದೇವಾಲಯದಲ್ಲಿ ಈತ ಮದ್ದಳೆ ಬಾರಿಸುವ ಕಾಯಕದಲ್ಲಿ ನಿರತನಾಗಿದ್ದು ಪಾರ್ವತಿಯ ತಾಮಸರೂಪದ ಪ್ರತೀಕವಾದ ಮಾಯೆ ಇವನ ಶಿಷ್ಯಳಾಗುತ್ತಾಳೆ. ನಿರ್ಮಾಯನೆಂಬ ಬಿರುದು ಪಡೆದ ಅಲ್ಲಮ ಮಾಯೆಗೆ ಸಿಲುಕದೆ ಲೋಕ ಸಂಚಾರ ಮಾಡುತ್ತಾ ಅನಿಮಿಷಾರಣ್ಯಕ್ಕೆ ಬರುತ್ತಾನೆ. ಸ್ವಾನುಭವ ಜ್ಞಾನಿಯಾದ ಅಲ್ಲಮ ತನ್ನ ಗುರು ಅನಿಮಿಷದೇವರು ಶಿವಯೋಗ ಸಮಾಧಿಯಲ್ಲಿರುವ ವಿಷಯವನ್ನು ತಿಳಿದು ಅವರ ಕರದಿಷ್ಟಲಿಂಗವನ್ನು ತನ್ನ ಇಷ್ಟಬ್ರಹ್ಮದೊಳಗೆ ಇಟ್ಟುಕೊಳ್ಳುವನು. ಸ್ನೇಹಿತನಾದ ಗೊಗ್ಗಯ್ಯನಿಗೆ ಈ ವಿಷಯವನ್ನು ತಿಳಿಯಪಡಿಸಿ

ಅನೇಕ ಶಿವಭಕ್ತರ ಕಥೆಗಳನ್ನು ಹೇಳುತ್ತಾನೆ. ಈ ಎಲ್ಲಾ ಪ್ರಮುಖ ಕಥಾಗುಚ್ಛ ಹಮ್ಮೀರಕಾವ್ಯದ ಒಟ್ಟು ಆಶಯವಾಗಿದೆ.

ಅಧ್ಯಾಯ ಒಂದರಲ್ಲಿ ಕವಿಯು ತನ್ನ ಕಾವ್ಯದ ಶ್ರೇಷ್ಠತೆಯನ್ನು ಕುರಿತು ಹೀಗೆ ಹೇಳುತ್ತಾನೆ;

"ರಸಭಾವಚಿತ್ರವರ್ಣಿತ
ದಸಮಾಯತತಂತ್ರ ದೃಷ್ಟ ನೀತಿವಿಶಾಲೋ
ಲ್ಲಸದುತ್ಪ್ರೇಕ್ಷಾರ್ಥಂಗಳ
ಪಸರಂ ಹಮ್ಮೀರವೀರಕಾವ್ಯಂ ಭವ್ಯಂ" (೧-೨೧)

ಇನ್ನೊಂದು ಪದ್ಯದಲ್ಲಿ ಶಿವಪಾರಮ್ಯವನ್ನು ಮೆರೆಯುವುದಕ್ಕಾಗಿಯೇ ಈ ಕಾವ್ಯ ರಚನೆಗೊಂಡಿದೆ ಎಂಬ ಆಶಯವನ್ನು ವ್ಯಕ್ತಪಡಿಸುತ್ತಾ

"ಕೃತಿಯಂ ಪರಶಿವಭಕ್ತಿಗೆ
ರತಿಯಂ ರಾಜೇಂದ್ರ ವೀರಚಿದ್ಘನ ಚರಿತೋ
ನ್ನತಿಯಂ ಶಿವಮಹಿಮೆಯ ಸಂ
ಗತಿಯಂ ಶಿವಶರಣರೊಲ್ದು ಕೆಯ್ಕೊಳ್ವುದಿದಂ" (೧-೨೩)

"ಮನುಜರ ಮೇಲೆ ಸಾವವರ ಮೇಲೆ, ಕನಿಷ್ಠರ ಮೇಲೆ ಕಾವ್ಯವನ್ನು ಕಟ್ಟಬಾರ"ದೆಂದು ಹರಿಹರ ಹೇಳಿದ ಮಾತು ವೀರಶೈವ ಕವಿಗಳಿಗೆ ಕಾವ್ಯ ಮಾರ್ಗವೆನಿಸಿದೆ. ಈ ಮಾತಿಗೆ ಶಾಂತವೀರರು ಹೊರತಾಗಿಲ್ಲ.

ಕಾವ್ಯದಲ್ಲಿ ಬಳಕೆಯಾದ "ಹಮ್ಮೀರ" ಪದದ ಅರ್ಥ ವಿಶ್ಲೇಷಿಸಿದಾಗ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಈ ಪದಪ್ರಯೋಗ ನೂತನವಾಗಿದೆ. "ಹಮ್ಮೀರ" ಎಂಬುದು "ಖಂಬೀರ" ಎಂಬುದರ ಅಪಭ್ರಂಶ ರೂಪ. ಖಂಬೀರನೆಂದರೆ - ಧೀರವೀರ ಎಂದರ್ಥ. ಮನುರಾಜನು ಧೀರನೂ, ವೀರನೂ, ಆಗಿದ್ದರಿಂದ ಆತನನ್ನು ಕವಿ ಹಮ್ಮೀರ ಎಂದು ಸಂಭೋಧಿಸಿರಬಹುದು. ಅಲ್ಲದೇ ಗುಜರಾತ್ ಪ್ರದೇಶದಲ್ಲಿ ಹಮ್ಮೀರ ಪದಪ್ರಯೋಗ ಹೆಚ್ಚು ಬಳಕೆಯಯಲ್ಲಿದೆ. ಮನುರಾಜನ ಪತ್ನಿ ಕಾಂತಾಗೌರಿಯು ಕಾಂಭೋಜದವಳು. ಇದು ಗುಜರಾತಕ್ಕೆ ಸಮೀಪವಿರುವ ಸ್ಥಳ. ಅಂದರೆ ಈ ಹಮ್ಮೀರ ಪದವು ಕರ್ನಾಟಕ ಮತ್ತು ಗುಜರಾತ ನಡುವಿನ ಸಂಬಂಧ ಕುರಿತಾಗಿ ಈ ಹಮ್ಮೀರ ಪದ ಬಳಕೆಯಾಗಿದೆ.[೧೩]

ಮುರಿಗಾ ಶಾಂತವೀರರ ಶೈಲಿ ಬಂಧುರತೆಯಿಂದ ಕೂಡಿದೆ. ಸಂಸ್ಕೃತ-ಕನ್ನಡಗಳೆರಡರಲ್ಲಿಯೂ ಕವಿ ಪಾಂಡಿತ್ಯವನ್ನು ಪಡೆದಿದ್ದಾನೆ. ಸಂಸ್ಕೃತಭೂಯಿಷ್ಠವಾದ ಭಾಷೆಯನ್ನು

ಬಳಸುವಲ್ಲಿ ಆತನ ಪಾಂಡಿತ್ಯ ಪ್ರದರ್ಶನ ಎದ್ದು ತೋರಿದರೆ, ದೇಶೀ ಭಾಷೆ ಬಳಸುವಲ್ಲಿ ಆತನ ಕನ್ನಡ ಪ್ರೀತಿ ಗರಿಗೆದರುತ್ತದೆ.

ಉದಾ :

"ಬೆಟ್ಟಂಗಾಡನಡರ್ದು ಪೊಕ್ಕು ತಡಕುತ್ತಾ ದಿಟ್ಟ ಮುಂಗೆಟ್ಟು ಹಾ
ಕೆಟ್ಟೆಂ ಬಿಟ್ಟು ತಳರ್ದನಾವ ಕಡೆಗೆಂದುಂ ಬಟ್ಟೆಗೆಟ್ಟೆಂದು ಕಂ
ಗೆಟ್ಟುಂ ಕಂಬನಿದುಂಬಿ ನಟ್ಟ ಮುರಿಮುತ್ತುಂ ಬಾಡಿಬಾಯಾರಿ ಬಾ
ಯ್ಬಿಟ್ಟಳ್ಳಿಟ್ಟುರ ತೋರಬಟ್ಟ ಮೊಲೆಯಳ್ಕಾಲ್ಗೆಟ್ಟು ಕಾಂತಾರದೊಳ್"

ಈ ಮೇಲಿನ ಸಾಲುಗಳನ್ನು ಗಮನಿಸಿದಾಗ ಕವಿಯ ಅಭಿವ್ಯಕ್ತಿ ಸಾಮರ್ಥ್ಯದ ಜೊತೆಗೆ ಆತನು ಉಭಯಭಾಷಾ ವಿಶಾರದನೂ ಆಗಿರುವುದು ಗೋಚರವಾಗುತ್ತದೆ.

"ಪದಿನೆಂಟು ದೋಷದೂರಂ ಪದಿನೆಂಟು ವರ್ಣಮಿಳಿತ ನವರಸ ಭರಿತಂ ಕೃತಿರತಿರತ್ನಂ" ಎಂದು ಹೇಳಿದಂತೆ ಔಚಿತ್ಯದ ಎಲ್ಲೆಯನ್ನು ಎಲ್ಲಿಯೂ ಮೀರಿಲ್ಲ. ಹಮ್ಮೀರಕಾವ್ಯದಲ್ಲಿ ನವರಸಗಳು ಬಂದಿದ್ದರೂ ಶೃಂಗಾರ, ವೀರ, ಭಕ್ತಿರಸಗಳಿಗೆ ಹೆಚ್ಚಿನ ಸ್ಥಾನ ದೊರೆತಿದೆ. ಮಿಕ್ಕ ರಸಗಳು ಭಕ್ತಿರಸದಲ್ಲಿ ಪರ್ಯವಸಾನ ಹೊಂದಿರುವುದನ್ನು ಕಾಣಬಹುದು.

ಹಮ್ಮೀರಕಾವ್ಯ ಅನಿಮಿಷದೇವನ ಚರಿತ್ರೆಯನ್ನೊಳಗೊಂಡ ಪ್ರಥಮ ಸುಂದರ ಕಾವ್ಯ. ಹಮ್ಮೀರದೇವನು ರಾಜನಾಗಿ ಮುಂದೆ ಅನಿಮಿಷದೇವನಾಗಿ, ನರದೇವನು ಹರದೇವನಾಗಿ ಪರಿವರ್ತನ ಹೊಂದುವ ರೀತಿಯನ್ನು ತುಂಬ ಸುಂದರವಾಗಿ ನಿರೂಪಿಸಲಾಗಿದೆ. ಪಟ್ಟದಕಲ್ಲಿನ ರಾಜರಾಣಿಯರ ಉದರದಲ್ಲಿ ಜನಿಸಿದ ಈತ ಶಿವಕಾರುಣ್ಯವನ್ನು ಪಡೆದು ವ್ರತಸ್ಥನಾಗಿ ಬೆಳೆದು ಶಿವನ ಅವತಾರವೆನಿಸಿದ ನಂದೀಶ್ವರನಿಂದ ಇಷ್ಟಲಿಂಗ ಪಡೆದು ಸಿದ್ಧನಾಗಿ ದೇಶ ಸಂಚಾರ ಮಾಡುತ್ತ ಬಳ್ಳಿಗಾವಿಯ ಸಮೀಪದ ಅನಿಮಿಷಾರಣ್ಯದಲ್ಲಿ ಶಿವಯೋಗ ಸಮಾಧಿಯಲ್ಲಿದ್ದಾಗ ಪ್ರಭುದೇವರಿಗೆ ಲಿಂಗ ನೀಡಿ ಬಯಲಲ್ಲಿ ಬಯಲಾಗುತ್ತಾನೆ. ಹಮ್ಮೀರ ರಾಜನ ಜನನ, ಬಾಲ್ಯ, ಯೌವ್ವನ, ಕಾಂತಗೌರಿ ಹಾಗೂ ಹಮ್ಮೀರ ರಾಜನ ವಿವಾಹ ಪ್ರಸಂಗ, ಹಮ್ಮೀರ ರಾಜನ ರಾಜ್ಯಭಾರ, ಹಮ್ಮೀರನ ಮೇಲೆ ಚಂಡಕೋದಂಡ ದಂಡೆತ್ತಿ ಬಂದದ್ದು 'ಕೋದಂಡನ ಸೈನ್ಯವನ್ನು ನಡುಗಿಸಿದ್ದು, ಇಬ್ಬರ ನಡುವಿನ ಮಹಾಯುದ್ಧ, ವನಮಹೋತ್ಸವ, ಜಲಕ್ರೀಡೆ, ನಗರಕ್ಕೆ ಮರಳಿ ಬಂದದ್ದು, ಶಿವಸೂತ್ರವಿಡಿದು ಬೇಟೆಯಾಡುವ ವನಕ್ಕೆ ವೈಹಾಳಿಯಾಗಿ ಹೊರಟು ಹೋದದ್ದು ಹಮ್ಮೀರ ರಾಜನ ಉಗ್ರ ತಪಸ್ಸು, ಶಿವಲಿಂಗನಿಷ್ಠೆ, ಶಿವಲಿಂಗದ ದಾಹ, ಲಿಂಗಸ್ಥಾನದ ಹುಡುಕಾಟ, ಚರರ ಸುತ್ತಾಟ, ಮಲಗಿದ್ದ ಗೂಳಿಯೊಂದರಲ್ಲಿದ್ದ ಲಿಂಗಮುದ್ರೆಯನ್ನು ಕಂಡು ಆ ವಿಚಾರವನ್ನು ವಿಜ್ಞಾಪಿಸಿಕೊಂಡ ಸಂದರ್ಭ, ರಾಜನು ಲಿಂಗವನ್ನು ಪ್ರತ್ಯಕ್ಷದರ್ಶಿಯಾಗಿ ಕಂಡು ಪೂಜಿಸಿದ್ದು, ಮನುರಾಜನ ಹಸ್ತಕ್ಕೆ ಆ ಲಿಂಗ ಬಂದದ್ದು, ಇಷ್ಟಲಿಂಗದಲ್ಲಿ ಅನಿಮಿಷ ದೃಷ್ಟಿಯಿಟ್ಟು ಶಿವಯೋಗ ಮಗ್ನನಾಗಲು ಆತನ ಮೇಲೆ

ಗುಡಿಕಟ್ಟಿ ಆ ಗುಡಿಯಲ್ಲಿ ನಿಕ್ಷೇಪಿಸಿದ್ದು ಇವೇ ಮುಂತಾದ ವಿಷಯಗಳು ಈ ಕೃತಿಯಲ್ಲಿ ಸಕ್ರಮವಾಗಿ ನಿರೂಪಿತವಾಗಿವೆ. ಹಾಗಾಗಿ ಹಮ್ಮೀರಕಾವ್ಯ ಒಂದು ಕಡೆ ಶಿವಪ್ರಜ್ಞೆ, ಇನ್ನೊಂದು ಕಡೆ ರಾಜಪ್ರಜ್ಞೆಯನ್ನು ತನ್ನ ಅಂತರಾಳದಲ್ಲಿ ಇಟ್ಟುಕೊಂಡ ವಿಶಿಷ್ಟ ಕೃತಿಯಾಗಿ ಕಾಣುತ್ತದೆ.

ಹಮ್ಮೀರ ರಾಜನ ಕೀರ್ತಿ ಯಾವ ರೀತಿಯಾಗಿ ಶ್ರೇಷ್ಠತೆಯನ್ನು ಪಡೆದುಕೊಂಡಿತ್ತು. ಶತ್ರುಗಳು ಅವನ ಕೀರ್ತಿಯನ್ನು ಸಹಿಸಲಾರದೆ ಹೇಗೆ ಚಿಂತಾಕ್ರಾಂತರಾಗಿದ್ದರು ಎಂಬುದನ್ನು ಕವಿ ಹೀಗೆ ಚಿತ್ರಿಸಿದ್ದಾನೆ ;

ಮನುರಾಜೇಂದ್ರನ ಕೀರ್ತಿಯ
ನನುವಿಂದಂ ನೋಡಿ ಚಂಡಕೋದಂಡನಣಂ
ಘನವಂ ಸೈರಿಸಲಾರದೆ
ಮನದೊಳ್ಚಿಂತಿಸಿ ಕಱುಂಬಿ ನೊಂದಂ ಬೆಂದಂ (೨-೯೮)

ಹಮ್ಮೀರ ರಾಜನು ಶ್ರೇಷ್ಠ ರಾಜನಾಗಿದ್ದು ಯುದ್ಧ ಸಂದರ್ಭದಲ್ಲಿ ಅನುಸರಿಸುವ ಮಾರ್ಗ ಮತ್ತು ಕಾರ್ಯವೈಖರಿಯನ್ನು ಚಿತ್ರಿಸುವ ಸಮಯದಲ್ಲಿ ಕವಿಯ ಮನೋಭೂಮಿಕೆ ಎಂತಹದ್ದು ಎಂಬ ವಿಚಾರ ಗೋಚರವಾಗುತ್ತದೆ.

ಉದಾ: ರೌದ್ರ ಕಿರಾತರ ಪಡೆಯಂ
ಛಿದ್ರಿಸಿ ಟೊಣಕಿಟ್ಟು ಪೊಯ್ವ ಮಹೀಶನ ಕಱಿಗೋ
ಪದ್ರವದಿಂದತಿ ಸತ್ವದ
ರಿದ್ರರ್ ತಾವಾದರಲ್ಲಿ ಬಹಳ ಪುಳಿಂದರ್ (೪-೫೬)

ಶ್ರೇಷ್ಠ ಸಂತರನ್ನು ಶಿವಶರಣರನ್ನು ವರ್ಣಿಸುವ ಶಾಂತವೀರರ ಅಭಿವ್ಯಕ್ತಿ ಮೆಚ್ಚುವಂತಹದ್ದು. ನಂದಿ, ಭೃಂಗಿ, ಸ್ಕಂದ ಮುಂತಾದವರನ್ನು ವೀರಗಣಪುಂಗವರು ಎಂದು ಬಣ್ಣಿಸಿದ್ದಾರೆ. ಅಂತಹ ಶರಣರ ಮಂದಿರದಲ್ಲಿರುವ ನಾನು ಧನ್ಯಾತ್ಮನೆ ಎಂಬ ವಿಚಾರವು ಸಹ ಸಹಜತೆಯನ್ನು ಪಡೆದುಕೊಳ್ಳುತ್ತದೆ.

ಉದಾ: ನಂದೀಶಂ ಭೃಂಗೀಶಂ
ಸ್ಕಂದಂ ಮೊದಲಾದ ವೀರಗಣಪುಂಗವರಾ
ನಂದದೊಳೊಪ್ಪುವ ಶಂಕರ
ಮಂದಿರದೊಳ್ಮನವನಿಕ್ಕಿ ಸೈವೆರಗಾದಂ (೫-೩೩)

"ರಸವೇ ಕಾವ್ಯದ ಜೀವಾಳ" ಕಾವ್ಯದಲ್ಲಿ ನವರಸಗಳಿಗೆ ಆದ್ಯತೆ ಬೇಕು. ಹಮ್ಮೀರಕಾವ್ಯದಲ್ಲಿ ನವರಸಗಳು ಉಲ್ಲೇಖವಾಗಿದ್ದರೂ "ಶೃಂಗಾರ ವೀರ ಹಾಗೂ ಭಕ್ತಿರಸಕ್ಕೆ ಪ್ರಾಧಾನ್ಯತೆ ಇದೆ. ಕವಿ ಅನಿಮಿಷದೇವರಲ್ಲಿ ಇಟ್ಟುಕೊಂಡ ಪೂಜ್ಯಭಾವನೆಯಿಂದಾಗಿ ಭಕ್ತಿರಸದ ಕೋಡಿ ಹರಿದಿದೆ.

ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುರಿಗಾಶಾಂತವೀರರು ಎಡೆ ಪಡೆದುಕೊಂಡಿದ್ದಾರೆಂಬುದು ಮಾತ್ರ ಮುಖ್ಯವಲ್ಲ. ಷಡಕ್ಷರನ "ರಾಜಶೇಖರ ವಿಲಾಸ'ದ ಹಸ್ತಪ್ರತಿಯ ಜೊತೆ-ಜೊತೆಗೆ ಈ ಕಾವ್ಯ ದೊರೆತಿರುವುದು. ಇವರೂ ಒಬ್ಬ ವೀರಶೈವ ಚಂಪೂಕವಿ ಎಂದು ಗುರುತಿಸಲು ಸಾಕ್ಷಿಯಾಗಿದೆ. ಹಮ್ಮೀರಕಾವ್ಯ ಒಂದು ಶ್ರೇಷ್ಠ ಚಂಪೂ ಕಾವ್ಯವಾಗಿದೆ.

೨. ಪ್ರಭುಲಿಂಗದ ಕಂದ :

ಇದು ಶಾಂತವೀರರ ಮತ್ತೊಂದು ಮಹತ್ವದ ಗ್ರಂಥ. ವೀರಶೈವ ಶಿವಯೋಗವನ್ನು ನಿರೂಪಿಸುತ್ತದೆ. ೫೩ ಕಂದಪದ್ಯಗಳಿಂದ ಕೂಡಿದ್ದು, ಪ್ರತಿ ಪದ್ಯ 'ರಾಜಲಿಂಗ ಪ್ರಭುವೇ' ಎಂಬ ಅಂಕಿತದಿಂದ ಕೊನೆಗೊಳ್ಳುತ್ತದೆ. ಈ ಕೃತಿಗೆ ಪರ್ವತಶಿವಯೋಗಿ ಮತ್ತು ಒಬ್ಬ ಅಜ್ಞಾತ ಕರ್ತೃ- ಹೀಗೆ ಇಬ್ಬರು ಟೀಕೆ ಬರೆದುದು ಈ ಕೃತಿಯ ವಿಶೇಷತೆಗೆ ಸಾಕ್ಷಿಯೆನಿಸಿದೆ.

ಇಷ್ಟಲಿಂಗದ ಮಹತ್ವ ಮತ್ತು ಪೂಜಾ ವಿಧಿವಿಧಾನಗಳನ್ನು ನಿರೂಪಿಸುವುದೇ ಕೃತಿಯ ಮುಖ್ಯ ಆಶಯ. ವೀರಶೈವ ಮುಮುಕ್ಷುವಿನ ಸಾರಸ್ವರೂಪವೂ, ವೀರಶೈವಾರೂಢನ ಸ್ವರೂಪ ವ್ಯಾಪಾರವೂ ಇಷ್ಟಲಿಂಗದ ತತ್ವದಲ್ಲಿ ಗರ್ಭೀಕರಿಸಿಕೊಂಡಿವೆ. ಲಿಂಗಾರ್ಚನೆ ವೀರಶೈವ-ಲಿಂಗಾಯತನ ಪ್ರಧಾನ ಗುಣಧರ್ಮ. ಅನ್ಯದೇವತಾ ಪೂಜೆಯು ಧರ್ಮಬಾಹಿರವಾಗಿದ್ದು, ಆ ಪರಲಿಂಗವು ಒಳಗೂ-ಹೊರಗೂ ಜ್ಞಾನದಿಂದ ಗುರುವಾಗಿಯೂ, ಆಚಾರದಿಂದ ಲಿಂಗವಾಗಿಯೂ, ಮನಶಾಂತಿಯಿಂದ ಜಂಗಮನಾಗಿಯೂ ಇವೆಲ್ಲಕ್ಕೂ ಆಧಾರವಾದ ಭಕ್ತನಾಗಿಯೂ ಎಸೆಯುತ್ತಿರುವುದು. ಇಂತಹ ಭಕ್ತಿ ಸ್ವರೂಪವನ್ನು ಸಾಧಿಸುವುದೇ ಮುಕ್ತಿ. ಅಂತಪ್ಪ ಭಕ್ತಿಭಾವದಲ್ಲಿ ಪರಿಪೂರ್ಣವಾದ ಗುರುವು ಉದಾಸೀನನಾದ ಶಿಷ್ಯನನ್ನು ತನ್ನಂತೆಯೇ ಭಕ್ತನನ್ನಾಗಿ ಮಾಡುವುದಕ್ಕೋಸ್ಕರ ಇಷ್ಟಲಿಂಗವನ್ನು ದಯಪಾಲಿಸುತ್ತಾನೆ, ಜೊತೆಗೆ ಪೂಜಾಕ್ರಮವನ್ನು ತಿಳಿಸುತ್ತಾನೆ. ಈ ಇಷ್ಟಲಿಂಗದ ಅರಿವನ್ನು ಸಮಾಜಕ್ಕೆ ನೀಡುವ ಇಚ್ಛೆಯನ್ನು ಕೃತಿಯ ಮೂಲಕ ನೆರವೇರಿಸಿದ್ದಾನೆ.

೧ ರಿಂದ ೩೦ ಪದ್ಯಗಳು ಇಷ್ಟಲಿಂಗದ ಪೂಜಾಕ್ರಮವನ್ನು ವಿವರಿಸಿದರೆ, ೩೧ ರಿಂದ ೩೫ರ ವರೆಗಿನ ಪದ್ಯಗಳು ತ್ರಿಮೂರ್ತಿಗಳು, ದಿಕ್ಪಾಲರೂ ವಸುವಿಶ್ವೇಶಾದಿದೇವತೆಗಳು, ಯತಿಗುಹ್ಯಕ ಸಪ್ತಮಾತೃಕೆಯರು ತಮ್ಮ ತಮ್ಮ ಅಧಿಕಾರಾನುಸಾರವಾಗಿ ಪೂಜಿಸಿದ ಆಯಾ ಲಿಂಗಮೂರ್ತಿಗಳು ಈ ಇಷ್ಟಲಿಂಗ ದೇವನ ಒಂದೊಂದು ಕಳೆಯೆಂಬುದನ್ನು ವಿವರಿಸುತ್ತವೆ.[೧೪]

೩೬ ರಿಂದ ೪೦ರ ವರೆಗಿನ ಪದ್ಯಗಳು ಜಿನ ಬುದ್ಧಾದಿಗಳು ತಮ್ಮ ತಮ್ಮ ಮತಗಳೆಂದು ಭಾವಮಯವಾಗಿ ಅರ್ಚಿಸಿದ ಪಿಶಾಚರು ಸೀಸದಿಂದಲೂ, ಬ್ರಾಹ್ಮಣಾದಿ ಚತುರ್ವರ್ಣಗಳು ಸ್ಫಟಿಕಾದಿಗಳಿಂದಲೂ ನಿರ್ಮಿಸಿ ಪೂಜಿಸಿದ ಬಲಿಬಾಗಾಸುರರು ಅರ್ಚಿಸಿದ ಬ್ರಹ್ಮನ ಗರ್ವವನ್ನು

ಸಂಹರಿಸಿದ ಶಿವಲಿಂಗವು ಇದೇ ಇಷ್ಟಲಿಂಗದ ಕಳೆಯೆಂದು ಬೋಧಿಸುತ್ತವೆ. ೪೧ನೆಯ ಪದ್ಯವು ದುರ್ವಾಸ ಗೌತಮಾದಿಗಳ ಧ್ಯಾನ ವಿಷಯವಾದುದು ಇದೇ ಲಿಂಗವೆಂದು ಹೇಳುತ್ತದೆ. ೪೨-೪೪ರ ವರೆಗಿನ ಪದ್ಯಗಳಲ್ಲಿ ಭೃಂಗಿ ನಂದ್ಯಾದಿಗಳು ನವರಸದಿಂದ ಹಾಡಿದ, ಸಕಲೇಶ ಮಾದರಸ, ಬಲಮಾರ್ಯ, ವರದಾನಿ ಗುಡ್ಡವ್ವೆ ಮೊದಲಾದ ಲಿಂಗನಿಷ್ಠರು ಪೂಜಿಸಿದ ಸಾಕ್ಷ್ಯರಿಷ್ಟಲಿಂಗವಿದೆಂದೂ ಒಂದೇ ಜನ್ಮದಲ್ಲಿ ಮುಕ್ತಿಯನ್ನು ಹೊಂದುವ ವೀರಶೈವ ಶರಣರಿಗೆ ಈ ಲಿಂಗವೇ ವಜ್ರ-ಕವಚ ಪಂಜರವೆಂದೂ ಆಚಾರ್ಯನು ಸ್ತುತಿಸಿದ್ದಾನೆ.[೧೫]

೪೫ನೆಯ ಪದ್ಯದಲ್ಲಿ ಪಂಚಕೃತ್ಯಗಳಿಗಧಿಪನು ಸರ್ವಪಾಲಕನು ಈ ಲಿಂಗವಿಲ್ಲದೇ ಇನ್ನೋರ್ವನಿಲ್ಲವೆಂದು ತಿಳಿಯಪಡಿಸುತ್ತಾನೆ. ೪೬ ರಿಂದ ೪೯ರ ವರೆಗಿನ ಪದ್ಯಗಳಲ್ಲಿ ಮನೋಹರ ಗಂಧವನ್ನು ಬೀರುವ ತರತರಹದ ಬಣ್ಣಗಳಿಂದ ನೇತ್ರವನ್ನು ಆಕರ್ಷಿಸುವ ಹೂದಳಗಳಿರುವ ಹಂಸೆಯಲ್ಲಿಯೂ ಮುಸುಕಿನಲ್ಲಿಯೂ ಒಪ್ಪುವ ರಾಜಲಿಂಗ ಶೋಭೆಯನ್ನು ಆಚಾರ್ಯ ಪುರುಷ ಬಣ್ಣಿಸುತ್ತಾನೆ.[೧೬]

೫೦ನೆಯ ಪದ್ಯದಲ್ಲಿ ಇಂದ್ರಿಯಲಿಂಗದ ಅವಿನಾಭಾವ ಸಂಬಂಧ ಕಂಡು ಬಂದರೆ, ೫೧ನೆಯ ಪದ್ಯದಲ್ಲಿ ಅಹಂಕಾರವೆಂಬ ಸಂಸಾರ ವೃಕ್ಷವು ಇಷ್ಟಲಿಂಗವೆಂಬ ಅಗ್ನಿಯನ್ನು ಅಪ್ಪಿಕೊಂಡ ವಿಷಯವನ್ನು, ೫೨ನೆಯ ಪದ್ಯ ಇಷ್ಟಲಿಂಗಧಾರಿಗಳಿಗೆ ಮತಾಂತರ ಸಾಧ್ಯವಿಲ್ಲವೆಂಬ ಪರಿಕಲ್ಪನೆಯನ್ನು ಮೂಡಿಸುತ್ತದೆ. ಹಾಗೆಯೇ ೫೩ನೆಯ ಪದ್ಯ ಈ ಕಂದಗಳನ್ನು ಅಸ್ವಾದಿಸಿದವನು, ಕೋಪ-ತಾಪ ಮೀರಿ ಮುಕ್ತಿ ಸುಖ-ಸಂಪತ್ತು ಹೊಂದುವನೆಂಬ ಆಶಯವನ್ನು ತಿಳಿಸುತ್ತದೆ.

ಉದಾ : ಶರಣನು ಶರಣಸ್ಥಲದಲ್ಲಿ ಪ್ರಕಾಶಮಾನವಾಗಿ ಹೊಳೆಯುವ ಲಿಂಗದ ತೇಜಸ್ಸನ್ನು ಕವಿವರ್ಯ ಈ ರೀತಿಯಾಗಿ ಹೇಳುತ್ತಾನೆ.

"ಆಚಾರ ಗೌರವಂ ವೃತ್ತೆ ಲಿಂಗಮಧ್ಯೇವ್ಯವಸ್ಥಿತಾ ।
ಗೋಮುಖಂ ಚರಲಿಂಗಂ ಚ ಪ್ರಸಾದಂ ವರ್ತುಳಂ ತಥಾ ॥
ಗೋಳಕೇ ಚ ಮಹಾಲಿಂಗಮಿಷ್ಟ ಷಡ್ವಿಧಮಿಶ್ರಿತಂ ॥"

ಆಚಾರವಂತನಾದವನು ಲಿಂಗವನ್ನು ಸದಾ ಸ್ಮರಿಸುವ, ಸ್ವೀಕರಿಸುವ ನಿಯಮವನ್ನು ಪ್ರಸ್ತುತ ಸಾಲು ತಿಳಿಯಪಡಿಸುತ್ತವೆ. ಗೋಮುಖನಾಳ ಗೋಳಕವೆಂಬ ಷಟ್ಸ್ಥಾನದಲ್ಲಿ ಅಂಗೀಕರಿಸಿಕೊಂಡು ಷಡಿಂದ್ರಿಯಗಳಲ್ಲಿ ಷಡ್ಲಿಂಗವಾಗಿ ಆಹ್ವಾನ ಮಾಡಿಕೊಳ್ಳುವ ವಿಧಾನವನ್ನು ಜಾಗೃತಗೊಳಿಸುತ್ತದೆ.

ಕನಕ ಕರವೀರ ಕೈರವ
ದನು ಕುಂಕುಮ ವಕುಳ ಜಾಲ ಪಾಟಲಿ ಮಂದಾ
ರ ನವ ಸುಂಗಧಿಯು ನಾನಾ
ಘನ ಕುಸುಮ ಸುಪೂಜ್ಯ ರಾಜಲಿಂಗಪ್ರಭುವೇ (ಪು-೨೦೨)

ಹಳದಿಮದ್ದಕುಣಿಕೆಯು, ಕಣಗಿಲು, ನೈದಿಲೆ, ಬಕುಳ, ಪಾಟಲಿಯು, ಮಂದಾವರೆಯು, ಪಾರಿಜಾತವು ಹೊಸತಾದ ಸುಗಂಧಿಯ ನಾನಾ ಬಗೆಯ ಪುಷ್ಪಗಳಿಂದೆ ಪೂಜಿಸಲ್ಪಟ್ಟಂಥಾ ರಾಜಲಿಂಗಪ್ರಭುವೇ ರಕ್ಷಿಪುದು ಎಂಬ ಆಶಯವಿದೆ.

ಇಂತಹ ಅನೇಕ ವರ್ಣನಾತ್ಮಕ ಪದ್ಯಗಳು ಕೃತಿಯ ಉದ್ದಕ್ಕೂ ಅಭಿವ್ಯಕ್ತಿಗೊಂಡಿದ್ದು ಅಧ್ಯಯನ ದೃಷ್ಟಿಯಿಂದ ಒಟ್ಟು ಸಾರವನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದ್ದು ಅದರ ತಾತ್ವಿಕತೆಗೆ ಹೆಚ್ಚಿನ ಆದ್ಯತೆಯನ್ನು ನೀಡಲಾಗಿದೆ.

೩. ನೀಲಾಂಬಿಕಾ ಲಲಿತ ಪಂಚವಿಂಶತಿ :

೧೨ನೆಯ ಶತಮಾನದ ಶಿವಶರಣೆಯರಲ್ಲಿ ನೀಲಾಂಬಿಕೆಗೆ ಅತ್ಯಂತ ಎತ್ತರ ಸ್ಥಾನವಿದೆ. ಒಬ್ಬ ಶ್ರೇಷ್ಠ ಆದರ್ಶ ಮಹಿಳೆಯಲ್ಲಿರುವ ಎಲ್ಲಾ ಗುಣಗಳನ್ನು ನೀಲಾಂಬಿಕೆಯ ವ್ಯಕ್ತಿತ್ವದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು. ಪತಿ-ಪತ್ನಿಗಳ ಸಂಬಂಧ ಕೇವಲ ಸೀಮಿತ ವಲಯದಲ್ಲಿ ಮಾತ್ರ ಇರದೇ ಅದರ ಆಚೆಗೂ ತಾತ್ವಿಕ-ಪಾರಮಾರ್ಥಿಕ ಆಧ್ಯಾತ್ಮದ ಲೋಕದಲ್ಲಿ ಆವರಿಸಿಕೊಂಡಿದೆ ಎಂಬ ಹೊಸ ಆಲೋಚನೆಗೆ ದಾರಿ ಮಾಡಿಕೊಟ್ಟ ಮಹಾನ್ ವ್ಯಕ್ತಿ ನೀಲಾಂಬಿಕೆ. ಇಂತಹ ವ್ಯಕ್ತಿತ್ವವುಳ್ಳ ಶರಣೆಯನ್ನು ಕಥಾವಸ್ತುವನ್ನಾಗಿ ಮಾಡಿಕೊಂಡ ಶಾಂತವೀರರ ಮಾತೃಪ್ರೀತಿ ಮೆಚ್ಚುವಂತಹದ್ದು. ಈ ಕೃತಿಗೆ 'ನೀಲಮ್ಮನವರ ನಾಂದ್ಯ'ವೆಂಬ ಹೆಸರೂ ಪ್ರಾಪ್ತವಾಗಿದೆ. ಭಾಮಿನೀ ವಾರ್ಧಕಗಳಲ್ಲಿನ ೨೫ ಷಟ್ಪದಿಗಳಿವೆ. ಇಲ್ಲಿನ ಕ್ರಮಾಂಕ ೧೮, ೧೯ ಮತ್ತು ೨೪ನೆಯ ವಾರ್ಧಕಗಳಿಗೆ ಅಜ್ಞಾತ ಕರ್ತೃ ಕೃತ ಟೀಕೆ ಇದೆ.

ನೀಲಾಂಬಿಕೆಯನ್ನು ಕವಿ ಪಾರ್ವತಿಯ ಸ್ವರೂಪಕ್ಕೆ ಹೋಲಿಸುವ ಮೂಲಕ ಸ್ತುತಿ ಮಾಡಿದ್ದಾನೆ. ಸ್ಮರಿಸಿದ್ದಾನೆ. ಉದಾ :

ಮಂಜುಮಣಿಗಣ ಖಚಿತನೂಪುರ
ರಂಜಿತಾಮಳ ಚರಣ ಸರಸಿಜೆ
ಕಂಜಮುಖಿ ಕಮನೀಯ ಮಂತ್ರಾಲಾಪೆ ಜಿತತಾಪೆ
ಕಂಜರಿಪುನಿಭ ನಖ ನಿಚಯೆ ಮದ
ಕುಂಜರಾಧಿಕ ಯಾನೆ ದುರ್ಗುಣ
ಭಂಜೆಪಾಲಿಸು ಬಕುತ ಜನವನು ವೃಜಿನ ಸಂಹಾರೆ (೧-೩)

ಮಂಜುಮಣಿ, ನೂಪುರರಂಜಿತೆ, ಸರಸಿಜೆ ಕಂಜಮುಖಿ ಕುಂಜರಿಪು ಕುಂಜರಾಧಿಕೆ ಈ ಎಲ್ಲಾ ಸ್ವರೂಪವನ್ನು ಹೊಂದಿರುವ ದುಷ್ಪರ ದುರ್ಗುಣಗಳನ್ನು ದೂರ ಮಾಡುವ ಸಂಹಾರದಾತೆಯಾದ ನೀನು ಕಾವ್ಯ ಕನ್ನಿಕೆಯಾಗು ಅಷ್ಟಸಿದ್ಧಿಯನ್ನು ದಯಪಾಲಿಸು ಎಂದು ದಯಾದೀನನಾಗಿ

ಸ್ಮರಿಸುತ್ತಾನೆ. ಚಿಕ್ಕದಾದರೂ ಚೊಕ್ಕದಾದ ಈ ಕೃತಿಯಲ್ಲಿ ನೀಲಾಂಬಿಕೆಯ ಪವಿತ್ರ ಜೀವನವನ್ನು ವಾಸ್ತವಿಕವಾಗಿ ಚಿತ್ರಿಸಲಾಗಿದೆ.

"ಜಯನೀತಿ ವಿಸ್ತಾರೆ ಲಲಿತ ಗುಣಮಣಿ ಹಾರೆ
ಜಯಲೋಕ ನುತಿಪಾತ್ರೆ ಚರಲಿಂಗವರ ಭಾತ್ರೆ
ಜಯ ನೆನೆದವರಿಷ್ಟಮಂ ಕೊಡುವ ಪಾವನದೇವಿ ಸದ್ಭಕ್ತ ಜೀವಿ
ಜಯಕರಣ ಜಯವಂತೆ ಶಿವಕುಲದ ಫಲವಂತೆ
ಕು ಬಸವನನುಕೂಲೆ ಶಿವಕಾರ್ಯ ಘನಲೋಲೆ
ಜಯ ನೀಲಲೋಚನೆ ದುರಾಚಾರ ವೋಚನೆ ನಿರಾಧಾರೆ" ನಿರಘೆ ಶರಣು. ॥೨೦॥

ನೀಲಾಂಬಿಕೆಯ ಗುಣವರ್ಣನೆಯನ್ನು ಮಾಡುವ ಮನೋಭಿಲಾಷೆ ಈ ಕೃತಿಯಲ್ಲಿ ಕಂಡುಬರುತ್ತದೆ. ಶಿವಶರಣೆಯ ಭಕ್ತಿ, ಜಂಗಮತ್ವ, ಪರಿಶುದ್ಧ ಮನಸ್ಸು, ಕರ್ಮ, ಕಾಯಕಗಳ ಕುರಿತು ವಿಶ್ಲೇಷಿಸಿದ್ದಾರೆ. ಉದಾ –

"ಸತ್ಯ ಸರಸಾಲಾಪೆ ಜಂಗಮ
ಭೃತ್ಯೆ ಪಾವನಕರಣೆ ನಿರ್ಮಲ
ಕೃತ್ಯೆ ಕೋವಿದೆ ಕುಟಿಲ ಹರೆ ಕುಮತ ದೂರೆ ಮತಿಸಾರೆ
ನಿತ್ಯ ನೀತಿ ವಿಚಾರ ನಿರುಪಮೆ
ಕೃತ್ಯ ಕರ್ಮಗಳಿಲ್ಲದಚಳಿತೆ
ತಥ್ಯ ಪೂರ್ಣ ಬ್ರಹ್ಮರೂಪಿಣಿ ಪಾಲಿಸೆಲೆ ತಾಯೆ" (೧–೬)

ಶಿವಶರಣೆಯ ಇಷ್ಟಲಿಂಗದ ಭಕ್ತಿ ಮತ್ತು ಏಕಾಗ್ರತೆಯನ್ನು ಕುರಿತು ಮಾತನಾಡುತ್ತ ಜೊತೆಗೆ ಕಾವ್ಯ ಅಭಿವ್ಯಕ್ತಿಯನ್ನು ವ್ಯಕ್ತಪಡಿಸುವ ಆಶಯವನ್ನು ಪ್ರಸ್ತುತ ಕೆಳಗಿನ ಪದ್ಯದಲ್ಲಿ ಕಾಣಬಹುದು.

ಉರಿಯೊಳಗೆ ಕರ್ಪುರಂ ಬೆರೆದಂತೆ ತನ್ನಮಳ
ಕರಕಂಜಮುರವಾಸ ವರದಿಷ್ಟಲಿಂಗದೊಳ್
ಬೆರೆದು ಬೇರಿಲ್ಲದಿಹ ನೀಲಾಂಬಿಕಾ ಲಲಿತ ಪಂಚವಿಂಶತಿ ನುಡಿಗಳಾ
ಬರೆದೋದಿ ಕೇಳಲರಿವರ್ಗೆ ವೈಕಾರ ಮದ
ಕರಣಂಗಳಳಿದು ವರಭಕ್ತಿ ಷಟ್‌ಸ್ಥಲವಷ್ಟ
ಪರತರಾವರಣ ಪಂಚಾಚಾರವಳವಟ್ಟು ನಿಜಮುಕ್ತರಹುದು ನಿರುತಂ (೨೫)

ಇಷ್ಟಲಿಂಗ, ಷಟ್‌ಸ್ಥಲ, ಪಂಚಾಚಾರಗಳನ್ನು ಬದುಕಿನುದ್ದಕ್ಕೂ ಅಳವಡಿಸಿಕೊಂಡಿರುವ ಶರಣರ ಆಶಯವು ಸಹ ಇದೆ ಆಗಿದ್ದು ಇಲ್ಲಿ ನೀಲಾಂಬಿಕೆಯೂ ವೀರಶೈವ ಸಿದ್ಧಾಂತಗಳ ಪ್ರತಿನಿಧಿಯಂತೆ ರೂಪಗೊಂಡಿರುವುದನ್ನು ಕಾಣಬಹುದು.

೪. ವೈರಾಗ್ಯ ಷಟ್ಪದಿ :

ಶಾಂತವೀರರ ಪ್ರಮುಖ ಕೃತಿಗಳಲ್ಲಿ ವೈರಾಗ್ಯ ಷಟ್ಪದಿಯು ಒಂದು. ಇದು ಸ್ವತಂತ್ರ ಕೃತಿಯಾಗಿರದೆ ಸಂಕಲನ ರೂಪದ ರಚನೆಯಾಗಿದೆ. ೧೦೧ ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ಇಲ್ಲಿನ ೯೮ ಪದ್ಯಗಳು ಮುಖಬೋಳು ಸಿದ್ಧರಾಮನ ಷಟ್ಸ್ಥಲ ತಿಲಕದಲ್ಲಿವೆ ಎಂಬ ವಿಚಾರವನ್ನು ಶ್ರೀ ಎಂ.ಎಸ್. ಬಸವರಾಜಯ್ಯನವರು ತಿಳಿಸುತ್ತಾರೆ. ಈ ಕೃತಿಯಲ್ಲಿ ಲೌಕಿಕ-ಅಲೌಕಿಕ ಎರಡರ ಸಮ್ಮಿಳನವಿದೆ. ರಾಮಾಯಣ, ಮಹಾಭಾರತದ ವಿಷಯವಸ್ತು, ವಚನಸಾಹಿತ್ಯದಲ್ಲಿ ಶಿವಶರಣರ ಆಲೋಚನೆ, ಭಕ್ತಿಪಂಥದ ಆಶಯಗಳು ಸಹ ಕೃತಿಯ ಒಳಗಡೆ ಅನಾವರಣಗೊಂಡಿರುವುದು ವಿಶೇಷವೆನಿಸುತ್ತದೆ. ಶಾಂತವೀರರು ಮುಖ್ಯವಾಗಿ ಈ ಕೃತಿಯ ಮೂಲಕ ನೀತಿಬೋಧೆ ಮಾಡಲು ಹೊರಟಿರುವುದು ಕಂಡುಬರುತ್ತದೆ.

ಪುರಾಣ ಕಾವ್ಯಗಳ ಪ್ರಮುಖ ಪಾತ್ರಗಳ ವ್ಯಕ್ತಿತ್ವ ಚಿತ್ರ ಬಿಡಿಸುವ ರೀತಿ ಈ ಪದ್ಯದಲ್ಲಿ ಮೂಡಿ ಬಂದಿದೆ.

ಸೀತೆರಾಮನ ಮಾತಗೇಳದಾ ಪತಿಯ ಬ್ರ
ಹ್ಮೇತಿಗನ ಮಾಡಿದಳ್ ಪತಿಯರ್ಕೈವರುಯಿರ
ಲ್ಪೋತು ದ್ರೌಪತಿ ಕರ್ಣನಂ ಬಯಸಿದಳು ಸಿದ್ಧ ಸಾರಂಗನಂ ವ್ಯರ್ಥಕೆ
ಘಾತಕದಿ ಚಿತ್ರಾಂಗಿ ಕೈಕಾಲ ಕೊಯ್ಸಿದಳ್
ಸೀತೆಯ ಸುಲಾವಣ್ಯಮಂ ರಾವಣಗೆ ಪೇಳಿ
ಪಾತಕಕೆ ಗುರಿಮಾಡಿದಳ್ ಶೂರ್ಪನಖಿ ಬಳಿಕಂತುಮಲ್ಲದೆ ಗುರುವರಾ - (೧೫)

ಸೀತೆ-ರಾಮ, ದ್ರೌಪದಿ-ಕರ್ಣ, ಸೀತೆ-ರಾವಣರ ಮಧ್ಯದ ಅವಗಡಗಳನ್ನು ರಾಮಾಯಣ-ಮಹಾಭಾರತ ಕಥೆಗಳ ಹಿನ್ನೆಲೆಯಲ್ಲಿ ಮುಖಾಮುಖಿಗೊಳಿಸುತ್ತಾರೆ. ಸಿದ್ಧಾಂತ ಮೀರಿ ನಡೆದಾಗ ಸಂಭವಿಸುವ ಅಹಿತಕರ ಘಟನೆಗಳು ದುಷ್ಕೃತ್ಯಗಳಿಗೆ ದಾರಿಯಾಗಿ. ಸಮಾಜದಲ್ಲಿ ಹೇಗೆ ಕೆಟ್ಟ ಪರಂಪರೆಗೆ ಹಾದಿಯಾಗುತ್ತದೆ ಎಂಬ ವಿಚಾರವು ಮೇಲಿನ ಸಾಲುಗಳಲ್ಲಿ ವ್ಯಕ್ತವಾಗಿದೆ.

ಹಲವು ಮಂತ್ರವು ಹಲವು ವಿದ್ಯೆ ಹಲವಾಗಮಂ
ಹಲವು ಗಣಿತಂ ಹಲವು ತರ್ಕ ಹಲವಾಶಾಸ್ತ್ರ
ಹಲವು ವೇದೋಪನಿಷದಾದಿಗಳ ಬಲ್ಲ ಕೌಶಲಕಳಾ-ವಿದರೆಲ್ಲರು
ಸಲೆ ಬಿಡಾಲಂ ಉಂಬ ಠಾವಿನೊಳು ಎಂಜಲಿಗೆ
ನೆಲೆಯಾಗಿ ಕಾಯ್ದಿರ್ಪವೊಲ್ ದ್ರವ್ಯವುಳ್ಳವನ
ನಿಲಯದ ದ್ವಾರಮಂ ಕಾಯ್ದಿರ್ಪ ಕಿಂಕರರ್ ಕೇಳೆಂದ ದೇಶಿಕೇಂದ್ರ (೭೧)

ಮೇಲಿನ ಸಾಲುಗಳಲ್ಲಿ ಮಂತ್ರಪಠಣೆಯಿದೆ, ಹಲವು ರೀತಿಯ ವಿದ್ಯೆಗಳಿವೆ, ಪಾರಂಗತರಿದ್ದಾರೆ. ಗಣಿತ, ತರ್ಕ, ಶಾಸ್ತ್ರ, ವೇದೋಪನಿಷತ್ತಿಗಳನ್ನು ಬಲ್ಲವರಿದ್ದಾರೆ. ಇವುಗಳನ್ನು ಅರಿತಿರುವವರು ತಮ್ಮತನವನ್ನು ಮರೆತು ಅನ್ಯರ ವಸ್ತುಗಳಿಗೆ ದ್ರವ್ಯಕನಕಾದಿಗಳಿಗೆ ಆಸೆಪಡುವ ಬಾಗಿಲನ್ನು ಕಾಯುವ, ದ್ವಾರಪಾಲಕರಂತೆ ನರರೆಂದು ಬಣ್ಣಿಸಿದ್ದಾನೆ. ಇಲ್ಲಿ ಸಿದ್ಧಾಂತವೂ ನೀತಿಬೋಧನೆಯೂ ಇದೆ ಮೌಲ್ಯಗಳ ಕುರಿತು ಮಾತನಾಡುವ ತಾತ್ವಿಕತೆಯಿದೆ.

ಕಾವ್ಯದ ಕೊನೆಯ ಪದ್ಯದಲ್ಲಿ ಕೃತಿಗೆ ಶಕ್ತಿಯಾದ ಶರಣರನ್ನು ನೆನೆಯುತ್ತಾನೆ. ಹೃದಯದಲ್ಲಿ ನೆಲೆಗೊಳಿಸಿಕೊಳ್ಳುತ್ತಾನೆ –

ಗುರು ಲಿಂಗಚರರೂಪಧರಿಸಿದಮಲಾನಂದ
ವರ ಬಸವ ಚೆನ್ನಬಸವಾಂಕ ಚಿತ್ಪ್ರಭುದೇವ
ಪರಮ ಮಹಿಮರ ಪಾದಮಕರಂದ ಪಂಕರುಹ ಷಟ್ಪದಂಗಳ ಸಂತತಂ
ಸ್ಥಿರವಾಗಿ ಹೃತ್ಕಮಲದೊಳ್ದರಿಸಿದವನ ಸರ
ಸಿರುಹದೊಳ್ ನೆಲೆಗೊಳಿಸಿ ಪಠಿಸೆ ಭಕ್ತಿಜ್ಞಾನ
ವಿರತಿಯಂ ಕರುಣಿಪನು ಕರಕಂಜಪುರವಾಸ ವರ[ದಿ]ಷ್ಟಲಿಂಗೇಶನೂ (೧೦೧)

ಗುರು–ಲಿಂಗ–ಜಂಗಮ ಚರಮೂರ್ತಿಗಳಾದ ಬಸವ, ಚೆನ್ನಬಸವ, ಅಲ್ಲಮ ಪ್ರಭುದೇವ ಇಂತಹ ಮಹಾಮಹಿಮರ ಪಾದ ಪದ್ಮೋಪಜೀವಿಯಾಗಿ ಹೃದಯ ಮಂದಿರದಲ್ಲಿ ಸ್ಮರಿಸಿಕೊಳ್ಳುತ್ತಾನೆ.

೫. ಮನುರಾಜೇಂದ್ರ ತಾರಾವಳಿ :

ಶಾಂತವೀರರ ವಿಭಿನ್ನ ಆಲೋಚನೆಯಿಂದ ಕಲ್ಪಿತವಾದ ಈ ಕೃತಿ ಹಲವು ವಿಷಯಗಳ ಸಂಗಮವಾಗಿದೆ. ಸ್ತೋತ್ರರೂಪದಲ್ಲಿರುವ ಇದು ಶಾಂತವೀರರಿಂದಲೇ ರಚನೆಗೊಂಡ ಚಂಪುಶೈಲಿಯ ಹಮ್ಮೀರ ಕಾವ್ಯದ ವಸ್ತುವನ್ನು ಆಧರಿಸಿದೆ. ಹರಿಹರನ ರಗಳೆಯಂತೆ ಇಲ್ಲಿಯ ನಡೆಯಿದೆ. "ಯೋಗಿವರ ಕರುಣಿ ಮುರಿಗೆಯ ನಾಗರಪತಿಭರಣ" ಎಂಬ ಅಂಕಿತದ ಇದರಲ್ಲಿ ೧೧ ಪದ್ಯಗಳಿವೆ. ಮೊದಲು ಪಲ್ಲವಿ ಅಂತ್ಯದಲ್ಲಿ ೪ ಕಂದಪದ್ಯಗಳನ್ನೊಳಗೊಂಡಿದ್ದು, ಸ್ವರವಚನಗಳನ್ನು ನೆನಪಿಸುವಂತಿದೆ. ಈ ತಾರಾವಳಿಯಲ್ಲಿ ಬರುವ ಪ್ರಮುಖ ಅಂಶಗಳನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

ಕರ್ನಾಟಕದ ಮಧ್ಯಭಾಗದಲ್ಲಿರುವ, ಕೋಟೆಕೊತ್ತಲಗಳಿಂದ ಆವೃತವಾಗಿರುವ ಪಟ್ಟದಕಲ್ಲು (ಶಿಲಾಪುರ)ನ್ನು ಆಳುತ್ತಿರುವವನು ತ್ರೈಲೋಕ್ಯ ಚೂಡಾಮಣಿ ಹಾಗೂ ಮಹಾದೇವಿಯರ ಉದರಸಂಜಾತನೇ ಈ ಮನುರಾಜೇಂದ್ರ, ಈತನನ್ನು ಬೇರೆ ಬೇರೆ ನಾಮಧ್ಯೇಯಗಳಿಂದ ಕಾವ್ಯಗಳಲ್ಲಿ ಉಲ್ಲೇಖಿಸಲಾಗಿದ್ದು ಮಂತ್ರರಾಜ, ಹಮ್ಮೀರ ರಾಜೇಂದ್ರ ಹಾಗೂ ಅನಿಮಿಷದೇವ

ಇತ್ಯಾದಿಯಾಗಿ ಕರೆಯಲಾಗಿದೆ. ಪುತ್ರಾಪೇಕ್ಷೆಯ ಕಾರಣವಾಗಿ ಶರಣದಂಪತಿಗಳು ಮಾಡಿದ ತಪಸ್ಸಿನ ಫಲವಾಗಿ ಹಮ್ಮೀರ ರಾಜನ ಜನನವಾಗುತ್ತದೆ. ಈತನ ಬಾಲ್ಯ-ಯೌವ್ವನಗಳ ಸಂಗತಿಯನ್ನು ಕಾವ್ಯ ವರ್ಣಿಸುತ್ತದೆ. ಹಾಗೆಯೇ ಕಾಂಭೋಜರಾಜನ ಪುತ್ರಿ ಕಾಂತಾಗೌರಿಯೊಡನೆ ವಿವಾಹವೇರ್ಪಟ್ಟ ಪ್ರಸಂಗ, ಸತಿ-ಪತಿಗಳೊಂದಾಗಿ ಸುಖಜೀವನ ನಡೆಸುವ ಪರಿ, ರಾಜ್ಯಭಾರ ಮಾಡುವ ಕಾರ್ಯವೈಖರಿ, ಹಮ್ಮೀರನ ಏಳ್ಗೆಯನ್ನು ಸಹಿಸದ ಚಂಡಕೋದಂಡನು ದಂಡೆತ್ತಿ ಬರುವ ಸನ್ನಿವೇಶ, ಇವರಿಬ್ಬರ ಯುದ್ಧ ಪ್ರಸಂಗ, ಚಂಡಕೋದಂಡನನ್ನು ಸದೆಬಡಿಯುವುದು, ಹಮ್ಮೀರ ಗೆದ್ದು ರಾಜಧಾನಿಗೆ ಮರಳಿ ಬರುವುದು, ಹಮ್ಮೀರರಾಜನ ವನಮಹೋತ್ಸವ, ಜಲಕ್ರೀಡೆ ಮುಂತಾದ ವರ್ಣನೆಗಳು ಕಾವ್ಯ ಸೊಬಗನ್ನು ಹೆಚ್ಚಿಸಿವೆ. ಈ ಸಂದರ್ಭದಲ್ಲಿ ಮನುರಾಜನು ಶಿವಲಿಂಗನಿಷ್ಠೆಯಿಂದ ಲೌಕಿಕ ಆಸೆಗಳು ಕುಂಠಿತಗೊಂಡು ಅಲೌಕವಾದ ಪಾರಮಾರ್ಥಿಕದೆಡೆಗೆ ಸಾಗುವ ಮನೋಭಾವ, ಲಿಂಗಮುದ್ರೆಯಿರುವ ವೃಷಭನಿಂದ ಸಂಸ್ಕಾರವೆಂಬ ದೀಕ್ಷೆಯನ್ನು ಪಡೆಯುವುದು. ಆ ಅಣತಿಯಂತೆ ಪಡೆದು ಮನುರಾಜನು ಗುರುವಿನಿಂದ ಕರಸ್ಥಲಕ್ಕೆ ಅನುಗ್ರಹಿಸುವ ತಾತ್ವಿಕತೆ, ನಂದೀಶನ ಅಣತಿಯಂತೆ ಇಷ್ಟಲಿಂಗದಲ್ಲಿ ಅನಿಮಿಷ ದೃಷ್ಟಿಯಿಟ್ಟು ಶಿವಯೋಗ ಮಗ್ನನಾಗುವುದು, ಮನುರಾಜೇಂದ್ರ ಎಂಬ ಪದನಾಮದಿಂದ ಅನಿಮಿಷದೇವನಾಗಿ, ಶ್ರೇಷ್ಠ ಮುನಿಯಾಗಿ, ಭಕ್ತಿ-ಜ್ಞಾನದ ವೈರಾಗ್ಯಮೂರ್ತಿಯಾದ ಅಲ್ಲಮಪ್ರಭುವಿಗೆ ದೀಕ್ಷೆ ಕೊಡುವ ಸಾಕಾರಮೂರ್ತಿಯಾಗಿ ಪರಿವರ್ತನೆಗೊಂಡಿರುವುದು ಮಹತ್ವವೆನಿಸುತ್ತದೆ. ಇಲ್ಲಿ ಕವಿ ಸಾಧನೆಗೆ ಸಂಸಾರವೂ ಮುಖ್ಯ ತಾತ್ವಿಕತೆಗೆ ಧರ್ಮವೂ ಮುಖ್ಯ ಒಂದರಲ್ಲಿ ಒಂದು ಅಡಗಿಕೊಂಡು ಹೊಸ ಅನುಭವವನ್ನು ಕೊಡುತ್ತವೆ ಎಂಬ ವಿಚಾರವನ್ನು ತಿಳಿಯಪಡಿಸಿದ್ದಾನೆ.

ಉದಾ -

ಮತ್ತೆ ತ್ರಿಭುವನದ ಪತಿ -ಮಹಾದೇವಿಯು
ಉತ್ತಮ ಕಾಂಭೋಜ [ನಾತ]ನ ಸತಿಯರು
ಸುತ್ತಲೈವತ್ತಾರು ದೇಶದ ದೊರೆಗಳು
ಚಿತ್ತಾನುಕೂಲದ ತರುಣಿಯರೆಲ್ಲರು
ಮುತ್ತಿನಾರತಿಗಳಪಿಡಿದು ಶೋಭನವನು
ಇತ್ತೆರದಿಂದೆ ಪಾಡುತಲಿರೆ ಪದುಳದಿಂ
ಮೃತ್ಯುಂಜಯನ ವರವುಳ್ಳ ಹಮ್ಮೀರನ
ಸುತ್ತಣ ಐವತ್ತಾರು ದೇಶದ ದೊರೆಗಳ (೩)

ಹೀಗೆ ಕಾಂಭೋಜದ ಸತಿಯರು - ಸುಮಂಗಲೆಯರು ಮುತ್ತಿನಾರತಿಯನ್ನು ಬೆಳಗುತ್ತ ಹಮ್ಮೀರ ರಾಜನ ಬರುವಿಕೆಗಾಗಿ ಕಾಯುತ್ತಿದ್ದರು. ಈ ಮೇಲಿನ ಸಾಲುಗಳು ಆದಿಪ್ರಾಸವನ್ನು

ಅನುಸರಿಸುವುದರ ಜೊತೆಗೆ ಜೋಗುಳಪದ, ಸುವ್ವಾಲಿಪದ ಸೋಬಾನಪದಗಳ ಅರ್ಥವತ್ತಾದ ಧಾಟಿಯನ್ನು ಅನುಸರಿಸುವುದರೊಂದಿಗೆ ಕಾವ್ಯದ ರಮ್ಯತೆಯನ್ನು ಹೆಚ್ಚಿಸಿವೆ.

೬. ಕಟ್ಟಿಗೆಯ ತಾರಾವಳಿ :

ಶಾಂತವೀರರು ಕಟ್ಟಿಗೆಹಳ್ಳಿ ಸಿದ್ಧಲಿಂಗಯತಿಗಳ ಶಿಷ್ಯತ್ವವನ್ನು ಪಡೆದ ಹಿನ್ನೆಲೆಯಲ್ಲಿ ಗುರುವಿಗೆ ಕೊಡಬೇಕಾದ ಶಿಷ್ಯವಾತ್ಸಲ್ಯ ಪ್ರೀತಿ ಮತ್ತು ಭಕ್ತಿಗೌರವಗಳು ಸಾಕಾರಗೊಳ್ಳಬೇಕಾದರೆ ಅವರ ಸ್ಮರಣೆ ಅನಂತವಾದದ್ದು. ಅದರ ದ್ಯೋತಕವಾಗಿ ಈ ಕೃತಿ ರಚನೆ ಮಾಡಿರಬೇಕು. ತತ್ವಪ್ರಧಾನವಾದ ತಾರಾವಳಿಗಳಲ್ಲಿ ಕಟ್ಟಿಗೆಯ ತಾರಾವಳಿಯೂ ಒಂದು. 'ಮುರಿಗೆಯರಾಯ' ಎಂಬ ಅಂಕಿತನಾಮವನ್ನು ಹೊಂದಿದ್ದು ಪಲ್ಲವಿ ಹಾಗೂ ೫ ಪದಗಳಿಂದ ಕೂಡಿದೆ. ಕಟ್ಟಿಗೆಯ ವಿವಿಧ ಉಪಯೋಗ ಮತ್ತು ಅದರ ಮಹತ್ವವನ್ನು ತಾರಾವಳಿಯ ಮೂಲಕ ಬಿತ್ತರಿಸಲಾಗಿದೆ. ಕಾಷ್ಠಮುರದ ಸಿದ್ಧಲಿಂಗನ ಉಲ್ಲೇಖವು ಗಮನಾರ್ಹವೆನಿಸಿದೆ.

ಕಟ್ಟಿಗೆಯ ಬಗ್ಗೆ ಇರುವ ಕೀಳರಿಮೆಯನ್ನು ಹೋಗಲಾಡಿಸಿ ಅದರ ಸದುಪಯೋಗ ದಿನನಿತ್ಯ ಬದುಕಿನಲ್ಲಿ ಹೇಗೆ ಬೆರೆತುಕೊಂಡಿದೆ ಎಂಬ ಅಂಶವನ್ನು ಇಲ್ಲಿ ರಸವತ್ತಾಗಿ ನಿರೂಪಿಸಲಾಗಿದೆ.

ಉದಾ –

ಅಂದಳ ಸತ್ತಿಗೆ ಎಳವುದು ಕಳೆವುದು
ಕೊಂದಾಟ ಕಡಿದಾಟ ಕೋಳ ಕೋದಂಡವು
ನಂದನ ಮದುವೆ ಚಪ್ಪರ ಮಣಿಮಂಚವು
ಚಂದದ ಚವುಕಿ ಚಾವಡಿ ಚದುರಂಗವು
ಮಂದಿರ ಗೋಪುರ ಮದನಕೈಸಾಲೆ [ಯ]
ವೃಂದವು ಕೊರೆವುದು ಕಡಿವುದು ಬಡಿವುದು
ಅಂಧಕರಾಧಾರ ಅಡಿಗೆಯ ಸಡಗರ
ಗಂಧವು ಗಾಣವು ಗಾಲಿ ಹೆಬ್ಬಾಗಿಲು
ಹಿಂದಣ ಮುಂದಣ ಬಾಗಿಲು ಬುಗರಿಯು
ಹೆಂದದ ಬಂಡರ ಹಿರಿಯತನವು ಇದ
ರಿಂದ ಮೆರೆವುದಿದು ಸಂಗನಕಟ್ಟಿಗೆ (ಪದ್ಯ –೧)

"ನಂದನ ಮದುವೆ ಚಪ್ಪರ ಮಣಿಮಂಚವು ಚಂದದ ಚವುಕು ಚಾವಡಿ ಚದುರಂಗವು" ಇಲ್ಲಿ ಗಮನಿಸಬೇಕಾದ ಮುಖ್ಯವಾದ ಅಂಶವೆಂದರೆ ಲಯ, ಧಾಟಿ, ಪ್ರಾಸ, ಹಾಡಿನ ಮೂಲಕ ಅರ್ಥ ಕಲ್ಪಿಸುತ್ತದೆ. ಹಾಗೆಯೇ ಮಾತಿನ ಮೂಲಕ ರಸವತ್ತಾಗಿ ರುಚಿಸುತ್ತದೆ. ಒಂದು ಶಬ್ದ ಇನ್ನೊಂದು ಶಬ್ದವನ್ನು ಅಪ್ಪಿಕೊಂಡಂತೆ ಭಾಸವಾಗುತ್ತದೆ. ಜೊತೆಗೆ ಲೌಕಿಕ ಬದುಕಿನ ವಿವಿಧ

ಮಗ್ಗುಲಗಳು ಕಟ್ಟಿಗೆಯನ್ನು ಹೇಗೆ ಅನುಸರಿಸಿಕೊಂಡು ಬಂದಿವೆ ಎಂಬ ಆಲೋಚನೆಗಳು ಇಲ್ಲಿ ಜಾಗೃತಗೊಳ್ಳುತ್ತವೆ.

೭. ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ :

ಮುರಿಗಾಶಾಂತವೀರರು ರಚಿಸಿದ ಕೃತಿಗಳಲ್ಲಿ ನಾಂದ್ಯ ರೂಪದ ಕೃತಿ ಇದಾಗಿದ್ದು, ನಾಂದ್ಯ ಪ್ರಕಾರದ ಸಾಹಿತ್ಯದಲ್ಲಿ ಇದಕ್ಕೆ ದ್ವಿತೀಯ ಪ್ರಾಶಸ್ತ್ಯವಿದೆ. ನಾಂದ್ಯ ಎನ್ನುವ ಹೆಸರೇ ಸೂಚಿಸುವಂತೆ ಸ್ತುತಿರೂಪದ ಪದ್ಯವಾಗಿದ್ದು, ಶಿವನ ಅನಂತ ಮಹಿಮೆ-ಪವಾಡ ಸಾದೃಶ್ಯಗಳನ್ನು ವಸ್ತುವನ್ನಾಗಿಟ್ಟುಕೊಂಡು ರಚಿತವಾದ ಕೃತಿ. ಒಟ್ಟು ೨೪ ಪದ್ಯಗಳಿದ್ದು, ಷಟ್ಪದಿಯ ಪ್ರಕಾರಗಳಾದ ಭಾಮಿನಿ, ಪರಿವರ್ಧಿನಿ, ವಾರ್ಧಕಗಳಲ್ಲಿ ರಚನೆಗೊಂಡಿದೆ. ಶ್ರೀ ಎಸ್. ಶಿವಣ್ಣ ಅವರು ಶಾಂತವೀರರ ಸಮಗ್ರ ಕೃತಿಗಳ ಪೀಠಿಕೆಯಲ್ಲಿ ಈ ಕೃತಿ ಕುರಿತು ಹೀಗೆ ಹೇಳುತ್ತಾರೆ. "ಈ ಕೃತಿಯು ಈ ಮೊದಲು ೧೯೮೪ರಲ್ಲಿ ಇಮ್ಮಡಿ ಗುರುಸಿದ್ಧರದಿರಬಹುದೆಂದು ನಂಬಿ ಅವರ ಹೆಸರಿನಲ್ಲಿ ಪ್ರಕಟಪಡಿಸಲಾಗಿತ್ತು. ಆದರೆ ಸಿರಿಗೆರೆಯ ಬೃಹನ್ಮಠದ ಸಂಗ್ರಹದಲ್ಲಿನ ಈ ಕೃತಿಯಲ್ಲಿ ಮುರಿಗೆಯ ಶಾಂತವೀರಸ್ವಾಮಿಗಳು ನಿರೂಪಿಸಿದ ನಾಂದ್ಯ ಎಂದಿರುವುದರಿಂದ ಪ್ರಸ್ತುತ ಸಂಪುಟದಲ್ಲಿ ಮುರಿಗೆ ಸ್ವಾಮಿಗಳ ಕೃತವೆಂದೇ ಬಗೆದು ಪ್ರಕಟಿಸಲಾಗಿದೆ ಎಂದು ಹೇಳುತ್ತಾರೆ".

ಮಡದಿಯರೊಡಲುಪಚಾರವ ಮಾಡದೆ
ತೊಡೆ ತಲೆಗಳನಡರಿದರಯ್ಯೋ ನೀಂ
ಪಡುವುದು ಪಿಂಜರಿಯ ಪರಂಜಿಯ ಮಂಜನ ಮಣಿಕೋಡುಗಳೊಳ್
ಮೃಡ ಮಾಧವಿಯೊಳ್ಕೂಟದ ಬೇಟದ
ಸಡಗರ ಲೇಸಾಯ್ತಗ್ಗದ ಮಿಗಮಗು
ಕೊಡಲಿಗಳಿರೆ ಬಡವರ ಮಕ್ಕಳ ಕೊಲಿಸುಂಬಾಟಮದೇಕೆ (೧೫)

ಸ್ತ್ರೀಯರನ್ನು ಉಪಚರಿಸಿದೇ ಬೆಳ್ಳಿ, ಚಿನ್ನ, ರತ್ನಗಳಲ್ಲಿ ವ್ಯಾಮೋಹ ಹೊಂದುವ ಸ್ನೇಹ-ಸಂಭ್ರಮವನ್ನು ಬಿಟ್ಟು ಎಳೆಯ ಕರುವಿನಂತಿರುವ ಬಡ-ಅಂಧ ಅನಾಥ ಮಕ್ಕಳನ್ನು ಕೊಲ್ಲಿಸಿ ಅದರ ಲಾಭವನ್ನು ಪಡೆಯುವ ನರಮನುಷ್ಯರನ್ನು ಕಂಡು ಕವಿ ಟೀಕಿಸುತ್ತಾನೆ. ವಿನೋದ ಮಾಡುವ ನೆಪದಲ್ಲಿ ಅನ್ಯರನ್ನು ಕಡೆಗಣಿಸುವ ನರಮಾನವನ ವರ್ತನೆಯನ್ನು ವಿಡಂಬನೆ ಮಾಡುತ್ತಾನೆ.

ಬೊಮ್ಮಂ ತಿಮ್ಮಂ ಹಮ್ಮಿನದೇವಂ
ತಮ್ಮಂ ಪುಟ್ಟಿಸಿದಭವನ ಬರವಂ
ಗಮ್ಮನೆ ಪಡೆವುತು ಪುಟಂ ಪೊರೆಯುಂ ಕೇಡುಂ ಮಾಡುವರ
ಬೊಮ್ಮಂ ತಿಮ್ಮಂ ದಮ್ಮಂ ದಕ್ಷಂ
ಕಮ್ಮಂಗಣೆಯಂ ಮೊದಲಾದುಗ್ಗಡ
ಹೆಮ್ಮೆಯದೇವರ್ಬಿಮ್ಮುಳಿದಳಿದರ್ನಿಮ್ಮಿಂದಸಮಾಕ್ಷ (೧೭)

ಬ್ರಹ್ಮ, ನಾರಾಯಣ, ರುದ್ರ, ಶಿವ ಇವರೆಲ್ಲರ ಕೃಪಾಶೀರ್ವಾದದಿಂದ ಹುಟ್ಟಿದ ಸಕಲ ಇಷ್ಟಾರ್ಥವು ತಟ್ಟನೆ ಕೈಗೆಟಕುವ ಸಂದರ್ಭದಲ್ಲಿ ಕೇಡನ್ನು ಉಂಟು ಮಾಡುವ ಸೃಷ್ಟಿ ಸ್ಥಿತಿಲಯವನ್ನು ಮಾಡುವರಾರು ಅವರೆಲ್ಲರು ಇವರೇ ತಾನೆ ಎಂದು ಪ್ರಶ್ನಿಸುತ್ತಾ ಅನಂತತೆಯನ್ನು ಮೆರೆಯುತ್ತಾನೆ.

ಇಲ್ಲಿ ತಾತ್ವಿಕ ಹಿನ್ನೆಲೆಯಲ್ಲಿ ಶಿವಸ್ವರೂಪವನ್ನು ಪವಾಡ ಸಾದೃಶ್ಯಗಳ ಮೂಲಕ ಗ್ರಹಿಸಲಾಗಿದೆ.

೮. ಶಬ್ದರತ್ನಾಕರ :

ಶಾಂತವೀರರ ಬಹು ಬಗೆಯ ಸಾಹಿತ್ಯ ಪ್ರಕಾರಗಳಲ್ಲಿ ನಿಘಂಟು ರಚನೆಯೂ ಒಂದಾಗಿದೆ. ಕೆಲವೇ ಪದ್ಯಗಳಿಂದ ಕೂಡಿದೆ.

"೧೮೮೩ ರಲ್ಲಿ ಬೆಂಗಳೂರಿನಿಂದ ತೋವಿನಕೆರೆ ರಾಯಣ್ಣ ಈ ಕೃತಿಯನ್ನು ಕರ್ತೃವಿನ ಹೆಸರಿನಲ್ಲದೆ ಪ್ರಕಟಪಡಿಸಿದ್ದನು. ಗದುಗಿನ ತೋಂಟದಾರ್ಯ ಸಂಸ್ಥಾನಮಠದಲ್ಲಿನ ಸಂಗ್ರಹದಲ್ಲಿನ 'ಶಬ್ದರತ್ನಾಕರ'ದ ಓಲೆಪ್ರತಿಯಲ್ಲಿ 'ಮುರಿಗೆ ಸ್ವಾಮಿಗಳು ಸೇರಿಸಿದ' ಎಂಬ ಉಲ್ಲೇಖವಿರುವುದನ್ನು ಗಮನಿಸಿ ಪ್ರತ್ಯೇಕವಾಗಿ ಪ್ರಕಟಿಸಲಾಗಿದೆ. ಈ ಕೃತಿಯೂ ವೈರಾಗ್ಯ ಷಟ್ಪದಿಯ ರೀತಿಯಲ್ಲಿಯೇ ಸಂಕಲನಗೊಂಡಿದ್ದು ೩೦ ಕಂದ ಪಂದ್ಯಗಳಲ್ಲಿ ರಚಿತಗೊಂಡ ಲಘುಕೃತಿ. ಇಲ್ಲಿಯ ಪದಗಳಿಗೆ ನಾನಾರ್ಥಗಳನ್ನು ತಿಳಿಸುವ ಹೊಸಪ್ರಯೋಗ ಶಾಂತವೀರರದ್ದಾಗಿದೆ.

ಉದಾ –

> ಕರಿಯೆನೆ ಕನ್ನಡಿಯಕ್ಕುಂ
> ಕರಿಯೆಂದೆನೆ ಕಮಲಮಕ್ಕು ಕಸ್ತುರಿಯಕ್ಕುಂ
> ಕರಿಯೆನೆ ಸರ್ಪ ಮರಾಳಂ
> ಕರಿಯೆಂದೆನೆ ಕೀರ್ತಿಯಕ್ಕು ಶಬ್ದಾಗಮದೊಳ್ (೭)

ಕರಿ ಎಂಬ ಶಬ್ದ ಕನ್ನಡಿ, ಕಮಲ, ಕಸ್ತುರಿ, ಸರ್ಪ, ಮರಾಳ, ಕೀರ್ತಿ ಎಂಬ ನಾನಾರ್ಥಗಳನ್ನು ಪಡೆದಿದೆ ಎಂದು ಹೇಳಲಾಗಿದೆ.

ಕಮಲ, ಕುಮುದ, ಕರಿ, ಕಂಕಣ, ಅಮೃತ, ದಳ, ಸುರಚಿರ, ಶ್ರೀಧರ, ವನ, ಭೀಮ, ಸೋಮ, ಅಕ್ಷಯ, ಬಾಣ, ಮಂಡಿತ ಆರಡಿ, ಅಜನ ಹೀಗೆ ಆರಂಭವಾಗುವ ಮೊದಲನೆಯ ಪದಗಳಿಗೆ ಬಹುಬಗೆಯ ಅರ್ಥಗಳನ್ನು ಇಲ್ಲಿ ಕೊಡಲಾಗಿದೆ. ಶಾಂತವೀರರ ಭಾಷೆಯ ಬಗೆಗಿನ ಕಳಕಳಿ ಮತ್ತು ಅವರ ಶಬ್ದಸಂಪತ್ತಿನ ಹರವು ಇದರಿಂದ ವ್ಯಕ್ತವಾಗುತ್ತದೆ. ಇದು ಅವರ ಓದಿನ ಆಳವಾದ ಜ್ಞಾನಕ್ಕೆ ನಿದರ್ಶನ.

೯. ಏಕೋನವಿಂಶತಿ ಪದ :

ಇದೊಂದು ಲಘು ಕೃತಿ. ೨೧ ವಾರ್ಧಕ ಷಟ್ಪದಿಗಳಲ್ಲಿ ರಚಿತಗೊಂಡಿದೆ. "ಹತ್ತೊಂಬತ್ತು ಪದ"ವೆಂಬ ಹೆಸರೂ ಇದಕ್ಕಿದೆ. ವೀರಶೈವದ ತತ್ವತ್ರಯಗಳಾದ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರಗಳನ್ನು ಕುರಿತು ಇಲ್ಲಿ ವಿವೇಚಿಸಲಾಗಿದೆ. ಇದಕ್ಕೆ ಅಜ್ಞಾತ ಕೃತ ಟೀಕೆಯೂ ಇದೆ.

ಉದಾ –

ಘನ ಶಿವಕ್ಷೇತಜ್ಞ ಕರ್ತಾರ ಭಾವ ಚೇ
ತನಮಂತರಂ ಸದಾಶಿವ ಶಬ್ದ ಜ್ಞಾನ
ಮನು ಕರ್ನವಚನಮಿಶ್ವರ ಸಮಿರ ಸ್ಪರ್ಶ ಮನಸ್ತಕ್ಪಾಣಿ ರುದ್ರಂ
ಅನಲರೂಪಂ ಮಹಾನೇತ್ರ ಪಾದಂ ವಿಷ್ಣು
ವನ ರಸಂ ಬುದ್ಧಿ ಜಿಹ್ವಾ ಗುಹ್ಯಮಜ ಮಹಾ
ವನಿ ಗಂಧ ಚಿತ್ರ ಸುಘ್ರಾಣ ಗುಧಗಳ್ತರದೆ ಮಿಶ್ರಿತ ಬ್ರಹ್ಮಷಟ್ಕಂ (೨)

ಶ್ರೇಷ್ಠ ಮಹಿಮೆಯುಳ್ಳ ಶಿವನ ನಿಜಬೀಡಾದ ಶಿವಲೋಕದಲ್ಲಿ ನರಕ ಮತ್ತು ಭೂತಕರ್ಮಗಳ ಅಜ್ಞಾನ ಇರದು. ಚೈತನ್ಯವೆಂಬ ಜ್ಞಾನಸಾಗರ ಕರ್ಮೇಂದ್ರಿಯಗಳ ಮೂಲಕ ಷಟ್‌ತತ್ವಂಗಳು ಪರಬ್ರಹ್ಮನಿಂದ ಉದಯಗೊಂಡು ಸದಾಚಾರವೆಂಬ ಶಬ್ದಸಂಪತ್ತು ಸ್ತೋತ್ರ, ವಚನ ಮುಂತಾದವುಗಳ ಅನಂತತೆಯಿಂದ ಪ್ರಾಪ್ತಗೊಂಡಿವೆ. ಎಲ್ಲಾ ಜ್ಞಾನೇಂದ್ರಿಯಗಳಿಗೆ ಶಿವ, ರುದ್ರ, ವಿಷ್ಣು, ಬ್ರಹ್ಮ ಇವರುಗಳ ಆದರ್ಶಗಳು ಮತ್ತು ಅತೀಂದ್ರಿಯಗಳ ಒಟ್ಟು ಸಾರ ಸಕಲ ಸುಖಗಳಿಗೆ ದಾರಿದೀಪವಾಗಿದೆ. ಅವು ಬದುಕಿನ ಅನನ್ಯತೆಯನ್ನು ಜಾಗೃತಗೊಳಿಸುತ್ತವೆ.

ಸ್ಥಿರ ನಿಃಕಲ ಶಿವಾದಿಶಕ್ತಿ ಶಾಂತಿಕಲಾಭಿ
ಚರಲಿಂಗ ಲಸದ ಮೂರ್ತಿ ಸಾದಾಖ್ಯ ಭೀಮೇ
ಶ್ವರಕಲಾಮೂರ್ತಿ ಕರ್ತಾರ ಸುಲಿಂಗಿಶ್ವರ ಸ್ವಸನ ಸೃಷ್ಟಿಯಕ್ಕುಂ
ವರಶಿವೇಚ್ಛಾಶಕ್ತಿ ವಿದ್ಯಾಕಲಾ ಶುಭ
ಸ್ಫುರಿತ ಶಿವಲಿಂಗ ವರ ಮೂರ್ತಿ ಸಾದಾಖ್ಯ ಭಾ
ಸುರರುದ್ರ ನಿಜಕಲಾಮೂರ್ತಿ ಭಾವಪ್ರಸಾದಿ ಘನ ರುದ್ರಾಗ್ನಿಸೃಷ್ಟಿ (೧೫)

ನಿತ್ಯನೂತನವಾದ ಶಿವನ ಮಧ್ಯದಲ್ಲಿ ಶಾಶ್ವತವಾಗಿ ನೆಲೆಸಿರುವ ಜಗನ್ಮಾತೆ ಆದಿಶಕ್ತಿ. ಆ ಶಕ್ತಿಯಲ್ಲಿ ಶಾಂತಿಯೆಂಬ ಕಲೆ ಉದಯಗೊಂಡು ವಿಶೇಷವಾದ ಚರಲಿಂಗ, ಸಾದಾಖ್ಯ ಭೀಮೇಶ್ವರನೆಂಬ ಕಲಾಮೂರ್ತಿ, ಪ್ರಾಣಲಿಂಗದಲ್ಲಿ ಜಾಗೃತಗೊಂಡು ವಾಯುಸೃಷ್ಟಿ, ಇಚ್ಛಾಶಕ್ತಿ, ವಿದ್ಯೆ, ರುದ್ರ, ಭಾವಪ್ರಸಾದ ಮುಂತಾದವುಗಳು ಉದಯಗೊಂಡು ಸತ್‌ಚಾರಿತ್ರ್ಯವಾದ ಜ್ಞಾನ ನೆಲೆಗೊಳ್ಳುತ್ತದೆ.

ಇಂತಹ ಅನೇಕ ತಾತ್ವಿಕ ವಿಷಯಗಳು ಹಾಗೂ ಶಿವನ ಅನಂತವಾದ ಮಹಿಮೆಯನ್ನು ಹಲವು ವಿಧವಾಗಿ ಈ ಕೃತಿಯಲ್ಲಿ ವರ್ಣಿಸಲಾಗಿದೆ.

೧೦. ಷಡ್ವಕ್ತ್ರ ಸ್ತೋತ್ರ :

ದೇವಭಾಷೆ, ಜ್ಞಾನಭಾಷೆಯಾಗಿರುವ ಸಂಸ್ಕೃತ. ಮಾತೃಭಾಷೆಯಾದ ಕನ್ನಡ ಈ ಉಭಯಭಾಷೆಗಳ ಶಬ್ದಭಂಡಾರವನ್ನು ತಮ್ಮ ತೆಕ್ಕೆಗೆ ತೆಗೆದುಕೊಂಡ ಶಾಂತವೀರರ ವ್ಯಕ್ತಿತ್ವ ಹಿರಿಯದಾದ್ದು. ಸಂಸ್ಕೃತ ಭಾಷೆಯ ೯ ವೃತ್ತಗಳಲ್ಲಿ ರಚನೆಗೊಂಡ ಈ ಕೃತಿ ಈಶ್ವರನ ಆರುಮುಖಗಳ ವರ್ಣನೆ ಮಾಡುತ್ತದೆ. ಇಲ್ಲಿನ ಮೊದಲ ೫ ವೃತ್ತಗಳು ಪಾಠಭೇದಗಳೊಡನೆ ಮೌನಪ್ಪ ಪಂಡಿತ (ಕ್ರಿ.ಶ. ಸು. ೧೭೦೦)ನ 'ವೀರಶೈವಾಚಾರ ಕೌಸ್ತುಭ'ದಲ್ಲಿ ವಿವಾಹ ವಿಧಿಗೆ ಸಂಬಂಧಿಸಿದಂತೆ ಉಲ್ಲೇಖವಾಗಿವೆ ಎಂಬ ವಿಚಾರವನ್ನು ಶ್ರೀ ಎಂ.ಎಸ್. ಬಸವರಾಜಯ್ಯನವರು ತಿಳಿಯಪಡಿಸುತ್ತಾರೆ. ಈ ಸ್ತೋತ್ರಕ್ಕೆ ಕನ್ನಡದಲ್ಲಿ ಟೀಕೆ ಹಾಗೂ ನುಡಿಗಳು ರಚನೆಗೊಂಡಿದ್ದು ಟೀಕೆಯನ್ನು ಪರ್ವತ ಶಿವಯೋಗಿ (ಸು. ೧೭೦೦) ರಚಿಸಿದನೆಂದು ಊಹೆಯನ್ನು ಮಾಡುತ್ತಾರೆ. ಜೊತೆಗೆ ಈ ನುಡಿಯ ಕರ್ತೃ ಅಜ್ಞಾತನಾಗಿದ್ದಾನೆ.

ಯದ್ವೇದಾದಿಮನಂತರೂಪಮಗುಣಂ ಸಂಪೂಜಿತಂ ಚಾಮರೈಃ ।
ಪುನ್ನಾಗಾಂಬುಜ ನಾಗಪುಷ್ಪ ಬಕುಳೈರ್ನಾಗಂ ಸುರಾದ್ಯರ್ಚಿತಂ ॥
ನಿತ್ಯಂ ಭಾನುಸಹಸ್ರಕೋಟಿ ಕಿರಣಂ ಕಾಲಾಗ್ನಿರುದ್ರೋಪಮಂ ।
ತತ್ಸಂಹಾರಕರಂ ನಮಾಮಿ ಸತತಂ ಪಾತಾಳಷಷ್ಠಂ ಮುಖಂ ॥ (೬)

ಯಾವುದಾದೊಂದು ವೇದಂಗಳಿಗೆ ಆದಿಯಾದಂಥಾ, ಗಣಿತಕ್ಕೆ ಬಾರದ ಸ್ವರೂಪನುಳ್ಳಂಥಾ, ಸತ್ವ ತಜ, ತಮೋಗುಣಂಗಳು ಇಲ್ಲದಂಥಾ, ಕೋಟಿಸೂರ್ಯರ ಕಿರಣವನುಳ್ಳಂಥಾ, ಪ್ರಳಯಕಾಲದಗ್ನಿಗೆ ಸಮಾನವಾದಂಥಾ, ಸರ್ಪಗಳಿಂದಲೂ ರಾಕ್ಷಸರುಗಳಿಂದಲೂ ಅರ್ಚಿಸುವಂಥಾ, ಸುರಹೊನ್ನೆ, ತಾವರೆ, ಬಕುಳದ ಪುಷ್ಪಗಳಿಂದ ಪೂಜಿಸಲ್ಪಟ್ಟಂಥಾ, ಪಾತಾಳಲೋಕದಲ್ಲಿರುವ ಆರನೆಯ ಮುಖಕ್ಕೆ ಧನ್ಯತಾಭಾವದಿಂದ ನಮಸ್ಕರಿಸುವುದಾಗಿ ಹೇಳುತ್ತಾನೆ. ಹೀಗೆ ಶಿವಪಾರಮ್ಯದ ಶ್ರೇಷ್ಠತೆಯನ್ನು ಎತ್ತಿ ಹೇಳುತ್ತಾನೆ.

ಇಮ್ಮಡಿ ಮುರಿಗಾ ಗುರುಸಿದ್ಧರು (೧೭೦೩–೧೭೯೯) :

ಇಮ್ಮಡಿ ಮುರಿಗಾ ಗುರುಸಿದ್ಧರು ಮುರುಘಾ ಪರಂಪರೆಯ ಕವಿಗಳಲ್ಲಿ ಅತ್ಯಂತ ಪ್ರಮುಖರು. ಇವರು ಶೂನ್ಯಪೀಠ ಪರಂಪರೆಯ ಒಂಬತ್ತನೆಯ ಜಗದ್ಗುರುಗಳಾಗಿ, ಚಿನ್ಮೂಲಾದ್ರಿ ಬ್ರಹನ್ಮಠದ ದ್ವಿತೀಯ ಪೀಠಾಧ್ಯಕ್ಷರಾಗಿ, ಮುರಿಗೆ ಶಾಂತವೀರರ ಶಿಷ್ಯರಾಗಿ, ಮಧ್ಯಕಾಲೀನ ಕನ್ನಡ ಸಾಹಿತ್ಯದ–ವೀರಶೈವ ಕವಿಗಳಲ್ಲಿ ಮರೆಯಲಾಗದ ಹೆಸರು ಗಳಿಸಿದ್ದಾರೆ. ಮಠಾಧಿಪತಿಗಳಾಗಿ ಸಾಹಿತ್ಯ ರಚನೆ ಮಾಡಿದ ಶಿವಕವಿ ಸಿದ್ಧನಂಜೇಶ ಹಾಗೂ ಷಡಕ್ಷರದೇವನ ತರುವಾಯದ ಸ್ಥಾನದಲ್ಲಿ ನಿಲ್ಲುವ ಇವರು ವೀರಶೈವ ಕವಿಗಳಲ್ಲಿ ಷಡಕ್ಷರದೇವನ ನಂತರ ಚಂಪೂ ಪರಂಪರೆಗೆ ಜೀವವಿತ್ತವರು. ವಿವಿಧ ಛಂದೋಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿ ಉಭಯಭಾಷಾ ವಿಶಾರದರೆನಿಸಿದ್ದಾರೆ.

ಹಾಲಾಸ್ಯ, ಪುರಾಣ, ಶಿವರಹಸ್ಯ ಪುರಾಣ, ಸ್ಕಂದಕಲ್ಯಾಣದಂತಹ ಬೃಹತ್ ಕೃತಿಗಳನ್ನು ರಚಿಸಿ ಮಹಾಕವಿಗಳೆನಿಸಿದ್ದಾರೆ. ಏಕೋತ್ತರ ಶತಸ್ಥಲ, ಕರಣಹಸಿಗೆ, ಮಿಶ್ರಾರ್ಪಣ, ಶೂನ್ಯಮಂತ್ರಗೋಪ್ಯ ಮೊದಲಾದ ಕೃತಿಗಳನ್ನು ರಚಿಸಿ ವೀರಶೈವ ಧರ್ಮದ ತಾತ್ವಿಕ ಜ್ಞಾನವನ್ನೆಲ್ಲಾ ಸೂರೆಗೊಂಡಿದ್ದಾರೆ.

ಇಮ್ಮಡಿ ಮುರಿಗಾ ಗುರುಸಿದ್ದರ ಪೂರ್ವನಾಮ ಗುರುಸಿದ್ದ ಶಿವಯೋಗಿ. ಮುರಿಗಾ ಶಾಂತವೀರರ ತರುವಾಯ ಬೃಹನ್ಮಠದ ಉತ್ತರಾಧಿಕಾರಿಗಳಾದ ಕಾರಣ ಇವರಿಗೆ ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ ಎಂಬ ಹೆಸರು ಪ್ರಾಪ್ತವಾಯಿತು. ಇವರಿಗೆ ಇಮ್ಮಡಿ ಮುರಿಗಾ ಗುರುಸಿದ್ಧ ದೇಶಿಕೇಂದ್ರ, ಲೀಲಾಖ್ಯದ ಮುರುಘಾ ಶಿವಯೋಗಿ ಎಂಬ ನಾಮಾಂತರಗಳಿವೆ. ಸ್ವತಃ ಗುರುಸಿದ್ಧರೇ ತಮ್ಮ ಹಾಲಾಸ್ಯಪುರಾಣದಲ್ಲಿ –

"ಹರಿಸಮನಾಂತು ಮನ್ಮನದೊಳಂ ಗುರುಸುಂದರದೇವನಂಘ್ರಿಯಂ
ಸ್ಮರಿಸೆಮದೀಶನೊಲ್ದು ಹೃದಯಾಬದೊಳಂ ಗುರುಸಿದ್ಧನಾಮವಿ
ಸ್ಫುರದುರಭಾಸ್ವದಿರ್ಮಡಿ ಮಹಾಭಿಧಸನ್ಮುರಿಗಾಂಕನಾಗುತಂ
ಸರಸದೆ ದೇಶಿಕೇಂದ್ರನೆನಿಸುತುಸಿರ್ದೆಂ ನಿರಘಂ ಪುರಾಣಮಂ

(– ಹಾ.ಪು.ಕಾಂಡ ೪. ಪದ್ಯ ೧೨೬)

ವಿಷ್ಣುವಿನ ಸಮಾನರಾಗಿರುವ, ಗುರುವಾದ ಸುಂದರ ದೇವನನ್ನು ಭಕ್ತಿಯಿಂದ ಸ್ಮರಣೆ ಮಾಡಿದುದಕ್ಕಾಗಿ ಈಶ್ವರನು ಕೃಪೆ ತೋರಿ "ಗುರುಸಿದ್ಧ" ಎಂಬ ಹೆಸರಿನಿಂದ "ಇಮ್ಮಡಿ" ಎಂಬ ಮಹಾಬಿರುದನ್ನು ಪಡೆದು ನಂತರ "ಮುರಿಗಾಂಕ"ನಾಗುತ್ತ, ಸರಸದೆ "ದೇಶಿಕೇಂದ್ರ" ಎಂದೆನಿಸಿ ಈ ಪುರಾಣವನ್ನು ರಚಿಸಿದನೆಂದು ಹೇಳುತ್ತಾರೆ.

ಇಮ್ಮಡಿ ಮುರಿಗಾ ಗುರುಸಿದ್ಧರ ವೈಯಕ್ತಿಕ ಜೀವನದ ಕುರಿತಾಗಿ ಖಚಿತಮಾಹಿತಿಯನ್ನು ಅವರು ಎಲ್ಲೂ ದಾಖಲಿಸಿಲ್ಲ. ಮೂಲತಃ ವಿರಕ್ತ ಪರಂಪರೆಗೆ ಸೇರಿದ ಇವರು ತಮ್ಮ ಕೃತಿಗಳಾದ ಶಿವರಹಸ್ಯ ಪುರಾಣ, ಹಾಲಾಸ್ಯ ಪುರಾಣ, ಪ್ರಭುಲೀಲೆಗಳಲ್ಲಿ ಗುರುಪರಂಪರೆಯನ್ನು ಮಾತ್ರ ಹೆಸರಿಸುತ್ತಾರೆ. ಇವರು ಶೂನ್ಯಪೀಠದ ಅಧ್ಯಕ್ಷರಾದ ತರುವಾಯ ನಡೆದ ಘಟನೆಗಳನ್ನು ಮಹಾದೇವಕವಿಯ "ಮಹಲಿಂಗೇಂದ್ರ ವಿಜಯ", ಶಿವಮೊಗ್ಗ ಜಿಲ್ಲೆಯ ಆನಂದಪುರಂ ಮಠದಲ್ಲಿರುವ "ತಾಮ್ರಶಾಸನ, ಚಿತ್ರದುರ್ಗ ಬೃಹನ್ಮಠದಲ್ಲಿರುವ "ಪಟ್ಟವಲ್ಲರಿ"ಗಳು ತಿಳಿಸುತ್ತವೆ. ಗುರುಸಿದ್ಧರ ವ್ಯಕ್ತಿತ್ವವನ್ನು ಮೇಡ್ಲೇರಿ ಶಿವಲಿಂಗನ "ಸ್ವರವಚನಗಳು", ಕಾಶೀಗುರುಲಿಂಗ ಶಿವಯೋಗಿ ಮತ್ತು ಮರುಳೇಶನೆಂಬ ಕವಿಗಳು ತಮ್ಮ ಕೃತಿಗಳಲ್ಲಿ ಮಾಡಿರುವ ಸ್ಮರಣೆಯಿಂದ ಹಾಗೂ ಅಜ್ಞಾತ ಕವಿಯೊಬ್ಬರು ಗುರುಸಿದ್ಧರ ಬಗೆಗೆ ರಚಿಸಿರುವ ಸ್ತುತಿ ಪದ್ಯಗಳಿಂದ ತಿಳಿಯಬಹುದಾಗಿದೆ.

ಸ್ಥಳ : ಇಮ್ಮಡಿ ಮುರಿಗಾ ಗುರುಸಿದ್ಧರ ಸ್ಥಳ ಕರ್ನಾಟಕ ರಾಜ್ಯದ ಮಂಡ್ಯ ಜಿಲ್ಲೆಯ ಮುಳವಳ್ಳಿ ತಾಲೂಕಿನ ಧನಗೂರು. ಇವರು ತಮ್ಮ ಪ್ರಾರಂಭದ ವಿದ್ಯಾಭ್ಯಾಸವನ್ನು ಇಲ್ಲಿಯೇ ಮುಗಿಸಿರಬೇಕು. ಕವಿಯೇ ಹೇಳುವಂತೆ ಧನಗೂರಿನ ಉದ್ದಾನಯೋಗೀಶನ ವಂಶಜರಾದ ಇವರು ಸೋಮಶೇಖರ ಶಿವಯೋಗಿಯಿಂದ ಶಿವಲಿಂಗದೀಕ್ಷೆ ಪಡೆದು, ಕುಂಭಪಲ್ಲಿಯ ಬಸವಲಿಂಗನ ಹತ್ತಿರ ವಿದ್ಯಾಭ್ಯಾಸ ಕೈಗೊಂಡು, ಅನಂತರದಲ್ಲಿ ಚಿತ್ರದುರ್ಗದ ಬೃಹನ್ಮಠದ ಕರ್ತಾರರೆನಿಸಿದ ಮುರಿಗೆಯ ಶಾಂತವೀರರಿಂದ ಮಹಾಜ್ಞಾನವನ್ನು ಪಡೆದು ಮುರಿಗಾ ಗುರುಸಿದ್ಧ ಶಿವಯೋಗಿಯಾದರು.

"ಇಮ್ಮಡಿ ಮುರಿಗಾ ಗುರುಸಿದ್ಧರು ಅಮರಗುಂಡದ ಮಲ್ಲಣಾರ್ಯನ ಪರಿಸರದವರು. ಕಾರಣಾಂತರಗಳಿಂದ ಧನಗೂರಿನ ಆಸುಪಾಸಿನ ಗ್ರಾಮಕ್ಕೆ ವಲಸೆ ಬರುತ್ತಾರೆ. ಇವರ ಪೀಳಿಗೆಯಲ್ಲಿ ಶಾಂತಲಿಂಗಸ್ವಾಮಿಗಳೆಂಬುವರಿಗೆ ಇಬ್ಬರು ಗಂಡು ಮಕ್ಕಳು. ಒಬ್ಬ ಶಿವಾಲಂಕಾರಪ್ಪ, ಇನ್ನೊಬ್ಬ ಶಿವಬಸಪ್ಪ. ಶಿವಾಲಂಕಾರಪ್ಪನಿಗೆ ಇಬ್ಬರು ಗಂಡು ಮಕ್ಕಳು ಒಬ್ಬ ಗೌರಿಶಂಕರ ಮತ್ತೊಬ್ಬ ಉಮಾಶಂಕರ, ಅಂತೆಯೇ ಶಿವಬಸಪ್ಪನಿಗೂ ಇಬ್ಬರು ಗಂಡುಮಕ್ಕಳು. ಒಬ್ಬ ಸದಾಶಿವಪ್ಪ, ಇನ್ನೊಬ್ಬ ಪರಶಿವಮೂರ್ತಿ, ಹಿರಿಯ ಮಕ್ಕಳಾದ ಗೌರಿಶಂಕರ ಮತ್ತು ಸದಾಶಿವಪ್ಪ ಸೋದರ ಸಂಬಂಧಿ ಪುತ್ರರಾಗಿದ್ದರೂ, ಪರಸ್ಪರ ಪ್ರೀತಿ - ವಿಶ್ವಾಸದಿಂದ ಬದುಕಿದವರು ವಿದ್ಯೆ ವಿದ್ವತ್ ಎರಡರಲ್ಲಿ ಸಮಾನರಾಗಿದ್ದ ಇವರು ಧನಗೂರು ಮಠದ ಗುರುಗಳಿಂದ ಅನುಭವ ಜ್ಞಾನ ಪಡೆದವರು. ಹೀಗಾಗಿ ಹಿರಿಯವರಾದ ಗೌರೀಶಂಕರರು ಧನಗೂರುಮಠದ ಚಿಕ್ಕವೀರದೇಶಿಕರ ಶಿಷ್ಯರಾಗಿ ಅದೇ ಮಠದ ಸ್ವಾಮಿಗಳಾಗಿ "ಷಡಕ್ಷರದೇವ" ಎಂಬ ಹೆಸರಿನಿಂದ ಪ್ರಖ್ಯಾತರಾದರು. ಮುಂದೆ ಎಳಂದೂರು ಮುದ್ದುರಾಜನ ಅಪೇಕ್ಷೆಯಂತೆ ಎಳಂದೂರಿಗೆ ಬಂದು ಅಲ್ಲಿನ ಮಠದ ಅಧಿಪತಿಗಳಾಗುತ್ತಾರೆ.[೧೭]

ಷಡಕ್ಷರದೇವನು ಧನಗೂರನ್ನು ಬಿಟ್ಟು ಎಳಂದೂರಿಗೆ ಹೋಗಿ ನೆಲಸಿದ ಮೇಲೆ, ಧನುಗೂರು ಮಠದಲ್ಲಿ ತೆರವಾಗಿದ್ದ ಪೀಠಾಧಿಕಾರಕ್ಕೆ ಅದೇ ಪರಂಪರೆಯ ಸೋಮಶೇಖರಶಿವಯೋಗಿಗಳು ಅಧಿಪತಿಗಳಾಗಿ, ಸದಾಶಿವಪ್ಪನಿಗೆ ಚಿಕ್ಕಂದಿನಲ್ಲೆ ಶಿವದೀಕ್ಷೆಯನ್ನು ಕೊಟ್ಟು "ಗುರುಸಿದ್ಧ" ಎಂಬ ಹೆಸರಿನಿಂದ ಕರೆದು ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ಷಡಕ್ಷರದೇವನಿಗಿಂತ ಕಿರಿಯರಾದ ಇವರನ್ನು ಹುಲ್ಲುಹಳ್ಳಿಯ ಮಠಕ್ಕೆ ಅಧಿಪತಿಗಳನ್ನಾಗಿ ನೇಮಿಸುತ್ತಾರೆ. ಈ ಮೇಲಿನ ಉಲ್ಲೇಖಗಳಿಂದ ಇವರ ವಂಶವೃಕ್ಷವನ್ನು ಹೀಗೆ ಗುರುತಿಸಬಹುದು.

ಶಾಂತಲಿಂಗಸ್ವಾಮಿ (ಗುಬ್ಬಿ ಮಲ್ಲಣಾರ್ಯರ ಸಂತಾನ)

- **ಶಿವಾಲಂಕಾರಪ್ಪ (ಪತ್ನಿ ದೇವಿರಮ್ಮ)**
  - **ಗೌರಿಶಂಕರ** → **(ಷಡಕ್ಷರದೇವ)**
  - **ಉಮಾಶಂಕರ**
- **ಶಿವಬಸಪ್ಪ (ಪತ್ನಿ ದಾಕ್ಷಾಯಣಿ)**
  - **ಸದಾಶಿವಪ್ಪ** → **(ಇಮ್ಮಡಿ ಮುರಿಗಾ ಗುರುಸಿದ್ಧ)**
  - **ಪರಶಿಮೂರ್ತಿ**

ಮೇಲಿನ ವಂಶಾವಳಿಯಿಂದ ತಿಳಿದುಬರುವಂತೆ ಷಡಕ್ಷರದೇವನ ಮೂಲಹೆಸರು ಗೌರಿಶಂಕರ, ಇಮ್ಮಡಿ ಮುರಿಗಾ ಗುರುಸಿದ್ಧರ ಹೆಸರು ಸದಾಶಿವಪ್ಪ, ತಂದೆ ಶಿವಬಸಪ್ಪ, ತಾಯಿ ದಾಕ್ಷಾಯಿಣಿ ಇವರಿಬ್ಬರೂ ಒಂದೇ ಕುಟುಂಬಕ್ಕೆ ಸೇರಿದವರೆಂದು ಜಿ.ಎ. ಶಿವಲಿಂಗಯ್ಯನವರು ಅಭಿಪ್ರಾಯಪಡುತ್ತಾರೆ. ಈ ಮಾತಿಗೆ ಪೂರಕವಾಗಿ ಕವಿಗಳೀರ್ವರ ಕೃತಿಗಳಲ್ಲಿಯೂ ಹೇಳಿಕೆಗಳಿವೆ. ಕವಿ ಷಡಕ್ಷರದೇವನು "ಕವಿಕರ್ಣರಸಾಯನ" ಎಂಬ ಕೃತಿಯಲ್ಲಿ "ದನುಃ ಪುರೋದ್ಧಾನ ಯತೀಂದ್ರ ವಂಶಃ"[೧೮] ಎಂದು ಹೇಳಿದರೆ ಇಮ್ಮಡಿ ಮುರಿಗಾಗುರುಸಿದ್ಧರು ತಮ್ಮ ಸಂಸ್ಕೃತ ಕೃತಿ ಪ್ರಭುಲೀಲೆಯಲ್ಲಿ "ತತ್ಕಥಾಃತರಸ್ತತ್ರ ಪೂರ್ದಾತೀತೀ ಧನುಃಪುರಿ,------ ವೀರಶೈವೋಪದೇಷ್ಟಾ ಸಾವಾಸೀದುದ್ದಾನ ಯೋಗಿರಾಟ್ ತಸ್ಯವಂಶಃ ಕರೇ ಜಾತ"[೧೯] ಎಂದು ಹೇಳಿಕೊಳ್ಳುತ್ತಾನೆ. ಇಬ್ಬರೂ ಧನುಗೂರಿನ ಜೊತೆಗೆ ಉದ್ಧಾನಮೂರ್ತಿಯವಂಶಸ್ಥರು ಎಂದು ಹೇಳಿಕೊಂಡಿದ್ದಾರೆ. ಹೀಗಾಗಿ ಇಬ್ಬರ ಜನ್ಮಸ್ಥಳವು "ಧನುಗೂರು" ಎಂದೇ ಹೇಳಬಹುದು.

"ಇಮ್ಮಡಿ ಮುರಿಗಾ ಗುರುಸಿದ್ಧರು ಧನಗೂರಿನಲ್ಲಿ ಜನಿಸಿ, ಅಲ್ಲಿಯೇ ಬಾಲ್ಯ ವಿದ್ಯಾಭ್ಯಾಸವನ್ನು ಪೂರೈಸಿ ನಂತರ ಹುಲ್ಲಹಳ್ಳಿಯ ಮಠಾಧೀಶರಾಗುತ್ತಾರೆ ನಂತರ ಚಿನ್ಮೂಲಾದ್ರಿಯ ಪ್ರಭುಪೀಠ ಪರಂಪರೆಗೆ ದ್ವಿತೀಯ ಜಗದ್ಗುರುಗಳಾಗಿ ಅಧಿಕಾರ ವಹಿಸಿಕೊಂಡ ಮೇಲೆ ಮುರುಘರಾಜೇಂದ್ರರ ಇನ್ನೋರ್ವ ಶಿಷ್ಯರಾದ ಚೀಲಾಳಪ್ಪನವರಿಂದ ಉಂಟಾದ ದ್ವೇಷಾಸೂಯೆ ಹಾಗೂ ಅಹಿತಕರ ಘಟನೆಗಳ ಸರಣಿಯನ್ನು ಸರಿಪಡಿಸುವುದಕ್ಕಾಗಿ ದೇಶಸಂಚಾರ ಕೈಗೊಂಡು ಸ್ವಾದಿಸೀಮೆಗೆ ಬಂದು. ಸ್ವಾದಿಯಿಂದ ಎಸಳೂರು, ಶಿರಸಿ, ಹಳೇಬೀಡಿಗೆ ಬಂದರು. ಸತ್ಯೋಧ್ಧಾರಕ್ಕಾಗಿಯೇ ನಿರಂಜನ ಸಿಂಹಾಸನವೇರಿದ ಇವರು ದುಷ್ಟರನ್ನು ಶಿಕ್ಷಿಸುತ್ತಾ, ಶಿವಾಚಾರದ ಏಳ್ಗೆಯನ್ನು ಮಾಡುತ್ತಾ, ಶರಣು ಬಂದವರನ್ನು ರಕ್ಷಿಸುತ್ತಾ ಆನಂದಪುರಕ್ಕೆ ಬರುತ್ತಾರೆ. ಕೆಳದಿ ಸಂಸ್ಥಾನಕ್ಕೆ ಸೇರಿದ ಮುರಿಗಾಸಂಪ್ರದಾಯದ ಮಠದಲ್ಲಿಯೇ ಅವರು ಲಿಂಗೈಕ್ಯರಾಗುತ್ತಾರೆ. ಇಂದಿಗೂ ಆನಂದಪುರದಲ್ಲಿ ಅವರ ಸಮಾದಿ ಇದ್ದು ಜಾಗ್ರತಸ್ಥಾನವೆನಿಸಿದೆ. ಈ ಸಮಾಧಿಗೆ ಕೆಳದಿ

ಬಸಪ್ಪನಾಯಕ ಅಂಗೀರಸ ಸಂವತ್ಸರದಲ್ಲಿ (೧೭೫೨ ಕ್ರಿಪೂ) ದತ್ತಿಯೊಂದನ್ನು ಕೊಟ್ಟು ವರ್ಷ ವರ್ಷವೂ ರಥೋತ್ಸವವಾಗುವಂತೆ ವ್ಯವಸ್ಥೆಮಾಡಿರುವ ಸಂಗತಿಯನ್ನು ಕೆಳದಿನೃಪ ವಿಜಯವು ದಾಖಲಿಸಿದೆ.[೨೦]

ಕಾಲ : "ಇಮ್ಮಡಿ ಮುರಿಗಾ ಗುರುಸಿದ್ಧರ ಕಾಲವನ್ನು ಕವಿಚರಿತೆಕಾರರು ಸು-೧೬೬೦"[೨೧] ಆಗಬಹುದು ಎಂದಿದ್ದಾರೆ. ಡಾ. ಜಿ. ಮುರುಳಸಿದ್ಧಯ್ಯನವರು ಪ್ರಭುಲೀಲಾ ಮಹಾಕಾವ್ಯದ ಪೀಠಿಕೆಯಲ್ಲಿ "ಕವಿಯ ಕಾಲವನ್ನು ಕ್ರಿ.ಶ.೧೬೮೭-೧೮೨೪"[೨೨] ಎಂದು ನಿರ್ಧರಿಸಿದ್ದಾರೆ. "ಕಪೋತವಾಕ್ಯ" ದ ಸಂಪಾದಕರಾದ ಹುಲ್ಲೂರು ಶ್ರೀನಿವಾಸಜೋಯಿಸರು ಕವಿಯ ಐಕ್ಯಕಾಲವನ್ನು ಕ್ರಿ.ಶ.೧೭೨೯ ಎಂದು ನಿರ್ಧರಿಸಿದ್ದಾರೆ. ಆದರೆ ಈ ಹೇಳಿಕೆಗೆ ಆಧಾರಗಳೇನೆಂಬುದನ್ನು ಸ್ಪಷ್ಟಪಡಿಸಿಲ್ಲ.

ಸ್ವತಃ ಕವಿಯ ಕೃತಿಗಳಾದ ಪಂಚಾಶಿಕೆ. ಬಿಜ್ಜಮಹಾದೇವಿ ಚಾರಿತ್ರ್ಯ, ಹಾಲಾಸ್ಯಪುರಾಣಗಳು ಕವಿಯ ಕಾಲವನ್ನು ನಿರ್ಧರಿಸಲು ಸಹಾಯಕವಾಗುತ್ತವೆ.

ಕವಿ - ಪಂಚಾಶಿಕೆಯನ್ನು ಪೂರ್ಣಗೊಳಿಸಿದ ವಿವರವನ್ನು ಹೀಗೆ ಹೇಳಿರುವನು.

ಸರ್ವಧಾರಿಯಮಾದಸದ
ಖರ್ವವೈಶಾಖದಸಿತೋದ್ಯದ
ಪೂರ್ವಪಕ್ಷೈಕಾದಶಿಯ ಶನಿವಾರದುದಯದೊಳು
ಪರ್ವಪೂರ್ವಕವಾಗಿ ಮುಗಿಯಿ
ತ್ತುರ್ವಿವಿಭುಧರು ಮೆಚ್ಚುವಂದದೆ
ಶರ್ವಶಿವಲಿಂಗೇಶನಾಜ್ಞೆಯೊಳಿದುವೆ ಶುಭಮಸ್ತು"

(ಪಂಚಾಶಿಕೆ ಸಂಧಿ-೧೩, ಪದ್ಯ ೪೯)

ಈ ಪಧ್ಯದಲ್ಲಿ ಬರುವ ವರ್ಷ. ಮಾಸ. ತಿಥಿ ವಾರಗಳು ಕ್ರಿ.ಶ. ೧೭೦೮ ನೇಯ ಎಪ್ರೀಲ್ ೮ನೇ ತಾರೀಖಿಗೆ ಸರಿಹೊಂದುತ್ತದೆ.

ಬಿಜ್ಜಮಹಾದೇವಿ ಚಾರಿತ್ರವು ಕ್ರಿ.ಶ.೧೭೧೨ ರಲ್ಲಿ ಪೂರ್ಣಗೊಂಡಿತೆಂದು ತಿಳಿಯುತ್ತದೆ.

ಹಾಲಾಸ್ಯಪುರಾಣವು - ೧೬೪೨ ಕ್ರಿ.ಶ. ೧೭೨೦ ಕ್ಕೆ ಕಾವ್ಯಪೂರ್ಣವಾಯಿತೆಂದು ತಿಳಿಯುತ್ತದೆ.

"ಮುರಿಗೆ ತಾರಾವಳಿ" ಯಲ್ಲಿ ಮುರಿಗೆ ಶಾಂತವೀರರು ಲಿಂಗೈಕ್ಯರಾದ ಕಾಲ- ೫-೭-೧೭೦೩ ಎಂದು ತಿಳಿಯುತ್ತದೆ. ಅಂದರೆ ಕ್ರಿ.ಶ.೧೭೦೨-೧೭೦೩ ರ ವೇಳೆಗೆ ಇಮ್ಮಡಿ ಮುರಿಗಾ ಗುರುಸಿದ್ಧರು ಪಟ್ಟಾಧಿಕಾರಿಗಳಾಗಿರಬಹುದು. ಆನಂದಪುರದ ಮುರಿಗೆಮಠದ ತಾಮ್ರಶಾಸನವೊಂದರಲ್ಲಿ ಕೆಳದಿಯ ಅರಸು ೩ನೇ ಸೋಮಶೇಖರ ನಾಯಕನ ಸಂಸ್ಥಾನಕ್ಕೆ ಇಮ್ಮಡಿ ಗುರುಸಿದ್ಧರು ಹೋದರು ಎಂಬ ಸಂಗತಿ ತಿಳಿದು ಬರುತ್ತದೆ. ಕೆಳದಿನೃಪ ವಿಜಯದಲ್ಲಿ ಬರುವ ಹೇಳಿಕೆಯನ್ನು ಅನುಸರಿಸಿ

ಹೇಳುವುದಾದರೆ ಕ್ರಿ.ಶ.೧೭೧೭-೧೮ ರಲ್ಲಿ ೩ನೇ ಸೋಮಶೇಖರ ನಾಯಕ ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧರ ಭೇಟಿಯಾಗಿರಬಹುದು.[೨೩]

ಮೇಲಿನ ಈ ಎಲ್ಲ ಹೇಳಿಕೆಗಳಿಂದ ತಿಳಿದು ಬರುವ ಅಂಶವೆಂದರೆ – ಮುರಿಗಾ ಶಾಂತವೀರರು ತಾವು ಲಿಂಗೈಕ್ಯರಾಗುವ ಒಂದೆರಡು ವರ್ಷ ಮುನ್ನವೇ ಮುರಿಗಾ ಗುರುಸಿದ್ಧಸ್ವಾಮಿಗೆ ಪಟ್ಟಗಟ್ಟಿರಬಹುದು. ಅಂದರೆ -೧೭೦೮ ಕ್ಕಿಂತ ಮೊದಲು ಈತ ಇದ್ದನೆಂಬುದು ಸ್ಪಷ್ಟವಾಗುತ್ತದೆ. ಸುಮಾರು ೪೦ ವರ್ಷಗಳ ಕಾಲ ಬದುಕಿರಬಹುದಾದ ಈತ ಕ್ರಿ.ಶ.೧೭೪೯ ರಲ್ಲಿ ಆನಂದಪುರದ ಮುರಿಗೆ ಮಠದಲ್ಲಿ ಲಿಂಗೈಕ್ಯನಾದನೆಂದು ತಿಳಿದುಬರುತ್ತದೆ.

ಗುರು ಪರಂಪರೆ : ಇಮ್ಮಡಿ ಮುರಿಗಾ ಗುರುಸಿದ್ಧರ ಗುರು ಪರಂಪರೆ ಸುದೀರ್ಘವಾದುದು. ಉಜ್ವಲವಾದದು. ಇದು ಎರಡು ಮೂಲಗಳನ್ನು ಹೊಂದಿದೆ. ಒಂದು ಹಾಲಾಸ್ಯಪುರಾಣ, ಶಿವರಹಸ್ಯ ಪುರಾಣ ಹಾಗೂ ಪ್ರಭುಲೀಲೆಗಳಲ್ಲಿ ಉಲ್ಲೇಖವಾದಂತೆ ಧನಗೂರಿನ ಸೋಮಶೇಖರ ಶಿವಯೋಗಿ ದೀಕ್ಷಾಗುರು ಕುಂಭಪಲ್ಲಿಯ ಬಸವಲಿಂಗ ಶಿಕ್ಷಾಗುರು, ಚಿತ್ರದುರ್ಗದ ಮುರಿಗಾ ಶಾಂತವೀರರು ಜ್ಞಾನಗುರು ಎಂದು ತಿಳಿದು ಬರುತ್ತದೆ.

ಶಿವರಹಸ್ಯದ ಪ್ರತಿಕಾಂಡದ ಅಂತ್ಯದಲ್ಲಿ ಉಲ್ಲೇಖಿತವಾದಂತೆ –

"ಪರಮಶಿವಲಿಂಗ ನಿರುಪಮ ಪದಕಮಲ ಮಕರಂದ ಮಧುಕರ
ಹೃದಯನೆನಿಸುವ ಸೋಮಶೇಖರ ಗುರುಕರಾಬ್ಜಭವಂ
ಸದಯ ಗುರುಸಿದ್ಧೇಂದ್ರ ಸಮ್ಮನಿ"

ಎನ್ನುವುದರಿಂದ ಗುರುಸಿದ್ಧರು ಸೋಮಶೇಖರ ಎಂಬ ಗುರುವಿನ ಶಿಷ್ಯರು ಎಂಬುದು ಸ್ಪಷ್ಟವಾಗುತ್ತದೆ.

ಹಾಲಾಸ್ಯಪುರಾಣದಲ್ಲಿ ಇನ್ನೂ ದೀರ್ಘವಾಗಿದೆ.

"ಪ್ರಣವ ಧನುಃ ಪುರಸ್ಥ ಚಿತಿಶಕ್ತಿಸುಪೀಠ ಮಠಾಧಿರಾಜಸಂ
ಪ್ರಣುತ ಭವಾಪಹಾರಿ ಗುರುರಾಡ್ವರ ಸೇವಿತ ಸೋಮಶೇಖರ
ಪ್ರಣುತ ಸುನಾಮದೇಶಿಕ ಪದಾಂಬುಜಮೆನ್ನಯ ಹೃತ್ಸರೋಗ್ರದೊಳ್
ಬಣಿತೆಯಿನೆಯ್ದನಿಂದೊಡಿರದಾಂ ಗುರುರೂಪಮನಾಳೆನುರ್ವಿಯೊಳ್"

(ಕಾಂಡ-೪, ಪದ್ಯ -೧೪೯)

ಹೀಗೆ ಮುಂದುವರಿದು ಕಾಂಡ-೪, ರಲ್ಲಿ ೧೫೦, ೧೫೧ ನೆಯ ಪದ್ಯಗಳಲ್ಲಿ ಉಲ್ಲೇಖವಾದಂತೆ ಧನುಗೂರು ಶ್ರೀ ಮನ್ನಿರಂಜನ ಮಹಾಪೀಠಾಧೀಶನೂ, ಗುರುರಾಡ್ವರ ಸೇವಿತನೂ ಆದ ಸೋಮಶೇಖರದೇಶಿಕರ ಪಾದಕಮಲವು ತನ್ನ ಹೃದಯದಲ್ಲಿ ಸ್ತುತಿಸಲಾಗಿ ಅವರ ಉಪದೇಶದಿಂದ ತಾನು ಈ ಭೂಮಿಯಲ್ಲಿ ಗುರುರೂಪವನ್ನು ಪಡೆದೆನು ಎಂದೂ,

ಕುಂಬಪಲ್ಲಿಯೆಂಬ ಸ್ಥಳದಲ್ಲಿ ನೆಲೆಸಿದ್ದು ಸದಾ "ಸೋಹಂ ಸೋಹಂ" ಎಂಬ ಮಂತ್ರವನ್ನು "ಹಂಸ ಹಂಸ" ಎಂದು ಜಪಿಸುತ್ತ ಚಿದ್ಬಸವೇಶನೆಂಬ ಮಹಾಯೋಗಿಯಿಂದ ತಾನು ಕವಿತ್ವಶಕ್ತಿ ಪಡೆದು ಪಂಡಿತನಾದೆನು ಎಂದು ಹೇಳಿಕೊಳ್ಳುತ್ತಾನೆ. ಸೋಮಶೇಖರದೇಶಿಕ, ಚಿದ್ಬಸವೇಶ ಇವರಿಬ್ಬರ ಕೃಪೆ ಪಡೆದು ನಿಷ್ಠುರವಾಗಿ ಧರ್ಮವನ್ನು ಅನುಸರಿಸುತ್ತಾ ಭೇದ ತಾಮಸಗಳನ್ನು ಹೋಗಲಾಡಿಸುವ ಸೂರ್ಯನಂತೆ , ಈ ಲೋಕದೊಳಗೆ ಪೂಜ್ಯರಾದ ಮುರಿಗೆಯ ಶಾಂತವೀರರ ಅನುಗ್ರಹದಿಂದ ಷಟ್ಸ್ಥಲಮಾರ್ಗವನ್ನು ಪಡೆದು ಪರರೂಪವನ್ನು ಹೊಂದಿದ ಎಂಬುದಾಗಿ ತಿಳಿದುಬರುತ್ತದೆ.

ಪ್ರಭುಲೀಲೆ ಕಾವ್ಯದ ಪ್ರಥಮ ಸರ್ಗದ ೨೯ನೇ ಶ್ಲೋಕದಿಂದ ೩೯ನೇ ಶ್ಲೋಕಗಳವರೆಗೂ ಗುರುಪರಂಪರೆಯ ಬಗ್ಗೆ ವಿವರಗಳನ್ನು ನೀಡಿದ್ದು, ಈ ವಿವರಣೆಯೂ ಮೇಲಿನ ಅಂಶಗಳನ್ನೆ ಒಳಗೊಂಡಿದೆ.

ಇದು ಒಂದು ಮೂಲದ ಗುರುಪರಂಪರೆಯಾದರೆ ಗುರುಸಿದ್ಧರ ಗುರುಪರಂಪರೆಯನ್ನು ಇನ್ನೊಂದು ಮೂಲದಿಂದಲೂ ನೋಡುವ ಸಾಧ್ಯತೆ ಇದೆ. ನಿರಂಜನಪೀಠ ಪರಂಪರೆಯು ಶ್ರೀತೋಂಟದ ಸಿದ್ಧಲಿಂಗರಿಂದ ಬೆಳೆದು ಬಂದು ಕೆಲ ಕಾಲಾಂತರದಲ್ಲಿ ವೈಯಕ್ತಿಕ ಕಾರಣಗಳಿಂದಾಗಿ ಚೀಲಾಳಸಮಯ, ಮುರುಗಾಸಮಯ, ಕುಮಾರಸಮಯಗಳೆಂಬ ಮೂರು ಶಾಖೆಗಳಾಗಿ ಪ್ರವಹಿಸುತ್ತದೆ.

- ತೋಂಟದ ಸಿದ್ಧಲಿಂಗ
  - ಬೋಳಬಸವೇಶ್ವರ
    - ಗೂಳೂರು ಸಿದ್ಧಲಿಂಗಯ್ಯ
      - ಗುಮ್ಮಳಾಪುರದ ಸಿದ್ಧಲಿಂಗಯ್ಯ
        - ಗಗನದಾರ್ಯ (ಉದ್ಧಾನಮೂರ್ತಿ)
          - ಚೀಲಾಳಸಮಯ (ಚೀಲಾಳಪ್ಪ)
          - ಕಟ್ಟಿಗೆಹಳ್ಳಿ ಸಿದ್ಧಲಿಂಗ
            - ಮುರುಘಾ ಸಮಯ
              - ಮುರಿಗೆ ಶಾಂತವೀರ
                - ಇಮ್ಮಡಿಗುರುಸಿದ್ಧ
                  - ಕಪ್ಪಿನಂಜೇಸ್ವಾಮಿ
                  - ಸ್ವಾದಿಚೆನ್ನವೀರ
                    - ಶಿರಹಟ್ಟಿ ಸಿದ್ಧಲಿಂಗಸ್ವಾಮಿ
                  - ಮಹಾಂತಸ್ವಾಮಿ
            - ಕುಮಾರಸಮಯ
              - ನೋಡಸಿದ್ಧಲಿಂಗ
                - ಕುಮಾರದೇಶಿಕೇಂದ್ರ

ಮುಂತಾದವರ ಸುದೀರ್ಘವಾದ ಮತ್ತು ಉಜ್ವಲವಾದ ಈ ಗುರುಶಿಷ್ಯ ಪರಂಪರೆಯಲ್ಲಿ ಬರುವ ಇಮ್ಮಡಿಗುರುಸಿದ್ಧರು ಧನುಗೂರುಮಠದ ವೀರಸಿಂಹಾಸನ ಪೀಠ ಪರಂಪರೆ ಹಾಗೂ ನಿರಂಜನ ಪೀಠಪರಂಪರೆ ಎರಡರಲ್ಲಿ ಸೇರಿಕೊಂಡಿರುವುದು ಅವರ ವ್ಯಕ್ತಿತ್ವ ಬೆಳವಣಿಗೆಯ ದ್ಯೋತಕವಾಗಿದೆ.

'ವ್ಯಕ್ತಿತ್ವ' :

"ಗುರುಸಿದ್ದರಂತಹ ಘನವಿದ್ವಾಂಸರು, ವೀರರು ಮತ್ತು ವಿರಾಗಿಗಳು ಮಠದ ಸ್ವಾಮಿಗಳಾದರೆ ಸುವರ್ಣಯುಗ ಬಹಳ ದೂರವಿಲ್ಲ" ಎಂಬ ಡಾ. ಎಲ್. ಬಸವರಾಜು ಅವರ ಹೇಳಿಕೆ ಗುರುಸಿದ್ದರ ವ್ಯಕ್ತಿತ್ವಕ್ಕೆ ಪ್ರಮಾಣಪೂರ್ವಕ ಅನಿಸಿಕೆಯಾಗಿದೆ.

ಚಿತ್ರದುರ್ಗ ಬೃಹನ್ಮಠದ ಪೀಠಾಧಿಪತಿಗಳಾಗಿ, ವೀರಶೈವಧರ್ಮದ ಆದ್ಯಂತ ವ್ಯಕ್ತಿಗಳಾಗಿ, ಸಾಮಾಜಿಕ ಸಮಸ್ಯೆಗಳ ಪರಿಹಾರಕರಾಗಿ, ವಿದ್ವತ್ ಪರಿಣತರಾಗಿ, ಪರಮತವಾದಿಗಳನ್ನು ಸ್ವಮತ ವಿರೋಧಿಗಳನ್ನು ನಿಗ್ರಹಿಸಿ, ತಮ್ಮ ಜಂಗಮ ಶಕ್ತಿಯನ್ನು ಎತ್ತಿ ತೋರಿದವರು ಇಮ್ಮಡಿ ಮುರಿಗಾ ಗುರುಸಿದ್ಧರು.

ಅಜ್ಞಾತ ಕವಿಯೋರ್ವನು ತನ್ನ ಎದೆಯಾಳದ ಭಕ್ತಿಕುಸುಮಾಂಜಲಿಯನ್ನು ನುಡಿಕಾಣಿಕೆಯಾಗಿ ಸಮರ್ಪಿಸುವ ಮೂಲಕ ಗುರುಸಿದ್ಧರ ವ್ಯಕ್ತಿತ್ವವನ್ನು ಹೀಗೆ ವಿವರಿಸಿದ್ದಾನೆ.

"ಬಾರೆನ್ನಯ್ಯನೆ ಭಾಗ್ಯನಿಧಿಯೆಂಬಾ ಭಕ್ತ ಚಿಂತಾಮಣಿ
ಬಾರೆನ್ನಾದಿ ಅನಾದಿ ಕರ್ತೃ ಸತತಂ ಬಾರೆನ್ನ ರಕ್ಷಿಪ್ಪನೇ
ಬಾರೆನ್ನಭವವಟ್ಟಿ ಮೆಟ್ಟಿದಭವಾ ಬಾ ಮನ್ಮನೋಪ್ರಿಯಾ
ಬಾರ ಷಡುಸ್ಥಲ ಚಕ್ರವರ್ತಿ ಮುರಿಗಾ ಅಂಗಂ ಗುರುಸಿದ್ಧನೆ ॥೧॥
ಬಾರಾ ಬ್ರಹ್ಮಕಪಾಲ ವೇಣು ಡಮರಾ ಬಾ ಶೂಲವಾಂತಿಪ್ಪನೇ
ಬಾರಾ ತ್ರಿಪುರವ ಯೆಚ್ಚುಸುಟ್ಟು ಖಳರಂ ಬಾ ಗರ್ವವುಗ್ಗಿಪನೇ
ಬಾರಾ ಬಾ ಸುರರಟ್ಟಿ ಮುಟ್ಟಿ ಸುಡುವಾ ಬಾ ನಂಜುಂಡಿಪ್ಪನೇ
ಬಾರಾ ವ್ಯಾಘ್ರಜನುಟ್ಟ ದಿಟ್ಟ ಮುರಿಗಂ ಲಿಂಗಾ ಗುರುಸಿದ್ಧನೇ ॥೨॥"[೨೪]

ಹೀಗೆ ಒಟ್ಟು ಎಂಟು ಪದ್ಯಗಳಲ್ಲಿ ಗುರುಸಿದ್ಧರನ್ನು ಭಾಗ್ಯದನಿಧಿ, ಭಕ್ತಚಿಂತಾಮಣಿ, ಅನಾದಿಕತ್ರು ಮನ್ಮನೋಪ್ರಿಯ, ಷಟ್ಸ್ಥಲ ಚಕ್ರವರ್ತಿ, ರಾಜೇಂದ್ರ ಕಿರೀಟ, ಗರ್ವವಿಚ್ಛೇದಕ, ಗಜಪ್ರಿತ್ಯ ಅಂಧಕ ಸಂಹಾರ, ಫಣಿರಾಜ ಕರ್ಣಕಟಿಕಾ, ಹರಿಮದನಾರಿ, ಬ್ರಹ್ಮಕಪಾಲ, ಶೂಲವಾಂತಕ, ತ್ರಿಪುರಸಂಹಾರ, ನಂಜುಂಡ, ಪಂಕಜನಾಭನ ಕಣ್ಣು ನೇತ್ರಗಣ್ಣ, ಶಿವನ ಅರ್ಧಾಂಗಿ , ಬಾಣನ ಬಾಗಿಲ ಕಾಯ್ದವ, ಚೆನ್ನನ ಅಂಬಲಿಗೆ ಮನಸುಗೊಟ್ಟವ, ಗೊಲ್ಲಾಳನಿಗೆ ಒಲಿದಾತ ಎಂದು ಶಿವನ ಪಂಚವಿಂಶತಿ ಲೀಲೆಗಳೊಡನೆ ಗುರುಸಿದ್ಧರನ್ನು ಹೋಲಿಸಿ ಅಭೇಧ್ಯವಾಗಿ ಕಾಣುತ್ತಾನೆ. ಅಲ್ಲದೆ ಅವನ ಬಿನ್ನಹಗಳನ್ನು ಪ್ರೀತಿಯಿಂದ ಆಲಿಸಿದರೆ ನನ್ನ ದೇಹವನ್ನು ನೀಡುವೆ. ನೀನು ಸಂತೋಷಗೊಳ್ಳುವುದಾದಲ್ಲಿ ಮನಮುಟ್ಟಿ ಸದಾಕಾಲ ನಿನ್ನಯ ಸೇವೆಯನ್ನು ಮಾಡುವೆ ಎನ್ನುತ್ತಾನೆ. ಅಜ್ಞಾತ ಕವಿಯ ಈ ಸ್ತವನವು ಇಮ್ಮಡಿ ಗುರುಸಿದ್ಧರ ಭವ್ಯ-ದಿವ್ಯ ವ್ಯಕ್ತಿತ್ವಕ್ಕೆ ಸಾಕ್ಷಿಯಾದಂತಿದೆ.

ಕಾಶೀಗುರುಲಿಂಗ ಶಿವಯೋಗಿಯು ತನ್ನ "ಶಿವಸೂತ್ರಟೀಕೆ" ಗ್ರಂಥದ ಆದಿ ಮತ್ತು ಅಂತ್ಯದಲ್ಲಿ ಅನೇಕ ವಿಶೇಷಣಗಳಿಂದ ಸ್ತುತಿಸಿರುವನು.

ಆದಿಯಲ್ಲಿ –

ದ್ವಿತೀಯ ಮುರಿಗಾಸಂಜ್ಞಂ ಷಟ್ಸ್ಥಲಜ್ಞಾನವರ್ತಿನಂ
ಸರ್ವತತ್ವವಿದಂವದೇ ಗುರುಸಿದ್ಧೇಂದ್ರಯೋಗಿನಾಂ ॥೧॥
ಗುರುಲಿಂಗಾಭಿಧೇಯೇನ ಮಾಯಾಲೋಕಹಿತಾರ್ಥಿನಾ
ರಚ್ಯತೇಶಿವಸೂತ್ರಾಣಾಂ ಟೀಕಾಕರ್ನಾಟಭಾಷಯಾ ॥೨॥

ಅಂತ್ಯದಲ್ಲಿ –

ಶ್ರೀಮದ್ದೇಶಿಕೇಂದ್ರ ಕೃಪಾ ಪಾಂಗಸಾಂದ್ರ ಚಂದ್ರಿಕಾದರ
ದಳಿತ ಹೃದಯ ಕೈರವ ಸಕಲವೇದಾಗಮಪುರಾಣೇತಿ
ಹಾಸಾದಿ ನಾನಾಶಾಸ್ತ್ರಕೋವಿದ ವೀರಮಾಹೇಶ್ವರ ದ್ವಿತೀಯ
ಮುರಿಗಾಖ್ಯ ಗುರುಸಿದ್ಧಯೋಗೀಂದ್ರ ಬೋಧಿತ ವಿರೂಪಾಕ್ಷ
ಪಂಚಾಶಿಕಾಗಮಾದಿತತ್ವ ಪ್ರಕರಣಾರ್ಥಶಾಲಿನಾಶಂಭು
ಲಿಂಗ ಸಾಕ್ಷಾತ್ಕಾರ ಸಕಲಶರೀರೇಂದ್ರಿಯನವದ್ವಾರೇಣ
ವೀರಮಾಹೇಶ್ವರಾಧ್ಯ ಪ್ರವರ್ತಕೇನ ಕಾಶೀಗುರುಲಿಂಗಾಖ್ಯ
ಶಿವಯೋಗೀಶ್ವರೇಣ ವಿರಚಿತಾಯಾಕರ್ನಾಟಕಭಾಷಾಟೀಕಾಯಂ"

ಎಂದಿರುವನು. ಮೇಡ್ಲೇರಿ ಶಿವಲಿಂಗನು ತನ್ನ ಸ್ವರವಚನಗಳಲ್ಲಿ ಅಭಿಮಾನದ ಮಹಾಪೂರವನ್ನೇ ಹರಿಸಿದ್ದಾನೆ.[೨೫]

ಮುರಿಗಾಸಂಪ್ರದಾಯದ ಶ್ರೀಶಾಂತವೀರರು ಮತ್ತು ಇಮ್ಮಡಿ ಮುರಿಗಾಗುರುಸಿದ್ಧರು ಇವರಿಬ್ಬರೂ ಕಾರಣಿಕ ಪುರುಷರೆಂಬಂತೆ ತನ್ನ ಹಾಡುಗಳಲ್ಲಿ ಚಿತ್ರಿಸಿದ್ದಾನೆ. ಇಮ್ಮಡಿಗುರುಸಿದ್ಧನನ್ನು ಹಿರಿಯ ಅಯ್ಯನೆಂದು ತಿಳಿದು ಶಿವನೊಡನೆ ಸಮೀಕರಿಸಲು ಯತ್ನಿಸುತ್ತಾನೆ. ಈಶ್ವರನಿಗೆ ಸಂಬಂಧಿಸಿದ ಅರ್ಧನಾರೀಶ್ವರ ಕಲ್ಪನೆ, ತ್ರಿಪುರಸಂಹಾರ, ಸಮುದ್ರಮಥನ ಮೊದಲಾದ ಲೀಲೆಗಳನ್ನು ಶಿವನ ಅಂಶವೆಂದು ಭಾವಿಸಿ ಇವೆಲ್ಲವುಗಳನ್ನು ಗುರುಸಿದ್ಧನಿಗೆ ಆರೋಪಿಸಿದ್ದಾನೆ.

ಸೋದೆಯ ಸದಾಶಿವರಾಯನೂ ತನ್ನ ಸ್ವರವಚನಗಳಲ್ಲಿ ಇಮ್ಮಡಿಗುರುಸಿದ್ಧರನ್ನು "ಶರಣಾಗತ ಪರಿಪಾಲಕ, ಭಕ್ತಪ್ರಿಯ ಪರ್ವತಮಯ, ಸರ್ವಜ್ಞ, ಕವಿತಾಧೀಶ, ಕಾವ್ಯರಚನಾನಿಪುಣ, ಸತ್ಯಪ್ರಿಯ, ಕರುಣಾಸಾಗರ ಎಂದು ಅವರ ವ್ಯಕ್ತಿತ್ವದ ಒಂದೊಂದು ಮುಖವನ್ನು ಪರಿಚಯಿಸುತ್ತಾನೆ.

ಕ್ರಿಶ. ೧೮೫೦ ರಲ್ಲಿ ರಚಿತವಾದ ಮಹದೇವಕವಿಯ 'ಮಹಲಿಂಗೇಂದ್ರವಿಜಯ'ದಲ್ಲಿ ನಿರೂಪಿತವಾದಂತೆ ಇಮ್ಮಡಿ ಗುರುಸಿದ್ಧರ ವ್ಯಕ್ತಿತ್ವವನ್ನು ಹೀಗೆ ರೂಪಿಸಬಹುದು. "ಚಿನ್ಮೂಲಾದ್ರಿಯ ಬೃಹನ್ಮಠದ ಶಾಂತವೀರಸ್ವಾಮಿಗಳಿಂದ ಇಮ್ಮಡಿ ಮುರಿಗಾ ಗುರುಸಿದ್ಧದೇಶಿಕನೆಂಬ ಹೆಸರುಪಡೆದು ಪಟ್ಟಾಧಿಕಾರವನ್ನು ಪಡೆದ ಮೇಲೆ, ನಾನಾದೇಶದ ಭಕ್ತರ ಮಾಹೇಶ್ವರ ಸಂದೋಹಕ್ಕೆ ಕರುಣಗರೆಯುತ್ತ ಚಿತ್ರದುರ್ಗದ ಮಹಾಮಠದಲ್ಲಿ ಶೋಭಿಸಿರಲು ಹರಪನಹಳ್ಳಿಯಲ್ಲಿದ್ದ ಮುರಿಗೇಂದ್ರ ರಾಜೇಂದ್ರರ ಮತ್ತೋರ್ವ ಶಿಷ್ಯನಾದ ಚೀಲಾಳನೆಂಬುವನು ಗುರುಸಿದ್ಧರ ಅತುಲಸತ್ಕೀರ್ತಿಯನ್ನು ಕೇಳಿ ಸಹಿಸಲಾರದೆ ಮುನಿಸಿಕೊಂಡು "ಮುರಿಗೇಶ್ವರನು ಮುಖ್ಯ ಚರಮೂರ್ತಿಯಾದ ನನ್ನನ್ನು ಅಲಕ್ಷಿಸಿ, ಓರ್ವಮರಿಗೆ ಪಟ್ಟಗಟ್ಟಿ ನನಗೆ ಅವಮಾನ ಮಾಡಿದನು" ಎಂದು ಹೀನೈಸಿ ನುಡಿದು ದುರ್ಗಕ್ಕೆ ಬಂದು ಗುರುಸಿದ್ಧಸ್ವಾಮಿಗೆ ಎದುರಾಳಿಯಾಗಿ ನಿಂತು ದುರ್ವರ್ತನೆಯಲ್ಲಿ ತೊಡಗಿದನು. ಚೀಲಾಳನ ದುರಂಹಕಾರವನ್ನು ಕಂಡು ಈ ಅನುಚಿತವರ್ತನೆ ಶಿಷ್ಯವರ್ಗಕ್ಕೆ ಸಲ್ಲದು ಎಂದು ಅವನಿಗೆ ಬಹಿಷ್ಕಾರ ಹಾಕಿ ಮಠದಿಂದ ಹೊರದಬ್ಬಿಸಿದರು. ಗುರುವಾಜ್ಞೆ ಮೀರಿದ ಚೀಲಾಳನನ್ನು ಚಿತ್ರದುರ್ಗದರಸು ಬಿಚ್ಚುಗತ್ತಿ ಭರಮನಾಯಕನು ತನ್ನ ದೇಶದಿಂದ ಹೊರಗಟ್ಟಿದನು. ಹರಪನಳ್ಳಿಗೆ ಬಂದ ಚೀಲಾಳನನ್ನು ಆ ಊರಿನ ಒಡೆಯನು ಮನ್ನಿಸಿ ಮಠಮಾನ್ಯಗಳನ್ನು ಕಟ್ಟಿಸಿಕೊಟ್ಟನು.

ಮುರಿಗೆ ಶಾಂತವೀರರ ಮತ್ತೋರ್ವ ಶಿಷ್ಯಕುಮಾರ ಈತನೂ ಗುರುಸಿದ್ಧದೇಶಿಕನ ಉನ್ನತಿಯನ್ನು ನೋಡಿ ಸಹಿಸದೆ ಸ್ವಾದಿಗೆ ಬಂದು ಅದರರಸು ಸದಾಶಿವನಿಗೆ ಇಲ್ಲಸಲ್ಲದ್ದನ್ನು ಹೇಳಿ ಅವನ ಮನಸ್ಸನ್ನು ಕೆಡಿಸಿ ತನ್ನವರನ್ನಾಗಿ ಮಾಡಿಕೊಂಡನು. ಕುಹಕಿಗಳ ಗರ್ವವನ್ನು ಮುರಿಯಲೆಂದೇ ಗುರುಸಿದ್ಧದೇಶಿಕೇಂದ್ರರು ದೇಶಸಂಚಾರ ಕೈಗೊಂಡು ಬರುತ್ತಿರುವಾಗ ಸ್ವಾದಿಸೀಮೆಗೆಬರುತ್ತಾರೆ. ಕುಮಾರಪ್ಪನಿಂದ ಕಿವಿಕಚ್ಚಿಸಿಕೊಂಡ ರಾಜ ಇವರನ್ನು ಸ್ವಾಗತಿಸದೆ ಹೋದಾಗ ಗುರುಸಿದ್ಧರು ರಾಜನಿಗೆ ಅರಿವುಂಟಾಗುವಂತೆ ವಿಷಯವನ್ನು ಪ್ರಸ್ತಾಪಿಸಿ, ಮನಪರಿವರ್ತನೆ ಮಾಡಿದರು ಜ್ಞಾನೋದಯವಾದ ರಾಜ ಕಂಪಿತನಾಗಿ ಗುರುಸಿದ್ದರ ಪಾದತಲಕ್ಕೆರಗುವನು. ಬಹಿಷ್ಕೃತನಾದ ಕುಮಾರಪ್ಪ ಹುಬ್ಬಳ್ಳಿಗೆ ಬಂದು ಸೆಟ್ಟಿಯನ್ನು ಭಕ್ತನನ್ನಾಗಿ ಮಾಡಿಕೊಂಡನು. ಅಲ್ಲಿಂದ ಗುರುಸಿದ್ಧರು ಎಸಳೂರು, ಶಿರಸಿ ಹಳೇಬಿಡು ಮಾರ್ಗವಾಗಿ ಅನಂದಪುರಕ್ಕೆ ಬಂದು ಅಲ್ಲಿ ಲಿಂಗೈಕ್ಯರಾದರು ಎಂಬುದಾಗಿ ವಿವರಿಸಿದ್ದಾನೆ.

ಹೀಗೆ ಇಮ್ಮಡಿ ಮುರಿಗಾ ಗುರುಸಿದ್ಧನೊಬ್ಬ ಪರಮವಿರಕ್ತನಾಗಿ, ಪ್ರಸಿದ್ಧ ಪೀಠಾಧಿಪತಿಯಾಗಿ. ಶ್ರೇಷ್ಠಕವಿಯಾಗಿ ಅನುಭವಿಯಾಗಿ, ಶಿವಯೋಗಿಯಾಗಿ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಿಕವಾಗಿ ಉಜ್ವಲ ವ್ಯಕ್ತಿತ್ವವನ್ನು ಮೆರೆದಿದ್ದಾನೆ.

ಕೃತಿಗಳು :

೧೭-೧೮ನೆಯ ಶತಮಾನದ ವೀರಶೈವ ಕವಿಗಳಲ್ಲಿ ಪ್ರಮುಖರು ಇಮ್ಮಡಿ ಮುರಿಗಾ ಗುರುಸಿದ್ಧರು, ಧರ್ಮದೊಡನೆ ಸಾಹಿತ್ಯವನ್ನು ಸಮಪ್ರಮಾಣದಲ್ಲಿ ಬೆರಸಿ ಧಾರ್ಮಿಕ ಸಾಹಿತ್ಯಿಕ ಲೋಕಗಳೆರಡರಲ್ಲಿಯೂ ಕೃಷಿಗೈದಿರುವರು. ಧಾರ್ಮಿಕ, ರಾಜಕೀಯ ಪರಿಸ್ಥಿತಿಗಳೆರಡೂ ಪ್ರತಿಕೂಲವಾಗಿದ್ದಾಗಲೂ ಸಹಿತ ಹೋರಾಡಿ, ಸಂಘರ್ಷದಲ್ಲಿಯೂ ಅಮೂಲ್ಯ ಸಾಹಿತ್ಯವನ್ನು ಸೃಷ್ಟಿಸಿದ್ದಾರೆ. ಹಲವಾರು ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡ ಇವರು ಹಲವಾರು ಸಾಹಿತ್ಯರೂಪಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಕೆಲವು ಸರಳತೆಯಿಂದ ಕ್ಲಿಷ್ಟತೆಯೆಡೆಗೆ, ಕ್ಲಿಷ್ಟತೆಯಿಂದ ಸರಳತೆಯೆಡೆಗೆ ಸಾಗಿಬಂದಿವೆ. ವೈವಿಧ್ಯಮಯವೂ, ವಿಶಿಷ್ಟವೂ, ವಿಪುಲವೂ ಆಗಿರುವ ಇವರ ಒಟ್ಟು ಕೃತಿಗಳನ್ನು ಪ್ರಕಟಿತ, ಅಪ್ರಕಟಿತ ಕೃತಿಗಳು ಎಂದು ವಿಭಜಿಸಿ ಹೀಗೆ ಹೆಸರಿಸಲಾಗಿದೆ.

ಪ್ರಕಟಿತ ಕೃತಿಗಳು :

೧) ಶೂನ್ಯಮಂತ್ರಗೋಪ್ಯ
೨) ಕೈವಲ್ಯಸೋಪಾನನಾಮ್ಯೈಕೋತ್ತರ ಶತಸ್ಥಲ
೩) ಶಿವಲಿಂಗಾಂಕಿತ ಸ್ವರವಚನಗಳು
೪) ಹಾಲಾಸ್ಯಪುರಾಣ
೫) ಪಂಚಾಶಿಕೆ
೬) ಮಿಶ್ರಾರ್ಪಣ
೭)ಯೋಗಕಲಾಪಸಾರ
೮) ಶಿವಲಿಂಗ ಮಹಿಮಾ ಷಟ್ಪದಿ
೯)ಮುರಿಗೆ ತಾರಾವಳಿ
೧೦) ಶಿವಲಿಂಗ ನಾಂದ್ಯ
೧೧) ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ
೧೨) ಪಾದಸ್ತೋತ್ರ
೧೩) ಕೊರವಂಜಿಕಟ್ಟಳೆ
೧೪) ಶಬ್ದರತ್ನಾಕರ
೧೫) ಪ್ರಭುಲೀಲಾ (ಸಂ)

ಅಪ್ರಕಟಿತ ಕೃತಿಗಳು :

೧) ಹೋಳಿಪದ
೨) ಶಿವಮತ ಪ್ರತಿಷ್ಠಾಪನದ ವಾರ್ಧಕ
೩) ಶಿವಾಧಿಕ್ಯ ತಿಲಕ
೪) ಶಿವರಹಸ್ಯ ಪುರಾಣ
೫) ಪರಮತ ಖಂಡನದ ವಾರ್ಧಕ
೬) ಸ್ಕಂದಕಲ್ಯಾಣ
೭) ಬಿಜ್ಜಮಹಾದೇವಿಚಾರಿತ್ರ್ಯ
೮) ಶಿವಜಲಂಧರ
೯) ಉದ್ಧರಣೆ
೧೦) ಕರಣಹಸಿಗೆ ಟೀಕೆ
೧೧) ನಂದೀಶ್ವರ ಜಯದಂಡಕ (ಸಂ)
೧೨)ಚಾಮರ ವೃತ (ಸಂ)

ಈ ಎಲ್ಲ ಕೃತಿಗಳ ವಸ್ತು, ರೂಪ, ಭಾಷೆ, ಛಂದಸ್ಸು ಕುರಿತಾಗಿ ಮುಂದೆ ವಿವರಿಸಲಾಗಿದೆ.

(೧) **ಶೂನ್ಯಮಂತ್ರಗೋಪ್ಯ : "ಶಿವಲಿಂಗ"** ಎಂಬ ಅಂಕಿತದಲ್ಲಿ ರಚನೆಯಾದ '೨೦೯' ವಚನಗಳ ಸಂಯೋಜಿತ ಕೃತಿ-ಶೂನ್ಯಮಂತ್ರಗೋಪ್ಯ ವೀರಶೈವದಲ್ಲಿ ಮಂತ್ರವನ್ನು ಗುರುವು ಶಿಷ್ಯನಿಗೆ ಕರ್ಣದಲ್ಲಿ ಗೌಪ್ಯವಾಗಿ ಹೇಳುತ್ತಾನೆ. ಆದ್ದರಿಂದ ಇದಕ್ಕೆ ಮಂತ್ರಗೋಪ್ಯ ಎಂದು ಕರೆಯಲಾಗುತ್ತದೆ.

ಮಂತ್ರ ಗೋಪ್ಯಗಳಿಗೆ ಧಾರ್ಮಿಕ ರಂಗದಲ್ಲಿ ಗಮನಾರ್ಹವಾದ ಸ್ಥಾನವುಂಟು. ವೀರಶೈವ ಸಂಪ್ರದಾಯ, ಪರಂಪರೆಗಳಿಗನುಗುಣವಾಗಿ ಧರ್ಮಶಾಸ್ತ್ರಗಳನ್ನು ದರ್ಮಾಧಿಕಾರದ ಕುರುಹಾಗಿ ವಿರಕ್ತರುಗಳಿಗೆ ನೀಡಲಾಗುತ್ತಿತ್ತು ಇವುಗಳಲ್ಲಿ ಮಂತ್ರಗೋಪ್ಯಕಟ್ಟುಗಳೂ ಇರುತ್ತಿದ್ದುದು ಅವುಗಳಿಗಿರುವ ಪೂಜ್ಯಸ್ಥಾನವನ್ನು ಎತ್ತಿ ತೋರಿಸುತ್ತದೆ. ಮಂತ್ರಗೋಪ್ಯಗಳೂ ತಮ್ಮದೇ ಲಕ್ಷಣಗಳನ್ನು ಒಳಗೊಂಡಿದ್ದು, ಇಲ್ಲಿಯವರೆಗೆ ದೊರೆತ ಮಂತ್ರಗೋಪ್ಯಗಳನ್ನು ಹೀಗೆ ಸಂಗ್ರಹಿಸಬಹುದು.

೧) ಪ್ರಭುದೇವರ ಮಂತ್ರಗೋಪ್ಯ

೨) ಹಿರಿಯ ಮಂತ್ರಗೋಪ್ಯ

೩) ಪದಮಂತ್ರಗೋಪ್ಯ

೪) ಹಡಪದ ಅಪ್ಪಣ್ಣಗಳು ನಿರೂಪಿಸಿದ ಮಂತ್ರಗೋಪ್ಯ

೫) ಹಡಪದ ಅಪ್ಪಣ್ಣಗಳ ಮಡದಿ ಲಿಂಗಮ್ಮನವರು ನಿರೂಪಿಸಿದ ಮಂತ್ರಗೋಪ್ಯ

೬) ಶಿವಕವಿ ಸುಂದರನ ಮಂತ್ರಗೋಪ್ಯ

೭) ನಿರಾಳಮಂತ್ರಗೋಪ್ಯ

ಮೇಲೆ ಉಲ್ಲೇಖಿಸಿಲಾದ ಏಳು ಮಂತ್ರಗೋಪ್ಯಗಳಿಂದ ಭಿನ್ನವಾಗಿ, ನಿರಾಳಮಂತ್ರಗೋಪ್ಯದ ಮಾರ್ಗವನ್ನು ಅನುಸರಿಸಿದ ಕೃತಿ ಪ್ರಸ್ತುತ ಶೂನ್ಯಮಂತ್ರಗೋಪ್ಯ ಇದರಲ್ಲಿ ೨೦೯ ವಚನಗಳಿದ್ದು, ಇಲ್ಲಿ ಬರುವ ವಚನಗಳೆಲ್ಲವೂ ಬಿಡಿಬಿಡಿಯಾದ ಮುಕ್ತಕಗಳಾಗಿದ್ದರೂ ಮತ್ತೆಯಂ, ಬಳಿಕ್ಕಂ, ಮತ್ತಂ ಎಂದು ಹೇಳಿಕೊಳ್ಳುತ್ತಾ ಒಂದಕ್ಕೊಂದು ಸರಪಳಿ ರೀತಿಯಲ್ಲಿ ಬೆಸೆದು ಕೊಂಡು ಹೋಗಿವೆ. ಪ್ರತಿಯೊಂದು ವಚನದ ಅಂತ್ಯದಲ್ಲಿ ಪರಮಶಿವಲಿಂಗೇಶ್ವರ, ಪರಮಶಿವಲಿಂಗಯ್ಯ, ಪರಮಶಿವಲಿಂಗ, ಪರಶಿವಲಿಂಗಯ್ಯ ಎಂಬ ಅಂಕಿತವನ್ನು ಬಳಸಲಾಗಿದೆ.

ವೀರಶೈವದ ತತ್ವಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ವಿವರಿಸುವ ಈ ಕೃತಿಯಲ್ಲಿ ವೀರಶೈವಧರ್ಮದ ವಿಶಿಷ್ಟ ಕೊಡುಗೆಯಾಗಿರುವ ಷಟ್ಸ್ಥಲ, ಅಂಗಸ್ಥಲ, ಲಿಂಗಸ್ಥಲ, ಶಕ್ತಿಗಳು, ಹಸ್ತಗಳು, ಅಷ್ಟವಿಧ ಹಾಗೂ ಏಕಾದಶವಿಧ ಸಕೀಲಗಳು, ಹಸ್ತಗಳು, ಅಷ್ಟವಿಧ ಹಾಗೂ ಏಕಾದಶವಿಧ ಸಕೀಲಗಳು, ಷಡ್ವಿಧ ಕ್ರಿಯಾರ್ಪಣ, ವರ್ಗಭೇದಗಳು, ಪ್ರಣಮಗಳು, ಪಂಚಬ್ರಹ್ಮಗಳು, ಪಂಚಬ್ರಹ್ಮಮಂತ್ರ, ಷಡುಗಮಂತ್ರ, ಪಂಚಾಸ್ತ್ರ, ಮಹಾಮಂತ್ರ ಷಟ್ಚಕ್ರಗಳು ಅವುಗಳ ಅಧಿ ದೇವತೆಗಳು ಈ ಮೊದಲಾದವುಗಳ ವಿವರಣೆ ಇದೆ.

ಇವೆಲ್ಲವುಗಳನ್ನು ಆಚರಿಸಿ ಸಿದ್ಧಿ ಪಡೆಯತಕ್ಕವನೇ ವಿಶೇಷ ವೀರಶೈವ, ಅವನೇ ಶೂನ್ಯವನ್ನು ಸಂಪಾದಿಸಲು ಯೋಗ್ಯ ಎಂದು ಹೇಳಲಾಗಿದೆ ಇಡೀ ವೀರಶೈವ ತತ್ವವನ್ನೆಲ್ಲ ಶೂನ್ಯವೆಂದು ಭಾವಿಸಿ, ಅದನ್ನು ಗೋಪ್ಯವಾಗಿ ಗುರುಮುಖೇನ ಅನುಷ್ಟಾನಕ್ಕೆ ತಂದುಕೊಳ್ಳಬೇಕೆಂಬ ಆಶಯದ ಹಿನ್ನೆಲೆಯಲ್ಲಿ ಕೃತಿ ರಚಿಸಲಾಗಿದೆ.

'ಸ್ಥಲ'ದಲ್ಲಿ ಅಂಗಸ್ಥಲ, ಲಿಂಗಸ್ಥಲ ಎಂದು ಎರಡುವಿಧ. ಅಂಗಸ್ಥಲದಲ್ಲಿ ಭಕ್ತನು ಯಾವರೀತಿ ಆಚರಿಸಬೇಕೆಂಬ ವಿವರಣೆ ಇದ್ದರೆ, ಲಿಂಗಸ್ಥಲದಲ್ಲಿ ಈ ಆಚರಣೆಗಳಿಂದ ಮನುಷ್ಯನ ಮೇಲೆ ಯಾವ ಪರಿಣಾಮಗಳಾಗುತ್ತವೆ ಎಂಬುದರ ವಿವರಣೆ ಇದೆ. ಒಟ್ಟಾರೆಯಾಗಿ ಇಲ್ಲಿಬರುವ ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

ಅಂಗಸ್ಥಲದಲ್ಲಿ -ಮೂರುವಿಧ, ಲಿಂಗಸ್ಥಲದಲ್ಲಿ–ಮೂರುವಿಧ ಷಟ್‌ಸ್ಥಲದ ಮೊದಲಂಗವಾದ ಭಕ್ತಸ್ಥಲದಲ್ಲಿ– ಹದಿನೈದು, ಮಹೇಶ್ವರಸ್ಥಲದಲ್ಲಿ– ಒಂಬತ್ತು, ಪ್ರಸಾಧಿಯಲ್ಲಿ– ಏಳು, ಪ್ರಾಣ ಲಿಂಗದಲ್ಲಿ–ಐದು , ಶರಣನಲ್ಲಿ ನಾಲ್ಕು, ಐಕ್ಯನಲ್ಲಿ ನಾಲ್ಕು ಒಟ್ಟು : ೪೪ ಅಂಗಸ್ಥಲಗಳು ಕೂಡಿ ರಚಿತವಾದುದೇ ಪರಬ್ರಹ್ಮನ ಪೂರ್ಣಾಂಗ.

"ಇದಕ್ಕೆ ತತ್ವಮಸಿ ಎಂಬ ಮಹಾವಾಕ್ಯ
ಇಲ್ಲಿ ತ್ವಯೆನಲಾಂಗಂ ತತ್‌ಯೆನಲಾರ್ಲಿಂಗಂ
ಮಸಿ ಯೆನಲಾರ್ಬಕಲೆ
ಈ ಮೂದೆರನೊಂದಾಗಲದು ನೀನೆ
ಅಪ್ರತರ್ಕ್ಯ ಪ್ರಣಾತ್ಮಕ ಪರಮಶಿವಲಿಂಗ
ಮಲ್ಲಿಕಾ ಕರ್ಪೂರ ಧವಲಾಂಗ"[೨೬]

ಎಂದು ಅಂಗಸ್ಥಲವನ್ನು ಮುಕ್ತಾಯ ಮಾಡಿರುವನು.

ಲಿಂಗಸ್ಥಲದ ವಿವರಣೆ –

"ಆಚಾರಲಿಂಗಸ್ಥಲಮೊಂಬತ್ತುಂ
ಗುರುಲಿಂಗಸ್ಥಲಮೊಂಬತ್ತುಂ
ಶಿವಲಿಂಗಸ್ಥಲಮೊಂಬತ್ತುಂ
ಜಂಗಮ ಲಿಂಗಸ್ಥಲಮೊಂಬತ್ತುಂ
ಪ್ರಸಾದಿಲಿಂಗಸ್ಥಲ ಪನ್ನೆರಡುಂ
ಮಹಾಲಿಂಗಮೊಂಬತ್ತು ಮಿಂತೀಯ್ಯೆವತ್ತೇಳುಂ
ನಿನ್ನ ಸ್ವಯಂ ಪ್ರಭಾಮಯವಯ್ಯ
ಪರಮ ಶಿವಲಿಂಗ ಪತಂಗಜ ವಿಭಂಗ"[೨೭]

ಎಂದು ೫೭ ಲಿಂಗಸ್ಥಲಗಳು ಶಿವನ ಮೂರ್ತಸ್ವರೂಪವೇ ಎಂದಿರುವನು. ಉಳಿದ ತಾತ್ವಿಕ ವಿಷಯಗಳಾದ- ಅಷ್ಟವಿಧ ಹಾಗೂ ಏಕಾದಶವಿಧ ಸಕೀಲಗಳ ವಿವರಣೆ, ಪರಶಿವನ ಆರು ಮುಖಗಳು ಪಂಚಪ್ರಣಮಗಳು, ಪಂಚಬ್ರಹ್ಮಗಳು, ಪಂಚಾಸ್ತ್ರ ಮಹಾಮಂತ್ರಗಳು, ಷಟ್ಚಕ್ರಗಳು ಅವುಗಳ ೧೦೮ ಜನ ಅಧಿದೇವತೆಗಳು ಮೊದಲಾದವುಗಳ ವಿವರಣೆ ಇದೆ.

ಶುದ್ಧ ತಾತ್ವಿಕ ರೀತಿಯಲ್ಲಿ ರಚಿತವಾದ ಈ ಕೃತಿ ವೀರಶೈವಧರ್ಮದ ತತ್ವ-ಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ವಚನಗಳ ಮೂಲಕ ಸರಳವಾಗಿ ಹೇಳಲಾಗಿದೆ. ಉಳಿದೆಲ್ಲ ಮಂತ್ರಗೋಪ್ಯಗಳಿಗಿಂತಲೂ ವಿಶಿಷ್ಟವಾದ ಲಕ್ಷಣವನ್ನು ಅಳವಡಿಸಿಕೊಂಡು "ವೀರಶೈವ ತತ್ವಸಿದ್ಧಾಂತವನ್ನು ವಿವರಿಸುವ ಪಾರಿಭಾಷಿಕ ಕೋಶದಂತಿದೆ ಈ ಕೃತಿಗೆ ವೀರಶೈವ ತಾತ್ವಿಕ ಕೃತಿಗಳಲ್ಲಿ ವಿಶಿಷ್ಟವಾದ ಸ್ಥಾನ ಮೀಸಲಾಗಿದೆ.

(೨) ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲ :

ಏಕೋತ್ತರ ಶತಸ್ಥಲವು ವೀರಶೈವರ ಅತ್ಯಮೂಲ್ಯವಾದ ಸಿದ್ಧಾಂತವೆನಿಸಿದೆ. "ಲಿಂಗದತ್ತ ನಡೆದಿರುವ ಅಂಗದ, ಅಂಗದತ್ತ ನಡೆದು ಬರುತ್ತಿರುವ ಲಿಂಗದ ನೂರೊಂದು ಸ್ಥಲದ ಘಟನೆಗಳನ್ನು ಪ್ರತಿಪಾದಿಸುವುದು ಇದರ ಗುರಿ". ವೀರಶೈವಧರ್ಮಕ್ಕೆ ಅತ್ಯವಶ್ಯಕವಾದುದು ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಶೀಲಗಳು ಇವು ಪ್ರತ್ಯೇಕವಾಗಿ ಆಚರಿಸಬೇಕಾದುವಲ್ಲ. ಏಕೋತ್ತರಶತಸ್ಥಲದೊಳಗೆ ಇವೆಲ್ಲವೂ ಸಮಾವೇಶಗೊಂಡು ಸಾಧಕನ ಸರ್ವತೋಮುಖಸಿದ್ಧಿಗೆ ಸೋಪಾನವಾಗಿದೆ. ಆದ್ದರಿಂದಲೇ ಇವನ್ನು "ಕೈವಲ್ಯ ಸೋಪಾನ" ಎಂದು, "ಶಿವಾದ್ವೈತ ಸಿದ್ದಾಂತ" ಎಂದು ಕರೆಯಲಾಗಿದೆ. ಏಕೋತ್ತರಶತಸ್ಥಲವು ಷಟ್‌ಸ್ಥಲಗಳ ತಾತ್ವಿಕ ಜ್ಞಾನಕ್ಕೂ , ಆಚಾರ ವಿಷಯಕ್ಕೂ ಸಂಬಂಧಪಡುವ ಒಂದು ಸೇತುವೆಯಂತಿದೆ. ಇಲ್ಲಿ ವೀರಶೈವನ ಧಾರ್ಮಿಕ ಆಚಾರ ವಿಷಯಗಳೂ, ಸಾಮಾಜಿಕ ವಿಷಯಗಳನ್ನು ಕುರಿತಾಗಿ ೧೦೧ ಸ್ಥಲಗಳಿಗನುಗುಣವಾಗಿ ನಿರೂಪಿಸಲ್ಪಡುವುದುಂಟು ಅಂಗಸ್ಥಲಗಳಲ್ಲಿ ಭಕ್ತನು ಯಾವ ರೀತಿಯಾಗಿ ಆಚರಿಸಬೇಕೆಂಬುದರ ವಿವರಣೆ ಇದ್ದರೆ, ಲಿಂಗಸ್ಥಲದಲ್ಲಿ ಈ ಆಚರಣೆಗಳಿಂದ ಯಾವ ವಿಧವಾದ ಪರಿಣಾಮಗಳು ಮನುಷ್ಯನಮೇಲೆ ಉಂಟಾಗುತ್ತವೆಂಬುದರ ವಿವರಣೆ ಇದೆ.[೨೮]

ಇಮ್ಮಡಿ ಮುರಿಗಾ ಗುರುಸಿದ್ಧರ ಈ ಕೃತಿಯಲ್ಲಿ ಸ್ಥಲಕ್ಕೆ ಒಂದೊಂದರಂತೆ ನೂರೊಂದು ಸ್ಥಲಗಳಿಗೆ ನೂರೊಂದು ಸ್ವರವಚನಗಳಿವೆ. ಅಲ್ಲದೆ ಪ್ರಾರಂಭದ "ಸಕೀಲ ಸಂಬಂಧಸ್ಥಲ" ಎಂಬ ಭಾಗದಲ್ಲಿ ಆರು ಸ್ವರವಚನಗಳು ಹೆಚ್ಚಿಗೆ ಇವೆ.

ಶಿವಶರಣರ ಕಾಲದಿಂದ ಸಾಗಿಬಂದ ಏಕೋತ್ತರ ಶತಸ್ಥಲ ಸಿದ್ಧಾಂತ ಮೊದಲಿನಿಂದಲೂ ಒಂದೇ ರೀತಿಯಲ್ಲಿ ನೂರೊಂದು ಸ್ಥಲ ಪರಿಕ್ರಮದಲ್ಲಿ ರಚಿತವಾಗುತ್ತ ಬಂದಿತ್ತು. ಆದರೆ

ಪಿಂಡಸ್ಥಲದಿಂದ ಆರಂಭಗೊಂಡು ಜ್ಞಾನಶೂನ್ಯ ಸ್ಥಲದಲ್ಲಿ ಮುಕ್ತಾಯವಾಗುವುದು ಅದರ ಕ್ರಮವೆನಿಸಿತ್ತು. ಇಮ್ಮಡಿ ಗುರುಸಿದ್ಧನ ಕೃತಿಯಲ್ಲಿ ಇದು ಸ್ವಲ್ಪಮಟ್ಟಿನ ವ್ಯತ್ಯಾಸವನ್ನು ಪಡೆದಿದೆ. ಇಲ್ಲಿಯೂ ಅಂಗಸ್ಥಲ , ಲಿಂಗಸ್ಥಲ ಎಂದು ಎರಡು ಭಾಗಗಳಿವೆ.

ಇದರ ಜೊತೆಗೆ ಸ್ಥಲವನ್ನು ಅರಿತು ಆಚರಿಸಬೇಕಾದರೆ ಮೂಲಭೂತವಾಗಿ ತಿಳಿದುಕೊಂಡಿರಬೇಕಾದ ವಿಷಯಗಳನ್ನು "ಸಕೀಲ ಸಂಬಂಧಸ್ಥಲ" ಎಂಬ ಸಿದ್ಧಾಂತ ಪೂರ್ವ ಪೀಠಿಕೆಯಾಗಿ ಮೊದಲಭಾಗದಲ್ಲಿ ಹೆಚ್ಚಿಗೆ ಹೇಳಲಾಗಿದೆ. ಈ ಸ್ಥಲದಲ್ಲಿ ಆರು ಸ್ವರವಚನಗಳು ಬರುತ್ತವೆ. ೨೧ ತೆರನಾದ ದೀಕ್ಷೆ, ೧೦ ರೀತಿಯ ಪಾದೋದಕ. ೧೧ ತೆರನಾದ ಪ್ರಸಾದಗಳ ವಿವರವನ್ನು ಒಂದನೆಯ ಸ್ವರವಚನದಲ್ಲಿಯೂ, ಮಂತ್ರಮೂರ್ತಿ ಸ್ವರೂಪವನ್ನು ಎರಡನೆಯ ಸ್ವರವಚನದಲ್ಲಿಯೂ, ಕ್ರಿಯಾರ್ಪಣ ವಿಧಾನವನ್ನು ಮೂರನೆಯ ಸ್ವರವಚನದಲ್ಲಿಯೂ, ಗುಣತ್ರಯಾದಿ ಸ್ವರೂಪವನ್ನು ತಿಳಿಸುತ್ತಾ ಪರಿಶಿವನು ಸಮಸ್ತ ಜೀವಿಗಳನ್ನು ತನ್ನಲ್ಲಿ ವಶೀಕರಿಸಿಕೊಂಡಿರುವ ವಿಧಾನವನ್ನು ನಾಲ್ಕನೆಯ ವಚನದಲ್ಲಿ, ಅನುಬಂಧ ಸಾಧನ ಸಮಾಧಿಯ ಸ್ವರೂಪವನ್ನು ಐದನೆಯ ಸ್ವರವಚನದಲ್ಲಿ "ಸ್ಥಲ" ನಾಮದಿಂದ ವಿಶಿಷ್ಟನಾದ ಪರಶಿವನ ಸ್ವರೂಪ, ಅಂಶ, ಲಿಂಗ, ವಿವೇಕ ಮೊದಲಾದ ವಿಷಯಗಳನ್ನು ಆರನೆಯ ಸ್ವರವಚನದಲ್ಲಿ ನಿರೂಪಿಸಿದ ನಂತರ ಅಂಗಸ್ಥಲದ ಒಂದನೆಯ ಅವಾಂತರ ಸ್ಥಲದಿಂದ ಸಿದ್ಧಾಂತವು ಪ್ರಾರಂಭವಾಗುತ್ತದೆ. ಪ್ರತಿಸ್ಥಲದ ಆದಿಯಲ್ಲಿ ಸೂತ್ರ, ಅಂತ್ಯದಲ್ಲಿ ಗದ್ಯವಿದೆ. ಇಲ್ಲಿಯ ಸ್ವರವಚನಗಳು "ಶಿವಲಿಂಗ" ಎಂಬ ಅಂಕಿತಗಳಿಂದ ಕೂಡಿವೆ.

೪೪ ಅಂಗಸ್ಥಲಗಳು ಮತ್ತು ೫೭ ಲಿಂಗಸ್ಥಲಗಳು ಕೂಡಿ ೧೦೧ ಸ್ಥಲಗಳಾಗುತ್ತವೆ. ಅಂಗಸ್ಥಲವು ಷಟ್‌ಸ್ಥಲಾನುಸಾರಿಯಾಗಿ ಭಕ್ತಸ್ಥಲ, ಮಹೇಶ್ವರಸ್ಥಲ, ಪ್ರಾಣಲಿಂಗಿಸ್ಥಲ, ಪ್ರಸಾದಲಿಂಗಿಸ್ಥಲ, ಶರಣಸ್ಥಲ, ಐಕ್ಯಸ್ಥಲವೆಂದು ವಿಭಾಗಿಸಿ, ಪುನಃ ಪ್ರತಿಯೊಂದು ಸ್ಥಲದಲ್ಲಿಯೂ ಉಪವಿಭಾಗಗಳನ್ನು ಮಾಡಲಾಗಿದೆ. ಪ್ರತಿಸ್ಥಲದ ಆದಿಯಲ್ಲಿ ಸೂತ್ರ, ಅಂತ್ಯದಲ್ಲಿ ಗದ್ಯವಿದೆ.

ಇದೇ ರೀತಿ ಲಿಂಗಸ್ಥಲವನ್ನು ಷಟ್‌ಸ್ಥಲಾನುಸಾರಿಯಾಗಿಯೇ ವಿಂಗಡಿಸಿರುವರು. ಆಚಾರಲಿಂಗಸ್ಥಲ, ಗುರುಲಿಂಗಸ್ಥಲ, ಶಿವಲಿಂಗಸ್ಥಲ, ಜಂಗಮಲಿಂಗಸ್ಥಲ, ಪ್ರಸಾದಿಲಿಂಗಸ್ಥಲ, ಮಹಾಲಿಂಗಸ್ಥಲವೆಂದು ವಿಭಜಿಸಿ ಪುನಃ ಉಪವಿಭಾಗಗಳನ್ನು ಮಾಡಲಾಗಿದೆ.

ಈ ರೀತಿಯಾಗಿ ವಿಷಯ ನಿರೂಪಣೆ ಮಾಡುತ್ತಾ ಪ್ರತಿಯೊಂದು ಸ್ಥಲಕ್ಕೂ "ಇಂತು ಬಹುಜನ್ಮಕೃತ ಸುಕೃತವಶದಿಂ ಪಾಪಂಗಳ್ಸವೆದು ನಿರ್ಮಲಾಂತಃ ಕರಣವಾದ ದೇಹಿಯಾದವಗೆ ಪಿಂಡಸ್ಥಲಮ್ ಅಂದರಂತರ್ಗತಬ್ರಹ್ಮವೇ ಸ್ಥಲಮದರಿಂ ಮುಂದೆ ಪಿಂಡಸ್ಥಲವಾದುದು" ಈ ರೀತಿಯ ಸೂತ್ರಪದ್ಯಗಳಿದ್ದು ಆ ಸ್ಥಲದ ವಿಷಯವನ್ನು ಸಂಕ್ಷಿಪ್ತವಾಗಿ ನಿರೂಪಿಸುತ್ತವೆ. ಪ್ರತಿ

ಷಟ್‌ಸ್ಥಲದ ಅಂತ್ಯದಲ್ಲಿ "ವಾತೊಲಾಗಮ"ದ ಒಂದು ಶ್ಲೋಕವನ್ನು ಉದ್ದರಿಸಲಾಗಿದೆ. ಈ ಶ್ಲೋಕಾರ್ಥವು ಆ ಪ್ರಮುಖ ಸ್ಥಲದ ಮುಖ್ಯಾರ್ಥವನ್ನು ಧನಿಸುತ್ತದೆ.

ಉದಾ– ಭಕ್ತಸ್ಥಲದ ಕೊನೆಯಲ್ಲಿ ಬರುವ ಪದ್ಯ

"ಉತ್ತರವಾತೊಳೆ ವಸಂತತಿಲಕ ವೃತ್ತ"
ಮಿಥ್ಯೇವ ತಥ್ಯಮೇವ ಭಾತಮಿದಂ ಶರೀರಂ
ಪ್ರಾಣಾರ್ಥ ಜಾಲಮಿತಿ ತತ್ರ ನಿವೃತ್ತ ಚಿತ್ತಂ
ಭಕ್ತಿ ಕ್ರಿಯಾಚರಣಾಯ್ಯೆವ ತಯಾ ವಿಭಕ್ತಂ
ಭಕ್ತಸ್ಥಲಂ ಭವ ವಿಕಾರ ವಿದೂರ ಮಾಹು"

ಪ್ರತಿಸ್ಥಲದ ಅಂತ್ಯದಲ್ಲಿ ಇದು "ಸದಮಲಹೃದಯವಿದಿತ ವೀರ ಮಾಹೇಶ್ವರಾಂಗೀಕೃತ ಕೈವಲ್ಯಸೋಪಾನ ನಾಮೈಕೋತ್ತರ ಶತಸ್ಥಲದೊಳ್" ಎಂಬ ಗದ್ಯ ಬರುತ್ತದೆ.

ಇಲ್ಲಿಯ ಸ್ವರವಚನಗಳು ರಾಗ–ತಾಳ ಸಮನ್ವಿತವಾಗಿವೆ. ರಾಗಗಳು – ಧನ್ಯಾಸಿ, ಶಂಕರಾಭರಣ, ಮಧುಮಾಧವಿ, ಸಾವೇರಿ, ಶ್ರೀರಾಗ, ತೋಡಿ, ಕಾನಡ, ಕಾಂಬೋಧಿ, ಕಲ್ಯಾಣಿ, ನಾಟಿ. ತಾಳಗಳು – ಆದಿತಾಳ, ತ್ರಿವುಡೆತಾಳ, ಅಟ್ಟತಾಳ, ಅಪ್ಪಿತಾಳ, ರೂಪಕತಾಳ, ಪಂಚಘಾತಮಠ್ಠೆ ಎಂಬ ತಾಳಗಳನ್ನು ಬಳಸಿಕೊಂಡು ಕವಿ ತನ್ನ ಸಂಗೀತಜ್ಞಾನವನ್ನು ಮೆರೆದಿರುವನು. ಸಾಹಿತ್ಯಕಾಂಶಗಳು ಅಷ್ಟಾಗಿ ತೋರಿಬಂದಿಲ್ಲವಾದರೂ, ಸ್ವರವಚನಗಳು ಹೃದಯಂಗಮವಾದ ಭಾವಗೀತೆಗಳಾಗಿವೆ.

ಪ್ರಸ್ತುತ ಕೃತಿಯು ಹೆಸರೇ ಸೂಚಿಸುವಂತೆ ಕೈವಲ್ಯ ಸಂಪಾದನೆಯ ಸೋಪಾನವಾಗಿದೆ. ಪ್ರತಿಯೊಂದು ಸೋಪಾನವನ್ನು ಬಹಳ ಶ್ರದ್ಧೆ, ಭಕ್ತಿಯಿಂದ ಏರಿ ಕೈವಲ್ಯ ಪರ್ವತದ ಶಿಖರವನ್ನು ಯಾವ ರೀತಿಯಾಗಿ ತಲುಪಬೇಕೆಂಬುದರ ವಿವರಣೆಯನ್ನಿಲ್ಲಿ ತುಂಬಾ ಮನಂಬುಗುವಂತೆ ನಿರೂಪಿಸಲಾಗಿದೆ. ವಾತುಳಾಗಮದಿಂದ ವಿಶೇಷ ನೆರವು ಪಡೆದ ಇವರು ಮೊದಲಿನ ಕೃತಿಕಾರರಿಗಿಂತ ವಿಭಿನ್ನ ರೀತಿಯ ಕೃತಿರಚನೆ ಕೈಗೊಂಡಿರುವುದಲ್ಲದೆ ಏಕೋತ್ತರ ಶತಸ್ಥಲ ಸಾಹಿತ್ಯದಲ್ಲೇ ತನ್ನದೇ ಆದ ಗಣ್ಯಸ್ಥಾನವನ್ನು ಪಡೆದಿದ್ದಾರೆ.

ಬಿಡಿ ಸ್ವರವಚನಗಳು :

ಇಮ್ಮಡಿ ಮುರಿಗಾಗುರುಸಿದ್ಧರು ಅನೇಕ ಬಿಡಿ ಸ್ವರವಚನಗಳನ್ನೂ ರಚಿಸಿದ್ದಾರೆ. ಲಭ್ಯವಾದ ೨೧೧ ಸ್ವರವಚನಗಳನ್ನು ಎಸ್. ಶಿವಣ್ಣನವರು ಸಂಪಾದನೆ ಮಾಡಿ ಪ್ರಕಟಿಸಿದ್ದಾರೆ. ಇವುಗಳಲ್ಲಿ ಶಿವಸ್ತುತಿಪರವಾದ ಹಾಡುಗಳು ಹೆಚ್ಚಿನ ಸಂಖ್ಯೆಯಲ್ಲಿದ್ದರೂ ಸತಿ–ಪತಿ ಭಾವ, ಆತ್ಮ ನಿವೇದನೆ, ಧರ್ಮ, ಮೋಕ್ಷ, ಸಂಸಾರ, ಸಂಕಷ್ಟ, ನೀತಿಬೋಧೆ, ಭರತನಾಟ್ಯ, ಸಂಗೀತ, ಶಿವನಮಹಾತ್ಮೆ,

ಮುರಿಗಾಶಾಂತವೀರರ ಸ್ತುತಿ, ಶಿವಯೋಗ, ಮಿಶ್ರಾರ್ಪಣ, ಅಷ್ಟಾವರಣ ಮೊದಲಾದ ವಿಷಯಗಳನ್ನು ಪ್ರತಿಪಾದಿಸುವ ಸ್ವರವಚನಗಳಿವೆ. ಅಂಕಿತ 'ಶಿವಲಿಂಗ' ಎಂದಿದೆ.

ಇಮ್ಮಡಿ ಮುರಿಗಾಗುರುಸಿದ್ಧರು ರಚಿಸಿರುವ ಸ್ವರವಚನಗಳ ವೈಶಿಷ್ಟ್ಯತೆಗಳನ್ನು ಹೀಗೆ ಸಂಗ್ರಹಿಸಬಹುದು.

೧. ಸ್ವರ ವಚನಗಳು ಇಷ್ಟದೈವವಾದ "ಶಿವಲಿಂಗ" ಅಂಕಿತವನ್ನು ಹೊಂದಿದೆ.

೨. ಪ್ರತಿ ಸ್ವರವಚನದ ಆದಿಯಲ್ಲಿ ೧, ೨, ೩, ೪ ಸಾಲುಗಳ ಪಲ್ಲವಿ ಇರುತ್ತದೆ.

೩. ಷಟ್ಪದಿ, ಚೌಪದಿ, ಸಾಂಗತ್ಯ, ವೃತ್ತ, ಕಂದ ಮೊದಲಾದ ಛಂದೋರೂಪಗಳಲ್ಲಿವೆ.

೪. ಸ್ತೋತ್ರ, ಜೋಗುಳ, ಸೋಭಾನ, ಮಂಗಳಾರತಿ ಮೊದಲಾದ ಸಾಹಿತ್ಯ ರೂಪಗಳನ್ನು ಹೊಂದಿವೆ.

೫. ಬಹಳಷ್ಟು ಸ್ವರ ವಚನಗಳು ಸ್ತೋತ್ರ ಪ್ರಧಾನವಾಗಿದೆ. ಕೆಲವು ಸತಿ – ಪತಿ ಭಾವ, ಸಮಾಜ ವಿಡಂಬನೆ, ಐತಿಹಾಸಿಕ ವ್ಯಕ್ತಿಗಳ ಉಲ್ಲೇಖ, ತತ್ವಪ್ರಧಾನ ವಿಷಯ ಮತ್ತು ನೀತಿ ನಿರೂಪಣೆ ಮಾಡುತ್ತವೆ.

೬. ತಾತ್ವಿಕ ವಿಷಯ ಪ್ರತಿಪಾದನೆಯಲ್ಲಿ ಭಾಷೆ ಬಂಧುರವಾಗಿದ್ದು, ಶಿಷ್ಟ ಮತ್ತು ದೇಶೀ ಭಾಷೆಯ ಮಿಶ್ರಣವಿದೆ.

ಚತುರ್ಭಾಷಾ ವಿಶಾರದನಾದ ಕವಿ ಇಮ್ಮಡಿ ಮುರಿಗಾ ಗುರುಸಿದ್ಧರ ಸ್ವರವಚನಗಳಲ್ಲಿ ಶಬ್ದಸಂಪತ್ತು, ನಿರೂಪಣಾ ವಿಧಾನದಲ್ಲಿ ಸಹಜತೆ ಹಾಗೂ ಸರಳತೆಗಳು ತುಂಬಿಕೊಂಡಿರುವುದನ್ನು ಗುರುತಿಸುತ್ತೇವೆ. ಸ್ವರವಚನಗಳಲ್ಲಿ ಅಳವಟ್ಟ ವಿಷಯ ವೈವಿಧ್ಯ ರೂಪ ವೈವಿಧ್ಯ, ರಚನಾ ಬಂಧುರತೆ, ಭಾವದ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ಶೈಲಿಯ ನಿರಾಡಂಬರತೆಗಳು ಇವರೊಬ್ಬ ಮೇಲ್ಮಟ್ಟದ ಅನುಭಾವಿಕ ಕವಿ ಎಂಬುದನ್ನು ಎತ್ತಿ ತೋರಿಸುತ್ತವೆ.

ಹಾಲಾಸ್ಯ ಪುರಾಣ :

ಇಮ್ಮಡಿ ಮುರಿಗಾ ಗುರುಸಿದ್ಧರ ಪ್ರತಿಭೆ, ಪಾಂಡಿತ್ಯ, ಕವಿತ್ವ ಶಕ್ತಿಯನ್ನು ಎತ್ತಿತೋರುವ ಮಹತ್ವದ ಕೃತಿ ಚಂಪೂರೂಪದಲ್ಲಿ ರಚಿತವಾದ ಹಾಲಾಸ್ಯ ಪುರಾಣ, ಪುರಾಣಗಳು ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕಗಳೆನಿಸಿವೆ. ಇವುಗಳಲ್ಲಿ ನಮ್ಮ ಜನತೆಯ ನಡೆ – ನುಡಿ, ಆಚಾರ–ವಿಚಾರ, ನೈತಿಕ – ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಗತಿಗಳು ವರ್ಣಿತವಾಗಿವೆ. ಜೊತೆಗೆ ವೇದ, ಉಪನಿಷತ್ತು, ಆಗಮ, ಗೀತೆ, ಬ್ರಹ್ಮಸೂತ್ರ ಇವೇ ಮೊದಲಾದವುಗಳಲ್ಲಿಯ ಮಹತ್ವದ ಸಂಗತಿಗಳ

ಸಾರಸರ್ವಸ್ವ ಇವುಗಳಲ್ಲಿ ಅಡಕವಾಗಿರುತ್ತದೆ. ಹೀಗಾಗಿ ಇವು ಭಾರತೀಯ ಸಂಸ್ಕೃತಿಯ ಕೋಶಗಳೆನಿಸಿವೆ.

ಸಂಸ್ಕೃತದಲ್ಲಿ ೧೮ ಮುಖ್ಯ ಹಾಗೂ ೧೮ ಉಪಪುರಾಣಗಳು ಪ್ರಸಿದ್ಧವಾಗಿವೆ. ಇವುಗಳ ಕರ್ತೃಗಳಾಗಲಿ, ಕಾಲವಾಗಲಿ ಖಚಿತವಾಗಿ ತಿಳಿದುಬಂದಿಲ್ಲ. ಇವುಗಳಲ್ಲಿ ತ್ರಿಮೂರ್ತಿಗಳೆನಿಸಿದ ಬ್ರಹ್ಮ, ವಿಷ್ಣು, ಮಹೇಶ್ವರರಿಗೆ ಪ್ರಮುಖ ಸ್ಥಾನಸಂದಿದೆ. ಅಷ್ಟಾದಶ ಪುರಾಣಗಳಲ್ಲಿ 'ಸ್ಕಂದಪುರಾಣ'ವು ಒಂದು. ಇದು ೮೧,೧೦೦ ಸಂಖ್ಯೆಯ ಶ್ಲೋಕಗಳನ್ನು ಹೊಂದಿದೆ. ಇದರಲ್ಲಿ ಸನತ್ಕುಮಾರ ಸಂಹಿತೆ, ಸೂತಸಂಹಿತೆ, ಶಂಕರಸಂಹಿತೆ, ವೈಷ್ಣವ ಸಂಹಿತೆ, ಬ್ರಹ್ಮಸಂಹಿತೆ, ಸೌರಸಂಹಿತೆ ಎಂಬ ಏಳು ಸಂಹಿತೆಗಳಲ್ಲಿ ಅಗಸ್ತ್ಯ ಸಂಹಿತೆಯೂ ಒಂದು. ಇದರಲ್ಲಿ ಬರುವ ಮಹತ್ವದ ಆಖ್ಯಾನವೇ "ಹಾಲಾಸ್ಯ ಮಹಾತ್ಮೆ." ಇದು ಮಧುರೆಯ ಮೀನಾಕ್ಷಿ ಸುಂದರೇಶ್ವರ ಹಾಗೂ ಹಾಲಾಸ್ಯ ಕ್ಷೇತ್ರದ ಸ್ಥಳ ಮಹಿಮೆಯ ಕಥೆಯನ್ನು ಒಳಗೊಂಡಿದೆ. ಈ ಕೃತಿಯು ಇಮ್ಮಡಿ ಮುರಿಗಾ ಗುರುಸಿದ್ಧರ ನವೀನ ಸೃಷ್ಟಿಯಲ್ಲದಿದ್ದರೂ, ನಿರೂಪಣೆ ಮತ್ತು ಶೈಲಿಯ ದೃಷ್ಟಿಯಿಂದ ಹೊಸತನವನ್ನು ಪಡೆದಿದೆ. ಈಗಾಗಲೇ ಕನ್ನಡದಲ್ಲಿ ಇದೇ ಹೆಸರಿನ ಐದು ಕೃತಿಗಳು ರಚನೆಯಾಗಿದೆ.

೧) ಹಾಲಾಸ್ಯ ಪುರಾಣ – ವರ್ಣಕ – ಸೋದೆಯ ಸದಾಶಿವರಾಯ (೧೬೭೪–೧೬೯೭)

೨) ಹಾಲಾಸ್ಯ ಪುರಾಣ – ವಸ್ತುಕ – ಇಮ್ಮಡಿ ಮುರಿಗಾ ಗುರುಸಿದ್ಧ (೧೭೨೦)

೩) ಹಾಲಾಸ್ಯ ಮಹಾತ್ಮೆ – ಗದ್ಯ – ಕಳಲೆ ನಂಜರಾಜ (೧೭೪೦)

೪) ಹಾಲಾಸ್ಯ ಮಹಾತ್ಮೆ – ಚಂಪು ವೆಂಕಟೇಶ (೧೭೪೦)

೫) ಹಾಲಾಸ್ಯ ಮಹಾತ್ಮೆ – ಗದ್ಯ – ಮುಮ್ಮಡಿ ಕೃಷ್ಣರಾಜ (೧೭೯೪–೧೮೬೮)

ಇವುಗಳಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧನ ಹಾಲಾಸ್ಯ ಪುರಾಣವು ಗಾತ್ರ ಹಾಗೂ ಸತ್ವದ ದೃಷ್ಟಿಯಿಂದ ಮೇಲ್ಮೆಯನ್ನು ಸಾಧಿಸಿದೆ.

ಆಕರ :

ಇಮ್ಮಡಿ ಮುರಿಗಾ ಗುರುಸಿದ್ಧರ ಹಾಲಾಸ್ಯ ಪುರಾಣಕ್ಕೆ ಸೋದೆಯ ಸದಾಶಿವರಾಜ ವರ್ಣಕದಲ್ಲಿ ಹೇಳಿದ ಹಾಲಾಸ್ಯ ಪುರಾಣ ಆಕರವೆಂದೂ, ಅದನ್ನೇ ತಾನು ವಸ್ತುಕರೂಪದಲ್ಲಿ ಬರೆದನೆಂದೂ ಹರೀಶ, ಚೆನ್ನವೀರ, ಕರಿಬಸವ ಮತ್ತು ಚೆನ್ನಬಸವದೇವರೆಂಬ ಶಿಷ್ಯರ ಕೋರಿಕೆ ಇದಕ್ಕೆ ಕಾರಣವೆಂದೂ ಕವಿ ಕೆಳಗಿನ ಪದ್ಯಗಳಲ್ಲಿ ಹೇಳಿದ್ದಾನೆ.

"ಸಕಲಕಲಾವಿಶಾರದ ನರೇಂದ್ರ ಶಿರೋಮಣಿ ಲಿಂಗಜಂಗಮಾ
ರ್ಚಕನುರುಸೋದೆಯ ಪ್ರಭು ಸದಾಶಿವರಾಯ ಭೂಪತಿಯೊಲ್ದು ಪೂರ್ವದೊ
ಳ್ಪ್ರಕಟ ಸುವರ್ಣ ವರ್ಣಕದೆ ಪೇಳ್ದುದನಾಂ ಪ್ರಮಥೋಕ್ತಿಯಿಂದೆ ವ
ಸ್ತುಕದಿನಿದಂ ನೆಗಳ್ಚಿದೆನೆನುಮೇಶನ ಭಕ್ತರಪಾರರೊಲ್ವಿನಂ"[೯]

ಈ ಪದ್ಯದ ಪ್ರಕಾರ ಸೋದೆಯ ಸದಾಶಿವಪ್ರಭು ವರ್ಣಕದಲ್ಲಿ ಅಂದರೆ ಷಟ್ಪದಿಯಲ್ಲಿ ಹೇಳಿದ ಹಾಲಾಸ್ಯ ಪುರಾಣವನ್ನು ತಾನು ಚಂಪುವಿನಲ್ಲಿ ರಚಿಸುತ್ತಿರುವೆನೆಂದು ಹೇಳಿರುವನು. ಇದರ ಜೊತೆಗೆ ಸಂಸ್ಕೃತ 'ಹಾಲಾಸ್ಯ ಮಹಾತ್ಮ'ವೂ ಈ ಕೃತಿಗೆ ಆಕರವಾಗಿದೆಯೆಂದು ಪದ್ಯ (೩೩)* ವೊಂದರಲ್ಲಿ ಸ್ಪಷ್ಟಪಡಿಸುತ್ತಾನೆ.

"ಕೇಶಾ ಮೂರ್ಧಾ ಲಲಾಟರಿ ಚ ಲೋಚನೆ ನಾಸಿಕಾ ತಥಾ
ಶ್ರೋತ್ರ ಗಂಡೋಠದಂತಾಶ್ಚ ಚಿಹ್ವಾ ಚಲ ಚಿಬುಕಂ ಕ್ರಮಾತ
ಕಂಠವಕೋ ಭುಜಾಪಾಣಿ ತಲಾಂಗುಳಿ ನಖಾ ಅಪಿ
ವಕ್ಷೋಜಯುಗಳಂ ಕುಕ್ಷಿನಾಬರ್ಜಘನಮಂಡಲಂ
ಊರುಜಾನುದ್ದಯಂ ಜಂಟೇ ಗುಲ್ಫೀ ಚ ಪ್ರಪದೇ ತಥಾ ॥
ಅರಿಗುಳಶ್ಚ ನಖಾ ಪದಾತಲಗಂಧ ಸ್ವರಾಸ್ತಥಾ
ವರ್ಣಾಶ್ಚ ವನಿತಾನಾ ಚ ದ್ವಾತ್ರಿಂಶಲ್ಲರ್ಕ್ಷ ಶಾನಿಚ"[೨೮]

ಕೃತಿ ಸ್ವರೂಪ :

ಹಾಲಾಸ್ಯ ಪುರಾಣದಲ್ಲಿ ೪ ಕಾಂಡ, ೬೬ ಆಶ್ವಾಸ, ೩೬೩೭ ಪದ್ಯಗಳಿವೆ. ಚಂಪೂರೂಪದ ಇದರಲ್ಲಿ ವೃತ್ತ, ಕಂದ, ಗದ್ಯಗಳ ಜೊತೆಗೆ ರಗಳೆ, ತ್ರಿಪದಿ ಮೊದಲಾದ ದೇಶೀ ಛಂಧೋಬಂಧಗಳೂ ಸಮಾವೇಶಗೊಂಡಿದೆ.

ಕಾವ್ಯಾರಂಭದಲ್ಲಿ ನಂದಿ, ಭೃಂಗಿ, ವೃಷಭ, ರೇಣುಕ, ದಾರುಕ, ಸುಂದರ, ಕಲಿಕಂಬಕ, ಗಣನಾಥ, ಸಿರಿಯಾಳ, ಚಂದಯ್ಯ ಬಸವೇಶ, ಮಡಿವಾಳ ಮಾಚಯ್ಯ, ನಾಗಣಾನಂದರನ್ನು ತನ್ನ ಕೃತಿಗೆ ಮಂಜುಳವಾಣಿಯನ್ನು ನೀಡಬೇಕೆಂದು ಕವಿ ಕೇಳಿಕೊಂಡಿದ್ದಾನೆ. ಪೂರ್ವ ಕವಿಗಳಾದ ಹರಿಹರ, ರಾಘವಾಂಕ, ಪಾಲ್ಕುರಿಕೆ ಸೋಮ, ಪಂಡಿತಾರಾಧ್ಯರನ್ನು ತನ್ನ ಕಾವ್ಯಕ್ಕೆ ರಸಭಾವಗಳನ್ನು ನೀಡಲಿ ಎಂದು ಪ್ರಾರ್ಥಿಸಿದ್ದಾನೆ. ತೋಂಟದಾರ್ಯ, ಕೊಟ್ಟೂರೇಶ, ಭುಜಂಗೇಶ್ವರ, ಕರಸ್ಥಲದ ನಾಗಿದೇವರನ್ನು ಸ್ತುತಿಸಿದ್ದಾನೆ. ದೀಕ್ಷಾಗುರು ಮತ್ತು ಶಿಕ್ಷಾಗುರುವಿಗೆ ನಮಸ್ಕರಿಸಿ ತನ್ನ ಕೃತಿಗೆ ಆಕರ, ಕೃತಿಯ ವಿಶೇಷತೆಗಳನ್ನು ಸ್ಥೂಲವಾಗಿ ಹೇಳಿ ಕಥೆಯನ್ನು ಆರಂಭಿಸುತ್ತಾನೆ.

ಕಾವ್ಯವು ಸಂಪ್ರದಾಯದಂತೆ ಸಮುದ್ರವರ್ಣನೆಯಿಂದ ಆರಂಭವಾಗಿ ರಜತಪರ್ವತ ಶಿವನ ಆಸ್ಥಾನ ವರ್ಣನೆಗಳಲ್ಲಿ ಮುಂದುವರೆದು ಭೂಲೋಕಕ್ಕೆ ಬಂದು ಮುಖ್ಯ ಕಥೆಯ ನಿರೂಪಣೆಗೆ ತೊಡಗುತ್ತಾನೆ. ಕೆಳಗಿನ ಪದ್ಯದಲ್ಲಿ –

"ಹಾಲಾಸ್ಯಮೀ ಪುರಾಣಂ
ಕಾಲಾಸ್ಯ ಭಯಂಕರಂ ಹರಂ ಸುಂದರನೀ
ಲೀಲಾಸ್ಯಮಿದಕಧಿಪನೆನೆ
ಲಾಲಸ್ಯಮನೆಯ್ದೆ ಮಾಡದಿರ್ಪನದಾವಂ"[೩೧]

ಎಂದು ಕೃತಿಯ ವಸ್ತುವನ್ನು ಕುರಿತು ತಿಳಿಸಿದ್ದಾನೆ. ಗ್ರಂಥಾಂತ್ಯದಲ್ಲಿ ಕೃತಿ ಮುಕ್ತಾಯವಾದ ಕಾಲವನ್ನು ಸೂಚಿಸಿದ್ದಾನೆ.

"ಓವಿದ ಶಾಲಿಸುವಾಹನ
ಸಾವಿರದ ನೂರಿಂದ ನಾಲ್ವತ್ತೆರಡನೆ
ಯಾವರಿಸಿದ ನುತಶಾರ್ವರಿ
ಭಾವಿತ ವೀರಸಿಂಹಲಗ್ನದೊಳತಿಶಯದಿಂ"[೩೨]

ಪ್ರತಿ ಆಶ್ವಾಸದ ಅಂತ್ಯದಲ್ಲಿ ಈ ಗದ್ಯವಿದೆ: "ಇದು ಸಕಲಸುರವರಾಸುರಪ್ರವರ ಕನಕನವರತ್ನ ಖಚಿತಮೌಲಿಕೀಲಿತಪದಸರೋರುಹರುಚಿರ ಶಿವಲಿಂಗಪ್ರಸಾದಲಬ್ಧೋಬಯಕವಿತ್ವನಿಪುಣ ದ್ವಿತೀಯ ಮುರಿಗಾಗುರುಸಿದ್ಧಶಿವಯೋಗೀಂದ್ರ ವಿರಚಿತ ಸುಂದರೇಶ್ವರವಿಲಾಸ ಸ್ಕಾಂದಾಗಸ್ತ್ಯಸಂಹಿತಾ ಮಧ್ಯಗತ ಹಾಲಸ್ಯಪುರಾಣದೊಳ್ಗಗಸ್ತ್ಯವಿಸಿಷ್ಠಾದ್ಯಸೇಕ ಮುನೀಶ್ವರ ಸಹಿತಾನಂದ ವನಾಂತರ ಕದಂಬವನ ಪ್ರವೇಶಾನ್ವಿತ ಸಪ್ತದಶಾಸಗರ್ಭ ತಧರ್ಮಾರ್ಥ ಕಾಮಮೋಕ್ಷಾತ್ಮಕ ಚತುರ್ಥಕಾಂಡಕ್ಕಂ ಪರಿಸಮಾಪ್ತಂ" ಎಂಬ ಗದ್ಯಭಾಗವಿದೆ. ಒಟ್ಟಾರೆಯಾಗಿ ಕೃತಿ ಸ್ವರೂಪವು ಗಾತ್ರದ ಹಾಗೂ ಗುಣದ ದೃಷ್ಟಿಯಿಂದ ಮಹಾಕಾವ್ಯದ ಲಕ್ಷಣಗಳನ್ನು ಹೊಂದಿದೆ.

ಕಥಾವಸ್ತು:

ಕೈಲಾಸದಲ್ಲಿ ಶಿವಧ್ಯಾನದಲ್ಲಿದ್ದ ಸೂತಮುನಿಯ ಹತ್ತಿರ 'ಶತಾನಂದ' ಎಂಬ ಮುನಿ ಸಮೂಹದವರು ಬಂದು ಭೂಲೋಕದಲ್ಲಿ ಯಾವುದಾದರೊಂದು ಸುಕ್ಷೇತ್ರದ ಮಹಿಮೆಯನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾರೆ. ಆಗ ಸೂತಮುನಿಯು ಈ ಮೊದಲು ಅಗಸ್ತ್ಯ ಮುನಿಯು ಆನಂದವನದಲ್ಲಿ ಋಷಿ ಸಮೂಹಕ್ಕೆ ಅಗಸ್ತ್ಯ ಮುನಿಗಳು ಹೇಳಿದ ಕ್ಷೇತ್ರ ಮಹಾತ್ಮೆಯ ಕಥೆಯನ್ನು ಹೇಳಿದುದನ್ನು ನಾನು ನಿಮಗೆ ತಿಳಿಸುತ್ತೇನೆ ಎನ್ನುತ್ತಾ ಹೇಳಲು ಆರಂಭಿಸುತ್ತಾನೆ. ಆ ಕಥೆಯನ್ನು ಕೈಲಾಸದಲ್ಲಿ ಶಿವನು ಪಾರ್ವತಿಗೆ ತಿಳಿಸುತ್ತಿರುವಾಗ ತೊಡೆಯ ಮೇಲಿದ್ದ ಷಣ್ಮುಖನು ಅದನ್ನು ಕೇಳಿಸಿಕೊಂಡು ಅಗಸ್ತ್ಯ ಮುನಿಗಳಿಗೆ ಹೇಳಿರುತ್ತಾನೆ. ಅದೇ ಕತೆಯನ್ನು ಅಗಸ್ತ್ಯ ಮಹರ್ಷಿಯು ಋಷಿಗಳಿಗೆ ಹೇಳುತ್ತಿರುವಾಗ ಅವರು ಕಾಶಿ, ಕೇದಾರ ಮೊದಲಾದ ತೀರ್ಥಕ್ಷೇತ್ರಗಳಿಗೆ "ಹಾಲಾಸ್ಯ ಕ್ಷೇತ್ರವು" ಹೇಗೆ ಸಮಾನ ಎಂದು ಪ್ರಶ್ನಿಸುತ್ತಾರೆ. ಆಗ ಮುನಿಯು ಈ ಕೆಳಗಿನಂತೆ ಉತ್ತರಿಸುತ್ತಾನೆ.

ಕದಂಬವಿಪಿನ, ಕನ್ಯಕಾನಗರಿ, ಮಧುರಾಪುರಿ, ಭೂಲೋಕ, ಶಿವಲೋಕ, ಜೀವನ್ಮುಕ್ತಿಪುರ, ಚತುಷ್ಕೂಟಪುರ ಮೊದಲಾದ ಹೆಸರುಗಳನ್ನೊಳಗೊಂಡ ಮಧುರೆಯು ಶಿವನಲೀಲಾವಿಹಾರ ಎನಿಸಿದೆ ಎಂದು ಸೂತಮುನಿ ಹೇಳಲು ಮುನಿಗಳು ಕಾಶಿ ಮೊದಲಾದ ತೀರ್ಥಕ್ಷೇತ್ರಗಳಿಗೆ ಇದು ಹೇಗೆ ಸಮಾನ ಎನ್ನುತ್ತಾರೆ. ಆಗ ಸೂತಮುನಿ

"ಕಾಶಿಯೊಳೆ ದೇಹದಂತ್ಯದೊ

ಳಾ ಶಿವನೊಳ್ ಮುಕ್ತಿದೊರೆಗುಮೀ ಹಾಲಾಸ್ಯದೊ

ಳೈ ಶರಣತತಿಗೆ ಕೇಳಿಂ

ಪಾಶವಿದೂರೋರು ಜೀವನ್ಮುಕ್ತಿಯದಕ್ಕುಂ" (ಕಾಂಡ ೧, ಆಶ್ವಾಸ ೧, ಪದ್ಯ ೬೫)

ಕಾಶಿಯಲ್ಲಿ ದೇಹಾಂತ್ಯ ಮುಕ್ತಿಯಾದರೆ, ಇಲ್ಲಿ ಜೀವನ್ಮುಕ್ತಿ ಮದಮುಖರು ಮಾತ್ರವಲ್ಲದೇ, ಕ್ರಿಮಿಗಳೂ ಸಹಿತ ಇಲ್ಲಿ ಮೋಕ್ಷವನ್ನು ಪಡೆಯುತ್ತಾರೆ. ವೃತಾಸುರನನ್ನು ಕೊಂದ ಪಾಪವನ್ನು ಇಂದ್ರನು ಇಲ್ಲಿಯೇ ಕಳೆದುಕೊಂಡನು. ತಾಯಿಯನ್ನು ಸಂಭೋಗಿಸಿ ತಂದೆಯನ್ನು ಕೊಂದ ಬ್ರಾಹ್ಮಣನೊಬ್ಬ ತನ್ನ ಪಾಪವನ್ನು ಕಳೆದುಕೊಂಡುದು ಇಲ್ಲಿಯೇ. ಈ ಕ್ಷೇತ್ರದಲ್ಲಿ ಸುಂದರದೇವನಿರುವುದರಿಂದ ಮೂರು ಲೋಕದಲ್ಲಿಯೂ ಈ ಕ್ಷೇತ್ರ ಪ್ರಸಿದ್ಧವಾಗಿದೆ. ಈತನು ಮಹಾಲಿಂಗ, ಹಾಲಾಸ್ಯಸುಂದರ, ಕರ್ಪೂರ ಸುಂದರ, ಕದಂಬವನ ಸುಂದರ, ಸೋಮಸುಂದರ, ಸತ್ಸುಂದರ, ಜನವದತಿ ಸುಂದರ, ದೇವಸುಂದರ, ಪಾಂಡ್ಯಸುಂದರ, ಸಮಷ್ಟಿ ವಿದ್ಯಾನಗರಿ ನಾಯಕ, ಮಧುರಾಧಿಪ, ಕನ್ಯಕಾನಗರಿನಾಥ, ಚತುಷ್ಕೂಟಪುರೇಶ್ವರ, ಭೂಲೋಕ – ಶಿವಲೋಕೇಶ, ಜೀವನ್ಮುಕ್ತಿ ಪುರೇಶ್ವರ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾನೆ. ಇಂತಹ ದಿವ್ಯನಾಮಗಳಿಂದ ಪ್ರಭಾವಿತನಾದ ಸುಂದರೇಶ್ವರನು ಮೆರೆದ ೬೪ ಲೀಲೆಗಳನ್ನು ಕವಿ ೪ ಕಾಂಡಗಳಲ್ಲಿ ಹೇಳುತ್ತಾನೆ.

ಪ್ರಥಮಕಾಂಡ – ಕೃತಯುಗದ ೧೬ ಲೀಲೆಗಳು

ದ್ವಿತೀಯಕಾಂಡ –ತ್ರೇತಾಯುಗದ ೧೬ ಲೀಲೆಗಳು

ತೃತೀಯಕಾಂಡ – ದ್ವಾಪರಯುಗದ ೧೬ ಲೀಲೆಗಳು

ಚತುರ್ಥಕಾಂಡ – ಕಲಿಯುಗದ ೧೬ ಲೀಲೆಗಳು

[ಅನುಬಂಧದಲ್ಲಿ ಇವುಗಳನ್ನು ಹೆಸರಿಸಿದೆ]

ಇಮ್ಮಡಿ ಮುರಿಗಾ ಗುರುಸಿದ್ಧರು ಈ ಲೀಲೆಗಳನ್ನು ಅತ್ಯಂತ ವಿಸ್ತಾರವಾಗಿ ಹೇಳಿರುವುದರ ಉದ್ದೇಶವೇನೆಂದರೆ, ಮುಖ್ಯವಾಗಿ ಸಾಮಾಜಿಕ ನೆಲೆಯಲ್ಲಿ ಇರುವ ನಂಬಿಕೆ, ಶ್ರದ್ಧೆ, ಭಕ್ತಿಗಳಿಂದ ಧರ್ಮವನ್ನು, ಸಂಸ್ಕೃತಿಯನ್ನು ಉಳಿಸಿ ಬೆಳೆಸುವುದೇ ಆಗಿದೆ. ಸಾಮಾಜಿಕ ಮೌಲ್ಯಗಳಾದ ಗುರುಭಕ್ತಿ, ಪಿತೃಭಕ್ತಿಯನ್ನು ಮೀರಿದರೆ ಉಂಟಾಗುವ ಫಲಗಳನ್ನು ಇಂದ್ರಾನುಗ್ರಹಲೀಲೆ, ಅಂಕವಿಜಯಲೀಲೆ, ಪಿತೃಘ್ನದೋಷ ನಿವಾರಣ ಲೀಲೆಗಳು ತಿಳಿಸುತ್ತದೆ. ಕೈಲಾಗದವರಿಗೆ ಸಹಾಯ ಮಾಡುವ, ಸಜ್ಜನರಿಗೆ

ಕೇಡು ಮಾಡಿದರೆ ಉಂಟಾಗುವ ಫಲವನ್ನು, ಅಹಂಕಾರ ಒಳ್ಳೆಯದಲ್ಲ ಎಂಬ ಸಂಗತಿಗಳನ್ನು ಪಿಷ್ಟಮೃದ್ಧರಣಲೀಲೆ ಸೂಕರಶಿಶುಸ್ತನ್ಯಪಾನಲೀಲೆ, ಮತ್ತು ಕುಂಡಕುಕ್ಷಿಗಳನ್ನ ಲೀಲೆಗಳಲ್ಲಿ ಕಾಣಬಹುದು. ಹೀಗಾಗಿ ಇಲ್ಲಿಯ ಕಥೆಗಳು ಜನಮನದ ಹೃದಯದಲ್ಲಿ ಅಡಗಿರುವ ನೈತಿಕತೆಯನ್ನು ಪ್ರತಿಬಿಂಬಿಸುತ್ತವೆ.

ಪುರಾಣಕಾವ್ಯಗಳು ತ್ರಿಮೂರ್ತಿಗಳ ಲೀಲೆಗಳನ್ನು, ಶಿವಶರಣರಚರಿತ್ರೆ ಮತ್ತು ಧಾರ್ಮಿಕ ತತ್ವಗಳನ್ನು ನಿರೂಪಿಸಲು ಸೀಮಿತವಾಗಿದ್ದರೂ ಆಯಾ ಕಾಲದ ಜನಜೀವನ, ರಾಜಕೀಯ ಸಾಂಸ್ಕೃತಿಕ ಅನನ್ಯತೆಗಳನ್ನು ಮೈಗೂಡಿಸಿಕೊಂಡು ರಚನೆಯಾಗಿರುತ್ತವೆ. ಪ್ರಸ್ತುತ ಕೃತಿಯು ತಮಿಳುನಾಡಿನ ಮಧುರೆಯ ಸುಂದರೇಶ್ವರನ ಚತುಷ್ಟಿಲೀಲೆಗಳನ್ನು ವರ್ಣಿಸಿ, ಜನಸಾಮಾನ್ಯರಲ್ಲಿ ಧಾರ್ಮಿಕ ಭಾವನೆಗಳನ್ನು ಪ್ರಚೋದಿಸುವ ಉದ್ದೇಶವನ್ನಿಟ್ಟುಕೊಂಡು ರಚನೆಯಾಗಿದೆ. ಇದೊಂದು ಶುದ್ಧವಾದ ಪೌರಾಣಿಕ ಕೃತಿಯಾಗಿದ್ದರೂ ಮಧುರೆಯನ್ನಾಳಿದ ಪಾಂಡ್ಯರಾಜರ ಚರಿತ್ರೆ ಮತ್ತು ಸಂಘಸಾಹಿತ್ಯ ವಿಚಾರಗಳನ್ನು ಕವಿಯು ಅಲ್ಲಲ್ಲಿ ಪ್ರಸ್ತಾಪಿಸುತ್ತಾನೆ. ಸಾಹಿತ್ಯಿಕವಾಗಿ ಅಷ್ಟಾದಶ ವರ್ಣನೆಗಳು, ಅಲಂಕಾರಗಳು, ಬಳಸಿದ ಭಾಷೆ, ಕಾವ್ಯರಸಭಾವ ಮತ್ತು ಛಂದಸ್ಸುಗಳ ದೃಷ್ಟಿಯಿಂದ ಒಂದು ಸಾಹಿತ್ಯಿಕ ಕೃತಿಯಸ್ಥಾನ ಪಡೆಯುತ್ತದೆ. ಈ ಕೃತಿಯಲ್ಲಿ ಮಧುರೆಯ ಮೀನಾಕ್ಷಿ ಸುಂದರರ ಒಂದೊಂದು ಸ್ಥಳಗಳಿಗೂ ಇರುವ ಸ್ಥಳ ನಾಮಗಳು ಮತ್ತು ಅವುಗಳ ಹಿಂದಿರುವ ಪೌರಾಣಿಕ ಐತಿಹ್ಯಗಳನ್ನು ಕಾವ್ಯದಲ್ಲಿ ಹೆಸರಿಸುತ್ತಾನೆ. ಒಟ್ಟಾರೆಯಾಗಿ ಕೃತಿಯ ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

೧) ಐತಿಹಾಸಿಕ ಅಂಶಗಳು ೧. ಪಾಂಡ್ಯವಂಶಾವಳಿ
   ೨. ಸಂಘ ಸಾಹಿತ್ಯ

೨) ಪೌರಾಣಿಕ ಅಂಶಗಳು

೩) ಸಾಹಿತ್ಯಿಕ ಅಂಶಗಳು ೧. ವರ್ಣನೆ
   ೨. ಅಲಂಕಾರ
   ೩. ರಸ
   ೪. ಭಾಷೆ
   ೫. ಛಂದಸ್ಸು

೪) ಚಂಪುಕಾವ್ಯದಲ್ಲಿ ಹಾಲಾಸ್ಯ ಪುರಾಣದ ಸ್ಥಾನಮಾನ.

೧) ಐತಿಹಾಸಿಕ ಅಂಶಗಳು :

ಹಾಲಾಸ್ಯ ಪುರಾಣದಲ್ಲಿ ಪೌರಾಣಿಕ ಕಥೆಯ ಜೊತೆಗೆ ಐತಿಹಾಸಿಕ ವ್ಯಕ್ತಿಗಳ, ರಾಜ ಮನೆತನದ ಸಂಗತಿಗಳೂ ಹೆಣೆದುಕೊಂಡಿವೆ. ಇಲ್ಲಿ ಬರುವ ಪಾಂಡ್ಯ ಅರಸರ ವಂಶಾವಳಿ ಹಾಗೂ ಸಂಘ ಸಾಹಿತ್ಯದ ಉಲ್ಲೇಖಗಳು ಕಾವ್ಯಕ್ಕೆ ಐತಿಹಾಸಿಕ ಮಹತ್ವವನ್ನು ಒದಗಿಸಿಕೊಡುತ್ತವೆ.

೧. **ಪಾಂಡ್ಯ ವಂಶಾವಳಿ** : ದಕ್ಷಿಣ ಭಾರತದ ರಾಜಕೀಯ ಮತ್ತು ಸಾಂಸ್ಕೃತಿಕ ಇತಿಹಾಸದಲ್ಲಿ ಮಹತ್ವಪೂರ್ಣ ಸ್ಥಾನವಹಿಸಿದ ಪಾಂಡ್ಯರಾಜ್ಯರ ವಂಶಾವಳಿಯ ಮೂಲ ಇಂದಿಗೂ ನಿರ್ಧಾರವಾಗಿರುವುದಿಲ್ಲ. 'ರಾಬರ್ಟ್ ಸಿವೆಲ್' ಎಂಬುವರು "ಶಿಲಪ್ಪದಿಕಾರಂ" ಬರಹಗಳಿಂದ ಹಾಗೂ ಅಶೋಕನ ಕಾಲದ ಶಾಸನದಲ್ಲಿ ಬರುವ ಉಲ್ಲೇಖಗಳಿಂದ ತಿಳಿದುಬರುವಂತೆ ಸಿಡುಂಜೆಳಿಯನ್ ಪಾಂಡ್ಯ-೧ ವೆರ್ರಿವೇರ್ ಶೆಳಿಯನ್, ನಿಡುಂಜೆಳಿಯನ್-೨ ಉಗ್ರಪೆರುವಳಡಿ ಎಂದು ಪಾಂಡ್ಯ ವಂಶಾವಳಿ ಪ್ರಾರಂಭವಾಗುತ್ತದೆಂದು ಹೇಳಿರುವರು.

ಇತಿಹಾಸಕಾರರ ಪ್ರಕಾರ - ಕಂಡುಗಾನ್ (ಕ್ರಿ.ಶ.೫೯೦-೬೨೦) ಮತ್ತು ಅವನ ಮಗ ಮಾರವರ್ಮ ಅವನಿ ಶೂಲಾಮಣಿ (ಕ್ರಿ.ಶ. ೬೨೦-೬೪೫) ಗಳು ಪಾಂಡ್ಯವಂಶದ ಮೂಲಪುರುಷರೆಂದು ತಿಳಿಯುತ್ತದೆ.

ಹಾಲಾಸ್ಯಪುರಾಣದ ಪ್ರಕಾರ ಕೃತ, ತ್ರೇತಾ, ದ್ವಾಪರ, ಕಲಿಯುಗಗಳಲ್ಲಿ ಪಾಂಡ್ಯ ರಾಜರ ಚರಿತ್ರೆ ಬರುತ್ತಿದ್ದು, ಕುಲಶೇಕರಪಾಂಡ್ಯ, ಮಲಯದ್ವಜ, ಸುಂದರಮಹದೇವ, ಉಗ್ರಪಾಂಡ್ಯ ಎಂದು ಈ ರೀತಿಯಾಗಿ ವಂಶಾವಳಿ ಪ್ರಾರಂಭವಾಗುತ್ತದೆ. ಹಾಲಾಸ್ಯ ಪುರಾಣದಲ್ಲಿ ಬರುವ ಪಾಂಡ್ಯರಾಜರ ಹೆಸರುಗಳು ನಿಜವಾದ ಹೆಸರುಗಳೇ ಅಥವಾ ಬಿರುದುಗಳೇ ಎಂಬುದು ಖಚಿತವಾಗಿ ತಿಳಿದುಬರುವುದಿಲ್ಲ. ಈ ಪುರಾಣದಲ್ಲಿ ಬರುವ ಪಾಂಡ್ಯವಂಶಾವಳಿಯನ್ನು ಹೀಗೆ ಗುರುತಿಸಬಹುದು.

೧. **ಕೃತಯುಗ** : ಕುಲಶೇಖರ ಪಾಂಡ್ಯ- ಮಲಯಧ್ವಜ (ಈತನ ಹೆಂಡತಿ ಕಾಂಚನಮಾಲೆ. ಮಗಳು ತಟಾತಕ.) ಅಳಿಯ - ಸುಂದರಮಹಾದೇವ (ಶಿವ). ಮಗ - ಉಗ್ರಪಾಂಡ್ಯ

೨. **ತ್ರೇತಾಯುಗ** : ವೀರಪಾಂಡ್ಯ - ಅಭಿಷೇಕಪಾಂಡ್ಯ, ವಿಕ್ರಮಪಾಂಡ್ಯ, ರಾಜಶೇಕರ ಪಾಂಡ್ಯ ಕುಲೋತ್ತುಂಗಪಾಂಡ್ಯ - ಅನಂತಗುಣಪಾಂಡ್ಯ - ಕುಲಭೂಷಣ.

೩. **ದ್ವಾಪರಯುಗ** : ರಾಜೇಂದ್ರ ಪಾಂಡ್ಯ (ಈತನ ತಮ್ಮ ರಾಜಸಿಂಹ). ರಾಜೇಶ - ರಾಜ ಗಂಭೀರ - ಪಾಂಡ್ಯವಂಶ ಪ್ರದೀಪ - ಪುರುಹೂತಜಿತ್ತು ಪಾಂಡ್ಯವಂಶಪತಾಕ - ಸುಂದರೇಶ್ವರ ಪಾದಶೇಖರ - ವರಗುಣಪಾಂಡ್ಯ - ರಾಜರಾಜ.

೪. **ಕಲಿಯುಗ :** ಸುಗುಣಪಾಂಡ್ಯ – ಚಿತ್ರರಥ – ಚಿತ್ರಭೂಷಣ – ಚಿತ್ರಧ್ವಜ. ಚಿತ್ರದುರ್ಗ – ಚಿತ್ರಸೇನ – ಚಿತ್ರವಿಕ್ರಮ – ರಾಜಮಾರ್ತಾಂಡ – ರಾಜಚೂಡಾಮಣಿ – ರಾಜಶಾರ್ದೂಲ – ಧ್ವಜರಾಜ ಕುಲೋತ್ತಮ – ಅಯೋಧನ ಪ್ರವೀಣ – ರಾಜಕುಂಜರ – ಪರರಾಜಭಯಂಕರ – ಉಗ್ರಸೇನ – ಮಹಾಸೇನ ಶತ್ರುಂಜಯ – ಭೀಮರಥ – ಪ್ರತಾಪಮಾರ್ತಂಡ – ವಿಕ್ರಮಕಂಚುಕ – ಯುದ್ಧ ಕೋಲಾಹರ – ಅತುಳವಿಕ್ರಮ – ಅತುಳಕೀರ್ತಿ – ಕೀರ್ತಿವಿಭೂಷಣ – ವಂಶಶೇಖರ ಪಾಂಡ್ಯ (ಈತನು ವಿಕ್ರಮಚೋಳನನ್ನು ಸೋಲಿಸಿದನು. ಇವನ ಕಾಲದಲ್ಲಿಯೇ ಸಂಘಫಲಕ ಪ್ರಧಾನಲೀಲೆ ನಡೆದುದು.) ವಂಶಚೂಡಾಮಣಿ – ಪ್ರತಾಪಸೂರ್ಯವಂಶ ಧ್ವಜರಿಪುಮರ್ದರ್ಶನ – ಚೋಳವಂಶಾಂತಕ – ಚೇರವಂಶಾಂತಕ – ಪಾಂಡ್ಯವಂಶೇಶ – ವಂಶ ಶಿರೋಮಣಿ – ಪಾಂಡೇಶ್ವರ ಕುಲಧ್ವಜ – ವಂಶಭೂಷಣ – ಸೋಮಚೂಡಾಮಣಿ – ಭೂಪಚೂಡಾಮಣಿ – ಪಾಂಡ್ಯಕುಲೀಶ – ಅರಿಮರ್ದರ್ಶನ ಪಾಂಡ್ಯ – ಜಗನ್ನಾಥಪಾಂಡ್ಯ – ವೀರಬಾಹು – ವಿಕ್ರಮಬಾಹು – ವಿಕ್ರಮಬಾಹು ವಿಜಯ – ಕಾರುಣ್ಯ ಪಾಂಡ್ಯ – ಪುರುಷೋತ್ತಮ – ಕುಬ್ಜಪಾಂಡ್ಯ– ಸುಂದರಪಾಂಡ್ಯ

ಈ ಉಲ್ಲೇಖಗಳಲ್ಲಿ ಐತಿಹಾಸಿಕ ಸತ್ಯಗಳೂ ಇಲ್ಲವೇ ಇಲ್ಲ. ಆದರೆ ಇವುಗಳ ಬಗೆಗೆ ಇನ್ನಷ್ಟು ಶೋಧ ನಡೆದು ಖಚಿತ ನಿರ್ಣಯಗಳು ಸ್ಥಾಪಿತವಾಗಬೇಕಾಗಿದೆ.

೨. **ಸಂಘ ಸಾಹಿತ್ಯ :** ತಮಿಳುನಾಡಿನ ಅತ್ಯಂತ ಪ್ರಾಚೀನ ಸಾಹಿತ್ಯ ಸಂಘ ಸಾಹಿತ್ಯ. ಹಾಲಾಸ್ಯ ಪುರಾಣದಲ್ಲಿ ಬರುವ ಸಂಘ ಫಲಕ ಪ್ರಧಾನಲೀಲೆ, ದ್ವಿಜಾರ್ಯ ಪ್ರಧಾನಲೀಲೆ, ಸತ್ಕೀರರಕ್ಷಣ ಲೀಲೆ, ನತ್ಕೀರ ಸೂತ್ರೋಪದೇಶ ಲೀಲೆ, ಪ್ರಬಂಧ ತಾರತಮ್ಯ ನಿರ್ಣಯಲೀಲೆ, ತುರಗ ವಿಕ್ರಯಲೀಲೆ, ಪಾಂಡ್ಯಜ್ವರಶಮನಲೀಲೆ, ನಗ್ನಶೂಲಾರೋಹಣ ಲೀಲೆಗಳಲ್ಲಿ ಸಂಘಸಾಹಿತ್ಯ ಮತ್ತು ಸಂಘಕವಿಗಳನ್ನು ಕುರಿತಾಗಿ ವಿವರಿಸಲಾಗಿದೆ.

ಬ್ರಹ್ಮನು ಆನಂದವನದಲ್ಲಿದ್ದಾಗ ಉದ್ಧತಳಾದ ಸರಸ್ವತಿಗೆ ನಲವತ್ತೆಂಟು ಮಾನುಷ ಜನ್ಮವನ್ನು ಪಡೆಯುವಂತೆ ಶಾಪಕೊಟ್ಟಾಗ ಹುಟ್ಟಿದ ಅಕಾರಾದಿ ಹಕಾರಾಂತ ವರ್ಣಗಳೇ ೪೮ ಜನ ಸಂಘಕವಿಗಳು. ಇವರಲ್ಲಿ ನತ್ಕೀರ, ಕಪಿಲ, ಭರತ, ಮಾಣಿಕ್ಯವಾಚಕ, ತಿರುಜ್ಞಾನಸಂಬಂಧರ್ ಇವರೇ ಮೊದಲಾದವರು ಪ್ರಮುಖರು. ಒಂದು ಸಾರೆ ಇವರೆಲ್ಲರೂ ಸೇರಿ ಸುಂದರೇಶ್ವರನ ಕೃಪೆಯಿಂದ ಗೇಣುದ್ದದ ಫಲಕವನ್ನು ಪಡೆಯುತ್ತಾರೆ. ಒಬ್ಬೊಬ್ಬರು ಏರಿದಂತೆಲ್ಲಾ ಅದು ಗೇಣುದ್ದದ್ದ ಹೆಚ್ಚುತ್ತಿದ್ದಿತು. ಹೀಗಿರುವಾಗ ಕೆಲವರಿಗೆ ತಮ್ಮ ಪ್ರಬಂಧಗಳೇ ಶ್ರೇಷ್ಠ ಎಂಬ ಭಾವನೆ ತಲೆದೋರಿ

ಅವರಲ್ಲಿಯೇ ತಾರತಮ್ಯ ಉಂಟಾಗುತ್ತದೆ. ಆಗ 'ಹ' ಕಾರ ಸ್ವರೂಪಿಯಾದ ಶಿವನ ಕಾವ್ಯವೇ ಶ್ರೇಷ್ಠವೆಂದು ಆಕಾಶವಾಣಿಯಾಗುತ್ತದೆ.

ವಂಶಶೇಖರಪಾಂಡ್ಯನ ಮಗ ವಂಶಚೂಡಾಮಣಿಯು ರಾಜ್ಯವಾಳುತ್ತಿರುವಾಗ ಶಿವೆಯ ತುರುಬು ಸಹಜವಾಗಿ ಪರಿಮಳದಿಂದ ಕೂಡಿದುದೋ ಅಥವಾ ಪುಷ್ಪಗಂಧ ಮೊದಲಾದ ಸುಗಂಧಗಳಿಂದ ಪರಿಮಳಗೊಂಡಿತೋ ಎಂಬ ಅನುಮಾನವನ್ನು ಪರಿಹರಿಸಿದ ಬಡಬ್ರಾಹ್ಮಣನನ್ನು ಹೀಗಳಿದ 'ನಕ್ಕೀರ' ಎಂಬ ಕವಿಯನ್ನು ಶಿವನು ತನ್ನ ಹಣೆಗಣ್ಣಿನಿಂದ ಸುಟ್ಟು ಹಾಕುವನು. ನಂತರದಲ್ಲಿ ಕಪಿಲ ಭರತ, ಗಣಿತ ಮೊದಲಾದ ಸಂಘಕವಿಗಳೆಲ್ಲರ ಅಪೇಕ್ಷೆಯಂತೆ ಪುನಃ ಪೀಠದಲ್ಲಿ ಸೇರಿಸಿದನು. ಮುಂದೆ ಅಗಸ್ತ್ಯ ಮುನಿಯಿಂದ ನಕ್ಕೀರನಿಗೆ ಸೂತ್ರೋಪದೇಶ ಮಾಡಿಸುವನು.

ವಾತಪುರೀಶ್ವರ ಜ್ಞಾನದೀಕ್ಷಾ ಕಾರಣಲೀಲೆಯಲ್ಲಿ ಬರುವಂತೆ ವಾತಪುರೇಶ ಎಂಬ ಬಡಬ್ರಾಹ್ಮಣನಿಗೆ ಶಿವನು ಕೊಟ್ಟ ದೀಕ್ಷಾನಾಮವೇ ಮಾಣಿಕ್ಯವಾಚಕ. ಈತ ಪಿಷ್ಟಮೃದ್ಬರಣ ಲೀಲೆಯಲ್ಲಿ ಬರುವ ಬೌದ್ಧರ ಉಪಟಳವನ್ನು ಜಯಿಸುವನಲ್ಲದೆ, ಮೂಕ ಹೆಣ್ಣಿಗೆ ಮಾತು ಬರಿಸುವನು. ತುರಂಗವಿಕ್ರಯ ಲೀಲೆಯಲ್ಲಿ ಸುಂದರೇಶ್ವರನೇ ಸ್ವತಃ ಸಾಧ್ವಿಯ ರೂಪದಲ್ಲಿ ಬಂದು ಅರಿಮರ್ದನ ಪಾಂಡ್ಯನಿಗೆ ಕುದುರೆಗಳನ್ನು ಕೊಡುವ ಮೂಲಕ ವಾತಪುರೇಶನಿಗೆ ಸಹಾಯ ಮಾಡುವನು.

ಮೂರನೆಯ ವರ್ಷದಲ್ಲಿಯೇ ಶಿವಜ್ಞಾನ ಸಂಪನ್ನನಾದ ತಿರುಜ್ಞಾನ ಸಂಬಂಧರ ಎಂಬುವನು ಷಣ್ಮುಖನ ಅಂಶ ಸಂಭೂತನಾದ 'ಜ್ಞಾನ ಸಂಬಂಧ' ಎಂಬ ಹೆಸರಿನಲ್ಲಿ ಬಂದು ಕುಬ್ಜಪಾಂಡ್ಯನ ಜ್ವರವನ್ನು ಭಸ್ಮದಿಂದ ಹೋಗಿಸುವನು. ಜೈನರೊಡನೆ ಪಂಧ್ಯದಲ್ಲಿ ಶಿವಮಂತ್ರದ ಪತ್ರಗಳನ್ನು ಬೆಂಕಿಯಲ್ಲಿ ಹಾಕಿ ಸುಡದ ಹಾಗೆ ಮಾಡುವನು. ಶಿವಮಂತ್ರ ಬರೆದಿದ್ದ ಪತ್ರಗಳು ವೇಗವತೀ ನದಿಯ ಪ್ರವಾಹಕ್ಕೆ ಎದುರಾಗಿ ಹೋಗುವಂತೆ ಮಾಡಿ ಜೈನರನ್ನು ಗೆದ್ದು ಅವರಲ್ಲಿ ಶೈವರಾಗಿ ಪರಿವರ್ತನೆ ಹೊಂದದೇ ಇರುವವರನ್ನು ಶೂಲಕ್ಕೆ ಹಾಕಿಸುವನು.

ಪೌರಾಣಿಕ ಸ್ಪರ್ಶಹೊಂದಿದ ಈ ಸಂಗತಿಗಳು ಐತಿಹಾಸಿಕ ಸತ್ಯವನ್ನು ಪಡೆದಿರುವುದು ಗಮನಾರ್ಹವೆನಿಸಿದೆ.

೨. ಪೌರಾಣಿಕ ಅಂಶಗಳು :

ಹಾಲಾಸ್ಯ ಪುರಾಣ – ಪುರಾಣ ಕಾವ್ಯವಾಗಿರುವುದರಿಂದ ಇದರಲ್ಲಿ ಪೌರಾಣಿಕ ಸಂಗತಿಗಳಿಗೆ ಆದ್ಯತೆ ದೊರೆತಿದೆ. ಮೀನಾಕ್ಷಿ – ಸುಂದರರ ಆವಾಸಸ್ಥಾನವಾಗಿ, ಪಾಂಡ್ಯರಾಜರ ರಾಜಧಾನಿಯಾಗಿ ಪ್ರಸಿದ್ಧ ತೀರ್ಥಕ್ಷೇತ್ರವಾಗಿ, ದ್ರಾವಿಡ ಸಂಸ್ಕೃತಿಯ ಕೈಗನ್ನಡಿಯಾಗಿ ಮೆರೆದ ಮಧುರೆಯ ಉಲ್ಲೇಖ ಹಾಲಾಸ್ಯ ಪುರಾಣದಲ್ಲಿ ಬರುವ ಮೊದಲ ಪೌರಾಣಿಕ ಸಂಗತಿಯಾಗಿದೆ.

ಹಾಲಾಸ್ಯ ಪುರಾಣದಲ್ಲಿ ಬರುವ ಮಧುರೆಗೆ ಕದಂಬವಿಪಿನ, ಕನ್ಯಕಾನಗರಿ, ವಿದ್ಯಾನಗರಿ, ಮಧುರಾಪುರ, ಶಿವಲೋಕ, ಭೂಲೋಕ, ಜಿವನ್ಮುಕ್ತಿಪುರ, ಚತುಷ್ಕೂಟಪುರ, ದ್ವಾದಶಾಂತ ಶಿವಾಸ್ಪದ ಎಂಬ ವಿಭಿನ್ನ ಹೆಸರುಗಳಿದ್ದು, ಒಂದೊಂದು ಹೆಸರಿಗೂ ಒಂದೊಂದು ಐತಿಹ್ಯಗಳಿರುವುದನ್ನು ಕಾಣಬಹುದು. 'ಕದಂಬವನಪುರ ನಿರ್ಮಾಣಲೀಲೆ'ಯಲ್ಲಿ ಬರುವಂತೆ, ಕುಲಶೇಖರಪಾಂಡ್ಯನ ಸ್ವಪ್ನದಲ್ಲಿ ಶಿವ ಸಿದ್ಧವೇಷದಲ್ಲಿ ಬಂದು ಕದಂಬವನವನ್ನು ಕದಂಬಪುರವನ್ನಾಗಿ ನಿರ್ಮಿಸಬೇಕೆಂದು ಪ್ರೇರಣೆಯಿತ್ತಾಗ, ದೊರೆ ಮಂತ್ರಿಗಳ ಸಲಹೆಯಂತೆ ಅಡವಿಯನ್ನು ಕಡಿದು ಪುರನಿರ್ಮಾಣ ಮಾಡುವನು. ಅದು ಅಂದಿನಿಂದ ಕದಂಬಪುರ ಎನಿಸಿತು.

'ನಗ್ನಸರ್ಪಹನನ ಲೀಲೆ'ಯಲ್ಲಿ ಬರುವಂತೆ ಅನಂತಗುಣಪಾಂಡ್ಯನನ್ನು ಕೊಲ್ಲುವುದಕ್ಕಾಗಿ ಜೈನರು ಅಭಿಚಾರಿಯಾಗದಿಂದ ಸೃಷ್ಟಿಸಿದ ಭಯಂಕರವಾದ ಸರ್ಪದ ವಿಷವನ್ನು ಶಿವನು ತನ್ನ ಜಡೆಯ ತಂಗದಿರಿನಿಂದ ತೆಗೆದುಹಾಕುವನು. ಹೀಗೆ ಅಂದು ಶಿವನು ಅಲ್ಲಿಯ ವಿಷವನ್ನು ಮಧುರವಾಗಿ ಮಾಡಿದ್ದರಿಂದ ಆ ಸ್ಥಳಕ್ಕೆ 'ಮಧುರಾಪುರ' ಎಂದು ಹೆಸರಾಯಿತು.

'ವರಗುಣಪಾಂಡ್ಯ ಬ್ರಹ್ಮಹತ್ಯೆ ವಿನಾಶನ ಲೀಲೆ' ಯಲ್ಲಿ ವರ್ಣಿತವಾದಂತೆ, ದೊರೆಯ ಕುದುರೆಯ ಕಾಲಿಗೆ ಸಿಕ್ಕ ಬ್ರಾಹ್ಮಣನೊಬ್ಬನು ಸಾವನ್ನಪ್ಪಿದಾಗ ಬೊಮ್ಮೇರ ದೊರೆಯನ್ನು ಹಿಂಬಾಲಿಸುತ್ತದೆ. ಪರಿಹಾರಾರ್ಥವಾಗಿ ರಾಜ ಸುಂದರೇಶ್ವರ ದೇವಾಲಯಕ್ಕೆ ಸಾವಿರದೆಂಟು ಪ್ರದಕ್ಷಿಣೆಗಳನ್ನು ಹಾಕಿದಾಗ, ನುಡಿದ ಆಕಾಶವಾಣಿಯಂತೆ ಶ್ರೀಮಾಧ್ಯಾರ್ಜುನ ಕ್ಷೇತ್ರದಲ್ಲಿ ದೇವಸ್ಥಾನ ಪ್ರಸಾದಗಳನ್ನು ಕಟ್ಟಿಸುವನು. ಆಗ ಪೌರಾಣಿಕರಿಂದ ಕೇಳಿದ ಶಿವಲೋಕದ ವೈಭವವನ್ನು ಕಣ್ಣಾರೆ ನೋಡಬೇಕೆಂದು ಇಚ್ಛೈಸಿದಾಗ ಸ್ವತಃ ಶಿವನೇ ದೊರೆಗೆ ಶಿವಲೋಕ ದರ್ಶನವನ್ನು ಕರುಣಿಸಿದ ಪರಿಣಾಮವಾಗಿ ಆ ಕ್ಷೇತ್ರ 'ಭೂಲೋಕ – ಶಿವಲೋಕ'ವೆಂದು ಪ್ರಸಿದ್ಧವಾಯಿತು.

ಪುರಸೀಮಾ ಪ್ರದರ್ಶನ ಲೀಲೆಯಲ್ಲಿ ಬರುವಂತೆ ವಂಶಶೇಖರ ಪಾಂಡ್ಯ ರಾಜ್ಯವಾಳುತ್ತಿರುವಾಗ ಹೆಚ್ಚಿದ ಜನಸಂಖ್ಯೆಯಿಂದಾಗಿ ದೊರೆ ಸುಂದರೇಶ್ವರನನ್ನು ಪ್ರಾರ್ಥಿಸುವನು. ಆತ ವಾಸುಕಿ ಎಂಬ ಸರ್ಪವನ್ನು ನೇಮಿಸಿ ಪುರಸೀಮೆಯನ್ನು ನಿರ್ದೇಶಿಸುವಂತೆ ತಿಳಿಸುತ್ತಾನೆ. ಅದೇ ರೀತಿ ಮಾಡಿದಂದಿನಿಂದ ಆ ಕ್ಷೇತ್ರ ಕದಂಬವನ ಎನ್ನಿಸಿತು. ಜೊತೆಗೆ ಹಾಲಾಸ್ಯ ಎನ್ನುವ ಹೆಸರನ್ನೂ ಹೊಂದಿತು. ಪೂರ್ವದ ಬಾಗಿಲು ಪುಷ್ಪವನಕ್ಷೇತ್ರ, ದಕ್ಷಿಣದ ಬಾಗಿಲು ಸುಬ್ರಹ್ಮಣ್ಯ ಶೈಲಿ, ಪಶ್ಚಿಮದ ಬಾಗಿಲು ಪದ್ಮಿಕಾಪುರ, ಉತ್ತರದ ಬಾಗಿಲು, ವೃಷಭಾಚಲವೆಂದು ಹಾಲಾಸ್ಯಕ್ಷೇತ್ರದ ಸೀಮೆ ನಿರ್ಧಾರವಾಗುತ್ತದೆ.

ಹೀಗೆ ಇಡೀ ಕಾವ್ಯದ ತುಂಬ ಪೌರಾಣಿಕ ಸಂಗತಿಗಳು ಹೆಣೆದುಕೊಂಡು ಪುರಾಣ ಕಾವ್ಯಗಳಲ್ಲಿ ಇದು ಮಹತ್ವದ ಸ್ಥಾನವನ್ನು ಪಡೆಯಲು ಕಾರಣವಾಗಿದೆ.

೩. ಸಾಹಿತ್ಯಿಕ ಅಂಶಗಳು :

ಪುರಾಣ, ಇತಿಹಾಸ ಸಂಗತಿಗಳನ್ನು ಗರ್ಭೀಕರಿಸಿಕೊಂಡ ಹಾಲಾಸ್ಯ ಪುರಾಣ ಇಮ್ಮಡಿ ಮುರಿಗಾ ಗುರುಸಿದ್ಧರ ಪ್ರತಿಭಾ ಸ್ಪರ್ಶದಿಂದ ಉತ್ತಮ ಕಾವ್ಯವಾಗಿಯೂ ಮೇಲ್ಮೆಯನ್ನು ಮೆರೆದಿದೆ. ಇಲ್ಲಿ ಬರುವ ವರ್ಣನೆ, ರಸಪ್ರತಿಪಾದನೆ, ಅಲಂಕಾರ, ಭಾಷಾಬಳಕೆ, ಛಂದೋಪ್ರಯೋಗಗಳು ಪುರಾಣವನ್ನು ಉತ್ತಮ ಕಾವ್ಯವಾಗಿಸುವಲ್ಲಿ ಯಶಸ್ವಿಯಾಗಿವೆ.

೧. **ವರ್ಣನೆ:** ಚಂಪೂ ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳು ಬರಬೇಕೆಂಬುದು ಸಾಮಾನ್ಯ ನಿಯಮ. ಹಾಲಾಸ್ಯ ಪುರಾಣ ಇದಕ್ಕೆ ಹೊರತಾಗಿಲ್ಲ, ಆರಂಭದಲ್ಲಿ ಕವಿ, ಸಂಪ್ರದಾಯದಂತೆ ಸಮುದ್ರದ ವರ್ಣನೆ ಮಾಡಿರುವನು.

'ಹರಿಗಂ ಶಂಖಮನಿತ್ತಂ
ಗಿರೀಶಂಗಂ ಶಶಿಯನಂದು ಕೊಟ್ಟಂ ವಿಧಿಯಂ
ಸರಸಿಜ ಪೀಠದೊಳಿರಿಸಿದೆ
ನಿರಪಿನಗಣಿಯಾವನೆಂದು ಮೊರೆದಂದು ಶರಧೀ'

ಎಂದು ಭಾರತೀಯ ಜನತೆಯಲ್ಲಿರುವ ಸಮುದ್ರದ ಪೂರ್ವೇತಿಹಾಸವನ್ನೆಲ್ಲ ಅಡಕಗೊಳಿಸಿದ್ದಾನೆ. ಇನ್ನು ಕೆಲವು ಪದ್ಯಗಳಲ್ಲಿ ಕವಿ ತನ್ನ ವರ್ಣನಾ ಚಾತುರ್ಯದ ವೈಖರಿಯ ಹಲವು ಮುಖಗಳನ್ನು ತೋರಿಸಿರುವನು. ಅವುಗಳಲ್ಲಿ ಭೇಟಿಯಾಡಲು ಬಂದ ಕಿರಾತನ ಕಣ್ಣಿಗೆ ಎದುರಾದ ಆಲದಮರದ ವರ್ಣನೆ ಓದುಗನ ಗಮನವನ್ನು ವಿಶೇಷವಾಗಿ ಸೆಳೆಯುತ್ತದೆ.

'ಕೆಂಬರಲಿಂದೆ ಪಚ್ಚವಣಿಯಿಂದೆ ಸುವಿದ್ರುಮದಿಂದೆ ಪರ್ವಿದಾ
ಡಂಬರ ಮಲ್ಲಿಕಾ ಮಕುಟ ಮೌಕ್ತಿಕದಿಂದುಳಿದಿರ್ದ ರನ್ನದಿಂ
ದಂಬುಜ ಪುತ್ರನಂದು ಸಲೆ, ಪೊರೆವಂದಮೊ ತಾನೆನಲಾಲವೊಪ್ಪಿರಲ್'

ಅದೇ ರೀತಿ ತುರಂಗವಿಕ್ರಯ ಲೀಲೆಯಲ್ಲಿ ವಾತಮರೇಶ ತಂದ ಕುದುರೆಗಳು ಮಧುರೆಯನ್ನು ಪ್ರವೇಶಿಸುವ ಸಂದರ್ಭದಲ್ಲಿ ದಶದಿಕ್ಕುಗಳಲ್ಲಿ ಉಂಟಾಗುವ ಶಬ್ದವನ್ನು ಹೀಗೆ ವರ್ಣಿಸುತ್ತಾನೆ.

'ದಿಕ್ಕಂ ತುಂಬುತ್ತೊತ್ತುತಂಬಲ್
ಚೊಕ್ಕು ಭೋರೆಂದೆತ್ತಂ ನೋಡಲ್
ಪಿಕ್ಕುತ್ತಂ ವಾದ್ಯಂಗಳ ಕೇಳಲ
ತಕ್ಕಂತಾಗಲ್ ಚೋದ್ಯಂಬೋಲ್ ತಾಂ
ಧುಮುಕಿ ತುರುಗವೃಂದಗಳ . . . . .'

ಹೀಗೆ ಕವಿಯು ತನ್ನ ಸಮಕಾಲೀನ ಜೀವನವನ್ನು ಚಿತ್ರಿಸುವಾಗಲೂ ಸಹಿತ 'ಮಾಡಿದ ಪುಳ್ಗಿಕಜ್ಜ' ಪಪ್ಪಳ, ಸಂಡಿಗೆ, ಪಚ್ಚಡಿ, ಸೊಪ್ಪು, ಸೊವಡಕ್ಕಿ, ಗಚ್ಚುಸುಚ್ಚು, ತವುಡು, ಮದುರ್ವಶಿಗನ ಕೈಕೀಳಾಗಿ, ಮದುವಣಗಿತ್ತಿಯ ಕೈಮೇಲಾಗಿ ಧಾರೆಯ ನಿಲಿಯಲ್ ಎಂಬ ಅನೇಕ ಸಂಗತಿಗಳನ್ನು ತಿಳಿಸಿದ್ದಾನೆ.

ಕವಿಯ ಔಚಿತ್ಯ ಪ್ರಜ್ಞೆಯಿಂದಾಗಿ ಸಾಂಪ್ರದಾಯಿಕ ವರ್ಣನೆಗೆ ಕಡಿವಾಣ ಬಿದ್ದಿದೆಯಾದರೂ ಸಹಿತ ಮೇಲಿನಂಥ ನೂರಾರು ಚಿತ್ರಗಳನ್ನು ಕಾವ್ಯದುದ್ದಕ್ಕೂ ಬಿಡಿಸಿರುವುದನ್ನು ಕಾಣಬಹುದು.

೨. ಅಲಂಕಾರ :

ಕವಿಯ ಭಾಷೆಯನ್ನೂ, ಶೈಲಿಯನ್ನೂ ಅಪೂರ್ವವಾಗಿ ರೂಪಿಸತಕ್ಕವು ಉಪಮೆ, ದೃಷ್ಟಾಂತ, ರೂಪಕಾದಿ ಅಲಂಕಾರಗಳು. ಹಾಲಾಸ್ಯ ಪುರಾಣದಲ್ಲಿ ಉಪಮೆಗಳಿಗೆ ಪ್ರಥಮ ಪ್ರಾಶಸ್ತ್ಯ ಅವುಗಳಲ್ಲಿ ಕವಿ ತನ್ನ ಅಭಿಪ್ರಾಯವನ್ನು ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಿದ್ದಾನೆ. ಉದಾ – ಬಗೆದಂ ವೃತ್ರಾಭಿದಂ ಮೂಜಗದ, ತಲೆಗೆ ಕಲ್ಲಾಗಿ, ಸರಿವಳಿಯಂತ್ಯದೊಳಂಬರಸ್ಥ, ಶಶಿಯಂತು, ಮರನ ಬುಡಕೆರೆಯ ನೀರಂ ತರುಶಾಖೆಗಳೆಲ್ಲಮಿಂಟುವಂದದಿನ್, ನಡೆನಡೆ ಪೋಗೇಣಂಗಳ್ ತಾವೆಂತೋಈಡುವವಡವಿಗೆ ಕಡುಬರದಿನವರವೋಲ್, ಕೂಡಿದ ಕಾಗೆಗಳ ಮೇಳದಿಂದ ಮರದಿಂದೆ ಝಲ್ಲನೆ ಕೆದರ್ದು ಪಾರ್ವವೊಲಾಕ್ಷಣಂ, ತಡೆಯದೆ ತುಪ್ಪುಳುದರಿದ ಕೋಳಿಗಳಂದದೆ ಗುಳ್ಮೆಗಳಂ ಕಡು ತವಕಂ ಮಿಗಲ್ ತೆರೆದು, ಈಚಲಮುಳುಮದು ನೆಲದೊಳ್ ಗೋಚರಿಸತೆ ಗಳಿಗೆಯೊಳಗೆ ನಗೆದಾಡುವ ವೊಲ್, ಕೀಟನಲ್ಲಿ ಪಟ್ಟು ಪುಟ್ಟಿದಂತೆ, ಸಿರಿಗಂಗಂಡಾನೆಯ ಪರಿಯಿಂ' ಎಂಬಂಥ ಮಾತುಗಳು ಕವಿಯ ದೃಷ್ಟಾಂತ ಶಕ್ತಿಗೆ, ಉಪಮಾ ಚಾತುರ್ಯಕ್ಕೆ ಸಾಕ್ಷಿಯಾಗಿವೆ.

ಸಂದರ್ಭಾನುಸಾರವಾಗಿ ಕವಿ ಬಳಸಿದ ಗಾದೆಗಳೂ, ನಾಣ್ಣುಡಿಗಳೂ ಅವನ ದೇಶೀತನದ ಚೆಲುವನ್ನು ಮೆರೆದಿದೆ. 'ನುಂಗಿದ ತುಳ್ತಿಗೆ ರುಚಿಯ ಸಂಗಳಿಸಿದೊಡುಂಟೆ, ಸೇರದ ನಾಯಿಗಳ ನಿಂತೊಡೆ ಚಾರುವಿವಾಹದ ಸುಲಗ್ನಮದು ಕೆಡುವುದೆ, ಸಾವಿನಕಾಲಕ್ಕಂತ್ಯಾಣವೊಂದೆ ಭಾವಿಸ ವಜ್ರ, ಅರಸು ಕಟ್ಟಿದ ಮೇಲೆ ತೀರ್ದಪುದಾಟ' ಮೊದಲಾದ ನುಡಿಗಳು ಕವಿಯ ಸಮರ್ಥ ಅಭಿವ್ಯಕ್ತಿಗೆ ಅಪೂರ್ವ ಶಕ್ತಿಗಳಾಗಿ ನಿಂತಿವೆ.

೩. ರಸ :

ಹಾಲಾಸ್ಯ ಪುರಾಣದಲ್ಲಿ ಪ್ರತಿಪಾದಿತವಾದ ರಸಗಳಲ್ಲಿ ಭಕ್ತಿರಸಕ್ಕೆ ಪ್ರಥಮಸ್ಥಾನ ಮೀಸಲಾಗಿದೆ. ವೇದಕಾಲದಿಂದಲೂ ಭಾರತೀಯ ಜನಜೀವನದಲ್ಲಿ ಭಕ್ತಿಯಸ್ಥಾನ ಹಿರಿದಾಗಿದೆ. ಮೂಲತಃ ಭಕ್ತಿ, ಭಯ ಮತ್ತು ಪ್ರೀತಿಗಳಲ್ಲಿ ಅವಿರ್ಭಾವವಾಗುವಂತದು.ಮೊದಲನೆಯದು ಮಾರ್ಜಾಲಕಿಶೋರನ್ಯಾಯದಂತಾದರೆ, ಎರಡನೆಯದು ಮರ್ಕಟಕಿಶೋರನ್ಯಾಯದಂತೆ, ಹಾಲಾಸ್ಯ ಪುರಾಣದಲ್ಲಿ ಇಂಥ ಅನೇಕ ಪ್ರಸಂಗಗಳನ್ನು ಕಾಣಬಹುದು.

ತೃತೀಯ ಕಾಂಡದಲ್ಲಿ ಬರುವ ಸೂಕರಶಿಶುಸ್ತನ್ಯ ಪ್ರಧಾನಲೀಲೆಯಲ್ಲಿ ಬರುವಂತೆ 'ಪಾರ್ವತಿಯೊಡನೆ ವಿಮಾನದಲ್ಲಿ ಗಗನವಿಹಾರಿಯಾಗಿ ಹೋಗುತ್ತಿದ್ದ ಶಿವ ಬಿಸಿಲಿನಲ್ಲಿ ಬಾಡಿ ಬಳಲುತ್ತಿದ್ದ ಹಂದಿಯ ಮರಿಗಳಿಗೆ, ಹೆಣ್ಣು ಹಂದಿಯ ವೇಷತಾಳಿ ಹಾಲನ್ನು ಕುಡಿಸಿದಾಗ, ಅತ್ಯಂತ ಹೇಯವಾದ ಈ ಅವತಾರವೇಕೆ? ಎಂದು ಪ್ರಶ್ನಿಸಿದ ಪಾರ್ವತಿಗೆ ಶಿವ ಕೊಡುವ "ಸರಸಿಜೋದ್ಭವ ನಾದಿಯಾಗಿ ಪುಳುಕಡೆಯಾಗಿ ತರುಣಿಯಾನೀವಿಶ್ವಮಂ ಮುಸುಂಕಿರಲಾಗಿ" ಎನ್ನುವ ಉತ್ತರ ತುಂಬಾ ಔಚಿತ್ಯಪೂರ್ಣವಾಗಿದೆ, ಮಾರ್ಮಿಕವಾಗಿದೆ.

ಎರಡನೆಯದಾಗಿ – ವೇಗವತೀ ನದಿ ಉಕ್ಕಿ ಹರಿದು ಬಂದಾಗ ಒಡೆದುಹೋದ ವೇಗವತಿಯ ದಂಡೆಯನ್ನು ಶಿವ ಕೂಲಿಕಾರನ ವೇಷಧರಿಸಿಕೊಂಡು ಬಂದು ಕಟ್ಟಿ ಮುದುಕಿಯನ್ನು ಕಾಪಾಡುತ್ತಾನೆ. ಅದೇ ರೀತಿ ಭದ್ರನ ಸೇವಕನ ವೇಷವನ್ನು ಧರಿಸಿ ಸೌದೆ ಮಾರುತ್ತ ಸಂಗೀತವನ್ನು ಹಾಡಿ ಭದ್ರನೊಡನೆ ಸ್ಪರ್ಧಿಸಲು ಬಂದಿದ್ದ ಹಾಡುಗಾರ ಓಡಿಹೋಗುವ ಹಾಗೆ ಮಾಡುತ್ತಾನೆ.

ಭಕ್ತಿಯನ್ನೇ ತನ್ನ ಕಾವ್ಯದಲ್ಲೆಲ್ಲಾ ಪ್ರಧಾನವಾಗಿ ನಿರ್ವಹಿಸಿದ ಕವಿ ಕಾವ್ಯಾರಂಭದಲ್ಲಿ ಶಿವನನ್ನು, ಕಾವ್ಯಾಂತ್ಯರದಲ್ಲಿ ಶಿವ, ಪಾರ್ವತಿ, ತೋಂಟದ ಸಿದ್ಧಲಿಂಗಯತಿಗಳನ್ನು ಭಕ್ತಿಪೂರ್ವಕವಾಗಿ ಸ್ತುತಿಸಿರುವನು. ಭಕ್ತಿಯ ಜೊತೆಗೆ ಉಳಿದ ರಸಗಳೂ ಕಾವ್ಯದಲ್ಲಿ ಹಿತಮಿತವಾಗಿ ಪ್ರತಿಪಾದನೆಗೊಂಡಿವೆ.

೪. ಭಾಷೆ :

ಉಭಯಭಾಷಾ ಪಂಡಿತರೆನಿಸಿದ ಇಮ್ಮಡಿ ಮುರಿಗಾ ಗುರುಸಿದ್ಧರ ಭಾಷಾ ಪ್ರಯೋಗ, ಸಾಧನೆ, ಸಿದ್ಧಿ, ಔಚಿತ್ಯಜ್ಞಾನಗಳು ಸಹೃದಯರನ್ನು ಆಶ್ಚರ್ಯಗೊಳಿಸುತ್ತವೆ. ಸಂಸ್ಕೃತ – ಕನ್ನಡ ಭಾಷೆಗಳೆರಡನ್ನು ತನ್ನ ಕಾವ್ಯದಲ್ಲಿ ಹದವಾಗಿ, ಮಿದುವಾಗಿ ಬಳಸಿ ಸಹೃದಯರಿಗೆ ಕಾವ್ಯ ಇನಿದಾಗುವಂತೆ ಮಾಡಿದ್ದಾನೆ. ಪ್ರಸಂಗಕ್ಕೆ ತಕ್ಕ ಹಾಗೆ ಭಾಷೆಯನ್ನು ಬಳಸುವುದರೊಂದಿಗೆ ಪೌರಾಣಿಕ ಕಥಾವಸ್ತು ಓದುಗರಿಗೆ ಬೇಸರವಾಗದಂತೆ ನೋಡಿಕೊಂಡಿದ್ದಾನೆ. ಉದಾ: ಸಂಸ್ಕೃತ

'ರುಡ್ರಾಡಿಡ್ಡರಿ ಭೂಡ್ನಿ ರೂಢ್ಯಮಕೃಡುಡ್ವಾಢೋತ್ತಮಾಂಗ ಪ್ರಭೋ
ತ್ರಿಡ್ರಾಡ್ರಾಜಹುತಾಕನೇಕ್ಷಣ ಮೃಕಂಡಿಷ್ಪ ಪ್ರದೋದ್ಯನ್ಮೃಡ
ಭ್ರಾಡ್ರಾಮಾಂಚಿತ ಪಾಂಡವಾಸ್ತ್ಯದ ದುರೊಡೋತ್ಪುಂಡರೀಕಾರ್ಧನಾ
ತೃಡ್ರಾಹಿತ್ಯ ಜುಡುಷ್ಯಧೀತವಚನ ಶ್ರೀ ಸುಂದರೇಶಾವಮಾಂ'

ಕನ್ನಡ :

'ಒಂದು ತಲೆವಾಗಿಲೊಳ್ ಸತಿ
ನಿಂದಿರ್ದೆಲೆ ಮಂತ್ರಿಗಳಿರ ನಿಮ್ಮಭಿಮತಮಂ
ಸಂದುದದಾವುದದಂ ನಾಂ
ಚಂದದೆ ಬಲ್ಲಿಂ ಸಮಂತು ಕೊಟ್ಟಪೆನುಸಿರಿರಿ.

ಇಂತೆಂದ ನುಡಿಯನಾಲಿಸಿ
ಸಂತಸದಿಂದಿಲ್ಲರೆಂದಕಿಲೆ ವೈಶ್ಯನೆ ನೀಂ
ಕಂತುಹರಭಕ್ತನದಳಿಂ
ದಂತರಿಸದೆ ರಾಯಮಕುಟಮಣಿಗಳನೀಯ್ಯ'

ಗದ್ಯ: 'ಆ ವೇಳೆಯೊಳ ಸರ್ವಮಂಗಳೆಗಂ ಕಲ್ಯಾಣಾರ್ಥಮಾಗಿ ಗಂಧತೈಲಾಭ್ಯಂಗನಮಂ ಮಾಡು ತರಿಸಿನಮಂ ಪೂಸಿ ಪರಿಮಳೋದಕದಿಂ ಜಳಕಂಗಳೊಳಿಸಿ ಪೊಂಜೆರಗಿನಪರಂಜಿಯ ಭಿನ್ನಧವಳಬಟ್ಟೆಯಂ ನಿರಿವಿಡಿದುಡಿಸಿ . . . . . '

ಹೀಗೆ ಕವಿ ಯಾವ ಭಾಷೆಯನ್ನಾದರೂ ಲೀಲಾಜಾಲವಾಗಿ, ಉಚಿತವಾಗಿ ಬಳಸಿಕೊಳ್ಳಬಲ್ಲ ಗುರುಸಿದ್ಧ ಸಮನಾರ್ಥಕ ಪದಪ್ರಯೋಗದಲ್ಲೂ ಸಿದ್ಧಹಸ್ತ. ತನ್ನ ಸಮಕಾಲೀನ ಭಾಷೆಯನ್ನು ಪದಪ್ರಯೋಗಗಳನ್ನು ಉಚಿತವಾಗಿ ಬಳಸಿಕೊಂಡು ಕಾವ್ಯ ಹೆಚ್ಚು ಆತ್ಮೀಯವಾಗುವಂತೆ ಮಾಡಿದ್ದಾನೆ. 'ರುದ್ರಾಕ್ಷಿ' ಎನ್ನುವ ಪದಕ್ಕೆ ಆತ ಸೃಷ್ಟಿಸಿರುವ ಶಬ್ದಗಳನ್ನು ನೋಡಿ : ರುದ್ರನೇತ್ರರತ್ನ, ಪುರಹರನಯನಮಣಿ, ಮಿಡಚ್ಚಿ, 'ಹಂದಿ' ಎನ್ನುವ ಶಬ್ದಕ್ಕೆ ಬಳಸಿರುವ ಸಂವಾದಿ ಪದಗಳು ವರಾಹ, ಸೂಕರ, ಕ್ರೋಡ, ಕಿಟಿ, ಪೋತ್ರ, ಕಿರಿ, ಪಂದಿ. 'ನರಿ' ಎನ್ನುವ ಶಬ್ದಕ್ಕೆ ಬಳಸಿರುವ ಸಂವಾದಿ ಪದಗಳು – ಶಿವ, ಜಂಬುಕ, ಸೃಗಾಲ, ಫೇರು, ಕ್ರೋಷ್ಟು, ಸಕ, ಪೋಟ, ಸಮಕಾಲೀನ ಭಾಷೆಯಲ್ಲಿರುವ ದೇಶಿಪದಗಳಿಗೆ : ವೈನ, ಒಂದಿರು, ದಿಮಾಕು, ಮಂಡಿಯಗೋವು, ಕೊರ್ಚು, ಸೊಬಾರ, ಟೋಕಿಸು, ಮೂಸಂಜೆ, ನೊರಹು ಇತ್ಯಾದಿ ಇವುಗಳ ಜೊತೆಗೆ ಕೆಲವು ಅನ್ಯದೇಶಿಯ ಪದಗಳನ್ನು ನೇರವಾಗಿ ಇಲ್ಲವೆ ಕನ್ನಡದ ಪ್ರತ್ಯಯಗಳನ್ನು ಸೇರಿಸಿ ಬಳಸಿದ್ದಾನೆ.

ಹೀಗೆ ಮಾರ್ಗ – ದೇಶಿ – ಅನ್ಯದೇಶೀ ಪದಗಳ ಮಿಶ್ರಣದಿಂದ ಕಾವ್ಯಭಾಷೆ ವಿಶೇಷತೆಯನ್ನು ಪಡೆದಿದೆ.

೫. ಛಂದಸ್ಸು: ಇಮ್ಮಡಿ ಮುರಿಗಾ ಗುರುಸಿದ್ಧರ ಛಂದಶ್ಶಾಸ್ತ್ರ, ನಿಪುಣತೆಗೆ ಅತ್ಯುತ್ತಮ ನಿದರ್ಶನ ಹಾಲಾಸ್ಯ ಪುರಾಣ, ಹಾಲಾಸ್ಯ ಪುರಾಣದಲ್ಲಿರುವಷ್ಟು ಛಂದೋಪ್ರಯೋಗಗಳು ಕನ್ನಡದ ಬೇರೆ ಯಾವ ಗ್ರಂಥದಲ್ಲಿಯೂ ಬಳಕೆಯಾಗಿಲ್ಲವೆಂದು ಹೇಳಬಹುದು. ಕಂದ, ವೃತ್ತ, ರಗಳೆ, ತ್ರಿಪದಿ,

ತ್ರಿವಡೆ, ಗದ್ಯ, ವಚನ, ಚೂರ್ಣಿಕೆಗಳು ಹೀಗೆ ಸುಮಾರು ೧೬೫ಕ್ಕೂ ಹೆಚ್ಚಿನ ಛಂಧೋಬಂಧಗಳನ್ನು ಬಳಸಿರುವನು. ಇವುಗಳಲ್ಲಿ ನಾಗವರ್ಮ, ಜಯಕೀರ್ತಿ, ಕೇದಾರಭಟ್ಟ, ಹೇಮಚಂದ್ರ ವೀರಭದ್ರ, ಗುಣಚಂದ್ರ, ಷಡಕ್ಷರದೇವ, ತಿರುಮಲಾರ್ಯ ಮುಂತಾದವರ ಕೃತಿಗಳಲ್ಲಿ ಬರುವ ಛಂದೋಬಂಧಗಳ ಜೊತೆಗೆ ಕವಿಯೇ ಹೊಸದಾಗಿ ಸೃಷ್ಟಿಸಿ ಪ್ರಯೋಗಿಸಿದ ಕೆಲವು ಛಂಧೋಬಂಧಗಳು ಸಮಾವೇಶಗೊಂಡಿರುವುದು ಗಮನಾರ್ಹ. ಹಾಲಾಸ್ಯ ಪುರಾಣದಲ್ಲಿ ಉಲ್ಲೇಖಿತವಾದ ಛಂದ್ರೋಪ್ರಯೋಗಗಳನ್ನು ಈ ಕೆಳಗಿನಂತೆ ಪಟ್ಟಿ ಮಾಡಬಹುದು: ಅಂಬಿನಿ, ಅಕ್ಕರಿಕೆ, ಅಚಲಜಿಹ್ವಾವಿತಾನ, ಅಚ್ಚುತಕ, ಅನಂತ, ಅನವದ್ಯ, ಅಭ್ರಕ, ಅಮಳ, ಅಮಳವಿತಾನ, ಅರವಿಂದ, ಅರ್ಕಮರೀಚಿ, ಇಂದು ವದನಾ, ಇಂದ್ರವಜ್ರ, ಉತ್ಪಲಮಾಲೆ, ಉತ್ಸಾಹ, ಉತ್ಸಾಹರಗಳೆ, ಉತ್ಸುಕ, ಉದಯ, ಉದಾತ್ತ . . , ಉಪಮ, ಉಪೇಂದ್ರವಜ್ರ, ಕಂದ, ಕನಕಾಬ್ಜಿನಿ, ಕಲ್ಯಾಣ, ಕವಿರಾಜವಿರಾಜಿತ, ಕಾಂಚನಮಾಲೆ, ಕಾಂತ ಕುಮುದ, ಕುಸುಮಶರನಿರತಿಶಯ, ಕುಸುಮಾಂಫ್ರಪ, ಕೋಮಳ, ಕ್ರೌಂಚಪದ, ಖಚರಪ್ಲುತ, ಗಂಧಶಾಲಿನಿ, ಚಂದ್ರಕಾಂತ, ಚಂದ್ರಿಕಾ, ಚಂದ್ರಿಕೆ, ಚಂಪಕಮಾಲೆ, ಚತುರ್ದಳಿ, ಚಾಮರ, ಚಿತ್ರಪದ, ಚಿತ್ರಪ, ಚಿತ್ರಪದ, ಚೂರ್ಣಿಕೆ, ಚೂತಕುಜ, ಛಂದೋವೃತ್ತ, ಜಗದ್ವಿಭೂತಿ, ಜನಹಿತ, ಜಸೋದಯ, ಜಲೋದ್ಧತಗತ, ತನುಮಧ್ಯ, ತರಳ, ತಿಲಕ, ತುರಂಗ, ತೋಟಕ, ತೋಟಕ, ತ್ರಿಪದಿ, ತ್ರಿಪದೋನ್ನತಿ, ದಿವಿಜಕಲ್ಪಲತಾ, ತ್ರಿವಿಡೆ, ದೇವರಮ್ಯ ದ್ರುತಪದ, ದ್ರುತವಿಲಂಬಿತ, ಧವಳಾರತ್ರಿಪದಿ, ನಿರ್ಕುಟಕ, ನಗರರಂಜಿತ, ನವನಳಿಸ, ನವಮಂಜರಿ, ನಾಕಿನಿ, ನಿಮಾತಿಶಯ, ನಿರುಪಮ, ನುತ, ಪಣವಕ, ಪದ್ಮಮುಖ, ಪುಟ, ಪುನರ್ಮಂದಾನಿಲ, ಪುಷ್ಪಿತಾಗ್ರ, ಪೃಥ್ವಿ, ಪ್ರಭಾತ, ಪ್ರಮಾಣಿತ, ಪ್ರವರಾಕ್ಷರ, ಪ್ರಹರಣತಿಲಕ, ಪ್ರೇಮ, ಪ್ರೋದ್ದಾಮ, ಬಿರುದಾವಳಿಗದ್ಯ ಭದ್ರಕ, ಭದ್ರಕ, ಭುಜಂಗಪ್ರಯಾತ, ಭುಜಂಗವಿಜೃಂಭಿತ, ಭುಜಗಶಿಶು, ಭ್ರಮರವಿಲಸಿತ, ಮಂಗಳ ಮಂಜುಭಾಷಿತ, ಮಂದಾಕ್ರಾಂತ, ಮಂದಾನಿಲ, ಮಂದಾನಿಲರಗಳೆ, ವಾಣಿಗಣನಿಕರ, ಮಣರಂಗ, ಮಣಿವಿಭೂಷಿತ, ಮತ್ತ, ಮತ್ತಕೋಕಿಲ, ಮತ್ತಕ್ರೀಡಾ, ಮತ್ತೇಭವಿಕ್ರೀಡಿತ, ಮಯೂರ, ಮಲ್ಲಿಕಾಮಾಲೆ, ಮಹಾಸ್ರಗ್ಧರೆ, ಮಾಣವಕ, ಮಾನಿನಿ, ಮಾಲಿನಿ, ಮಾಲಿನಿ, ಮೃಗನೇತ್ರ, ಮೇಘವಿಸ್ಫೂರ್ಜಿತ, ಮೋದಕ, ರಥೋದ್ಧತ, ರವಿಭ್ರಮ, ರುಚಿರ, ಲಯಗ್ರಾಹ, ಲಲಿತ, ಲಲಿತ, ಲಲಿತ, ಲಲಿತಗತಿ, ಲಲಿತಪದ, ಲಲಿತರಗಳೆ, ಲಲಿತಹರಿಣಿ, ವಂಶವೃತ್ತ, ವಕುಳ, ವಕುಳಕುಟ್ಮಳ ವನಜ, ವನಚುಂಜರಿ, ವನಲತೆ, ವಸಂತತಿಲಕ, ವಿಚಿತ್ರಪಾದ, ವಿಚಿತ್ರಲಲಿತ, ವಿಜಯಾನಂದ, ವಿದಳಿತವನ, ರುಹಲಲಿತ, ವಿದ್ಯುಸ್ಮಾಲೆ, ವಿಭ್ರಮ, ವೈತಾಳಿ, ವೈವಸ್ಪದ, ಶಶಿಕಾಂತ, ಶಾರ್ದೂಲವಿಕ್ರೀಡಿತ, ಶಾಲಿನಿ, ಶಾಲಿನಿವಿತಾನ, ಶಿಖರಿಣಿ ಶ್ಲೋಕ, ಸರಳ, ಸಿಂಧುನಂದನ, ಸುರಂಗಕೇಸರ, ಸುರತರು, ಸುಲಲಿತ, ಸೈನಿಕ, ಸೌಂದರ, ಸ್ರಗ್ಧರೆ, ಸ್ರಗ್ವಿಣಿ, ಸ್ವಾಗತ, ಹರಿಸಗತಿ, ಹರಿಸಪದ, ಪರಿಸಮತ್ತ, ಹರಿಣ, ಹರಿಣಪ್ಲುತ, ಹಲಾಮುಖ.

ಇವುಗಳಲ್ಲಿ ಈವರೆಗೆ ರಚಿತವಾದ ಬೇರೆ ಯಾವ ಕನ್ನಡ ಕಾವ್ಯಗಳಲ್ಲಿಯೂ ಬಳಕೆಯಾಗದ, ಹಾಲಾಸ್ಯ ಪುರಾಣದಲ್ಲಿ ಮಾತ್ರ ಪ್ರಯೋಗವಾದ, ಈ ಕವಿಯೇ ಸ್ವತಃ ಸೃಷ್ಟಿಸಿರಬಹುದಾದ ಛಂದೋಬಂಧಗಳ ಹೆಸರುಗಳು ಹೀಗಿವೆ:

೧. **ಛಂದೋವೃತ್ತ:** ಇದರ ಲಕ್ಷಣ ರ, ನ, ಭ, ಮ, ಸ, ಸ, ಲ, ಗ ಎಂದಿದೆ. ೨೨ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತವನ್ನು ೫ ಸಾರೆ ಪ್ರಯೋಗಿಸಿದ್ದಾರೆ.

೨. **ಚಂದ್ರಕಾಂತ:** ೨೧ ಅಕ್ಷರಸಂಖ್ಯೆಯನ್ನೊಳಗೊಂಡ ಈ ವೃತ್ತ ಬೇರೆ ಯಾವ ಛಂಧೋಗ್ರಂಥಗಳಲ್ಲಿಯೂ ಬಳಕೆಯಾಗಿಲ್ಲ. ಇದರ ಲಕ್ಷಣ ರ, ನ, ಭ. ಭ. ಭ. ರ.

೩. **ಕಾಂತ** : ೧೬ ಅಕ್ಷರಸಂಖ್ಯೆಯನ್ನೊಳಗೊಂಡ ಈ ಛಂದೋಬಂಧವೂ ಬೇರೆ ಯಾವ ಛಂಧೋಗ್ರಂಥಗಳಲ್ಲಿಯೂ ಬಳಕೆಯಾಗಿಲ್ಲವಾದರೂ ನಾಗವರ್ಮ ಇದನ್ನು ಲಲಿತಪದವೆಂದೂ, ಜಯಕೀರ್ತಿಯು ಕಮಲಪಾದವೆಂದೂ ಕರೆದಿದ್ದಾರೆ.

೪. **ತೋಟಕ** : ಒಂದೇ ಹೆಸರಿನ ಎರಡು ವೃತ್ತಗಳು ಬಳಕೆಯಾಗಿವೆ. ಇವುಗಳಲ್ಲಿ ೧೨ ಅಕ್ಷರಗಳನ್ನೊಳಗೊಂಡ ವೃತ್ತ ಪ್ರಸಿದ್ಧವಾದ ತೋಟಕದೊಂದಿಗೆ ಹೋಲಿಕೆಯಾಗುತ್ತದೆ. ೨೫ ಅಕ್ಷರಗಳನ್ನೊಳಗೊಂಡ ನ, ಜ, ನ, ಸ, ನ, ನ, ಭ. ಭ. ಗ ಎಂಬ ಗಣಗಳನ್ನು ಹೊಂದಿದ ತೋಟಕ ಎಂಬ ವೃತ್ತ ಪ್ರಥಮಬಾರಿಗೆ ಬಳಕೆಯಾಗಿದೆ.

೫. **ಕುಸುಮ ಶರನಿಶಿಶಯ:** ೩೩ ಅಕ್ಷರ ಸಂಖ್ಯೆಯನ್ನೊಳಗೊಂಡಿದ್ದು, ನ, ನ, ನ, ನ, ನ, ನ, ನ, ನ, ನ, ಭ, ಯ ಗಣಗಳನ್ನು ಹೊಂದಿದ ಈ ವೃತ್ತ ಇದುವರೆಗಿನ ಯಾವ ಛಂದೋಗ್ರಂಥಗಳಲ್ಲಿಯೂ ಬಳಕೆಯಾಗಿರುವುದಿಲ್ಲ.

೬. **ಜನೋದಯ** : ೪ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತ ಈ ಮೊದಲಿನ ಯಾವ ಗ್ರಂಥಗಳಲ್ಲಿಯೂ ಬಳಕೆಯಾಗಿರುವುದಿಲ್ಲ. ಭರತ, ಜಯಕೀರ್ತಿಯರು ಈ ಛಂದಸ್ಸನ್ನು 'ಜಯಾ' ಎಂದೂ, ವೀರಭದ್ರನು ಸುಕಾಂತಿ ಎಂದು ಕರೆದಿದ್ದಾರೆ.

೭. **ನಿಮಾತಿಶಯ** : ೭ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮನಲ್ಲಿ 'ವಿನಮ್ರ' ಎಂದು ಹೆಸರಿದೆ. ಹಾಲಾಸ್ಯ ಪುರಾಣದಲ್ಲಿ ಈ ವೃತ್ತವನ್ನು ೬ ಕಡೆ ಪ್ರಯೋಗಿಸಲಾಗಿದೆ.

೮. **ಪ್ರೇಮ** : ೪ ಅಕ್ಷರಗಳನ್ನು ಹೊಂದಿರುವ ಈ ವೃತ್ತಕ್ಕೆ ನಾಗವರ್ಮ 'ಶಕ್ರ' ಎಂದೂ, ಜಯಕೀರ್ತಿ 'ಗೀತ' ಎಂದೂ, ಗುಣಚಂದ್ರನು 'ಕನ್ಯಾ' ಎಂದೂ ಕರೆದಿದ್ದಾರೆ. ನಾಗವರ್ಮನಲ್ಲಿ ಭ, ಲ, ಗ, ಗಣದ ಪ್ರೇಮ ವೃತ್ತಕ್ಕಿಂತ ಇದು ಭಿನ್ನವಾಗಿದೆ.

೯. **ಅನಂತ** : ೫ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮ 'ನಂದ' ಎಂದೂ ಜಯಕೀರ್ತಿ, ಕೇದಾರಭಟ್ಟರು ಸತಿ ಎಂದು ಕರೆದಿರುವರು.

೧೦.ಉಪಮೆ : ೧೨ ಅಕ್ಷರಗಳನ್ನೊಳಗೊಂಡ ಈ ವೃತ್ತ ನಾಗವರ್ಮನ ಇಂದ್ರವಂಶಕ್ಕೆ ಸರಿ ಹೋಗುತ್ತದೆ.

೧೧.ಪೃಥ್ವಿ : ೧೭ ಅಕ್ಷರಗಳನ್ನೊಳಗೊಂಡ ಪೃಥ್ವಿ ಎಂಬ ವೃತ್ತ ಪ್ರಸಿದ್ಧವಾಗಿದ್ದರೂ ಸಹಿತ ಇಲ್ಲಿ ಕವಿ ೧೩ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ಪೃಥ್ವಿ ಎಂಬ ಹೆಸರಿಟ್ಟು, ೩ ಪ್ರಯೋಗ ಮಾಡಿರುವನು.

೪. ಚಂಪೂಕಾವ್ಯಗಳಲ್ಲಿ ಹಾಲಾಸ್ಯ ಪುರಾಣದ ಸ್ಥಾನಮಾನ :

೧೮ ನೆಯ ಶತಮಾನದ ವೀರಶೈವ ಸಾಹಿತ್ಯದ ಕಿರೀಟ ಸದೃಶ ಗುರುಕಾವ್ಯ ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಹಾಲಾಸ್ಯ ಪುರಾಣ. ಚಂಪೂ ಪ್ರಕಾರದ ಆಧಿಕ್ಯದಿಂದಾಗಿ ಸಾಂಗತ್ಯ, ಷಟ್ಪದಿ ಕಾವ್ಯಗಳ ಪ್ರಾಬಲ್ಯ ಹೆಚ್ಚಿದ್ದ ಕಾಲದಲ್ಲಿ ಮರೆಯಾಗಿ ಹೋಗಿದ್ದ ಚಂಪೂ ಶೈಲಿಯನ್ನು ಮತ್ತೆ ಉಳಿಸಿ ಬೆಳೆಸಿದ ಶ್ರೇಯಸ್ಸು ಮೊದಲಿಗೆ ಷಡಕ್ಷರದೇವನಿಗೆ, ತದನಂತರದಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧರಿಗೆ ಸಲ್ಲುತ್ತದೆ.

ಕನ್ನಡ ಚಂಪೂ ಇತಿಹಾಸದಲ್ಲಿ ಸತ್ವ ಮತ್ತು ಸಾರ್ಥಕತೆಯ ದೃಷ್ಟಿಯಿಂದ ಪಂಪ ಮೊದಲಿಗನಾದರೆ, ಹರಿಹರ ಆ ವಾಹಿನಿಯ ಮುಂದುವರಿಕೆಗೆ ಕಾರಣನಾಗುತ್ತಾನೆ. ಷಡಕ್ಷರದೇವ ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧರು ಅದರ ಕೊನೆಯ ತುದಿಯಾಗಿ ನಿಲ್ಲುತ್ತಾರೆ. ವರ್ಣಕ ಕಾವ್ಯವನ್ನು ಆಧಾರವಾಗಿಟ್ಟುಕೊಂಡು ಅದನ್ನೇ ವಸ್ತುಕರೀತಿಗೆ ಮಾರ್ಪಡಿಸಿಕೊಳ್ಳುವಲ್ಲಿ ತನ್ನ ಅಪ್ರತಿಮ ಪ್ರತಿಭಾ ಸಾಮರ್ಥ್ಯವನ್ನು ಮೆರೆದಿದ್ದಾನೆ. ಪಾಂಡಿತ್ಯ, ಪ್ರತಿಭೆ, ಭಾಷಾ ಪ್ರಭುತ್ವ ವರ್ಣನಾಕೌಶಲ್ಯ, ಛಂಧೋವೈವಿಧ್ಯತೆಗಳ ದೃಷ್ಟಿಯಿಂದ ನೋಡಲಾಗಿ ಹಾಲಾಸ್ಯ ಪುರಾಣ ಉನ್ನತ ಸ್ಥಾನದಲ್ಲಿ ನಿಲ್ಲುತ್ತದೆ. 'ಕಂದ ಬರೆದವನೆ ಕವಿ' ಎಂಬ ಮಾತಿಗೆ ನಿದರ್ಶನವೆಂಬಂತೆ ಈ ಕಾವ್ಯದಲ್ಲಿ ಕವಿ ಒಟ್ಟು ೩೬೩೭ ಪದ್ಯಗಳಲ್ಲಿ ೧೪೭೦ ಕಂದ ಪದ್ಯಗಳನ್ನು ಅಳವಡಿಸಿದ್ದಾನೆ. ಛಂದೋವೈವಿಧ್ಯತೆಯ ದೃಷ್ಟಿಯಿಂದಂತೂ ಇದಕ್ಕೆ ಛಂದೋಪ್ರಪಂಚದಲ್ಲಿ ಪ್ರಥಮಸ್ಥಾನ ಸಲ್ಲುತ್ತದೆ.

ಒಟ್ಟಿನಲ್ಲಿ ವೀರಶೈವ ಚಂಪು ಕವಿಗಳಲ್ಲಿ ಮೊದಲ ಹೆಸರು ಹರಿಹರನದಾದರೆ, ಎರಡು ಮತ್ತು ಮೂರನೆ ಹೆಸರು ಷಡಕ್ಷರದೇವ ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಗಳಾಗಿವೆ ಎಂದು ಹೇಳಬೇಕಾಗುತ್ತದೆ.

ಷಟ್ಪದಿ ಕೃತಿಗಳು :

ಹಾಲಾಸ್ಯ ಪುರಾಣದಂಥ ಹಿರಿಯ ಗಾತ್ರದ ಪ್ರೌಢಚಂಪೂಕಾವ್ಯವನ್ನು ರಚಿಸಿದ ಇಮ್ಮಡಿ ಮುರಿಗಾ ಗುರುಸಿದ್ಧರು ಷಟ್ಪದಿ, ಕಂದ, ತ್ರಿಪದಿ, ಚೌಪದಿ, ತಾರಾವಳಿಗಳಂಥ ದೇಶೀರೂಪಗಳಲ್ಲಿ ಲಘುಕೃತಿಗಳನ್ನು ರಚಿಸಲು ಮುಂದಾದುದು ಇವರ ಪ್ರಯೋಗಶೀಲತೆ ಹಾಗೂ ದೇಶೀನಿಷ್ಠತೆಗಳಿಗೆ ನಿದರ್ಶನವೆನಿಸಿದೆ. ಹಾಗೆಯೇ ತನ್ನ ಕೃತಿಗಳು ಸರ್ವರಿಗೂ ಸುಲಭ ಸಾಧ್ಯವಾಗಬೇಕೆಂಬ ಜನಪರಧೋರಣೆಯೂ ಕಾರಣವಾಗಿದೆ.

ಇಮ್ಮಡಿ ಮುರಿಗಾ ಗುರುಸಿದ್ಧರು ರಚಿಸಿದ ಲಘುಕೃತಿಗಳಲ್ಲಿ ಷಟ್ಪದಿಗಳಿಗೆ ಅಗ್ರಸ್ಥಾನ. ಅದರಲ್ಲಿಯೇ ವಾರ್ಧಕ ಷಟ್ಪದಿಯ ಮೇಲೆ ಅವರಿಗೆ ವಿಶೇಷ ಪ್ರೀತಿ. ಈ ರೂಪದಲ್ಲಿ ೮ ಕೃತಿಗಳು ಈಗ ಲಭ್ಯವಾಗಿರುವುದು ಇದಕ್ಕೆ ಸಾಕ್ಷಿ. ಎಲ್ಲ ಕೃತಿಗಳೂ ಶಿವಸ್ತುತಿ – ವೀರಶೈವ ತತ್ವಪ್ರತಿಪಾದನೆಗೆ ಮೀಸಲಾಗಿವೆ. ಅವುಗಳ ಪರಿಚಯ, ವೈಶಿಷ್ಟ್ಯಗಳನ್ನು ಹೀಗೆ ಗುರುತಿಸಬಹುದು.

ಪಂಚಾಶಿಕೆ :

ಹಾಲಾಸ್ಯ ಪುರಾಣದಂಥ ಹಿರಿಯ ಗಾತ್ರದ ಪ್ರೌಢ ಚಂಪೂ ಕಾವ್ಯವನ್ನು ರಚಿಸಿದ ಇಮ್ಮಡಿ ಮುರಿಗಾ ಗುರುಸಿದ್ಧರು ಷಟ್ಪದಿ, ಕಂದ, ತ್ರಿಪದಿ, ಚೌಪದಿ, ತಾರಾವಳಿಗಳಂಥ, ದೇಶಿರೂಪಗಳಲ್ಲಿ ಲಘುಕೃತಿಗಳನ್ನು ರಚಿಸಿದ್ದಾರೆ. ಇವರು ರಚಿಸಿದ ಲಘುಕೃತಿಗಳಲ್ಲಿ ಷಟ್ಪದಿಗೆ ಅಗ್ರಸ್ಥಾನ. ಅದರಲ್ಲೂ "ವಾರ್ಧಕ ಷಟ್ಪದಿಯ" ಮೇಲೆ ವಿಶೇಷ ಪ್ರೀತಿ. ಈ ಸಾಹಿತ್ಯ ರೂಪದಲ್ಲಿ ಒಟ್ಟು ೮ ಕೃತಿಗಳನ್ನು ರಚಿಸಿದ್ದು. ಇವೆಲ್ಲವೂ ಶಿವಸ್ತುತಿ – ವೀರಶೈವ ತತ್ವ ಪ್ರತಿಪಾದನೆಗೆ ಮೀಸಲಾಗಿದೆ. ಇವುಗಳಲ್ಲಿ "ಪಂಚಾಶಿಕೆ"ಯೂ ಒಂದು.

"ಪಂಚಾಶಿಕೆ" ಇಮ್ಮಡಿ ಮುರಿಗಾ ಗುರುಸಿದ್ಧರ ಅಸದೃಶ ಶಿವತತ್ವವನ್ನು ಎತ್ತಿತೋರುವ ಕೃತಿ. ಶಿವಪಾರಮ್ಯ ಹಾಗೂ ವೀರಶೈವ ಧರ್ಮದ ತಾತ್ವಿಕಾಂಶವನ್ನು ಪ್ರತಿಪಾದಿಸುವ ಕೃತಿ. ಸಂಸ್ಕೃತ ಕವಿಯಾದ ವಿರೂಪಾಕ್ಷಪಾದನ "ವಿರೂಪಾಕ್ಷ ಪಂಚಾಶಿಕೆ"ಯನ್ನು, ಮತ್ತೊಬ್ಬ ಸಂಸ್ಕೃತ ಕವಿಯಾದ ವಿದ್ಯಾಚಕ್ರವರ್ತಿಯ "ವಿರೂಪಾಕ್ಷ ಪಂಚಾಶಿಕಾ ವಿವೃತ್ತಿ" ಎಂಬ ವ್ಯಾಖ್ಯಾನ ಗ್ರಂಥವನ್ನು ಆಧರಿಸಿ ರಚಿತವಾಗಿದೆ. ಒಟ್ಟು ೧೩ ಸಂಧಿ ೬೮೮ ಭಾಮಿನಿ ಷಟ್ಪದಿಗಳನ್ನೊಳಗೊಂಡ ಕೃತಿ ಇದಾಗಿದೆ.

ಕೃತಿಯ ಪ್ರಾರಂಭದಲ್ಲಿ ಶಿವ – ಪಾರ್ವತಿ, ತೋಂಟದ ಶಿವಯೋಗಿಗಳನ್ನು ಸ್ತುತಿಸಲಾಗಿದೆ. ನಂತರದಲ್ಲಿ ಗುರುಶ್ರೇಷ್ಠನಿಗೆ ನಮಿಸಿ, ಗಣಪತಿ, ನಂದಿ, ವೀರೇಶ್ವರ, ಕುಮಾರ ಸ್ವಾಮಿ ಹಾಗೂ ಭುವನದ ಪುರಹರನ ಶರಣರ ಅಡಿದಾವರೆಗಳನ್ನು ನೆನೆದು, ವಂದಿಸಿ, ದೇವೇಂದ್ರನಿಗೆ ಪರಶಿವನು ಉಪದೇಶಿಸಿದ ಪಂಚಾಶಿಕಾಗಮವನ್ನು ಹೇಳಲು ಪ್ರಾರಂಭಿಸಲಾಗಿದೆ. ವಿನಯ ಸಂಪನ್ನನಾದ ಕವಿ :

'ಮೊಡವಿಯೊಳು ತತ್ವ ಪ್ರಬಂಧಗ
ಳಿಡಿಕಿರಿದು ತುಂಬಿಹವಿದೇತರ
ಬೆಡಗಿನಗ್ಗದ ಕವಿತೆಯೆಂದಿದನಾಳವಾಡದಿರಿ
ಕಡಲುದಕ ಪರಿಪೂರ್ಣಮಾಗಿರೆ,
ತಡಿಯೊಳಿರ್ದ್ದವರೆಲ್ಲರುಂ ನೀ
ರಡಸಿ ಬಂದೊರತೆಯ ಜಲವನೇರಿ ಕುಡಿಯದುಳಿದಪರೆ'

ಎಂದು ಹೇಳುತ್ತಾ, ವ್ಯಾಕರಣ, ಅಲಂಕಾರ, ತತ್ವ, ರಸಗಳು ತನ್ನ ಕೃತಿಯ ತುಂಬ ನೆಲೆಸಿದ್ದರೂ ಕಣ್ಣಿಗೆ ಬೀಳುವ ತಪ್ಪುಗಳನ್ನು ಅನಸೂಯರಾದ ಬುಧರು ತಿದ್ದಬೇಕೆಂದು ಪ್ರಾರ್ಥಿಸಿರುವನು. ಮೊದಲ ಕಾಂಡದಲ್ಲಿ ಜಗವೆ ಒಡಲು ಈಶನೆ ಅದರ ಆತ್ಮನೆಂದು, ಎರಡನೆಯ ಕಾಂಡದಲಿ ಶಿವನೇ ಜಗವೆಂದೂ, ಮೂರನೆಯ ಕಾಂಡದಲ್ಲಿ ಜಗವೇ ಶಿವನೆಂದು, ನಾಲ್ಕನೆಯ ಕಾಂಡದಲಿ ಆ ಶಿವನೇ ಜಗವೆಂದು ಹೇಳುವುದರೊಂದಿಗೆ ತನ್ನ ಕೃತಿಯ ವಸ್ತುವನ್ನು ತಿಳಿಸಿರುವನು.

"ಜಗವೆಯೊಡಲೀಶನೆ ತದಾತ್ಮನು
ಸುಗಮವಿದು ಒಂದನೆಯ ಕಾಂಡದಿ
ಮಿಗೆ ಶಿವನೆ ಜಗವೆಂದು ಪೇಳುವದೆರಡನೆಯ ಕಾಂಡ
ಸೊಗಯಿಸುವ ಮೂರನೆಯ ಕಾಂಡದಿ
ಜಗವೆ ಶಿವನಾ ಶಿವನೆ ಜಗವೆಂ
ದಗಲದುಸಿರ್ದಪುದ್ಯೆಸಿರೆಯ ನಾಲ್ಕನೆಯ ಕಾಂಡದಲಿ."

ಪ್ರತಿಸ್ಕಂದದ ಆದಿ-ಅಂತ್ಯ ಪದ್ಯಗಳಲ್ಲಿ ಶಿವನನ್ನು, ನಂತರದಲ್ಲಿ ತೋಂಟದ ಸಿದ್ಧಲಿಂಗರನ್ನು ಸ್ತುತಿಸಲಾಗಿದೆ. ಪ್ರತಿ ಸಂಧಿಯ ಅಂತ್ಯದಲ್ಲಿ –

"ಇದು ಪರಮ ಶಿವತತ್ವ ಕೋವಿದ
ಹೃದಯ ಬಂಧ ಹರ್ಷಾಮೃತಾರ್ಣವ
ವಿದಿತ ಪೂರ್ಣಶಶಾಂಕಸಾಧಕ ವಿತ್ತಿಮುಖಮುಕುರ
ಸದರವಾದಪವರ್ಗ ಸಾಮ್ರಾ
ಜ್ಯದ ಮಹಾಪಟ್ಟಾಭಿಷೇಕ
ಪ್ರದವಿದೊಂದನೆಯಧಿಕರಣ ಪಂಚಾಶಿಕಾಗಮದಿ" ಎಂಬ ಪದ್ಯವಿದೆ.

ದೇವೇಂದ್ರ ಹಾಗೂ ಶಿವ ಇವರ ನಡುವೆ ನಡೆದ ಪ್ರಶ್ನೋತ್ತರಗಳನ್ನು ತಂದೆ ಮಕ್ಕಳ ನಡುವೆ ನಡೆಯುವ ಸಂಭಾಷಣೆಯ ರೂಪದಲ್ಲಿ ನಿರೂಪಿಸುವುದರೊಂದಿಗೆ, ವೀರಶೈವ ತಾತ್ವಿಕ ದರ್ಶನವನ್ನು ಇಲ್ಲಿ ಸರಳವಾಗಿ ತಿಳಿಸಿದ್ದಾರೆ. ಜಗತ್ತಿನ ಸ್ಥಿತಿರೂಪವೆಂತು? ಜಗವಿದೆಂತಾಯಿತ್ತು? ಬೆಳಗು ಕತ್ತಲೆ ಯಾವ ಪರಿ? ಪತಿ – ಪಶು ಪಾಶವೆಂಬಂರಿವರೆಂತು? ಮಾಯೆಯೇ ಪುರುಷನೆಂದಾಯಿತು? ಬೌದ್ಧರೆಂದರೆ ಯಾರು? ಮುಕ್ತಿ ವಿರುದ್ಧರೇ? ಹೀಗೆ ದೇವೇಂದ್ರ ತನ್ನ ಮನದಲ್ಲಿ ಮೊಳಕೆಯೊಡೆದ ಸಂಶಯಗಳನ್ನೆಲ್ಲಾ ಶಿವನ ಮುಂದಿಟ್ಟಾಗ, ಆತ ಬಾಲಕನೆ, ಸುತನೆ, ಮಗನೆ, ಕಂದ, ತನಯ, ಶಿಸ್ಯ ಎಂದೆಲ್ಲಾ ಆತ್ಮೀಯವಾಗಿ ದೇವೇಂದ್ರನನ್ನು ಸಂಬೋಧಿಸುತ್ತಾ ಅರಿಯದ ಮಗನಿಗೆ ತಿಳಿ ಹೇಳುವ ತಂದೆಯಂತೆ ತುಂಬ ಸರಳವಾಗಿ ಉತ್ತರಿಸುವನು, ಅವುಗಳಲ್ಲಿ ಕೆಲವನ್ನು ಹೀಗೆ ಸಂಗ್ರಹಿಸಬಹುದು.

ಬಾಲೇಂದುಧರನಾದ ಶಿವನ ಹತ್ತಿರ ಬಂದು ಕೈಮುಗಿದು ಕುಳಿತ ದೇವೇಂದ್ರನನ್ನು ಶಿವ, ಮಗನೆ ನಿನ್ನಭಿಮತವದಾವುದು? ಸೊಗಸುವಿತ್ತಪೆವು ಎಂದು ಕೇಳುವನು. 'ಚಿದ್ಗನರೂಪನೆ ನಿಗಮ ಶಿರದರ್ಥವನ್ನು ತೋರಿಸಿ ಬೆಗಡುಗೊಳಿಸುವ ಮಾಯೆಯಂಗದ ಮಿಗೆ ಉದಾರಿಸಿ ನಿನ್ನೊಳೈಕ್ಯವ ನೀವುದು ಎಂದು ದೇವೇಂದ್ರ ಪ್ರಶ್ನಿಸಲಾಗಿ, ಶಿವನು ಷಟ್ತ್ರಂಶ ತತ್ವವನ್ನು ಉಪದೇಶಿಸುವುದರೊಂದಿಗೆ ಆತನ ಮನದ ಸಂಶಯವನ್ನು ನಿವಾರಿಸುವನು.'

ಏಕಮೇವವಾದ ವೇದವಾಕ್ಯವಿರುತ್ತಿರಲು ಆತ್ಮ ಶರೀರಗಳೆಂದೆರಡು ಹೇಗೆ ಆಗುವುದೆಂದು ಕೇಳಲಾಗಿ, ಶಿವ ಆತ್ಮಜನೆ ಕೇಳು,

'ಆಲದಣುಬೀಜದೊಳು ಪುದಿದ ವಿ
ಶಾಲ ತರುವಿನೊಲಾ ಪರಮನನು
ಕೂಲಹೃದಯನೆನಿಸುವಹಂತೆಯಕಾರಣೇಚ್ಛೆಯೊಳು
ಲೀಲೆಯಿಂದ ಜಗವಡಗಿ ತನ್ಮಯ
ಲೋಲನಾಗಿರೆ ಬೇರುದೋರಡಿ
ಮೂಲತತ್ವವಹರಿಪ್ರಕಾಶವೆ ತಾನೆ ಎರಡಿಲ್ಲ'

ಎಂದು ವೇದದಲ್ಲಿನ ಅದ್ವೈತತತ್ವವನು ತಿಳಿಯಪಡಿಸುವನು. ಈ ರೀತಿ 'ಜಗವೇ ತಾನು ತಾನೇ ಜಗತ್ತು' ಎಂದು ಶಿವ ತಿಳಿಸಲು ಅದಕ್ಕೆ ದೇವೇಂದ್ರನು 'ದೇವ ನೀನಂತರುಪಿದೊಡೆ ನಾನಾವ ತೆರದಿಂ ತಿಳಿಪಿಸಿನೆನಗಿದಸೋವಿ ವಿವರಿಸಿ ನಿರವಿಸು' ಎಂದು ಕೇಳಿಕೊಳ್ಳುವನು. ಶಿವ ಮಗನ ಸಂಶಯವನ್ನು ಪರಿಹರಿಸಲು ಬಗೆದು 'ದೇವಪತಿಯಾಲಿಪುದು ನಿನ್ನಯ ಭಾಗವತ ಸಂಶಯದ ಕೀಲಸ್ಯ ಕೋವಿದತ್ವದೆ ಕಿತ್ತುಕಳಿವೆನಿದಾವ ದುರ್ಘಟವು ಎನ್ನುತ್ತಾ ತಿಳಿಸತೊಡಗುವನು. ಹಿಂದೆ, ಮುಂದೆ, ಇಂದು ಎಂದೆಂದಿಗೂ ಜಗವು ಶಿವನ ಸುಸ್ವರೂಪವೇ.'

ಸ್ಕಾಂದಪುರಾಣದಲ್ಲಿ ಹೇಳುವಂತೆ ಮೋಹಿನಿರೂಪಿಯಾದ ಹರಿಯನ್ನು ಶಿವಭೋಗಿಸಲು ಮಹಾಮಹಿಮನಾದ ಗಂಡಭೈರವ ಜನಿಸಿದನೆಂಬುದೇ ಸಾಕ್ಷಿ ಹರಿ ಶಿವಶಕ್ತಿಯೆಂಬುದಕೆ ಎಂದು ಮೋಹಿನಿ ಭಸ್ಮಾಸುರನ ಪ್ರಣಯ ಪ್ರಸಂಗದ ಮೂಲಕ ತಿಳಿಸುವನು.

ಈ ರೀತಿ ಗುರು ಸಾರ್ವಭೌಮ ಸುರಪತಿಗೆ ಅನಂತ ವಿಧದಲಿ ಪರಶಿವನೊಂದೇ ಎಂಬ ಅಂಶವನು ಮನಂಬುಗುವಂತೆ ತಿಳಿಹೇಳುವನು.

'ಧರೆಯೊಳಗೆ ಪಲಬಗೆಯ ನಾಮದೆ
ಪರಿವ ಪೊಳೆಗಳ ತನ್ನೊಳೇಕೀ
ಕರಿಸಿಕೊಂಡೇಕತ್ವದಿಂದನವರತ ಮೆರೆಯುತಿಹನು'

ಎಂದು ಹೇಳುವುದರೊಂದಿಗೆ ಕವಿ ಕೃತಿಯನ್ನು ಅಂತ್ಯಗೊಳಿಸುವನು.

ಕೃತಿಯ ಕೊನೆಯಲ್ಲಿ ಫಲಶ್ರುತಿ ಎಂಬಂತೆ – ಇದನ್ನು ಓದುವವನು, ಹೇಳುವವನು, ಹೇಳಿಸಿದವನು ಹಾಗೂ ಕೇಳುವವನು, ಇದನ್ನು ಬರೆದವನು, ಬರೆಯಿಸಿದವರೆಲ್ಲರು ಶಿವನಲ್ಲಿ ಸಮರಸವ, ಐಕ್ಯತ್ವವ ಪಡೆಯುವುದಾಗಿ ಹೇಳಿರುವರು ಹಾಗೂ 'ವೈಶಾಖದಸಿತೋದ್ಯದ ಪೂರ್ವಪಕ್ಷೈಕಾದಶಿಯ ಶಸಿವಾರದೊಳು ಕೃತಿ ಬರೆಯುವುದನ್ನು ಮುಗಿಸಿರುವುದಾಗಿ ತಿಳಿಸಿದ್ದಾರೆ.'

ಹೀಗೆ ಕ್ಲಿಷ್ಟವೆನಿಸುವ ತಾತ್ವಿಕ ವಿಷಯಗಳನ್ನು ಸಂಭಾಷಣೆಯ ರೂಪದಲ್ಲಿ ತೀರಾ ಸರಳವಾಗಿ ನಿರೂಪಿಸಿದ್ದಾರೆ. ಉಭಯಭಾಷಾವಿಶಾರದರೆನಿಸಿದ ಕವಿಗಳು ಸಂಸ್ಕೃತದ ಹದವಾದ ಬಳಕೆಯೊಂದಿಗೂ ಶಿವನನ್ನು ಸ್ಮರಿಸಿದ್ದಾರೆ.

'ಶಿವಮಹೇಶ ಶಶಾಂಕ ಭಾವಕ
ಭವ ಕುಶೇಶಯ ಶಶಿ ಶಿವಾದಯ
ಪವಶಗಾಂಬಕ ಬಾಪು ಭಾವಜ ಕಂಜ ಕುಂಭೀಶ
ಜವಗ ಭೂಮಿಪಯೋಬ್ಜಯಜ್ವ
ಚ್ಯವಿಪ ಪಾವಕಖಾಂಗಜ ಯಶಾಂ
ಭವಯಮೀಶಯಶೋಂಬು ಮುಕ್ಜಯ ಶಂಬುಯ ಶಂಬು'

ಇದಲ್ಲದೆ, ಇಲ್ಲಿ ಬಳಸಿರುವ ತಲೆಕಟ್ಟಿನ ಪದ, ನಿರೋಷ್ಠ್ರ ಪದದ ಪದ್ಯಗಳು ಕವಿಗಿರುವ, ಸಂಸ್ಕೃತ ಶಬ್ದಾಡಂಬರದ ಒಲವನ್ನು ಎತ್ತಿತೋರಿಸುತ್ತಿವೆ. ಇಲ್ಲಿ ಬರುವ ಪ್ರಶ್ನೋತ್ತರಗಳ ಮೂಲಕ ನಡೆಯುವ ಸಂಭಾಷಣೆ ಕಾವ್ಯದ ಯಶಸ್ಸಿಗೆ, ಸೊಗಸಿಗೆ ತುಂಬಾ ಪರಿಣಾಮಕಾರಿಯಾದ ತಂತ್ರವೆನಿಸಿದೆ. ತಾತ್ವಿಕ ಗ್ರಂಥವೆನಿಸಿರುವ ಈ ಪಂಚಾಶಿಕೆಯಲ್ಲಿ ಬರುವ ಬ್ರಹ್ಮಾಸುರ – ಮೋಹಿನಿಯರ ಪ್ರಸಂಗವು, ಓದುಗರಿಗೆ ಬೇಸರವನ್ನು ನೀಗುವ ಸಾಧನವಾಗಿ ಮೂಡಿಬಂದಿದೆ. ಇಲ್ಲಿ ಬರುವ ವರ್ಣನೆಗಳು ಕವಿಯ ಪಾಂಡಿತ್ಯದ ಮೆರಗನ್ನು ಹೆಚ್ಚಿಸಿವೆ ಎಂದು ಹೇಳಬಹುದು. ಉದಾ: ಸಿಂಹಾಸನದಲ್ಲಿ ಕುಳಿತ ದೇವೇಂದ್ರನನ್ನು

'ಕೊಳಸಿರಾಡಲು ಕಳಿನೀರು ಕಂಗಳೆ
ಜಳಚರಾಂಬುಜ ನೀಲನೀರಜ
ಕುಳವದಾಗಿರೆ ಮಡದಿಮೊಗ ನೆರೆಯ್ಯೆರೆದಾಳಿಗಳೆ
ತೊಳಪ ಶಶಿರವಿಗಳು ಶಶಿಕುಚ
ಕಳಕನಯರಿಗಳೆ ಬಗೆಯಲು
ಜ್ವಳಿಪ ಕೊಕ ಚಕೋರಪಕ್ಷಿಗಳಾಗಲೊಪ್ಪಿದನು'
ಎಂದು ಮನೋಹರವಾದ ಕೊಳವೊಂದಕ್ಕೆ ಹೋಲಿಸಿರುವನು.

ಶಿವಸ್ತುತಿ ಹಾಗೂ ತೋಂಟದ ಸಿದ್ಧಲಿಂಗನ ಸ್ತುತಿಗಳಲ್ಲಿ ಕವಿಯ ಪ್ರತಿಭಾಶಕ್ತಿ ಪುಟಿದೇಳುತ್ತದೆಯೇನೋ ಎಂದೆನಿಸುವಂತಿದೆ. ಸಾಮಾನ್ಯ ಜನರಿಗೆ ವೀರಶೈವ ತತ್ವವನ್ನು ತಿಳಿಸಬೇಕಾಗಿರುವುದರಿಂದ, ತಾತ್ವಿಕ ವಿಷಯವನ್ನೇ ತೀರಾ ಸರಳವಾಗಿ ನಿರೂಪಿಸಿರುವನು.

ಮಿಶ್ರಾರ್ಪಣ :

ಪದಾರ್ಥವನ್ನು ಪ್ರಸಾದವಾಗಿಸುವ ಅರ್ಪಣ ವಿಧಾನವೇ ಮಿಶ್ರಾರ್ಪಣ. ವೀರಶೈವ ಷಟ್ಸ್ಥಲ ಸಿದ್ಧಾಂತದಲ್ಲಿ ಇದಕ್ಕೆ ಮಹತ್ವಪೂರ್ಣ ಸ್ಥಾನವಿದೆ. ಮಿಶ್ರಾರ್ಪಣ ಪದಕ್ಕೆ ಟೀಕಾಗ್ರಂಥಗಳಲ್ಲಿ ಈ ರೀತಿ ಅರ್ಥೈಸಲಾಗಿದೆ – ಮಿಶ್ರವೆಂದರೆ ಪದಾರ್ಥ ಅರ್ಪಣವೆಂದರೆ ಲಿಂಗಾರ್ಪಣ ಎಂದಿದೆ.

ಮಿಶ್ರಾರ್ಪಣದ ವಿವರಣೆಯನ್ನು ಪ್ರಮುಖವಾಗಿ ಶರಣರ ವಚನ, ಹಾಡು ಮತ್ತು ಅವುಗಳಿಗೆ ಬರೆದ ಟೀಕಾಗ್ರಂಥಗಳು ಇವು ಮಿಶ್ರಾರ್ಪಣ ಸಾಹಿತ್ಯದಲ್ಲಿ ಸಮಾವೇಶವಾಗುತ್ತವೆ. ಈ ದೃಷ್ಟಿಯಿಂದ ನೋಡಿದಾಗ ಬಸವಣ್ಣನವರ 'ಮಿಶ್ರಾರ್ಪಣ' ಕೃತಿ, ಆದಯ್ಯನ ಕೆಲವು ವಚನಗಳು, ತೋಂಟದ ಸಿದ್ಧಲಿಂಗೇಶ್ವರರ ಕೆಲವು ವಚನಗಳು, ಷಣ್ಮುಖ ಶಿವಯೋಗಿಯ ಅಖಂಡೇಶ್ವರ ವಚನಗಳು, ಹೀಗೆ ಬೇರೆ ಬೇರೆ ವಚನಕಾರರ ಕೆಲವು ವಚನಗಳಲ್ಲಿ ಅರ್ಪಣ ವಿಷಯದ ವಿವರಣೆ ಬರುತ್ತದೆ.

ವಚನಗಳಂತೆ ಸ್ವರವಚನ, ಷಟ್ಪದಿಗಳಲ್ಲಿಯೂ ಮಿಶ್ರಾರ್ಪಣ ಕುರಿತಾಗಿ ವಿವರ ಬರುವುದುಂಟು. ಪ್ರಸ್ತುತ ಇಮ್ಮಡಿ ಮುರಿಗಾ ಗುರುಸಿದ್ಧರ ಮಿಶ್ರಾರ್ಪಣ ಕೃತಿಯು ಷಟ್ಪದಿ ರೂಪದಲ್ಲಿ ರಚನೆಯಾಗಿದ್ದು, ಇದರಲ್ಲಿ ೫ ವಾರ್ಧಕ ಷಟ್ಪದಿಗಳಿವೆ. "ತನ್ನ ನಿಜವನ್ನು ತಿಳಿದು ಷಟ್ಸ್ಥಲಬ್ರಹ್ಮದಲ್ಲಿ ಏಕತ್ವವನ್ನು ಹೊಂದಿ ಜೀವನಮುಕ್ತನಾಗಿ ಸಂಚರಿಸುವ ಕ್ರಮವನ್ನು ಇದರಲ್ಲಿ ತಿಳಿಸಲಾಗಿದೆ."

ಶಿಷ್ಯ ತನ್ನ ಸ್ವರೂಪವನ್ನು ಗುರುಮುಖದಿಂದ ಅರಿತು, ಭಕ್ತ ಮಹೇಶ್ವರ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯರೆಂಬ ಷಟ್‌ಸ್ಥಲಗಳನ್ನುಳ್ಳಂಥ, ಆಚಾರಲಿಂಗ, ಗುರುಲಿಂಗ, ಶಿವಲಿಂಗ, ಜಂಗಮಲಿಂಗ, ಪ್ರಸಾದಿಲಿಂಗ, ಮಹಾಲಿಂಗವೆಂಬ ಷಡ್ವಿಧ ಬ್ರಹ್ಮ ಸ್ವರೂಪನಾದಂಥ ಲಿಂಗದಲ್ಲಿ ನಿಶ್ಚಯದಿಂದ ಸಾಮರಸ್ಯವನ್ನು ಪಡೆದು ಅತಿಶಯದಿಂದ ಜೀವನ್ಮುಕ್ತನಾಗಿ, ಬಂಧರಹಿತನಾದಾತನಾಗಿ ಆಚರಿಸುವ ಕ್ರಮ ಯಾವುದು? ಎಂದು ಶಿಷ್ಯನು ಗುರುವಿನಲ್ಲಿ ಪ್ರಶ್ನೆ ಮಾಡಲು, ಶ್ರೀ ಗುರುವು ಅದಕ್ಕೆ ಉತ್ತರವಾಗಿ ಹೀಗೆ ಹೇಳುತ್ತಾನೆ.

ನುತ ಪೀಠ ಕಟಿ ವೃತ್ತ ಗೋಮುಖವು ನಾಳ ವಿ
ಶ್ರುತ ಗೋಳಕವೆನಿಪ್ಪ ಷಟ್ಸ್ಥಾನಗೊಳು ಸಂ
ಚಿತ ರೂಪ ವಸ್ತು ಸುಪದ ಸ್ನಾನ ಮಂತ್ರ ಸಂತತಿಯ ಸಂಬಂಧಸುತ್ತಿ

ಕ್ಷಿತಿ ಜಲಾನಲ ವಾಯು ಗಗನಾತ್ಮರೆಂಬ ಸ
ಮ್ಮಿತ ತತ್ವಮಯವಾದುದೀ ತತ್ವವೆಂದು ನಿ
ಶ್ಚಿತ ಬುದ್ಧಿಯಿಂದಿರಲ್ಕದು ಸತ್ಕ್ರಿಯಾರ್ಪಣವೆನಿಪುದದುವೆ ಲಿಂಗಮುಖವು ॥೧॥

ಲಿಂಗದ ಆರು ಸ್ಥಾನಗಳು, ಷಡ್ವಿಧ ರೂಪ, ವಸ್ತು, ದ್ರವ್ಯಗಳು, ಷಡ್ವಿಧ ಅಭಿಷೇಕವು, ಷಡ್ವಿಧ ಮಂತ್ರಗಳು, ಇವೆಲ್ಲವುಗಳ ಮಿಶ್ರಣ ಕ್ರಿಯಾರ್ಪಣ.

ಮುಂದಿನ ಪದ್ಯದಲ್ಲಿ ಷಟ್‌ಸ್ಥಲ ಸಕೀಲಗಳನ್ನೆಲ್ಲಾ ಹೆಸರಿಸುತ್ತಾ ಮಂತ್ರಪಂಚೀಕರಣದ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಇಲ್ಲಿ ಷಡ್ವಿದ ಭೂತಗಳು, ಅಂಗಸ್ಥಲಗಳು, ಹಸ್ತಗಳು, ಲಿಂಗಗಳು, ಕಲೆಗಳು, ಮುಖಗಳು, ಮನುಗಳು, ಭಕ್ತಿಗಳು, ಆಕಾರಗಳು, ಚಕ್ರಗಳು, ಕಮಲಗಳು, ವರ್ಣಗಳು, ಅಕ್ಷರಗಳು, ಮಂತ್ರಗಳು ಇವುಗಳಲ್ಲಿ ಒಂದೊಂದರಲ್ಲಿ ಐದೈದಾಗಿ ಮಿಶ್ರಿಸುವಂಥ ಪಂಚೀಕರಣದ ಮಿಶ್ರಣವನ್ನು ಅರಿತುಕೊಳ್ಳಬೇಕು. ನಂತರ ಅಷ್ಟವಿಧ ಸಕೀಲಗಳ ಕುರಿತಾಗಿ, ವಿವರಿಸುತ್ತಾನೆ.

ಮಿಶ್ರಾರ್ಪಣದಲ್ಲಿ ಕಾಯಾರ್ಪಣ, ಕರಣಾರ್ಪಣ ಹಾಗೂ ಭಾವಾರ್ಪಣವೆಂದು ಮುಖ್ಯವಾಗಿ ಮೂರುವಿಧ.

೧) ಕಾಯಸಂಬಂಧವಾದ ರೂಪಪದಾರ್ಥಗಳನ್ನು ಇಷ್ಟಲಿಂಗಕ್ಕೆ ಸಮರ್ಪಿಸುವುದು ಕಾಯಾರ್ಪಣ.

೨) ಮನೋಸಂಬಂಧವಾದ ರುಚಿ ಪದಾರ್ಥಗಳನ್ನು ಪ್ರಾಣಲಿಂಗಕ್ಕೆ ಅರ್ಪಿಸುವುದು ಕರಣಾರ್ಪಣ.

೩) ಆತ್ಮ ಸಂಬಂಧವಾದ ರುಚಿಪದಾರ್ಥಗಳನ್ನು ಭಾವಲಿಂಗಕ್ಕೆ ಸಮರ್ಪಿಸುವುದು ಭಾವಾರ್ಪಣ.

ಒಟ್ಟಿನಲ್ಲಿ ಕಾಯ–ಮನ–ಆತ್ಮ ಸಂಬಂಧಿಯಾದ ಸರ್ವಪದಾರ್ಥಗಳನ್ನು ಲಿಂಗಕ್ಕೆ ಸಮರ್ಪಿಸುವ ಸರ್ವಾರ್ಪಣವೇ ಇದರ ವೈಶಿಷ್ಟ್ಯ. ಹೀಗೆ ಮುಂದುವರಿದು ಆಚಾರಲಿಂಗಮಿಶ್ರ, ಶಿವಲಿಂಗ ಮಿಶ್ರ, ಪ್ರಸಾದಲಿಂಗ ಮಿಶ್ರದ ವಿವರಣೆ ಮಾಡುವನು.

ಈ ರೀತಿಯ ೨೧೬ ತೆರನಾದ ಅರ್ಪಣದ ಕ್ರಮವನ್ನು ನೋಡಿ ಸ್ವೀಕರಿಸುತ್ತ ಭಕ್ತನ ೧೬ ಸ್ಥಲ, ಮಹೇಶ್ವರನ ೯ ಸ್ಥಲ, ಪ್ರಸಾದಿಯ ೭೧ ಸ್ಥಲ, ಪ್ರಾಣಲಿಂಗಿಯ ೫ ಸ್ಥಲಗಳೆಂಬ ೪೪ ಅಂಗಸ್ಥಲಗಳು, ೯ ಆಚಾರಲಿಂಗ ಸ್ಥಲಗಳು, ೯ ಗುರುಲಿಂಗ ಸ್ಥಲಗಳು, ೯ ಶಿವಲಿಂಗಸ್ಥಲಗಳು, ೯ ಜಂಗಮಲಿಂಗಸ್ಥಲಗಳು, ೧೨ ಮಹಾಲಿಂಗ ಸ್ಥಲಗಳು ಹೀಗೆ ೫೭ ಲಿಂಗಸ್ಥಲಗಳು ಒಂದಾಗುವಂತೆ ಷಟ್ಸ್ಥಲದಲ್ಲಿ ಧ್ಯಾನಿಸುವುದು.

ಹೀಗೆ ಗುರುವು ಶಿಷ್ಯನಿಗೆ ಮಿಶ್ರಾರ್ಪಣದ ವಿಧಾನವನ್ನು ಸಕ್ರಮವಾಗಿ ಬೋಧಿಸುತ್ತಾನೆ. ಇದನ್ನು ಅರಿತು ಆಚರಿಸಿದರೆ ಲಿಂಗಾಂಗ ಸಾಮರಸ್ಯ ಸಾಧ್ಯ ಎಂದು ಅರಹುತ್ತಾನೆ. ಸರಳ ಷಟ್ಪದಿಯಲ್ಲಿ ಈ ತತ್ವವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು ಎಲ್ಲರೂ ತಿಳಿಯುವಂತೆ ನಿರೂಪಿಸಿರುವುದು ವಿಶೇಷವೆನಿಸಿದೆ.

ಯೋಗಕಲಾಪಸಾರ :

ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಈ ಕೃತಿಯಲ್ಲಿ ೫ ಪಟಲಗಳಿವೆ. ಪಟಲ ಒಂದರಲ್ಲಿ – ೧೧, ಪಟಲ ಎರಡರಲ್ಲಿ ೨೨, ಮೂರರಲ್ಲಿ – ೩೧, ನಾಲ್ಕರಲ್ಲಿ – ೩೧, ಐದರಲ್ಲಿ ೩೩ ಹೀಗೆ ಒಟ್ಟು ೧೨೮ ಭಾಮಿನಿ ಷಟ್ಪದಿಗಳಿವೆ. ಪ್ರತಿ ಪಟಲದ ಅಂತ್ಯದಲ್ಲಿ "ಇದು ನಿಖಿಳ ಶಿವಯೋಗ ಸಂಕುಳ" ಎಂಬ ಷಟ್ಪದಿ ಪದ್ಯವು ತಪ್ಪದೆ ಬಂದಿದೆ. ಪ್ರತಿಯೊಂದು ಪಟಲದ ಆರಂಭದ ಪಲ್ಲವಿಯಲ್ಲಿ ಆಯಾ ಪಟಲದಲ್ಲಿ ನಿರೂಪಿತವಾದ ವಿಷಯದ ಸೂಚನೆಯಿದೆ. ಒಂದನೆಯ ಪಟಲದಲ್ಲಿ ಶಿವಯೋಗದ ಸ್ವರೂಪ, ಮಹತ್ವ ಆಚರಣೆಯ ವಿಧಾನಗಳನ್ನು ಹೇಳಿದರೆ, ಎರಡನೆಯ ಪಟಲದಲ್ಲಿ ಮಂತ್ರ, ಲಿಂಗರೂಪ, ನಾದ, ಆತ್ಮ ಹಾಗೂ ವಾಚ್ಯ ಗುಣಗಳನ್ನು ವಿವರಿಸಲಾಗಿದೆ. ಮೂರನೆಯ ಪಟಲದಲ್ಲಿ ಅಕ್ಷರಗಳು, ಅವುಗಳ ನೆಲೆಗಳು ಹಾಗೂ ಸ್ವರೂಪವನ್ನು ಕುರಿತಾಗಿ, ನಾಲ್ಕನೆಯ ಪಟಲದಲ್ಲಿ ಷಟ್‌ಚಕ್ರಗಳಲ್ಲಿರುವ ಶಕ್ತಿಯರ ಸ್ಥಾನಗಳನ್ನು, ಪಂಚಭೂತಗಳಲ್ಲಿರುವ ಶಂಭುವಿನ ಸ್ಥಾನವನ್ನು ನಿರೂಪಿಸಲಾಗಿದೆ. ಕೊನೆಯಲ್ಲಿ ಭೋಜನದಿಂದ ದೇಹ ಶುದ್ಧಿಯ ಮಾಡಿಕೊಂಡ ಯೋಗಿಯ ಧ್ಯಾನ ಸ್ಥಿತಿಗಳನ್ನು, ಗೌಪ್ಯವಾದ ಈ ವಿಷಯ ಯಾರಿಂದ ತಿಳಿಯಬೇಕು, ತಿಳಿದುಕೊಂಡರೆ ಸಿಗುವ ಫಲಶ್ರುತಿಗಳ ಬಗ್ಗೆ ಹೇಳುತ್ತಾನೆ. ಕೃತಿಯುದ್ದಕ್ಕೂ ಪಾರ್ವತಿಯ ಪ್ರಶ್ನೆಗಳಿಗೆ ಶಿವನು ಉತ್ತರಿಸುವ ಸಂಭಾಷಣಾ ಮಾದರಿಯನ್ನು ಬಿತ್ತರಿಸಿದ್ದಾನೆ.

ಉದಾ: ಅಗಜೆ ಕೇಳೇ ಮೂಲಮಂತ್ರವೆ
ಸೊಗಯಿಪುದು ಲಿಂಗಸ್ವರೂಪದೆ
ಸುಗಮವೆಂತೆನೆ ಬಿಂದುಪೀಠವು ನಾದವದೆ ಲಿಂಗ
ನಿಗಮಸಿದ್ಧವಿದೆನ್ನ ರೂಪೆಂ
ದಗಲದರಿವೆ ಮುಕ್ತನಾತನೆ
ಜಗದೊಳಣಿಮಾದ್ಯಷ್ಟಸಿದ್ಧಿಗಳೆಯ್ದೆ ದೊರೆದಪವು

ಎಂದು ಮೂಲ ಮಂತ್ರದ ಮಹಿಮೆಯನ್ನು ಕುರಿತಾಗಿ ಹೇಳಲಾಗಿದೆ.

ಅಕ್ಷರಗಳು ಅವುಗಳ ನೆಲೆಗಳು ಹಾಗೂ ಸ್ವರೂಪವನ್ನು ಕುರಿತಾಗಿ ತಿಳಿಸಬೇಕೆಂದು ಪಾರ್ವತಿಯು ಶಿವನಲ್ಲಿ ಪ್ರಾರ್ಥಿಸಲಾಗಿ,

ಅಕ್ಷರಗಳ ನಿಕರದಿಂ ಕವಲ
ಅಕ್ಷಿ ಪದಪದದಿರಿದೆ ವಾಕ್ಯಸ
ಮಕ್ಷವಾಗಿಯುದಯಿಸಲಾ ವಾಕ್ಯಾತ್ಮತೆಯನೆಯ್ದಿ
ದಕ್ಷ ಮಹಿಮೆಗಳಾದ ಮಂತ್ರಗ
ಳೀ ಕ್ಷಿತಿಯೊಳೆಸೆದಿಹವು ನಿಗಮತ
ತಾಕ್ಷಯಾಗಮ ಮುಖ್ಯ ಶಾಸ್ತ್ರಪ್ರತತಿ ಪುಟ್ಟಿದುದು

ಎಂದು ಪ್ರತಿಯೊಂದು ಅಕ್ಷರದ ನೆಲೆಗಳನ್ನು ವಿವರಿಸುವನು.

ಷಟ್ಚಕ್ರಗಳಲ್ಲಿರುವ ಶಕ್ತಿಯರ ಸ್ಥಾನಗಳನ್ನು ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶಗಳಲ್ಲಿರುವ ಶಂಭುವಿನ ಸ್ಥಾನಗಳನ್ನು ಅಷ್ಟೇ ಸುಂದರವಾಗಿ ನಿರೂಪಿಸಲಾಗಿದೆ. ಕೊನೆಯಲ್ಲಿ ಕೆಲವಾರು ಯೋಗಸ್ಥಿತಿಗಳನ್ನು ಶಿವ ಪಾರ್ವತಿಗೆ ತಿಳಿಸಿಕೊಡುವನು.

ಗೋಪ್ಯವೆನಿಸಿದ ಈ ಯೋಗಕಲಾಪಸಾರವನ್ನು ಜಗದಲ್ಲಿ ಗುರುಮುಖದಿಂದ ತಿಳಿಯಬೇಕಲ್ಲದೆ ಈ ಆಜ್ಞೆಯನ್ನು ಮೀರಿದವರು ದುರ್ಗತಿಗೆ ಒಳಗಾಗುವರೆಂದು ತಿಳಿಸಿದ್ದಾರೆ.

ಒಟ್ಟಿನಲ್ಲಿ ಇಮ್ಮಡಿ ಮುರಿಗಾಗುರುಸಿದ್ಧರ ಪಂಚಾಶಿಕೆ, ಮಿಶ್ರಾರ್ಪಣ, ಯೋಗಕಲಾಪಸಾರಗಳು ವೈಜ್ಞಾನಿಕ ಮನೋಧರ್ಮದಿಂದ, ಶಾಸ್ತ್ರೀಯ ನಿರೂಪಣೆಯನ್ನು ಒಳಗೊಂಡ ಕ್ರಮಬದ್ಧ ಕೃತಿಗಳಾಗಿವೆ.

ಶಿವಲಿಂಗ ಮಹಿಮಾ ಷಟ್ಪದಿ :

ಶಿವನ ಲೀಲಾವಿಲಾಸಗಳು, ಅಪ್ರತಿಮತ್ವ, ಭಕ್ತವತ್ಸಲತೆ, ಕರುಣಾಮೃತತ್ವ, ಸತ್ಕೃಪಾಸಿಂಧುತ್ವ ಇತ್ಯಾದಿ ಸಂಕೀರ್ಣ ವಿಷಯವಸ್ತುವನ್ನೊಳಗೊಂಡ ಕೃತಿ ಶಿವಲಿಂಗಮಹಿಮಾ ಷಟ್ಪದಿ, ಶಿವಲಿಂಗೇಶಾ, ಶಿವಲಿಂಗೇಶ್ವರಾ ಎಂಬ ಅಂಕಿತವನ್ನೊಳಗೊಂಡ ೧೦೫ ವಾರ್ಧಕ ಷಟ್ಪದಿಗಳಲ್ಲಿ ರಚಿತವಾಗಿದೆ. ವೇದ, ಆಗಮ, ಪುರಾಣಗಳ ಸಾಕ್ಷ್ಯಾಧಾರಗಳಿಂದ, ಶಿವನ ಶ್ರೇಷ್ಠ ಭಕ್ತರ ನಡೆ ನುಡಿಗಳ ವಿವರಣೆಯಿಂದ ಅವರ ಅತಿಶಯ ಭಕ್ತಿಯ ಪರಿಣಾಮವಾಗಿ ಉಂಟಾಗುವ ಶಿವಸಾಕ್ಷಾತ್ಕಾರವನ್ನು ಪ್ರತಿಯೊಂದೊಂದು ಪದಗಳಲ್ಲಿಯೂ ಮೂರ್ತಗೊಳಿಸಿದ್ದಾರೆ.

'ಶ್ರೀಮದಜಹರಿ ಪುರಂದರ ಪುರೋಗಮದೇವ
ತಾಮಣಿಮಕುಟಘಟಿತ ಚರಣ ಸರಸಿಜ ಶರಣ
ರಾಮಯ ವಿಪಿನದಾವ ದಾನವ ಮದಾಂಧತಮಸೋದಯ ನಳಿನ ಬಾಂಧವ
ಹೇಮಭೂದರ ಶರಾಸನ ಶಶಿಕಲೋತ್ತರಿಸ
ರಾಮಚಂದ್ರಾವನಿಪ ಪಾಶುಪತ ಬಾಣದ ಸು
ಧಾಮಯ ಕಲೇಬರ ಮಹೇಶ್ವರ ಗಿರೀಶ್ವರ ಗಿರೀಶ್ವರೇಶ್ವರಾ ಪಾಲಿಸು'

ಎಂಬ ಶಿವಮಹಿಮೆಯಿಂದಲೇ ಕೃತಿ ಪ್ರಾರಂಭವಾಗುತ್ತದೆ. ಸೌಂದರ ನಂಬಿಯಣ್ಣನ ಬಂಟ, ಕಲಿಗಣನಾಥನ ಶ್ರೇಷ್ಠ ಭಕ್ತನಾದ ಬೇಡರ ಕಣ್ಣಪ್ಪನ ಕೆರವನ್ನು ಮಸ್ತಕದಲಿ ಧರಿಸಿದಂತವ, ಬಿಜ್ಜಮಹಾದೇವಿಯ ಮಗ, ಉರಿಲಿಂಗಪೆದ್ದಿ ಮೊದಲಾದ ಶರಣರ ವಲ್ಲಭ, ಬಾಣಾಸುರನ ಬಾಗಿಲನ್ನು ಕಾಯ್ದವ, ಮಾದಾರ ಚೆನ್ನಯ್ಯನ ಮನೆಯ ಗಂಜಿಯನ್ನು ಉಂಡಂಥವ, ಚೋಳಿಯಕ್ಕನೆಂಬ ವೇಶ್ಯೆಯ ಶೇಷಾಂಗವನ್ನು ತೆಗೆದುಕೊಂಡಂಥವ, ವಿಶ್ವನೆಂಬ ನಾರಾಯಣಗೆ ನಿಯಾಮಕನಾಗಿ ವಿಶ್ವೇಶ್ವರನೆಂಬ ಹೆಸರು ಪಡೆದಿರುವೆ, ಗ್ರಾಹಕನೆಂಬ ಹರಿಗೆ ಪ್ರೇರಕನಾಗಿ ಜೀವಪರಮನೆಂಬಭಿಧಾನವ ಪಡೆದಿರುವೆ. ಶಿವನಾಮ ಸ್ತುತಿಸುವುದನ್ನು ಬಿಟ್ಟು, ಹರಿನಾಮವನ್ನು ಸ್ತುತಿಸಿದ ಹಿರಣ್ಯಾಕ್ಷನನ್ನು ಕೊಂದು, ನರಸಿಂಹನ ಗರ್ವವನ್ನು ಮುರಿದು ಆತನ ತಲೆಯನ್ನು ಕಾಶಿಯಲ್ಲಿ ಕಟ್ಟಿ ಮೆರೆದ ಶರಭರೂಪಿ ಶಿವ, ಸಚರಾಚರ ಪ್ರಾಣಿಗಳಲ್ಲಿಯೂ ಶೋಭಿಸುವಂತಹ ಶಿವ, ದಾಸನಾದ ಬ್ರಹ್ಮನ ತಲೆಗೊಯ್ದು, ಸೊಸೆಯಾದ ಸರಸ್ವತಿಯ ಮೂಗನ್ನು ಕಿತ್ತಂತ ದಕ್ಷಬ್ರಹ್ಮನಿಗೆ ಕುರಿ ತಲೆಯನ್ನು ಕೊಟ್ಟವನು ಶಿವ. ತಾರಕಾಸುರನ ಹಾವಳಿಯನ್ನು ಸಹಿಸದಾದ ಲಕ್ಷ್ಮೀ ಮೊದಲಾದ ದೇವತಾಸ್ತ್ರೀಯರು ಬಂದು ರಕ್ಷಣೆ ಬೇಡಿದಾಗ ಅವರನ್ನು ಪೊರೆದವನು ಶಿವ. ಅಷ್ಟಾದಶ ಪುರಾಣಗಳೂ ಸಾರುತ್ತಿರುವಂತ ಸುರಗಂಗೆಯನು ಧರಿಸಿದ ಕಂತುಹರ ಶಿವ. ಇದು ಸುಳ್ಳೆಂದು, ಈ ಗಂಗೆ ಕೃಷ್ಣವಂಘ್ರಿಯೊಳು ಉದಿತೆಂದು ಹೇಳುವ ಮಾಯಾವಿಗಳು ನರಕರೂಪದಲ್ಲಿ ಬೀಳುವರು. ಈ ಮೊದಲಾಗಿ ಶಿವಪಾರಮ್ಯವನ್ನು ಹೇಳಲಾಗಿದೆ.

ವೇದ, ಆಗಮ, ಪುರಾಣಾದಿ ಶಾಸ್ತ್ರಗಳು, ವಾತೂಲಾಗಮದ ೨೮ ದಿವ್ಯಾಗಮಗಳು, ಭಾರತ, ಭಾಗವತ, ರಾಮಯಣಾದಿ ಇತಿಹಾಸಗಳಲ್ಲಿಯೇ ಹೇಳಿರುವಂತೆ ಹರ ಭಕ್ತಿಯಿಂದಲೇ ಮುಕ್ತಿ, ವಿಭೂತಿ ರುದ್ರಾಕ್ಷಿಗಳೇ ಮೋಕ್ಷವೆಂದು, ಮೋಕ್ಷ ಘೋಷಿಸುವವನು ಮಹೇಶ್ವರನೇ ಎಂಬುದು ಸತ್ಯ

'ಸತ್ಯ ಸಂಧನೆನಿಪ್ಪ ಭಕ್ತನಿಗೆ ಹರಿಮೆಚ್ಚಿ
ಭೃತ್ಯ ನಿನ್ನಭಿಮತವದಾವುದೆಂದೆನಲಾತ
ನಿತ್ಯಾಮುಕ್ತಿಯ ಪಾಲಿಸೇನಲದೆನ್ನಿಂದಾಗದೀಶ್ವರನ ಪೂಜೆಯಿಂದ'

ಕೂರ್ಮಪುರಾಣ, ಗೀತಾಶಾಸ್ತ್ರಗಳೂ ಸಹಿತ ಇದೇ ರೀತಿಯಾಗಿ ಹೇಳಿವೆ. ದುರ್ಜನರ ದುರ್ಗುಣಗಳನ್ನು ಶಿಕ್ಷಿಸುವುನೆಂಬುದಕೆ ನಿನ್ನ ಕೊರಲಡಿಯ ವಿಷವೇ ಸಾಕ್ಷಿ. ಶರಣಾಗತರಾದವರನ್ನು ರಕ್ಷಿಸುವುದೆಂಬುದಕೆ ನಿನ್ನ ಎಡಗೈಯ ಮಿಗವೇ ಸಾಕ್ಷಿ. ಶ್ರೇಷ್ಠವಾದ ಸತ್ವ, ರಜಸ್ಸು, ತಮೋಗುಣಗಳೇ ನಿನ್ನಂಶವೆಂಬುದಕ್ಕೆ ನೊಸಲ ವಿಭೂತಿಯೇ ಸಾಕ್ಷಿ. ನಿನ್ನ ಕೈಯಲ್ಲಿರುವ ಮಾಯೆ ಪ್ರೀತಿಯಿಂದಿರುವದಕೆ ನಿನ್ನ ಹಗ್ಗವೇ ಸಾಕ್ಷಿ. ನೀನು ಅಪ್ರತಿಮನೆಂಬುದಕ್ಕೆ ನಿನ್ನ ನೊಸಲ

ವಿಭೂತಿಯೇ ಸಾಕ್ಷಿ ಹದಿನಾಲ್ಕು ಭುವನಂಗಳ ಪ್ರಭುವೆನಿಸುವುದಕ್ಕೆ ಪರಮೇಶನೆಂಬ ದಿವ್ಯನಾಮವೇ ಸಾಕ್ಷಿ, ಭಕ್ತಭಯಸಂಹಾರಕನೆಂಬುದಕ್ಕೆ ಮೃತ್ಯುಂಜಯಾಖ್ಯವೇ ಸಾಕ್ಷಿ.

ಈ ಮೊದಲಾಗಿ ಕವಿ ಶಿವನನ್ನು ವಿಜಿತಪತಂಗಜಾ, ಸತ್ಕೃಪಾಸಿಂಧು, ಭವದೂರ, ದೋಷದೂರ, ಶೀತಕಿರಣಧರ, ಶರಭರೂಪ, ತರುಣ ಶಶಿಚೂಡ ಚಿತ್ಕೃಢ, ನಿಗಮೋತ್ತರಾರೂಢ ಸತ್ಯಮುಕ್ತಿಪುರವಪ್ರ, ಚಿದಾನಂದ, ಶುಭವೃಂದ, ಸಮ್ಯಜ್ಞಾನಕಂದ ಎಂಬ ವಿಭಿನ್ನ ಹೆಸರುಗಳಿಂದ ಆತನ ವ್ಯಕ್ತಿತ್ವದ ಹಲವು ಮುಖಗಳನ್ನು ಪರಿಚಯಿಸಿಕೊಟ್ಟಿದ್ದಾರೆ. ಅಸದೃಶ ಶಿವತತ್ವ ಜ್ಞಾನಿಗಳಾದ ಇಮ್ಮಡಿ ಮುರಿಗಾ ಗುರುಸಿದ್ಧರು ಶಿವನ ಲೀಲಾವಿಲಾಸ ಸ್ಮರಣೆಗೆ ಪಾಂಡಿತ್ಯ ಪ್ರದರ್ಶಕ ಪದಗಳನ್ನು ಬಳಸಿದ್ದಾರೆ. ಇಲ್ಲಿ ಬರುವ ಗುಣಿತಾಕ್ಷರಪದ, ಸರ್ವಲಘು ತಲೆಕಟ್ಟಿನ ಪದ, ನಿರೋಷ್ಠ್ಯಪದ, ಅಚಲಜಿಹ್ವಾ ಪದ, ಮಾತ್ರಿಕಾಮಾಲ ಪದ್ಯಗಳು ಕವಿಗೆ ಸಂಸ್ಕೃತದ ಮೇಲಿರುವ ಪಾಂಡಿತ್ಯವನ್ನು ತೋರಿಸಿಕೊಡುತ್ತದೆ.

ಕವಿಯು ಸಂದರ್ಭಾನುಸಾರ ಕೆಲವು ನಾಣ್ಣುಡಿಗಳನ್ನು ಬಳಸಿದ್ದಾರೆ. ಉದಾ. "ಮುಂಗಯ್ಯ ಕಂಕಣಕ್ಕೆ ಕನ್ನಡಿಯದೇಕೆ?" "ಮೋಟುಮರ ಗಾಳಿಮಿಂಡ", "ಬಾಯಪ್ರಸಾದ ಗಂಜಿಯ ಬೋನವೆಂಬಂತೆ", "ಮೀಸೆಯನು ಕೀಳುವಾಗಿಲ್ಲದಿಹ ಕೋಪವದು ಮೋಸದಿಂದ ತುಪ್ಪಳ ಕೀಳುವಾಗೊದಗಿದುದೆ?" ಇತ್ಯಾದಿ ಜಾಣ್ನುಡಿ, ಉಪಮೆಗಳನ್ನು ಸಂದರ್ಭೋಚಿತವಾಗಿ ಬಳಸಿಕೊಂಡು ಅರ್ಥವನ್ನು ಹರಳುಗೊಳಿಸಿದ್ದಾನೆ.

ಕೃತಿಯ ಕೊನೆಯಲ್ಲಿ ಇದನ್ನು ಓದುವಾತ, ಕೇಳುವಾತ, ಬರೆಯುವಾತ, ಹೇಳುವಾತನಿಗೆ ಜನನ ಮರಣಗಳನ್ನು ಮೀರಿ ಮಹಾದೇವನಲ್ಲಿ ಒಂದಾಗುತ್ತಾನೆ. ಹೇಗೆಂದರೆ ಅಮೃತದಲ್ಲಿ ಅಮೃತ ಒಂದಾಗುವಂತೆ ಪ್ರೀತಿಯಿಂದ ಶಿವನಲ್ಲಿ ಐಕ್ಯಹೊಂದುವನು ಎನ್ನುತ್ತಾನೆ.

ಮುರಿಗೆ ತಾರಾವಳಿ :

ವೀರಶೈವ ಲಘುಸಾಹಿತ್ಯ ಪ್ರಕಾರಗಳಲ್ಲಿ ತಾರಾವಳಿಯೂ ಒಂದು. ೨೭ ನುಡಿಗಳಿಂದ ಕೂಡಿದ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ ತಾರಾವಳಿ. "ಕೇವಲ ಇಪ್ಪತ್ತೇಳು ಪದ್ಯಗಳಲ್ಲಿ ಓರ್ವ ಮಹಿತ ವ್ಯಕ್ತಿಯ, ಓರ್ವ ಮಹಿತಳ, ಪೂಜ್ಯ ವಸ್ತುವಿನ ಸಮಗ್ರ ವಿಚಾರವನ್ನು ಸಂಕ್ಷಿಪ್ತವಾಗಿ ಅಣಿ ಮುತ್ತುಗಳಂತಹ ಸುಶ್ರಾವ್ಯ ತಾಳಬದ್ಧ ಕಾವ್ಯವಾಣಿಯಲ್ಲಿ ಬರೆದು ಮುಗಿಸತಕ್ಕ ಸಾಹಿತ್ಯಕ್ಕೆ "ತಾರಾವಳಿ ಸಾಹಿತ್ಯ" ಎಂದು ಕರೆಯಲಾಗಿದೆ."

ತಾರಾವಳಿ ಸಾಹಿತ್ಯವು ಬಳಕೆಗೆ ಬಂದುದು ಪ್ರೌಢದೇವರಾಯನ ಕಾಲದಲ್ಲಿ. ಸಧ್ಯದ ಮಟ್ಟಿಗೆ ತಾರಾವಳಿ ಪ್ರಕಾರದ ಮೊದಲ ಕೃತಿ ಎಂದರೆ ನೂರೊಂದು ವಿರಕ್ತರಲ್ಲಿ ಒಬ್ಬನಾದ ಕರಸ್ಥಲದ ನಾಗಿದೇವನು ರಚಿಸಿದ "ಮಡಿವಾಳಯ್ಯನ ತಾರಾವಳಿ." ಮುಂದೆ ೧೫, ೧೬, ೧೭ನೆಯ

ಶತಮಾನಗಳು ತಾರಾವಳಿ ಸಾಹಿತ್ಯದ ಸುಗ್ಗಿಯ ಕಾಲಗಳೆನಿಸಿವೆ. ಸದ್ಯ ನಮಗೆ ದೊರೆತಿರುವ ತಾರಾವಳಿಗಳ ಸಂಖ್ಯೆ ೪೮. ಆಳವಾದ ಸಂಶೋಧನೆಯಿಂದ ಇವುಗಳ ಸಂಖ್ಯೆ ಇನ್ನೂ ಹೆಚ್ಚುವ ಸಾಧ್ಯತೆಗಳಿವೆ.[೩೩]

೨೭ ನುಡಿಗಳನ್ನು ಹೊಂದಿರುವ ಪ್ರಮುಖ ಲಕ್ಷಣದೊಂದಿಗೆ, ಇನ್ನೂ ಹಲವಾರು ಲಕ್ಷಣಗಳನ್ನು ತಾರಾವಳಿ ಸಾಹಿತ್ಯ ಹೊಂದಿದೆ. ಶಿವಸ್ತುತಿ, ಗಣಸ್ತುತಿ, ಶರಣಸ್ತುತಿ, ಜಾತ್ರೆಯ ವರ್ಣನೆ, ಪೂಜೆಯ ವರ್ಣನೆ, ದಂಡಿನ ವರ್ಣನೆ, ವಿರಕ್ತರ ಚರಿತ್ರೆ, ಐತಿಹಾಸಿಕ ಸಂಗತಿಗಳನ್ನು ತಾರಾವಳಿಯು ಪ್ರಮುಖ ವಸ್ತುವಾಗಿ ಸ್ವೀಕರಿಸಿದೆ. ಮುಖ್ಯವಾಗಿ ಸ್ತೋತ್ರ ಸಾಹಿತ್ಯದ ಗುಂಪಿಗೆ ಸೇರುವ ಸಾಹಿತ್ಯ ಪ್ರಕಾರವಾದ ಕಾರಣ ಇಲ್ಲಿ ಸ್ತುತಿ ರೂಪದ ಕೃತಿಗಳೇ ಅಧಿಕ ಸಂಖ್ಯೆಯಲ್ಲಿವೆ.

ವಿರಕ್ತರ ಸ್ತುತಿಪರವಾದ ಕೃತಿಗೆ ಒಂದು ಅತ್ಯುತ್ತಮ ನಿದರ್ಶನ ಇಮ್ಮಡಿ ಮುರಿಗಾ ಗುರುಸಿದ್ಧರ 'ಮುರಿಗೆ ತಾರಾವಳಿ.' ತಾರಾವಳಿ ಪ್ರಕಾರದ ಎಲ್ಲ ಲಕ್ಷಣಗಳನ್ನೂ ಒಳಗೊಂಡ ಈ ಕೃತಿ ತಾರಾವಳಿ ಸಾಹಿತ್ಯದಲ್ಲಿಯೇ ಎದ್ದು ಕಾಣುವ ವೈಶಿಷ್ಟ್ಯವನ್ನು ಪಡೆದಿದೆ. ತಾರಾವಳಿ ಲಕ್ಷಣದಂತೆ ಇದು ೨೭ ನುಡಿಗಳನ್ನು ಹೊಂದಿದೆ. ಪ್ರಾರಂಭದಲ್ಲಿ ಕೃತಿಯ ವಿಶೇಷತೆಯನ್ನು ಎತ್ತಿತೋರುವ 'ಶಾರ್ದೂಲ ವಿಕ್ರೀಡಿತ' ವೃತ್ತವಿದೆ.

'ಬಣ್ಣಿಸಲಳವೆ ನಿಮ್ಮನು ಜಯಶೀಲ ಮು
ಕ್ಕಣ್ಣ ಮುರಿಗೆಯ ಶ್ರೀಶಾಂತವೀರೇಶ್ವರ
ಬಣ್ಣಿಸಲಳವೆ ನಿಮ್ಮ (ಪ)'

ಎಂಬ ಪಲ್ಲವಿಯೊಂದಿಗೆ ಕೃತಿಯನ್ನು ಪ್ರಾರಂಭಿಸಲಾಗಿದೆ. ನಂತರದಲ್ಲಿ ೧೮, ೧೯, ೨೦ ಪಾದಗಳನ್ನೊಳಗೊಂಡ ನುಡಿಗಳು ರಗಳೆ ರೂಪದಲ್ಲಿವೆ. ಪ್ರತಿ ನುಡಿಯಲ್ಲಿಯೂ ಆದಿಪ್ರಾಸ ನಿತ್ಯವಾಗಿದೆ. ಕೊನೆಯ ನುಡಿಯಲ್ಲಿ 'ಶಿವಲಿಂಗೇಶ' ಎಂಬ ಅಂಕಿತವಿದೆ. ಕೃತಿಯ ಅಂತ್ಯದಲ್ಲಿ ಫಲಶ್ರುತಿಯನ್ನೊಳಗೊಂಡ ಮತ್ತೊಂದು ಶಾರ್ದೂಲವಿಕ್ರೀಡಿತ ವೃತ್ತವಿದೆ.

'ಮುದದೊಳ್ನಿಮ್ಮ ಮಹತ್ವ ಸನ್ನುತಿಯ ನಾವಂ ಭಕ್ತಿಯಿಂದೋದುವಂ
ಮದನಾರಾತಿಯವಂಗೆ ಭೂರಿಸುಖಮಂ ಕೊಟ್ಟಕ್ಕರಿಂ ನೋಡಿ ನಿ
ನ್ನದರೊಳ್ಪಿಂ ಮಿಗೆ ರಕ್ಷಿಸೈ ದಯದೆ ದಾಕ್ಷಿಣಾಬ್ಧಿ ಪೂರ್ಣಾರ್ಜ್ಜನೇ
ತ್ರಿದಶಾದುತ್ಯಕಿರೀಟಘಟಿತಪದ ಶ್ರೀ ಶಾಂತವಿರೇಶ್ವರಾ.'

ಚಿತ್ರದುರ್ಗ ಬ್ರಹನ್ಮಠ ಪೀಠದ ಪ್ರಥಮ ಗುರುಗಳಾದ ಶ್ರೀ ಶಾಂತವೀರೇಶ್ವರರ ಘನ ವ್ಯಕ್ತಿತ್ವದ ಚಿತ್ರಣವೇ ಮುರಿಗೆ ತಾರಾವಳಿಯ ವಸ್ತು. ಶ್ರೀಗಳ ಬಾಲ್ಯ, ವಿದ್ಯಾಭ್ಯಾಸ ಇತ್ಯಾದಿ ಲೌಕಿಕ ಜೀವನದ ವಿವರಗಳು ಈ ಕೃತಿಯಲ್ಲಿ ದೊರೆಯದಿದ್ದರೂ ಅವರ ಪ್ರಭಾವೀ ವ್ಯಕ್ತಿತ್ವದ ವಿವಿಧ

ಮುಖಗಳ ಪರಿಚಯವನ್ನು ನಾವಿಲ್ಲಿ ಕಾಣುತ್ತೇವೆ. ಮುರಿಗೆ ಶಾಂತವೀರರು ತಮ್ಮ ವಿದ್ವತ್ತು, ಪಾಂಡಿತ್ಯ, ಜ್ಞಾನಾನುಭವ, ಆಧ್ಯಾತ್ಮದ ಔನ್ನತ್ಯಗಳಿಂದ ಅನೇಕ ವಾದಿಗಳನ್ನು ಸ್ಪರ್ಧೆಯಲ್ಲಿ ಸೋಲಿಸಿ, ಅಜ್ಞಾನಿಗಳ ಮನದ ಕತ್ತಲು ಕಳೆದು ಬೆಳಕನ್ನು ಬೀರಿ ಸಿದ್ಧಪುರುಷರೆನಿಸಿದ ಒಂದೊಂದು ವಿವರಗಳೂ ಸಹಜವಾಗಿ ಮೂಡಿಬಂದಿದೆ.

ಶ್ರೀತೋಂಟದ ಸಿದ್ಧಲಿಂಗ ಶಿವಯೋಗಿಗಳ ಅಪರಾವತಾರಿಗಳೆನಿಸಿದ ಮುರಿಗೆಯ ಶಾಂತವೀರರು ಲೋಕಕಲ್ಯಾಣಾರ್ಥವಾಗಿ ಸಂಚಾರ ಹೊರಟಾಗ ಅಸಾಮಾನ್ಯರಂತೆ ಕಾಣುತ್ತಿದ್ದ ಅವರನ್ನು ಜನರು ಅಲ್ಲಮನೋ, ದಧೀಚನೋ, ರೇಣುಕನೋ, ಸದಾನಂದನೋ ಎಂದು ಬೆರಗು ಗಣ್ಣುಗಳಿಂದ ನೋಡಿ ಆಶ್ಚರ್ಯಚಕಿತರಾಗುತ್ತಿದ್ದರಂತೆ ಎಂದು ಹೇಳುವುದರೊಂದಿಗೆ,

'ಗುರುಕುಲತಿಲಕ ಸುಧರ್ಮಪತಾಕ ಸಿರಿ
ಧುರಮುಖ ಗುಹಮುಖಗಣಸಖ ನತಲೇಖ
ವರ ವಾರಿಜಾಕ್ಷಾದಿನುತಿಗತ ಮಂಗಳ
ಚರಿತ ಚರಾಚರಪಾಲಕ ಪಾವನ
ಕರ ಕರುಣಾರ್ದ್ರಕಟಾಕ್ಷ ವಿಬುಧಪಕ್ಷ
ಕರಣವಿಜಯ ಕಾಲಹರ ಹರಿಣಾಂಕ'

ಎನ್ನುವಲ್ಲಿ ತಮ್ಮ ಗುರುವಿನ ಉಜ್ವಲ ವ್ಯಕ್ತಿತ್ವವನ್ನು ಸೂರೆಗೊಂಡಿರುವರು.

ನಂತರದಲ್ಲಿ ಶಾಂತವೀರರು ಮೆರೆದ ಒಂದೊಂದು ಪವಾಡಗಳನ್ನೂ, ಅವರಿಗಿರುವ ವೇದಾಗಮ, ಉಪನಿಷತ್ತು, ಪುರಾಣಗಳ ಆಳವಾದ ವಿದ್ವತ್ತನ್ನು, ರಕ್ಷಣೆ ಬೇಡಿ ಬಂದ ಭಕ್ತರನ್ನು ಅನುಗ್ರಹಿಸಿದ ವಿವರಣೆಯನ್ನು ತಿಳಿಸುತ್ತಾ ಹೋಗಿದ್ದಾರೆ. ಮೊದಲಿಗೆ ಶ್ರೀಗಳವರು ಮೈಸೂರಿನ ರಾಜರುಗಳಾದ ದೊಡ್ಡ ದೇವರಾಜ – ಚಿಕ್ಕದೇವರಾಜರ ಮೇಳದ ಸಭೆಯಲ್ಲಿ ಇಷ್ಟಲಿಂಗ ವಿಚಾರವಾಗಿ ಸಂಸ್ಕೃತ ಹಾಗೂ ಕನ್ನಡದಲ್ಲಿ ನಿರರ್ಗಳವಾಗಿ ವಾದಮಾಡಿ ಶಿವಧರ್ಮದ ಮರ್ಮವನ್ನರುಹಿ ಜ್ಞಾನಿಗಳ ಶ್ಲಾಘನೆಗೆ ಪಾತ್ರರಾದರು.

ಭಾಗೇಯನಗರದ 'ಕುತುಬ್ ಬಾದಷಾ'ನ ಮದ್ದಾನೆ ಸಾವಿನ ದವಡೆಯಲ್ಲಿದ್ದಾಗ ಶ್ರೀಗಳು ತಮ್ಮ ಪಾದೋದಕ ಸ್ಪರ್ಶದಿಂದ ಅದನ್ನು ರಕ್ಷಿಸುತ್ತಾರೆ. ಸುಲೇಗಾವಿಯ ಭಕ್ತನೋರ್ವನ ಮನೆಗೆ ಹೊರಟ ಗುರುಗಳು ಔರಂಗಜೇಬನ ದುಷ್ಕೃತ್ಯಕ್ಕೆ ಒಳಗಾದ ಛತ್ರಪತಿ ಶಿವಾಜಿಯನ್ನು ರಕ್ಷಿಸುವ ಪ್ರಸಂಗದ ವಿವರಣೆಯಲ್ಲಿ, ಶಾಂತವೀರರು ಆ ಕಾಲಕ್ಕೆ ಹಿಂದು – ಮುಸ್ಲಿಂರೀರ್ವರ ಭಕ್ತಿಗೂ ಪಾತ್ರರಾಗಿ ಮೇರುಪರ್ವತದಂತೆ ಮೆರೆಯುತ್ತಿದ್ದರೆಂದು ತಿಳಿಸಲಾಗಿದೆ. ಗದುಗಿನ ಲಿಂಗವಂತ ಬಣಜಿಗನೋರ್ವನು ಗುರುಗಳ ಮೇಲೆ ಕೊಲೆಯ ಅಪವಾದವನ್ನು ಹೊರಿಸಿದಾಗ, ಹರಪನಹಳ್ಳಿಯ

ಭರಮಭೂಪಾಲನು ಗದುಗಿಗೆ ಬಂದು 'ಕೊಲೆಯನ್ನು ಮಾಡಿಸಿದವನು ನಾನೇ ನನ್ನ ಮೇಲೆ ಕ್ರಮ ಜರುಗಿಸುವವನು ಯಾವನಿದ್ದಾನೆ? ಬರಲಿ. ನಾನು ಅವನ ತಲೆ ಕೆಡಿಸಿ ಹಾಕುವೆನು' ಎಂದು ಗುರುಗಳಿಗೆ ರಕ್ಷಣೆಯಾಗಿ ಬರುವನಲ್ಲದೆ, ಗದುಗಿನ ಡಾಕಿನಿ ದೇಸಾಯಿಯೂ ಸಹಿತ ಇದಕ್ಕೆ ಅನುಮೋದಿಸುವುದರೊಂದಿಗೆ, ತಮ್ಮ ಅಪ್ರತಿಮ ಗುರುಭಕ್ತಿಯನ್ನು ತೋರಿಸಿಕೊಟ್ಟರು.

ಹೀಗೆ ಸದ್ಧರ್ಮವನ್ನು ಆಚರಿಸುತ್ತಾ, ಘೋಷಿಸುತ್ತಾ ಸ್ವಾದಿ ಸೀಮೆಗೆ ಬರುತ್ತಾರೆ. ಅಲ್ಲಿಯ ಸದಾಶಿವಭೂಪನ ಭಕ್ತಿಗೊಲಿದು, ಅಖಂಡ ಒಂದು ವರ್ಷಗಳವರೆಗೆ ಆತನ ಅರಮನೆಯಲ್ಲಿದ್ದು ಆತನಿಗೆ ಅಸಮ ಸುಖಸಂಪದವನ್ನು ಅನುಗ್ರಹಿಸುವರು. ಶಿವದ್ವಿಜಕುಲದೀಪನಾದ ಗುತ್ತೊಳಲಪುರದ ಅರಸನಾದ ಹನುಮರಾಯ ಹಾಗೂ ಹಾವನೂರಿನ ಪ್ರವೀರಭೂಪತಿಯ ಭಕ್ತಿ ಬಿನ್ನಹವನ್ನು ಅಂಗೀಕರಿಸಿ ಅವರಿಬ್ಬರನ್ನು ಅನುಗ್ರಹಿಸುವರು. ಅದೇ ರೀತಿ ಲಕ್ಷ್ಮೇಶ್ವರದ ಕಾನಭೂಪನ ಮಗ ಕೆಂಚಣಗೌಡನ ಮನೆಯಲ್ಲಿ 'ಶಿವರಾತ್ರಿ ಪರ್ವ'ವನ್ನು ಆಚರಿಸಿ ಆತನಿಗೂ ಸಕಲ ಸಂಪದವನ್ನು ಕರುಣಿಸುವರು. ಬೇತೂರು, ಅಣಿಜಾಪುರ, ಚೋರತಿಂತ್ರಿಣಿ ಗ್ರಾಮದ ದೇವಣಗೌಡರ ಭಕ್ತಿಯನ್ನು ಸ್ವೀಕರಿಸಿ ಅವರುಗಳಿಗೂ ಸಕಲ ಸುಖ-ಸಂಪದವನ್ನು ಅನುಗ್ರಹಿಸುವರು. ಕೊನೆಯಲ್ಲಿ ಚಿತ್ರದುರ್ಗದ ಭರಮಭೂಪಾಲನ ಅಪಾರಭಕ್ತಿಗೆ ಮೆಚ್ಚಿ ಆತನ ಇಚ್ಛೆಯಂತೆ ಅವನು ಕಟ್ಟಿಸಿದ ವಿಶಾಲಮಠದಲ್ಲಿಯೇ ನೆಲೆನಿಲ್ಲುವರು. ಅಲ್ಲಿಯೇ ಐಕ್ಯರಾಗುವರು.

ಹೀಗೆ ಈ ತಾರಾವಳಿಯಲ್ಲಿ ಶಾಂತವೀರರ ನೈಜ ಜೀವನದ ಘಟನೆಗಳು ಸರಳವಾಗಿ, ಶಕ್ತಿಯುತವಾಗಿ ಮೂಡಿಬಂದಿವೆ. ಇದು ಸಾಹಿತ್ಯಿಕ ಹಾಗೂ ಚಾರಿತ್ರಿಕ ದೃಷ್ಟಿಗಳಿಂದ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದ್ದು, ಗುರುಗಳ ಲೋಕೋದ್ಧಾರ, ಭಕ್ತೋದ್ಧಾರ, ಕ್ರಮವನ್ನೂ, ಕಾರುಣ್ಯಮಯೀ ಲೋಕಯಾತ್ರೆಯನ್ನು ಅವರ ವ್ಯಕ್ತಿತ್ವದ ಹಲವು ಮುಖಗಳನ್ನೂ ಆತ್ಮೀಯವಾಗಿ ಪರಿಚಯಿಸುತ್ತದೆ.

ಸಾಹಿತ್ಯಿಕ ದೃಷ್ಟಿಯಿಂದ ಹಿತಮಿತವಾದ ಉಚಿತ ವರ್ಣನೆ, ಕನ್ನಡ, ಉರ್ದು, ಸಂಸ್ಕೃತ ಭಾಷೆಗಳ ಮಿಶ್ರಣ, ಪ್ರಸಿದ್ಧ ಜಾಣ್ನುಡಿಗಳ ಬಳಕೆಯಿಂದ ಕೃತಿ ವೈಶಿಷ್ಟ್ಯಪೂರ್ಣವೆನಿಸಿದೆ.

'ತಾ ಕಳ್ಳಿ ಹೆರರ ನಂಬುವಳಲ್ಲ, ಮೋಟ ಮರ ಗಾಳಿ ಮಿಂಡ' ಎಂಬ ಜಾಣ್ನುಡಿಗಳು, ಹಾವಿನ ಬಾಯ ಕಪ್ಪೆ ಹಸಿದು, ಹಾರುವ ನೊಣಕ್ಕೆ ಆಸೆ ಮಾಡಿದಂತೆ ಈ ಮೊದಲಾದ ಉಪಮೆಗಳನ್ನು ಬಳಸುವುದರೊಂದಿಗೆ ಕೃತಿಯ ಮೂಲ ಉದ್ದೇಶವನ್ನು ಸಾರ್ಥಕಗೊಳಿಸಿದ್ದಾರೆ.

ಹೀಗೆ ಇಮ್ಮಡಿ ಮುರಿಗಾ ಗುರುಸಿದ್ಧರು ಓರ್ವ ಶಿಷ್ಯರಾಗಿ, ತಮ್ಮ ಪ್ರಸಿದ್ಧ ಗುರುವಿನ ಜೀವನ ಚರಿತ್ರೆಯನ್ನು ಕೇವಲ ೨೭ ನುಡಿಗಳಲ್ಲಿ ಬರೆದಿರುವುದು ಹೆಚ್ಚಿನ ಚಾರಿತ್ರಿಕ ಮಹತ್ವವನ್ನು

ಪಡೆಯುತ್ತದೆ. ಆಗಿನ ಕಾಲದ ಸಾಮಾಜಿಕ, ರಾಜಕೀಯ ವಿವರಗಳನ್ನೂ ಸ್ವಲ್ಪಮಟ್ಟಿಗೆ ತಿಳಿಸುವುದರಿಂದಲೂ ಈ ಕೃತಿಗೆ ಅಮೂಲ್ಯ ಸ್ಥಾನವಿದೆ.

ಎಂ. ಎಸ್. ಬಸವರಾಜಯ್ಯನವರು ಹೇಳುವಂತೆ "ಎಲ್ಲಾ ತಾರಾವಳಿಕಾರರ ಮಧ್ಯದಲ್ಲಿ ಅಶ್ವಿನ್ಯಾದಿ ತಾರೆಗಳಲ್ಲಿ ಮಧ್ಯತಾರೆಯಾದ ಚಿತ್ತಾ ನಕ್ಷತ್ರದಂತೆ ಚಿತ್ರತಮರಾಗಿ, ಚೇತೋಹಾರಿಗಳಾಗಿ, ತರಳ ತಾರಾವಳಿ ಮಧ್ಯಮ ಮಣಿಯೆನಿಸಿ ವಿರಾಜಿಸುತ್ತಿರುವರು ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಗಳು' ಎಂಬ ಮಾತು ಸತ್ಯ"[೩೪]

ನಾಂದ್ಯ :

ತಾರಾವಳಿಯಂತೆ ವೀರಶೈವ ಲಘುಸಾಹಿತ್ಯ ಪ್ರಕಾರಗಳಲ್ಲಿ ನಾಂದ್ಯವೂ ಒಂದು. ಕಾವ್ಯದ ಪ್ರಾರಂಭದಲ್ಲಿ ಸಾಂಪ್ರದಾಯಿಕವಾಗಿ ಬರುವ ಪ್ರಾರ್ಥನೆಗಳ ಜೊತೆಗೆ ಕಾವ್ಯದ ಒಳಗೂ ಕೂಡ ಸಂದರ್ಭೋಚಿತವಾಗಿ ಬರುವ ಪ್ರಾರ್ಥನಾ ಪದ್ಯಗಳನ್ನು "ನಾಂದ್ಯಗಳು" ಎಂದು ಕರೆಯಲಾಗುತ್ತದೆ. ಜನರನ್ನು ಭಕ್ತಿಭಾವದಲ್ಲಿ ಬಂಧಿಸಿ, ಅವರನ್ನು ತನ್ಮಯರನ್ನಾಗಿ ಮಾಡುವಲ್ಲಿ ಈ ನಾಂದ್ಯಗಳು ಯಶಸ್ವಿಯಾಗಿವೆ.

ಗುರುರಾಜ ಚಾರಿತ್ರ್ಯದ ನಾಂದ್ಯ, ಸೋಮನಾಥ ಕಾವ್ಯದ ನಾಂದ್ಯ, ಸಿದ್ಧೇಶ್ವರ ಪುರಾಣದ ನಾಂದ್ಯ ಸೌಂದರ್ಯ ಪುರಾಣದ ನಾಂದ್ಯ, ಬಸವೇಶ್ವರ ಪುರಾಣದ ನಾಂದ್ಯಗಳು ಪ್ರಮುಖ ನಾಂದ್ಯಕೃತಿಗಳೆಂದು ಹೇಳಬಹುದು.

ನಾಂದ್ಯಗಳಲ್ಲಿ ಎರಡು ರೀತಿಗಳನ್ನು ಗುರುತಿಸಬಹುದು. ಒಂದು ಈಗಾಗಲೇ ರಚಿತವಾದ ಹಿರಿಯ ಕಾವ್ಯಗಳಲ್ಲಿಯ ಸ್ತುತಿಪದ್ಯಗಳನ್ನು ಆಯ್ದು ಜೋಡಿಸುವುದು. ಎರಡು ಕೇವಲ ಸ್ತುತಿ ಪದ್ಯಗಳನ್ನೇ ಸ್ವತಃ ಬರೆದು ಅವುಗಳಿಗೆ ನಾಂದ್ಯ ಎಂದು ಕರೆದಿರುವುದು. ಇಮ್ಮಡಿ ಮುರಿಗಾ ಶಿವಯೋಗಿಗಳ "ಶಿವಲಿಂಗ ನಾಂದ್ಯ" ಹಾಗೂ "ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ" ಈ ಎರಡೂ ಕೃತಿಗಳು ಎರಡನೆಯ ಮಾದರಿಗೆ ಸೇರುತ್ತದೆ.

ಶಿವಲಿಂಗನಾಂದ್ಯ:

'ಶಿವಲಿಂಗನ್ಯಂದ್ಯ'ವು ಒಟ್ಟು ೨೫ ಷಟ್ಪದಿಗಳನ್ನೊಳಗೊಂಡಿದೆ. ಇವುಗಳಲ್ಲಿ ೧೧ ಭಾಮಿನಿ ಷಟ್ಪದಿಗಳು, ೧೪ ವಾರ್ಧಕ ಷಟ್ಪದಿಗಳಿವೆ. ತನ್ನ ಇಷ್ಟದೈವವಾದ ಶಿವನ ಲೀಲಾವಿಲಾಸಗಳನ್ನು ಅಪ್ರತಿಮತ್ವವನ್ನು ಈ ಕೃತಿಯಲ್ಲಿ ಸೆರೆಹಿಡಿದಿದ್ದಾರೆ. ಕೃತಿಯ ಅಂತ್ಯದಲ್ಲಿ ಶಿವನ ನಾಮಸ್ಮರಣೆಯನ್ನು ಒಲಿದು ಓದಿದವರಿಗೆ ಭವಬಂಧನವಿಲ್ಲ, ಸುಲಭದಿಂದ ಅರ್ಥಮಾಡಿದವನಿಗೆ ಚಿಲಿಪಾಲು ಸಕ್ಕರೆಯ ಬೆರಕೆಯನು ಸವಿದಂತೆ ಎಂದು ಫಲಶ್ರುತಿಯನ್ನು ಕೊಡಲಾಗಿದೆ.

'ಒಲೆ ನಾಗರಸುತ್ತು ಮೂಗುತಿ
ಶಾಲಿ ಸಮ್ಮದ ಹಾದಕೆ ಬಳೆ ಫಣಿ
ಮೇಲೆನಿಪ ಕೈದಾತಿ ಮಲ್ಲಿಗೆಮಾಲೆ ತಲೆಸರವು
ಕಾಲ ಕತ್ತುರಿಯಣ್ಣು ಭಸಿತ ವಿ
ಶಾಲ ರೇಖೆಯು ತುರುಬು ಕೆಂಜೆಡೆ
ಲೋಲ ಪಂಕಜ ಶೂಲವೆಸೆವರೆವೆಣ್ಣ ಪೊರೆಯಮಾ'

ಎಂದು ಶಿವನ ಸ್ವರೂಪ ವರ್ಣನೆ ಮಾಡುವುದರೊಂದಿಗೆ, ಆತನ ಲೀಲಾವಿಲಾಸಗಳನ್ನು, ಆತನ ಅಪ್ರತಿಮತ್ವವನ್ನು ಒಂದೊಂದು ಪದ್ಯಗಳಲ್ಲಿ ವಿವರಿಸುತ್ತಾ ಹೋಗಿದ್ದಾರೆ. ವಿಷದ ಭಾಧೆಯನ್ನು ಸಹಿಸಲಾಗದೆ ದೇವತೆಗಳೆಲ್ಲರೂ ಬಂದು ಶಿವನ ಮೊರೆ ಹೋಗಲು ವಿಷವನ್ನು ಕುಡಿದು ಲೋಕಪ್ರಸರವನು ಪಾಲಿಸಿದಂತ ದುರಿತಹರ ಶಿವನು, ಅರ್ಜುನನಿಗೆ ಪಾಶುಪತಾಸ್ತ್ರವನ್ನು ಕೊಟ್ಟವನು. ನಾರಾಯಣನನ್ನು ಸಂಹರಿಸಿದಂತ ಮನ್ಮಥನೆಂಬ ಅರಳೆಗೆ ಅಗ್ನಿಯಾದವ, ಬುದ್ಧಿಯಲಿ, ಗುರುತ್ವವನುಳ್ಳವ, ಯಮನೆಂಬ ಪರ್ವತಕ್ಕೆ ವಜ್ರಾಯುಧವಾದವ, ಕಪಿಬಲವನುಳ್ಳ ರಾಮಭದ್ರನ ಪಾಪವನ್ನು ನಾಶಮಾಡಿದವ ಈ ಮೊದಲಾದ ವರ್ಣನೆ ಇಲ್ಲಿ ಸಹಜವಾಗಿ ಮೂಡಿಬಂದಿದೆ.

ಉಭಯಭಾಷಾ ವಿದ್ವಾಂಸನಾದ ಕವಿ ಸಂಸ್ಕೃತ ಶಬ್ದಾಡಂಬರಗಳಿಂದಲೂ ಶಿವನನ್ನು ಸ್ತುತಿಸಿದ್ದಾನೆ. ಹಾಗೆಯೇ ಪ್ರಶ್ನೋತ್ತರಗಳ ಮಾದರಿಯಲ್ಲಿ ಸರಳವಾಗಿ ನುಡಿಚಿತ್ರವನ್ನು ರೂಪಿಸುವುದರೊಂದಿಗೆ ತನ್ನ ಅನಿಸಿಕೆಯನ್ನು ಹೇಳಿದ್ದಾನೆ.

ಉದಾ: 'ಮುಡಿಯೊಳಿರ್ಪವಳಾರು ಪೇಳೆನೆ
ಮಡದಿ ಜಲಮೊಗವೇನು ತಾವರೆ
ಕುಡಿತೆಗಂಗಳಿವೇನು ಮೀನ್ಗಳು ಮುರ್ಬುಗಳಿವೇನು
ತಡೆಯದುಸುಕ್ಕೈ ತೆರೆಗಳಾ ಬಲು
ಮುಡಿಯದೀನಳಿವಿಂಡು ಮಾಲೆಗಳ
ಪಾಡರದೆ ನೆಣವಕ್ಕಿಯಿಂದಗಸುವಯ ನೆರೆದಭವಾ'

ಹೀಗೆ ಪ್ರಸ್ತುತ ಕೃತಿಯಲ್ಲಿ ಶಿವನ ಸ್ವರೂಪ, ಲೀಲಾವಿಲಾಸಗಳು, ಆತನ ಮಹಿಮೆ ಹಾಗೂ ಕೃತಿಯನ್ನು ಒಲಿದು ಓದಿದವನಿಗೆ ಉಂಟಾಗುವ ಫಲಶ್ರುತಿಗಳ ವಿವರವಿದೆ. ಇಲ್ಲಿಯ ಪದ್ಯಗಳಲ್ಲಿ ಕವಿಯ ಶಿವಲಿಂಗ ಭಕ್ತಿಯ ಪಾರಮ್ಯವನ್ನು ನಾವು ಕಾಣುತ್ತೇವೆ.

ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ :

ಇಮ್ಮಡಿ ಮುರಿಗಾ ಗುರುಸಿದ್ಧನ ನಾಂದ್ಯರೂಪದ ಎರಡನೆಯ ಕೃತಿ 'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ', 'ಇಷ್ಟಲಿಂಗ ನಾಂದ್ಯ' ಎಂಬುದು ಈ ಕೃತಿಯ ಇನ್ನೊಂದು ಹೆಸರು. ಇದು ಷಟ್ಪದಿ ರೂಪದಲ್ಲಿದ್ದು ಒಟ್ಟು ೨೪ ಷಟ್ಪದಿಗಳಿವೆ. ಇವುಗಳಲ್ಲಿ ೧೦ ವಾರ್ಧಕ ಷಟ್ಪದಿಗಳು, ೧೦ ಪರಿವರ್ಧಿನಿ ಷಟ್ಪದಿಗಳು ಹಾಗೂ ೪ ಭಾಮಿನಿ ಷಟ್ಪದಿಗಳಿವೆ. ಇಲ್ಲಿಯ ಪ್ರತಿಯೊಂದು ಷಟ್ಪದಿಗೂ ಅಜ್ಞಾನಕರ್ತೃ ಬರೆದ ಪ್ರತಿಪದಾರ್ಥ ಟೀಕೆಯಿದೆ. ತನ್ನ ಗುರು ಮುರಿಗಾ ಶಾಂತವೀರರನ್ನು ಹಾಗೂ ಶಿವನನ್ನು ಇಲ್ಲಿ ಅತ್ಯಂತ ಭಕ್ತಿಯಿಂದ ಸ್ತುತಿಸಿದ್ದಾರೆ.

ಕೃತಿಯ ಪ್ರಾರಂಭದಲ್ಲಿ ಮುರಿಗಾ ಶಾಂತವೀರರ ಸ್ತುತಿಯನ್ನು ಹೀಗೆ ಮಾಡಿದ್ದಾರೆ.

'ಶ್ರೀಮದಬ್ರಾಳಕಂ ಬ್ರಾಜಿತಾಭ್ರರಸ ಭೃ
ದ್ಧಾಮನಿಧಿ ಧವಳರುಗ್ಧೂಮಕೇತಕ್ಷ ಸ
ದ್ಯೋಮ ಹೃದ್ಬೀಮಬಿತ್ಕಮಜದ್ದೇಮಾದ್ರಿ ಧರ್ಮಕೃತ್ಕರ್ಮಭೇದಿ
ಭ್ರಾಮಕೋದ್ಧತ ಪಂಚಮೇಡ್ರಾಭ್ರ ದೈತ್ಯಾದಿ
ಭೂಮಿಭಾರಕ ಬಲಾಖರ್ವಗರ್ವಾಪಹಾ
ಸ್ವಾಮಿ ಶಾಶ್ವತ ಮಹತ್ತ್ರೇಮಿ ಪಾಲಯ ಸದಾ ಶ್ರೀಶಾಂತವೀರೇಶ್ವರಾ'

ಇಲ್ಲಿ ಮುರಿಗಾ ಶಾಂತವೀರರನ್ನು ಶಿವನೊಂದಿಗೆ ಅಬೇಧ ಕಲ್ಪಿಸಿ ಸ್ತುತಿಸುವುದರೊಂದಿಗೆ ತನ್ನ ಗುರು ಭಕ್ತಿಯನ್ನು, ಗುರುಮಹಿಮೆಯನ್ನು ಎತ್ತಿ ತೋರಿಸಿದ್ದಾರೆ. ಮುಂದೆ ಬರುವ ಎಲ್ಲ ಪದ್ಯಗಳೂ ಶಿವನ ವರ್ಣನೆ ಹಾಗೂ ಆತನ ಮಹಿಮೆಗೆ ಮೀಸಲಾಗಿವೆ. ಧರೆಯಲ್ಲಿ ಶಿವನೇ ಶ್ರೇಷ್ಠ ಆತನಿಗೆ ಸರಿಸಮನಾಗಿ ನಿಲ್ಲಬಲ್ಲವರು ಯಾರೂ ಇಲ್ಲವೆಂಬುದನ್ನು ಕವಿ ಹಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾನೆ. ಅವುಗಳಲ್ಲಿ ಕೆಲವನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು.

'ಗೋಪಾಲ ಭಾಷಾಪ ಲೇಖಾಧಿಪತಿ ಮೂರ್ವ
ಕಾಪಾರ ರುಭುದೈತ್ಯರಾರಾಢ್ಯರೈದಿ ನಿ
ರ್ವಾಪಾರದಿಂ ಪಶುಪಟಟಾಶೂಲಪಾಣಿ ಕಂಠಾಗ್ರರುಂಡೋಗ್ರಮಾಲಾ
ಟೋಪಡತ್ಕಟ ಚೇಷ್ಟೆಯಂ ನೋಡಿ ಮೊಗಬಾಡಿ
ಸೋಪಾಧಿಯಿಂದಂದು ನಿಂದು ಸೇವಿಸೆ ನಿನಗೆ
ಕೋಪಪ್ರಸಾದ ಪ್ರಭಾವಾಂಕ ದೊರೆಯುಂಟೆ ದೇವತಾಸಾರ್ವಭೌಮ'

ಎಂದೂ ಬೃಹಸ್ಪತಿ, ಶುಕ್ರಾಚಾರ್ಯ ಮೊದಲಾದ ಕವಿಗಳಿಂದ ಸ್ತುತಿಸಲ್ಪಡುವನು, ಮಹಾಶೇಷನ ಧರಿಸಿದಂಥವನು, ಮನ್ಮಥನನು ಸುಟ್ಟಂಥವನು, ಸೃಷ್ಟಿ – ಸ್ಥಿತಿ – ಲಯಗಳಿಗೆ ಕಾರಣನಾದವನು. ರಾಮಚಂದ್ರನಿಂದ ಪೂಜಿಸಿಕೊಂಡಂಥವನು. ಎಂಬತ್ಯಾದಿಯಾಗಿ ಶಿವನ ಲೀಲಾವಿಲಾಸಗಳನ್ನು ವರ್ಣಿಸಲಾಗಿದೆ.

ಹೀಗೆ ಮುಂದುವರಿಯುತ್ತಾ ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶ ಗುಣಗಳಿಂದಲೂ, ಷಡ್ವಿಧ ಅಂಗ, ಲಿಂಗ, ಮುಖ, ಹಸ್ತ, ಶಕ್ತಿ, ಭಕ್ತಿ, ಮಂತ್ರ, ಪದಾರ್ಥ, ಪ್ರಸಾದಗಳಿಂದಲೂ ಕೂಡಿದ ದೇವನೇ ಶಿವನೇ ಸರ್ವೋತ್ಕೃಷ್ಟ ಎಂದು ಹೇಳುವ ಮೂಲಕ ಸರ್ವವೂ ಶಿವಮಯ, ಶಿವನೇ ಮೋಕ್ಷದಾಯಕನು, ಸದ್ಧರ್ಮ ಪ್ರದಾಯಕನು, ಸರ್ವೋತ್ಕೃಷ್ಟನು, ಶ್ರೇಷ್ಠನು ಎಂದು ವರ್ಣಿಸಿದ್ದಾರೆ.

ಈ ರೀತಿಯಾಗಿ ಶಿವನ ಸ್ತುತಿಪದ್ಯಗಳನ್ನು ನಾಂದ್ಯಗಳೆಂದು ಕರೆಯುವುದರೊಂದಿಗೆ, ನಾಂದ್ಯ ಸಾಹಿತ್ಯದಲ್ಲಿ ಇದುವರೆಗೂ ಬೆಳೆದುಬಂದ ಪರಂಪರೆಯನ್ನು ಮೀರಿ ಸ್ವತಂತ್ರ ನಾಂದ್ಯಗಳಪದ್ಯಗಳನ್ನು ರಚಿಸಿ ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮದೇ ಆದ ವೈಶಿಷ್ಟ್ಯವನ್ನು ಮೆರೆದಿದ್ದಾರೆ.

ಕೊರವಂಜಿ ಕಟ್ಟಳೆ :

“ಇಮ್ಮಡಿ ಮುರಿಗಾ ಗುರುಸಿದ್ಧರು ದೇಶೀರೂಪದಲ್ಲಿ ಬರೆದ ಮತ್ತೊಂದು ಲಘುಕಾವ್ಯ ‘ಕೊರವಂಜಿ ಕಟ್ಟಳೆ’. ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಕೊರವಂಜಿ ಸಾಹಿತ್ಯವು ಒಂದು. ಕೊರವಂಜಿ ಸಾಹಿತ್ಯಕ್ಕೆ ತನ್ನದೇ ಆದ ಪರಿಭಾಷೆಯಿದೆ. ತನ್ನದೇ ಆದ ಪ್ರತ್ಯೇಕ ವೈಶಿಷ್ಟ್ಯವಿದೆ. ಪ್ರಾಪಂಚಿಕ ಭಾಷೆಯಲ್ಲಿ ಪಾರಮಾರ್ಥಿಕ ಭಾವವನ್ನು ಪ್ರಕಟಿಸುವ ಪರಿಣತೆಯಿದೆ. ಕಾವ್ಯಗಳು ಉಪನಿಷತ್ತುಗಳು, ಪುರಾಣಗಳು ಸಾಧಿಸುವ ಗುರಿಯನ್ನು ಈ ಕೊರವಂಜಿ ಸಾಹಿತ್ಯವೊಂದೇ ಸಾಧಿಸಬಲ್ಲದು. ಸಾಂಸಾರಿಕ ದೃಶ್ಯಗಳನ್ನು ದೈವೀ ಸ್ವರೂಪಕ್ಕೆ ರೂಪಿಸುವ ಅನುಭಾವಿಕ ಕೌಶಲ್ಯವಿದೆ. ಜೀವನ ಭಾವಗಳಲ್ಲಿ ಶಿವಾನುಭಾವವನ್ನು ತುಂಬುವ ಶಕ್ತಿಯಿದೆ.”[೨೫]

ಕೊರವಂಜಿ ಸಾಹಿತ್ಯವನ್ನು ಸೃಷ್ಟಿಸಿದವರು ಶಿವಕವಿಗಳು, ಶಿವಾನುಭಾವಿಗಳು. ಶಿವನ ಒಲುಮೆಗಾಗಿ ಉಗ್ರ ತಪಸ್ಸು ಮಾಡುತ್ತಿರುವ ಗಿರಿಜೆಯನ್ನು ಪರೀಕ್ಷಿಸಲು ಶಿವನು ತಳೆದ ಹಲವಾರು ವೇಷಗಳಲ್ಲಿ ಕೊರವಂಜಿ ವೇಷವೂ ಒಂದು. ತತ್ವದ ತಳಹದಿಯ ಮೇಲೆ ಜೀವನದ ಹಲವು ಬಗೆಗಳನ್ನು ರೂಪಿಸುವುದೇ ಈ ಸಾಹಿತ್ಯದ ವೈಶಿಷ್ಟ್ಯ

ಪ್ರಸ್ತುತ ಕೃತಿಯಲ್ಲಿ ಗುರು ಶಾಂತೇಶ್ವರನೇ ಕೊರವಂಜಿ ವೇಷದಲ್ಲಿ ಕಲ್ಯಾಣಪುರಕ್ಕೆ ಬಂದು ಶರಣ ಸತಿಯರಿಗೆ ಕಣಿ ಹೇಳುವ ರೀತಿಯಲ್ಲಿ ವೀರಶೈವ ಧರ್ಮ ತತ್ವಗಳನ್ನು ಹೇಳುವಂತೆ ನಿರೂಪಿಸಲಾಗಿದೆ. ಕೃತಿಯು ಗದ್ಯ - ಪದ್ಯ ಮಿಶ್ರವಾಗಿವೆ. ಪದ್ಯಗಳು ರಾಗ - ತಾಳ ಸಮನ್ವಿತವಾಗಿವೆ. ಗದ್ಯಕ್ಕೆ ವಚನವೆಂದು ಕರೆಯಲಾಗಿದೆ. ಆರಂಭದಲ್ಲಿ ಶಿವಲಿಂಗ ಸ್ತುತಿ ಇದೆ. ಲಿಂಗಪತಿಯಾದ ಶಾಂತವೀರರು ಕಲ್ಯಾಣದ ಶರಣ ಸತಿಯರಿಗೆ ವೀರಶೈವ ತತ್ವವನ್ನು ಬೋಧಿಸಿದ ವಿವರ ಈ ಕೃತಿಯ ವಸ್ತುವಾಗಿದೆ. ಅಂತ್ಯದಲ್ಲಿ ಗುರುಮುಖದಿಂದ ಇದನ್ನು ಅರಿತು ಅರ್ಥೈಸಿಕೊಂಡವರು ಶಿವಲಿಂಗದಲ್ಲಿ ಒಂದಾಗುವರೆಂಬ ಫಲಶ್ರುತಿ ಇದೆ.

ಕೃತಿಯ ಪ್ರಾರಂಭದಲ್ಲಿ ಬರುವ ಕೊರವಂಜಿಯ ವರ್ಣನೆ ಹೀಗಿದೆ:

'ಉರವನಪ್ಪಿದೆ ಕೂಸು ಸೀರೆಯನ್ನುಟ್ಟು ಬಿಗಿದು
ತುರುಬಿನೊಳಿರದೆ ಮಲ್ಲಿಗೆಯರಲಮಾಲೆಯ ತಳೆದು ನಯದೆ,
ಕಣ್ಣೊಳಂಜನರೇಖೆಯನು ತಾನೊಲಿದು ತಿರ್ದಿ ನೊಸಲೊಳು
ಸಣ್ಣನಹ ಸಿತಭಸಿತ ತಿಲಕವನಾಂತು ಮತ್ತೆ'

ಬಲಗೈಯಲ್ಲಿ ನಾಗಬೆತ್ತವನು ಹಿಡಿದು ಕಲ್ಯಾಣಪುರಕೆ ಬಂದು ಶರಣಸತಿಯರ ಮನೆ ಮುಂದೆ ನಿಂದು 'ಎಲೆ ಅವ್ವಗಳಿರಾ' ಎಂದು ಸ್ನೇಹದಿಂದ ಅವರನ್ನು ಕರೆದು 'ಕೈಯ ನೊಡುವೆನಿಲ್ಲಿ ಬಾರೆ ನಿನ್ನ ಮೈಯೊಳಿರ್ದುದ ಪೇಳ್ವೆ' ಎನ್ನುತ್ತಾ 'ಮಾದೇವಿ'ಗೆ ಕಣಿ ಹೇಳಲು ಪ್ರಾರಂಭಿಸುತ್ತಾಳೆ.

ಮೂಡಣ, ಪಡುವಣ, ತೆಂಕಣ, ಬಡಗಣ ದಿಕ್ಕುಗಳಲ್ಲಿರುವ ಮೂರು ದಾರಿಗಳಿಗೆ ಸೀಸರೂರು, ಇಂದುವಾಡಿ, ಬೆಂಕಿಪುರ ಎಂಬ ಹೆಸರನಿಟ್ಟು ಪ್ರತಿ ದಿಕ್ಕುಗಳಲ್ಲಿರುವ ದೇವಿಯರನ್ನು ಆರಾಧಿಸಬೇಕು. ಬೆಂಕಿಪುರದ ಕೇರಿಗಳೆನಿಸಿದ ಸೇಂದ್ರಪುರ, ಈಷಾಗ್ನಿಪುರ, ಶಾಂತಕಪುರ, ವಾಸುರಪುರ, ಲವಣಖಣಪುರ, ರತವಶನಪುರ, ಕುಬೇರಪುರಗಳಲ್ಲಿರುವ ವಾಮೇಶ್ವರಿ, ಜೇಷ್ಠಾದೇವಿ, ರೌದ್ರಿ, ಕಾಳಿಕಾದೇವಿ, ಜಟಾದೇವಿ, ಜಲಪ್ರಮಥಿನಿ, ಮನೋನ್ಮನಿಯರೆಂಬ ದೇವಿಯರನ್ನು, ಇಂದುವಾಡಿಯ ಹೊರಭಾಗದ ಕೇರಿಯಲ್ಲಿರುವ ಉಮೇಶ್ವರ, ಚಂಡೇಶ್ವರ, ನಂದಿಕೇಶ್ವರ, ಮಹಾಕಾಳ, ಭಂಗೀರಿಟ, ಗಣೇಶ್ವರ, ವೃಷಭೇಶ್ವರ, ಷಣ್ಮುಖರೆಂಬ ಎಂಟು ಗಣೇಶ್ವರರನ್ನು, ಸೀಸನೂರಿನ ಹೊರಭಾಗದ ಕೇರಿಗಳಲ್ಲಿರುವ ಅನಂತಸೂಕ್ಷ್ಮ ಶಿವೋತ್ತಮ, ಅನೇಕನೇತ್ರ, ಅನೇಕರುದ್ರ, ತ್ರಿಮೂರ್ತಿ, ಶ್ರೀಕಂಠ, ಶಿಖಂಡಿಗಳೆಂಬ ಅಷ್ಟವಿದ್ಯೇಶ್ವರರನ್ನು, ಅಗ್ನಿ, ನಿಋತಿ, ವರುಣ, ವಾಯು, ಕುಬೇರ, ಈಶಾನ, ದರ, ಧ್ರುವ, ಸೋಮ, ಧನಪ, ನೀಲ, ನಿಳ, ಪ್ರತ್ಯೇಕ ಮೊದಲಾದ ದಿಕ್ಪಾಲಕರನ್ನು, ಮೂಡಣ ಮೊದಲಾಗಿ ಈಶಾನ್ಯ ಕಡೆಯಾದ ನಾಲ್ಕು ದೇಗುಲಗಳ ದೇವರುಗಳನ್ನು ಸೀಸನೂರಿನ ೨೪ ಕೇರಿಗಳಲ್ಲಿರುವ ನಾಲವತ್ತೆಂಟು ದೇವರನ್ನು ಪೂಜಿಸಬೇಕು.

ಈ ರೀತಿಯಾಗಿರುವ ಸೀಸರೂರು, ಇಂದುವಾಡಿ, ಬೆಂಕಿಪುರಗಳಿಗೆ ಶ್ರೀಶಾಂತೇಶ್ವರನ (ಸಾಂತೇಶನ) ಶ್ರೀರಕ್ಷೆಯಿದೆ. ಈ ಮೂರು ಊರನ್ನು ಒಂದು ಮಾಡುವುದಕ್ಕಾಗಿ ಆತ ಪ್ರಥಮದಲ್ಲಿ ಚಿಣಿಯೆಂದು ದನಿದೋರುವನು. ಘಂಟೆಯಂತೆ ಮಾತಾಡುವನು. ಶಂಖದಂತೆ ಬೊಂಬಾಳಿಸುವನು, ತಂತಿಯಂತೆ ಮೊರೆವನು, ತಾಳದಂತೆ ತೈ ತೈ ತತ್ತ ತೈ ಎಂದು ಕುಣಿವನು, ಭೇರಿಯ ರಭಸದಂತೆ, ಮದ್ದಳೆ ನುಡಿಸಿದಂತಾಡುವನು. ಮೋಡದಂತೆ ಗುಡುಗುಡೆಂದು ಗುಡುಗಟ್ಟುವನು. ಹಲವು ಬಗೆಯ ವೇಷಧಾರಿಗಳಾದ ದೇವರುಗಳೆಲ್ಲರೂ ಈ ಸಾಂತದೇವರ ಪ್ರತಿಸ್ವರೂಪಿಗಳು. ಈ ಸಾಂತದೇವರೆಂತಿಹರೆಂದರೆ,

'ಮೂಡ ಪಡುವಣ ದೆಸೆಯ ತೊಡಗಿ ಪದಿನೆಂಟೆಳೆಯ
ನಾಡಿ ಸೆಳೆಯ ತೆಂಕಬಡಗಲದರಂತೆ
ರಚಿಸಿ ಪದಿನೇಳು ಸಾಲಹವದರ ನಡುವೆ ಇಹ
ಶುಚಿತರದ ಸಾಲ ಮೀಸಲನಿರಿಸೆಯಮ್ಮ'

ಪ್ರತಿ ಕೇರಿಯಲ್ಲಿರುವ ಚಂದ್ರವೀಧಿ, ದಿನೇಂದ್ರಿವೀದಿ, ರಸಪುರದಲ್ಲಿರುವ ಶಿವನ ನೆಲೆಗಳನ್ನು, ಸೋಮವೀಥಿ, ಸೂರ್ಯವೀಥಿ, ಕಿಚ್ಚುವಾಡಿ ರಿತುವಳ್ಳಿಯ ಅಮರರೆನಿಸಿದ ವಾಙ್ಮಯೆ, ಜಯೆ, ಸುಮುಖಿನಿ, ನಿರುಪಮೇಶ್ವರಿ, ರೇವತಿ, ಮಾಧವಿ, ವಾರುಣ ಮೊದಲಾದ ಸದೇವಿಯರನ್ನು ಪೂಜಿಸಬೇಕು. ಈ ರೀತಿಯಾಗಿರುವ ಆರು ಊರುಗಳು ಕೂಡಿ ಮೂರಾಗಿವೆ. ಮೂರು ಊರುಗಳೂ ಕೂಡಿ ಎರಡಾಗಿವೆ. ಈ ಎರಡು ಊರುಗಳು ಕೂಡಿ ಒಂದೇಯಾಗಿದ್ದು, ಇದರಲ್ಲಿ ಗೋಪ್ಯವಾಗಿ ಕಂಗೊಳಿಸುತ್ತಿರುವುದೇ ಶಿವಲಿಂಗವು ಎಂದು ಹೇಳುವುದರೊಂದಿಗೆ ಕೊರವಂಜಿ ತನ್ನ ನಿಜಸ್ವರೂಪವನ್ನು ತೋರಿಸುವಳು.

ಹೀಗೆ ಕೃತಿಯಲ್ಲಿ ಕೊರವಂಜಿ ಭಾಷೆಯಲ್ಲಿ ವೀರಶೈವ ಷಟ್ಸ್ಥಲ ತತ್ವಗಳನ್ನು ಹೇಳಿರುವುದು ವೈಶಿಷ್ಟ್ಯಪೂರ್ಣವೆನಿಸಿದೆ. ಕೊರವಂಜಿಯು ಕಲ್ಯಾಣದ ಶರಣ ಸತಿಯರಿಗೆ ಎಲೆ ಕೆಳದಿ, ಎಲೆ ಯವ್ವ, ಚೆನ್ನೆ, ಸಂಪನ್ನೆ, ಕೆಂಚಿ, ಕೆಂಪಿ ಎಂದೆಲ್ಲಾ ಸಂಭೋಧಿಸುತ್ತಾ, ಪ್ರಶ್ನೋತ್ತರಗಳ ರೂಪದಲ್ಲಿ ವಿಷಯವನ್ನು ಅರುಹುತ್ತಾ ಹೋಗಿರುವುದು ಕೃತಿಯ ಮುಂದುವರಿಕೆಗೆ ಸೊಗಸೆನಿಸಿದೆ. ಮಾನಸಿಕ ತೊಳಲಾಟದಲ್ಲಿ ಬಳಲುವ ಜೀವಿಗಳಿಗೆ ಶಿವಸಾನಿಧ್ಯವನ್ನು ಹೊಂದುವ ಪರಿಯನ್ನು ಕೊರವಂಜಿ ಸಾಹಿತ್ಯವು ಸಮರ್ಥವಾಗಿ ಪೂರೈಸುತ್ತದೆ. ಹೀಗೆ ತತ್ವದ ತಳಹದಿಯ ಮೇಲೆ ಬದುಕಿನ ಹಲವು ರೀತಿ ನೀತಿಗಳನ್ನು ರೂಪಿಸುವುದು ಈ ಸಾಹಿತ್ಯದ ಪ್ರಮುಖ ಉದ್ದೇಶವಾಗಿದೆ.

ಶಬ್ದರತ್ನಾಕರ :

ಇಮ್ಮಡಿ ಮುರಿಗಾ ಗುರುಸಿದ್ಧರು 'ನಿಘಂಟು' ಸಾಹಿತ್ಯ ರೂಪದಲ್ಲಿ ರಚಿಸಿದ ಕೃತಿಯೇ ಶಬ್ದರತ್ನಾಕರ. ನಿಘಂಟು ಅಥವಾ ಕೋಶ ಎಂದರೆ ಪದಗಳ ಸಂಗ್ರಹ ಎಂದರ್ಥ. ನಿಘಂಟುವಿಗೆ ಭಾರತದಲ್ಲಿ ಐತಿಹಾಸಿಕ ಪ್ರಾಚೀನತೆ ಇವೆ. ಅಲ್ಲದೆ ವಿಶಿಷ್ಟ ಸ್ಥಾನವೂ ಇದೆ. ೧೦ನೇ ಶತಮಾನದ ರನ್ನ ಮಹಾಕವಿಯ "ರನ್ನಕಂದ" ೪೫ ಪದ್ಯಗಳನ್ನು ಹೊಂದಿದ್ದು, ಇದುವೇ ಕನ್ನಡ ಭಾಷೆಯಲ್ಲಿ ರಚಿತವಾದ ಮೊದಲ ನಿಘಂಟು. ಈ ಸಾಹಿತ್ಯವನ್ನು ಮುಂದುವರೆಸಿಕೊಂಡು ಬಂದವರೆಂದರೆ. ಬೊಮ್ಮರಸನ ಚತುರಾಸ್ಯ ನಿಘಂಟು, ಲಿಂಗಮಂತ್ರಿಯ ಕಬ್ಬಿಗರ ಕೈಪಿಡಿ, ವಿರಕ್ತ ತೋಂಟದಾರ್ಯನು ರಚಿಸಿದ ಕರ್ನಾಟಕ ಶಬ್ದಮಂಜರಿ, ಶೃಂಗಾರಕವಿಯ ಕರ್ನಾಟಕ ಸಂಜೀವನಂ. ಭಾರತ ನಿಘಂಟು, ಸೂರ್ಯಕವಿಯ ಕವಿಕಂತುಹಾರ ಇವೆಲ್ಲವು ಕಂದ, ಷಟ್ಪದಿ ರೂಪದಲ್ಲಿ ರಚನೆಯಾಗಿವೆ. ಇವರೆಲ್ಲರ

ನಂತರದಲ್ಲಿ ನಿಘಂಟುವಿನ ರಚನಾಕಾರನ ಸ್ಥಾನ ದೊರೆತಿರುವುದು ಪ್ರಸ್ತುತ 'ಶಬ್ದರತ್ನಾಕರ' ದ ಕರ್ತೃ ಇಮ್ಮಡಿ ಮುರಿಗಾ ಗುರುಸಿದ್ಧನದು.

ಶಬ್ದರತ್ನಾಕರ ಹೆಸರೇ ಸೂಚಿಸುವಂತೆ ಶಬ್ದವೆಂಬ ರತ್ನಗಳಿಗೆ ನಾನಾರ್ಥಗಳನ್ನು ಸೂಚಿಸುವ ಒಂದು ಸಾಗರ. ಇದು ಶಬ್ದಾರ್ಥಗಳನ್ನು ಸುಲಭವಾಗಿ ನೆನಪಿಡಲು ಅನುಕೂಲವಾಗುವಂತೆ ಕಂದಪದ್ಯದಲ್ಲಿ ರಚಿತವಾಗಿದೆ. ಇಲ್ಲಿ ಒಟ್ಟು ೩೦ ಕಂದಪದ್ಯಗಳಿದ್ದು ಸುಮಾರು ೧೬ ಶಬ್ದಗಳಿಗೆ ನಾನಾರ್ಥಗಳನ್ನು ಸೂಚಿಸಲಾಗಿದೆ. ಪ್ರತಿಪದ್ಯ 'ಶಬ್ದಾಗಮದೊಳ್' ಎಂದು ಮುಕ್ತಾಯವಾಗುತ್ತದೆ. ಒಂದೊಂದು ಶಬ್ದಕ್ಕೆ ವಿವಿಧಾರ್ಥ, ಪರ್ಯಾಯಾರ್ಥ ಅಥವಾ ನಾನಾರ್ಥಗಳನ್ನು ಸೂಚಿಸುವ ಉದ್ದೇಶ ಈ ಕೋಶದಲ್ಲಿದೆ. ಇಲ್ಲಿ ಬರುವ ೧೬ ಪದಗಳು ಅವುಗಳಿಗೆ ಕೊಟ್ಟ ವಿವಿಧ ಅರ್ಥಗಳ ವಿವರ ಕೆಳಗಿನಂತಿದೆ.

'ಕಮಲವೆನೆ ಭುವನಮಕ್ಕುಂ
ಕಮಲಂ ಜಲ ಸೂರ್ಯ ಶಶಿಯು ಕಂ ಹಯಮಕ್ಕುಂ
ಕಮಲಮೆನೆ ಕುಮುದಮಕ್ಕುಂ
ಕಮಲಂ ತಾಂ ಕಮಲಮಕ್ಕು ಶಬ್ದಾಗಮದೊಳ್'

ಇಲ್ಲಿ ಕಮಲ ಎಂಬ ಒಂದೇ ಶಬ್ದಕ್ಕೆ ೧೭ ಅರ್ಥಗಳನ್ನು ಕೊಡಲಾಗಿದೆ. ಇವುಗಳಲ್ಲಿ ವಾಚ್ಯಾರ್ಥ, ಉಪಮಾರ್ಥ, ಬೆಡಗಿನಾರ್ಥ ಹಾಗೂ ಸಂದರ್ಭಾರ್ಥಗಳು ಸಮಾವೇಶವಾಗಿದೆ. ಹೀಗೆಯೇ ೧೬ ಪದಗಳಿಗೂ ವಿವಿಧಾರ್ಥಗಳನ್ನೂ ಕೊಡಲಾಗಿದೆ.

೧. ಕಮಲ – ಭುವನ, ಜಲ, ಸೂರ್ಯ, ಶಶಿ, ಕರಿ, ಹಯ, ಕುಮುದ, ತುಂಬಿ, ಬಿಳಿ, ಹಂಸಕಣ್ಣು, ಕದನ, ಗಿರಿ, ಕೂದಲು, ಕಾಂತಿ, ಕೀರ್ತಿ, ಕರ, ಧನ.

೨. ಕುಮುದ – ಸೂರ್ಯ, ಜಲ, ಶಶಿ, ಸಿಂಹ, ಕಣ್ಣು, ಕೊಳ, ವನಗಿರಿ, ಶುಭ್ರ, ಕೋಗಿಲೆ, ಸತಿ – ಪುರುಷರು.

೩. ಕರಿ – ಕಣ್ಣು ಗಿರಿ, ಕಾಂತಿ, ಹಯ, ಗಜ, ಕಪ್ಪು, ಕನ್ನಡಿ, ಕಮಲ, ಕಸ್ತೂರಿ, ಸರ್ಪ ಕೀರ್ತಿ.

೪. ಕಂಕಣ – ಕಣ್ಣು, ಉದಕ, ಬಿಳಿ, ಕಾಂತಿ, ಮುಡಿ, ಕದನ, ಕಡಗ, ನವಿಲು, ಕಾರ್ಯ

೫. ಅಮೃತ – ಕುಮುದ, ಉದಕ, ಚಂದ್ರಮ, ಕೂದಲು, ಮುನಿ, ಆನೆ, ಅದರ, ಕೊಳ.

೬. ದಳ – ಧಾರುಣಿ, ಧಾನ್ಯ, ಪರಬಲ, ಹಯ, ಗಜ, ದೈನ್ಯ

೭. ಸುರುಚಿರ – ಬಿದಿರು, ಜಲ, ನವಿಲು, ಸರ್ಪ, ನಂದನ, ಗುಹೆ, ಮೃಗ.

೮. ಶ್ರೀಧರ – ಕೊಳ, ಕೋಟೆ, ಜಲಜ, ಶಿವ, ಗಿರಿ, ಸಿಂಹ, ಬಲ, ವಿಷ್ಣು.

೯. ವನ – ವಾರಿಧಿ, ವನಿತೆ, ವಾರಿಜ, ಶಶಿ, ರವಿ, ಭುವನ, ಹಯ, ಗಜ, ನೃಪತಿ, ಮರುತ, ಪಶುಗಳು ವಾಸಿಸುವ ಸ್ಥಳ.

೧೦. ಭೀಮ – ಇಂದ್ರ, ಶಶಿ, ಬಲ, ಶಕ್ತಿ, ಅಗ್ನಿ, ಗದೆ.

೧೧. ಸೋಮ – ಕುಮುದ, ಮುತ್ತುಗ, ಮುನಿ, ಚಂದ್ರ, ಗಿರಿ, ಗುಹೆ, ಬಿದಿರು, ಬಿತ್ತರಿ, ಸೂರ್ಯ, ಧನ.

೧೨. ಅಕ್ಷಯ – ಕಣ್ಣು, ಕಾರ್ಯ, ಕತ್ತಲೆ, ಮಾವು, ವಾರಿ, ವನ, ತೆಂಗು, ಹಲಸು, ಬಾಳೆಗಳಿರುವ ಸ್ಥಳ, ಅಮೃತ, ಗುಹೆ.

೧೩. ಬಾಣ – ಕೂದಲು, ಜಲಕರಗಳು, ಕಾಂತಿ, ಸಿಡಿಲು, ಮಿಂಚು, ಸಂಗೀತ, ಕುಮದ, ಗಜ, ಅಗ್ನಿ, ವಾಯು, ಕಮಲ, ಮನೆ.

೧೪. ಮಂಡಿ – ಶಶಿ, ಹಂಸೆ, ಕಮಲ, ಗಿರಿ.

೧೫. ಅರಡಿ – ಮುಡಿ, ತುಂಬಿ, ತುಂಗ, ಗಿರಿ, ಅನಿಲ.

೧೬. ಅಜ – ವಾರಿಜ, ಆಸೆ, ಅಂಬರ, ಶಶಿ, ರವಿ, ಮುಕ್ತಿ.

ಈ ಕೃತಿಯಿಂದ ಇಮ್ಮಡಿ ಮುರಿಗಾ ಗುರುಸಿದ್ಧರ ಕಾವ್ಯ ವ್ಯಾಸಂಗದ ವಿಸ್ತರತೆ, ಶಬ್ದಾಗಮ ಪಾಂಡಿತ್ಯ, ಬಹುಶ್ರುತತ್ವಗಳು ವ್ಯಕ್ತವಾಗುತ್ತದೆ. ಈ ಹಿಂದೆ ಬಂದ ನಿಘಂಟುಗಳಿಂದ ಭಿನ್ನವಾಗಿ, ಸಂಕ್ಷಿಪ್ತವಾದರೂ ವಿಶಿಷ್ಟವಾಗಿರುವ ಈ ಕೃತಿ ಕನ್ನಡ ನಿಘಂಟು ಸಾಹಿತ್ಯದಲ್ಲಿ ಗಮನಾರ್ಹವಾದ ಸ್ಥಾನವನ್ನು ಪಡೆದುಕೊಂಡಿದೆ.

ಪಾದಸ್ತೋತ್ರ :

ಸ್ವರವಚನ ರೂಪದಲ್ಲಿನ ೨೦ ಹಾಡುಗಳನ್ನು ಒಳಗೊಂಡಿರುವ ಕೃತಿ. ಗಾತ್ರದಲ್ಲಿ ಕಿರಿದಾಗಿದ್ದರೂ, ಸತ್ವದಲ್ಲಿ ಮಹಾಕಾವ್ಯಗಳಂತೆ ಹಿರಿಮೆಯನ್ನು ಸಾಧಿಸಿದೆ. ಅಲ್ಪ ಸಮಯದೊಳಗೆ ಸಹೃದಯರನ್ನು ಸೆಳೆಯುವುದು ಈ ಕೃತಿಯ ಮಹತ್ವ

ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ ಗುರುಗಳಾದ ಮುರಿಗಾ ಶಾಂತವೀರರನ್ನು ಸ್ತುತಿಸಿರುವ ಕೃತಿ ಇದಾಗಿದೆ. ಪ್ರಾಂಜಲ ಮನದ ಭಕ್ತಿಭಾವವನ್ನು ಒಳಗೊಂಡ ಕೃತಿಯಲ್ಲಿ ಮಂಗಳಪದ್ಯಗಳೇ ತುಂಬಿಕೊಂಡಿದೆ.

ಧರಣಿಗಾಧಾರವಾಗಿಹ ಪಾದ
ಶರಣರ ಹೃದಯದೊಳಿಹ ಪಾದ
ಸ್ಮರನ ದೇಹದ ದಹನ ಪಾದ
ಕರಿಸಿದಂತವರ ಸಂಹಾರ ಪಾದ

ಎಂದು ಗುರು ಶಾಂತವೀರರನ್ನೇ ಸ್ತುತಿಸಲಾಗಿದೆ. ಶಿವನ ವಿವಿಧ ಅವತಾರಗಳನ್ನು, ಲೀಲೆಗಳನ್ನು ತನ್ನ ಗುರುವಿಗೆ ಆರೋಪಿಸಿ ವಚನ ರಚಿಸಲಾಗಿದೆ. ಪ್ರತಿಯೊಂದ ಹಾಡಿನ ಅಂತ್ಯದಲ್ಲಿ 'ಶಿವಲಿಂಗ' ಎಂಬ ಅಂಕಿತವಿದೆ.

ಪ್ರಭುಲೀಲೆ :

ಇಮ್ಮಡಿ ಮುರಿಗಾ ಗುರುಸಿದ್ಧರ ಸಂಸ್ಕೃತ ಭಾಷಾ ಪಾಂಡಿತ್ಯವನ್ನು ಎತ್ತಿತೋರುವ ಕೃತಿ ಪ್ರಭುಲೀಲೆ, ನಂದೀಶ್ವರ ಜಯದಂಡಕಂ, ಚಾಮರವೃತ್ತ ಎಂದು ಒಟ್ಟು ಮೂರು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾರೆ. ಡಾ.ಜಿ.ಮರುಳಸಿದ್ಧಯ್ಯನವರು ಪ್ರಭುಲೀಲೆಯನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಉಳಿದೆರಡೂ ಕೃತಿಗಳು ಇನ್ನೂ ಅಪ್ರಕಟಿತವಾಗಿವೆ.

ಪ್ರಸ್ತುತ ಕೃತಿಯು ಚಾಮರಸನ 'ಪ್ರಭುಲಿಂಗಲೀಲೆ' ಮತ್ತು ವ್ಯಾಸಕೃತ ಭವಿಷ್ಯ ಪುರಾಣಾಂತರ್ಗತ "ಪ್ರಭುಲಿಂಗಲೀಲೆ"ಗಳನ್ನು ಆಧರಿಸಿ ರಚಿತವಾಗಿದೆ. ಕೃತಿಯ ಆರಂಭದಲ್ಲಿ ಶಿವ, ಪಾರ್ವತಿ, ವಿಘ್ನೇಶ್ವರ, ಷಣ್ಮುಖಸ್ವಾಮಿ, ವೀರಭದ್ರಸ್ವಾಮಿ, ನಂದೀಶ್ವರ, ಭೃಂಗೀಶ್ವರರನ್ನು ಮಾತ್ರ ಸ್ತುತಿಸುತ್ತಾನೆ. ಎಂಟು ಸರ್ಗಗಳು, ೬೮೩ ವೃತ್ತಗಳನ್ನು ಒಳಗೊಂಡ ಈ ಕೃತಿಯಲ್ಲಿ ಮಲ್ಲಿಕಾಮಾಲೆ, ತರಳ, ಶಾಲಿನಿ, ವಸಂತತಿಲಕ ವೃತ್ತಗಳನ್ನು ಬಳಸಿದ್ದಾನೆ.

ಮೊದಲನೆಯ ಸರ್ಗದಲ್ಲಿ ಸ್ತುತಿಪದ್ಯಗಳ ಜೊತೆಗೆ ಆತ್ಮಕಥನವನ್ನು ಹೇಳಿಕೊಂಡಿದ್ದಾನೆ. ಹಲವಾರು ಕನ್ನಡ ಕೃತಿಗಳನ್ನು ರಚಿಸಿದ ಇವರು 'ಹಾಲಾಸ್ಯ ಪುರಾಣ'ವನ್ನು ಹೊರತುಪಡಿಸಿ ಬೇರೆಲ್ಲೂ ತಮ್ಮ ಆತ್ಮಕಥನವನ್ನು ಹೇಳಿಕೊಂಡಿಲ್ಲ. ಆದರೆ ಪ್ರಭುಲೀಲೆಯ ೨೯ ನೇ ಶ್ಲೋಕದಿಂದ ೩೯ನೇ ಶ್ಲೋಕಗಳವರೆಗೆ ಜೀವನ ವೃತ್ತಾಂತವನ್ನು ಹೇಳಿಕೊಂಡಿದ್ದಾರೆ. ಈ ಮೂಲಕ ಕವಿಯ ಗುರುಪರಂಪರೆಯನ್ನು ತಿಳಿಯಲು ಸಾಧ್ಯವಾಗಿದೆ.

ಎರಡನೆಯ ಸರ್ಗವು ನಿಂದ್ಯವಲ್ಲದ ಶ್ರೇಷ್ಠವಾದ ವಿದ್ಯೆ, ಅನುಪಮವಾದ ಧರ್ಮದಿಂದ ಸತ್ಯಸ್ವರೂಪನಾದ ಈಶ್ವರನೂ ಆಗಿರುವ ಲಿಂಗಸ್ವರೂಪಿಯಾದ ಅಲ್ಲಮನು ಭೂಮಿಯಲ್ಲಿ ಅವತರಿಸುವ ರೀತಿಯನ್ನು ಹಾಗೂ ಬ್ರಹ್ಮೇಕ ಜ್ಞಾನವನ್ನು ಅನುಗ್ರಹಿಸುವವನು, ಮುಕ್ತಿ ಮಾರ್ಗವನ್ನು ತೋರುವ ಶಕ್ತಿಯುಳ್ಳವನು ಎಂದು ಅಲ್ಲಮ ಶಬ್ದದ ನಿರ್ವಚನ ಮಾಡುತ್ತಾನೆ. ಅಲ್ಲಮನ ಜನನ, ಬಾಲ್ಯದ ವರ್ಣನೆ ಇಲ್ಲಿ ಬರುತ್ತದೆ.

ಮೂರನೆಯ ಸರ್ಗದಲ್ಲಿ ಮಾಯೆಯ ಜನನ, ರಾಜಕೀರ್ತಿ ವರ್ಣನೆ, ತಪೋದೇಶ ವರ್ಣನೆ, ಅಲ್ಲಮನ ಪುರಪ್ರವೇಶ ಮೊದಲಾದ ವಿಷಯಗಳು ಕಂಡುಬರುತ್ತವೆ. ಒಟ್ಟಾರೆಯಾಗಿ ವೀರಶೈವರಲ್ಲಿ ವೈರಾಗ್ಯ ಮೂರ್ತಿಯೆಂದು ಹೆಸರು ಪಡೆದ, ಶೂನ್ಯಸಿಂಹಾಸನದ ಆದ್ಯ ಗುರುವಾದ ಅಲ್ಲಮಪ್ರಭುವಿನ ಜೀವನ ಚರಿತ್ರೆಯ ವಿಷಯವನ್ನು ಈ ಕೃತಿ ಒಳಗೊಂಡಿದೆ.

ಸುದೀರ್ಘವಾದ ಕಥಾನಕವನ್ನು ವೃತ್ತಗಳಲ್ಲಿ ಹೇಳಿಕೊಂಡು ಬರುವುದು ಕಷ್ಟದಾಯಕವೆನಿಸಿದರೂ ಕವಿಯು ಅನವಶ್ಯಕ ವರ್ಣನೆಗಳನ್ನು ಕೈಬಿಟ್ಟು, ನೇರವಾಗಿ ಕಥೆಯನ್ನಷ್ಟೇ ಹೇಳುತ್ತಾನೆ. ಹೆಣ್ಣನ್ನು ಮರುಳುಗೊಳಿಸುವ ಗಂಡೂ, ಗಂಡನ್ನು ಮುರುಳಗೊಳಿಸುವ ಹೆಣ್ಣು ಮಾಯೆಯಾಗಿ ವ್ಯಕ್ತಿಯ ಕರ್ತವ್ಯಚ್ಯುತಿ ಎಸಗುವಂತೆ ಮಾಡುವವು. ಮಾಯೆಯ ವಿಚಾರವನ್ನು ತಿಳಿಸುವ ಈ ಕೃತಿಯು ಮಾಯೆಯ ವಿವಿಧ ರೂಪಗಳನ್ನೂ, ಅಲ್ಲಮಪ್ರಭುವಿನ ವ್ಯಕ್ತಿತ್ವವನ್ನು ತಿಳಿಸುವ ಕೃತಿಯಾಗಿದೆ.

ಅಲ್ಲಮಪ್ರಭುವಿನ ಕಥಾವಸ್ತು ಹನ್ನೆರಡನೆಯ ಶತಮಾನದ್ದಾಗಿದ್ದರೂ, ಅದನ್ನು ಸರಳವಾಗಿ ಅನೇಕ ಕವಿಗಳಲ್ಲಿ ಕೃತಿಗಳ ಮೂಲಕ, ಪ್ರವಚನ – ಪುರಾಣಗಳ ಮೂಲಕ ಈಗಾಗಲೇ ಜನಮಾನಸಕ್ಕೆ ತಿಳಿಸಲಾಗಿತ್ತು. ಆದರೂ ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ ಪಾಂಡಿತ್ಯ ಪ್ರದರ್ಶನ ಹಾಗೂ ಸ್ವಪ್ರತಿಷ್ಠೆಗಾಗಿ ಕ್ಲಿಷ್ಟವಾದ ಭಾಷೆ, ಪ್ರೌಢವಾದ ವೃತ್ತ, ಛಂದಸ್ಸುಗಳನ್ನು ಆಯ್ದುಕೊಂಡು ಕೃತಿ ರಚಿಸಿದ್ದಾರೆ.

ಶಿವರಹಸ್ಯ ಪುರಾಣ :

ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಕೃತಿಗಳಲ್ಲಿ ಒಂದು ಶಿವರಹಸ್ಯ ಪುರಾಣ, ಉಪಲಬ್ಧವಿರುವ ಅಪೂರ್ಣ ಕೃತಿಯಲ್ಲಿ ೧) ಸಂಭವಕಾಂಡ ೨) ದಾನವಕಾಂಡ, ೩) ವೀರ ಮಹೇಂದ್ರಕಾಂಡ, ೪) ಸುರಾಸುರಕಾಂಡ ಎಂಬ ೪ ಕಾಂಡಗಳು, ೧೦೧ ಸಂಧಿಗಳು ೩೩೩೦ ಭಾಮಿನಿ ಷಟ್ಪದಿಗಳಿರುವುದಾಗಿ ತಿಳಿದು ಬಂದಿದೆ. ಪದ್ಯ ಸಂಖ್ಯೆಯನ್ನು ಗಮನಿಸಿದರೆ ಕೃತಿಯ ಬೃಹತ್ತು – ಮಹತ್ತುಗಳ ಅರಿವಾಗುತ್ತದೆ. ಕವಿಯ ಉಪಲಬ್ಧ ಕೃತಿಗಳಲ್ಲೆಲ್ಲಾ ಬಹುಶಃ ದೊಡ್ಡ ಕೃತಿ ಶಿವರಹಸ್ಯ ಪುರಾಣ. ಆದರೆ ಈಗ ದೊರೆತಿರುವುದು ಅಲ್ಪಭಾಗ ಮಾತ್ರ

ಕವಿ ತನ್ನ ಕೃತಿಯ ವಸ್ತು ಹಾಗೂ ಅದರ ರಚನೋದ್ದೇಶವನ್ನು ಕೆಳಗಿನ ಪದ್ಯವೊಂದರಲ್ಲಿ ಹೀಗೆ ತಿಳಿಸಿರುವನು.

"ಶಿವರಹಸ್ಯ ಪುರಾಣವೆಂದಿದ
ಕವನಿಯೊಳು ಪೆಸರಪ್ಪುದೀಶನ
ಕುವರನುರುತರ ಮಹಿಮೆಯಿದರೊಳು ನೆಲಸಿನಿಂದಿಹುದು
ತವೆಯದೆ ಸ್ಕಾಂದೋಕ್ತವಾದಮ
ದವಿರತವು ಕರ್ನಾಟಕ ಸುಭಾ
ಷೆಯೊಳೊರೆಯಬೇಕೆನೆ ಕನ್ನಡಿಸಿದೆನಿದಂ ಮಹೋತ್ಸವದಿಂ" (ಕಾಂಡ ೧, ಅ ೧, ಪ ೯)

ಕೃತಿಯ ಪ್ರಾರಂಭದಲ್ಲಿ ಕವಿ ಮೊದಲಿಗೆ ಶಿವ – ಪಾರ್ವತಿಯರನ್ನು ಒಂದೊಂದು ಪದ್ಯದಲ್ಲಿ ಸ್ಮರಿಸಿ, ನಂತರ ಒಂದೊಂದು ಪದ್ಯದಲ್ಲಿ ಗಣಪ, ವೀರಭದ್ರರನ್ನು ನೆನೆದಿರುವನು. ಐದನೆಯ ಪದ್ಯದಲ್ಲಿ ಭೃಂಗಿ ಮೊದಲಾದ ಪ್ರಮಥ ಶ್ರೇಷ್ಠರನ್ನು ನೆನೆದು, ಇಂಧುಧರನಾತ್ಮಜನು ಈ ಕೃತಿಗೆ ಒಲವಿಂದ ನಿರ್ವಿಘ್ನತೆಯನ್ನು ಬಹುರತಿವೆರಸು ಅನುಗ್ರಹಿಸಲಿ ಸುರನರ ವಿಭುಧತತಿ ಈ ಕೃತಿಗೆ ಅಲಂಕಾರ ರಸ ಭಾವಾದಿ ಲಕ್ಷಣವನ್ನು ಅಳವಡಿಸಲಿ ಎಂದು ಪ್ರಾರ್ಥಿಸಿದ್ದಾರೆ. ಆರನೆಯ ಪದ್ಯದಲ್ಲಿ ಗುರುಸ್ತುತಿ – ಏಳನೆಯ ಪದ್ಯದಲ್ಲಿ "ಶಿವಕವಿವರರ ಬಲಗೊಂಡು ಪದಪಿನಿಂದಳಿಮೊಗನ ಕೃತಿಯನ್ನು ಪದುಳದಿಂದೆ ಸುಲಕ್ಷಣಗಳು ಪುದಿದಿರಲು ಕರ್ನಾಟಕ ಭಾಷೆಯಿನೆಯ್ದೆ ಬಿತ್ತರಿಪೆಂ ಎಂದಿರುವರು."

ಒಂದು ಸಾರೆ ಬ್ರಹ್ಮನನ್ನು ಮುನಿಗಳು ತಪಸ್ಸಿಗೆ ಒಳ್ಳೆಯ ಸ್ಥಳವಾವುದು? ಎಂದು ಪ್ರಶ್ನಿಸುವರು. ನೈಮಿಶಾರಣ್ಯವೆಂದು ಬ್ರಹ್ಮನು ತಿಳಿಸಲು ಮುನಿಗಳು ಅಲ್ಲಿಗೆ ಹೋಗಿ ನೆಲಸುವರು. ಆ ವಿಚಾರ ತಿಳಿದ ಶಿವನ ಪ್ರಿಯ ಭಕ್ತನೂ 'ಊರ್ಜಿತ ಕೀರ್ತಿ'ವಂತನೂ ಆದ ಸೂತಮುನಿಯು ಅಲ್ಲಿಗೆ ಬರುವನು. ಅವನನ್ನು ಎದುರುಗೊಂಡು ಆದರೋಪಚಾರವೆಸಗಿದ ಮುನಿಗಳು ಆತನ ಮುಂದೆ ನಮಗೆ ಈಗಳೇ ಸ್ಕಂದಚರಿತವನ್ನು, ಪಾರ್ವತಿ ಮದುವೆಯ, ಸೋಗಿನ ಸುರವಧೆಯು, ಕಾಳಸರ್ಪದ ವಿಷಕುಡಿದ ವಿಷಕಂಠನ ಚರಿತ್ರೆಯನ್ನು ಹೇಳು ಎಂದು ಮುನಿಗಳು ಕೇಳಲು "ಶ್ರೇಯವಪ್ಪುದು ಪೋಳೆಮಗವನಪಾಯವಂಟದ ವಿಕ್ರಮವನಾತ್ಮೀಯ ಬುದ್ಧಿಯೊಳುಜ್ವಳಿಪ ತೆರನಂ ನಿರೂಪಿಸು" ಎಂದು ಕುತೂಹಲಾವಿಷ್ಟರಾಗಿ ಮನವಿಯೊಡ್ಡುವರು. ಅದಕ್ಕೆ ಸೂತ ಮುನಿಯು "ಮಾಯೆಗಸದಳವಾದ ತಾಪಸರು ಈ ಅಸಮ ಗೌರೀಕುಮಾರನ ಉಪಾಯ ಚರಿತವನ್ನು ಆಲಿಸುವುದರಿಂದ ಫಲದಾಯಕವಾಗುತ್ತದೆ. ಶಿವಕುಮಾರನ ಚರಿತೆಯನ್ನು ಬಿಡದೆ ಕೇಳಿದ್ದೇ ಆದರೆ ಜಗತ್ತಿನಲ್ಲಿ ಬಯಸಿದುದು ಕೈಸಾರುತ್ತದೆ. ಇದು ಸತ್ಯ, ಸಭೆಯಲ್ಲಿ ಈ ದಿವ್ಯ ಚರಿತೆಯನ್ನು ಹೇಳಿದವರನ್ನು ವಿಶೇಷವಾಗಿ ಆದರಿಸುವುದು, ಪೂಜಿಸುವುದು ಎಂದು ಹೇಳಿ ಸ್ಕಂದ ಮಹಿಮೆಯನ್ನು ನಿರೂಪಿಸತೊಡಗುವನು."

ಸ್ಕಂದಕಲ್ಯಾಣ :

ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಕೃತಿಗಳಲ್ಲಿ ಒಂದು ಸ್ಕಂದಕಲ್ಯಾಣ. ವಿವಿಧ ದೇಶೀಛಂಧೋಬಂಧಗಳಲ್ಲಿ ರಚಿತವಾದ ಈ ಕೃತಿಯ ಅಪೂರ್ಣ ಹಸ್ತಪ್ರತಿಯು ಮೂರು ಸಾವಿರಮಠದ ಹಸ್ತಪ್ರತಿ ಸಂಗ್ರಹದಲ್ಲಿ ಇರುವುದಾಗಿ ತಿಳಿದುಬಂದಿದೆ. ಕೃತಿಯ ಮೊದಲ ಸಂಧಿಯಾದ 'ಚೌಪದಿ ವರ್ನದ ಶಿವಸ್ತೋತ್ರ',[೩೬] ವೃತ್ತಗಳಲ್ಲಿ ರಚಿತವಾದ "ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ"[೩೭] ಮತ್ತು ದ್ವಿಪದಿಯಲ್ಲಿ ರಚಿತವಾದ "ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ"[೩೮] ಈ ಮೂರು ಬಿಡಿ ಭಾಗಗಳು ಮಾತ್ರ ಈಗ ಪ್ರಕಟವಾಗಿವೆ.

ಉಪಲಬ್ಧವಾಗಿರುವ ಭಾಗಗಳಿಂದ ಕೆಳಗಿನ ವಿಷಯಗಳನ್ನು ಸಂಗ್ರಹಿಸಬಹುದು. ಚೌಪದಿ ವರ್ನದ ಶಿವಸ್ತೋತ್ರದಲ್ಲಿ ೩೬ ಚೌಪದಿಗಳಿವೆ.

'ನಂದಿಕೇತನ ನಾಕಕುಂತಳ ಸುರನಾಗ
ಮಂದಿರ ನತಜನ ಮಂದಾರ
ಚಂದಿರದಲೆಯ ಚರಣನೇತ್ರ ಶಿವಲಿಂಗ
ಚಂದಾದೆ ಶರಣಾಗೆಮಗೆಯೊಲಿದು'

ಎಂಬ ಶಿವಸ್ತುತಿಯೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ. ನಂತರದಲ್ಲಿ ಪಾರ್ವತಿ, ಗಣಪತಿ, ನಂದಿ, ಭೃಂಗಿ, ಬಸವೇಶ, ಚೆನ್ನಬಸವ, ಮಾಚಿದೇವ ಸಿದ್ಧರಾಮ ಮೊದಲಾದ ಶರಣರನ್ನು ಸ್ತುತಿಸುವುದರೊಂದಿಗೆ ಸಸಿದಲೆಯನ ಮಗನ ಸಮರವ್ಯಾಣಕ್ಕೆ ನೆರವಾಗಬೇಕೆಂದು ಪ್ರಾರ್ಥಿಸಲಾಗಿದೆ. ಶಿವಕವೀಶ್ವರರು ನವರಸ ಭಾವಲಂಕಾರ, ಸುವಿವೇಕಗಳನ್ನಿತ್ತು, ಧರೆಯ ಸುಜನರರಿವಂತೆ ಕೃತಿಯನ್ನು ಮುನ್ನಡೆಸಿಕೊಂಡು ಹೋಗಬೇಕು. ಇದು ವರ್ಣಕ ಕಾವ್ಯವಾದ ಕಾರಣ ಕಿವಿಗೆ ಸುಮಧುರವೆನಿಸುವಂತೆ, ಮೃದುವಾದ ಶಬ್ದ, ಸಂಧಿ ಸಮಾಸಗಳನಳವಡಿಸಿರುವೆ. ಗುರುಕವಿಗಳ ಮಾರ್ಗದರ್ಶನದಲ್ಲಿಯೇ ಕೃತಿ ರಚಿಸಿದ ಕಾರಣವಾಗಿ ದುರ್ಜನರು ದುರುಳುತನದಿಂದ ಹೀಗಳೆದರೆ ಲಕ್ಷಿಸದಿರುವೆ. ವೀರಶೈವಾಚಾರಸಾರನೆನಿಸಿದ ಮುರಿಗೆಯ ಶಾಂತವೀರೇಶನೇ ಕೃತಿಯನ್ನು ಮುನ್ನಡೆಸಿಕೊಂಡು ಹೋಗಬೇಕೆಂದು ಪ್ರಾರ್ಥಿಸಲಾಗಿದೆ. ಕೃತಿಯ ಅಂತ್ಯದಲ್ಲಿ ಫಲಶ್ರುತಿ ಎಂಬಂತೆ ಇದನ್ನು ಓದಿದವರು, ಕೇಳುವವರು ಷಣ್ಮುಖನ ಕರುಣದಿಂದ ಮೋಕ್ಷಪ್ರಾಪ್ತಿಗಳಾಗುವರು ಎಂದು ಹೇಳಲಾಗಿದೆ. ನಂತರದಲ್ಲಿ

'ಶ್ರೀಮದತಳ ಗೌರಿಪ್ರೇಮ ಸುಧಾಂಬುಧಿ
ಸೋಮ ಕುಮಾರಪಾಲನ ಧಾಮ
ಕೋಮಲಮೂರ್ತಿ ಕೋಟಿಂದುರುಚಿ ಸತ್ಕೀರ್ತಿ
ಸ್ವಾಮಿ ಶಿವಲಿಂಗ ರಕ್ಷಿಪುದೆಮ್ಮ'

ಎಂದು ಹೇಳುವುದರೊಂದಿಗೆ ಶಿವನ ಒಂದೊಂದು ಲೀಲೆಯನ್ನು ವಿವರಿಸಿದ್ದಾರೆ. ವ್ಯಾಧರ ನಾಯಕನಿಗೆ ಪ್ರಮಥ ಪದವಿಯನಿತ್ತವನು, ಗಿರಿಜೆಯರಸನು, ಶಂಕರನು, ಕರುಣಾಕರನು, ಮೈದುನನಣುಗನರುಹಿ ಲಕುಮಿಯ ಮನೆಯ ಬೀದಿಪನಾತ್ಮಭವನ ಚುರ್ಚಿ ಕಾದಲೆಯಯ್ಯನ ಜನ್ಮವನಳಿದವನು, ಮಂಜುವೆಟ್ಟಳಿಯ, ನಂಜುಗುಡಿದಳಿಯ, ಸಂಜೆಗೆಂಪನು ಪಡೆದ ರಂಜಿಪ ಪಂಜಡೆಯ ನಿರಂಜನ, ಕರಿಮುಖ, ಷಣ್ಮುಖ, ವೀರಭಧ್ರ, ಪಾರ್ವತಿಯ ಮಧ್ಯದಲಿ ಕೈಲಾಸದಲಿ ವಿರಾಜಿತನಾದಂತವ ಎಂದು ಕವಿ ನಾನಾ ವಿಧಗಳಲ್ಲಿ ಶಿವಸ್ತುತಿ ಕೈಗೊಂಡಿರುವನು. ತಾರಕಾಸುರನ ಸಂಹಾರವನೆಸಗಿ, ದೇವೇಂದ್ರ ಕನ್ನಿಕೆಯನು ಧಾರೆಯೆರೆಸಿಕೊಂಡ ಕುಮಾರನ ಕಲ್ಯಾಣವಿದು ಎಂದು ಹೇಳುವುದರೊಂದಿಗೆ,

'ಶಿವಮುನೀಶನ ದೃಷ್ಟಿಯೊಳಗೆ ಜನಿಸಿ ವ್ಯಾಧ
ಧವನ ತನುಜೆಯಾದ ಲವಲಿಯ
ಸವಿನಯದಿಂದೆ ಕೈವಿಡಿದ ಕಲ್ಯಾಣವು
ವವನಿಯೊಳನುವಾಗಿ ಮೆರೆಯಲಿ'
ಎಂದು ಕೃತಿಯ ವಸ್ತುವನ್ನು ವಿವರಿಸಿದ್ದಾರೆ.

'ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ'ದಲ್ಲಿ ೧೨ ವೃತ್ತಗಳಿವೆ. ಹಾಲಾಸ್ಯ ಪುರಾಣದಂಥ ಬೃಹತ್ ಗ್ರಂಥದಲ್ಲಿ ಸುಮಾರು ೧೬೫ಕ್ಕೂ ಹೆಚ್ಚು ಛಂದೋಪ್ರಯೋಗಗಳನ್ನು ಕೈಗೊಂಡು ಯಶಸ್ವಿಯಾದ ಕವಿ ಇಲ್ಲ ಶಿವಸ್ತೋತ್ರಕ್ಕೆ ವೃತ್ತಗಳನ್ನು ಬಳಸಿಕೊಂಡಿರುವನು. ಉತ್ಪಲಮಾಲೆ, ಚಂಪಕಮಾಲೆ, ಮತ್ತೇಭವಿಕ್ರೀಡಿತ, ಶಾರ್ದೂಲವಿಕ್ರೀಡಿತ, ಮಲ್ಲಿಕಾಮಾಲೆ ವೃತ್ತಗಳಲ್ಲಿ ಶಿವಸ್ತೋತ್ರ ಮಾಡಲಾಗಿದೆ. ಉದಾಹರಣೆಗಾಗಿ ಒಂದನ್ನಿಲ್ಲಿ ಕೊಡಲಾಗಿದೆ.

'ಸುರಗಿರಿಚಾಪ ಸೂನ್ನತ ಕಲಾಪ ಸುರಾಸುರಗರ್ವಲೋಪ ಶಂ
ಕರ ಕರುಣಾಕ್ಷ ಕಾಮಲವಿಪಕ್ಷ ಕನಜ್ವಲನಾಕ್ಷ ಘೋರ ನಿ
ರ್ಭ ಗರಬಾರಿ ಭಾಸ್ವರ ಪುರಾರಿ ಭವೇಭವಿದಾರಿ ಚಂದ್ರ ಶೇ
ಖರ ಶಿವಲಿಂಗ ದಾನಿಗಣಸಂಗ ವಿಭಂಗ ಪಾಲಿಸಾ'
ಪ್ರತಿವೃತ್ತದಲ್ಲಿಯೂ ಈ ರೀತಿಯಾಗಿರುವ ಶಿವಸ್ತುತಿಯನ್ನು ಕಾಣಬಹುದು.

'ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರವು ದ್ವಿಪದಿಯಾಗಿದ್ದರೂ ಇದು ನಾಲ್ಕು ಸಾಲುಗಳ ಒಂದೊಂದು ನುಡಿಗಳಲ್ಲಿದೆ. ಇದರಲ್ಲಿ ೧೧ ನುಡಿಗಳಿವೆ. ಯುದ್ಧದಲ್ಲಿ ಹೋರಾಡಿ ವೀರಮರಣವನ್ನಪ್ಪಿ ಸ್ವರ್ಗವಾಸಿಯಾದ ಕವಿಯನ್ನು ಕುರಿತಾಗಿ ಆತನ ಪತ್ನಿಯರು ಶೋಕಿಸುವ ಒಂದು ದುಃಖ ಪ್ರಸಂಗದ ವಿವರಣೆಯನ್ನು ನಾವಿಲ್ಲಿ ಕಾಣಬಹುದು.'

ಮಲ್ಲಿಕಾರ್ಜುನನ ಮಗನೊಡನೆ ಹೋರಾಡಿ ಮಡಿದ ತಮ್ಮ ಗಂಡನನ್ನು ನೆನೆದು ದುಃಖಿಸುತ್ತಾ, ಅತ್ತೆ-ಮಾವಂದಿರ ಪರಿಚಯವು ನಮಗಿಲ್ಲ ನಂಟರನ್ನು ನಂಬಿ ಬದುಕುವವರು ನಾವಲ್ಲ, ತಂದೆ-ತಾಯಿಗಳ ಹಂಗು ನಮಗಿಲ್ಲ. ನಿಮ್ಮ ಕೈ ಹಿಡಿದ ದಿನದಿಂದಲೂ ನಿಮ್ಮನ್ನೇ ನಂಬಿಕೊಂಡಿರುವೆವು ನಿಮ್ಮ ಜೊತೆಯಲ್ಲಿಯೇ ಇದ್ದೆವು. ಸೊಕ್ಕಿದ ದಿವಿಜರನ್ನು ರಣರಂಗದಲ್ಲಿ ಜಯಿಸುವುದರೊಂದಿಗೆ ಸ್ವರ್ಗವನ್ನು ಸೇರಿದ ನಿಮ್ಮನ್ನು ಕೂಡಿಯೇ ನಾವು ಸುಖವಾಗಿರುತ್ತೇವೆ ಎಂದು ಹೇಳುವುದರೊಂದಿಗೆ ತಮ್ಮ ಪತಿ ಪ್ರೇಮವನ್ನು ಎತ್ತಿ ತೋರಿಸಿರುವರು. ತಮ್ಮ ಗಂಡನ ರೂಪ ವರ್ಣನೆ ಮಾಡುತ್ತಾ,

'ತಿದ್ದಿದ ಮೀಸೆಯ ಮುದ್ದುಮೊಗದ ಚತುರ
ಸುದ್ದಿಯ ಹೇಳದೆ ಸಗ್ಗಕ್ಕೆ
ಸುದ್ದಿಯ ಹೇಳದೆ ಸಗ್ಗಕ್ಕೆ ಹೋದರೆ
ಎದ್ದು ಬಾರದೆ ನಿನ್ನ ಬಿಡುವೆನೆ'

ಎನ್ನುವಲ್ಲಿ ಆತನ ಸುಕುಮಾರತನವನ್ನು ಚಿತ್ರಿಸಿದ್ದಾರೆ. ನಲ್ಲನೇ ನೀ ನನ್ನ ಸೊಲ್ಲನಾಲಿಸು. ಎದ್ದು ಬಾರದೆ ನಿನ್ನ ಬಿಡುವೆನೆ ಎಂಬಲ್ಲಿ ಅವರ ದುಃಖದ ಅಳವನ್ನು ಕಾಣಬಹುದು.

ಅಪೂರ್ಣವಾಗಿ ದೊರೆತ ಈ ಕೃತಿ ಸಮಗ್ರವಾಗಿ ದೊರೆಯುವವರೆಗೆ ಇದರ ನಿಶ್ಚಿತ ಸ್ವರೂಪ ತಿಳಿಯುವುದಿಲ್ಲ. ಇಮ್ಮಡಿ ಮುರಿಗಾ ಗುರುಸಿದ್ಧರ ಛಂದೋಪ್ರಯೋಗಶೀಲತೆಗೆ, ದೇಶೀಬಂಧ ರಚನೆಗೆ ಇದೊಂದು ವೈಶಿಷ್ಟ್ಯ ಮಾದರಿಯಾಗಿದೆ ಎಂದು ಮಾತ್ರ ಸದ್ಯಕ್ಕೆ ಹೇಳಬಹುದು.

ಬಿಜ್ಜಮಹಾದೇವಿ ಚಾರಿತ್ರ್ಯ :

ಯಕ್ಷಗಾನ ರೂಪದಲ್ಲಿ ರಚಿತವಾದ ಅಪ್ರಕಟಿತ ಕೃತಿ ಇದು. "ದೊಡ್ಡ ದೊಡ್ಡ ತತ್ವಗಳನ್ನು ಜನಸಾಮಾನ್ಯರಿಗೆ ಸರಳ, ಸುಲಭ ರೀತಿಯಲ್ಲಿ ಬೋಧಿಸುವ ಸಾಧನಮಾರ್ಗವೇ ಯಕ್ಷಗಾನ. ಯಕ್ಷಗಾನ ಪ್ರಾಚೀನ ಕಲೆ ಎನಿಸಿದರೂ, ೧೫-೧೬ ನೆಯ ಶತಮಾನ ಇದರ ಉಗಮ ಕಾಲವಾಗಿದೆ. ವೀರಶೈವ ಕವಿಗಳು ವಿಶೇಷವಾಗಿ ವೀರಶೈವ ಧರ್ಮದ ತತ್ವಗಳನ್ನು ಅರ್ಥೈಸಲು, ವೀರಶೈವ ಸಮಾಜ, ಸಂಸ್ಕೃತಿ ಮತ್ತು ಧರ್ಮಗಳ ಸ್ವರೂಪವನ್ನು ತಿಳಿಸಲು ಈ ರೂಪವನ್ನು ಪ್ರಯೋಗಿಸಿದ್ದಾರೆ. ಶಿವಶರಣರ ವಚನಗಳು, ಜೀವನ ಚರಿತ್ರೆಗಳನ್ನು ಆಧಾರವಾಗಿಟ್ಟು ಕೊಂಡು ರಚಿಸಿದ ಹಲವಾರು ಯಕ್ಷಗಾನಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ ದುರದುಂಡೀಶನ ಪ್ರಭುದೇವರ ಯಕ್ಷಗಾನ, ಜಗಜ್ಯೋತಿ ಬಸವೇಶ್ವರ ಯಕ್ಷಗಾನ ಮೊದಲಾದವು. ಈ ಪರಂಪರೆಯಲ್ಲಿಯೇ ಬರುವಂತದ್ದು ಇಮ್ಮಡಿ ಮುರಿಗಾ ಗುರುಸಿದ್ಧರ "ಬಿಜ್ಜಮಹಾದೇವಿ ಚಾರಿತ್ರ್ಯ"

ಇದು ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಕೃತಿ. 'ಬಿಜ್ಜಾವರದ ಕದಿರ ಕಾಯಕದವಳಾದ ಅಮ್ಮವ್ವೆಯ ಚರಿತ್ರೆ ಈ ಕೃತಿಯ ವಸ್ತು. ಅಮ್ಮವ್ವೆಯು ಶಿವನನ್ನೇ ಮಗನಾಗಿ ಪಡೆಯಲು ಬಯಸಿದಾಗ ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪಿ ಶಿವನು ಬಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡಿದನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯನ್ನೆತ್ತಿ ಕೊರಳನ್ನು ಕತ್ತರಿಸಿಕೊಳ್ಳಲು ಹೊರಟಳು ಶಿವ ಪ್ರತ್ಯಕ್ಷನಾಗಿ ಅವಳನ್ನು ಕೈಲಾಸಕ್ಕೆ ಕರೆದೊಯ್ಯುವನು."[೩೯]

ವಿಶೇಷವಾಗಿ ವೀರಶೈವ ತಾತ್ವಿಕ ಸಾಹಿತ್ಯದಲ್ಲಿ ಆಸಕ್ತಿಯುಳ್ಳ ಇಮ್ಮಡಿ ಮುರಿಗಾ ಗುರುಸಿದ್ಧರ ಎಲ್ಲ ಕೃತಿಗಳೂ ಒಂದಲ್ಲ ಒಂದು ರೀತಿಯಲ್ಲಿ ವೀರಶೈವ ಧರ್ಮ, ತತ್ವ, ನೀತಿಗಳನ್ನು ಪ್ರತಿಪಾದಿಸುತ್ತವೆ. ಪ್ರಸ್ತುತ ಬಿಜ್ಜಮಹಾದೇವಿ ಚಾರಿತ್ರ್ಯವು ಶಿವಶರಣೆ ಅಮ್ಮವ್ವೆಯ ಕಥೆಯನ್ನೊಳಗೊಂಡು ಚಾರಿತ್ರ್ಯ ನಿರೂಪಣಾ ಕೃತಿಯೆನಿಸಿದೆ. ಯಕ್ಷಗಾನ ರೂಪದಲ್ಲಿ ಶಿವಶರಣೆಯೊಬ್ಬಳ ಕೃತಿ ರಚಿಸಿರುವುದು ಮಹತ್ವಪೂರ್ಣವೆನಿಸಿದೆ. ಅವರ ವೈವಿಧ್ಯಮಯ ಸಾಹಿತ್ಯಾಭಿರುಚಿ ಹಾಗೂ ಆಸಕ್ತಿಯ ವೈವಿಧ್ಯವನ್ನು ಎತ್ತಿತೋರುತ್ತದೆ.

ಶಿವಜಲಂಧರ ಕಾಳಗ :

ಇದು ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಕೃತಿ. ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನದ ಹಸ್ತಪ್ರತಿ ಭಂಡಾರದಲ್ಲಿ ಇದರ ಒಂದು ಪ್ರತಿ ಉಪಲಬ್ಧವಿದೆ. ಈ ಕೃತಿಯ ಆದಿ, ಅಂತ್ಯವನ್ನು ಕುರಿತಾಗಿ ಗೌ. ಮ. ಉಮಾಪತಿ ಶಾಸ್ತ್ರಿಗಳು "ಯಕ್ಷಗಾನ ಹಸ್ತಪ್ರತಿಗಳ ವಿವರಣಸೂಚಿ" ಯಲ್ಲಿ ಹೇಳಿದ್ದಾರೆ.

ಈ ಯಕ್ಷಗಾನಕ್ಕೆ ವಿರೂಪಾಕ್ಷ ಪಂಡಿತನ "ಚೆನ್ನಬಸವ ಪುರಾಣ" ಆಕರವಾಗಿದೆಯೆಂದು ಕವಿಯೇ ಹೇಳಿಕೊಂಡಿದ್ದಾನೆ. "ಚೆನ್ನಬಸವ ಪುರಾಣ"ದಲ್ಲಿಯ ಶಿವನ ಪಂಚವಿಂಶತಿ ಲೀಲೆಗಳ ವರ್ಣನೆಗೆ ಸಂಸ್ಕೃತದ ಶಿವಪುರಾಣವೇ ಮೂಲ. ಜಲಂಧರ ಸಂಹಾರ ಈ ಲೀಲೆಗಳಲ್ಲಿ ಒಂದು. ಶಿವಪುರಾಣದ ರುದ್ರ ಸಂಹಿತೆಯ ಯುದ್ಧಕಾಂಡದಲ್ಲಿ ಜಲಂಧರನ ಪ್ರಸ್ತಾಪ ಸವಿಸ್ತಾರವಾಗಿದೆ. ಉಭಯಭಾಷಾ ಕವಿಯಾದ ಈತನು ಎರಡನ್ನು ಮುಂದಿಟ್ಟುಕೊಂಡು ಈ ಕೃತಿಯನ್ನು ರಚಿಸಿದಂತಿದೆ. (ಗೌ. ಮ. ಉಮಾಪತಿಶಾಸ್ತ್ರಿಗಳು, ಯಕ್ಷಗಾನ ಹಸ್ತಪ್ರತಿಗಳ ವಿವರಣ ಸೂಚಿ, ಪು.೮೩.) ಎಲ್ಲಾ ಕೃತಿಗಳಲ್ಲಿ ಬಳಸಿರುವಂತೆ ಇಲ್ಲಿಯೂ "ಶಿವಲಿಂಗ" ಅಂಕಿತವನ್ನು ಬಳಸಿದ್ದಾನೆ.

"ಜಲಂಧರನ ಕಾಳಗ" ಬಹಳ ಲೋಕಪ್ರಿಯವಾದ ಪೌರಾಣಿಕ ಆಖ್ಯಾನ, ಅದನ್ನು ಆವರಿಸಿ ಅನೇಕ ಕವಿಗಳು ಯಕ್ಷಗಾನಗಳನ್ನು ಬರೆದಿರುವರು. ಹಾಗೆಯೇ ಇಮ್ಮಡಿ ಗುರುಸಿದ್ಧರೂ ಜಲಂಧರನನ್ನು ಒಬ್ಬ ಪ್ರಚ್ಛನ್ನ ಶಿವಭಕ್ತನ ರೂಪದಲ್ಲಿ ಅವನ ವ್ಯಕ್ತಿತ್ವವನ್ನು ಉದಾತ್ತೀಕರಿಸಿದ್ದಾರೆ.

ಲಿಂಗಾಚಾರ ರಚನಾಗಮ ಟೀಕೆ :

ಇದು ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಟೀಕಾಕೃತಿ. ಇದರ ಪ್ರತಿಯು ಧರ್ಮಸ್ಥಳದ ಶ್ರೀಮಂಜುನಾಥೇಶ್ವರ ಸಂಸ್ಕೃತಿ ಪ್ರತಿಷ್ಠಾನದಲ್ಲಿದೆ.

ಟೀಕಾ ಸಾಹಿತ್ಯದಲ್ಲಿ ಎರಡು ಪ್ರಕಾರಗಳು –

೧) ಅನ್ಯಭಾಷಾ ಸಾಹಿತ್ಯಕ್ಕೆ ಬರೆದ ಟೀಕೆ.

೨) ಕನ್ನಡ ಭಾಷೆಯ ಸಾಹಿತ್ಯಕ್ಕೆ ಬರೆದ ಕನ್ನಡ ಟೀಕೆ. ಇಲ್ಲಿ ಒಬ್ಬ ಟೀಕಾಕಾರ ಅನೇಕ ಕೃತಿಗಳಿಗೆ ಟೀಕೆ ಬರೆದುದು ಒಂದು ರೀತಿಯಾದರೆ, ಒಂದು ಕೃತಿಗೆ ಅನೇಕ ಜನ ಟೀಕಾಕಾರರು ಟೀಕೆ ಬರೆಯುವುದು ಮತ್ತೊಂದು ರೂಢಿ. ಪ್ರಸ್ತುತ ಕೃತಿಯು ಸಂಸ್ಕೃತ ಶ್ಲೋಕಗಳಿಗೆ ಬರೆದ ಕನ್ನಡದ ಟೀಕೆಯಾಗಿದೆ. ನಾಲ್ಕು ಸಾಲುಗಳ ಶ್ಲೋಕರೂಪವನ್ನು ಹೊಂದಿದೆ. ಒಟ್ಟಾರೆ ೧೧ ಪಟಲ, ೩೪೩ ಸಂಸ್ಕೃತ ಶ್ಲೋಕಗಳಿಗೆ ಟೀಕುಗಳನ್ನು ಹೊಂದಿದೆ.

೧೧ ಪಟಲಗಳಲ್ಲಿ ಕ್ರಮವಾಗಿ ಶಬ್ದನಿರುಕ್ತಿವರ್ಣನೆ, ವೀರಶೈವ ವ್ರತತಾರತಮ್ಯ ವರ್ಣನೆ, ಲಿಂಗೈಕ್ಯ ವರ್ಣನ, ಲಿಂಗಸ್ಥೂಲ, ಸೂಕ್ಷ್ಮ, ವಿವೇಕ, ಲಿಂಗಲಕ್ಷಣ, ಗೋಳಾತ್ಮಕ ಲಿಂಗ ಲಕ್ಷಣ, ನಾಳಾತ್ಮಕ ಲಿಂಗಲಕ್ಷಣ, ನಾಳಗೋಳಕ ಲಿಂಗ ಲಕ್ಷಣ, ಕರಸ್ಥಲ ಮಹಿಮೆ, ಸಮಾಧಿಕ್ರಿಯೆ ಎಂದು ಒಂದೊಂದು ಪಟಲದಲ್ಲಿ ಒಂದೊಂದು ವಿಷಯಗಳನ್ನು ವಿವರಿಸಿದ್ದಾನೆ.

ಲಿಂಗರಚನೆಯ ಶಾಸ್ತ್ರವನ್ನು ಅರಹುವ ಈ ಕೃತಿಯು ಮನುಷ್ಯ ತನ್ನ ಅಜ್ಞಾನವನ್ನು ಕಳೆದುಕೊಂಡು ಲಿಂಗಾಂಗ ಸಾಮರಸ್ಯದ ಹಂತವನ್ನು ತಲುಪುವವರೆಗಿನ ಅವಸ್ಥೆಗಳಲ್ಲಿ ಪಾಲಿಸಬೇಕಾದ ವಿಧಿ – ವಿಧಾನಗಳನ್ನು ಹೇಳುತ್ತದೆ. ವೇದ, ಉಪನಿಷತ್ತು, ಆಗಮಗಳನ್ನು ಅರಗಿಸಿಕೊಂಡಿದ್ದ ಇಮ್ಮಡಿ ಮುರಿಗಾ ಗುರುಸಿದ್ಧರು ಶಾಸ್ತ್ರಸಮ್ಮತವಾದ ಲಿಂಗದ ರಚನೆಯ ವಿವರಣೆಗಳನ್ನು ಶ್ಲೋಕಗಳಿಗೆ ಅರ್ಥಸಹಿತವಾಗಿ ಬರೆದು ಜನಸಾಮಾನ್ಯರಲ್ಲಿ ಧಾರ್ಮಿಕ ಜಾಗೃತಿಗೆ ಕಾರಣವಾಗಿದ್ದಾರೆ. ಶುದ್ಧವಾದ ತಾತ್ವಿಕ ಅಂಶಗಳನ್ನು ಒಳಗೊಂಡಿರುವ ಈ ಕೃತಿಯಲ್ಲಿ ಸಾಹಿತ್ಯಿಕ ಅಂಶಗಳು ಸಂಪೂರ್ಣ ಮರೆಯಾಗಿದೆ.

ಹಾಗಲವಾಡಿ ಮುದ್ವೀರಸ್ವಾಮಿ (೧೭೦೦-೧೭೭೦)

ಹಾಗಲವಾಡಿ ಪಾಳೆಯಗಾರರ ಮನೆತನಕ್ಕೆ ಸೇರಿದ ಇಮ್ಮಡಿ ಮುದಿಯಪ್ಪ ನಾಯಕನ ಗುರುವಾಗಿದ್ದ ಅನುಭಾವಿ ಕವಿಯೇ ಹಾಗಲವಾಡಿ ಮುದ್ವೀರಸ್ವಾಮಿ. ಈತನಿಗೆ ಬೆಂಗಳೂರು ಮುದ್ವೀರಸ್ವಾಮಿ, ಮುದ್ವೀರಯೋಗಿ, ಮುದ್ವಿರೇಶ, ಮುದ್ವೀರ ದೇಶಿಕೋತ್ತಮ ಎಂಬ ಬೇರೆ ಬೇರೆ ಹೆಸರುಗಳಿದ್ದರೂ ಸಹಿತ "ಹಾಗಲವಾಡಿ ಮುದ್ವೀರಸ್ವಾಮಿ" ಎಂದೇ ಪ್ರಸಿದ್ಧನಾಗಿರುವನು. ಈತನೊಬ್ಬ ರಾಜಗುರು, ರಾಜಕವಿ, ಅನುಭಾವಿ, ಶಿವಯೋಗಿ ಹಾಗೂ ತತ್ವಪ್ರಧಾನ ಸಾಹಿತ್ಯ ಸೃಷ್ಟಿಯನ್ನು ಮಾಡಿದ ಉತ್ತಮಕವಿ ಎಂದೇ ಹೇಳಬಹುದು. ಮುದ್ವೀರಸ್ವಾಮಿಯ ಜೀವನೀತಿಹಾಸಕ್ಕೆ ಸಂಬಂಧಿಸಿದಂತೆ, ಸ್ವತಃ ಈತನೇ ರಚಿಸಿದ "ಶಿವತತ್ವಸುಜ್ಞಾನ ಪ್ರದೀಪಿಕೆ" ಹಾಗೂ ಚೆನ್ನವೀರ ಎಂಬ ಕವಿ ರಚಿಸಿದ "ಮುದ್ವೀರ ತಾರಾವಳಿ"ಯಿಂದ ಕೆಲವು ಸಂಗತಿಗಳನ್ನು ಹೀಗೆ ಸಂಗ್ರಹಿಸಬಹುದು.

ಕನ್ನಡ ಸಾಹಿತ್ಯ ಸಂವರ್ಧನೆಗೆ ವೀರಶೈವ ಅರಸು ಮನೆತನಗಳ ಕೊಡುಗೆ ಅಪಾರವಾಗಿದೆ. ಅದರಲ್ಲೂ ವಿಜಯನಗರ ಸಾಮ್ರಾಜ್ಯದ ಪ್ರೌಢದೇವರಾಯನ ಕಾಲದ ಕೊಡುಗೆ ಸಿಂಹಪಾಲು ಎಂದೇ ಹೇಳಬಹುದು. ಈ ಕೊಡುಗೆಯಲ್ಲಿ ವಿಜಯನಗರ ಸಾಮ್ರಾಜ್ಯದರ ಜೊತೆ ಕೈಜೋಡಿಸಿದ ಅನೇಕ ಹಿರಿ–ಕಿರಿಯ ಸಾಮಂತ, ಮಾಂಡಲೀಕ ಹಾಗೂ ಪಾಳೆಯಗಾರ ಮನೆತನಗಳೂ ಸೇರ್ಪಡೆಯಾಗಿವೆ. ಇವುಗಳಲ್ಲಿ ಹಾಗಲವಾಡಿ ಪಾಳೆಯಗಾರ ಮನೆತನವೂ ಒಂದು.

"ಹಾಗಲವಾಡಿ ಪಾಳೆಯಗಾರರು ವಿಜಯನಗರ ಸಾಮ್ರಾಜ್ಯದ ಅಧೀನ ಸಾಮಂತರು. ಈ ವಂಶದ ಮೂಲಪುರುಷ ಎರಿಮಾದನಾಯಕ ಇವನ ತರುವಾಯ ಇವನ ಮಗ ಸಾಲಿನಾಯಕ, ಇವನ ಮಗ ಭೈರವ ನಾಯಕ, ಇವನ ಮಗ ಮುದಿಯಪ್ಪನಾಯಕ, ಇವನ ಮಗ ಇಮ್ಮಡಿ ಭೈರಪ್ಪನಾಯಕ, ಮುಂದೆ ಚೆನ್ನಬಸವಪ್ಪನಾಯಕ ಇವರ ಮಗ ಇಮ್ಮಡಿ ಮುದಿಯಪ್ಪನಾಯಕ ಎಂದು, ಹೀಗೆ ೧೪೭೮ ರಿಂದ ೧೭೭೬ರ ವರೆಗೆ ಅನೇಕ ರಾಜರು ಆಳ್ವಿಕೆ ನಡೆಸುತ್ತಾರೆ. ಒಟ್ಟಾರೆ ೧೩ ಜನ ಅರಸರು, ೩೦೦ ವರ್ಷ ಕಾಲ ಹಾಗಲವಾಡಿ ಸಂಸ್ಥಾನವನ್ನು ಆಳಿದರು. ವೀರಶೈವಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ಅತ್ಯಮೂಲ್ಯ ಸೇವೆ ಸಲ್ಲಿಸಿದ್ದಾರೆ. ಇವರಲ್ಲಿ ಭೈರವನಾಯಕನ ಆಳ್ವಿಕೆ ಹೆಚ್ಚು ಪ್ರಸಿದ್ಧಿಯನ್ನು ಪಡೆಯುತ್ತದೆ. ಈ ಸಂದರ್ಭದಲ್ಲಿ ಹಾಗಲವಾಡಿ ಮನೆತನಕ್ಕೆ "ವೀರಶೈವ ಮನೆತನ" ಅಥವಾ "ವೀರಶೈವ ಸಂಸ್ಥಾನ" ಎಂಬ ಕೀರ್ತಿಗೆ ಪಾತ್ರವಾಗುತ್ತದೆ. ಮುದಿಯಪ್ಪನಾಯಕನ ಆಳ್ವಿಕೆಯಲ್ಲಿ "ಹಾಗಲವಾಡಿ ಸಂಸ್ಥಾನ" ಎಂದು ಪ್ರಸಿದ್ಧಿಯನ್ನು ಪಡೆಯುತ್ತದೆ. ಇಮ್ಮಡಿ ಮುದಿಯಪ್ಪನಾಯಕನ ಆಳ್ವಿಕೆಯಂತೂ "ಸುವರ್ಣಯುಗ" ಎನಿಸಿದೆ. ಈ ಮನೆತನ ಕೇವಲ ಸಂಸ್ಥಾನವಲ್ಲ "ಧರ್ಮ ಸಂಸ್ಥಾನ" ಎಂಬ ಖ್ಯಾತಿ ಗಳಿಸಿದೆ. ಹೀಗೆ ಈ ಮನೆತನದ ಅರಸರೆಲ್ಲರೂ ಒಂದೊಂದು ವಿಶೇಷ ಕೀರ್ತಿಗೆ ಭಾಜನರಾಗಿದ್ದಾರೆ."[೪೦]

೧೭೨೦ ರಲ್ಲಿ ಆಳ್ವಿಕೆಗೆ ಬಂದ ಇಮ್ಮಡಿ ಮುದಿಯಪ್ಪನಾಯಕನು ಸ್ವತಃ ಧರ್ಮಿಷ್ಠನೂ, ಯೋಗಿಯೂ, ಕವಿಯೂ ಆಗಿದ್ದನು. ಉತ್ತಮ ಸಂಸ್ಕಾರ, ವಿದ್ಯೆ, ಆದರ್ಶಗಳನ್ನು ಹೊಂದಿದ ಈತ ಧರ್ಮ, ಸಾಹಿತ್ಯ, ಸಂಸ್ಕೃತಿಗಳಿಗೆ ಅನನ್ಯವಾದ ಕೊಡುಗೆಯನ್ನು ಕೊಟ್ಟಿದ್ದಾನೆ. ಧರ್ಮ ಸಮನ್ವಯ ದೃಷ್ಟಿ, ನೀತಿಮಾರ್ಗ, ವಿವೇಕಯುತ ಆಡಳಿತಕ್ಕೆ ಹೆಸರುವಾಸಿಯಾಗಿದ್ದಾನೆ.

ಈ ಇಮ್ಮಡಿ ಮುದಿಯಪ್ಪನಾಯಕನು ಪರಲೋಕ ಸಾಧನೆಗೋಸ್ಕರ ಕಾಶಿಯಲ್ಲಿರುವ ಮಹಾಜ್ಞಾನಿಗಳೂ, ಅನುಭಾವಿ, ಶಿವಯೋಗಿ ಹಾಗೂ ಕವಿಯೂ ಆದ ಮುದ್ವೀರಸ್ವಾಮಿಯನ್ನು ತನ್ನ ಆಸ್ಥಾನಕ್ಕೆ ಬರಮಾಡಿಕೊಂಡನು. ಅವರನ್ನೇ ತನ್ನ ರಾಜಗುರುವೆಂದು ಸ್ವೀಕರಿಸಿದನು. ಇವರಿಂದ ತತ್ವಜ್ಞಾನೋಪದೇಶವನ್ನು ಪಡೆದು ಸಕಲ ಸಾಮ್ರಾಜ್ಯಯುಕ್ತವಾದ ರಾಜ್ಯಭಾರವನ್ನು ತ್ಯಜಿಸಿ ಜೀವನ್ಮುಕ್ತಿ ಪಡೆಯಲು ಅನುವಾದನು ಎಂಬುದಾಗಿ ತಿಳಿದುಬರುತ್ತದೆ.

ಅಂದರೆ ಹಾಗಲವಾಡಿ ಪಾಳೆಯಗಾರರ ಮನೆತನಕ್ಕೆ ಸೇರಿದ ಇಮ್ಮಡಿ ಮುದಿಯಪ್ಪನಾಯಕನು ಕಾಶಿಯಿಂದ ಕರೆದು ತಂದ ಅನುಭಾವಿ ಕವಿಯೇ ಈ ಹಾಗಲವಾಡಿ ಮುದ್ವೀರಸ್ವಾಮಿ.

ಸ್ಥಳ : ಮೂಲತಃ ಮುದ್ವೀರಸ್ವಾಮಿ ಕನ್ನಡ ನಾಡಿನವನೇ. ವಿದ್ಯಾಭ್ಯಾಸಕ್ಕೆಂದು ಕಾಶಿಗೆ ಹೋದ ಈತನನ್ನು ಮುದಿಯಪ್ಪನಾಯಕನು ಕರೆಸಿಕೊಂಡು ಧರ್ಮೋಪದೇಶ, ವೀರಶೈವ ತತ್ವಪ್ರಚಾರ ಕಾರ್ಯದಲ್ಲಿ ತೊಡಗಿಸಿದ್ದಾನೆ. ಕೆಲವು ಕಾಲಾನಂತರ ದೇಶ ಸಂಚಾರ ಕೈಗೊಂಡು ಮರಳಿ ಹಾಗಲವಾಡಿಗೆ ಬಂದು, ಅಲ್ಲಿಯೇ ಸಾಹಿತ್ಯ ಸೃಷ್ಟಿ ಮಾಡುತ್ತಾ ಅಂತ್ಯಕಾಲವನ್ನು ಕಳೆದಿರುವನು. ಈ ಮಾತಿಗೆ ಪೂರಕವಾಗಿ ಅವನ ಸಮಾಧಿ ಹಾಗಲವಾಡಿಯಲ್ಲಿಯೇ ಇದೆ ಎಂಬುದನ್ನು ಗಮನಿಸಬಹುದು.

ಆದರೆ ಈತನಿಗೆ ಬೆಂಗಳೂರು ಮುದ್ವೀರಸ್ವಾಮಿ ಎಂದು ಕರೆಯಲಾಗುತ್ತದೆ. ಆದರೆ ಬೆಂಗಳೂರಿಗು ಈತನಿಗೂ ಸಂಬಂಧವಿರುವ ಯಾವ ಖಚಿತ ಆಧಾರಗಳೂ ದೊರಕಿಲ್ಲದ ಕಾರಣವಾಗಿ, ಈತ ಹಾಗಲವಾಡಿ ಮುದ್ವೀರಸ್ವಾಮಿ ಎಂಬುದೇ ಸೂಕ್ತವಾಗಿದೆ.[೪೧]

ಕಾಲ : ಕವಿಚರಿತೆಕಾರರು ಮುದ್ವೀರಸ್ವಾಮಿಯ ಕಾಲ ೧೭೦೦[೪೨] ಎಂದಿರುವರು. ಇದು ಮುದಿಯಪ್ಪನಾಯಕನ ಆಳ್ವಿಕೆಯ ಕಾಲಕ್ಕಿಂತ ೨೦ ವರ್ಷ ಹಿಂದೆ ಹೋಗುತ್ತದೆ. ಅಂದರೆ ಕಾಶಿಯಿಂದ ಹಾಗಲವಾಡಿಗೆ ಬಂದ ಮುದ್ವೀರಸ್ವಾಮಿ ೧೭೨೦-೧೭೪೦ರ ಸುಮಾರಿನಲ್ಲಿ ಸಾಹಿತ್ಯ ರಚಿಸಿರಬಹುದು. ೧೭೪೪ ರಲ್ಲಿ ಅವುಗಳನ್ನು ಬೇರೊಬ್ಬ ಲಿಪಿಕಾರ ಪ್ರತಿಗೊಳಿಸಿರಬೇಕೆಂದು ತಿಳಿದಾಗ, ಈತನ ಕಾಲ ೧೭೦೦ ರಿಂದ ೧೭೭೦ ಎಂದು ಹೇಳಬಹುದು.

ಗುರುಪರಂಪರೆ :

ಮುದ್ವೀರಸ್ವಾಮಿ ತನ್ನ "ಶಿವತತ್ವಸುಜ್ಞಾನ ಪ್ರದೀಪಿಕೆ"ಯನ್ನು "ಉರುವೀರಶೈವ ಷಟ್‌ಸ್ಥಲ ಸ್ಥಾಪನಾಚಾರ್ಯವರವರ್ಯ ಮುರಿಗೆಸ್ವಾಮಿಗಳ್ಸ್ವಪ್ನದೊಳ್[೪೩] ಕರುಣದಿಂದ ಪ್ರಸನ್ನವಾಗಮಲ ತಾಂಬೂಲ ಪ್ರಸಾದವಿತ್ತು ತರಳ ನೀ ಬದುಕು ಬದುಕೆಂದು ಶಿರದೊಳಗಭಯಕವಿರಿಸಿ ಮನ್ಮನೋಂಬುಜ ಚಾರು ಕರ್ಣಿಕಾಂತರದೊಳಂತರ್ಭಾವವಾದನಂತರದೊಳ್" ಬರೆಯಲು ಪ್ರಾರಂಭಿಸಿದುದಾಗಿ ತಿಳಿಸಿದ್ದಾರೆ. ಅಂದರೆ ಸ್ವಪ್ನದಲ್ಲಿ ಕಾಣಿಸಿಕೊಂಡ ಮುರಿಗೆಸ್ವಾಮಿ, ಕಟ್ಟಿಗೆಹಳ್ಳಿ ಸಿದ್ಧಲಿಂಗರ ಶಿಷ್ಯರೂ ೧೬೫೬-೧೭೦೩ರಲ್ಲಿದ್ದ ಮುರಿಗೆ ಶಾಂತವೀರನಾಗಿರಬೇಕು. ಇವರು ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರುತ್ತಾರೆ. ಮುದ್ವೀರಸ್ವಾಮಿ ಮುರಿಗೆಶಾಂತವೀರನನ್ನು ಗುರುವೆಂದು ಸೂಚಿಸಿರುವುದರಿಂದರ ಇವರೂ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರುತ್ತಾನೆಂದು ಹೇಳಬಹುದು. ಆದರೆ ಇಲ್ಲಿಯವರೆಗೂ ದೊರೆತ ತೋಂಟದ ಸಿದ್ಧಲಿಂಗರ

ಶಿಷ್ಯಪರಂಪರೆಯಲ್ಲಿ ಎಲ್ಲಿಯೂ ಮುದ್ವೀರಸ್ವಾಮಿಯ ಹೆಸರು ಸೇರಿರುವುದಿಲ್ಲ. ಸ್ವತಃ ಕವಿಯೇ ಹೇಳುವುದರಿಂದ ಈತ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದವ. ಈತನ ಗುರು ಮುರಿಗೆ ಶಾಂತವೀರ ಎಂದು ಹೇಳಬಹುದು.

ಮುದ್ವೀರಸ್ವಾಮಿ ತನ್ನನ್ನು "ಶ್ರೀಮದ್ ವೇದಶಿರಃ ಶಿವಾಗಮ ಪ್ರಭುತಿ ಪ್ರಭೂತ ಪುರಾತನಗೀತಾವದ್ಯ ಪ್ರವೀಣ ಶ್ರೀ ವೀರಶೈವ ಷಟ್‌ಸ್ಥಲಸ್ಥಾಪನಾಚಾರ್ಯವರ್ಯ ಮುದ್ವೀರಯೋಗಿ" ಎಂದು ಕರೆದುಕೊಂಡಿದ್ದಾನೆ. ಅಂದರೆ ಸ್ವತಃ ವೇದಾಗಮ ಸಕಲಸಿದ್ಧಾಂತ ಶಾಸ್ತ್ರಪ್ರವೀಣನೂ, ಪುರಾತನ ಶರಣರ ಗೀತಾಸಾಹಿತ್ಯವನ್ನು ಅಭ್ಯಸಿಸಿ ಅರಗಿಸಿಕೊಂಡವನೂ ವೀರಶೈವ ಷಟ್‌ಸ್ಥಲ ಸಿದ್ಧಾಂತದಲ್ಲಿ ಹೆಚ್ಚಿನ ಪ್ರಭುತ್ವವನ್ನು ಗಳಿಸಿ "ಷಟ್‌ಸ್ಥಲಸ್ಥಾಪನಾಚಾರ್ಯ" ಎಂಬ ಬಿರುದನ್ನು ಪಡೆದ ಮಹಾಅನುಭಾವಿಯೂ, ಶಿವಯೋಗಿಯೂ ಆದ ಕವಿಯಾಗಿದ್ದನೆಂದು ತಿಳಿದುಬರುತ್ತದೆ. ಉಭಯಭಾಷಾ ಪಾಂಡಿತ್ಯವನ್ನು ಪಡೆದ ಈತ ಶಿವಾನುಭವ ಜೊತೆಗೆ ಲೋಕಾನುಭವವನ್ನೂ ಒಳಗೊಂಡ ಸಾಹಿತ್ಯ ರಚನೆ ಮಾಡಿರುವನು.

ಕೃತಿಗಳು : ಶಿವತತ್ವಸುಜ್ಞಾನ ಪ್ರದೀಪಿಕೆ

೧೩೦ ಸ್ವರವಚನಗಳು

೦೧ ವಚನ

ಶಿವತತ್ವಸುಜ್ಞಾನ ಪ್ರದೀಪಿಕೆ :

ಷಟ್ಪದಿ ರೂಪದಲ್ಲಿ ರಚನೆಯಾದ ಈ ಕೃತಿ ಮುದ್ವೀರಸ್ವಾಮಿಯ ಅಪ್ರಕಟಿತ ಕೃತಿ. ಕನ್ನಡ ಅಧ್ಯಯನಪೀಠದ ૩೦೫ನೆಯ ತಾಮ್ರಪ್ರತಿಯಲ್ಲಿ ಇದು ಇರುವುದಾಗಿ ತಿಳಿದುಬಂದಿದೆ. ಇದಕ್ಕೆ ಶಿವಸುಜ್ಞಾನದೀಪಿಕೆ, ಶಿವತತ್ವಸುಜ್ಞಾನ ದೀಪಿಕೆ, ಶಿವತತ್ವಸುಜ್ಞಾನ ಪ್ರದೀಪಿಕೆ ಎಂಬ ನಾಮಾಂತರಗಳಿವೆ. ೫೦೮ ವಾರ್ಧಕ ಷಟ್ಪದಿ ಹಾಗೂ ೪೪೫ ಸಂಸ್ಕೃತ ಸಾಕ್ಷಿ ಶ್ಲೋಕಗಳನ್ನೊಳಗೊಂಡ ಈ ಕೃತಿ ನಾಲ್ಕು ಅಧ್ಯಾಯಗಳಲ್ಲಿ ವಿಸ್ತೃತಗೊಂಡಿದೆ. ಅಧ್ಯಾಯಗಳಿಗೆ "ಉಪದೇಶ" ಎಂದು ಹೆಸರಿಸಲಾಗಿದೆ. ಒಂದೊಂದು ಉಪದೇಶಕ್ಕೂ ಕ್ರಮವಾಗಿ ಜ್ಞಾನಪಾದ, ಕ್ರಿಯಾಪಾದ, ಚರ್ಯಾಪಾದ ಮತ್ತು ಯೋಗಪಾದ ಎಂದು ಕರೆಯಲಾಗಿದೆ.

ಪ್ರಥಮ ಉಪದೇಶದಲ್ಲಿ ವೀರಶೈವ ತತ್ವಸ್ವರೂಪ ವಿಚಾರ ಬಂದರೆ, ಮುಂದಿನ ಮೂರು ಉಪದೇಶಗಳಲ್ಲಿ ವೀರಶೈವ ಸಮಯ ವಿಚಾರ, ಯೋಗ ಷಟ್‌ಸ್ಥಲಬ್ರಹ್ಮೋಪದೇಶ ವಿಚಾರ ಮತ್ತು ಲಿಂಗಾಂಗ ಸಾಮರಸ್ಯ ವಿಚಾರ ಅಳವಟ್ಟಿದೆ. ಒಟ್ಟಿನಲ್ಲಿ ಷಟ್‌ಸ್ಥಲತತ್ವ ಅಥವಾ ಲಿಂಗಾಂಗ ಸಾಮರಸ್ಯ ತತ್ವಬೋಧನೆಯನ್ನು ಮಾಡುವುದು ಈ ಕೃತಿಯ ಮುಖ್ಯ ಉದ್ದೇಶವಾಗಿದೆ.

ಕೃತಿಯ ಆಕರ : ಸೋಸಲೆ ರೇವಣಾರಾಧ್ಯರು ಸಂಸ್ಕೃತದಲ್ಲಿ ರಚಿಸಿದ "ಷಟ್‌ಸ್ಥಲ ಬ್ರಹ್ಮದೀಪಿಕೆ" ಎಂಬ ಕೃತಿಯನ್ನು ಸಾರಸಂಗ್ರಹ ರೂಪದಲ್ಲಿ ಕನ್ನಡದಲ್ಲಿ "ಶಿವತತ್ವಸುಜ್ಞಾನ ದೀಪಿಕೆ" ಎಂದು ಹೆಸರಿಟ್ಟು ಬರೆದಿರುವುದಾಗಿ ತಿಳಿದುಬರುತ್ತದೆ.

"ಧಾರುಣಿಯೊಳಧಿಕವಹ ಸ್ವಾಸಲಿ ಪುರವಾಸ
ಶ್ರೀರೇವಣಾರಾಧ್ಯರಿಂದೆರ ಮಾಡಲುಪಟ್ಟ
ದಾರಮ್ಯತರವಾದ ಷಟ್‌ಸ್ಥಲಬ್ರಹ್ಮದೀಪಿಕೆಯೆಂಬ ಸಂಗ್ರಹವದ
ಆರೈದು ಬಳಿಕಲಾ ದೀಪಿಕಾ ಸಂಗ್ರಹದ
ಸಾರಗ್ರಂಥಾರ್ಥವನೆ ಕನ್ನಡ ಪದಗಳಿಂ
ಸೇರುವೆಯ ಮಾಡಿ ವರದಪೆನು ಶಿವಸುಜ್ಞಾನ ದೀಪಿಕೆಯ ನಲಿವಿನಿಂದೆ"[೪೪]

ಈ ಕೃತಿ ರಚನೆಗೆ ಪ್ರೇರಣೆ ನೀಡಿದವನು "ವೀರಶೈವ ಷಟ್‌ಸ್ಥಲಸ್ಥಾಪನಾಚಾರ್ಯ" ಎನಿಸಿದ ಗುರು ಮುರಿಗೆಸ್ವಾಮಿ. ಕೇಳಿದವನು "ಗುರುಭಕ್ತಗಣ ಶಿರೋಗ್ಗರಣಿ" ಎನಿಸಿದ ಹಾಗಲವಾಡಿಯ ಮುದಿಯಪ್ಪನಾಯಕ ಎಂಬ ವಿಷಯ ಕೆಳಗಿನ ಪದ್ಯಗಳಿಂದ ವಿಧಿತವಾಗುತ್ತದೆ.

ಉರು ವೀರಶೈವ ಷಟ್‌ಸ್ಥಲ ಸ್ಥಾಪನಾಚಾರ್ಯ
ವರವರ್ಯ ಮುರಿಗೆಯ ಸ್ವಾಮಿ..........[೪೫]

ಪರಮ ಶುದ್ಧ ಪ್ರಸಾದ ಪ್ರಣವ ಬೀಜವನು
ನಿರುತಮಿಕಿ ಹೊಂದಿರ್ಪ ವರರಕ್ಷಿಪಮಲತರ
ವರನಾಮಧೇಯದಿಂದೆಸೆವ ಹಾಗಲವಾಡಿ ಘನಮರವರಾಧೀಶ್ವರ
ಗುರುಭಕ್ತಗಣ ಶಿರೋಗ್ರಣಿಯೆನಿಪ ಮುದಿಯಾಖ್ಯ
ಧರಣಿಪಾಲಕನು ಕೇಳಿದ ವಾಕ್ಯಕುತ್ತರವ
ನಿರವಿಸಿದಪೆಂ ಸಕಲ ಭಕ್ತ ಮಾಹೇಶ್ವರರ ಪಾದಗಳ ನೆನೆದು ಮುದದಿಂ[೪೬]

ಕೃತಿ ವಿಷಯ ಷಟ್‌ಸ್ಥಲತತ್ವನಿರ್ಣಯ. ಇದನ್ನು ವೇದ, ಆಗಮ, ಉಪನಿಷತ್ತುಗಳಲ್ಲಿ ಅಡಕವಾದ ಗ್ರಂಥಗಳ ಆಧಾರದಿಂದ ವಿವರಿಸಲಾಗಿದೆ ಎಂದು ಕೆಳಗಿನ ಪದ್ಯಗಳಲ್ಲಿ ಹೇಳಲಾಗಿದೆ.

"ನಿರುತ ನಿಗಮಾಗಮಾಂತರಗಳೊಳಗತಿ ಗೋಪ್ಯ
ತರವಾದ ಗ್ರಂಥಗಳ ನೋಡಿ ತೆಗದಿಂಗಡಿಸಿ
ಗುರುಪಾದವನೆ ಹೃದಯದೊಳ್ನೆನದು ಶಿವತತ್ವಸುಜ್ಞಾನದೀಪಿಕೆಯಿದಂ
ವರದಪೆನು ಕರ್ನಾಟಕಭಾಷೆಯಿಂದಿದನು ಶಿವ
ಶರಣರೊಲಿದಾಲಿಪುದು ನಿರ್ವಿಘ್ನತೆಯಗಿತ್ತು
ಕರುಣದಿಂ ಪಾಲಿಪುದು ಮನದ ಮರವೆಂದು ಬಿಡಿಸಿ ಮಡಿವಂತನೆನಿಸಿಳೆಯೊಳು[೪೭]

ವೇದಾಗಮೋಪನಿಷದಂಗೊಳ್ಪ್ರಚುರತರ
ವಾದ ಮೂವತ್ತಾರು ತತ್ವಗಳಿಂಗಿತವ
ಸಾದರದಿ ಪಂಚವಿಧ ಷಟ್‌ಸ್ಥಲದ ನಿರ್ಣಯವನತ್ತಿಭಕ್ತಿಯಿಂದ ನಿಮ್ಮ
ಪಾದಾರವಿಂದಗಳಿಗೆರಗಿ ಕೇಳುತ್ತಿಹೆನು
ನಾದಮಯ ಗುರುವೆ ಪೇಳೆಂದು ಕೇಳ್ಮದಿಯ
ಮೇದಿನಿಯಪತಿಗೊಲಿದು ಪೇಳ್ವೆನು ಶಿವತತ್ವಸುಜ್ಞಾನ ದೀಪಿಕೆಯಿದಂ[೪೮]

ಕೃತಿಯ ಆದಿಯಲ್ಲಿ ಇಷ್ಟದೈವ ಗುರುಸಂಗಮೇಶ್ವರ, ಶಿವ, ಪಾರ್ವತಿ, ಗಣವರರು, ನಂದೀಶ, ವೀರೇಶ, ವಿಘ್ನೇಶ, ಷಣ್ಮುಖ, ಭೃಂಗೀಶ, ಪ್ರಭುಸ್ವಾಮಿ, ಬಸವೇಶ, ಚೆನ್ನಬಸವೇಶ, ಮರುಳಶಂಕರದೇವ, ಮಾಚಿದೇವಾರ್ಯ, ಶಿವವರಯೋಗಿ ಸಿದ್ಧರಾಮಯ್ಯ ಹಾಗೂ ಹರಗಣ ಸಮೂಹವನ್ನು ಸ್ತುತಿಸಲಾಗಿದೆ. ೧೨ನೆಯ ಪದ್ಯದಿಂದ ತತ್ವನಿರೂಪಣೆ ಆರಂಭವಾಗುತ್ತದೆ. ವೇದ, ಆಗಮ, ಉಪನಿಷತ್ತುಗಳಿಂದ ಸಂಸ್ಕೃತ ಶ್ಲೋಕಗಳನ್ನು ಎತ್ತಿಕೊಂಡು ಉದ್ಧರಿಸುತ್ತ ವೀರಶೈವ ಷಟ್‌ಸ್ಥಲ ತತ್ವವನ್ನು ಸರಳ ಷಟ್ಪದಿಯಲ್ಲಿ ನಿರೂಪಿಸಲಾಗಿದೆ. ಹೀಗಾಗಿ ವೀರಶೈವ ತತ್ವಪ್ರಧಾನ ಕೃತಿಗಳಲ್ಲಿ ಇದು ಪ್ರಮುಖ ಸ್ಥಾನವನ್ನು ಪಡೆದುಕೊಳ್ಳುತ್ತದೆ.

ಕೃತಿ ಆದಿಯಲ್ಲಿ "ಶ್ರೀಗುರುಬಸವಲಿಂಗಾಯನಮಃ ಶಿವತತ್ವ ಸುಜ್ಞಾನ ಪ್ರದೀಪಿಕೆ ಬರೆಯುವುದಕ್ಕೆ ಶುಭಮಸ್ತು" ಎಂದಿದ್ದು, ನಂತರ ಒಂದು ಸಂಸ್ಕೃತ ಶ್ಲೋಕದಲ್ಲಿ ಗುರು, ಗಣೇಶ, ಕುಮಾರ, ವೀರಭದ್ರ, ನಂದೀಶ, ಶಿವಯೋಗಿ – ಎಲ್ಲರನ್ನೂ ಒಟ್ಟಾಗಿ ಸ್ತುತಿಸಲಾಗಿದೆ.

ಅನಂತರದ 'ಪಲ್ಲವಿ'ಯಲ್ಲಿ ಕಾವ್ಯ ವಿಷಯದ ಸಾರಸಂಗ್ರಹವನ್ನು

"ಶ್ರೀವೇದ ಸಿದ್ಧಾಂತಗಳ ಸಾಮರಸ್ಯಾರ್ಥ
ವೀ ವಿಮಲ ಶಿವತತ್ವ ಸುಜ್ಞಾನ ದೀಪಿಕೆಯಾ"

ಎಂದು ಹೇಳುತ್ತಾನೆ. ಮುಂದುವರಿದು ನಾಲ್ಕನೆಯ ಉಪದೇಶದ ೧೭೦ನೆಯ ಷಟ್ಪದಿಯಲ್ಲಿ ಕಾವ್ಯ ಅಧ್ಯಯನದಿಂದ ದೊರೆಯುವ ಫಲವನ್ನು ತಿಳಿಸುತ್ತಾನೆ.

ಇಂತಪ್ಪ ದಿವ್ಯಲಿಂಗಾಂಗ ಸಂಬಂಧವನು
ಸಂತತಾ ಬರೆದೋದಿ ಕೇಳಿದವರಿಗೆ ಕರುಣ
ಪಾಂತು ಗುರುಸಂಗಮೇಶ್ವರ ಸಕಲ ಸಿದ್ಧಿಗಳನಿತ್ತು ರಕ್ಷಿಸುತಿರ್ಪನು
ಅರಿತವರ ಭಾವವನು ತಿಳಿದನುಭವಿಪ ಶರಣ
ಸಂತತಿಯ ತನ್ನೊಳೇಕಾರ್ಥನು ಮಾಡಿ ಪರ
ಶಾಂತ ಜ್ಯೋತಿಯ ಬೆಳಗಿನೊಳು ಬೆರಸಿ ಕರುಣಿಪನು ಕಂತುಹರನನವರಿತವು ॥

ಕೃತಿಯ ಅಂತ್ಯದಲ್ಲಿ ಈ ಕೆಳಗಿನ ಗದ್ಯಬರಹವಿದೆ.

ಇತಿ ವೇದ ವೇದ ಶಿರಃ ಶಿವಾಗಮ ಪ್ರಭುತಿ ಪ್ರಭಾತ
ಪುರಾತನಗೀತನ ಪದ್ಯ ಪ್ರವೀಣ ಶ್ರೀವೀರಶೈವ ಷಟ್‌ಸ್ಥಲ
ಸ್ಥಾಪನಾಚಾರ್ಯವರ್ಯ ಮುದ್ವೀರಯೋಗಿ ವಿರಚಿತಾಯಾಂ ಶಿವತತ್ವ
ಸುಜ್ಞಾನ ಪ್ರದೀಪಿಕಾಯಾಂ ಚತುಃಪಾದ ಪ್ರತಿಪಾದಿತ ರಾಜಯೋಗ
ಅಂಗಾಂಗ ಸಂಬಂಧ ಚತುರ್ಥೋಪದೇಶಃ
ಪರಿಸಮಾಪ್ತ ಮಂಗಳ ಮಹಾ ಶ್ರೀ ಶ್ರೀ ಶ್ರೀ

ಹೀಗೆ ಈ ಕೃತಿಯು ವೀರಶೈವ ಷಟ್‌ಸ್ಥಲತತ್ವವನ್ನು ಸರಳ ಷಟ್ಪದಿಯಲ್ಲಿ ವಿವರಿಸುವ ಮಹತ್ವದ ತತ್ವಪ್ರಧಾನ ಕೃತಿ ಎಂದು ಹೇಳಬಹುದು. ಕೃತಿ ಪ್ರಕಟವಾದರೆ ಇನ್ನೂ ಹೆಚ್ಚಿನ ಅಂಶಗಳನ್ನು ಅರಿತುಕೊಳ್ಳಬಹುದು.

ಸ್ವರವಚನಗಳು :

ಮುದ್ವೀರಸ್ವಾಮಿಯ ೧೩೦ ಸ್ವರವಚನಗಳು ಪ್ರಕಟವಾಗಿವೆ. ಇವುಗಳಲ್ಲಿ ೧೦೭ ಸ್ವರವಚನಗಳನ್ನು ಡಾ॥ ವೀರಣ್ಣ ರಾಜೂರ ಅವರು "ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು" ಎಂಬ ಕೃತಿಯಲ್ಲಿ ೨೦ ಸ್ವರವಚನಗಳನ್ನು ಸ್ವರವಚನ ಸಂಪುಟ. (ಸಂ. ವೈ.ಸಿ. ಭಾನುಮತಿ)ದಲ್ಲಿ ಪ್ರಕಟಿಸಲಾಗಿದೆ. ಈ ನಂತರ ಡಾ॥ ರಾಜೂರ ಅವರಿಗೆ ಮತ್ತೆರಡು ಸ್ವರವಚನಗಳು ದೊರೆತಿರುವುದಾಗಿ ತಿಳಿಸಿದ್ದಾರೆ. ಇವುಗಳ ಜೊತೆ ಮುದ್ವೀರಸ್ವಾಮಿಯ ೧ ವಚನವನ್ನೂ ಸೇರಿಸಿದ್ದಾರೆ. ಇವರ ಪ್ರಕಟಿತ ಸ್ವರವಚನಗಳ ಸಂಖ್ಯೆ ಒಟ್ಟು ೧೩೦. ಕಾಲಾನಂತರ ಇವುಗಳ ಶೋಧಕಾರ್ಯ ನಡೆದರೆ ಇನ್ನೂ ಹೆಚ್ಚಿನ ಸ್ವರವಚನಗಳು ಸಿಗುವ ಸಾಧ್ಯತೆ ಇದೆ.

ಮುದ್ವೀರಸ್ವಾಮಿಯ ಸ್ವರವಚನಗಳು ಸಂಪೂರ್ಣವಾಗಿ ಲೋಕನೀತಿ ಬೋಧನೆಗಾಗಿಯೇ ರಚಿತವಾಗಿವೆ. ಇವುಗಳಲ್ಲಿ ಅಳವಟ್ಟ ವಿಷಯವೈವಿಧ್ಯ, ರೂಪವೈವಿಧ್ಯ, ರಚನಾ ಬಂಧುರತೆ, ಭಾವನ ಉತ್ಕಟತೆ, ಗೇಯತೆ, ನಿರರ್ಗಳತೆ ಹಾಗೂ ಶೈಲಿಯ ನಿರಾಡಂಬರತೆಗಳು ಮುದ್ವೀರಸ್ವಾಮಿ ಒಬ್ಬ ಮೇಲ್ಮಟ್ಟದ ಅನುಭಾವಕವಿ ಎಂಬುದನ್ನು ಎತ್ತಿ ತೋರುತ್ತವೆ.

ಮುದ್ವೀರಸ್ವಾಮಿ ಅನುಭಾವಿ ಆಗಿರುವಂತೆ ಶ್ರೇಷ್ಠಯೋಗಿಯೂ ಆಗಿರುವನು. ಹೀಗಾಗಿ ಇವನ ಸ್ವರವಚನಗಳಲ್ಲಿ ಯೋಗತತ್ವದ ವಿಚಾರವೇ ಅಡಕವಾಗಿದೆ. ಅದರಲ್ಲೂ ವಿಶೇಷವಾಗಿ ಶಾಂಭವಯೋಗದ ವಿವರ ಹೆಚ್ಚಾಗಿ ಬಂದಿದೆ. ಜೊತೆಗೆ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಮುದ್ರೆಗಳು, ಪದಾರ್ಥತ್ರಯ, ಅರ್ಪಿತಾತ್ರಯ, ಮಲತ್ರಯ, ಆಧಾರತ್ರಯ, ತಾರಕತ್ರಯ, ಅಂಗಲಿಂಗತ್ರಯ, ತ್ರಿವಿಧಾರ್ಪಣ, ಅಷ್ಟಾಂಗಯೋಗ, ಶಿವಯೋಗ, ಪಂಚಾಕಾಶ, ಪಂಚಸೂತಕ

ಮೊದಲಾದ ವಿಷಯಗಳು ವರ್ಣಿತವಾಗಿವೆ. ಕೆಲವೆಡೆ ವಿಶೇಷವೆಂಬಂತೆ ಸ್ವರವಚನಗಳು ನೀತಿ ಮತ್ತು ಸ್ತುತಿಗಳಿಗಾಗಿ ಮೀಸಲಾಗಿವೆ. ಮುದ್ವೀರಸ್ವಾಮಿಯ ಸ್ವರವಚನದ ಅಂಕಿತ "ಗುರುಸಂಗ" ಎಂದಿದೆ.

(೧) ಹೆಚ್ಚಿನ ಸ್ವರವಚನಗಳು 'ಗುರುಸಂಗ' ಎಂಬ ಅಂಕಿತನಾಮವನ್ನೇ ಹೊಂದಿವೆ. ಇನ್ನುಳಿದ ಕೆಲವು ಕಡೆ ಸಂಗ, ಸಂಗಮೇಶ, ಶ್ರೀಗುರು ಸಂಗಮೇಶ, ಗುರುಸಂಗಮೇಶ್ವರ, ಗುರುಮುದ್ವೀರೇಶ, ಮುದ್ವೀರದೇಶಿಕೋತ್ತಮ ಇಷ್ಟಲಿಂಗ ಎಂದು ವೈವಿಧ್ಯಮಯ ಅಂಕಿತಗಳನ್ನು ಬಳಸಿರುವನು.

(೨) ಸ್ವರವಚನಗಳು ಛಂದೋರೂಪದ ದೃಷ್ಟಿಯಿಂದ ವೃತ್ತ, ಷಟ್ಪದಿ, ಸಾಂಗತ್ಯ, ಏಳೆ, ಚೌಪದಿ ಮತ್ತು ನಾಲ್ಕು ಪಾದದ ವಿಶಿಷ್ಟ ಕನ್ನಡ ದೇಶಿಮಟ್ಟುಗಳನ್ನು ಒಳಗೊಂಡಿವೆ. ಸಾಹಿತ್ಯರೂಪದ ದೃಷ್ಟಿಯಿಂದ ನೋಡಿದರೆ - ಸ್ತೋತ್ರ, ಜೋಗುಳಪದ, ಸುವ್ವಿ, ಪರಾಕು, ಉಪ್ಪವಡಿಸುವ ಹಾಡು, ಚಂದಮಾಮಾ, ತಾಲೆಲೆ, ಮಂಗಳಾರತಿ ಮೊದಲಾದ ಪ್ರಕಾರಗಳಲ್ಲಿ ರಚನೆಯಾಗಿವೆ.

(೩) ಹೆಚ್ಚಿನ ಸ್ವರವಚನಗಳು ರಾಗ-ತಾಳಗಳನ್ನು ಹೊಂದಿವೆ.

(೪) ಸ್ವರವಚನಗಳ ರಚನೆ ಸಂಪೂರ್ಣವಾಗಿ ಲೋಕಾನುಭವದಿಂದ ಕೂಡಿದ್ದು, ಲೋಕನೀತಿಬೋಧೆಗೆ ಹೆಚ್ಚಿನ ಪ್ರಾಶಸ್ತ್ಯಯಕೊಟ್ಟಂತಿವೆ. ಜೊತೆಗೆ ತತ್ವಪ್ರಧಾನವಾದ ಸ್ವರವಚನಗಳೂ ಕಂಡುಬರುತ್ತವೆ. ಮುಖ್ಯವಾಗಿ ಸತಿ-ಪತಿ ಭಾವವನ್ನು ಅಳವಡಿಸಿಕೊಂಡ ಸ್ವರವಚನಗಳು ಮೃದುಮಧುರಭಾವ, ಆತ್ಮೀಯ ಶೈಲಿಗಳಿಂದ ಕೂಡಿವೆ.

(೫) ಭಾಷೆ ಬಂಧುರವಾಗಿದೆ. ಶಿಷ್ಟ ಮತ್ತು ದೇಶಿ ಭಾಷೆಗಳ ಮಿಶ್ರಣ ಎದ್ದು ಕಾಣುತ್ತದೆ. ತಾತ್ವಿಕ ಪದಗಳಲ್ಲಿಯ ಭಾಷೆ ಬಂಧುರವಾಗಿದ್ದರೆ, ನೀತಿಬೋಧಕ ಹಾಗೂ ಮಧುರಭಕ್ತಿಯಿಂದ ಕೂಡಿದ ಸ್ವರವಚನಗಳಲ್ಲಿ ಅದು ಸರಳವಾಗಿದೆ.

ಒಂಬತ್ತು ನುಡಿಗಳಲ್ಲಿ ರಚನೆಯಾದ "ಶಾಂಭವಿಯ ನಿಲವು" ಎಂಬ ಸ್ವರವಚನಗವು- ಶಾಂಭವ ಯೋಗದ ಮಹತ್ವವನ್ನು ಸಾರುತ್ತದೆ.

"ಆರಿಗಿದು ಸಾಧ್ಯವಹುದು । ಪಡೆವಡೆ
ಸಾರ ಶಾಂಭವಿಯ ನಿಲವು । ತಾನು ॥ಪ॥

ಒಳಗೆ ನಿಂದಿಹ ಮನವದು । ಬಹಿರ್ದೃಷ್ಟಿ
ಬಳಕೆ ಪಂಚಾನನವದು । ತಾನು
ಹೊಳೆವ ಲಿಂಗಾಂಗ ಸಂಗದೇಕತ್ವ

ಮಿಳಿತ ಶಾಂಭವೀ ನಿಜವು ತಾನು ॥೪॥

ಶಾಂಭವಿಯ ಮುದ್ರೆಯೆನಲು । ಲಿಂಗಾಂಗ
ಸಂಬಂಧದಿಂಗಿತವದು । ತಾನು
ಶಾಂಭವೀ ಸತಿಪತಿಗಳ ಸಮರತಿಯ
ಸಂಭ್ರಮದ ಸಮರಸವದು ತಾನು ॥೮॥

"ಶ್ರೀಜ್ಯೋತಿರ್ಮಯಶಾಂಭವ ಜ್ಞಾನದೀಕ್ಷಾಬೋಧೆ" ಎಂಬ ಸ್ವರವಚನವನ್ನು ಐದು ನುಡಿಗಳಲ್ಲಿ ಚೌಪದಿ ರೂಪದಲ್ಲಿ ಕಲ್ಯಾಣಿ ರಾಗದಲ್ಲಿ ವಿವರಿಸಿದ್ದಾರೆ. "ಕುಲಕ್ಯಾಕೆ ಹೋರುತಿಹರು" ಎಂಬ ಶಂಕರಾಭರಣ ರಾಗದಲ್ಲಿ ರಚಿತವಾದ ಸ್ವರವಚನವು ನಿಜವಾದ ಕುಲವಾವುದೆಂಬುದನ್ನು ಎತ್ತಿ ತೋರುತ್ತದೆ. ಬ್ರಾಹ್ಮಣ, ಶೂದ್ರ, ಮಾದಿಗ ಕುಲಗಳನ್ನು ಹೆಸರಿಸುತ್ತಾ ನಿರ್ಮಲ ಭಾವ, ನಿರ್ಮಲ ಮನಸ್ಸನ್ನು ಹೊಂದಿದ ಶುದ್ಧಾತ್ಮನೇ ನಿಜವಾದ ಕುಲಜ ಎಂದಿರುವರು.

ಹದಿನೆಂಟು ತರದ ಭಕ್ತಿಗಳನರಿತು, ಪ್ರಾಣಲಿಂಗವನು ಹೃದಯ ಕಲಮಕರ್ಣಿಕಾಮಧ್ಯದೊಳು ಭಜಿಸುವವನಿಗೆ, ಭಾವಲಿಂಗವದು ಮೀರಿ ಅಮಲಜ್ಞಾನದಿಂದ ಗುರುಸಂಗವನ್ನು ನೆನೆದರೆ ಮಾತ್ರ ಮುಕುತಿ ದೊರೆಯುತ್ತದೆ ಎಂದಿದ್ದಾರೆ.

"ಶರಣು ಶ್ರೀ ಗುರುವೆ ಕಾರುಣ್ಯ ಸಾ
ಗರವೆ ನಿಜ ನಿರ್ವಾಣದಿರವೆ ಪರವೆ
ಶರಣಜನಸುರತರುವೆ ಸುಜ್ಞಾನ ಮಂದಿರವೆ
ತ್ವರಿತದಿಂದೆನ್ನ ಪೊರೆದ ಗುರುವೆ"

ಎಂಬ 'ಕಲ್ಯಾಣಿ' ರಾಗದಲ್ಲಿ ರಚಿತವಾದ ಸ್ವರವಚನದಲ್ಲಿ ಗುರುವಿನ ಮಹತ್ವವನ್ನು ಹೇಳಿದ್ದಾರೆ.

"ಏನೆಂಬೆನೆನ್ನ ಸಿರಿಯ" ಈ ಸ್ವರವಚನದಲ್ಲಿ ಸಿರಿಸಂಪತ್ತುಗಳು ಶಾಶ್ವತವಲ್ಲ, ಕ್ಷಣಿಕವಾದವುಗಳು ಎಂಬ ಲೋಕನೀತಿಯನ್ನು ಹೀಗೆ ವಿವರಿಸುತ್ತಾರೆ.

"ಏನೆಂಬೆನೆನ್ನ ಸಿರಿಯ ಚಂದಮಾಮಾ । ಪರ
ಮಾನಂದ ಭರಿತನಾದೆ ಚಂದಮಾಮಾ ॥ಪ॥
ಗಿರಿಯ ಕೊನೆಯ ಮೊನೆಯ ಮೇಲೆ ಚಂದಮಾಮಾ ॥ಮೂರು॥
ಪರಿವ ನದಿಗಳ ನಡುವೆ ಚಂದಮಾಮಾ
ಉರಿವ ಜ್ಯೋತಿನಿಳಯದೊಳಗೆ ಚಂದಮಾಮಾ । ನಿರುತ
ಗುರುಸಂಗನೊಳಗೆ ಬೆರದೆ ಚಂದಮಾಮಾ ॥

ನುಡಿದಂತೆ ನಡೆವುದೇಕಿಲ್ಲ, ಏ ಮನೆ, ಜಪಿಸು ಪಂಚಾಕ್ಷರಿಯ, ವ್ಯರ್ಥವಾಗಲಿವೇಡವೆಲೆ ಮಾನವ, ನಲ್ಲನಗಲೆ ನಾ ನಿಲ್ಲಲಾರೆನಕ್ಕ, ಗುರುವಿಲ್ಲದಾಗದು, ಶರಣು ಗುರುಬಸವೇಶ, ಲಿಂಗಾಚರಣಂ ಕರುಣಿಪುದು, ಈ ರೀತಿಯ ಸ್ವರವಚನಗಳು ಮುದ್ವೀರಸ್ವಾಮಿಯ ತತ್ವಸಾಹಿತ್ಯವನ್ನು, ಲೋಕನೀತಿಯನ್ನು ಒಳಗೊಂಡು ಸ್ವರವಚನ ಸಾಹಿತ್ಯಕ್ಕೆ ಅಮೂಲ್ಯ ಕೊಡುಗೆಯಾಗಿವೆ ಎಂದು ಹೇಳಬಹುದು.

ಹೀಗೆ ಮುದ್ವೀರಸ್ವಾಮಿಯು ಬಸವಾದಿ ಶರಣರಿಂದ ಜನ್ಮತಳೆದು ನಿಜಗುಣಶಿವಯೋಗಿ, ಮುಪ್ಪಿನ ಷಡಕ್ಷರಿ, ಬಾಲಲೀಲಾ ಮಹಾಂತಶಿವಯೋಗಿ ಸರ್ಪಭೂಷಣ ಶಿವಯೋಗಿ, ಮೈಲಾರದ ಬಸವಲಿಂಗ, ಗುರುಬಸವ, ಮರುಳದೇವ, ಶಂಕರದೇವ ಮೊದಲಾದವರಿಂದ ಹುಲುಸಾಗಿ ಬೆಳೆದು ಬಂದ ಸ್ವರವಚನಸಾಹಿತ್ಯ ಪರಂಪರೆಗೆ ಸೇರುತ್ತಾನೆ. ಶಿವಶರಣರ, ವಚನಕಾರರ ಧೋರಣೆಯನ್ನು, ತತ್ವ-ವಿಚಾರಗಳನ್ನು ಮುಂದುವರೆಸಿಕೊಂಡು ಬರುವುದಲ್ಲದೆ ಸ್ವರವಚನಗಳನ್ನು ರಚಿಸಿ ಆ ಸಾಹಿತ್ಯಕ್ಕೆ ತನ್ನದೇ ಆದ ವಿಶಿಷ್ಟ ಕೊಡುಗೆ ಕೊಟ್ಟಿರುವನು. ಈ ಮೂಲಕ ಮುರುಘಾ ಪರಂಪರೆಯ ಪ್ರಮುಖ ಸ್ವರವಚನಕಾರನಾಗಿಯೂ ಕಂಡುಬರುತ್ತಾನೆ.

ಸೋಮಶೇಖರ ಶಿವಯೋಗಿ (೧೭೦೦) :

ಉನ್ನತ ಮಟ್ಟದ ಟೀಕಾಕಾರನೂ, ಬೆಡಗಿನ ವಚನಗಳಿಗೆ ಟೀಕೆ ಬರೆಯುವುದರಲ್ಲಿ ವಿಶಿಷ್ಟ ಪರಿಣತಿ ಪಾಂಡಿತ್ಯವನ್ನು ಪಡೆದವನೂ ಆದ ಸೋಮಶೇಖರ ಶಿವಯೋಗಿ ಮುರಿಗಾ ಗುರುಸಿದ್ಧನ ನೇರ ಶಿಷ್ಯ

ಕಾಲ: ಈತನ ಕಾಲವನ್ನು ಕವಿ ಚರಿತ್ರೆಕಾರರು ಸುಮಾರು ೧೭೦೦ ಎಂದು ನಿರ್ಧರಿಸಿದ್ದರು. ಆದರೆ ತೋಂಟದ ಸಿದ್ಧಲಿಂಗರ ಶಿಷ್ಯಪರಂಪರೆಗೆ ಸೇರಿದ ಈತ, ತೋಂಟದ ಸಿದ್ಧಲಿಂಗರಿಂದ ಎಂಟನೆಯ ತಲೆಮಾರಿಗೆ ಸೇರುತ್ತಾನೆ. ತೋಂಟದ ಸಿದ್ಧಲಿಂಗರ ಕಾಲ ಕ್ರಿ.ಶ. ೧೬೦೦[೪೯] ಎಂದಾದರೆ ಸೋಮಶೇಖರ ಶಿವಯೋಗಿಯ ಕಾಲ ೧೮೦೦ ಆಗುತ್ತದೆ. ಈ ಮಾತಿಗೆ ಪೂರಕವಾಗಿ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಮಾದಾಪುರ ಮಠದಲ್ಲಿರುವ ಶಾಸನದ ವಿಷಯವನ್ನು ನೋಡಬಹುದು.

೧. ಶ್ರೀಮುರಿಗಾಸ್ವಾಮಿಗಳವರ
೨. ಚರಮೂರ್ತಿಗಳಾದಂಥ ಶಾಂತವೀರಸ್ವಾಮಿಗಳವರ ಕರಕಮಲಸಂಜನಿತವಾ
೩. ದ ಸೋಮಶೇಖರಶಿವಯೋಗಿಶ್ವರನು ಕಲಿಸಂದ ೪೯೪೩ ನೆಯ ಶೋಭನಕೃತು ಸಂವತ್ಸರದ ಕಾರ್ತಿಕ ಬ. ೨
೪. ಗುರುವಾರ ರೋಹಿಣೀ ನಕ್ಷತ್ರವ ಪ್ರಾತಃಕಾಲ ಗಂಟೆ ೨ರ ಒಳಗೆ ಯಿ ಗದಿಗೆಯ ಮೇಲೆ ಕಳಶದ ಸ್ಥಾಪನ
೫. ಮಾಡಿದ್ದು.

ಎಂದಿದೆ. ಅಂದರೆ ಸೋಮಶೇಖರ ಶಿವಯೋಗಿಯು ೨೫-೧೦-೧೮೪೩ರಲ್ಲಿ ಬದುಕಿದ್ದ ಎಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.[೫೦]

ಗುರುಪರಂಪರೆ : ಸೋಮೇಶೇಖರ ಶಿವಯೋಗಿಯೇ ಸ್ವತಃ ತನ್ನ ಗುರುಪರಂಪರೆಯನ್ನು ಹೀಗೆ ಹೇಳಿಕೊಂಡಿದ್ದಾನೆ.

"ಶ್ರೀ ಮನ್ನಿರಾಳ ನಿರಾಮಯ ನಿರಂಜನ ನಿಶ್ಶೂನ್ಯ ನಿಕಲ ಪರಬ್ರಹ್ಮವು ತಿಳಿದುಪ್ಪವೆ ಹೆತ್ತುಪ್ಪವಾದ ಹಾಂಗೆ, ಸಚ್ಚಿದಾನಂದ ನಿತ್ಯಪರಿಪೂರ್ಣವೆಂಬ ಪಂಚಲಕ್ಷಣವನು ಗರ್ಭೀಕರಿಸಿಕೊಂಡು, ಘನೀಭೂತವಾಗಿ, ಅಖಂಡಗೋಳಕಾಕಾರ ತೇಜೋಮೂರ್ತಿಯಪ್ಪ ಮಹಾಲಿಂಗದ ಲೀಲಾವಿಗ್ರಹಮೂರ್ತಿಗಳಾದ ತೋಂಟದ ಸಿದ್ಧಲಿಂಗೇಶ್ವರನೆಂಬ ದೇಶಿಕ ಶಿರೋಮಣಿ ಕರುಣ ಪ್ರಸಾದ ಪಾತ್ರರಾದ ಬೋಳಬಸವೇಶ್ವರನು, ಅವರ ಕರುಣಾ ಪ್ರಸಾದ ಪಾತ್ರರಾದ ಗೂಳೂರ ಸಿದ್ಧಲಿಂಗಯ್ಯನವರು, ಅವರ ಕರುಣಾ ಪ್ರಸಾಧ ಪಾತ್ರರಾದ ಗುಮ್ಮಳಾಪುರದ ಸಿದ್ಧವೀರಯ್ಯನವರು, ಅವರ ಕರುಣಾ ಪ್ರಸಾದ ಪಾತ್ರರಾದ ಗಗನದಯ್ಯನವರು, ಅವರ ದಯಾನುಗ್ರಹಕ್ಕೆ ಯೋಗ್ಯರಾದ ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರರು, ಅವರನುಗ್ರಹಪಾತ್ರರಾದ ಮುರಿಗಾ ಶಾಂತವೀರೇಶ್ವರನು, ಅವರಿಂದನುಗ್ರಹವ ಪಡೆದ ಮುರಿಗಾ ಗುರುಸಿದ್ಧೇಶ್ವರನು ಹೀಂಗೆ ಗುರುಸಂಪ್ರದಾಯವಿಡಿದು ಬಂದ ಬಸವಾದಿ ಪ್ರಮಥಗಣಂಗಳ ವಚನಾನುಭವವನು ಬೆಸಗೊಂಡ ಸೋಮಶೇಖರ ಶಿವಯೋಗಿ" ಎಂದು ಹೇಳಿರುವನು. ಇದನ್ನು ಹೀಗೆ ಗುರುತಿಸಬಹುದು.

ತೋಂಟದ ಸಿದ್ಧಲಿಂಗೇಶ್ವರ

↓

ಬೋಳಬಸವೇಶ್ವರ

↓

ಗೂಳೂರ ಸಿದ್ಧಲಿಂಗಯ್ಯ

↓

ಗುಮ್ಮಳಾಪುರದ ಸಿದ್ಧವೀರಯ್ಯ

↓

ಗಗನದಯ್ಯ

↓

ಕಟ್ಟಿಗೆಹಳ್ಳಿ ಸಿದ್ಧಲಿಂಗೇಶ್ವರ

↓

ಮುರಿಗಾ ಶಾಂತವೀರೇಶ್ವರ

↓

ಮುರಿಗಾ ಗುರುಸಿದ್ಧೇಶ್ವರ

↓

ಸೋಮಶೇಖರ ಶಿವಯೋಗಿ[೫೧]

"ಸೋಮಶೇಖರ ಶಿವಯೋಗಿ" ತನ್ನನ್ನು ಶ್ರೀಮದನುಪಮನಿತ್ಯ ಸತ್ಯ ನಿರ್ದ್ವಂದ್ವ ನಿರಾಳ ನಿರತಿಶಯ ನಿರ್ಗುಣ ನಿರಾಧಾರ ನಿರಂಜನ ಲಿಂಗಲೀಲಾವಿಗ್ರಹ, ನಿಗಮಾಗಮಪುರಾಣ ಸ್ಮೃತೇತಿಹಾಸಾದಿ ಸಕಲಶಾಸ್ತ್ರಸನ್ನುತ ಸಚ್ಚಿದಾನಂದ ಸನ್ಮುನಿಜನವಂದಿತ ಇಂದುಶೇಖರಲಿಂಗ ಚರಣಕಮಲ ಮಕರಂದ ಮತ್ತ ಮಧುಕರಾಯಮಾನ ಷಟ್ಸ್ಥಲ ಜ್ಞಾನಿ[೫೨] ಎಂದು ವಿಶ್ಲೇಷಿಸಿಕೊಂಡಿದ್ದಾನೆ. ಇದರಿಂದ ಈತ ಶ್ರೀಮಂತ ಗುರುಪರಂಪರೆಯಲ್ಲಿ ಬಂದ ಮಹಾ ಅನುಭಾವಿ, ಷಟ್ಸ್ಥಲಜ್ಞಾನಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಗೆ ಸೇರಿದ ಈತ ಇಮ್ಮಡಿ ಮುರಿಗಾ ಗುರುಸಿದ್ಧರ ನೇರ ಶಿಷ್ಯ ಎಂದೇ ಹೇಳಬಹುದು.

ಕೃತಿಗಳು :

೧) ಬಸವರಾಜ ದೇವರ ಷಟ್ಸ್ಥಲದ ವಚನಗಳ ಬೆಡಗಿನ ಟೀಕು (೩೪೭ ವಚನಗಳಿಗೆ)

೨) ತೋಂಟದ ಸಿದ್ಧಲಿಂಗೇಶ್ವರನ ಷಟ್ಸ್ಥಲಜ್ಞಾನಸಾರಾಮೃತದ ಬೆಡಗಿನ ವಚನದ ಟೀಕು (೧೫೨ ವಚನಗಳಿಗೆ)

ಟೀಕಾ ಸಾಹಿತ್ಯ :

ಒಂದು ಕೃತಿಯ ಅರ್ಥ-ಭಾವ-ಉದ್ದೇಶಗಳನ್ನು ಬಿಡಿಸಿ ಹೇಳುವುದಕ್ಕಾಗಿ ರಚನೆಯಾದ ಸಾಹಿತ್ಯವೇ ಟೀಕಾ ಸಾಹಿತ್ಯ. ಸೃಜನ ಸಾಹಿತ್ಯದ ಒಳತಿರುಳನ್ನು ಎತ್ತಿ ತೋರುವ ಇದು ವಿಮರ್ಶನಾ ಸಾಹಿತ್ಯ ಗುಂಪಿಗೆ ಸೇರುತ್ತದೆ. ಟೀಕಾ ಸಾಹಿತ್ಯವನ್ನು ಟೀಕೆ, ಟಿಪ್ಪಣೆ, ವ್ಯಾಖ್ಯಾನ, ಭಾಷ್ಯ, ವಿವರಣೆ, ತಾತ್ಪರ್ಯ, ಸಾರ, ನಿರ್ವಚನ ಎಂಬ ಪರ್ಯಾಯ ನಾಮಗಳಿಂದ ಕರೆಯಲಾಗುತ್ತದೆ.

ಸಮಗ್ರ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ ಸೃಜನಸಾಹಿತ್ಯದಷ್ಟೇ ವಿಪುಲವಾಗಿ ಬೆಳೆದುಬಂದವುಗಳು ಸಂಪಾದನಾ ಸಾಹಿತ್ಯ ಹಾಗೂ ಟೀಕಾಸಾಹಿತ್ಯಗಳು. ವೇದಕಾಲದಿಂದಲೂ ರೂಢಿಯಲ್ಲಿದೆ. ಟೀಕಾಸಾಹಿತ್ಯ ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಂಡದ್ದು ೧೫ನೆಯ ಶತಮಾನದಿಂದೀಚೆಗೆ. ವೀರಶೈವ ಕವಿಗಳು ಟೀಕಾ ಸಾಹಿತ್ಯವನ್ನು ಸಾಹಿತ್ಯ ಪ್ರಸಾರದ ಒಂದು ವಿಧಾನವಾಗಿ ಬಳಸಿಕೊಂಡಿದ್ದಾರೆ. ಶರಣರ ವಚನಗಳನ್ನು, ಬೆಡಗಿನ ವಚನಗಳನ್ನು ಜನ ಸಾಮಾನ್ಯರಿಗೆ ಅರ್ಥೈಸಬೇಕೆಂಬ ಆಶಯದಿಂದ ಟೀಕೆ ಬರೆಯುವ ಪದ್ಧತಿ ಪ್ರಾರಂಭವಾಗುತ್ತದೆ. ನೂರೊಂದು ವಿರಕ್ತರು ಮತ್ತು ಏಳುನೂರೊಂದು ವಿರಕ್ತರ ಕಾಲದಲ್ಲಿ ಭರದಿಂದ ಸಾಗುತ್ತದೆ. ಅನಂತರ ಅನೇಕರು ಈ ಪರಂಪರೆಯನ್ನು ಮುಂದುವರೆಸಿಕೊಂಡು ಬರುತ್ತಾರೆ. ಒಬ್ಬೊಬ್ಬ ವಚನಕಾರನ ವಚನಗಳಿಗೂ ಟೀಕೆ ಬರೆಯುವ ಸಂಪ್ರದಾಯ ಜಾರಿಗೆ ಬರುತ್ತದೆ. ಅದು ಬಸವಣ್ಣನವರ ವಚನಗಳಿಂದ ಆರಂಭವಾಗಿ ತೋಂಟದ ಸಿದ್ಧಲಿಂಗರ ವಚನಗಳವರೆಗೂ ಬೆಳೆದುಬರುತ್ತದೆ.

ಪ್ರಭುದೇವರ ಟೀಕಿನ ವಚನ, ಬೆಡಗಿನ ವಚನ ಟೀಕೆ, ಅಕ್ಕಮಹಾದೇವಿಯ ಸೃಷ್ಟಿಯ ವಚನ ಟೀಕು, ಚೆನ್ನಬಸವೇಶ್ವರನ ಪದಮಂತ್ರಗೋಪ್ಯ ಟೀಕೆ, ಪ್ರಭುದೇವರ ಸೃಷ್ಟಿಯ ವಚನ ಟೀಕೆ, ಬಸವಣ್ಣನವರ ವಚನ ಟೀಕೆ, ಚೆನ್ನಬಸವೇಶ್ವರನ ಕರಣಹನಿಗೆ ಟೀಕೆ, ಮಿಶ್ರಾರ್ಪಣ ಟೀಕು, ಲಿಂಗ ಲೀಲಾವಿಲಾಸ ಗ್ರಂಥದ ವ್ಯಾಖ್ಯಾನ, ಶಬ್ದಮಣಿದರ್ಪಣದ ಟೀಕೆ, ಕೈವಲ್ಯಪದ್ಧತಿ ಟೀಕೆ ಹೀಗೆ ಇನ್ನೂ ಅನೇಕ ಟೀಕಾ ಗ್ರಂಥಗಳು ರಚನೆಯಾಗಿವೆ. ಈ ಟೀಕಾ ಗ್ರಂಥಗಳನ್ನು ಬರೆಯುವವರಲ್ಲಿ ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿ ಬಂದ ಅನೇಕ ಅನುಭಾವಿಗಳು ಪ್ರಮುಖರಾಗಿದ್ದಾರೆ.[೫೩]

ಶ್ರೀಗಿರೀಂದ್ರ, ಚನ್ನವೀರಾರ್ಯ, ನಂಜುಂಡ, ಪರ್ವತ ಶಿವಯೋಗಿ ಹಾಗೂ ಸೋಮಶೇಖರ ಶಿವಯೋಗಿಯವರನ್ನಿಲ್ಲಿ ಮುಖ್ಯವಾಗಿ ಹೆಸರಿಸಬಹುದು. ಈ ರೀತಿ ಇವರೆಲ್ಲರ ವಚನಗಳಿಗೆ ಬರೆದ ಟೀಕೆಗಳಲ್ಲಿ ವೈವಿಧ್ಯತೆ ಇದೆ. ಟೀಕಾ ಸಾಹಿತ್ಯವನ್ನು

(೧) ಅರ್ಥದ ದೃಷ್ಟಿಯಿಂದ

೧. ವಾಚ್ಯಾರ್ಥ ಟೀಕೆ

೨. ತಾತ್ವಿಕಾರ್ಥ ಟೀಕೆ

೩. ಎರಡನ್ನೂ ಸೇರಿಸಿ ಬರೆದ ಟೀಕೆ ಎಂದು.

(೨) ರಚನಾ ರೀತಿಯ ದೃಷ್ಟಿಯಿಂದ

೧. ಪ್ರತಿಪದಾರ್ಥ ಟೀಕೆ

೨. ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ಟೀಕೆ

೩. ವಾಕ್ಯವನ್ನು ಅನುಸರಿಸಿ ಬರೆದ ಟೀಕೆ

೪. ಸಾರರೂಪದ ತಾತ್ಪರ್ಯಾರ್ಥ ಟೀಕೆ

೫. ಪ್ರತಿಪದಾರ್ಥ, ತಾತ್ಪರ್ಯಾರ್ಥ ಎರಡನ್ನೂ ಒಳಗೊಂಡ ಟೀಕೆ ಎಂದು ೫ ರೀತಿಯಾಗಿ ವಿಂಗಡಿಸಬಹುದು.

೧) ಬಸವರಾಜ ದೇವರ ಷಟ್ಸ್ಥಲದ ವಚನಗಳ ಬೆಡಗಿನ ಟೀಕು (೩೪೭ ವಚನಗಳಿಗೆ) :

ಕನ್ನಡ ಸಾಹಿತ್ಯದಲ್ಲಿ ಬಸವಣ್ಣನವರನ್ನು ಕುರಿತಾಗಿ ಹುಟ್ಟಿದಷ್ಟು ಕೃತಿಗಳು ಬೇರೊಬ್ಬರ ವಿಷಯದಲ್ಲಿ ಇಲ್ಲ ಎಂದು ಹೇಳಬಹುದು. ಬಸವಣ್ಣನವರು ಲಕ್ಷದ ಮೇಲೆ ತೊಂಬತ್ತಾರುಸಾವಿರ ವಚನಗಳನ್ನು ಬರೆದರೆಂಬ ಪ್ರತೀತಿ ಇದೆ. ಈ ವಚನಗಳಿಂದಾಯ್ದು ರಚಿಸಿದ ಕೃತಿಯೇ ೯೫೯ ವಚನಗಳನ್ನೊಳಗೊಂಡ "ಷಟ್ಸ್ಥಲದ ವಚನಗಳು" ಎಂಬ ಕೃತಿ. ಷಟ್ಸ್ಥಲ ಕ್ರಮದಲ್ಲಿ ಜೋಡಿಸಿರುವ ಈ ಸಂಪುಟಕ್ಕೆ ಒಟ್ಟು ೫ ಜನರು ಟೀಕೆ ಬರೆದಿರುವರು. ಅವುಗಳನ್ನು ಈ ಕೆಳಗಿನಂತೆ ಹೆಸರಿಸಬಹುದು.

೧. ಶ್ರೀಗುರು ಬಸವರಾಜದೇವರು ನಿರೂಪಿಸಿದ ಷಟ್ಸ್ಥಲದ ವಚನ ವ್ಯಾಖ್ಯಾನ

೨. ಅಜ್ಞಾತ ಕರ್ತೃವಿನ ಟೀಕೆ

೩. ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು

೪. ಬಸವ ವಚನ ಸಾರಾಮೃತ

ಇವರಲ್ಲಿ ಸೋಮಶೇಖರ ಶಿವಯೋಗಿಯು ಬಸವಣ್ಣನವರ "ಷಟ್ಸ್ಥಲ ವಚನ" ಸಂಪುಟದಿಂದ ಬೆಡಗಿನ ವಚನಗಳನ್ನಾಯ್ದು ಟೀಕೆ ಬರೆದಿರುವನು. ಈತನ ಟೀಕಾ ಸ್ವರೂಪವೆಂದರೆ–

೧. ಒಂದು ವಚನಕ್ಕೆ ತೀರ ಕ್ವಚಿತ್ತಾಗಿ ಎರಡು ಅರ್ಥ ಬರೆದಿರುವನು.

೨. ಸಾಮಾನ್ಯವಾಗಿ ಪ್ರತಿಪದಾರ್ಥ ಬರೆವ ಇಲ್ಲವೆ ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆವ ವಿಧಾನವಿದೆ.

೩. ಕೆಲವು ಕಡೆ ಇವೆರಡರ ಮಿಶ್ರಣವಿದೆ.

ಈ ಮೂರೂ ರೀತಿಯ ಟೀಕೆಗೆ ಉದಾಹರಣೆ –

೧. ಸತ್ಯವಿದೆ – ಯಥಾರ್ಥ ಜ್ಞಾನಸಂಬಂಧ ಉಂಟಾಗಿರುತಿದೆ, ಸಮಾಧಾನವಿದೆ – ಸಕಲೇಂದ್ರಿಯಂಗಳ ವಿಷಯಪದಾರ್ಥದಲ್ಲಿ ಲಿಂಗಸಂಬಂಧಮಾಡಿ ಆ ಲಿಂಗಪ್ರಸಾದವ ಸ್ವೀಕರಿಸುವ ತರಹರ ಉಂಟಾಗಿರುತ್ತದೆ. ಮತ್ತಂ ಶಮೆ ದಮೆ ಶಾಂತಿ ದಾಂತಿಗಳ ತರಹರ ಉಂಟಾಗಿರುತ್ತದೆ. ಸರ್ವಸನುಮತವೆಂಬ ಸುಖವಿದೆ – ಸಮಸ್ತ ಇಂದ್ರಿಯಂಗಳಲ್ಲಿ ಲಿಂಗಪರಿಣಾಮ ಉಂಟಾಗಿರುತ್ತದೆ. ಮನಕ್ಕೆ ಬಾರದಿದೇನಯ್ಯ ಈ ಪ್ರಕಾರದಲ್ಲಿದ್ದಲ್ಲಿ ಶರಣಸತಿಯಾಚರಣೆಯ ನಿನ್ನ ಮನಸ್ಸಿಗೆ ಮಂಜುಳವಾಗದೆ ಇರುವುದಿದೇನು ಕಾರಣವಯ್ಯ ಮನಕ್ಕೆ ಸೋಂಕದಿದೇನಯ್ಯ – ನನ್ನ ಮನಸ್ಸಿಗೆ ತಿಳಿಯಲ್ಪಡದೆಯಿರುವುದೇನು ಕಾರಣವಯ್ಯ ಆನು ನೀನೆಂಬುದೊಂದು ಘನವಿದೆ – ಶರಣ ಲಿಂಗ ಸಂಬಂಧವೆಂಬುದೊಂದಧಿಕತ್ವ ಉಂಟಾಗಿರುತ್ತದೆ, ಕೂಡಲಸಂಗಮದೇವ – ಎಲೆ ಪರಶಿವಲಿಂಗವೆ, ಭ್ರಮೆಯೊ – ಲಿಂಗಭ್ರಾಂತೋ–[೫೪] (೯೧೫)

೨. ಇಷ್ಟಲಿಂಗದ ಸತ್ಕ್ರಿಯಾಚರಣೆಯನೇನೆಂದುಪಮಿಸುವೆನೆಂದು ಕ್ರಿಯಾಶಕ್ತಿಸ್ವರೂಪನಾದ ಶರಣನು ಸುಜ್ಞಾನ ಶಕ್ತಿಯೆಂಬ ಮಾತೆಯ ಕೂಡ ಮಾಡುವ ಪ್ರಶ್ನೆಯು ಎಂಬುದೀಗ "ಮನೆಯ ಗಂಡನ ಮನೆವಾರ್ತೆಯನೇನ ಹೇಳುವೆನವ್ವಾ" ಎಂಬ ಶಬ್ದಕ್ಕರ್ಥ. ದೇವಭಾವದ ವರ್ತನೆನಂಗೀಕರಿಸನೆಂಬುದೀಗ ಅಂಗವಿದ್ಯೆಯ ನೊಲ್ಲನೆಂಬ ಶಬ್ದಕ್ಕರ್ಥ. ಭಿನ್ನರೂಪಭ್ರಾಂತಿ ನಷ್ಟವಾದದಲ್ಲದೆ ಲಿಂಗ ನಿರೀಕ್ಷಣೆ ದೊರಕ್ಕೊಳದೆಂಬುದೀಗ ಕಂಗಳೊಳಗಣ ಕಸವ ಕಳೆದಲ್ಲದೆ ನೋಡಲಿಯನೆಂಬ ಶಬ್ದಕ್ಕರ್ಥ, ಕುಚಿತ್ತಾದಿ ಹಸ್ತಗಳು ಮಂತ್ರ ಲಿಂಗ ಸಂಬಂಧದಿಂದೆ

ನಿವೃತ್ತಿಯಾದಲ್ಲದೆ ಸುಚಿತ್ತಾದಿ ಹಸ್ತಗಳಲ್ಲಿ ಲಿಂಗಸ್ಪರ್ಶನ ದೊರೆಕೊಳ್ಳಲಿಲ್ಲವೆಂಬುದೀಗ ಕೈಯ ತೊಳೆದಲ್ಲಿದೆ ಮುಟ್ಟಲೀಯನೆಂಬ ಶಬ್ದಕ್ಕರ್ಥ. ದುಶ್ಚರಿತ್ರವೆಂಬ ಚರಣನಿವೃತ್ತಿಯಾಗಿ ಸಚ್ಚರಿತ್ರ ನೆಲೆಗೊಂಡಲ್ಲದೆ ಲಿಂಗವು ತನ್ನ ದಿಕ್ಕ ಗೊದ್ದಲೀಸನೆಂಬುದೀಗ ಕಾಲ ತೊಳೆದಲ್ಲದೆ ಹೊದ್ದಲೀಯನೆಂಬ ಶಬ್ದಕ್ಕರ್ಥ. ಇಂತುಹೀಂಗೆ, ಸಕಲೇಂದ್ರಿಯಂಗಳು ಮಂತ್ರಲಿಂಗ ಸಂಬಂಧದಿಂದ ನಿವೃತ್ತಿಯಾಗಿ ಸುಜ್ಞಾನವಳವಟ್ಟ ಕಾರಣ ಲಿಂಗದಲಿ ವಕಾರ್ಥ ದೊರಕೊಂಡಿತ್ತೆಂಬುದೀಗ ಸರ್ವಾಂಗ ತಲೆದೊಳೆದ ಕಾರಣ ಕೂಡಲಸಂಗಮದೇವನೆನ್ನ ಕೂಡಿಕೊಂಡನವ್ವಾ ಎಂಬ ಶಬ್ದಕ್ಕರ್ಥ.[೫೫] – (೯೧೩)

೩. "ಇಷ್ಟಲಿಂಗವೆಂಬ ಜಾಮಾತೃವಿನ ದರ್ಶನಮಾತ್ರದಿಂದೆ ಅಂತರಂಗದಷ್ಟಪಾಶ ಬಹಿರಂಗದ ಪಂಚಪಾಶಂಗಳ ನಿವೃತ್ತಿಯ ಮಾಡೆಂದು ಜ್ಞಾನಶಕ್ತಿಯೆಂಬ ಮಾತೆ ಕ್ರಿಯಾಶಕ್ತಿ ಸ್ವರೂಪವಾದ ಶರಣ ಸತಿಯ ಕೂಡೆಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ನಾಚೆಂಬೆ ಮಗಳೆ ಎಂಬ ಶಬ್ದಕ್ಕರ್ಥ. ಇಷ್ಟಲಿಂಗದೇವನೆಂಬ ಜಾಮಾತೃವಿನ ದರ್ಶನವಾದಲ್ಲಿ ಪ್ರಪಂಚಿನಿಂದೆ ಹೊರಬ್ಬಾಗುಯೆಂದು ಜ್ಞಾನಶಕ್ತಿಯೆಂಬ ಮಾತೆಯು ಕ್ರಿಯಾಶಕ್ತಿಯ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಅಳಿಯನ ಕಂಡರೆ ತೊಲಗೆಂಬೆ ಮಗಳೆಯೆಂಬ ಶಬ್ದಕ್ಕರ್ಥ. ನಾಚುವರೆ ಮೋರೆಯಿಲ್ಲಿ – ಅಭಿಮಾನಿಸಿಕೊಂಬುವರೆ ದುರ್ವಿವೇಕವೆಂಬ ವಚನ ಉಂಟಾಗಲರಿಯದು. ತೊಲಗುವರೆ – ಹೊರಬ್ಬಾಗುವರೆ, ನೆಲನಿಲ್ಲಿ ದೇಹಭಾವದ ವರ್ತನೆಯು ಶರಣಸತಿಗೆ ದೊರೆಕೊಳ್ಳದೆಂಬುದರ್ಥ. ಜ್ಞಾನಶಕ್ತಿಸ್ವರೂಪಾದ ಶ್ರೀಗುರುದೇವನು ಕ್ರಿಯಾಶಕ್ತಿ ಸ್ವರೂಪಾದ ಶರಣಸತಿ ಕೂಡೆ ಮಾಡುವ ಪ್ರಶ್ನೆಯೆಂಬುದೀಗ ಇಬ್ಬರಿಗೊಬ್ಬ ಗಂಡನಾದ ಬಳಿಕ ಇನ್ನೆಲ್ಲಿಯ ಮೋರೆ ಮಗಳೆಯೆಂಬ ಶಬ್ದಕ್ಕರ್ಥ ಕೂಡಲಸಂಗಮದೇವಯ್ಯನೆಂಬ – ಪರಶಿವಲಿಂಗವೆಂಬ, ಗಂಡನಾದ ಬಳಿಕ – ವಲ್ಲಭನಾದ ಮೇಲೆ, ಇನ್ನೆಲ್ಲಿಯ ಮೋರೆ ಮಗಳೆ – ಇನ್ನಾವ ಕಡೆಯ ದುರ್ವಿವೇಕವೆಂಬ ವಕ್ತೃವು ಶರಣ ಸತಿಯೆ, ಇಲ್ಲವೆಂಬುದರ್ಥ".[೫೬] – (೯೧೪)

ಹೀಗೆ ಬಸವಣ್ಣನವರ ಷಟ್ಸ್ಥಲದ ವಚನಗಳಿಗೆ ಒಂದೊಂದು ಸಂಪೂರ್ಣ ವಚನಕ್ಕೆ, ಒಂದೆರಡು ವಾಕ್ಯ ಇಲ್ಲವೆ ಒಂದೆರಡು ಪದಗಳನ್ನು ಎತ್ತಿಕೊಂಡು ಅರ್ಥ ಬರೆದಿರುವನು.

೨) ಷಟ್‌ಸ್ಥಲಜ್ಞಾನ ಸಾರಾಮೃತದ ಬೆಡಗಿನ ವಚನ ಟೀಕೆ :

ತೋಂಟದ ಸಿದ್ಧಲಿಂಗರ ೭೦೧ ವಚನಗಳಲ್ಲಿ ಕೇವಲ ೧೫೨ ಬೆಡಗಿನ ವಚನಗಳನ್ನು ಮಾತ್ರ ಆಯ್ದುಕೊಂಡು ಟೀಕೆಯನ್ನು ಬರೆಯಲಾಗಿದೆ. ಆಯಾ ಸ್ಥಲಗಳಿಂದ ಆಯ್ದುಕೊಂಡ ವಚನಗಳ ಸಂಖ್ಯಾ ವಿವರ ಹೀಗಿದೆ –

೧. ಪಿಂಡಜ್ಞಾನಸ್ಥಲ - ೧೫, ಸಂಸಾರಹೇಯಸ್ಥಲ - ೨೦.
ಮಾಹೇಶ್ವರ ಸ್ಥಲ - ೧, ಪ್ರಸಾದಿಸ್ಥಲ - ೭೧.
ಪ್ರಾಣಲಿಂಗಿಸ್ಥಲ - ೫೬, ಶರಣಸ್ಥಲ - ೨೮, ಐಕ್ಯಸ್ಥಲ - ೨೫.

ಟೀಕೆಯ ಸ್ವರೂಪವನ್ನು ಹೀಗೆ ಗುರುತಿಸಬಹುದು.

೧) ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ತಾತ್ವಿಕಾರ್ಥ ಟೀಕೆ'

೨) ವಚನದಲ್ಲಿನ ಕೆಲವು ವಾಕ್ಯಗಳಿಗೆ ಬರೆದ ಎರಡು ತಾತ್ವಿಕಾರ್ಥ ಟೀಕೆ

೩) ಕೆಲವು ವಚನಗಳಿಗೆ ಬರೆದ ವಾಕ್ಯವನ್ನು ಹಿಮ್ಮೆಟ್ಟಿಸಿದ ಅರ್ಥ ಮತ್ತು ಪ್ರತಿಪದಾರ್ಥ ಟೀಕೆ.

೪) ಇಡೀ ವಚನಕ್ಕೆ ಬರೆದ ಪ್ರತಿಪದಾರ್ಥ ಟೀಕೆ.

೫) ಇಡೀ ವಚನಕ್ಕೆ ಬರೆದ ಸಾರರೂಪದ ತಾತ್ಪರ್ಯಾರ್ಥ ಟೀಕೆ

ಈ ಎಲ್ಲ ವಿಧಾನಗಳಿಗೂ ಒಂದೊಂದು ಉದಾಹರಣೆ.

೧) ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ತಾತ್ವಿಕಾರ್ಥ ಟೀಕೆ' :

ಇಲ್ಲಿ ವಚನಕ್ಕನುಗುಣವಾಗಿ ೨, ೩, ೮ ಕಡಿಮೆಯೆಂದರೆ ಒಂದು ಖಂಡಗಳಲ್ಲಿ ಟೀಕೆ ಬರೆಯಲಾಗಿದೆ. ದೀರ್ಘವಾದ ವಚನಕ್ಕೆ ೮ ಖಂಡ ಬರೆದ ರೀತಿಗೆ ಉದಾ :-

ಹಿರಿಯ ಕಡಲನೊಂದು ಮಂಡೂಕ ಕುಡಿವುದ ಕಂಡೆನಯ್ಯಾ
ಮಂಡೂಕನ ಮಾರ್ಜಾಲ ಹಿಡಿದಡೆ ನೋಡಾ
ಮಾರ್ಜಾಲನ ಮೂಷಕ ನುಂಗಿರ್ದುದ ಕಂಡೆನಯ್ಯಾ
ಮೂಷಕನ ಮಾವರ್ಣವ 'ಹಕ್ಕಿ' ಹಿಡಿದು ಮೈದೋರದು ನೋಡಾ
ಇವರೆಲ್ಲರ ಕೂಡಿಕೊಂಡಿರ್ಪುದೊಂದು ನೋಡಾ ಕೂಟ್ಟದ ಗ್ರಾಮವ ಕಂಡೆನಯ್ಯಾ
ಗ್ರಾಮವ ಬಾಗಿಲೊಳಗೊಬ್ಬ ಕರಿಯ ಕಬ್ಬಿಲನಿರ್ದು
ಜಾಲವ ಬೀಸಿ ಕೊಂಡೈದಾನೆ ನೋಡಾ
ಆ ಜಾಲದೊಳಗೆ ಹರಿಬ್ರಹ್ಮಾದಿ ದೇವತೆಗಳು ಸಿಕ್ಕಿ ಒದ್ದಾಡುತ್ತಿದ್ದಾರೆ ನೋಡಾ
ಜಾಲವ ಹರಿದು ಕಬ್ಬಲನ ಕೈಕಾಲು ಕಡಿದು ಕಿವಿ ಮೂಗನು ಕತ್ತರಿಸಿದಲ್ಲದೆ
ಪ್ರಾಣಲಿಂಗ ಸಂಬಂಧಿಯಲ್ಲ ಕಾಣಾ,
ಮಹಾಲಿಂಗಗುರು ಶಿವಸಿದ್ದೇಶ್ವರ ಪ್ರಭುವೆ.

ಸಂಸಾರ ವಿಷಯರಸವೆಂಬ ಸಮುದ್ರವನು, ಪ್ರಪಂಚದಿಂದ ದೃಢವಾದ ಮನೋಮಂಡೂಕನೀಂಟುವದನು, ಸುಜ್ಞಾನೋದಯವಾದ ಶರಣ ಜ್ಞಾನದೃಕ್ಕಿನಿಂದೆ ನಿದರ್ಶನವ ಮಾಡುತಿರ್ದಪನೆಂಬುದೀಗ - ಹಿರಿಯ ಕಡಲನೊಂದು ಮಂಡೂಕ ಕುಡಿವುದ ಕಂಡೆನಯ್ಯ ಎಂಬ ಶಬ್ದಕ್ಕರ್ಥ.

ಅಂತಪ್ಪ ಮನವೆಂಬ ಮಂಡೂಕನ ಅವಿದ್ಯಾಶಕ್ತಿ ಅವಗ್ರಹಿಸಿಪ್ಪಳೆಂಬುದೀಗ ಮಂಡೂಕನ ಮಾರ್ಜಾಲ ಹಿಡಿದಿದೆ ನೋಡಾ ಎಂಬ ಶಬ್ದಕ್ಕರ್ಥ.

ಆ ಅವಿದ್ಯಾಶಕ್ತಿಯ ಪ್ರಪಂಚಿನ ದುರ್ವಾಸನೆಯ ಜೀವವೆಂಬ ಮೂಷಕನವ ಗ್ರಹಿಸಿರ್ಪನೆಂಬುದೀಗ – ಮಾರ್ಜಾಲನ ಮೂಷಕ ನುಂಗಿದುದ ಕಂಡೆನಯ್ಯ ಶಬ್ದಕ್ಕರ್ಥ.

ಅಂತಪ್ಪ ಜೀವನೆಂಬ ಮೂಷಕನ ವರ್ಣತ್ರಯ ಸ್ವರೂಪವಾದ ಪರಮಾತ್ಮಲಿಂಗವೆಂಬ ಪಕ್ಷಿಯು, ಚೈತನ್ಯ ಸ್ವರೂಪದಿಂದವಗ್ರಹಿಸಿ, ಅದರ ಪ್ರಪಂಚಿನಲ್ಲಿ ಕುರುಹುಗಾಗಿ ಪದೆ ಇರ್ಪುದೆಂಬುದೀಗ – ಮೂಷಕನ ಮೂರು ವರ್ಣದ ಪಕ್ಷಿ ಹಿಡಿದು ಮೈದೋರದು ನೋಡಾ ಎಂಬ ಶಬ್ದಕ್ಕರ್ಥ.

ಆ ಜೀವಪರಮರ ಪ್ರವೃತ್ತಿನಿವೃತ್ತಿ ಕರಣಂಗಳಿಗಾಶ್ರಯವಾಗಿ ಶರೀರಬೆಂಬುದೊಂದು ಪುಟ್ಟಿದ ಗ್ರಾಮವೊಪ್ಪುತ್ತಿಹುದೆಂಬುದೀಗ – ಈ ಎಲ್ಲವ ಕೂಡಿಕೊಂಡಿಪುದೊಂದು ಕೊಟ್ಟದ ಗ್ರಾಮದ ಕಂಡೆನಯ್ಯ ಎಂಬ ಶಬ್ದಕ್ಕರ್ಥ.

ಪಂಚವಿಂಶತಿತತ್ವಯುಕ್ತವಾದ ಕಾಲನೆಂಬ ಜಾಲಗಾರನು, ದುಶ್ಚರಿತ್ರವೆಂಬ ಚರಣವನೂರಿ ನೆಲಸಿ ಪ್ರಪಂಚವೆಂಬ ಬಲೆಯನೊಡ್ಡಿಕೊಂಡಿರ್ಪನೆಂಬುದೀಗ – ಗ್ರಾಮದ ಬಾಗಿಲೊಳಗೊಬ್ಬ ಕರಿಯ ಕಬ್ಬಲನಿರ್ದು ಜಾಲವ ಬೀಸಿಕೊಂಡಿದಾನೆ ನೋಡಾ ಎಂಬ ಶಬ್ದಕ್ಕರ್ಥ.

ಅಂತಪ್ಪ ಪ್ರಪಂಚೆಂಬ ಬಲೆಯನು ಸರ್ವಾಚಾರ ಸಂಪತ್ತಿನಾಚರಣೆಯಿಂದೆ ನಷ್ಟವ ಮಾಡಿ ಜೀವನ ಭಿನ್ನಜ್ಞಾನಗಳನು ಸತ್ತ್ರೀ ಸಮ್ಯಕ್‌ಜ್ಞಾನಗಳಿಂದೆ ನಿವೃತ್ತಿಯನೆಯ್ದಿಸಿ ಇಂದ್ರಿಯಂಗಳ ವಿಷಯ ಪ್ರಪಂಚೆಲ್ಲವನು ಲಿಂಗಸಂಬಂಧದಿಂದೆ ನಿವೃತ್ತಿಮಾಡೆಲ್ಲದೆ ಅಸುಲಿಂಗಸಾಹಿತ್ಯವುಳ್ಳವ ನಾಗಲಿರಯನೆಂಬುದೀಗ – ಜಾಲವ ಹರಿದು ಕಬ್ಬಲನ ಕೈಕಾಲ ಕಡಿದು ಕಿವಿ ಮೂಗನು ಕತ್ತರಿಸಿಯಲ್ಲದೆ ಪ್ರಾಣಲಿಂಗ ಸಂಬಂಧಿಯಲ್ಲ ಕಾಣಾ ಎಂಬ ಶಬ್ದಕ್ಕರ್ಥ.[೫೭]

೨) **ಕೆಲವು ವಾಕ್ಯಗಳಿಗೆ ಎರಡು ತಾತ್ವಿಕಾರ್ಥ ಬರೆದುದಕ್ಕೆ ಉದಾ** – ದೇವಸಾಲೆಯಲ್ಲಿ ದಿವ್ಯಮೂರ್ತಿಯ ಕಂಡೆನಯ್ಯ ಟೀಕೆ – ಸಕಲ ಕರಣೇಂದ್ರಿಯಗಳಿಗೆ ವಿಶ್ರಾಂತಿ ಸ್ಥಾನವಾದ ಬ್ರಹ್ಮರಂಧ್ರವೆಂಬ ಮಂದಿರದಲ್ಲಿ ಮನೋಹರದಿಂದ ಬೆಳಗಲ್ಪಟ್ಟ ನಿಃಕಲಬ್ರಹ್ಮವನು ಜ್ಞಾನದೃಕ್ಕಿನಿಂದ ನಿದರ್ಶನವಾದನೆಂಬುದೀಗ – ದೇವಸಾಲೆಯಲ್ಲಿ ದಿವ್ಯಮೂರ್ತಿಯ ಕಂಡೆನಯ್ಯ ಎಂಬ ಶಬ್ದಕ್ಕರ್ಥ.

ಮತ್ತಂ, ಚಿತ್ಕರಣೇಂದ್ರಿಯಂಗಳ ವ್ಯಾಪಾರಕ್ಕಾಶ್ರಯವಾಗೊಪ್ಪಲ್ಪಟ್ಟ ಶರಣನ ಚಿದಂಗವೆಂಬ ಮಂದಿರದಲ್ಲಿ, ಮನೋಹರದಿಂದೆ ಬೆಳಗಲ್ಪಟ್ಟ ಪರಬ್ರಹ್ಮವನು ಶ್ರೀ ಗುರುವಿನ ವೇಧಾಮಂತ್ರ ಕ್ರಿಯೋಪದೇಶದಿಂದ ಬಹಿರಂಗದಲ್ಲಿ ಇಷ್ಟಲಿಂಗವಾಗಿ ನಿದರ್ಶನದ ಮಾಡಿದೆನೆಂಬುದೀಗ – ದೇವಸಾಲೆಯಲ್ಲಿ ದಿವ್ಯಮೂರ್ತಿಯ ಕಂಡನಯ್ಯ ಎಂಬ ಶಬ್ದಕ್ಕರ್ಥ.[೫೮]

೩) ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ಅರ್ಥ ಮತ್ತು ಪ್ರತಿಪದಕ್ಕೆ ಬರೆದ ಅರ್ಥಕ್ಕೆ ಉದಾ –

೧೫೪ನೆಯ ವಚನದಲ್ಲಿ ಇವರೆಡರ ಮಿಶ್ರಣವಿದೆ. ವಚನದ ಅರ್ಧಭಾಗಕ್ಕೆ ವಾಕ್ಯವನ್ನು ಹಿಮ್ಮೆಟ್ಟಿಸಿ ಅರ್ಥ ಬರೆದರೆ, ಉಳಿದರ್ದ ಭಾಗಕ್ಕೆ ವಾಕ್ಯವನ್ನು ಅನುಸರಿಸಿ ಮತ್ತೆ ಅದರಲ್ಲಿಯೇ ಕೆಲವು ಪದಗಳಿಗೆ ಪ್ರತಿಪದವನ್ನು ಎತ್ತಿಕೊಂಡು ಟೀಕೆಯನ್ನು ಬರೆಯಲಾಗಿದೆ. ಇಲ್ಲಿ ಮೊದಲ ಭಾಗವನ್ನು ಬಿಟ್ಟು ವಾಕ್ಯವನ್ನು ಅನುಸರಿಸಿ ಬರೆದ ಅರ್ಥ ಮತ್ತು ಪ್ರತಿಪದಕ್ಕೆ ಬರೆದ ಅರ್ಥಕ್ಕೆ ಸಂಬಂಧಿಸಿದ ಭಾಗದ ಟೀಕೆಯನ್ನು ಮಾತ್ರ ಉದಾಹರಿಸಲಾಗಿದೆ.

ಉಡುವಿನ ನಾಲಗೆಯ ಕೊಯಿದು – ಜೀವನ ಭಿನ್ನಾಪೇಕ್ಷೆಯೆಂಬ ರಸನೆಯನು ಶಿವಾಪೇಕ್ಷೆಯೆಂಬ ಶಸ್ತ್ರದಿಂದ ಲವನಂಗೆಯ್ದು ; ಕುಣಿದಾಡುವ ಕೋಡಗನ ಕಾಲ ಮುರಿದು – ಪ್ರಪಂಚಿನಲ್ಲಿ ವರ್ತಿಸುವ ಮನೋಮರ್ಕಟನ ದುಶ್ಚರಿತ್ರವೆಂಬ ಚರಣವನು ಸಚ್ಚಾರಿತ್ರದಿಂದೆ ನಿವೃತ್ತಿಯ ಮಾಡಿ ; ಅಜಪಶುವ ಕೊಂದು ಅಜ್ಞಾನ ರೂಪವಾದ ಜೀವನೆಂಬ ಮೇರೆಯ ಜೀವಭಾಘದ ವರ್ತನೆಯನು ನಷ್ಟವಮಾಡಿ, ಅಗ್ನಿಯಲ್ಲಿ – ಶಿವಜ್ಞಾನಾಗ್ನಿಯಲ್ಲಿ, ಸುಟ್ಟು – ಸಂಸ್ಕರಿಸಿ, ಭಸ್ಮವ ಮಾಡಬಲ್ಲಾತನ ಪಾಪಾನಾಂಭರ್ಜನಾದ್ಭಸ್ಮ ಎಂದು ಸಕಲ ದೋಷಂಗಳನು ನಿವೃತ್ತಿಮಾಡಿ ಚಿದ್ಭಸ್ಮವನೆಯ್ದಿಸಿದರೀಥಾತನ, ಜನನ ಮರಣ ನಿರಹಿತೆನೆಂಬೆ – ಹುಟ್ಟು ಹೊಂದುಗಳಿಗೆ ರಹಿತನೆಂದು ಹೇಳುವೆನು ; ತ್ರಿಜಗದಾಧಿಪತಿಗಳಿಗ ಒಡೆಯನೆಂಬೆ ತ್ರಿಲೋಕಕ್ಕಧಿಪತಿಗಳಾದ ಬ್ರಹ್ಮ ವಿಷ್ಣು ರುದ್ರರುಗಳಿಗೆ ಅಧಿಷ್ಠಾನ ಕರ್ತೃವಾದಾತನು ಶಿವಶರಣನೆಂದು ಹೇಳುವೆನು.[೫೯]

೪) ಇಡೀ ವಚನಕ್ಕೆ ಬರೆದ ಪ್ರತಿಪದಾರ್ಥ ಟೀಕೆಗೆ – (೫೬೪ ವ)

ನೋಟವಾಗದ ಮುನ್ನ – ಶರಣಲಿಂಗಕ್ಕೆ ಸಮರಸ ನಿರೀಕ್ಷಣೆಯುಂಟಾಗದಾ ಕ್ಷಣದಲ್ಲಿಯೇ, ಬೇಟವಾಯಿತ್ತು. – ಶರಣಲಿಂಗಕ್ಕೆ ಸಮರಸ ಸ್ನೇಹದೊರಕೊಂಡಿತ್ತು. ಬೇಟವಾಗದ ಮನ್ನ – ಆ ಶರಣಲಿಂಗಕ್ಕೆ ಸಮರಸ ಸಂಯೋಗವಾದಕ್ಷಣವೆ, ಕೂಟವಾಯಿತ್ತು ಶರಣಲಿಂಗಕ್ಕೆ ಸಮರಸ ಸಂಯೋಗವು ದೊರಕೊಂಡಿತ್ತು. ಕೂಟವಾಗದ ಮುನ್ನ ಶರಣಲಿಂಗಕ್ಕೆ ಸಮರಸ ಸಂಯೋಗವಾದಾಕ್ಷಣವೆ, ಬಸುರಾಯಿತ್ತಯ್ಯ – ಶರಣಂಗೆ ಚಿದ್ಗರ್ಭದೋರಿತ್ತಯ್ಯ.[೬೦]

೫) ಇಡೀ ವಚನಕ್ಕೆ ಬರೆದ ಸಾರರೂಪದ ತಾತ್ಪರ್ಯಾರ್ಥಕ್ಕೆ ೨೨೮ ನೆಯ ವಚನದ ಟೀಕೆ –

ಸಕಲ ಕರಣೇಂದ್ರಯ ವ್ಯಾಪಾರಕಾಶ್ರಯವಾದ ಶರಣನ ಸ್ಥೂಲತನುವಿನ ಮೂಲಾಧಾರ ಚತುರ್ದಳ ಕಮಲಕರ್ಣಿಕಾಗ್ರದಲ್ಲಿ ಬೆಳಗಲ್ಪಟ್ಟ ಪ್ರಾಣಲಿಂಗವೆ ತನುತ್ರಯಸಂಬಂಧವಾದ ಜೀವತ್ರಯಂಗಳಿಗಧಿಷ್ಠಾನ ಕರ್ತೃವಾದಿಷ್ಟ ಪ್ರಾಣಭಾವಲಿಂಗ ಸ್ವರೂಪವಾಗಿ ಬೆಳಗುತ್ತಿಹನೆಂಬುದೀಗ ವಚನದ ತಾತ್ಪರಾರ್ಥ.[೬೧]

ಹೀಗೆ ಯಾವುದೇ ರೀತಿಯ ಟೀಕೆಯನ್ನು ಬರೆಯಲು ಅದು ತಾತ್ವಿಕಾರ್ಥ ಮಾತ್ರ ಹೇಳಲು ಮೀಸಲಾಗಿದೆ. ವಾಚ್ಯಾರ್ಥಕ್ಕೆ ಇಲ್ಲಿ ಕಿಂಚಿತ್ತೂ ಅವಕಾಶ ಮಾಡಿಕೊಟ್ಟಿಲ್ಲ.

ಟೀಕೆಯ ವೈಶಿಷ್ಟ್ಯಗಳು :

ಉನ್ನತ ಮಟ್ಟದ ಟೀಕಾಕಾರನಾದ ಈತ ಬೆಡಗಿನ ವಚನಗಳಿಗೆ ಮಾತ್ರ ಟೀಕೆ ಬರೆದಿರುವನು. ತಾತ್ವಿಕಾರ್ಥದ ಟೀಕೆಗೆ ಹೆಚ್ಚಿನ ಆದ್ಯತೆಯಿದ್ದು, ಕೆಲವು ವಚನಗಳಿಗೆ ಮಾತ್ರ ಪ್ರತಿಪದಾರ್ಥ ಟೀಕೆಯನ್ನು ಬರೆಯಲಾಗಿದೆ. ಇಡೀ ವಾಕ್ಯವನ್ನು ಆಧರಿಸಿ ಟೀಕೆ ಬರೆದಿದ್ದರೂ ಸಹಿತ ಟೀಕೆ ವಾಕ್ಯವನ್ನು ಹಿಮ್ಮೆಟ್ಟಿಸಿ ನಡೆಯುತ್ತದೆ. ವಚನದೊಳಗಿನ ಎಲ್ಲ ವಾಕ್ಯಗಳಿಗೂ ಅರ್ಥ ಬರೆಯಲಾಗಿದೆ. ಟೀಕೆಯಲ್ಲಿ ವಚನದ ಸಂಪೂರ್ಣ ವಿವರಣೆಯನ್ನು ಕೊಡಲಾಗಿದೆ. ಒಟ್ಟಾರೆಯಾಗಿ ಬೆಡಗಿನ ವಚನಗಳಿಗೆ ತಾತ್ವಿಕರೂಪದ ಅರ್ಥ ಬರೆಯುವುದಕ್ಕೆ ಆದ್ಯತೆ ಕೊಟ್ಟಿರುವುದಾಗಿ ತಿಳಿದುಬರುತ್ತದೆ.

ಈ ರೀತಿಯಾಗಿ ಬಸವಣ್ಣ ಹಾಗೂ ತೋಂಟದ ಸಿದ್ಧಲಿಂಗರ ಷಟ್ಸ್ಥಲದ ವಚನಗಳಿಗೆ ಟೀಕೆ ಬರೆದಿರುವ ಸೋಮಶೇಖರ ಶಿವಯೋಗಿ ಒಬ್ಬ ಶ್ರೇಷ್ಠ ಟೀಕಾಕಾರ. ಶಿಷ್ಟ ಭಾಷೆಯಲ್ಲಿ ಟೀಕೆಯ ತಾತ್ವಿಕಾರ್ಥ, ಪ್ರತಿದಾರ್ಥ, ಬೆಡಗಿನ ವಚನಗಳ ಭಾವಾರ್ಥವನ್ನು ಎತ್ತಿ ಹೇಳಿರುವನು. ಅಪಾರ ಶಾಸ್ತ್ರಪಾಂಡಿತ್ಯ ಪಡೆದು ವೇದ, ಉಪನಿಷತ್ತು, ಆಗಮ, ಪುರಾಣ, ತರ್ಕ, ಯೋಗ ಇತ್ಯಾದಿ ಗ್ರಂಥಗಳ ಅಧ್ಯಯನದಿಂದ ವಿದಿತವಾದ ಜ್ಞಾನವನ್ನು ಈತನ ಟೀಕೆಯಲ್ಲಿ ಕಾಣಬಹುದು. ಹೀಗೆ ಸೋಮಶೇಖರ ಶಿವಯೋಗಿ ಒಬ್ಬ ಪ್ರಮುಖ ಟೀಕಾಕಾರ ಮಾತ್ರವಲ್ಲ, ಮುರುಘಾ ಪರಂಪರೆಯಲ್ಲಿ ಬರುವ ಕವಿಗಳಲ್ಲಿ ಉನ್ನತ ಟೀಕಾಕಾರ ಎಂದೇ ಹೇಳಬಹುದು.

ಜ್ವಲಕಂಠ ಮಹಾಂತಸ್ವಾಮಿ (೧೭೦೦)

ಮುರುಘಾ ಪರಂಪರೆಯ ತಾರಾವಳಿಕಾರರಲ್ಲಿ ಒಬ್ಬ ಜ್ವಲಕಂಠ ಮಹಾಂತಸ್ವಾಮಿ. ಈತ ಮುರಿಗೆ ಶಾಂತವೀರರ ಶಿಷ್ಯ. ಈತನ ಕಾಲ -೧೭೦೦.[೨] ಈತನ ವೈಯಕ್ತಿಕ ಜೀವನ ಸಂಗತಿಗಳು ಹೆಚ್ಚಿಗೆ ಲಭ್ಯವಿಲ್ಲ. ಈತ ರಚಿಸಿದ ಕೃತಿಗಳು –

೧. ಶಿವಗಣ ಸಹಸ್ರ ತಾರಾವಳಿ

೨. ಮಹಾಂತ ಸ್ವಾಮಿಗಳು ನಿರೂಪಿಸಿದ ನಾಂದ್ಯ

೩. ಕಲಿಗಣನಾಥ ಸ್ತೋತ್ರ

೪. ಶಿವದೀಕ್ಷಾ ವಿವೇಕ ಚಿಂತಾಮಣಿ

೫. ತುರಂಗ ದಾಟಿ

೬. ಛಂದಸ್ಸಿನ ಗಣನೆಯ ವಾರ್ಧಕ ಷಟ್ಪದಿ

೧. ಶಿವಗಣ ಸಹಸ್ರ ತಾರಾವಳಿ :

ವಿಶ್ವಸಾಹಿತ್ಯಕ್ಕೆ "ವಚನ ಸಾಹಿತ್ಯ"ದಂಥ ಅಪೂರ್ವ ಕೊಡುಗೆಯನ್ನು ಕೊಟ್ಟ ಕೀರ್ತಿ ವೀರಶೈವ ಕವಿಗಳಿಗೆ ಸಲ್ಲುತ್ತದೆ. ಇವರು ವಚನ ಮಾತ್ರವಲ್ಲದೆ ರಗಳೆ, ಷಟ್ಪದಿ, ಸಾಂಗತ್ಯ, ಶರಕ, ಅಷ್ಟಕ, ತ್ರಿಪದಿ, ಕಂದ ಮೊದಲಾದ ಸಾಹಿತ್ಯ ಪ್ರಕಾರಗಳಲ್ಲಿಯೂ ಕೃಷಿ ಮಾಡಿದ್ದಾರೆ. ಜೊತೆಗೆ ಲಘುಸಾಹಿತ್ಯ ಪ್ರಕಾರಗಳನ್ನೂ ರಚಿಸಿದ್ದಾರೆ. ಇಂಥ ಸಾಹಿತ್ಯ ಪ್ರಕಾರಗಳಲ್ಲಿ ತಾರಾವಳಿಯು ಒಂದು.

ತಾರಾವಳಿ ಸ್ತೋತ್ರ ಸಾಹಿತ್ಯದ ಗುಂಪಿಗೆ ಸೇರುವ ಕಾರಣ ಇಲ್ಲಿ ಸ್ತುತಿರೂಪದ ಕೃತಿಗಳೇ ಅಧಿಕಸಂಖ್ಯೆಯಲ್ಲಿ ದೊರೆಯುತ್ತವೆ. ಇವುಗಳಲ್ಲಿ ಪ್ರಮುಖವಾಗಿ ಶಿವಸ್ತುತಿ, ಗಣಸ್ತುತಿ, ಶರಣಸ್ತುತಿ ಎಂದೂ ಗಣಸ್ತುತಿ ರೂಪದ ತಾರಾವಳಿಯಲ್ಲಿ ಸಹಸ್ರಗಣಸ್ತುತಿ, ಪ್ರಮಥರ ಸ್ತುತಿ, ವೀರಭದ್ರ, ಸಿಂಶುಮಾರರ ಸ್ತುತಿ ಕಂಡುಬರುತ್ತದೆ.[೬೩]

ಜ್ವಲಕಂಠ ಮಹಾಂತ ಸ್ವಾಮಿಯ "ಶಿವಗಣ ಸಹಸ್ರ ತಾರಾವಳಿ" ಎಂಬುದು ಹೆಸರೇ ಸೂಚಿಸುವಂತೆ ಸಹಸ್ರ ಶಿವಗಣರ ನಾಮಸ್ತುತಿಯನ್ನು ಮಾಡುತ್ತದೆ. ಇದು ೨೯ ನುಡಿ, ೫ ಕಂದ, ಅಂತ್ಯದಲ್ಲಿ ಗದ್ಯವನ್ನು ಹೊಂದಿದೆ.

ತಾರಾವಳಿಯ ಪ್ರಾರಂಭದಲ್ಲಿ –

"ಹರಗಣ ತಾರಾವಳಿಯನು
ನಿರವಿಸಿ ಬರೆವುದಕೆ ಎನಗೆ ಶೋಭನಮತಿಯಂ
ಕರುಣಿಸು ದೇವರ ದೇವನೆ
ಗುರು ಮುರಿಗೆಯ ಶಾಂತವೀರ ರಾಜ ಮಹೇಶಾ ॥೧॥

ಎಂದು ಪ್ರಾರಂಭಿಸಿ, ನಂತರದಲ್ಲಿ "ಪಾಲ್ಕುರಿಕೆಯ ಸ್ವಾಮಿದೇವ ಲೋಲಂ ಆದಿಯೊಳ್ ಪೇಳ್ದ ಗಣಸಾಸಿಗಮಂ ಮೇಲುಮತಿಯಿಂದೆ ಪೇಳುವೆ ಲಾಲಿಸಿ ಸದ್ಭಕ್ತಜನರುಂ ಕವಿಕೋವಿದರುಂ"[೬೪] ಎಂದು ತನ್ನ ಕೃತಿಯ ಆಕರವನ್ನು ಸೂಚಿಸಿದ್ದಾನೆ. ಮುರಿಗೆಯ ಶಾಂತವೀರದೇವ "ಸರಸ ಸನ್ಮತಿಯನೀವುದು" ಎಂದು ಪ್ರಾರ್ಥಿಸಿದ್ದಾನೆ. ಪ್ರತಿ ನುಡಿಯಲ್ಲಿಯೂ ಆದಿಪ್ರಾಸ ನಿತ್ಯವಾಗಿದೆ. ಕೃತಿಯ ಅಂತ್ಯದಲ್ಲಿ ಫಲಶ್ರುತಿಯ ಜೊತೆಗೆ ಗದ್ಯವನ್ನು ಹೇಳುವ ಮೂಲಕ ಕೃತಿಯ ಸಮಾಪ್ತಿ ಕಾಲವನ್ನು ಸೂಚಿಸಿದ್ದಾನೆ.

"ಇದು ಸದ್ಭಕ್ತ ಶಿರೋಮಣಿ ಲತಾಂತಶೇಖರಸಂಖ್ಯಾತ ಮಹಾಗಣ, ಪ್ರಥಮಗಣ, ರುದ್ರಗಣ, ಏಕವಿಂಶತಿ ವೃಷಭಗಣ, ಯೋಗಾಚಾರ್ಯ, ಅರವತ್ತುಮೂರು ಪುರಾತನರು, ಷೋಡಶಗುಣ, ತೇರಸಗಣ, ದಶಗಣ, ಕಲ್ಯಾಣದ ದಂಡನಾಯಕ ಬಸವಣ್ಣ ಮುಖ್ಯವಾದ ಅಮರಗಣ, ನವೀನ ನವಪ್ರಶಸ್ತಿಗಳನ್ನುಳ್ಳ ಸಹಸ್ರಗಣನಾಮ ತಾರಾವಳಿಯು, ಕಲಿಯುಗ

ಸಾಲಿವಾಹನ ಶಕ ವರುಷ ೧೬೩೬ ನಡೆವ ಜಯನಾಮ ಸಂವತ್ಸರ ಭಾದ್ರಪದ ಬಹುಳ ತ್ರಯೋದಶಿ ಆದಿತ್ಯವಾರದ ಮುಂಜಾವದಲ್ಲಿ ಸಮಾಪ್ತಿಯಾಯಿತ್ತು. ಮಂಗಳಮಹಾ ಶ್ರೀ ಶ್ರೀ ಶ್ರೀ.[೭೫]

ಬಣ್ಣಿಸಲಳವೆ ನಾ ಶಿವಗಣಸಹಸ್ರರ

ಕಣ್ಣುಮೂರುಳ್ಳ ಶಂಕರನವತಾರರ

ಬಣ್ಣಿಸಲಳವೆ ನಾನು ॥

ಎಂದು ಪ್ರಾರಂಭಿಸಿ ನಿಗಮತಂತ್ರಗಳಂತರ್ಗತವಾದ ಅಗಣಿತ ಮಹಾಗಣಗಳನ್ನು ಸ್ತುತಿಸುತ್ತಾ ಹೋಗಿರುವನು. ಜಗದೊಳಗೆ ಅಘಹರನೆನಿಸಿದ ಪರಮೇಶ, ಈಶನಂ, ಈಶ್ವರನಂ, ಸರ್ವಭೂತ ವಿಶ್ವತೋಚಕ್ಷು ವಿಶ್ವತೋಬಾಹು ವಿಶ್ವಾಧೀಶನಾದ ರುದ್ರ, ಮೃಗಧರರ, ಅಷ್ಟಯೋಂಗಾಗರ, ಅಗಣಿತರ, ಮಹಿಮ ಸ್ವರೂಪರ ಸ್ತುತಿಸುವೆ. ಪುರಾಣ, ಆಗಮ, ಉಪನಿಷತ್ತುಗಳಲ್ಲಿ ಉಲ್ಲೇಖಿಸಲ್ಪಟ್ಟ ಶಿವಲಿಂಗಾರ್ಚಕರಾದ ಜಮದಗ್ನಿ, ಕಸ್ಯಪ, ಅಗಸ್ತ್ಯರು ಭಸ್ಮ ವಿಭೂತಿ–ರುದ್ರಾಕ್ಷಿ–ಧೃತನಾಮಾಲಾ ಭೂಷಣರು ಸತತ ನೈರ್ಮಲ್ಯರುಗಳು, ಮಹಾನುಭವಿಗಳು ಆಗಿರುವರು.

ಮತ್ಸ್ಯ, ಕೂರ್ಮ, ವರಾಹ ಅವತಾರಧರಿಸಿದಂತಹ ಗಣರು, ದೂರ್ವಾಸ, ಅಗಸ್ತ್ಯ, ಭೃಗು, ವಶಿಷ್ಠ, ಧದೀಚಿ ಮೊದಲಾದ ಮುನಿಮಾರ್ಗ ಸ್ಥಾಪನಾಚಾರ್ಯರು.

ದುಷ್ಟರ ಶಿಕ್ಷಕ ಶಿಷ್ಟರ ರಕ್ಷಣರುಗಳಾದ – ಸುಖನಂದಿ, ಶ್ರೀನಾಥ, ಭೃಂಗಿನಾಥ, ಶ್ರೀವೀರಭದ್ರರು ಮೊದಲಾದ ಸಂಪೂರ್ಣ ಪೃಥ್ವಿಯ ಅಸಂಖ್ಯಾತ ಶಿವಗಣರುಗಳ, ಸ್ತುತಿ ಮಾಡುವವರಿಗೆ ಪಾಪ ಪರಿಹಾರವಾಗುವದು. ಸುಕೃತಿ ಲಭಿಸುವುದು, ಮುಕುತಿ ದೊರೆಯುವುದು, ದುಃಖಗಳು ಸಂಹಾರವಾಗುವವು, ಸದ್ಗುಣ ಸಂಪನ್ನರಾಗುವರು.

ಕಂದುಗೊರಲನವತಾರಿಗಳಾದ – ವಿಜಯಭದ್ರ, ವೀರಭದ್ರ, ಭದ್ರಾಕ್ಷ, ಭದ್ರರು, ಮಹಾಕಾಳರು, ಧೂಮಾಕ್ಷ, ಅನಲಾಕ್ಷ, ವಿಕಲಾಕ್ಷ, ವಿಮಲಾಕ್ಷ, ವಿಶ್ವವಿಶ್ವಾಕ್ಷರು, ವಿಕಲಾಂಗ, ಗಗನಾಂಗ ವಿಜಯರು, ಸೂರ್ಯವರ್ಣ, ಸೋಮವರ್ಣರು ಪಿಂಗಳ, ಮಧುಪ, ಸದ್ಯೋಜಾತ, ಪಿಂಗಳಾಂಬಕ, ಮಧುಪಿಂಗಳ, ಶ್ರೀಕಂಠ, ಹರಿಹರ, ಪುಂಡರೀಕ, ಗಗನಾನಂದ, ಗಗನೇಶ, ಶಂಭು ಗೌರೀಶ್ವರರು.

ಘಂಟಾಕರ್ಣ, ಗಜಕರ್ಣ, ಶಂಕುಕರ್ಣ, ದ್ವಿಕರ್ಣ, ತ್ರಿಕರ್ಣ, ಸಹಸ್ರಕರ್ಣ, ವಿಕರ್ಣ, ವಿಶ್ವಕರ್ಣ, ವಿಜಯಕರ್ಣ, ಗೋಕರ್ಣ, ಸ್ಥೂಲಕರ್ಣ, ಸೂಕ್ಷ್ಮಕರ್ಣರು.

ಕಪಿಮುಖ, ಅಹಿಮುಖ, ಕರಿಮುಖ, ನರಮುಖ, ಹರಶರಭ ಮುಖಮುಖೋಷ್ಠಿ ಮುಖ ಮುಖ್ಯರು, ಶಾರ್ದೂಲ ಮುಖ, ಸಿಂಹಮುಖ, ಮೇಷಮುಖ, ಗೋಮುಖ, ಚತುರ್ಮುಖ,

ಪಂಚಮುಖ, ಉರುಮುಖ, ನವಮುಖ, ದಶಮುಖ, ಷಣ್ಮುಖ, ದ್ವಿಮುಖ, ತ್ರಿಮುಖ, ಏಕಮುಖ, ವರ ಶತಮುಖ ಸಾಸಿರಮುಖರು.

ರೇಣುಕ, ದಾರುಕ, ತ್ರಯಂಬಕ, ಅರ್ಧನಾರೀಶ್ವರ, ಹಾಟಕೇಶ್ವರ, ಮೃತ್ಯುಂಜಯ, ಸೋಮಾಂಕ, ಸತೋದರ, ಮಹೋದರ, ಶೂಲಾಧರ, ಚಂಡೋದರ, ಕುಂಭೋದರ, ಅಂಭೋದರ, ವೃಷಾಂಕ, ಸೋಮದತ್ತ, ಭಗದತ್ತ, ಪಾಂಡುರಂಗ, ಗಗನಾನಂದ, ಲಂಬೋದರ, ಲಂಬಾಕ್ಷ, ದಶಭುಜ, ದ್ವಿಭುಜ, ತ್ರಿಭುಜ, ಸಾವಿರಭುಜ, ರೌದ್ರಾಕ್ಷ, ಸೂರ್ಯಾಕ್ಷ, ಸೋಮಭೀಮಾಂಗ, ಜೋಮಾಂಗ, ಜಿಂಹ್ವಾಕೇಸರ, ಮಹಾಕೇಸರ, ಊರ್ಧ್ವಕೇಸರ, ಶಾಲತ್ರಿಕೇಸರ, ಘನವಹ್ನಿ ಜಿಹ್ವೆ, ಮಹಾಜಿಹ್ವೆ, ನಿಜಜಿಹ್ವೆಯ ಶ್ರೀಧರ ಗರುಡ, ಗಂಧರ್ವ, ವಿದ್ಯಾಧರ ಮುನಿಗಳು, ಅಖಿಲ ದಿಕ್ಪಾಲರು, ಶಿವಗಣಂಗಳಾದ ಇವರೆಲ್ಲರನ್ನು ಸ್ತುತಿಸಿ ಮುಕ್ತಿ ದೊರಕಿಸಿಕೊಳ್ಳಬೇಕೆಂದು ಹೇಳುತ್ತಾರೆ.

"ಅನುದಿನ ನುತಿಸಿ ತಾವೆಲ್ಲರು ಕಾಣದೆ
ಜಿನುಗುತಿರ್ದರು ಬಿಡದೆ। ಮಹಿಮರೂಪ
ರನುವ ಸಾಧಿಸಲರಿಯದೆ । ಹೋದರು ಅಲ್ಪ
ಮನುಜರ್ಗೆ ತಿಳಿಯಬಹುದೆ । ಅಪ್ರತಿಮ
ರನಂತ್ರ ಕೋವಿದರಿರದೆ । ಪೊಗಳಲನ್ಯ
ಮನಕಸಾಧ್ಯರು ಪದುಳದೇ । ಈ ದ್ವಿತೀಯ ಪ್ರಸ್ತವ
ನೆನೆದು ಪಠಿಸುವವರಿಗೆ ಮುಕ್ತಿದೊರವುದರಿದೆ ॥

ರುದ್ರಗಣರು: ವಿಶ್ವಾಧಿಕ ರುದ್ರ, ಏಕರ್ಣಾರ್ಚಿತ ರುದ್ರ, ಮೃತ್ಯಹರಣ ರುದ್ರ, ರಾಮಶರಭ ರುದ್ರ, ವ್ಯೋಮಶರಭ ರುದ್ರ, ಕೋಮಲ ರುದ್ರ, ಜಯರುದ್ರ, ಕಾರ್ಮುಖ್ಯ ರುದ್ರ, ಮಹಾಶಿವರುದ್ರ, ಏಕಸಾಪಾದಾದಿ ರುದ್ರ ಮೊದಲಾದ ರುದ್ರಗಣರುಗಳನ್ನು ಜಯ ಜಯ ಎಂದು ಸ್ತುತಿಸುವುದರಿಂದ ಉಂಟಾಗುವ ಫಲಶ್ರುತಿಯನ್ನು ಹೀಗೆ ಹೇಳುತ್ತಾನೆ –

ಜಯ ಜಯ ಪರಮೇಶನ ಸಭೆಯೊಳಗಿರುವಂತ
ಜಯ ರುದ್ರಗಣ ಪ್ರಸ್ತವನು ಬರದೋದಿದ
ಜಯ ಭಕ್ತಜನಕೆ ಕೈವಲ್ಯ ಸಂಪದಸಿದ್ಧಿ
ಜಯದಿಂದ ಧರೆಯೊಳು ದೊರಕುವದಿದು ಸತ್ಯ"

ಹಾಗೆಯೇ ಮುಂದುವರಿದು ವೃಷಭಗಣ ಯೋಗಾಚಾರ್ಯರ ಪ್ರಿಯದ ಪ್ರಸ್ತವನು ಬರೆದು ಓದಿದವರಿಗೂ ಇಷ್ಟಸಿದ್ಧಿಗಳು ಲಭಿಸುವವು ಎಂದಿರುವನು.

ಅರವತ್ತುಮೂರುಪುರಾತನರು: ತಿರುನೀಲಕಂಠರು, ತಿರುನೀಲಕ್ಕರು, ತಿರುಮೂಲದೇವರು, ತಿರುಜ್ಞಾನಿಸಂಬಂಧಿಗಳು, ತಿರುನಾಳ್ಪೋವರು, ಪಿಳ್ಳೆನೈವಾರು, ತಿರುಕುರುಪೆತೊಂಡರು, ದೀಪದ ಕಲಿಯರು, ಕಲಿಗಣನಾಥರು, ಕಲಿಕಾಮ ದೇವರುಗಳು, ಮೆರೆಮಿಂಡದೇವರು, ಏಣಾದಿನಾಥರು, ಕರವೂರ ಚೋಳರು, ನಂಬಿಯಣ್ಣ, ಕಾರಿಕಾಲೆಮ್ಮೆ ಚನ್ನಯ್ಯ, ಚೋಳ, ಚಾರಮರಾಯ, ಕಣ್ಣಪ್ಪ, ಪಾಂಡ್ಯರಾಜರ್ಕರು, ಗುಡ್ಡವ್ವೆ ಹಂದಯ್ಯ, ಕಿನ್ನರ, ಕೇತಲದೇವಿ, ಬ್ರಹ್ಮಯ್ಯ, ದೇವಯ್ಯ, ಬಿಜ್ಜಯ್ಯ, ಚಾಚಲದೇವಿ, ಕಾಳವ್ವೆ ಸೋಮಿದೇವ, ಬಾಚಯ್ಯ, ನಾಗಿನಾಥದೇವರುಗಳು ಇವರುಗಳನ್ನು ಸ್ತುತಿಸಬೇಕು.

ಷೋಡಶಗಣ:

ಕಂದ: ಷೋಡಶ ಶಿವಗಣರುಗಳ
ರೂಢಿಯ ನಾಮವನು ಬರೆದು ಪಠಿಸಲು ಬಿಡದೆ
ಕೂಡಿಪರ ಮೇಳನವರಿಗೆ
ಬೇಡಿದ ಸುಖಂಗಳ ನೀವಮಿದು ಸಿರಿಂದಾಂತಂ

ಸಿಂಗಿದೇವ, ಬೊಮ್ಮಿಶೆಟ್ಟಿ, ಬೊಪ್ಪಲದೇವಿ, ಸಂಗಯ್ಯ, ಬಸವಯ್ಯ, ಸಂಗವ್ವೆ, ಕನ್ನಮರಸಿ, ಹೂವಿನ ಬಾಚಯ್ಯ, ದೇವಣ್ಣ, ದೇವಯ್ಯ, ಓಹಿಲದೇವಯ್ಯ, ಕಾಮಲದೇವಿಯರು ಇವರನ್ನು ಸ್ತುತಿಸಬೇಕು.

ತೇರಸ ಶಿವಗಣರುಗಳು: ಸಿಂಗಿದೇವಯ್ಯ, ಕಾಮಲದೇವ, ಚೋಳವ್ವೆ, ಸಿಂಗಿರಾಜ, ದೋರಿದೇವಯ್ಯ, ಬಾಚಯ್ಯ, ಬೊಪ್ಪಲದೇವಿ, ಕನ್ನಮರಸಿ, ಮಾಯಿದೇವಯ್ಯ ಇವರೆಲ್ಲ ಮೂರು ಕಣ್ಣುಳ್ಳ ಶಿವನವತಾರಿಗಳು.

ದಶಗಣರು: ದಣ್ಣಾಯಕ ಸಂಗನಬಸವಯ್ಯ, ಪ್ರಭಾತಯ್ಯ, ಮಾದಿರಾಜಯ್ಯ, ವೆಂಗಿಸಂಗಯ್ಯ, ಸಿಂಗಿ ಬೊಪ್ಪಯ್ಯ, ಸಿಂಧುಬಲ್ಲಾಳರಾಯ, ಬಸವಣ್ಣ, ಕೇಶಿರಾಜಯ್ಯರು ಅಂಗರಾಯಣ್ಣರು.

ಕಲ್ಯಾಣದ ದಂಡನಾಯಕ ಬಸವಣ್ಣ ಮುಖ್ಯವಾದ ಅಮರಗಣಗಳು. ಮಡಿವಾಳ ಮಾಚಯ್ಯ, ಹೊಡೆಹುಲ್ಲ ಬಂಕಯ್ಯ, ಧೂಪದ ಮಾಚಯ್ಯ, ಪಡಿಹಾರಿ ಉತ್ತಣ್ಣ, ಬಾಚಿರಾಜಯ್ಯ, ಬಡಿಹೋರಿ ಬ್ರಹ್ಮಯ್ಯ, ಕಿನ್ನರ ಬ್ರಹ್ಮಯ್ಯ, ಉಡುತಡಿಯ ಮಹಾದೇವಿ , ಪಡಿಹಾರಿ ಬಸವಯ್ಯ, ಮುಸುಟಿಯ ಚೌಡಯ್ಯ, ಎಡೆಮಠದ ನಾಗಯ್ಯ, ಮೋಳಿಗೆಯ ಮಾರಯ್ಯ, ಹಡಪದಪ್ಪಣ್ಣಗಳು, ಮಲ್ಲಿದೇವಯ್ಯ, ಹಳ್ಳಯ್ಯ, ಶೂಲದ ಬ್ರಹ್ಮಯ್ಯ, ಮಧುವಯ್ಯ, ಕಲಹಕೇತಯ್ಯ, ಕಕ್ಕಯ್ಯ, ಸುರಿಗೆಯ ಚೌಡಯ್ಯ, ದಸರಯ್ಯ, ಮಡಣಯ್ಯ, ಬೊಮ್ಮಯ್ಯ, ಹೊನ್ನಯ್ಯ, ಕಾಲಾಗ್ನಿರುದ್ರಯ್ಯ, ನಿರ್ಲಜ್ಜಯ್ಯ, ದೇವರ ದಾಸಯ್ಯ, ನಾಚಯ್ಯ, ಹೊನ್ನ ಬ್ರಹ್ಮಯ್ಯ, ಪೊಡೆಯ ರಾಮಯ್ಯ, ಕದಿರೆ ರೆಮ್ಮಯ್ಯ, ಕಾಳಯ್ಯ, ಬಿಬ್ಬವಾಚಯ್ಯ, ವೀರೂಚಯ್ಯ, ಬಳ್ಳೇಶಯ್ಯ, ಉರಗಮಲ್ಲಯ್ಯ, ದೇವದೇವಯ್ಯ, ನಿಜಲಿಂಗ ಚಿಕ್ಕಯ್ಯ, ನಿರ್ಲಜ್ಜ ಶಾಂತಯ್ಯ, ಭಾನುದೇವಯ್ಯ, ಮೈಲಿಯ ಶಿವಯ್ಯ, ಗಜೇಶ

ಮಸಣಯ್ಯ, ಅಮಾತ್ಯ ಮಲ್ಲಯ್ಯ, ಶಿವಯ್ಯ, ವೀರ ಕೇತಯ್ಯ, ವೀರಸಂಗಯ್ಯ, ವೀರಬ್ರಹ್ಮಯ್ಯ, ಶಂಕರದಾಸಿಮಯ್ಯ, ಶ್ವಪಚಯ್ಯ, ಅಮುಗಿದೇವ, ಬಂಕದೇವಯ್ಯ, ಮಾರುಡಿಗೆ ನಾಚಯ್ಯ, ಮೊರಟದ ಬಂಕಯ್ಯ, ಅಮರಗುಂಡದ ಮಲ್ಲಿಕಾರ್ಜುನ, ಸನ್ನೇಸಿಮಂಚಯ್ಯ, ವೀರಕಲ್ಲಯ್ಯ, ಕೋಡಗದ ಮಾರಿತಂದೆ ಮುಂತಾದಂತ –

> ಶರಣಗಣಂಗಳ ಸಾವಿರ ನಾಮವ
> ಗುರುಭಕ್ತಿಯಿಂ ಜಪವ ಮಾಡಿ ಕೀರ್ತಿಸಿಬರಿಗೆ
> ಬರೆದು ತ್ರಿಕಾಲದೊಳೋದುವ ಭಕ್ತರಿಗೆ
> ಹರುಷದಿಂದ ಪ್ರವಣದಿ ಕೇಳಿದ ಜನರಿಗೆ
> ದುರಿತ ಸಂಹರವಪ್ಪುದು । ದುಃಸ್ವಪ್ನವು
> ಪರಿಹಾರವಾಗುವುದು । ದುಃಕರ್ಮವು
> ಇರದೋಡಿ ಪೋಗುವದು । ಬೇಡಿದ ಮುಕ್ತಿ
> ವರ ಫಲ ದೊರಕುವದು ಮಹಾದೇವನ
> ಕರುಣ ಸಂಭವಿಸುವದು ಸಠೆಯೆಂಬರಿಗೆ
> ನರಕವಹುದು ಸತ್ಯವಪ್ಪುದು ತಪ್ಪದು[೬೬] ॥

ಹೀಗೆ ಶಿವನ ಸಹಸ್ರಗಣಂಗಳ ಸ್ತುತಿಯ ಮಹಿಮೆ ಹಾಗೂ ಶರಣಗಣಂಗಳ ಸಾವಿರನಾಮದ ಮಹಿಮೆಯನು ಹೇಳುತ್ತಾ ಶ್ರೀಶ್ರೀವಮಸ್ತು ಜ್ಞಾನ ಸಂಪಾದನ ಮಸ್ತು ಎಂದು ಮುಕ್ತಾಯಗೊಳಿಸಿದ್ದಾನೆ.

ಸಾವಿರ ಸಂಖ್ಯೆ ಶಿವಗಣಂಗಳು, ಸಾವಿರ ಸಂಖ್ಯೆಯ ಶರಣಗಣಂಗಳ ನಾಮವನ್ನು ಹೆಸರಿಸುವ ಮೂಲಕ ತಾನೊಬ್ಬ ತಾರಾವಳಿಕಾರನೆಂದೂ, ತಾನೊಬ್ಬ ಶಿವಭಕ್ತನೆಂದೂ, ತಾನೊಬ್ಬ ಶರಣಪ್ರೇಮಿ ಎಂದೂ ತೋರಿಸಿಕೊಂಡಿದ್ದಾನೆ. ಆದಿಪ್ರಾಸವನ್ನು ಹೊಂದಿದ ಈ ಸ್ತುತಿಪದ್ಯಗಳು ತಾರಾವಳಿ ಸಾಹಿತ್ಯ ಪ್ರಕಾರದ ಎಲ್ಲ ಲಕ್ಷಣಗಳನ್ನು ಹೊಂದಿದ್ದು, ಜ್ವಲಕಂಠಮಹಾಂತಸ್ವಾಮಿ ಒಬ್ಬ ಅತ್ಯುತ್ತಮ ತಾರಾವಳಿಕಾರ ಎಂದು ಗುರುತಿಸಬಹುದು.

೨. ಮಹಾಂತಸ್ವಾಮಿಗಳು ನಿರೂಪಿಸಿದ ನಾಂದ್ಯ :

ಈ ಕೃತಿಗೆ "ಅಯ್ಯನವರ ನಾಂದ್ಯ" ಹಾಗೂ "ಮುರಿಗೆಯ ಶಾಂತವೀರೇಶ್ವರನ ಪಂಚವಿಂಶತಿ ಸ್ತೋತ್ರ" ಎಂದೂ ಕರೆಯಲಾಗುತ್ತದೆ. "ಷಟ್ಪದಿ" ರೂಪದಲ್ಲಿರುವ ಇದು ೨೫ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ಗುರು ಮುರಿಗೆಯ ಶಾಂತವೀರನನ್ನು ಭಕ್ತಿಭಾವದಿಂದ ಸ್ತುತಿಸುವುದೇ ಇದರ ವಿಶೇಷತೆ. ಪ್ರತಿ ಷಟ್ಪದಿಯಲ್ಲಿಯೂ "ಶಾಂತವೀರ" ಅಥವಾ "ಮುರಿಗೆಯದೇವ" ಎಂಬ ಅಂಕಿತ ಬರುತ್ತದೆ. ಆದಿಪ್ರಾಸ ನಿತ್ಯವಾಗಿದೆ.

ಕೃತಿಯ ಪ್ರಾರಂಭದಲ್ಲಿ ಮುರಿಗಾ ಶಾಂತವೀರರ ಸ್ತುತಿಯನ್ನು ಹೀಗೆ ಮಾಡಿದ್ದಾನೆ –

ಶ್ರೀಮದನುಪಮ ಸತ್ಯ ನಿರ್ಮಳ
ಸೋಮಶೇಖರ ಕಾಮ ಸಂಹರ
ಸ್ವಾಮಿ ಶಾಶ್ವತ ಶರಣಜನ ಸತ್ಪ್ರೇಮ ಗುಣಧಾಮ
ಹೇಮಗಿರಿ ನಿಜವಾಸ ಶಂಕರ
ನಾಮ ಕರುಣಾಸಾರ ಕೋವಿದ
ರಾಮಣೀಯಕ ಶಾಂತವೀರ ಚಿದಂಗ ಪಾಲಿಪುದು ॥೧॥

ಗುರು ಮುರಿಗಾ ಶಾಂತವೀರನನ್ನು ಶಿವನೊಂದಿಗೆ ಅಭೇಧ ಕಲ್ಪಿಸಿ ಸ್ತುತಿಸುವುದರೊಂದಿಗೆ ತನ್ನ ಗುರುಭಕ್ತಿಯನ್ನು, ಗುರುಮಹಿಮೆಯನ್ನು ಎತ್ತಿ ತೋರಿದ್ದಾನೆ. ಮುಂದೆ ಬರುವ ಎಲ್ಲ ಪದ್ಯಗಳೂ, ಶಿವನ ವರ್ಣನೆ, ಶಿವನ ಮಹಿಮೆಗೆ ಮೀಸಲಾಗಿದೆ. ಧರೆಯಲ್ಲಿ ಶಿವನೇ ಶ್ರೇಷ್ಠ. ಅವನಿಗೆ ಸರಿಸಮನಾಗಿ ನಿಲ್ಲಬಲ್ಲವರು ಯಾರೂ ಇಲ್ಲವೆಂಬುದನ್ನು ಕವಿ ಹಲವು ಉದಾಹರಣೆಗಳ ಮೂಲಕ ಸ್ಪಷ್ಟಪಡಿಸಿದ್ದಾರೆ. ಆ ಶಿವನ ಅವತಾರವೇ ಗುರು ಮುರಿಗೆಯ ಶಾಂತವೀರೇಶ ಎಂಬುದನ್ನು ಹೀಗೆ ಹೇಳಿದ್ದಾರೆ.

"ಶಿವನು ಶರಧಿಯೊಳಂದು ಗಿರಿಜೆಗೆ
ಶಿವರಹಸ್ಯಾಗಮವ ಪೇಳಿದ
ವಿವರದರ್ಥವನೆಲ್ಲ ಶಿವ ಜಂಗಮದ ಮಹಿಮೆಯನು
ಕವಿಗಳರಿಯರುಯೆಂದು ಭುವನದಿ
ಭವಹರನು ತಾನೊಂದು ರೂಪದಿ
ಶಿವಲೋಕದಿಂದಿಳಿದ ಮುರಿಗೆಯ ಶಾಂತವೀರೇಶ ॥೭॥

ಷಣ್ಮುಖ, ಬಸವಣ್ಣ, ಚೆನ್ನಬಸವಣ್ಣ, ಸಿದ್ಧಲಿಂಗ, ಬೋಳಬಸವ, ಗುರು ಕಟ್ಟಿಗೆಹಳ್ಳಿ ಸಿದ್ಧಲಿಂಗ ಮೊದಲಾದವರ ಅನುಗ್ರಹ ಕೃಪಾಶೀರ್ವಾದ ಹಾಗೂ ಅವರ ಶುದ್ಧ ಜ್ಞಾನದಿಂದ ಬೆಳೆದ ಮುರಿಗೆಯದೇವ ನೀನು. ಇದನ್ನು ಸಾಮಾನ್ಯ ಜೀವರರಿಯರು. ಅಂದು ಹರಿಯನು ಕೊಂದ ಶರಭನೇ ಇಂದು ನೀವಾಗಿರುವಿರಿ. ಧರಣಿಪತಿ ಬಿಜ್ಜಳನ ಆಜ್ಞೆಯಂತೆ ಮೈಲಿಗೆ(ಕಸ)ಯನ್ನು ತೊಳೆಯಲು ಬಂದ ವೀರ ಮಡಿವಾಳನಂತೆ ನೀವು.

"ನಿಮ್ಮ ಮಹಿಮೆಯನಾರು ಬಲ್ಲರು
ಬೊಮ್ಮ ತಿಮ್ಮರು ಮೊದಲೆಯರಿಯರು
ಹೆಮ್ಮೆಯಿಂದಲಿ ಕಾಣ್ಬೆವೆಂದರೆ ಅವರಿಗರಿದರಿದು
ಸುಮ್ಮನದ ಶಿವಭಕ್ತರೆಲ್ಲರ
ಸೊಮ್ಮನರ್ಪಿಸಿಕೊಂಡ ದೇವನೆ
ನಮ್ಮನೆಲ್ಲರ ಸಲಹು ಮುರಿಗೆಯ ಶಾಂತವೀರೇಶ ॥೭॥

ಗುರುವೇ, ನೀನೇ ದೀಕ್ಷಾಗುರು, ಶಿಕ್ಷಾಗುರು, ಮೋಕ್ಷಾಗುರುವೂ ಹೌದು. ದನುಜ ಸಂಹಾರಕ, ಸುಜನರ ಮನದ ಪ್ರಕಾಶಕ ನೀನು, ದೇವರದೇವ ನೀ, ಪರಮ ಗುರು ನಿ ಎಂದು ಭಕ್ತಿಭಾವ ಭರಿತನಾಗಿ ಗುರುವಿನ ಸ್ತುತಿ ಮಾಡಿರುವರು.

ಕೃತಿಯ ಅಂತ್ಯದಲ್ಲಿ –

ಇಂತು ನಿಮ್ಮಯ ಮಹಿಮೆ ಸ್ತುತಿಯನು
ಸಂತತಂ ಬರದೋದಿದವರುಂ
ಚಿಂತೆಯಳಿದುನ್ನತದ ಮುಕ್ತಿಯನೈದಿ ನಿಜವಹರುಂ
ಅಂತುಮಲ್ಲದೆ ಸಕಲ ಸಿದ್ಧಿಯ
ಸಂತಸದೊಳೆಯಿತಂದು ಪಡೆವರು
ಕಾಂತ ಮುರಿಗೆಯ ಶಾಂತವೀರ ನಿಜೇಶ ರಕ್ಷಿಪದು ॥೨೫॥

ಎಂದು ಕೃತಿಯನ್ನು ಅಂತ್ಯಗೊಳಿಸಿದ್ದಾರೆ.

ಕೇವಲ ಕೃತಿಯ ಪ್ರಾರಂಭದಲ್ಲಿ ಬರುವ ಪ್ರಾರ್ಥನಾ ಪದ್ಯಗಳನ್ನು, ಸ್ತುತಿಪದ್ಯಗಳನ್ನು ನಾಂದ್ಯವೆಂದು ಪರಿಗಣಿಸದೇ, ಶಿವಸ್ತುತಿ ಹಾಗೂ ಗುರುಸ್ತುತಿಗಾಗಿಯೇ ಸ್ವತಂತ್ರ ಪದ್ಯಗಳನ್ನು ಬರೆದು "ನಾಂದ್ಯ" ಕೃತಿಯಾಗಿ ರಚಿಸಿರುವುದು ಇಲ್ಲಿ ಮುಖ್ಯವಾಗಿದೆ.

೩. ಕಲಿಗಣನಾಥ ಸ್ತೋತ್ರ :

ಷಟ್ಪದಿ ರೂಪದಲ್ಲಿ ರಚಿತವಾದ ಈ ಕೃತಿ ಒಟ್ಟು ೨೪ ಪದ್ಯಗಳನ್ನೊಳಗೊಂಡಿದೆ. ಮೊದಲ ೧-೧೮ ಪದ್ಯಗಳು, ಭಾಮಿನಿ, ೧೯-೨೪ ವಾರ್ಧಕ ಷಟ್ಪದಿಯಲ್ಲಿವೆ. ಕೊನೆಯಲ್ಲಿ ಒಂದು ಕಂದ್ಯ ಪದ್ಯವಿದೆ.

ಕಲಿಗಣನಾಥನ ಸ್ತುತಿಯನ್ನು ವಸ್ತುವಾಗುಳ್ಳ ಈ ಕೃತಿಯ ಮೊದಲ ಷಟ್ಪದಿ ಹೀಗಿದೆ –

"ಶ್ರೀಮದವಿರಳ ಶರಣ ಸುರಕುಜ
ನೇಮ ನಿತ್ಯಗಳಿಲ್ಲದನುಪಮ
ಹೇಮಗಿರಿವರಧಾಮ ಸದ್ಗುಣದೇವ ನತಚರಣ
ರಾಮಕಂಧರ ಭೀಮಸಂಹರ
ಶಾಮಲಾಂಗಿಯರಮಣ ಭಕ್ತರ
ಕಾಮಿತಾರ್ಥವನೀವ ಕಲಿಗಣನಾಥ ಮಾಂ ತ್ರಾಹಿ"[೭೭]

೪) ಶಿವದೀಕ್ಷಾ ವಿವೇಕಸಿಂಧು ಚಿಂತಾಮಣಿ :

ಭೋಗಷಟ್ಪದಿಯ ೨೧ ಪದ್ಯಗಳನ್ನೊಳಗೊಂಡಿದೆ. ೨೧ ತೆರನಾದ ದೀಕ್ಷೆಗಳ ವಿವರಣೆಯನ್ನು ಒಳಗೊಂಡಿದೆ.[೬೮]

೫) ತುರಂಗಧಾಟಿ :

ಸ್ತೋತ್ರಸಾಹಿತ್ಯದ ಗುಂಪಿಗೆ ಸೇರುವ ಇದು ದಂಡಕ ರೂಪದಲ್ಲಿದೆ. ಅಂತ್ಯದಲ್ಲಿ "ಶಾಂತವೀರೇಶದೇವ ಜಯ ಜಯಾ" ಎಂದಿದೆ. ಗುರುಶಾಂತವೀರರ ಸ್ತುತಿಯೇ ಇದರ ವಸ್ತು.[೬೯]

೬) ಛಂದಸ್ಸಿನ ಗಣನೆಯ ವಾರ್ಧಕ ಷಟ್ಪದಿ :

ಛಂದಸ್ಸಿಗೆ ಸಂಬಂಧಿಸಿದ ಕೃತಿಯಾಗಿರಬಹುದು. ಈ ಕುರಿತಾಗಿ ಹೆಚ್ಚಿನ ವಿವರಗಳು ಲಭ್ಯವಿಲ್ಲ.

ಒಟ್ಟಿನಲ್ಲಿ ಜ್ವಲಕಂಠ ಮಹಾಂತಸ್ವಾಮಿಯ ಎಲ್ಲ ಕೃತಿಗಳೂ ಸ್ತೋತ್ರರೂಪದಲ್ಲಿಯೇ ಇವೆ. ಮುರುಘಾ ಪರಂಪರೆಯ ಕವಿಗಳಲ್ಲಿ ಮುರಿಗಾ ಶಾಂತವೀರ, ಇಮ್ಮಡಿ ಮುರಿಗಾ ಗುರುಸಿದ್ಧರ ತರುವಾಯ, ಈತನೂ ಒಬ್ಬ ತಾರಾವಳಿಕಾರ, ನಾಂದ್ಯಕಾರ ಎಂದು ಗುರುತಿಸಲ್ಪಡುತ್ತಾನೆ.

ಕಂಪಿನಂಜಯ್ಯ (೧೭೦೦) :

ಮುರುಘಾ ಪರಂಪರೆಯ ಪ್ರಮುಖ ನಾಂದ್ಯಕಾರರಲ್ಲಿ ಒಬ್ಬ ಕಂಪಿನಂಜಯ್ಯ ಹಸ್ತಪ್ರತಿಗಳಲ್ಲಿ ಕಪ್ಪಿನಂಜೇದೇವ, ಕಪ್ಪಿಗಿ ನಂಜೇದೇವ ಎಂದು ಹೆಸರಿಸಲಾಗಿದೆ. ಈತ ಮುರಿಗೆ ಶಾಂತವೀರರ ಶಿಷ್ಯ. ಕಾಲ ಸುಮಾರು ೧೭೦೦. ವೀರಣಾರ್ಯನ ಪ್ರಸಾದ ಚಾರಿತ್ರದಲ್ಲಿ ಈತ ಉಲ್ಲೇಖಿತನಾಗಿದ್ದಾನೆ.[೭೦] ಸಧ್ಯಕ್ಕೆ ಈತನ ನಾಲ್ಕು ಕೃತಿಗಳು ಲಭ್ಯವಾಗಿವೆ.

೧) ಕಂಪಿನಂಜಯ್ಯನ ನಾಂದ್ಯ

೨) ಚೈತನ್ಯೇಶ್ವರ ವಿಜಯ

೩) ಚೇರಮ ಕಾವ್ಯದ ನಾಂದ್ಯದ ನುಡಿ

೪) ದೇವಿನಾಂದ್ಯದ ನುಡಿ

ಕಂಪಿನಂಜಯ್ಯನ ನಾಂದ್ಯ :

ಕಂಪಿನಂಜಯ್ಯನ ನಾಂದ್ಯಕ್ಕೆ "ಮುರಿಗೆಯ ಸ್ವಾಮಿಗಳ ಸ್ತೋತ್ರದ ನಾಂದ್ಯ" ಹಾಗೂ "ಶಾಂತವೀರೇಶ್ವರ ಸ್ತೋತ್ರದ ನಾಂದ್ಯ" ಎಂಬ ಭಿನ್ನ ಹೆಸರುಗಳಿವೆ. ಷಟ್ಪದಿ ರೂಪದಲ್ಲಿರುವ ಈ ಕೃತಿ ವಾರ್ಧಕ, ಪರಿವರ್ಧಿನಿ ಹಾಗೂ ಭಾಮಿನಿ ಷಟ್ಪದಿಯ ೨೫ ಪದ್ಯಗಳನ್ನೊಳಗೊಂಡಿದೆ. ಗುರು

ಮುರಿಗೆಯ ಶಾಂತವೀರರ ಸ್ತುತಿ ಇದರ ವಸ್ತು. ಈ ಕೃತಿಯಲ್ಲಿನ ೪ ಮತ್ತು ೭ನೆಯ ಷಟ್ಪದಿಗಳಿಗೆ ಅಜ್ಞಾತಕೃತ ಟೀಕೆಯೊಂದು ರಚಿತವಾಗಿದೆ.

ಕೃತಿಯ ಪ್ರಾರಂಭದಲ್ಲಿ ತನ್ನ ಗುರು ಮುರಿಗೆಯ ಶಾಂತವೀರನನ್ನು ಶಿವನೊಂದಿಗೆ ಅಭೇದಕಲ್ಪಿಸಿ ಹೀಗೆ ಸ್ತುತಿಸುತ್ತಾನೆ.

"ಶ್ರೀಮದಮರೇಂದ್ರ ವೈಕುಂಠ ವಿಧಿಕ್ಷೇಮ ಹಿಮ
ಭೂಮಿ ಭೃದ್ವರತನುಜೆಯರ್ಧಾಂಗ ಯಮಿಜನ
ಪ್ರೇಮ ಧೂಮಧ್ವಜ ಹಿಮಾಂಶು ದಿನಕರ ವಿಲೋಚನ ಸಾಂದ್ರ ಮಹಿಮ ಸುಗುಣ
ಸ್ತೋಮ ಪೂರ್ವಾಮಗ ಶಿರೋಮಾಲೆದಳೆದ ಪರ
ಕಾಮಾಂಗದಹನ ಭಸಿತ ವಿಲೇಪ ಕಾಯ ಮ
ತ್ಸ್ವಾಮಿ ರಕ್ಷಿಸು ಮಹೋಕ್ಷರ ಶಾಂತವೀರೇಶ ನರನಿಷ್ಪದಾತ ಮುದದಿಂ ॥೧॥

ಮನ್ಮಥನ ಹಡೆದಂಥ, ಲಕ್ಷ್ಮಿಯ ಅರುಗಿನಲ್ಲಿ ಹುಟ್ಟಿದಂಥ ಚಂದ್ರನ ಮಸ್ತಕದಲ್ಲಿ ಧರಿಸಿದಂಥ, ಪರಶಿವನ ಪುತ್ರನಾದ ಷಣ್ಮುಖನ, ಮಾವನಾದ ಇಂದ್ರನ, ಅವರ ಪುತ್ರನಾದ ಅರ್ಜುನನ, ಅಗ್ರಜನಾದ ಧರ್ಮನ, ಜನಕನಾದ ಯಮನ, ಅಪ್ಪನಾದ ಸೂರ್ಯನ, ಚೆನ್ನಾಗಿ ಹನ್ನೊಂದುದಿನ ತನಕವು, ನಿಲ್ಲಿಸಿದಂಥ ಬಸವೇಶ್ವರನ ಹಡೆದಂಥ ಮಾದಿರಾಜನ ಪುತ್ರಿಯಾದ ಅಕ್ಕನಾಗಮ್ಮನಲ್ಲಿ ಉದಯವಾದ ಚೆನ್ನಬಸವೇಶ್ವರನ ಆಚಾರ್ಯನಾದ ಬಸವೇಶ್ವರನ, ಚತುರನಾದ ಅನಿಮಿಷಯ್ಯಗಳ ಕರುಣವನು ಪಡೆದು ಜಗತ್ತಿನಲ್ಲಿ ನರ್ತಿಸಿ ಷಟ್ಸ್ಥಲಚಕ್ರವರ್ತಿ ಎನಿಸಿದವ ಶಾಂತವೀರೇಶ ಎಂದು ಟೀಕೆ ಬರೆಯಲಾಗಿದೆ.

ತನ್ನ ಗುರು ಪರಂಜ್ಯೋತಿ ಸ್ವರೂಪ, ಕೈತವ ವಿದೂರ, ಹರಿಣಾಂಕ, ಶಿರೋಮಾಲಾಧರ, ಬಿಸಗೊರಲಭವ, ಚಿತ್ರಭಾಚಾರ್ಯ ಕೃಪಾಂಬುಧಿ, ದನುಜೋತ್ಕರ, ಮರುತ್ಸಖ, ಮುನಿಚಿತ್ತೋನ್ನತ ಪನ್ನಗನಾಥ, ಮುಂತಾಗಿ ಶಿವನ ಅವತಾರಗಳನ್ನೇ ತನ್ನ ಗುರುವಿಗೆ ಆರೋಪಿಸುತ್ತಾನೆ.
ಗುರು ಶಾಂತವೀರನ ಮಹಿಮೆಯನ್ನು ಹೀಗೆ ಕೊಂಡಾಡುತ್ತಾನೆ.

ಸಿರಿಯಿರ್ದೇಂ ಫಲಮಾಯುಷ ರಹಿತಗೆ
ಕುರುಡಂಗಾದರ್ಪಣವಿರ್ದಡದೇಂ
ಸರಸಿಜವದನೆ ನಮುಂಸಕಗಿರ್ದೊಡದೇಂ ಫಲಮಜೆರಿಯಲ್ಕೆ
ವರ ಶ್ರುತಿ ಪೌರಾಣಂಗಳ ವಾಕ್ಯವ
ಪಿರಿದಱಿದೊಡದೇಂ ಫಲಮವನಿಯೊಳುಂ
ಪುರಹರ ನಿಮ್ಮಯ ಪದ ಸರಸಿರುಹವನಱಿಯದ ಮಾನವಗೆ ॥೬॥

ಕೃತಿಯ ಕೊನೆಯಲ್ಲಿ ನಿತ್ಯವೂ ಇದನ್ನೋದಿ ಬರೆಯುವವನಿಗೆ ದುರ್ಗುಣ, ದುರಿತ ಸಂಕುಲಗಳು ದೂರಾಗುವವು. ಆಯುಷ್ಯ ವೃದ್ಧಿಯಾಗುವುದು, ಶ್ರೀಗುರು ಶಾಂತವೀರೇಶ ಕರುಣಿಸಿ ಸಲಹುವನೆಂದು ಹೇಳಿದ್ದಾನೆ.

ಶಿವನ ಚರಿತ್ರೆಯ ಒಂದೊಂದು ಪ್ರಸಂಗಗಳನ್ನು ಉಲ್ಲೇಖಿಸುತ್ತಾ ಅತ್ಯಂತ ಕ್ಲಿಷ್ಟ ಪದಗಳಲ್ಲಿ ವಿವರಿಸುತ್ತಾ ತನ್ನ ಭಾಷಾಪ್ರೌಢಿಮೆಯನ್ನು ಮೆರೆದಿದ್ದಾನೆ.

"ಚೈತನ್ಯೇಶ್ವರ ವಿಜಯ" ಭಾಮಿನಿ ಷಟ್ಪದಿಯಲ್ಲಿದೆ.[೨೧] ಈ ಕೃತಿ ಕುರಿತಾಗಿ ಹೆಚ್ಚಿನ ವಿವರಗಳು ಲಭ್ಯವಿಲ್ಲ.

"ಚೇರಮಕಾವ್ಯದ ನಾಂದ್ಯದ ನುಡಿ" ಹಾಗೂ "ದೇವಿನಾಂದ್ಯದ ನುಡಿ" ಇವು ನಂಜಯ್ಯನ ಸ್ವತಂತ್ರ ಕೃತಿಗಳಲ್ಲ. ಇವು ಚೇರಮಕಾವ್ಯ ಹಾಗೂ ದೇವಿಪುರಾಣಗಳಿಂದ ಆಯ್ದು ಸಂಗ್ರಹಿಸಿದ ಸ್ತೋತ್ರರೂಪದ ಸಂಕಲನಗಳು. ಇದರಿಂದ ಕಂಪಿನಂಜಯ್ಯ ಒಬ್ಬ ಗಮನಾರ್ಹ ನಾಂದ್ಯಕಾರನಾಗಿದ್ದ ಎಂದು ಹೇಳಬಹುದು.

ಮಹಾದೇವ ಕವಿ (೧೮೭೦) :

ಈತ ಕೇವಲ ೧೪೦ ವರ್ಷಗಳಷ್ಟು ಹಿಂದಿನವನಾದರೂ ಅವನ ಕುರಿತಾದ ವೈಯಕ್ತಿಕ ವಿವರಗಳು ಅಷ್ಟಾಗಿ ತಿಳಿದು ಬಂದಿಲ್ಲ. ಈತನ ಸ್ವರಚಿತ "ಮಹಲಿಂಗೇಂದ್ರವಿಜಯ" ಕೃತಿಯಿಂದ ಕೆಲವು ಅಂಶಗಳನ್ನು ಹೀಗೆ ಸಂಗ್ರಹಿಸಬಹುದು.

ವೀರಶೈವ ಸಿದ್ಧಾಂತ ಪರಿಶ್ರಮಿಯಾದ "ಸೋಮೇಶ" ಈತನ ತಂದೆ. ವೀರಶೈವ ಮತ ಪ್ರಸಾರಕನಾದ ಅಸಿಪುರದ "ಶಿವಲಿಂಗದೇಶಿಕ" ಈತನ ಗುರು. ಶಿವಲಿಂಗದೇಶಿಕೋತ್ತಮ "ದಯಾಸಾಗರ ಕಣಾಭ್ಯುದಿತಮತಿ ಸತ್ಕೃತಿ" ಎಂಬ ಮಾತಿನಂತೆ, ಶಿವಲಿಂಗದೇಶಿಕನ ಸಹಾಯ ನಿರ್ದೇಶನಗಳಿಂದಲೇ ಕವಿ ಮಹಲಿಂಗೇಂದ್ರವಿಜಯವನ್ನು ರಚಿಸಿರುವನು.

ಮೂಲತಃ ರೇಣುಕಾಚಾರ್ಯ ಗೋತ್ರದವನಾಗಿದದ ಈ ಕವಿ ಪಂಚಾಚಾರ್ಯರಲ್ಲಿ ಗಾಢವಾದ ಭಕ್ತಿ, ಬಸವಾದಿ ಪ್ರಮಥರಲ್ಲಿ ವಿಶೇಷವಾದ ಗೌರವ ಶ್ರದ್ಧೆಗಳನ್ನು ಇಟ್ಟುಕೊಂಡವನಾಗಿದ್ದನೆಂದು ತಿಳಿದು ಬರುತ್ತದೆ. ಈತನ ಸ್ಥಳದ ಬಗ್ಗೆ ಯಾವುದೇ ಮಾಹಿತಿಯಿಲ್ಲ. ತನ್ನ ಕಾವ್ಯ "ಶಾಲಿವಾಹನಶಕ ೧೭೯೨ರ ಪ್ರಮೋದ ಸಂವತ್ಸರ ಚೈತ್ರಶುಕ್ಲ ಪ್ರತಿಪದ ಸಮಾಶ್ವಿಸ ಮಂದವಾರ" ಸಮಾಪ್ತಿಯಾದಂತೆ ತಿಳಿಸಿರುವನು. ಇದರ ಪ್ರಕಾರ ಈತನ ಕಾಲ ೧೮೭೦ ಎಂದು ಹೇಳಬಹುದು.

ಈತ ತಾನು ಅದ್ವೈತ "ವಿದ್ಯಾಕುಶಲನೂ", "ಉಭಯಭಾಷಾಪ್ರಭುತ್ವ" ಉಳ್ಳವನೂ, "ವೀರಶೈವ ಸಿದ್ಧಾಂತ ನಿಪುಣನೂ" ಆಗಿದ್ದಂತೆ ಹೇಳಿಕೊಂಡಿದ್ದಾನೆ. ಇವನಿಗೆ ಸಂಸ್ಕೃತದಲ್ಲಿ ವಿದ್ವತ್ಪ್ರತಿಭೆ ಇತ್ತೆಂಬುದಕ್ಕೆ ಕಾವ್ಯದುದ್ದಕ್ಕೂ ಅವನು ಬಳಸಿರುವ ವ್ಯಾಕರಣಬದ್ಧವಾದ ಸಂಸ್ಕೃತ ಸಮಾಸಗಳೂ, ಶ್ಲೇಷಾತ್ಮಕವಾದ ಪ್ರಯೋಗಗಳೂ, ಕಾವ್ಯದ ಆದಿ-ಅಂತ್ಯಗಳಲ್ಲಿನ ಅವನ ಸಂಸ್ಕೃತ ವೃತ್ತಗಳೂ ಸಾಕ್ಷಿಯಾಗಿವೆ.ರ ಕನ್ನಡಕ್ಕಿಂತ ಸಂಸ್ಕೃತಭಾಷೆಯ ಮೇಲಿನ ಪ್ರೌಢಿಮೆಯೇ ಹೆಚ್ಚಾಗಿದೆ.

ಕೃತಿಗಳು - ೧) ಮಹಾಲಿಂಗೇಂದ್ರವಿಜಯ

೨) ಬಸವವಿಲಾಸ

"ಬಸವವಿಲಾಸ" ಈ ಕೃತಿಯ ಹಸ್ತಪ್ರತಿಯು ಕನ್ನಡ ಸಾಹಿತ್ಯ ಪರಿಷತ್ತಿನ ಹಸ್ತಪ್ರತಿ ಸಂಗ್ರಹದಲ್ಲಿತ್ತು. ಆದರೆ ಈಗದು ಅಲಭ್ಯವಾಗಿದೆಯೆಂದು ಡಾ॥ ಬ. ನಂಜುಂಡಸ್ವಾಮಿಯವರಿಂದ ತಿಳಿದುಬಂದಿದೆ. ಹೀಗಾಗಿ ಈ ಕೃತಿಯ ಸ್ವರೂಪ ತಿಳಿಸಲು ಸಾಧ್ಯವಾಗಿರುವುದಿಲ್ಲ.

ಮಹಾಲಿಂಗೇಂದ್ರವಿಜಯ : ಇದೊಂದು ಹಿರಿಯಗಾತ್ರದ ಷಟ್ಪದಿಕಾವ್ಯ. ೩೦ ಅಧ್ಯಾಯ ೨೦೬೪ ವಾರ್ಧಕ ಷಟ್ಪದಿಪದ್ಯಗಳನ್ನೊಳಗೊಂಡಿದೆ. ಚಿತ್ರದುರ್ಗ ಬೃಹನ್ಮಠದ ೨೧ನೆಯ ಜಗದ್ಗುರು ಮಹಾಲಿಂಗರ ಜೀವನ-ಸಾಧನೆ-ಸಿದ್ಧಿಗಳು ಈ ಕಾವ್ಯದ ಮುಖ್ಯವಸ್ತು. ಅದಕ್ಕೆ ಪೂರಕವಾಗಿ ಈ ಪೀಠಪರಂಪರೆಯಲ್ಲಿ ಆಗಿಹೋದ ಹಿಂದಿನ ಜಗದ್ಗುರುಗಳ ಚರಿತ್ರೆ ಹಾಗೂ ನಂತರದ ೨೨ನೆಯ ಜಗದ್ಗುರುಗಳ ಸಂಕ್ಷಿಪ್ತ ಪರಿಚಯವೂ ಇಲ್ಲಿದೆ.

ಬೃಹತ್ ಗಾತ್ರದ ಈ ಕಾವ್ಯವನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ.

೧. ಮೊದಲನೆಯದಾಗಿ ಪ್ರಾರಂಭದ ೧೨ ಹಾಗೂ ಕೊನೆಯ ೦೬ ಒಟ್ಟು ೧೮ ಸಂಧಿಗಳಲ್ಲಿ ಈ ಕಾವ್ಯದ ಕೇಂದ್ರವ್ಯಕ್ತಿಯಾದ ಮಹಾಲಿಂಗ ಜಗದ್ಗುರುಗಳ ಚರಿತ್ರೆಗೆ ಮೀಸಲಾಗಿದೆ.

೨. ಎರಡನೆಯದಾಗಿ ೧೩ ರಿಂದ ೨೪ನೆ ಸಂಧಿಯವರೆಗೆ ಒಟ್ಟು ೧೨ ಸಂಧಿಗಳಲ್ಲಿ ಚೆನ್ನಬಸವಣ್ಣನಿಂದ ಹಿಡಿದು ಮಹಾಲಿಂಗ ಜಗದ್ಗುರುವಿನವರೆಗಿನ ಶೂನ್ಯಸಿಂಹಾಸನದ ೨೦ ಜಗದ್ಗುರುಗಳ ಸಂಕ್ಷಿಪ್ತ ಜೀವನ ಪರಿಚಯವನ್ನು ಮಾಡಿಕೊಡಲಾಗಿದೆ.

೩. ಮೂರನೆಯದಾಗಿ ೨೨ನೆಯ ಪಟ್ಟದ ರುದ್ರಸ್ವಾಮಿಗಳ ಪರಿಚಯವನ್ನು ತೀರ ಸಂಕ್ಷಿಪ್ತವಾಗಿ ವಿವರಿಸಿದೆ.

ಒಟ್ಟಾರೆಯಾಗಿ ಮಹಾಲಿಂಗನಂತಹ ಮಹನೀಯನೋರ್ವನ ಉದಾತ್ತ ಚರಿತ್ರೆಯನ್ನು ಕಾವ್ಯವಸ್ತುವಾಗಿಸಿಕೊಂಡಿದ್ದಕ್ಕೆ ಕವಿಗೆ ತೃಪ್ತಿಯಿದೆ. ಏಕೆಂದರೆ ಕಾವ್ಯವಸ್ತು ಉದಾತ್ತವಾಗಿದ್ದರೆ ಕಾವ್ಯವು ಉತ್ತಮವಾಗಿರುತ್ತದೆ ಎಂಬ ನಂಬಿಕೆ ಈತನದು.

ಕಥಾವಸ್ತು :

ಕವಿ ಸಂಪ್ರದಾಯದಂತೆ ಶಿವನು ಪಾರ್ವತಿಗೆ ಮಹಾಲಿಂಗವಿಜಯವನ್ನು ನಿರೂಪಿಸಿದಂತೆ ರಚಿಸಿದ್ದಾನೆ. ಪ್ರಾರಂಭದಲ್ಲಿ ಶಿವ-ಪಾರ್ವತಿ, ಬಸವಣ್ಣನನ್ನು ಪ್ರಾರ್ಥಿಸುವ ಮೂರು ಸಂಸ್ಕೃತ ಪದ್ಯಗಳಿವೆ. ಆಮೇಲೆ ಪೀಠಿಕಾ ಭಾಗದೊಳಗೆ ಶಿವಶರಣರನ್ನೂ ಶಿವಕವಿಗಳನ್ನೂ ಸ್ಮರಿಸುವ ಹಲವಾರು ಪದ್ಯಗಳಿವೆ. ಮುಂದೆ ಎಂಟು ಷಟ್ಪದಿಗಳಲ್ಲಿ ಕಾವ್ಯನಾಯಕನಾದ ಮಹಾಲಿಂಗ ಜಗದ್ಗುರುವನ್ನು ಕವಿ ಪ್ರಶಂಸಿರುವನು. ಎರಡರಲ್ಲಿ ಆತ್ಮಪ್ರಶಂಸೆ ಮಾಡಿಕೊಂಡಿರುವನು. ಐದರಲ್ಲಿ ಕುಕವಿನಿಂದೆ ಮಾಡಿರುವನು. ಮತ್ತೆ ಆರರಲ್ಲಿ ತನ್ನ ಕಾವ್ಯದ ಉತ್ಕರ್ಷವನ್ನು ಕೊನೆಯದಾಗಿ ತಾನು ಕಾವ್ಯವನ್ನು ಬರೆಯಲು ಪ್ರೇರಣೆ ದೊರೆತ ಸಂದರ್ಭವನ್ನು ಪ್ರಸ್ತಾಪಿಸಿರುವನು.

ಕಾವ್ಯದ ಪ್ರಾರಂಭದಲ್ಲಿರುವ ಶಿವಸ್ತುತಿ -

ಕಲ್ಯಾಣಂ ಕಲ್ಪಭೂಜಂ ನಮದಮೃತಭಜಾಂ ವೋ ತನೋತು ಪ್ರಶಸ್ತಂ ಗೌರೀಪಾಣ್ಯಬ್ಜ ಮೃದ್ನತ್ ಸುರಕುಜಕಳಿಕಾ ತಲ್ಲಜಸ್ನಿಗ್ಧ ಲೀಲಂ ಬ್ರಹ್ಮೇಂದ್ರೋಪೇಂದ್ರವಂದ್ಯಂ ವಿತತ ಶ್ರುತಿಸತೀ ಪುತ್ನ ಸೀಮಂತರತ್ನಂ ಸಾನಂದಂ ಮುಕ್ತಿಭಾಮಾಮುಖವಿಧುಮಕುರಂ ಶಂಕರ ಶ್ರೀಪದಾಬ್ಜಂ ॥

ಹೀಗೆ ಪಾರ್ವತಿ ಹಾಗೂ ಬಸವಣ್ಣನನ್ನು ಸ್ತುತಿಸಲಾಗಿದೆ.

ವಿರತಯ್ಯ ಹಾಗೂ ಬಸವಾಂಬೆ ಎಂಬ ಜಂಗಮ ದಂಪತಿಗಳ ಪುತ್ರನಾಗಿ ಮಹಾಲಿಂಗ ಜನಿಸುತ್ತಾನೆ. ಬಿಜ್ಜಮಹಾದೇವಿಯು ಶಿವನನ್ನು ಸಲಹಿದಂತೆ ಬಸವಾಂಬೆ ಮಹಾಲಿಂಗನನ್ನು ಲಾಲಿಸಿಪಾಲಿಸುತ್ತಾಳೆ. ಭಸ್ಮ-ಲಿಂಗ-ರುದ್ರಾಕ್ಷಿಮಾಲಾಧಾರಿಯಾದ ಬಾಲಕ ಶಿವಕುಮಾರನಂತೆ ಬೆಳೆಯತೊಡಗಿದ. ಈತನಿಗೆ ಗುರುಸಿದ್ಧ ಲಿಂಗಸ್ವಾಮಿಗಳಿಂದ ದೀಕ್ಷೆಯಾಗಿ ಎಂಟು ವರ್ಷದ ಬಾಲಕ ಷಟ್ಸ್ಥಲಬ್ರಹ್ಮಿಯಾದ. ಮರಿಯಾಗಿರುವಾಗಲೇ ಅನೇಕ ಪವಾಡಗಳನ್ನು ಮೆರೆದ ಬಾಲಕನಿಗೆ ಶಿವಪುರದ ಭಕ್ತರು ಮಠವೊಂದನ್ನು ಕಟ್ಟಿಸಿಕೊಡುತ್ತಾರೆ. ಆ ಮಠವನ್ನು ಬೃಹನ್ಮಠವಾಗಿ ಮಾರ್ಪಡಿಸಿ ವಚನ, ಪ್ರವಚನ, ಪುರಾಣ, ಅನುಭಾವಗೋಷ್ಠಿಗಳನ್ನು ನಡೆಸುವ ಮೂಲಕ ಆಧ್ಯಾತ್ಮಕೇಂದ್ರವನ್ನಾಗಿಸುತ್ತಾನೆ. ಮುಂದೆ ಅನೇಕ ಗಣಂಗಳ ಜೊತೆಗೂಡಿ ಪಶ್ಚಿಮದೇಶಕ್ಕೆ ಪ್ರಯಾಣ ಹೊರಟನು. ಮಾರ್ಗಮಧ್ಯದಲ್ಲಿ ಎಲ್ಲರಿಗೂ ಅನುಗ್ರಹಿಸುತ್ತಾ, ತನ್ನಲ್ಲಿ ಅಡಕವಾಗಿದ್ದ ಶಿವಾಗಮ, ಶಿವಾಚಾರ, ಜ್ಞಾನ, ಪರಮಾನುಭವ, ದಾನ, ದಯೆ, ದಾಕ್ಷಿಣ್ಯ, ಸೌಜನ್ಯ, ಕರುಣಾ ಗುಣಗಳಿಂದ ಜನಪ್ರಿಯನಾದನು. ಇದನ್ನರಿತ ಸಣ್ಣಪಾದದ ಚೆನ್ನವೀರದೇಶಿಕರು ಮಹಾಲಿಂಗನಿಗೆ ಚಿತ್ರದುರ್ಗಕ್ಕೆ ಆಗಮಿಸಬೇಕೆಂದು ಆಹ್ವಾನವಿತ್ತರು. ಅವರ ಆಸೆ ಷಣ್ಮುಖನ ಲೀಲಾವಿಲಾಸದ ಆವಾಸಸ್ಥಾನಕ್ಕೆ ಬರುತ್ತಾನೆ. ಚಿತ್ರದುರ್ಗದ ಬೃಹನ್ಮಠದಲ್ಲಿ ಮಹಾಲಿಂಗನಿಗೆ "ಮಿಳಿತ ಸ್ಮಶ್ರು ಮುಖವಪನವಾಯಿತು. ಅಭಿಷೇಕವಾಯಿತು. ಭಸ್ಮರುದ್ರಾಕ್ಷ ಮಾಲೆಗಳ ಅಲಂಕಾರವಾಯಿತು. ಕಾವಿಯ ಬಟ್ಟೆ ಹಾಕಿಯಾಯಿತು. ಪಾದುಕೆಗಳನ್ನು ಪಾದಗಳಿಗೆ ತೊಡಿಸಿಯಾಯಿತು. ಮಂಗಳ ದ್ರವ್ಯಗಳ ಪರಿಕರ

ಪ್ರಪಂಚದ ಅಂಚಿನಲ್ಲಿದ್ದ ಶೂನ್ಯಸಿಂಹಾಸನಕ್ಕೆ ಮಹಾಲಿಂಗನನ್ನು ನಡೆನುಡಿಯನ್ನು ಹಾಸಿ ಕರೆದೊಯ್ದರು. ಮಂಗಳವಾದ್ಯಗಳು ತಾರದಲ್ಲಿ ಮೊಳಗಿದವು. ಗುರು ಚೆನ್ನಬಸವ ಮತ್ತು ಬಸವರಸರ ಕೈಬೆರಳಿನ ಐದು ಉಂಗುರಗಳನ್ನು ಮಹಾಲಿಂಗನ ಕೈಬೆರಳಿಗಿಟ್ಟರು. ಶಿಖಾಶೈಲಗಳನ್ನು ಅವನ ಕೊರಳಿಗೆ ಹಾಕಿದರು. ಶೂನ್ಯಸಿಂಹಾಸನದ ಪಟ್ಟಾಧ್ಯಕ್ಷತೆಯನ್ನು ಮಹಾಲಿಂಗನು ವಹಿಸಿಕೊಂಡ ಆ ಶುಭದಿನ ಶಾಲಿವಾಹನ ಶಕದ ವರ್ಷ ದುಂದುಭಿ ಸಂವತ್ಸರ ಫಾಲ್ಗುಣ ಸಿತಪಕ್ಷ, ಪಂಚಮಿಯ ಭಾನುವಾರ" (೧೮೨೬-೬೩).[೨] ಹೀಗೆ ಮಹಾಲಿಂಗನು ಚಿತ್ರದುರ್ಗದ ಶೂನ್ಯಪೀಠಪರಂಪರೆಯ ೨೦ನೆಯ ಪೀಠಾಧ್ಯಕ್ಷನಾಗಿ ಅಲಂಕೃತನಾಗುತ್ತಾನೆ. ಮುಂದೆ ದುರ್ಗದ ಘನಶಿಲಾಮಠದಲ್ಲಿ ಭಕ್ತರಿಗೆ ರಕ್ಷಕರಾಗಿ, ವಿದ್ವಾಂಸರಾಗಿ ಕವಿ, ಕಲಾವಿದರಿಗೆ ಪೋಷಕರಾಗಿ ಅಖಿಲಜನಸಮೂಹಕ್ಕೆ ಪೂಜ್ಯರಾಗಿದ್ದರು. ಅವರ ವ್ಯಕ್ತಿತ್ವ ದರ್ಶನದ ವೈಭವವನ್ನು ಕವಿ ಹೀಗೆ ಮಾಡಿಸುತ್ತಾನೆ.

"ವಿಭವಂಗಳಿಂ ಸುರಪನಂ ಚತುರಬುದ್ಧಿಯಿಂ
ದಭುಜಭವನಂ ವಿಪುಲಿತರ ಲಕ್ಷ್ಮಿಯಿಂದಮಾ
ಪ್ರಭುಭುವಿನಿಂ ವಿಕ್ರಮದಿನಗ್ನಿಯಂ ವಿಶ್ರಾಣನದಿನಮರ ಭೂಜಾತಮಂ ।
ಪ್ರಭವಿತಾತುಲತೇಜದಿಂ ಸೂರ್ಯನಂ ಯಶಃ
ಪ್ರಭೆಯಿಂದೆ ಚಂದ್ರನಂ ಗೆಲ್ವನೆಂಬುವದಿದೇಂ
ವಿಭುತನಂ ವರವಿರತಿಯೊಂದರಿಂದಂ ತೃಣೀಕೃತವಿಶ್ವಗಂ ಯೋಗಿಗಂ

(ಸಂಧಿ ೨೬, ಪದ್ಯ-೨೯, ಪು೧-೩೬೭)

ಮುಂದೊಂದು ದಿನ ಮಹಾಲಿಂಗರು - ಧರ್ಮದಿಗ್ವಿಜಯಕ್ಕೆ ಹೊರಟನಿಂತರು. ದುರ್ಗದಿಂದ ಹೊರಟ ಯಾತ್ರೆ-ಭರಮಸಾಗರ, ಹರಿಹರ, ರಾಣಿಬೆನ್ನೂರ, ತುಮ್ಮಿನಕಟ್ಟೆ, ಬ್ಯಾಡಗಿ, ಮೋಟೆಬೆನ್ನೂರ, ಗುತ್ತಲ, ಹಾವನೂರ ಮಾರ್ಗವಾಗಿ ಸುರಪುರಕ್ಕೆ ಬಂದಿತು. ಅಲ್ಲಿಯ ರಾಜನ ಭಕ್ತಿಯನ್ನು ಸ್ವೀಕರಿಸಿ ಕರ್ಜಗಿ ಮುಖಾಂತರ ಹಾವೇರಿ, ಸವಣೂರು, ಗುಡಿಗೇರಿ, ನರಗುಂದ, ಸವದತ್ತಿ, ಮುನಿಪುರ, ಸಿರಸಂಗಿ, ಅರಭಾವಿ, ನಿಡಸೋಸಿ ಮೊದಲಾದ ಊರುಗಳಲ್ಲಿ ಪ್ರಯಾಣ ಕೈಗೊಂಡು ಬರುತ್ತಿರುವಾಗ ಶಿವಪುರದಲ್ಲಿ ಮಾಲೋಜಿ ಎಂಬ ರಾಜನಿಂದ ದಾನವಾಗಿ ದೊರೆತ ಒಂದು ಕ್ರೋಶ ಭೂಮಿಯಲ್ಲಿ ಶಿವಲಿಂಗ ದೇವಾಲಯವನ್ನು ಕಟ್ಟಿಸಿದನು. ಈ ಶಿವಪುರಕ್ಕೆ "ಮಹಾಲಿಂಗಪುರ" ಎಂದು ಹೆಸರಿಟ್ಟರು. ಹೀಗೆ ಮಹಾಲಿಂಗ ಜಗದ್ಗುರುಗಳು ಅರಭಾವಿ, ನಿಡಸೋಸಿ, ಮಹಾಲಿಂಗಪುರ ಮುಂತಾದೆಡೆ ಸಂಚರಿಸಿ - ಭಕ್ತರನ್ನು, ಸಂತರನ್ನು, ತಮ್ಮ ಕೃಪಾಪಾತ್ರರನ್ನಾಗಿ ಮಾಡಿಕೊಂಡು, ಧರ್ಮದಿಗ್ವಿಜಯಯಾತ್ರೆಯನ್ನು ಮುಗಿಸಿಕೊಂಡು ಮರಳಿ ಚಿತ್ರದುರ್ಗಕ್ಕೆ ಬರುತ್ತಾರೆ.

ಒಂದು ಸಾರೆ ಜಗದ್ಗುರು ಮಹಾಲಿಂಗರಿಗೆ ಶಿವಶರಣರ ಆವಾಸ್ಥಾನವಾದ ಉಳುಮೆಗೆ ಹೋಗುವ ಇಚ್ಛೆಯಾಗುತ್ತದೆ. ಒಡನೆಯೇ ಬೃಹನ್ಮಠದಲ್ಲಿ ಚೆನ್ನಬಸವ ಪುರಾಣವಾಚನ ಪ್ರಾರಂಭಿಸಿ, ಸಕಲಸಿದ್ಧತೆಗಳೊಂದಿಗೆ ಸಿರಸಿ, ಯಲ್ಲಾಪುರ ಮಾರ್ಗವಾಗಿ ಉಳುಮೆಗೆ ಬಂದರು. ಮಹಾಲಿಂಗ ಜಗದ್ಗುರುವಿನ ನೇತೃತ್ವದಲ್ಲಿ ಬಂದ ಪರಿವಾರವನ್ನು ಕಂಡು ಬಸವಣ್ಣನ ಕಾಲಕ್ಕೆ ಕಲ್ಯಾಣದಲ್ಲಿ ಆದ ದಾಸೋಹಕ್ಕಿಂತ ಅತಿಶಯವಾದುದು ಎಂದು ಜನರೆಲ್ಲ ಸಂತಸಗೊಂಡರು. ಉಳುವೆ ಚೆನ್ನಬಸವೇಶ್ವರನ ರಥೋತ್ಸವವನ್ನು ಕೈಗೊಂಡು ಗಣಭೋಜನ, ಮಹಾದಾನವೈಭವ, ಲಾಸಗಳಿಂದ ಐದು ದಿನಗಳನ್ನು ಕಳೆದು ಆರನೆಯ ದಿನ ಚಿತ್ರದುರ್ಗಕ್ಕೆ ಬರುತ್ತಾರೆ. ಈ ಸಂದರ್ಭದಲ್ಲಿ ಇಬ್ಬರು ಇಂಗ್ಲೀಷರು ಉಪಸ್ಥಿತರಿದ್ದು ಜಗದ್ಗುರುವಿನ ಉತ್ಸವದ ವೈಭವವನ್ನು ನೋಡಿ ಆಶ್ಚರ್ಯಚಕಿತರಾಗಿದ್ದರು ಎಂಬುದು ವಿಶೇಷ.

ಮಹಲಿಂಗರು ಮುಂದೊಂದು ಸಲ ಶಿರಸಂಗಿಗೆ ಹೋಗುತ್ತಾರೆ. ಅಲ್ಲಿಯ ರಾಜ ಜಾಯಪ್ಪನು ಚಿತ್ರದುರ್ಗದಲ್ಲಿರುವ ಬೃಹನ್ಮಠಕ್ಕೆ ಸರಿಸಮನಾದ ಮಠವೊಂದನ್ನು ನಿಮಗೆ ಕಟ್ಟಿಸಿಕೊಡುತ್ತೇನೆಂದು ಹೇಳುವುದಲ್ಲದೆ "ಸುಹಸ್ತ ಚೌಕಿನ" ಅಂದರೆ ನೂರಾರು ಅಂಕಣದ ಅತ್ಯಪೂರ್ವಮಠವನ್ನು ಕಟ್ಟಿಸಿ, ಜಗದ್ಗುರುವಿನ ಸಿಂಹಾಸನರೋಹಣ ಸಮಾರಂಭವನ್ನು ನೆರವೇರಿಸಿ ಕೃತಾರ್ಥನಾಗುವನು.

ಗುರುಗಳು ಶಿರಸಂಗಿಯಲ್ಲಿರುವಾಗಲೇ ಶಿಕ್ಷಣತಜ್ಞ ಡೆಪ್ಯೂಟಿ ಚೆನ್ನಬಸಪ್ಪನವರು ಭೇಟಿಯಾಗಿ ವೀರಶೈವ ವಿದ್ಯಾರ್ಥಿಗಳ ಶಿಕ್ಷಣದ ಕುರಿತಾಗಿ ಚರ್ಚೆ ನಡೆಸಿದರು. ಅದರ ಫಲವಾಗಿ ಪ್ರಾರಂಭಿಸಲಾದ "ಮುರುಗಾ ಜಗದ್ಗುರು ಮಹಾಲಿಂಗ ಪಾಠಶಾಲೆ"ಯೇ ಇಂದು ಎಸ್.ಜೆ.ಎಂ. ವಿದ್ಯಾಪೀಠವಾಗಿ ರೂಪತಾಳಿದೆ.

ಶಿರಸಂಗಿಯಿಂದ ಸೊಲ್ಲಾಪುರ, ಬಾಗಲಕೋಟ, ಗುಳೇದಗುಡ್ಡಕ್ಕೆ ಹೋಗಿ ಬರುವಾಗ ಮಾರ್ಗಮಧ್ಯದಲ್ಲಿ ಅನಾರೋಗ್ಯಪೀಡಿತರಾಗಿ ಲಿಂಗೈಕ್ಯರಾದರು. ಅವರಿಗಾಗಿಯೇ ಶಿರಸಂಗಿಯಲ್ಲಿ ನಿರ್ಮಿಸಿದ ನೂತನಮಠದಲ್ಲಿ ಅವರ ಶಿವಸಮಾಧಿ ಮಾಡಲಾಯಿತು.

"ಜಯಜಯ ಮಹಾಲಿಂಗ ಕೀರ್ತಿಜಿತ ಧವಲಾಂಗ
ಜಯಜಯ ಕೃಪಾಪಾಂಗ ಸುಗುಣನಿಲಯಾನಂಗ
ಜಯಜಯ ಶುಭಾಸಂಗ ಕೃತವಿತರಣೋತ್ತುಂಗ ಮಂಗಲಮತಿ ಪ್ರಸಂಗ
ಜಯ ಜಯ ಸುಭ್ರೂಮಾಂಗ ಕಾಂತಿಜಿತ ಸುಪತಂಗ
ಜಯ ಜಯ ಪರಿಷ್ವಂಗಿತಾತುಲ ಸುಜನ ಸಂಘ
ಜಯ ಜಯ ಸುಮುಕ್ತ್ಯಂಗನಾಮಿಲಿತ ಶಿವಲಿಂಗ ವಿವಿಧ ಮಾಯಾವಿಭಂಗ"

ಹೀಗೆ ಮಹಾಲಿಂಗ ಜಗದ್ಗುರುವಿನ ಜೀವನ ವೃತ್ತಾಂತವನ್ನು ಕಥಾವಸ್ತುವಾಗಿಟ್ಟುಕೊಂಡರೂ ಸಹಿತ, ಪಾರ್ವತಿ–ಶಿವನಿಗೆ ಚಿತ್ರದುರ್ಗ ಬೃಹನ್ಮಠ ಹಾಗೂ ಅದರ ಗುರುಪರಂಪರೆಯನ್ನು ಕುರಿತಾಗಿ ಹೇಳಬೇಕೆಂದು ಭಿನ್ನವಿಸಿಕೊಂಡಾಗ ಸಮಗ್ರ ಶೂನ್ಯಪೀಠ ಪರಂಪರೆಯನ್ನು ಕುರಿತಾಗಿ ಹೇಳುವಂತೆ ಚಿತ್ರಿಸಿದ್ದಾನೆ.

ಅಲ್ಲಮಪ್ರಭುವಿನಿಂದ ಪ್ರಾರಂಭಿಸಿ ಚೆನ್ನಬಸವ ತೋಂಟದಸಿದ್ಧಲಿಂಗ ನಿರಕ್ಷರದ ಬೋಳಬಸವಸ್ವಾಮಿ, ಸಿದ್ಧವೀರಸ್ವಾಮಿ, ಗೋಳೂರು ಸಿದ್ಧವೀರಸ್ವಾಮಿ, ಗಗನದಸ್ವಾಮಿ, ಕಟ್ಟಿಗೆಹಳ್ಳಿಸಿದ್ಧಲಿಂಗ, ಮುರಿಗೆ ಶಾಂತವೀರ, ಇಮ್ಮಡಿಮುರಿಗಾಗುರುಸಿದ್ಧ, ಸ್ವಾದಿಯ ಚೆನ್ನಬಸವ, ಶಿರಹಟ್ಟಿ ಸಿದ್ಧಲಿಂಗ, ಗುರುಪಾದದೇಶಿಕ, ಮೂರುಸಾವಿರದ ಗುರುಪಾದ ದೇಶಿಕರು, ಮೂರುಸಾವಿರದ ಸಿದ್ಧಲಿಂಗ ಸ್ವಾಮಿಗಳು, ಒಪ್ಪತ್ತಿನ ಚೆನ್ನವೀರಸ್ವಾಮಿಗಳು, ವ್ಯಾಕರಣದ ಸಿದ್ಧಲಿಂಗಸ್ವಾಮಿಗಳು, ನಿಘಂಟಿನ ಸಿದ್ಧಬಸವಸ್ವಾಮಿಗಳು, ಸಣ್ಣಬರಹದ ರಾಚೋಟಿಸ್ವಾಮಿಗಳು, ಸಾವಳಿಗೆ ಗುರುಶಾಂತ ಸ್ವಾಮಿಗಳು, ಇಪ್ಪತ್ತನೆ ಪಟ್ಟ ಸಣ್ಣಪಾದದ ಚೆನ್ನವೀರಸ್ವಾಮಿಗಳು ಹೀಗೆ ಇವರೆಲ್ಲರ ಜೀವನಚರಿತ್ರೆಯನ್ನು ಹೇಳಲಾಗಿದೆ.

ಹೀಗಾಗಿ ಈ ಕಾವ್ಯ ಪ್ರಧಾನವಾಗಿ ಮಹಾಲಿಂಗ ಜಗದ್ಗುರುವಿನ ಜೀವನ ಚರಿತ್ರೆಯನ್ನು ಹೇಳುವುದರ ಜೊತೆಗೆ, ಪ್ರಾಸಂಗಿಕವಾಗಿ ಬೃಹನ್ಮಠದ ಪೂರ್ವಪಟ್ಟದವರ ಚರಿತ್ರೆಯನ್ನು ಹೇಳುವ ಮೂಲಕ ಮಹತ್ಸಾಧನೆಗೈದಿದೆ. ಇದೊಂದು ಐತಿಹಾಸಿಕ, ಚಾರಿತ್ರಿಕ ಕಾವ್ಯವಾಗಿ ಮಾರ್ಪಟ್ಟಿದೆ.

"ಮಹಾಲಿಂಗನ ಜೀವನಕಥೆಯನ್ನು ಹೇಳುತ್ತ ಮಧ್ಯ ಮಧ್ಯ ಉಪಕಥೆಗಳ ಮಾದರಿಯಲ್ಲಿ ತಮಿಳುನಾಡಿನ ಕೆಲವು ಶೈವಸಂತರ ಮತ್ತು ಬಸವಾದಿ ಪ್ರಮಥರ ಉಪಕಥೆಗಳನ್ನು ಹೇಳಲಾಗಿದೆ. ಮಹಾಲಿಂಗ ಶಿಶುವನ್ನು ಅವರ ತಾಯಿ ಬಸವಾಂಬೆ ಲಾಲಿಸಿ ಪಾಲಿಸಿದಳೆಂಬಲ್ಲಿ ಬಿಜ್ಜಮಹಾದೇವಿಯ ಕಥೆಯನ್ನೂ, ಮಹಾಲಿಂಗನ ದೀಕ್ಷಾಗುರುವಾದ ರುದ್ರಶಿವಯೋಗಿಯು ಭೂತದಯಾಪರನೆಂಬಲ್ಲಿ ದಸರಯ್ಯನ ಕಥೆಯನ್ನೂ, ಆ ರುದ್ರಶಿವಯೋಗಿಯ ಸನ್ನಿಧಿಯಲ್ಲಿ ಮಹಾಲಿಂಗನ ಶಿಷ್ಯವೃತ್ತಿ ಅಸದೃಶವಾಗಿತ್ತೆಂಬಲ್ಲಿ ಗುರುಭಕ್ತಾಂಡಾರಿಯ ಕಥೆಯನ್ನು, ಮಹಾಲಿಂಗನು ಬೀತ ಮಾವಿನಮರ ಹಣ್ಣು ಬಿಡುವಂತೆ ಮಾಡಿದನೆಂಬಲ್ಲಿ ವ್ಯಾಸನ ತೋಳಿನ ಪುರಾಣ ಪ್ರಸಂಗನವನ್ನೂ, ಮಹಾಲಿಂಗನ ಪಾದೋದಹ ಮಹಿಮೆಯಿಂದ ಭಕ್ತೆಯೊಬ್ಬಳಿಗೆ ಸುಖಪ್ರಸವವಾಯಿತೆಂಬಲ್ಲಿ ವೇಮನಾರಾಧ್ಯರ ಕಥೆಯನ್ನೂ, ಅವನು ಅಕಾಲದಲ್ಲಿ ಮಳೆ ಬರಿಸಿದನೆಂಬಲ್ಲಿ ಚಾರಮ–ಚೋಳ–ಪಾಂಡ್ಯರ ಕಥೆಗಳನ್ನೂ, ಅವನನ್ನು ಸವಣೂರಿನಲ್ಲಿ ಪ್ರತಿಭಟಿಸಿದ ವೈದಿಕರ ಗರ್ವಭಂಗವಾಯಿತೆಂಬಲ್ಲಿ ತಿರುಜ್ಞಾನ ಸಂಬಂಧದ ಕಥೆಯನ್ನು ವಿಸ್ತಾರವಾಗಿಯೇ ಹೇಳಿರುವನು".[೭೩]

ಹೀಗೆ ಕಥೆಯೊಳಗೆ ಕಥೆ, ಅದರೊಳಗೆ ಉಪಕಥೆ – ಈ ಮುಮ್ಮರಿ ನಿರಿಗೆಯಿಂದ ಮಹಾಲಿಂಗವಿಜಯವು ಪುರಾಣ ಮಾತ್ರವಲ್ಲ ಮಹಾಪುರಾಣವೇ ಆಗಿದೆಯೆಂದು ಹೇಳಬಹುದು.

ಕಾವ್ಯದ ಒಂಭತ್ತು ಮತ್ತು ಹತ್ತನೆ ಸಂಧಿಗಳಲ್ಲಿ ಮಹಾಲಿಂಗನ ದೀಕ್ಷಾ ಪ್ರಸಂಗವನ್ನು ವಿವರಿಸುವಾಗ –

ದೀಕ್ಷಾವಿಧಾನ, ಅಷ್ಟಾವರಣ, ಷಟ್ಸ್ಥಲಗಳ ವಿವರಣೆ, ವೀರಶೈವಪಾರಮ್ಯ, ಶೀಲ–ನೇಮಗಳ ವಿವರ, ವಾಮಾಚಾರ ಖಂಡನೆ, ರಥೋತ್ಸವ, ಶಿವಗಣಾರಾಧನೆ, ವೀರಶೈವ ಪುಣ್ಯಕ್ಷೇತ್ರಗಳ ಪರಿಚಯ, ಬಸವಣ್ಣ, ಚೆನ್ನಬಸವಣ್ಣ, ತೋಂಟದ ಸಿದ್ಧಲಿಂಗ, ಮುರಿಗೇಶ, ದುರದುಂಡಿ ಗುರುಗಳು, ನಿಡುಸೋಸಿ ಬಸವಸ್ವಾಮಿಗಳು, ಮಹಾಲಿಂಗಪುರದ ಮಲ್ಲಿಕಾರ್ಜುನದೇವರು ಇವರೆಲ್ಲರ ಕಥಾನಿರೂಪಣೆಯಿಂದ ಕಾವ್ಯವೊಂದು ವೀರಶೈವ ಧರ್ಮಶಾಸ್ತ್ರವಾಗಿಯೂ, ವೀರಶೈವ ಮಹಾಕಾವ್ಯವೂ ಆಗಿದೆಯೆಂದು ಹೇಳಬಹುದು.

ದೀಕ್ಷಾ ಪ್ರಸಂಗವನ್ನು ವಿವರಿಸುವಾಗ ಭಸ್ಮ, ರುದ್ರಾಕ್ಷಿ ಧಾರಣೆಯ ಮಹತ್ವವನ್ನು ಹೀಗೆ ಹೇಳುತ್ತಾನೆ.

"ಅವುಗಳಿಂ ಪಂಚವರ್ಣದ ಪಂಚಧೇನುಗಳು
ಭವಿಸಿದವು ಕಪಿಲದ ಸುನಂದೆ, ಕೃಷದ ಭದ್ರೆ,
ಭವಿಕರಕ್ತದ ಸುರಭಿ, ಶ್ವೇತದ ಸುಶೀಲೆ, ಚಿತ್ರದ ಸುಮನೆ ತದ್ಗವಿಗಳಾ
ನವತರದ ಪಂಚವಿಧ ಮಯಗಳಿಂದ ಜನಿಸಿ
ದವು ಭೂತಿ ಭಸಿತ ಭಸ್ಮ ಕ್ಷಾರ ರಕ್ಷೆಗಳು
ಮವನಂ ಲಲಾಟಾದಿಯೊಳ್ ತ್ರಿಪುಂಡ್ರಂ ಧರಿಸನೇಳ್ಕು ಮುಕ್ತಿಗೆ ಕಾರಣಂ"

(ಸಂಧಿ–೯ ಪದ್ಯ–೫೦, ಪುಟ–೧೨೭)

ರುದ್ರಾಕ್ಷಮಣಿಯು ಪಾಪೌಘದ್ವಿರದಶೃಣಿಯು
ರುದ್ರಾಕ್ಷಮಣಿಯು ಸನ್ಮುಕ್ತಿಚಿಂತಾಮಣಿಯು
ರುದ್ರಾಕ್ಷಮಣಿಯು ಸುಜ್ಞಾನಸರ ಸಾರಣಿಯು ಕೈಲಾಸನಿಶ್ರೇಣಿಯು
ರುದ್ರಾಕ್ಷಮಣಿಯು ಸದ್ಭಕ್ತಿಪುರುಷದ ಕಾಶಿಯು
ರುದ್ರಾಕ್ಷಮಣಿಯು ಸಂಪತ್ಸೌಖ್ಯಕಾರಿಣಿಯು
ರುದ್ರಾಕ್ಷಮಣಿಯು ಮಣಿಮಾದಿಸಂಸಿದ್ಧಿಸರಣಿಯುಮೆನುತ್ತಂ ಪೇಳ್ವನು"

(ಸಂಧಿ–೯, ಪದ್ಯ–೬೪, ಪುಟ–೧೩೦)

ಕಾವ್ಯದಲ್ಲಿ ಬರುವ ವರ್ಣನೆಗಳು – ಸಮುದ್ರಮ ಪರ್ವತ, ಸಭೆ, ದೇಶ, ಪುತ್ರಜನನ, ಬಾಲಲೀಲೆ, ಋತುಗಳು, ಸ್ತ್ರೀ ಸೌಂದರ್ಯ, ಯುದ್ಧ, ವೇಶ್ಯಾವಾಟಿಕೆ, ಸೂರ್ಯ-ಚಂದ್ರರ ಉದಯ, ವಿವಾಹ ಮುಂತಾದ ವಿಷಯಗಳು ಮಹಾಕಾವ್ಯೋಚಿತವಾಗಿ ಬಂದಿವೆ. ಹೊಸಗನ್ನಡದ ಉದಯೋನ್ಮುಖಕಾಲದಲ್ಲಿಯೂ ಕವಿಯ ಈ ವರ್ಣನೆಗಳು ತುಂಬಾ ಪ್ರಾಮುಖ್ಯತೆಯನ್ನು ಪಡೆದಿವೆ.

ಕವಿಯ ಸಂಸ್ಕೃತ ಭಾಷಾ ಪ್ರೌಢಿಮೆಯಂತೂ ಕಾವ್ಯದುದ್ದಕ್ಕೂ ಎದ್ದು ಕಾಣುತ್ತದೆ. ಮುಖ್ಯವಾಗಿ ಅವನು ಬಳಕೆ ಮಾಡಿದ – ಸಮಾಸ ಸಮಾಸಗಳೂ, ಶ್ಲೇಷಾತ್ಮಕವಾದ ಪ್ರಯೋಗಗಳು, ಕಾವ್ಯದ ಆದಿ-ಅಂತ್ಯಗಳಲ್ಲಿನ ಅವನ ಸ್ವಂತ ಸಂಸ್ಕೃತ ವೃತ್ತಗಳೂ ಸಾಕ್ಷಿಯಾಗಿ ನಿಲ್ಲುತ್ತವೆ. ವೇದಾಂತದ ವಿಷಯಗಳನ್ನು ಪ್ರಸ್ತಾಪಿಸುವಾಗ ಅವನ ಶೈಲಿ ಸಂಪೂರ್ಣ ಸಂಸ್ಕೃತಮಯವಾಗಿದೆ. ಆ ಸಂಸ್ಕೃತವೂ, ಸಶಕ್ತವೂ, ವ್ಯಾಕರಣಬದ್ಧವೂ ಆಗಿದೆ. ಮಹಾದೇವಿಯ ಕವಿಯು ಸಂಸ್ಕೃತದಲ್ಲಿ ಮಹಾವಿದ್ವಾಂಸನೆಂಬುದು ಖಚಿತವಾಗುತ್ತದೆ. ಉದಾ : ಉಳುವೆಯಲ್ಲಿ ಗಂಗೋದ್ಭವ ವಿಚಾರವಾಗಿ ವೈಷ್ಣವರೊದನೆ ನಡೆಸುವ ವಾದಸರಣಿ –

"ಸ್ಕಂದಶಕ್ತ್ಯಾಹತೋ" ಯೆನೆ "ವರಾಹಾಖ್ಯಹರಿ"
ಯೆಂದು ಗಂಗಾನದೀತೀರದೊಳ್ ಸತ್ತೀರ್ಥ
ಮಿಂದಿಗಹುದ್ಯೆ ಸೂಕರಾರೋಹಮೆಂಬುಂದುಂ ಕಾಳಿಕಾಖಂಡವಚನಂ
ಬಂಧುರಾಕಾಶಮಧ್ಯದೊಳಿರ್ದ ತನ್ನ ಸ್ವ
ಚ್ಛರಿದಶಕ್ತ್ಯವಿಪ್ಲವನುಪಾರಂ ಕೃಪಾ
ಸಿಂಧು ಶಿರದೊಳ್ ತಳೆದನೆದೆನುತ್ತ ರುದ್ರಕೋಟಿಸಂಹಿತೆ ಪೆಳ್ದುದು"

(ಸಂಧಿ ೧೪, ಪದ್ಯ-೩೦, ಪುಟ-೧೯೮)

ಸ್ವತಃ ಕವಿಯೇ "ತನ್ನ ಕಥಾನಾಯಕನಾದ ಮಹಾಲಿಂಗನು ಪುರಾಣಪುರುಷ ಸಿಂಧೂ, ಅವನನ್ನು ಕುರಿತಾದ ಈ ಗ್ರಂಥ ವೇದಕ್ಕೆ ಸಮಾನವೆಂದೂ, ಮಹಾಭಾರತಕ್ಕೆ ಎಣೆಯೆಂದೂ ಹೇಳುತ್ತಾನೆ".[೭೪]

ಇದು ಶಿವಭಕ್ತನ ಉತ್ಸವಕ್ಕೆ ಆದಿ, ವಿದ್ವತ್ಸಭೆಯ ಮತ್ತು ಗುರುವರ್ಗದ ಕರ್ಣರಸಾಯನ, ಇದರಲ್ಲಿ ನಿರೂಪಿತವಾಗಿರುವುದು ಜಂಗಮದಾಸೋಹದ ಉದ್ವೇಗ, ಇದು ಭವಕ್ಲೇಶಶ್ರಾಂತರಿಗೆ ವಿಶ್ರಾಂತಿವನ, ದುಷ್ಟರ ಹೃದಯಶಲ್ಯ, ಅಜ್ಞಚೇತನಗಳನ್ನು ಎಚ್ಚರಿಸುವ ಭೀಷ್ಮಪ್ರಜ್ಞೆ, ಪ್ರಮಥರ ಅನುಶಾಸನ, ಶಾಂತಿದಾಯಕ ಆದುದರಿಂದಲೇ ಈ ಮಹಾಲಿಂಗಭಾರತಿ ಮಹಾಭಾರತಕ್ಕೆ ಸಮತೂಕವಾಗಿದೆ.[೭೫]

ಚಿತ್ರದುರ್ಗ ಬೃಹನ್ಮಠದ ಶೂನ್ಯಸಿಂಹಾಸನದ ಪರಂಪರೆಯನ್ನು ಕುರಿತು ಆಧಾರಪೂರ್ವಕವಾಗಿ ಹೇಳಿದ ಅಂಶಗಳು ಈ ಕೃತಿಯ ಮಹತ್ವವನ್ನು ಹೆಚ್ಚಿಸಿವೆ. ಕೃತಿಗೆ ಚಾರಿತ್ರಿಕ ಹಾಗೂ ಐತಿಹಾಸಿಕ ಕಾವ್ಯ ಎಂಬ ಸ್ಥಾನವನ್ನು ಒದಗಿಸಿಕೊಟ್ಟಿವೆ. ವೀರಶೈವ ಸಮಾಜದಲ್ಲಿ ಪ್ರಖ್ಯಾತವಾದ ಯಾವ ಮಠದ ಗುರುಪರಂಪರೆಗೂ ಅದರ ಸವಿವರವಾದ ಚರಿತ್ರೆಯನ್ನು ತಿಳಿಸುವ ಇಷ್ಟು ಪ್ರಾಚೀನವಾದ ಆಧಾರಗ್ರಂಥಗಳಿಲ್ಲ. ಹೀಗಿರುವಾಗ ಬೃಹನ್ಮಠದ ಶೂನ್ಯಪರಂಪರೆಯನ್ನು ತಿಳಿಸುವ ಮಹಾದೇವಯ್ಯನ ಈ ಕೃತಿ ಅಮೂಲ್ಯವಾದುದಾಗಿದೆ.

ವಿದ್ಯಾಗುರು ಅಸಿಪುರದ ಶಿವಲಿಂಗದೇಶಿಕನ ಸಹಾಯ-ನಿರ್ದೇಶನಗಳಿಂದಲೇ ಕೃತಿ ಬರೆದರೂ ಸಹಿತ ಶಿವಸ್ವರೂಪಿಯಾದ ಮಹಾಲಿಂಗನು ಅಂತರ್ವ್ಯಾಪಿಯಾಗಿದ್ದು ನುಡಿಸಿದಂತೆ" ಈ ಕಾವ್ಯವನ್ನು ಬರೆದಿರುವೆ ಎಂದು ಹೇಳುವ ಮೂಲಕ ತನ್ನ ವಿನಯಶ್ರೀಯನ್ನು ಮೆರೆದಿದ್ದಾನೆ. ಒಂದು ಕಾವ್ಯವೆಂದರೆ ಮರಣವೇ ಇಲ್ಲದ ಮಹಾಪುರುಷನಂತೆ. ಅದು ಮುಂಬರುವ ಜನಾಂಗಕ್ಕೆ ಆದರ್ಶಪ್ರಾಯವೂ, ಮಾರ್ಗದರ್ಶಕವೂ ಆಗಿರಬೇಕು – ಈ ಹಿನ್ನೆಲೆಯಲ್ಲಿ ಮಹಾಲಿಂಗೇಂದ್ರವಿಜಯವು ಯಶಸ್ವಿಯಾಗಿದೆ ಎಂಬ ತೃಪ್ತಿ ಕವಿಗಿದೆ.

ಕೃತಿಯ ಪ್ರತಿಸಂಧಿಯ ಕೊನೆಯಲ್ಲಿ ಹೀಗೆ ಹೇಳುತ್ತಾನೆ –

"ಇದು ನಿಖಿಲ ಸದ್ಭಕ್ತ ಪಾದಪಂಕಜ ರೇಣು
ವಿಧಿತ ಭಸಿತ ತ್ರಿಮುಂಡ್ರಾಂಕಿತಾಳಿಕಮಹತ್
ಪದಮಹಾಸಿಪುರೀಶ ಶಿವಲಿಂಗದೇಶಿಕೋತ್ತಮ ದಯಾಸಾಗರಕರುಣಾ
ಭ್ಯುದಿತ ಮತಿಸತ್ಕೃತಿ ಮಹದೇವ ಸುಮಣೀ
ತದ ಮಹಾಲಿಂಗೇಂದ್ರ ವಿಜಯಮಿಂತಿದರೊಳುಂ
ಪದನೊಂದನೋದಿದರಿಗಿಷ್ಟಾರ್ಥ ಸಿದ್ಧಿಗಳು ಸಿದ್ಧಿಸವು ತತ್ಕರುಣದಿಂ"

ಎಂದು ತನ್ನ ಕಾವ್ಯವನ್ನು ಓದಿದವರಿಗೆ ಇಷ್ಟಾರ್ಥಸಿದ್ಧಿಗಳು ಲಭಿಸುವವು ಎಂದು ಹೇಳಿದ್ದಾನೆ.

ಹೀಗೆ ಮಹಾಲಿಂಗೇಂದ್ರವಿಜಯವೊಂದು ಚಾರಿತ್ರಿಕಕಾವ್ಯವೂ ಪುರಾಣವೂ, ಐತಿಹಾಸಿಕ ಕಾವ್ಯವಾಗಿ ಮೂರು ಅಂಶಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಈ ಕಾರಣಕ್ಕಾಗಿ ಅದೊಂದು ಆಕರಗ್ರಂಥವೂ ಆಗಿದೆ. ಮುರುಘಾ ಪರಂಪರೆಯ ಕವಿಗಳಲ್ಲಿ ಶ್ರೇಷ್ಠಕವಿ ಹಾಗೂ ಶ್ರೇಷ್ಠಕಾವ್ಯ ಎಂಬ ಪ್ರಶಂಸೆಗೆ ಪಾತ್ರವಾಗಿದೆ.

ಮುರುಘಾ ಪರಂಪರೆಗೆ ಸೇರಿದ ಇತರ ಕವಿಗಳ ಬಗೆಗೆ ದೊರಕುವ ಬಿಡಿಬಿಡಿಯಾದ ಸಂಗತಿಗಳನ್ನು ಹೀಗೆ ಸಂಗ್ರಹಿಸಬಹುದು.

(೧) ಮೈಸೂರು ಹೊಸಮಠದ ಶಿವಪೂಜಾ ಶಿವಲಿಂಗದೇಶಿಕರು ಮೋಕ್ಷಾಧಿಕಾರ, ಷಡಕ್ಷರಸ್ತೋತ್ರ ವ್ಯಾಖ್ಯಾ, ಶೃತಿಸಾರ ಭಾಷ್ಯ ಎಂಬ ಕೃತಿಗಳನ್ನು ರಚಿಸಿದ್ದಾರೆ. ಇದೇ ಪರಂಪರೆಗೆ ಸೇರಿದ ಪಾದಪೂಜಾ ಶಿವಬಸವಲಿಂಗದೇಶಿಕೇಂದ್ರರು "ವೀರಶೈವ ವಿಲಾಸ" ಎಂಬ ಗ್ರಂಥ ಬರೆದುದಾಗಿ ತಿಳಿಯುತ್ತದೆ.[೭೬]

(೨) ಬೆಟ್ಟದಪುರದ ಶ್ರೀಮಠದ ಚರಮೂರ್ತಿಗಳಾದ ಚನ್ನಬಸವ ಮುರುಘದೇವರು ಸ್ವರವಚನಗಳನ್ನು ಬರೆದ ಉಲ್ಲೇಖ ಬೆಟ್ಟದಪುರ ಶ್ರೀಮಠದ ಲೀಲಾಖ್ಯದ ಚಿಕ್ಕವೀರದೇಶಿಕೇಂದ್ರರ ಚರಿತ್ರೆಯಲ್ಲಿ ಬರುತ್ತದೆ.[೭೭]

(೩) 'ಮುರಿಗೆಯ' ಎಂಬ ಅಂಕಿತವನ್ನು ಹೊಂದಿದ ಅಜ್ಞಾತ ಕರ್ತೃಗಳ ಅನೇಕ ಸ್ವರವಚನಗಳು ದೊರಕುತ್ತವೆ. ಈ ಅಂಕಿತ ಇರುವವರನ್ನು ಮುರುಘಾ ಪರಂಪರೆಯ ಕವಿಗಳೆಂದೇ ಪರಿಗಣಿಸಬಹುದು. ಅಂತಹ ಅಂಕಿತಗಳೆಂದರೆ –

"ಇಮ್ಮಡಿ ಮುರಿಗೆಯ ಪರಮಗುರು ಸಿದ್ದೇಶ, ಚೆನ್ನಬಸವಪ್ರಿಯ ಮುರಿಗೆಯ ಗುರುಸಿದ್ಧ, ಮುರಿಗಾ ಗುರು, ಮುರಿಗಾ ಗುರುಬಸವಯತಿ, ಮುರಿಗಾಸ್ವಾಮಿ, ಮುರಿಗೆ ಕರಿಬಸವರಾಜೇಂದ್ರ ಮುರಿಗೆ ಕರಿಬಸವೇಶ, ಮುರಿಗೆ ಗುರುಸಿದ್ಧದೇವ, ಮುರಿಗೆಗುರುಸಿದ್ದೇಂದ್ರ, ಮುರಿಗೆ ದೇವ, ಮುರಿಗೆಯ ಮಹಾತ್ಮ, ಮುರಿಗೆಯ ರುದ್ರ, ಮುರಿಗೆಯ ಸ್ವಾಮಿ, ಮುರಿಗೆಯ ಶಾಂತವೀರ, ಮುರಿಗೆ ಶಾಂತವೀರೇಶ, ಮುರಿಗೇಶ, ಮುರಿಗೆಮೂರ್ತಿ, ವಿರಕ್ತ ಲೀಲಾಖ್ಯದ ಮುರಿಗೇಂದ್ರ."

ಹೀಗೆ ಈ ಪರಂಪರೆಗೆ ಸೇರುವ ಇನ್ನೂ ಅನೇಕ ಕವಿಗಳು, ಕೃತಿಗಳು ಸಿಕ್ಕಬಹುದು.

ಅಡಿ ಟಿಪ್ಪಣಿಗಳು :

---

[೧] ಮಹದೇವ ಕವಿಯ ಮಹಲಿಂಗೇಂದ್ರವಿಜಯ – ಸಂ. ಎಲ್. ಬಸವರಾಜು, ಬೃಹನ್ಮಠ, ಚಿತ್ರದುರ್ಗ, ೧೯೭೧, ಪೀಠಿಕೆ, ಪು. ೭೪.

[೨] ವೀರಶೈವ ತಾರಾವಳಿ ಸಂಪುಟ – ಸಂ. ಡಾ. ವೀರಣ್ಣ ರಾಜೂರ, ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೯೪, ಮುರಿಗೆ ತಾರಾವಳಿ, ಪು. ೨೫೬.

[೩] ಮುರಿಗೆ ಸ್ವಾಮಿಗಳ ಸ್ತೋತ್ರ ಕರಂಡ – ಸಂ. ಎಸ್. ಶಿವಣ್ಣ, ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೪, ಪು. ೪೦.

[೪] ಅದೇ ಪುಟ ೩೩.

[೫] ಅದೇ ಪುಟ ೪೫.

[೬] ಅದೇ ಪುಟ ೪೩.

[೭] ಮ.ಮ.ವಿ. ಪೀಠಿಕೆ ಪು. ೬೬.

[೮] ಹರಿತಿಸರಿ – ಜಿ.ಜಿ. ಮಂಜುನಾಥನ್, ಮುರಿಗಾ ಶಾಂತವೀರರು (ಲೇ), ಪು. ೪೮೬–೪೮೭.

[೯] ಮ.ಮ.ವಿ., ಪು. ೬೮.

[೧೦] ಅದೇ ಪುಟ ೬೮.

[೧೧] ಅದೇ ಪುಟ ೭೧.

[೧೨] ಅದೇ ಪುಟ ೭೧.

[೧೩] ಎಂ.ಎಸ್. ಸುಂಕಾಪುರ – ಹಮ್ಮೀರಕಾವ್ಯಸಂಗ್ರಹ, ಪು. ೨೮.

[೧೪] ಮುರಿಗೆ ಶಾಂತವೀರಸ್ವಾಮಿಗಳ ಕೃತಿಗಳು – ಸಂ. ಎಸ್. ಶಿವಣ್ಣ, ಬೃಹನ್ಮಠ, ಚಿತ್ರದುರ್ಗ, ೧೯೮೯, ಪ್ರಭುಲಿಂಗದ ಕಂದ, ಪೀಠಿಕೆ, ಪು. ೪೫೧.

[೧೫] ಅದೇ ಪುಟ ೪೫೧.

[೧೬] ಅದೇ ಪುಟ ೪೫೨.

[೧೭] ಜಿ.ಎ. ಶಿವಲಿಂಗಯ್ಯ, ಲೇ. ಇಮ್ಮಡಿ ಮುರಿಗೆಯ ದೇಶಿಕೇಂದ್ರರು, ಭೂಷಣ, ಪು. ೨೨೩.

[೧೮] ಎಂ.ಎಸ್. ಬಸವರಾಜಯ್ಯ, (ಸಂ.) ಕವಿಕರ್ಣರಸಾಯನ ಸರ್ಗ ೧, ಪದ್ಯ ೫೪.

[೧೯] ಜಿ. ಮರಳಸಿದ್ದಯ್ಯ, (ಸಂ) ಪ್ರಭುಲೀಲೆ, ಸರ್ಗ ೧, ಶ್ಲೋಕ ೨೯–೩೯.

[೨೦] ಸಂಕೀರ್ಣ ವಚನ ಸಂಪುಟ–ಆರು – ಎಸ್. ಶಿವಣ್ಣ, ಪು. ೨೪.

[೨೧] ಆರ್. ನರಸಿಂಹಾಚಾರ್, (ಸಂ) ಕರ್ನಾಟಕ ಕವಿಚರಿತೆ, ಸಂ.೩, ಪು. ೨೫೧.

[೨೨] ಜಿ. ಮರಳಸಿದ್ದಯ್ಯ, (ಸಂ) ಪ್ರಭುಲೀಲೆ ಪೀಠಿಕೆ, ಪು. xi.

[೨೩] ಬಿ. ರಾಜಶೇಖರಪ್ಪ, ಮುರಿಗಾ ಸಂಪ್ರದಾಯ ಮತ್ತು ಕೆಳದಿ ಹಾಗೂ ಕೊಡಗಿನ ಅರಸರು (ಲೇ), ಪು. ೬೮, (ಚಿನ್ಮೂಲಾದ್ರಿ ಚೇತನ).

[೨೪] ಇಮ್ಮಡಿ ಮುರಿಗಾ ಗುರುಸಿದ್ಧ, (ಲೇ.) ಜಂಗಮಜ್ಯೋತಿ ಸ್ಮರಣಸಂಚಿಕೆ, ೧೯೭೫, ಪು. ೪೬.

[೨೫] ವೈ.ಸಿ. ಭಾನುಮತಿ, ಸ್ವರವಚನ, ಸಂ.೪, ಪು. ೧೨೮–೧೫೩.

[೨೬] ಶೂನ್ಯಮಂತ್ರಗೋಪ್ಯ, (ಸಂ) ಡಾ. ಎಸ್. ವಿದ್ಯಾಶಂಕರ್, ವಚನ–೧೯, ಪು. ೪೯.

[೨೭] ಶೂನ್ಯಮಂತ್ರಗೋಪ್ಯ, (ಸಂ), ಡಾ. ಎಸ್. ವಿದ್ಯಾಶಂಕರ್, ವಚನ–೨೭, ಪು. ೫೧.

[೨೮] ಶಿವಾನುಭವ ಶಬ್ದಕೋಶ, ಡಾ. ಫ.ಗು. ಹಳಕಟ್ಟಿ

[೨೯] ಹಾಲಾಸ್ಯಪುರಾಣ, ಪು. ೨, ಪದ್ಯ ೧೧.

[೩೦] ಹಾಲಾಸ್ಯಪುರಾಣ, ಅಧ್ಯಾಯ–೧೬, ಶ್ಲೋಕ ೨೨–೨೫.

[೩೧] ಹಾಲಾಸ್ಯಪುರಾಣ ಪು. ೨, ಪದ್ಯ ೧೫.

[೩೨] ಅದೇ ಪುಟ ೭೭೫, ಪದ್ಯ ೧೬೩.

[೩೩] ತಾರಾವಳಿ ಸಾಹಿತ್ಯ – ಡಾ. ವೀರಣ್ಣ ರಾಜೂರ, ಪು. ೪೨೮.

[೩೪] ಮುರಿಗೆ ತಾರಾವಳಿ, ಸಂ. ಎಂ.ಎಸ್. ಬಸವರಾಜಯ್ಯ, ಪ್ರಸ್ತಾವನೆ, ಪು. ೧೩.

[೩೫] ಕೊರವಂಜಿ ಸಾಹಿತ್ಯ – ಡಾ. ಜ.ಚ.ನಿ. ಪು. ೭

[೩೬] ಸ್ಕಂದಕಲ್ಯಾಣದೊಳಗಣ ಚೌಪದಿವರ್ಣದ ಶಿವಸ್ತೋತ್ರ, ಸಂ. ಎಸ್. ಶಿವಣ್ಣ, ಚಿನ್ಮೂಲಾದ್ರಿ ಚೇತನ, ರಜತಮಹೋತ್ಸವ ಪ್ರಕಟಣೆ.

[೩೭] ಸ್ಕಂದಕಲ್ಯಾಣದೊಳಗಣ ಶಿವಸ್ತೋತ್ರ, ಸಂ. ಎಸ್. ಶಿವಣ್ಣ, ಬಸವಪಥ, ಸಂಪುಟ ೧೧, ಸಂಚಿಕೆ ೧೨, ಮಾರ್ಚ್ ೧೯೯೦.

[೩೮] ಸ್ಕಂದಕಲ್ಯಾಣಾಂತರ್ಗತ ಕಗ್ಗದ ವಾರದೂಸ್ತೇರ ದ್ವಿಪದಿ ಸ್ತೋತ್ರ, (ಸಂ.) ಎಸ್. ಶಿವಣ್ಣ, ಸಾಧನೆ, ಸಂಪುಟ ೧೮, ಸಂಚಿಕೆ ೧೨, ೧೯೮೯.

[೩೯] ಡಾ.ಎಸ್. ವಿದ್ಯಾಶಂಕರ, ಇಮ್ಮಡಿ ಮುರಿಗಾ ಗುರುಸಿದ್ಧರ ಕೃತಿಗಳು, ಪ್ರಸ್ತಾವನೆ, ಪು. ೨೯.

[೪೦] ಡಾ. ವೀರಣ್ಣ ರಾಜೂರ (ಸಂ), ಹಾಗಲವಾಡಿ ಮುದ್ವೀರಸ್ವಾಮಿ ಸ್ವರವಚನಗಳು, ಪ್ರಸ್ತಾವನೆ, ಪು. v - x.

[೪೧] ಅದೇ ಪುಟ xvi.

[೪೨] ಅದೇ ಪುಟ xiii.

[೪೩] ಶಿವತತ್ವಸುಜ್ಞಾನಪ್ರದೀಪಿಕೆ ೧–೬.

[೪೪] ಅದೇ ಪದ್ಯ ೧–೮.

[೪೫] ಅದೇ ಪದ್ಯ ೧–೬.

[೪೬] ಅದೇ ಪದ್ಯ ೧–೧೧.

[೪೭] ಅದೇ ಪದ್ಯ ೧–೯.

[೪೮] ಅದೇ ಪದ್ಯ ೧–೧೦.

[೪೯] ಇಮ್ಮಡಿ ಚಿಕ್ಕಭೂಪಾಲನ ಸಾಂಗತ್ಯ– (ಸಂ) ಎಂ.ಎಂ. ಕಲಬುರ್ಗಿ ಮತ್ತು ಬಿ.ಆರ್. ಹಿರೇಮಠ, ಪ್ರಸ್ತಾವನೆ, ಪು. v-xix.

[೫೦] ಬಸವಣ್ಣನವರ ಟೀಕಿನ ವಚನಗಳು, (ಸಂ) ಡಾ.ಎಂ.ಎಂ. ಕಲಬುರ್ಗಿ (೧೯೭೮), ಪ್ರಸ್ತಾವನೆ, ಪು. x.

[೫೧] ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ ಸಂಪುಟ– I, (ಸಂ) ಡಾ. ವೀರಣ್ಣ ರಾಜೂರ, ಪ್ರಸ್ತಾವನೆ, xxxix.

[೫೨] ಬೆಡಗಿನ ವಚನದ ಟೀಕೆ, ಅಂತ್ಯಗದ್ಯ

[೫೩] ಬಸವಣ್ಣನವರ ಟೀಕಿನ ವಚನಗಳು – (ಸಂ) ಡಾ.ಎಂ.ಎಂ. ಕಲಬುರ್ಗಿ, ಪ್ರಸ್ತಾವನೆ, ಪು. v.

[೫೪] ಅದೇ ಪುಟ – ix.

[೫೫] ಅದೇ ಪುಟ x.

[೫೬] ಅದೇ ಪುಟ x.

[೫೭] ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ, ಸಂಪುಟ– I.

[೫೮] ಅದೇ

[೫೯] ಅದೇ

[೬೦] ಅದೇ

[೬೧] ಅದೇ

[೬೨] ವೀರಶೈವ ತಾರಾವಳಿ ಸಂಪುಟ (ಸಂ), ಡಾ. ವೀರಣ್ಣ ರಾಜೂರ, ಪ್ರಸ್ತಾವನೆ, ಪು. XXXXI.

[೬೩] ಅದೇ ಪುಟ vii - ix.

[೬೪] ಅದೇ ಪುಟ ೩೨೧.

[೬೫] ಅದೇ ಪುಟ ೩೪೪.

[೬೬] ಅದೇ ಪುಟ ೩೪೩–೩೪೪.

[೬೭] ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರ ಕರಂಡ (ಸಂ), ಎಸ್. ಶಿವಣ್ಣ, ಪ್ರಸ್ತಾವನೆ, ಪು. xxii.

[೬೮] ಅದೇ ಪುಟ xxii.

[೬೯] ಅದೇ ಪುಟ ಪುಟ xxii.

[೭೦] ಅದೇ ಪುಟ ಪುಟ xxii.

[೭೧] ಅದೇ ಪುಟ ಪುಟ xxiii.

[೭೨] ಮ.ಮ.ವಿ (ಸಂ). ಎಲ್. ಬಸವರಾಜು, ೧೯೭೧, ಪೀಠಿಕೆ, ಪು. ೧೨೬.

[೭೩] ಅದೇ ಪುಟ ೦೨.

[೭೪] ಅದೇ ಪುಟ ೦೫.

[೭೫] ಅದೇ ಪುಟ ೦೬.

[೭೬] ಇಮ್ಮಡಿ ಮುರಿಗಾ ಗುರುಸಿದ್ಧರು, ಜೀವನ ಮತ್ತು ಸಾಹಿತ್ಯ– ಎ. ಚೆನ್ನಪ್ಪ ಪಿಎಚ್.ಡಿ. ಮಹಾಪ್ರಬಂಧ, ಪು. ೨೮೧.

[೭೭] ಅದೇ ಪುಟ ೨೮೧.

ಅಧ್ಯಾಯ : ಐದು

ಮುರುಘಾ ಪರಂಪರೆಯ ಸಾಹಿತ್ಯದ ವೈಶಿಷ್ಟ್ಯಗಳು

೧) ವಸ್ತು

೨) ರೂಪ

೩) ಭಾಷೆ

೪) ಚಾರಿತ್ರಿಕ ಅಂಶಗಳು

ಅಧ್ಯಾಯ – ೫

ಮುರುಘಾ ಪರಂಪರೆಯ ಸಾಹಿತ್ಯದ ವೈಶಿಷ್ಟ್ಯಗಳು

ಶ್ರೀಮಂತವಾದ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಮುರುಘಾ ಪರಂಪರೆಯ ಸಾಹಿತ್ಯದ ಕೊಡುಗೆ ಗಮನಾರ್ಹವಾಗಿದೆ. ಈ ಪರಂಪರೆಯ ಕವಿಗಳು ತತ್ಪೂರ್ವದ ಕಾವ್ಯ ಪರಂಪರೆಯೊಂದಿಗೆ ಸೃಜನಾತ್ಮಕ ಸಂಬಂಧವನ್ನು ಇಟ್ಟುಕೊಂಡು ತಮ್ಮ ಪ್ರತಿಭೆ–ಪಾಂಡಿತ್ಯಗಳಿಂದ ಸಾಹಿತ್ಯ ಸೃಷ್ಟಿ ಮಾಡಿ ತಮ್ಮ ಸ್ವಂತಿಕೆಯನ್ನು ಸಾಧಿಸಿದ್ದಾರೆ. ಸಂಖ್ಯೆ ಹಾಗೂ ರೂಪದ ದೃಷ್ಟಿಯಿಂದ ವೈವಿಧ್ಯಮಯ ಸಾಹಿತ್ಯ ರಚಿಸಿದ್ದಾರೆ. ಇವರ ಕೃತಿಗಳಲ್ಲಿ ಅಪ್ರತಿಮ ಪಾಂಡಿತ್ಯ, ಅನುಭಾವ, ದರ್ಶನ ಹಾಗೂ ಸೃಜನಶೀಲ ಅಂಶಗಳು ಎದ್ದು ಕಾಣುತ್ತವೆ. ಅವು ಜನಮನದ ಕಾಳಿಕೆಯನ್ನು ಕಳೆಯುವಲ್ಲಿ, ಸಂಸ್ಕೃತಿ ಪ್ರಸಾರ ಮಾಡುವಲ್ಲಿ ವೀರಶೈವಧರ್ಮ ತತ್ವಪ್ರಚಾರ ಮತ್ತು ಪ್ರಸಾರ ಮಾಡುವಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಕನ್ನಡ ಸಾಹಿತ್ಯದ ಎಲ್ಲ ಮಗ್ಗಲುಗಳನ್ನು ತನ್ನ ತೆಕ್ಕೆಯಲ್ಲಿ ತೆಗೆದುಕೊಂಡ ಮುರುಘಾ ಪರಂಪರೆಯ ಸಾಹಿತ್ಯ–ಚಂಪು–ವಚನ–ಸ್ವರವಚನ–ಷಟ್ಪದಿ–ಕಂದ–ನಾಂದ್ಯ–ತಾರಾವಳಿ ಇತ್ಯಾದಿ ಸಾಹಿತ್ಯ ಪ್ರಕಾರಗಳಲ್ಲಿ ರೂಪ ತಳೆದಿದೆ. ಈ ಸಾಹಿತ್ಯದ ಒಟ್ಟು ವೈಶಿಷ್ಟ್ಯಗಳನ್ನು ಈ ಕೆಳಗಿನ ಅಂಶಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ.

೧) ವಸ್ತು

೨) ರೂಪ

೩) ಭಾಷೆ

೪) ಚಾರಿತ್ರಿಕ ಅಂಶಗಳು

೧) ವಸ್ತು :

ಸೂಕ್ಷ್ಮ ಸಂವೇದನೆಯನ್ನು ಹೊಂದಿದ ಕವಿ ತನ್ನ ಅನಿಸಿಕೆಗಳ ಅಭಿವ್ಯಕ್ತಿಗಾಗಿ ಪ್ರಮುಖವಾಗಿ ಎರಡು ಅಂಶಗಳಿಗೆ ಮೊರೆ ಹೋಗಬೇಕಾಗುತ್ತದೆ. ಒಂದು ವಸ್ತು, ಇನ್ನೊಂದು ಭಾಷೆ, ವಸ್ತುವಿನ ಆಯ್ಕೆಯಲ್ಲಿ ಕವಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಆತ ಪ್ರಾಚೀನ ಕಾವ್ಯಗಳಿಂದ, ಪುರಾಣಗಳಿಂದ, ಇತಿಹಾಸದಿಂದಲೂ ವಸ್ತುವನ್ನು ಆಯ್ಕೆ ಮಾಡಿಕೊಳ್ಳಬಹುದು. ಇವುಗಳ ಅಧಾರದಿಂದಲೇ ಹೊಸ ವಸ್ತುವನ್ನು ಸೃಷ್ಟಿಸಿಕೊಳ್ಳಬಹುದು. ಇಂಥ ವಸ್ತುವನ್ನು ತನ್ನ ದೃಷ್ಟಿ ಧೋರಣೆ, ಸಮಕಾಲೀನ ಪರಿಸ್ಥಿತಿಗೆ ತಕ್ಕಂತೆ ಮಾರ್ಪಡಿಸಿಕೊಳ್ಳಲೂ ಬಹುದು. ಒಟ್ಟಿನಲ್ಲಿ ಆ ವಸ್ತು ಕವಿಯ ಪ್ರತಿಭೆಯ ಮೂಸೆಯಲ್ಲಿ ಹೊಸ ಜೀವವನ್ನು ಪಡೆದುಕೊಳ್ಳುತ್ತದೆ. ಇಲ್ಲಿ ಕವಿಯ ಸ್ವಂತಿಕೆ, ಸ್ವೋಪಜ್ಞತೆಗಳು ಬಂಡವಾಳವಾಗಿ ಪರಿಣಮಿಸುತ್ತವೆ.

ಸಾಹಿತ್ಯ ರಚನೆಯೊಂದು ಸಾಂಸ್ಕೃತಿಕ ಕ್ರಿಯೆ. ಇಲ್ಲಿ ಸಮಕಾಲೀನ ವಸ್ತುಗಳಿಂದ ಹಿಡಿದು, ಸಾರ್ವಕಾಲಿಕ ಸತ್ಯಗಳನ್ನು ಹೇಳುವವರೆಗೂ ಕಾವ್ಯದ ವಸ್ತು ಹರಹುಪಡೆದುಕೊಳ್ಳುತ್ತದೆ. ಹಾಗೆಯೇ ಸಂಕೀರ್ಣ ವಸ್ತುಗಳಾದ ಸಾಮಾಜಿಕ, ಧಾರ್ಮಿಕ, ರಾಜಕೀಯ, ವೈಚಾರಿಕ ವಿಷಯಗಳನ್ನು ಪ್ರಸ್ತಾಪಿಸಲು ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ಮುರುಘಾ ಪರಂಪರೆಯ ಕವಿಗಳ ಕೃತಿಗಳು ಹೆಚ್ಚಾಗಿ ವೀರಶೈವ ಧರ್ಮದ ತಾತ್ವಿಕಾಂಶಗಳು, ಶಿವನ ಲೀಲೆಗಳು, ಗುರುಸ್ತುತಿ, ಶಿವಸ್ತುತಿ, ಶಿವಗಣಗಳ ಸ್ತುತಿ, ಶಿವಪಾರಮ್ಯ, ಶಿವಯೋಗದ ಸ್ವರೂಪ ಮಹತ್ವ ಹಾಗೂ ಆಚರಣೆಯ ವಿಧಾನಗಳನ್ನು ಒಳಗೊಂಡಿವೆ. ಶಿವನ ಪುತ್ರ ಷಣ್ಮುಖಸ್ವಾಮಿಯ ಮಹಿಮೆ, ಅಲ್ಲಮಪ್ರಭುವಿನ ಗುರುಗಳಾದ ಅನಿಮಿಷದೇವರ ಚರಿತೆ, ಮೀನಾಕ್ಷಿ-ಸುಂದರರ ೬೪ ಲೀಲೆಗಳು, ಚಿತ್ರದುರ್ಗ ಬೃಹನ್ಮಠದ ಪೀಠ ಪರಂಪರೆ ಹಾಗೂ ಪೀಠಾಧಿಪತಿಗಳ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡು ಧಾರ್ಮಿಕ, ಐತಿಹಾಸಿಕ, ಪೌರಾಣಿಕ ಹಾಗೂ ಚಾರಿತ್ರಿಕ ಅಂಶಗಳನ್ನೊಳಗೊಂಡ ಸಾಹಿತ್ಯವನ್ನು ರಚಿಸಿದ್ದಾರೆ.

ಮುರುಘಾ ಪರಂಪರೆಯ ಮೂಲಕರ್ತೃಗಳಾದ ಶಾಂತವೀರರು ಚಂಪೂ ರೂಪದಲ್ಲಿ ರಚಿಸಿದ ಹಮ್ಮೀರ ಕಾವ್ಯದಲ್ಲಿ ಅನಿಮಿಷದೇವನ ಚರಿತ್ರೆಯನ್ನು ನಿರೂಪಿಸಿದರೆ ಶೂನ್ಯಮಂತ್ರಗೋಪ್ಯ, ಪ್ರಭುಲಿಂಗ ಕಂದ, ಕೈವಲ್ಯ ನಾಮ್ಯೈಕೋತ್ತರ ಶತಸ್ಥಲ; ಮಿಶ್ರಾರ್ಪಣ, ಪಂಚಾಶಿಕೆ, ಕರಣಹಸಿಗೆ, ಯೋಗಕಲಾಪಸಾರ ಈ ಮೊದಲಾದ ಕೃತಿಗಳಲ್ಲಿ ವೀರಶೈವಧರ್ಮದ ತಾತ್ವಿಕ ಅಂಶಗಳನ್ನು ಪ್ರತಿಪಾದಿಸಲಾಗಿದೆ. ವೀರಶೈವ ಧರ್ಮದ ವಿಶಿಷ್ಟ ತತ್ವಗಳಾದ ಷಟ್ಸ್ಥಲ, ಲಿಂಗಸ್ಥಲ, ಶಕ್ತಿಗಳು, ಹಸ್ತಗಳು, ಅಷ್ಟವಿಧ ಹಾಗೂ ಏಕಾದಶವಿಧ ಸಕೀಲಗಳು, ಷಡ್ವಿಧ ಕ್ರಿಯಾರ್ಪಣ, ವರ್ಣಭೇದಗಳು, ಪ್ರಣಮಗಳು, ಪಂಚಬ್ರಹ್ಮಗಳು, ಪಂಚಪರಬ್ರಹ್ಮ ಮಂತ್ರ, ಷಡ್‌ಮಂತ್ರ, ಪಂಚಾಸ್ತ್ರ ಮಹಾಮಂತ್ರ, ಷಟ್ಚಕ್ರಗಳು, ಅವುಗಳ ಅಧಿದೇವತೆಗಳು ಇವೆ. ಮೊದಲಾದವುಗಳ ವಿವರಣೆಯಿದೆ, ಇವುಗಳನ್ನು

ಆಚರಿಸಿ ಸಿದ್ಧಿ ಪಡೆಯತಕ್ಕವನೇ ವಿಶೇಷ ವೀರಶೈವ. ಅವನೇ ಶೂನ್ಯ ಸಂಪಾದಿಸಲು ಯೋಗ್ಯ ಎಂದು ಹೇಳಲಾಗಿದೆ.

ವೀರಶೈವದ ಮತ್ತೊಂದು ತಾತ್ವಿಕ ಪರಿಕಲ್ಪನೆ ಏಕೋತ್ತರ ಶತಸ್ಥಲ ಸಿದ್ಧಾಂತ, ಇಮ್ಮಡಿ ಮುರಿಗಾ ಗುರುಸಿದ್ಧರು ತಮ್ಮ ಕೈವಲ್ಯನಾಮೈಕೋತ್ತರ ಶತಸ್ಥಲ ಕೃತಿಯಲ್ಲಿ ಇದನ್ನು ಪ್ರತಿಪಾದಿಸಿದ್ದಾರೆ. ಶಿವಪಾರಮ್ಯವನ್ನು ಎತ್ತಿ ಹೇಳುವ ಕೃತಿ ಪಂಚಾಶಿಕೆ. ೪ ಕಾಂಡಗಳಲ್ಲಿ ವಿಸ್ತೃತಗೊಂಡ ಈ ಕೃತಿ ಶಿವನೆ ಜಗವೆಂದು, ಜಗವೇ ಶಿವನೆಂದು ಸಾರುತ್ತದೆ. ಪದಾರ್ಥವನ್ನು ಪ್ರಸಾದವಾಗಿಸುವ, ಲಿಂಗಾರ್ಪಣದ ರಹಸ್ಯವನ್ನು ಹೇಳುವ ಶಾಸ್ತ್ರ ಕೃತಿ ಇಮ್ಮಡಿ ಗುರುಸಿದ್ಧನ ಮಿಶ್ರಾರ್ಪಣ. ಇಲ್ಲಿ ಪ್ರಶ್ನೋತ್ತರ ರೂಪದಲ್ಲಿ ವಿಷಯ ನಿರೂಪಣೆ ಮಾಡಲಾಗಿದೆ. ಲಿಂಗಾಂಗ ಸಾಮರಸ್ಯ ಸಾಧಿಸಲು ಜೀವನ್ಮುಕ್ತನಾಗಿ, ಬಂಧರಹಿತನಾಗಿ ಆಚರಿಸಬೇಕಾದ ಕ್ರಮ ಯಾವುದು? ಎಂದು ಶಿಷ್ಯ ಗುರುವಿನಲ್ಲಿ ಪ್ರಶ್ನಿಸಿದಾಗ ಶ್ರೀಗುರುವು ಉತ್ತರವಾಗಿ ದೃಢವಾದ ಜ್ಞಾನದಿಂದ ಕೂಡಿದ ಕ್ರಿಯಾರ್ಪಣ, ಷಡ್ವಿಧಭಕ್ತಿ, ಆಚಾರಲಿಂಗ ಮಿಶ್ರ, ಶಿವಲಿಂಗ ಮಿಶ್ರ, ಪ್ರಸಾದಲಿಂಗ ಮಿಶ್ರ, ೨೧೬ ತೆರನಾದ ಅರ್ಪಣದ ಕ್ರಮಗಳು, ಭಕ್ತನ ೧೬ ಸ್ಥಲ, ಮಾಹೇಶ್ವರನ ೯ ಸ್ಥಲ, ಪ್ರಸಾದಿಯ ೭೧ ಸ್ಥಲ, ಪ್ರಾಣಲಿಂಗಿಯ ೫ ಸ್ಥಲಗಳು, ೪೪ ಲಿಂಗಸ್ಥಲಗಳು, ೯ ಆಚಾರಲಿಂಗ ಸ್ಥಲಗಳು, ೯ ಗುರುಲಿಂಗಸ್ಥಲಗಳು, ೯ ಶಿವಲಿಂಗ ಸ್ಥಲಗಳು, ೯ ಜಂಗಮಲಿಂಗ ಸ್ಥಲಗಳು, ೧೨ ಮಹಾಲಿಂಗ ಸ್ಥಲಗಳು ಹೀಗೆ ೫೭ ಲಿಂಗಸ್ಥಲಗಳು ಒಂದಾಗುವಂತೆ ಷಟ್ಸ್ಥಲದಲ್ಲಿ ಧ್ಯಾನಿಸುವುದು ಎಂದು ಗುರುವು ಶಿಷ್ಯನಿಗೆ ಮಿಶ್ರಾರ್ಪಣದ ವಿಧಾನವನ್ನು ಸಕ್ರಮವಾಗಿ ಭೋಧಿಸುತ್ತಾನೆ.

ಶಿವಯೋಗದ ಸ್ವರೂಪ, ಮಹತ್ವ ಹಾಗೂ ಆಚರಣೆಯ ವಿಧಾನಗಳನ್ನು ಶಿವಪಾರ್ವತಿಯರ ಸಂಭಾಷಣೆಯ ರೂಪದಲ್ಲಿ ವಿವರಿಸುವ ಕೃತಿ – 'ಯೋಗಕಲಾಪಸಾರ'. ಇಲ್ಲಿ ಮೂಲ ಮಂತ್ರದ ಮಹಿಮೆ, ಮಂತ್ರಲಿಂಗದ ರೂಪ, ಅಕ್ಷರಗಳು, ಅವುಗಳ ನೆಲೆಗಳು ಹಾಗೂ ಸ್ವರೂಪ, ಷಟ್ಚಕ್ರಗಳಲ್ಲಿರುವ ಶಕ್ತಿಯರ ಸ್ಥಾನಗಳು, ಪೃಥ್ವಿ, ಅಪ್ಪು, ಅಗ್ನಿ, ವಾಯು, ಆಕಾಶಗಳಲ್ಲಿರುವ ಶಂಭುವಿನ ಸ್ಥಾನಗಳನ್ನು ವಿವರಿಸಲಾಗಿದೆ. ಮುರಿಗೆ ಶಾಂತವೀರರ 'ಪ್ರಭುಲಿಂಗದ ಕಂದ'ವೂ ಸಹಿತ ಶಿವಯೋಗದ ನಿರೂಪಣೆಯ ವಸ್ತುವನ್ನೇ ಒಳಗೊಂಡಿದೆ. ಶಿವನ ಲೀಲಾವಿಲಾಸಗಳು, ಅಪ್ರತಿಮತ್ವ, ಭಕ್ತವತ್ಸಲತೆ, ಕರುಣಾಮೃತತ್ವ, ಸತ್ಕೃಪಾ ಸಿಂಧುತ್ವ ಇತ್ಯಾದಿ ಸಂಕೀರ್ಣ ವಿಷಯಗಳನ್ನು ಒಳಗೊಂಡಿರುವ ಕೃತಿ–'ಶಿವಲಿಂಗ ಮಹಿಮಾ ಷಟ್ಪದಿ' ಹಾಗೂ 'ಶಿವಲಿಂಗ ನಾಂದ್ಯ'. ಇಲ್ಲಿ ವೇದ, ಆಗಮ, ಪುರಾಣ, ಸಾಕ್ಷ್ಯಾಧಾರಗಳಿಂದ ಶಿವನು ಶ್ರೇಷ್ಠ ಎಂದು ಸಾರಲಾಗಿದೆ. ಶಿವನಲ್ಲಿಯ ಅತಿಶಯ ಭಕ್ತಿಯ ಪರಿಣಾಮವಾಗಿ ಉಂಟಾಗುವ ಶಿವಸಾಕ್ಷಾತ್ಕಾರವನ್ನು ನಿರೂಪಿಸಲಾಗಿದೆ. ಸತ್ಕೃಪಾಸಿಂಧು, ಭವದೂರ, ದೋಷದೂರ ಶೀತಕಿರಣಧರ, ಶರಬರೂಪ, ತರುಣ ಶಶಿಚೂಡ, ಚಿದಾನಂದ, ಶುಭವೃಂದ, ಸಮ್ಯಜ್ಞಾನ ಕಂದ ಎಂಬ ವಿಭಿನ್ನ ಹೆಸರುಗಳಿಂದ ಆತನ ವ್ಯಕ್ತಿತ್ವದ

ಹಲವು ಮುಖಗಳನ್ನು ಪರಿಚಯಿಸಿಕೊಟ್ಟಿದ್ದಾರೆ. 'ಶಿವಲಿಂಗ ನಾಂದ್ಯ'ದಲ್ಲಿ ಶಿವನ ಲೀಲಾವಿಲಾಸಗಳನ್ನು, ಅಪ್ರತಿಮತ್ವವನ್ನು, ಶಿವನ ನಾಮಸ್ಮರಣೆಯ ಮಹತ್ವವನ್ನು ವಿವರಿಸಲಾಗಿದೆ. ಈ ಕೃತಿಯನ್ನು ಒಲಿದು ಓದಿದವರಿಗೆ ಭವಬಂಧನವಿಲ್ಲ, ಸುಲಭದಿಂದ ಅರ್ಥ ಮಾಡಿಕೊಂಡವರಿಗೆ ಚಿಲಿಪಾಲು ಸಕ್ಕರೆಯ ಬೆರಕೆಯನು ಸವಿದಂತೆ ಎಂದಿರುವರು.

ವೀರಶೈವ ಧರ್ಮ-ತತ್ವಗಳನ್ನು ಬೋಧಿಸಲು ಜನಪದ ಸಾಹಿತ್ಯ ಪ್ರಕಾರವಾದ ಕೊರವಂಜಿ ಸಾಹಿತ್ಯವನ್ನು ಬಳಸಿಕೊಂಡದ್ದು ವಿಶೇಷವೆನಿಸಿದೆ. ಇಮ್ಮಡಿ ಮುರಿಗಾ ಗುರುಸಿದ್ಧರ 'ಕೊರವಂಜಿ ಕಟ್ಟಳೆ' ಎಂಬ ಕೃತಿಯಲ್ಲಿ ಗುರು ಶಾಂತೇಶ್ವರನು ಕೊರವಂಜಿ ವೇಷದಲ್ಲಿ ಕಲ್ಯಾಣಪುರಕ್ಕೆ ಬಂದು ಶರಣಸತಿಯರಿಗೆ ಕಣಿ ಹೇಳುವ ರೀತಿಯಲ್ಲಿ ವೀರಶೈವ ಧರ್ಮದ ತತ್ವಗಳನ್ನು ಬೋಧಿಸುತ್ತಾನೆ.

ಗುರುಸ್ತುತಿಯನ್ನು ವಸ್ತುವಾಗಿಟ್ಟುಕೊಂಡ ಕೃತಿಗಳು 'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ'. 'ಮಹಾಂತ ಸ್ವಾಮಿಗಳು ನಿರೂಪಿಸಿದ ನಾಂದ್ಯ', 'ತುರಂಗದಾಟಿ' ಮತ್ತು 'ಮುರಿಗೆ ತಾರಾವಳಿ'.

ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯದಲ್ಲಿ ಗುರು ಮುರಿಗಾ ಶಾಂತವೀರರನ್ನು ಶಿವನೊಂದಿಗೆ ಅಭೇದ ಕಲ್ಪಿಸಿ ಸ್ತುತಿಸುವುದರೊಂದಿಗೆ ತನ್ನ ಗುರುಭಕ್ತಿಯನ್ನು, ಗುರು ಮಹಿಮೆಯನ್ನು ಎತ್ತಿ ತೋರಿಸಿದ್ದಾರೆ. ಮಹಾಂತಸ್ವಾಮಿಗಳು ನಿರೂಪಿಸಿದ ನಾಂದ್ಯದಲ್ಲಿ ಭಕ್ತಿಭಾವ ಭರಿತವಾಗಿ ಶಾಂತವೀರರ ಸ್ತುತಿ ಮಾಡಲಾಗಿದೆ. 'ತುರಂಗದಾಟಿ'ಯೂ ಸ್ತೋತ್ರರೂಪದ ಕೃತಿಯಾಗಿದ್ದು, ಗುರು ಶಾಂತವೀರರ ಸ್ತುತಿಯನ್ನೇ ಪ್ರಮುಖವಾಗಿರಿಸಿಕೊಂಡಿದೆ.

ಮುರಿಗೆ ತಾರಾವಳಿ- ಮೂಲತಃ ಚಾರಿತ್ರಿಕ ಕೃತಿ. ಇದರಲ್ಲಿ ಗುರುಸಿದ್ಧರ ಗುರುವಾದ ಮುರಿಗೆ ಶಾಂತವೀರರ ಜೀವನ ಚರಿತ್ರೆಯನ್ನು ಹೇಳುತ್ತಾ ಗುರುವಿನ ಘನವ್ಯಕ್ತಿತ್ವವನ್ನು ಎತ್ತಿ ಹೇಳಲಾಗಿದೆ. ಅವರ ಲೋಕಯಾತ್ರೆ, ಲೋಕೋದ್ಧಾರ, ಭಕ್ತೋದ್ಧಾರ ಕಾರ್ಯವನ್ನು, ಕಾರುಣ್ಯಮಯ ಲೋಕ ವ್ಯಕ್ತಿತ್ವವನ್ನು ಕುರಿತಾಗಿ ವಿವರಿಸಿದ್ದಾರೆ. ಒಂದರ್ಥದಲ್ಲಿ ಇದೂ ಸಹ ಗುರುಸ್ತುತಿ ಎಂದೇ ಹೇಳಬಹುದು.

ಪೌರಾಣಿಕ ವಸ್ತುವನ್ನು ಒಳಗೊಂಡ ಕೃತಿಗಳು 'ಹಾಲಾಸ್ಯ ಪುರಾಣ' ಮತ್ತು 'ಶಿವರಹಸ್ಯ ಪುರಾಣ'. ಹಾಲಾಸ್ಯ ಪುರಾಣವು ವೀರಶೈವ ಸಾಹಿತ್ಯದ ಕಿರೀಟ ಸದೃಶಕೃತಿ. ಸೋದೆಯ ಸದಾಶಿವರಾಜ ವರ್ಣಕದಲ್ಲಿ ಹೇಳಿದ ಇದನ್ನು ಇಮ್ಮಡಿ ಮುರಿಗಾ ಗುರುಸಿದ್ಧರು ಕನ್ನಡ ಚಂಪೂರೂಪದಲ್ಲಿ ರಚಿಸಿದ್ದಾರೆ. ಇದರಲ್ಲಿ ಮೀನಾಕ್ಷಿ ಸುಂದರರ ೬೪ ಲೀಲೆಗಳನ್ನು ವಿವರವಾಗಿ ವರ್ಣಿಸಲಾಗಿದೆ.

ಶಿವರಹಸ್ಯ ಪುರಾಣವು – ಸಂಸ್ಕೃತ ಸ್ಕಂದ ಪುರಾಣದಲ್ಲಿ ಹೇಳಲಾಗಿರುವ ಶಿವಪುತ್ರ ಷಣ್ಮುಖ ಸ್ವಾಮಿಯ ಮಹಿಮೆಯನ್ನು ಕನ್ನಡದಲ್ಲಿ ಹೇಳುತ್ತದೆ. ಶಿವನ ಪ್ರಿಯಭಕ್ತನು, ಕೀರ್ತಿವಂತನು ಆದ ಸೂತಮುನಿಯು ಗೌರೀಕುಮಾರ ಚರಿತೆಯನ್ನು ಆಲಿಸುವುದರಿಂದ ಫಲ ಸಿಗುತ್ತದೆ. ಶಿವಕುಮಾರ ಚರಿತೆಯನ್ನು ಬಿಡದೆ ಕೇಳಿದರೆ ಬಯಸಿದ ಇಷ್ಟಾರ್ಥ ಸಿದ್ಧಿಗಳು ಪ್ರಾಪ್ತವಾಗುತ್ತವೆ ಎಂದು ತಿಳಿಸಲಾಗಿದೆ.

ಚಾರಿತ್ರಿಕ ವಸ್ತುವನ್ನೊಳಗೊಂಡ ಕೃತಿಗಳು ಹಮ್ಮೀರಕಾವ್ಯ, ಮನುರಾಜೇಂದ್ರ ತಾರಾವಳಿ, ಮುರಿಗೆ ತಾರಾವಳಿ, ಬಿಜ್ಜ ಮಹಾದೇವಿ ಚಾರಿತ್ರ್ಯ, ಪ್ರಭುಲೀಲೆ, ಮಹಾಲಿಂಗೇಂದ್ರ ವಿಜಯ.

ಹಮ್ಮೀರ ಕಾವ್ಯ – ಅಲ್ಲಮ ಪ್ರಭುಗಳ ಗುರುಗಳಾದ ಅನಿಮಿಷದೇವರ ಚರಿತ್ರೆಯನ್ನು ಒಳಗೊಂಡಿದೆ. ಮನುರಾಜೇಂದ್ರ ತಾರಾವಳಿಯೂ – ಹಮ್ಮೀರ ಕಾವ್ಯದ ವಸ್ತುವನ್ನೇ ಒಳಗೊಂಡಿದೆ. ಮುರಿಗೆ ತಾರಾವಳಿಯಲ್ಲಿ – ಮುರಿಗಾ ಸಂಪ್ರದಾಯದ ಮೂಲ ಪುರುಷರೂ, ಕವಿಗಳೂ, ಅನುಭಾವಿಗಳೂ ಎನಿಸಿದ ಮುರಿಗಾ ಶಾಂತವೀರರ ಉಜ್ವಲ ಜೀವನ ಚರಿತ್ರೆಯನ್ನು ನಿರೂಪಿಸಲಾಗಿದೆ. ವಿದ್ವತ್ತು, ಪಾಂಡಿತ್ಯ, ಜ್ಞಾನಾನುಭವ, ಆಧ್ಯಾತ್ಮದ ಔನ್ನತ್ಯಗಳಿಂದ ಅನೇಕ ವಾದಿಗಳನ್ನು ಸ್ಪರ್ಧೆಯಲ್ಲಿ ಜಯಿಸಿ ಸಿದ್ಧಪುರುಷರೆನಿಸಿದ ಮುರಿಗಾ ಶಾಂತವೀರರ ವ್ಯಕ್ತಿತ್ವ ಚಿತ್ರಣ ಇಲ್ಲಿ ಸಹಜವಾಗಿ ಮೂಡಿಬಂದಿವೆ. ಗರಿಗೆದರಿ ನಿಂತಿರುವ ಗುರುಭಕ್ತಿಯ ನಿರೂಪಣೆಯ ಜೊತೆಗೆ ಶಾಂತವೀರರ ಜೀವನ ಚರಿತ್ರೆಗೆ ಸಂಬಂಧಿಸಿದಂತೆ ಅನೇಕ ಚಾರಿತ್ರಿಕ ವಿಷಯಗಳು ಸೇರಿಕೊಂಡಿವೆ. ಗೋಲಕೊಂಡದ ಕುತುಬ್ ಬಾದಷಾ, ಹರಪನಹಳ್ಳಿಯ ಬಸವಭೂಪಾಲ, ಸೋದೆಯ ಸದಾಶಿವರಾಯ, ಗೊತ್ತಳಪುರದ ಹನುಮರಾಯ, ಫಣಿಪುರದ ಪ್ರವರಭೂಪಾಲ, ಲಕ್ಷ್ಮೇಶ್ವರದ ಕಾನಭೂಮೀಶನಪುತ್ರ ಕೆಂಚಗೌಡ, ಮದಕೇರಿಯ ಕಸ್ತೂರಿಭೂಪಾಲ ಮೊದಲಾದ ಅರಸರ ಉಲ್ಲೇಖಗಳು ಇಲ್ಲಿ ಬಂದಿವೆ. ಇವು ಪೂರ್ಣಪ್ರಮಾಣದ ಚಾರಿತ್ರಿಕ ವಿವರಗಳನ್ನು ನೀಡದೇ ಹೋದರೂ ಕಳಚಿ ಹೋದ ಚರಿತ್ರೆಯ ವಾಸ್ತವಾಂಶಗಳನ್ನು ಗುರುತಿಸಲು ಸಹಾಯಕಾರಿಯಾಗಿವೆ. ಹೀಗಾಗಿ ಇದೊಂದು ವಿಶ್ವಾಸಾರ್ಹ ಚಾರಿತ್ರಿಕ ಕೃತಿ ಎಂದೇ ಹೇಳಬಹುದು.

'ಪ್ರಭುಲೀಲಾ' – ಮುರಿಗಾ ಗುರುಸಿದ್ಧರ ಉಭಯ ಭಾಷಾ ಪಾಂಡಿತ್ಯಕ್ಕೆ ಸಾಕ್ಷಿಯಾಗಿರುವ ಕೃತಿ. ಚಾಮರಸನ "ಪ್ರಭುಲಿಂಗಲೀಲೆ"ಯನ್ನು ಸಂಸ್ಕೃತದ ವೃತ್ತಗಳಲ್ಲಿ ರಚಿಸಲಾಗಿದೆ. ಅಲ್ಲಮಪ್ರಭುವಿನ ಬಾಲ್ಯಜೀವನದಿಂದ ಆರಂಭಿಸಿ ಕೊನೆಯವರೆಗಿನ ಜೀವನದ ವೃತ್ತಾಂತಗಳನ್ನು ಇಲ್ಲಿ ನಿರೂಪಿಸಲಾಗಿದೆ.

'ಬಿಜ್ಜಮಹಾದೇವಿ ಚಾರಿತ್ರ್ಯ'ದಲ್ಲಿ – ಬಿಜ್ಜಾವರದ ಕದಿರ ಕಾಯಕದವಳಾದ ಅಮ್ಮವ್ವೆಯ ಕಥಾವಸ್ತುವನ್ನು ಯಕ್ಷಗಾನ ರೂಪದಲ್ಲಿ ಚಿತ್ರಿಸಲಾಗಿದೆ. ಜನಪದ ಸಾಹಿತ್ಯ ಪ್ರಕಾರವನ್ನು ಬಳಸಿಕೊಂಡು ಶಿವಶರಣೆಯೊಬ್ಬಳ ಜೀವನ ರೂಪಿಸುವ ರೀತಿ, ಕವಿ ಆಸಕ್ತಿಯ ವಿಶೇಷವೆನಿಸುತ್ತದೆ.

'ಮಹಾಲಿಂಗೇಂದ್ರ ವಿಜಯ' – ಚಿತ್ರದುರ್ಗ ಬೃಹನ್ಮಠದ ಇಪ್ಪತ್ತೊಂದನೆಯ ಜಗದ್ಗುರುವಾದ ಮಹಾಲಿಂಗದೇವನ ಜೀವನ ಚರಿತ್ರೆಯನ್ನು ಒಳಗೊಂಡ ಕೃತಿ. ಮಹನೀಯನೋರ್ವನ ಚರಿತ್ರೆಯನ್ನು ಒಳಗೊಂಡಿರುವುದು ಮಾತ್ರವಲ್ಲ, ಶೂನ್ಯಪೀಠ ಪರಂಪರೆಯಲ್ಲಿ ಬರುವ ಈ ಮೊದಲಿನ ೨೦ ಜಗದ್ಗುರುಗಳ ಜೀವನ ಚರಿತ್ರೆಯನ್ನೂ ಇಲ್ಲಿ ನಿರೂಪಿಸಲಾಗಿದೆ. ಇದು ದಸರಯ್ಯ, ಬಿಜ್ಜ ಮಹಾದೇವಿ ಮುಂತಾದ ಪುರಾತನರ ಪ್ರಸಂಗದಿಂದ ಪುಣ್ಯಕಥಾಮೃತವೂ, ಪ್ರಭುದೇವ, ಬಸವಣ್ಣ, ಚೆನ್ನಬಸವಣ್ಣ, ತೋಂಟದ ಸಿದ್ಧಲಿಂಗ, ಮುರುಗೇಶ, ದುರದುಂಡಿ ಗುರುಗಳು, ನಿಡಸೋಸಿ ಬಸವಸ್ವಾಮಿಗಳು ಈ ಮೊದಲಾದವರ ಕಥಾ ಮಹತ್ವದಿಂದ ವೀರಶೈವ ಮಹಾಪುರಾಣವೂ, ಅಷ್ಟಾವರಣ, ಷಟ್‌ಸ್ಥಲ ಮುಂತಾದವುಗಳ ನಿರೂಪಣೆಯಿಂದ ಧರ್ಮಶಾಸ್ತ್ರವೂ ಆಗಿ ವಿಶೇಷತೆಯನ್ನು ಮೆರೆಯುತ್ತದೆ.

ಈ ಪರಂಪರೆಯ ಕವಿಗಳಿಂದ ರಚಿತವಾದ ನಾಂದ್ಯ ಕೃತಿಗಳಂತೂ ನಾಂದ್ಯ ಸಾಹಿತ್ಯದಲ್ಲಿಯೇ ವಿಶಿಷ್ಟವಾದವುಗಳಾಗಿವೆ. ಏಕೆಂದರೆ ಇಂದಿನವರೆಗೂ ಬೆಳೆದು ಬಂದ ನಾಂದ್ಯಗಳು ಹಿರಿಯ ಕೃತಿಗಳಲ್ಲಿ ಬರುವ ಪ್ರಾರ್ಥನಾ ಪದ್ಯಗಳ ಸಂಗ್ರಹಗಳಾಗಿರುತ್ತಿದ್ದವು. ಇಲ್ಲಿ ಬರುವ ನಾಂದ್ಯಗಳು ಸ್ವತಂತ್ರವಾಗಿಯೇ ರಚಿಸಿದ ಕೃತಿಗಳಾಗಿವೆ.

ಮುದ್ವೀರಸ್ವಾಮಿಯ ಸ್ವರವಚನಗಳಲ್ಲಿ ಯೋಗತತ್ವದ ವಿವರಗಳನ್ನು ನೀಡುತ್ತ ಅದರಲ್ಲೂ ಶಾಂಭವ ಯೋಗದ ಮಹತ್ವವನ್ನು ತಿಳಿಸಲಾಗಿದೆ. ಕವಿಯ ಲೋಕಾನುಭವದ ಅಭಿವ್ಯಕ್ತಿಯನ್ನು ಇಲ್ಲಿ ಕಾಣಬಹುದು.

ಮುದ್ವೀರಸ್ವಾಮಿಯ ಇನ್ನೊಂದು ಕೃತಿ 'ಶಿವತತ್ವ ಸುಜ್ಞಾನ ಪ್ರದೀಪಿಕೆ'. ಈ ಕೃತಿಯ ವಸ್ತು ಷಟ್‌ಸ್ಥಲ ತತ್ವ ನಿರ್ಣಯ ಇದನ್ನು ವೇದ, ಆಗಮ, ಉಪನಿಷತ್ತುಗಳಲ್ಲಿ ಅಡಕವಾದ ಗ್ರಂಥಗಳ ಆಧಾರದೊಂದಿಗೆ ವಿವರಿಸಲಾಗಿದೆ. ಇದೊಂದು ಶುದ್ಧ ತತ್ವಪ್ರಧಾನ ಕೃತಿಯಾಗಿದೆ.

ಮುರುಘಾ ಪರಂಪರೆಯಲ್ಲಿ ಬರುವ ಉನ್ನತ ಟೀಕಾಕಾರ ಎನಿಸಿಕೊಂಡ ಸೋಮಶೇಖರ ಶಿವಯೋಗಿಯ ಕೃತಿಗಳ ವಸ್ತು ಬಸವಣ್ಣ ಹಾಗೂ ತೋಂಟದ ಸಿದ್ಧಲಿಂಗದ ಷಟ್‌ಸ್ಥಲದ ವಚನಗಳು. ಈ ಇಬ್ಬರು ವಚನಕಾರರ ವಚನಗಳಿಗೆ ಈತ ತಾತ್ವಿಕಾರ್ಥ ಟೀಕೆ ಬರೆದಿದ್ದಾನೆ. ವೇದ, ಉಪನಿಷತ್ತು, ಆಗಮ, ಪುರಾಣ, ತರ್ಕ, ಯೋಗ ಇತ್ಯಾದಿ ಗ್ರಂಥಗಳಿಂದ ಸಾಕ್ಷಿಗಳನ್ನು ಆಯ್ದುಕೊಂಡು ಟೀಕೆಯಲ್ಲಿ ಬಳಸಿಕೊಂಡಿದ್ದಾನೆ.

ಹೀಗೆ ಮುರುಘಾ ಪರಂಪರೆಯ ಕವಿಗಳು ಧಾರ್ಮಿಕ, ಐತಿಹಾಸಿಕ, ಪೌರಾಣಿಕ, ಚಾರಿತ್ರಿಕ, ತಾತ್ವಿಕ, ಸ್ತೋತ್ರ ಪ್ರಧಾನ ವಸ್ತುವನ್ನು ಪ್ರಧಾನವಾಗಿಟ್ಟುಕೊಂಡು ಕೃತಿಗಳನ್ನು ರಚಿಸಿ ಈ ಮೂಲಕ ವಚನಕಾರರ ಹಾಗೂ ವೀರಶೈವ ಕವಿಗಳ ದೃಷ್ಟಿ ಧೋರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಸಮಕಾಲೀನ ಅರಸರ ಹಾಗೂ ಸಾಮಾಜಿಕ ಸಂಗತಿಗಳ ಉಲ್ಲೇಖಗಳು ಅನೇಕ ಕೃತಿಗಳಲ್ಲಿ ಎಡೆಪಡೆದಿದೆ.

೨) ರೂಪ :

ಎರಡು ಸಾವಿರ ವರ್ಷಗಳ ಚರಿತ್ರೆಯನ್ನು ಒಳಗೊಂಡ ಕನ್ನಡ ಸಾಹಿತ್ಯವು ವಸ್ತು, ರೂಪ, ಭಾಷೆ, ಛಂದಸ್ಸು, ಶೈಲಿಗಳಲ್ಲಿ ಹಲವಾರು ವೈವಿಧ್ಯತೆಗಳನ್ನು ಮೈಗೂಡಿಸಿಕೊಂಡಿದೆ. ಹಳಗನ್ನಡ-ನಡುಗನ್ನಡ ಕಾಲಘಟ್ಟಗಳಲ್ಲಿ ಚಂಪು, ವಚನ, ಸ್ವರವಚನ, ಷಟ್ಪದಿ, ರಗಳೆ, ತ್ರಿಪದಿ, ಸಾಂಗತ್ಯಗಳಂತಹ ಮಾರ್ಗ-ದೇಶಿ ಕಾವ್ಯ ಪ್ರಕಾರಗಳು, ಮಂತ್ರಗೋಪ್ಯ, ಮಿಶ್ರಾರ್ಪಣ, ಪಂಚಾಶಿಕೆ, ಕರಣಹಸಿಗೆ, ನಾಂದ್ಯ, ಸ್ತೋತ್ರದಂತಹ ವೀರಶೈವ ಲಘು ಸಾಹಿತ್ಯ ಪ್ರಕಾರಗಳು ಮೈದುಂಬಿ ಬೆಳೆದು ಬಂದಿವೆ. ಕನ್ನಡ ಸಾಹಿತ್ಯದ ಈ ಕಾವ್ಯ ಪರಂಪರೆಯನ್ನು ಮುರುಘಾ ಪರಂಪರೆಯ ಕವಿಗಳು ಮುಂದುವರೆಸಿಕೊಂಡು ಬಂದಿದ್ದಾರೆ.

ಮುರುಘಾ ಪರಂಪರೆಯ ಸಾಹಿತ್ಯ ಸೃಷ್ಟಿ ವೈವಿಧ್ಯಮಯವಾಗಿದೆ. ವಸ್ತುವಿನ ದೃಷ್ಟಿಯಿಂದ ಮಾತ್ರ ವೈವಿಧ್ಯತೆಯನ್ನು ಸಾಧಿಸದೆ, ಅದು ಸಾಹಿತ್ಯ ರಚನೆಯ ಅಭಿವ್ಯಕ್ತಿಗೆ ತಕ್ಕ ಮಾಧ್ಯಮವಾಗುವ ರೂಪದ ದೃಷ್ಟಿಯಿಂದಲೂ ಸಾಕಷ್ಟು ವೈವಿಧ್ಯತೆಯನ್ನು ಪಡೆದುಕೊಂಡಿದೆ.

ಈ ಪರಂಪರೆಯ ಕವಿಗಳು ಪಾಂಡಿತ್ಯ ಮೆರೆಯಲು ಚಂಪೂ ಹಾಗೂ ಷಟ್ಪದಿ ರೂಪಗಳಲ್ಲಿ ಪ್ರೌಢಕಾವ್ಯಗಳನ್ನು ರಚಿಸಿದರೆ. ಜನಮನವನ್ನು ತೊಳೆದು ಬೆಳಗಲು ಯಕ್ಷಗಾನ, ಜಾನಪದ ಧಾಟಿಯಲ್ಲಿ ಲಘು ಕೃತಿಗಳನ್ನು ರಚಿಸಿದ್ದಾರೆ. ವೀರಶೈವ ಧರ್ಮದ ತಾತ್ವಿಕಾಂಶಗಳನ್ನು ಪ್ರತಿಪಾದಿಸುವುದಕ್ಕಾಗಿ, ಶಿವನ ಲೀಲಾವಿಲಾಸ, ಶಿವಯೋಗದ ಸ್ವರೂಪ, ಮಹತ್ವ, ಶಿವಪಾರಮ್ಯ ಈ ಮೊದಲಾದ ಅಂಶಗಳನ್ನು ಎತ್ತಿ ಹೇಳಲು ವಚನ, ಸ್ವರವಚನ, ಕಂದ, ಷಟ್ಪದಿ, ನಾಂದ್ಯ, ಸ್ತೋತ್ರದಂತಹ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ. ನಿಘಂಟು, ಸಾಹಿತ್ಯ ರೂಪ ಬಳಸಿಕೊಳ್ಳುವುದರ ಮೂಲಕ ತಮ್ಮ ಭಾಷಾ ಪ್ರೌಢಿಮೆಯನ್ನು ಮೆರೆದಿದ್ದಾರೆ. ತಾರಾವಳಿ ಷಟ್ಪದಿ ರೂಪದ ಕಾವ್ಯಗಳಲ್ಲಿ ಚಾರಿತ್ರಿಕ ಅಂಶಗಳನ್ನು ಹೇಳುವ ಮೂಲಕ ತಮ್ಮ ಇತಿಹಾಸ ಪ್ರಜ್ಞೆಯನ್ನು ಮೆರೆದಿದ್ದಾರೆ. ಒಟ್ಟಾರೆಯಾಗಿ ಮುರುಘಾ ಪರಂಪರೆಯ ಸಾಹಿತ್ಯ ರೂಪಗಳನ್ನು ಚಂಪೂ-ವಚನ, ಸ್ವರವಚನ, ಷಟ್ಪದಿ, ಕಂದ, ದಂಡಕ, ಚೌಪದಿ, ಟೀಕೆ, ನಿಘಂಟು, ಉದ್ಧರಣೆ, ನಾಂದ್ಯ, ಕೊರವಂಜಿಪದ, ಹೋಳಿಪದ, ಯಕ್ಷಗಾನ ಎಂದು ಗುರುತಿಸಬಹುದು. ಈ ಪರಂಪರೆಯ ಒಟ್ಟು ಕೃತಿಗಳನ್ನು ಭಿನ್ನ ಭಿನ್ನ ರೂಪಗಳ ಹಿನ್ನೆಲೆಯಲ್ಲಿ ಹೀಗೆ ವರ್ಗೀಕರಿಸಬಹುದು.

೧. ವಚನ : ೧) ಶೂನ್ಯಮಂತ್ರಗೋಪ್ಯ
೨) ಮುರಿಗೆ ಸ್ವಾಮಿಗಳ ವಚನ
೩) ವಚನ – ೦೧

೨. ಸ್ವರ ವಚನ : ೪) ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ
೫) ಶಿವಲಿಂಗಾಂಕಿತ ಸ್ವರವಚನಗಳು
೬) ಹೋಳಿಪದ
೭) ಮುದ್ವೀರಸ್ವಾಮಿ ಸ್ವರ ವಚನಗಳು – ೧೩೦

೩. ಚಂಪು : ೮) ಹಮ್ಮೀರ ಕಾವ್ಯ
೯) ಹಾಲಾಸ್ಯ ಪುರಾಣ

೪. ಷಟ್ಪದಿ : ೧೦) ಪಂಚಾಶಿಕೆ
೧೧) ಮಿಶ್ರಾರ್ಪಣ
೧೨) ಯೋಗಕಲಾಪಸಾರ
೧೩) ಶಿವಲಿಂಗ ಮಹಿಮಾ ಷಟ್ಪದಿ
೧೪) ಶಿವಮತ ಪ್ರತಿಷ್ಠಾಪನದ ವಾರ್ಧಕ
೧೫) ಶಿವಾದಿಕ್ಯ ತಿಲಕ
೧೬) ಶಿವರಹಸ್ಯ ಪುರಾಣ
೧೭) ಪರಮತ ಖಂಡನದ ವಾರ್ಧಕ
೧೮) ನೀಲಾಂಬಿಕಾ ಲಲಿತ ಪಂಚವಿಂಶತಿ
೧೯) ವೈರಾಗ್ಯ ಷಟ್ಪದಿ
೨೦) ಏಕೋನವಿಂಶತಿ ಪದ
೨೧) ಛಂದಸ್ಸಿನ ಗಣನೆಯ ವಾರ್ಧಕ
೨೨) ಮಹಾಲಿಂಗೇಂದ್ರ ವಿಜಯ

೫. ಚೌಪದ : ೨೩) ಸ್ಕಂದ ಕಲ್ಯಾಣ

೬. ತಾರಾವಳಿ : ೨೪) ಮನುರಾಜೇಂದ್ರ ತಾರಾವಳಿ
೨೫) ಕಟ್ಟಿಗೆಯ ತಾರಾವಳಿ
೨೬) ಮುರಿಗೆ ತಾರಾವಳಿ
೨೭) ಶಿವಗಣ ಸಹಸ್ರ ತಾರಾವಳಿ

೭. ನಾಂದ್ಯ	:	೨೮) ಶಿವಲಿಂಗ ನಾಂದ್ಯ
		೨೯) ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ
		೩೦) ಮಹಾಂತ ಸ್ವಾಮಿಗಳು ನಿರೂಪಿಸಿದ ನಾಂದ್ಯ
		೩೧) ಮುರಿಗೆ ಸ್ವಾಮಿಗಳ ನಾಂದ್ಯ
		೩೨) ಕಂಪಿನಂಜಯ್ಯನ ನಾಂದ್ಯ
		೩೩) ಚೇರಮ ಕಾವ್ಯದ ನಾಂದ್ಯದ ನುಡಿ
		೩೪) ದೇವಿ ನಾಂದ್ಯದ ನುಡಿ
೮. ಸ್ತೋತ್ರ	:	೩೫) ಪಾದಸ್ತೋತ್ರ
		೩೬) ಕಲಿಗಣನಾಥ ಸ್ತೋತ್ರ
೯. ಕಂದ	:	೩೭) ಪ್ರಭುಲಿಂಗದ ಕಂದ
೧೦. ಯಕ್ಷಗಾನ	:	೩೮) ಬಿಜ್ಜ ಮಹಾದೇವಿ ಚಾರಿತ್ರ್ಯ
		೩೯) ಶಿವಜಲಂಧರ
೧೧. ಕೊರವಂಜಿ ಸಾಹಿತ್ಯ	:	೪೦) ಕೊರವಂಜಿ ಕಟ್ಟಳೆ
೧೨. ಉದ್ಧರಣೆ ಸಾಹಿತ್ಯ	:	೪೧) ಉದ್ಧರಣೆ
		೪೨) ಲಿಂಗಸಾವಧಾನ ಪ್ರಾಣವ ಸಂಬಂಧಿ ಕ್ರಿಯದ ಉದ್ಧರಣೆ
೧೩. ನಿಘಂಟು	:	೪೩) ಶಬ್ದರತ್ನಾಕರ
		೪೪) ಶಬ್ದರತ್ನಾಕರ
೧೪. ಟೀಕೆ	:	೪೫) ಕರಣಹಸಿಗೆ ಟೀಕೆ
		೪೬) ಲಿಂಗಾಚಾರ ರಚನಾಗಮಟೀಕೆ
		೪೭) ಬಸವರಾಜದೇವರ ಷಟ್ಸ್ಥಲ ವಚನದ ಬೆಡಗಿನ ಟೀಕು
		೪೮) ಷಟ್ಸ್ಥಲ ಜ್ಞಾನಸಾರಾಮೃತದ ಬೆಡಗಿನ ವಚನದ ಟೀಕು
೧೫. ಸಂಸ್ಕೃತ	:	೪೯) ಪ್ರಭುಲೀಲಾ
		೫೦) ನಂದೀಶ್ವರ ಜಯದಂಡಕ
		೫೧) ಚಾಮರ ವೃತ್ತ
		೫೨) ಷಡ್ವಕ್ತ್ರ ಸ್ತೋತ್ರ

೧. ವಚನ :

೧೨ನೆಯ ಶತಮಾನದ ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ನವಮನ್ವಂತರವನ್ನು ಪ್ರಾರಂಭಿಸಿದ ಶಿವಶರಣರ ಆಂದೋಲನ ಸಾಹಿತ್ಯ ಕ್ಷೇತ್ರದಲ್ಲಿಯೂ ಹೊಸ ಆಯಾಮವನ್ನೇ ಮೂಡಿಸಿತು. ಶಿವಶರಣರು ರಚಿಸಿದ ವಚನ ಸಾಹಿತ್ಯ ಕನ್ನಡ ಸಾಹಿತ್ಯದ ವಿಶಿಷ್ಟ ಪ್ರಕಾರವಾಗಿ ರೂಪ ತಳೆದಿದೆ. ಈ ಸಂದರ್ಭದಲ್ಲಿ ಅಸಂಖ್ಯಾತ ವಚನಗಳು ರಚನೆಯಾಗಿವೆ. ಕಲ್ಯಾಣ ಕ್ರಾಂತಿಯ ನಂತರ ಶಿವಶರಣರು ಅತ್ತ-ಇತ್ತ ಚದುರಿ ಹೋದಾಗ, ಅವರ ಜೊತೆ ಅವರ ಅನುಭಾವ ಸಂಪತ್ತೆನಿಸಿದ ವಚನಗಳೂ ಚದುರಿ ಹೋದವು. ಆ ಸಮಯದಲ್ಲಿ ವೀರಶೈವ ಸಾಹಿತ್ಯದ ಉತ್ತರಾಧಿಕಾರಿಗಳಾದವರು ಹರಿಹರ, ರಾಘವಾಂಕಾದಿ ಕವಿಗಳು, ಇವರ ನಂತರ ವಚನ ಸಾಹಿತ್ಯ ವಿಜಯನಗರದ ಅರಸು ಪ್ರೌಢದೇವರಾಯನ ಕಾಲಕ್ಕೆ ಪುನರುಜ್ಜೀವನ ಪಡೆಯಿತು. ೧೨ನೆಯ ಶತಮಾನದ ಶರಣರ ವಚನಗಳನ್ನು ಸಂಗ್ರಹಿಸುವ, ಸಂಕಲಿಸುವ ಸ್ವತಂತ್ರ ವಚನಗಳನ್ನು ಸೃಷ್ಟಿಸುವ ಕಾರ್ಯ ನಡೆಯಿತು. ಈ ಕಾರ್ಯಕ್ಕೆ ತೋಂಟದ ಸಿದ್ಧಲಿಂಗರ ಕಾಲದಲ್ಲಿ ಹೆಚ್ಚಿನ ಚಾಲನೆ ಸಿಕ್ಕಿತು. ಅವರ ಶಿಷ್ಯ-ಪ್ರಶಿಷ್ಯರು ಎರಡೂ ಕಾರ್ಯಗಳನ್ನು ಹೆಚ್ಚು ನಿಷ್ಠೆಯಿಂದ ಮಾಡಿಕೊಂಡು ಸಾಗಿದರು. ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿಯೇ ಬರುವವರು ಮುರುಘಾ ಪರಂಪರೆಯ ಕವಿಗಳು, ಅವರಲ್ಲಿ ಪ್ರಮುಖರಾದ ಮುರಿಗೆ ಶಾಂತವೀರರು, ಇಮ್ಮಡಿ ಮುರಿಗಾ ಗುರುಸಿದ್ಧರು, ಹಾಗಲವಾಡಿ ಮುದ್ವೀರಸ್ವಾಮಿಗಳು, ಸೋಮಶೇಖರ ಶಿವಯೋಗಿಗಳು ಸ್ವತಂತ್ರ ವಚನಕಾರರಾಗಿಯೂ, ವಚನ ಟೀಕಾಕಾರರಾಗಿಯೂ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಇಮ್ಮಡಿ ಮುರಿಗಾ ಗುರುಸಿದ್ಧರ 'ಶೂನ್ಯಮಂತ್ರಗೋಪ್ಯ'ದಲ್ಲಿ ೨೦೯ ವಚನಗಳಿವೆ. ನಿರಾಳ ಮಂತ್ರಗೋಪ್ಯದ ಮಾರ್ಗವನ್ನು ಅನುಸರಿಸಿದ ಇದರಲ್ಲಿ ವೀರಶೈವದ ತತ್ವಸಿದ್ಧಾಂತಗಳನ್ನು ಶಾಸ್ತ್ರೀಯವಾಗಿ ವಿವರಿಸಲಾಗಿದೆ.

ಐವತ್ತೇಳು ಸ್ಥಲಗಳ ವಿವರ ಹೀಗಿದೆ ;

"ಆಚಾರಲಿಂಗಸ್ಥಲವೊಂಬತ್ತುಂ
ಗುರುಲಿಂಗಸ್ಥಲವೊಂಬತ್ತುಂ
ಶಿವಲಿಂಗಸ್ಥಲವೊಂಬತ್ತುಂ
ಜಂಗಮಲಿಂಗಸ್ಥಲವೊಂಬತ್ತುಂ
ಪ್ರಸಾದಿ ಲಿಂಗಸ್ಥಲವೊಂಬತ್ತುಂ
ಮಹಾಲಿಂಗಸ್ಥಲವೊಂಬತ್ತುಮಿಂತೀಯೈವತ್ತೇಳುಂ
ನಿನ್ನ ಸ್ವಯಂ ಪ್ರಭಾಮಯವಯ್ಯ
ಪರಮ ಶಿವಲಿಂಗ ಪತಂಗ ವಿಭಂಗ".

ಇದರಂತೆ ಲಿಂಗ, ಹಸ್ತ, ಶಕ್ತಿ, ಭಕ್ತಿ, ಲಿಂಗ, ಮುಖ, ಅರ್ಪಿತ ಪ್ರಸಾದ ಇವೇ ಮೊದಲಾದ ತಾತ್ವಿಕ ವಿಷಯಗಳ ವಿವರಣೆ ಕೊಡಲಾಗಿದೆ. ಅಷ್ಟವಿಧ ಹಾಗೂ ಏಕಾದಶವಿಧ ಸಕೀಲಗಳ ವಿವರಣೆಯಿದೆ. ಪರಶಿವನ ಆರು ಮುಖಗಳು, ಪಂಚಬ್ರಹ್ಮ ಮಂತ್ರ, ಪಂಚಾಸ್ತ್ರ ಮಹಾಮಂತ್ರಗಳಲ್ಲಿ – ೧) ಶಿವಾಸ್ತ್ರ ಮಂತ್ರ, ೨) ಕುಂಕಾಸ್ತ್ರ ಮಂತ್ರ ೩) ಪಾಸುಪತಾಸ್ತ್ರ ಮಂತ್ರ ೪) ವ್ಯೋಮಾಸ್ತ್ರ ಮಂತ್ರ ೫) ಅಘೋರಾಸ್ತ್ರ ಮಂತ್ರ – ಹೀಗೆ ಷಟ್ಕ್ರಮಗಳು ಅವುಗಳ ಅಧಿದೇವತೆಗಳ ಸಮಗ್ರ ವಿವರಣೆಯನ್ನು ಕೃತಿ ಒಳಗೊಂಡಿದೆ.

೨. ಸ್ವರ ವಚನ :

ಗೀತಸಾಹಿತ್ಯ, ಹಾಡುಗಬ್ಬ ಸಾಹಿತ್ಯ, ಸ್ವರಪದ ಸಾಹಿತ್ಯ ಎಂದೆಲ್ಲ ಕರೆಸಿಕೊಳ್ಳುವ ಸ್ವರವಚನ ಸಾಹಿತ್ಯ ಬಸವಾದಿ ಶಿವಶರಣರು ಕನ್ನಡ ಸಾಹಿತ್ಯಕ್ಕೆ ಕೊಟ್ಟ ಮತ್ತೊಂದು ಅಪೂರ್ವ ಕೊಡುಗೆ. ಮುಕ್ತಕ ರೂಪದ ವಚನಗಳಿಂದ ಭಿನ್ನವಾಗಿ ನಿರ್ದಿಷ್ಟ ರಾಗ-ತಾಳ ಸಮನ್ವಿತವಾಗಿರುವ ಸ್ವರವಚನಗಳು ಹಾಡಲೆಂದೇ ರಚಿಸಿದವುಗಳು. ಪ್ರಾರಂಭದಲ್ಲಿ ಪಲ್ಲವಿ, ಆಮೇಲೆ ಕೆಲವು ಪದ್ಯಗಳು ಕೊನೆಗೆ ಕಡ್ಡಾಯವಾಗಿ ಅಂಕಿತಗಳನ್ನೊಳಗೊಂಡಿರುತ್ತವೆ. ವೀರಶೈವ ಷಟ್ಸ್ಥಲ, ಅಷ್ಟಾವರಣ, ಪಂಚಾಚಾರ, ಶಿವಯೋಗ, ಏಕೋತ್ತರ ಶತಸ್ಥಲ, ಶಿವಸ್ತುತಿ, ಶರಣಸ್ತೋತ್ರಪರವಾದ ವಸ್ತುವಿಗೆ ಇವು ಮಾಧ್ಯಮವೆನಿಸಿವೆ. ಷಟ್ಪದಿ, ಚೌಪದಿ, ರಗಳೆ, ಮುಕ್ತರೂಪಗಳಲ್ಲಿ ರಚಿತವಾಗಿವೆ.

ಹನ್ನೆರಡನೆಯ ಶತಮಾನದಲ್ಲಿ ಜೇಡರದಾಸಿಮಯ್ಯ, ಸಕಲೇಶಮಾದರಸ, ಬಸವಣ್ಣ, ಚೆನ್ನಬಸವಣ್ಣ, ಆದಯ್ಯ, ಚೌಡಯ್ಯ ಮೊದಲಾದವರಿಂದ ಪ್ರಾರಂಭವಾದ ಈ ಪರಂಪರೆಯನ್ನು ೧೪-೧೫ನೆಯ ಶತಮಾನದಲ್ಲಿ ಹರಿದಾಸರು ತಮ್ಮ ಅಭಿವ್ಯಕ್ತಿಯ ಮಾಧ್ಯಮವನ್ನಾಗಿ ಮಾಡಿಕೊಂಡು, 'ಕೀರ್ತನೆ' ಎಂಬ ಹೊಸ ನಾಮವನ್ನು ನೀಡಿದರೆ, ಮುಂದೆ ನೂರೊಂದು ವಿರಕ್ತರು ನಿಜಗುಣಾದಿ ಆಧ್ಯಾತ್ಮವಾದಿಗಳು ಈ ಪ್ರಕಾರಕ್ಕೆ ಮಹಾಪೂರವನ್ನೇ ತಂದುಕೊಟ್ಟರು. ಆರಂಭದಲ್ಲಿ ಸ್ತುತಿ ತತ್ವಪ್ರತಿಪಾದನೆಗಾಗಿ ಬಳಕೆಯಾಗುತ್ತಿದ್ದ ಇದು ಮುಂದೆ ನೀತಿಬೋಧೆ, ಸಮಾಜ ವಿಮರ್ಶೆಗೂ ತನ್ನನ್ನು ಒಡ್ಡಿಕೊಂಡಿತು.

ಅಗಾಧ ಪ್ರಮಾಣದಲ್ಲಿ ರಚಿತವಾದ ಈ ಸ್ವರವಚನಗಳನ್ನು ಸ್ವತಂತ್ರ ಕೃತಿ ಹಾಗೂ ಬಿಡಿಸ್ವರವಚನಗಳೆಂದು ವಿಂಗಡಿಸಬಹುದು. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ಪಭೂಷಣ ಶಿವಯೋಗಿ, ಬಾಲಲೀಲಾ ಮಹಾಂತ ಶಿವಯೋಗಿ, ಕಡಕೋಳ ಮಡಿವಾಳಪ್ಪ ಮೊದಲಾದವರ ಸ್ವರವಚನಗಳು ಸ್ವತಂತ್ರ ಕೃತಿಗಳಾದರೆ ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ, ಕರಸ್ಥಲ ನಾಗಿದೇವ, ಮಗ್ಗೆಯ ಮಾಯಿದೇವ ಮೊದಲಾದವರು ಬಿಡಿಸ್ವರವಚನಗಳನ್ನೂ ರಚಿಸಿರುವರು. ಈ ಎರಡು ಪ್ರಕಾರಗಳಲ್ಲಿ ಸ್ವರವಚನಗಳನ್ನು ರಚನೆ

ಮಾಡಿದವರು ಮುರುಘಾ ಪರಂಪರೆಯಲ್ಲಿ ಇಮ್ಮಡಿ ಮುರುಘಾ ಗುರುಸಿದ್ಧರು, ಹಾಗಲವಾಡಿ ಮುದ್ವೀರ ಸ್ವಾಮಿಗಳು ಪ್ರಮುಖರಾಗಿದ್ದಾರೆ.

ಇಮ್ಮಡಿ ಮುರಿಗಾ ಗುರುಸಿದ್ಧರ ಸ್ವರವಚನಗಳಿಂದ ಕೂಡಿದ 'ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ'ವು ಶಿವಲಿಂಗ ಎಂಬ ಅಂಕಿತವನ್ನು ಹೊಂದಿದೆ. ಇದರಲ್ಲಿ ಅಂಗಸ್ಥಲ, ಲಿಂಗಸ್ಥಲ ಎಂಬ ಎರಡು ಭಾಗಗಳಿವೆ. ಜೊತೆಗೆ ಸಕೀಲ ಸಂಬಂಧ ಸ್ಥಲ, ಏಕವಿಂಶತಿ ದೀಕ್ಷಾ, ದಶವಿಧ ಪಾದೋದಕ, ಏಕಾದಶ ಪ್ರಸಾದ ಸ್ಥಲ, ಮಂತ್ರಮೂರ್ತಿ ಲಿಂಗಸ್ಥಲ, ಕ್ರಿಯಾರ್ಪಣಸ್ಥಲ, ಪೀಠಿಕಾಸ್ಥಲ, ಅನುಬಂಧ ಸಾಧನ ಸಮಾಧಿ ನಿರೂಪಣ ಸ್ಥಲ, ನಿರ್ವಚನ ಸ್ಥಲ ಎಂಬ ಆರು ಸ್ಥಲಗಳಲ್ಲಿ ವಿಸ್ತಾರತೆಯನ್ನು ಪಡೆದಿದೆ.

ಮೊದಲ ಸ್ಥಲದಲ್ಲಿ ಆರು ಸ್ವರವಚನಗಳು ಬರುತ್ತವೆ. ೨೧ ತರದ ದೀಕ್ಷೆ, ೧೦ ರೀತಿಯ ಪಾದೋದಕ, ೧೧ ತೆರನಾದ ಪ್ರಸಾದಗಳ ವಿವರಗಳನ್ನು ಒಂದನೇ ಸ್ವರವಚನದಲ್ಲಿಯೂ, ಮಂತ್ರಮೂರ್ತಿ ಸ್ವರೂಪವನ್ನು ಇನ್ನೊಂದು ಸ್ವರವಚನದಲ್ಲಿಯೂ, ಕ್ರಿಯಾರ್ಪಣ ವಿಧಾನವನ್ನು ಮೂರನೇ ಸ್ವರವಚನದಲ್ಲಿಯೂ, ಗುಣತ್ರಯಾದಿ ಸ್ವರೂಪವನ್ನು ಪರಶಿವನು ಸಮಸ್ತ ಜೀವಿಗಳನ್ನು ತನ್ನಲ್ಲಿ ಏಕೀಕರಿಸಿರುವ ವಿಧಾನವನ್ನು ಪೀಠಿಕಾಸ್ಥಲ ಎಂಬ ನಾಲ್ಕನೆಯ ಸ್ವರವಚನದಲ್ಲಿಯೂ, ಅನುಬಂಧ ಸಾಧನ ಸಮಾಧಿಯ ಸ್ವರೂಪಗಳನ್ನು ಐದನೇ ಸ್ವರವಚನದಲ್ಲಿಯೂ, 'ಸ್ಥಲ' ನಾಮದಿಂದ ವಿಶಿಷ್ಟನಾದ ಪರಶಿವನ ಸ್ವರೂಪ, ವಿವೇಕ, ಮೊದಲಾದ ವಿಷಯಗಳನ್ನು ಆರನೆಯ ಸ್ವರವಚನದಲ್ಲಿಯೂ ತಿಳಿಸಲಾಗಿದೆ.

ಉದಾ :

"ಬಲ್ಲನೀತನು ಬಣ್ಣಿಸುವ ನೀನೊಲಿದಾಲಿಸಿ
ಎಲ್ಲ ಸುಜನರು ಬ್ರಹ್ಮವು ನಿಂದ ನಿಜವನು ॥ಪ॥
ಏಕಮೇವಾದ್ವಿತೀಯಂ ಬ್ರಹ್ಮವದು ತಾನೆ
ಸ್ವೀಕರಿಸಿತು ಸ್ಥಲವೆಂಬ ನಾಮವನು
ಜೋಕೆಯೂ ಸ್ಥಲವೆ ಮಹದಾದಿಗೆ ನಿಲಯವು
ಶೋಕ ರಹಿತ ಸ್ಥಲವೆ ಲಯ ಭೂಮಿಯವಕೆ"

(ಕೈವಲ್ಯ ಸೋಪಾನ ನಾಮೈಕೋತ್ತರ ಶತಸ್ಥಲ)

ಉದಾ :

ನೀನೊಡೆಯ ನಾ ಬಂಟ । ನಿತ್ಯವಿದೆಂದಿರ್ದು
ಮಾನವಳಿದು ನಿಂದ । ಮಧುರೋಕ್ತಿಯಿಂದ ॥ಪ॥
ಕೊಡುವವನೀಶನು । ಕೊಡಲು ಪಡೆವವನೀಶನು

ಕೊಡಲು ಬೇಕಾದುದೆಲ್ಲವು ಪುರಹರನು ॥
ಮೃಡನೆ ಪಾತ್ರವದಾಗೆ ಮೃಡಗನ್ಯವಿಲ್ಲಾಗಿ
ಪೊಡವಿಯೊಳಗಭವನಿಗೆಡೆ ಬಿಡುಹಿಲ್ಲವು (ಕೈವಲ್ಯ ಸೋಪಾನ ನಾಮ್ಯೆಕೋತ್ತರ ಶತಸ್ಥಲ)

ಹಾಗಲವಾಡಿ ಮುದ್ವೀರಸ್ವಾಮಿಯವರ ಸ್ವರವಚನಗಳಲ್ಲಿ ತತ್ವಬೋಧೆಯ ಜೊತೆಗೆ ಲೋಕನೀತಿ ಹಾಗೂ ಯೋಗತತ್ವದ ವಿಚಾರವನ್ನು ಕಾಣಬಹುದು. ಅದರಲ್ಲೂ ಶಾಂಭವಯೋಗದ ವಿವರ ಹೆಚ್ಚಾಗಿ ಬಂದಿದೆ. ಜೊತೆಗೆ ಷಟ್‌ಸ್ಥಲ, ಅಷ್ಟಾವರಣ, ಪಂಚಾಚಾರ, ಮುದ್ರೆಗಳು, ಪದಾರ್ಥತ್ರಯ, ಅರ್ಪಿತತ್ರಯ, ಮಲತ್ರಯ, ಆಧಾರತ್ರಯ, ತಾರಕತ್ರಯ, ಅಂಗಲಿಂಗತ್ರಯ, ತ್ರಿವಿಧಾರ್ಪಣ, ಅಷ್ಟಾಂಗಯೋಗ, ಶಿವಯೋಗ, ಪಂಚಾಕಾಶ, ಪಂಚಸೂತಕ ಮೊದಲಾದ ವಿಷಯಗಳು ವರ್ಣಿತವಾಗಿವೆ. ಕೆಲವು ಸ್ವರವಚನಗಳಲ್ಲಿ ನೀತಿ ಮತ್ತು ಸ್ತುತಿಗಳಿಗೆ ಆದ್ಯತೆಯಿದೆ. ಸಂಗ, ಗುರುಸಂಗ ಎಂಬ ಅಂಕಿತವಿದೆ. ಉಪಲಬ್ಧವಾದ ಒಂದೇ ವಚನದಲ್ಲಿ ಮಾತ್ರ 'ಮುದ್ವೀರಪ್ರಿಯ ಸಂಗಮೇಶ್ವರ' ಎಂಬ ಅಂಕಿತವಿದೆ. ವೃತ್ತ, ಷಟ್ಪದಿ, ಏಳೆ, ಚೌಪದಿ, ಹೀಗೆ ಕನ್ನಡದ ವಿಶಿಷ್ಟ ದೇಶಿಯ ಮಟ್ಟಿನಲ್ಲಿ ಸ್ವರವಚನಗಳು ರಚನೆಯಾಗಿವೆ. ಬಹಳಷ್ಟು ಸಂಖ್ಯೆಯ ಸ್ವರವಚನಗಳು ತತ್ವಪ್ರಧಾನವಾಗಿದ್ದರೂ, ಕೆಲವು ಸತಿ-ಪತಿ ಭಾವವನ್ನು ಅಳವಡಿಸಿಕೊಂಡಿವೆ.
ಉದಾ :

ಸುಮ್ಮನೆ ದೊರೆವುದೆ ತನಗೆ ಮುಕುತಿ
ಸಕಲಕ್ರಿಯೆಗಳೆಳ್ಳನಿತು ತಪ್ಪದಂತೆ ತಾ
ನಕಲಂಕ ಸಾರಿಷ್ಟಲಿಂಗವನು
ಕಮಕಗೊಳ್ಳದೆ ಬಿಡದೆಯರ್ಚಿಸುತಿರ್ಪ
ಬಕುತಿಯು ತನ್ನೊಳು ಬೆಳೆಯದೆ (ಮುದ್ವೀರಸ್ವಾಮಿ ಸ್ವರವಚನಗಳು)

ಹೀಗೆ ಅತ್ಯಂತ ಸರಳವಾಗಿ ವಿಷಯ ನಿರೂಪಣೆಯನ್ನು ಮಾಡಿದ್ದಾರೆ. ಸ್ತೋತ್ರ, ಜೋಗುಳ, ಸುವ್ವಿ ಪರಾಕು, ಉಪ್ಪವಡಿಸುವ ಹಾಡು, ಚಂದಮಾಮಾ, ತಾಲೆಲೆ, ಮಂಗಳಾರುತಿ ಮೊದಲಾದ ರೂಪಗಳಲ್ಲಿಯೂ ಸ್ವರವಚನಗಳನ್ನು ಬರೆದು ಮೃದುಮಧುರಭಾವ, ಆತ್ಮೀಯಶೈಲಿ, ಲೋಕಾನುಭವ ನೀತಿಯನ್ನು ವಿವರಿಸಿದ್ದಾರೆ.

೩. ಚಂಪು :

ಕವಿಯ ಪ್ರತಿಭೆ, ಪಾಂಡಿತ್ಯ, ಕವಿತ್ವಶಕ್ತಿಯನ್ನು ಎತ್ತಿ ತೋರುವ ಮುರುಘಾ ಪರಂಪರೆಯಲ್ಲಿಯೇ ಮಹತ್ವದ ಕೃತಿಗಳೆನಿಸಿದ ಮುರಿಗೆಯ ಶಾಂತವೀರರ 'ಹಮ್ಮೀರಕಾವ್ಯ;, ಇಮ್ಮಡಿ ಮುರಿಗಾ ಗುರುಸಿದ್ಧರ 'ಹಾಲಾಸ್ಯ ಪುರಾಣ' ಕೃತಿಗಳು ಚಂಪೂ ರೂಪದಲ್ಲಿ ರಚಿತವಾಗಿವೆ. ಪುರಾಣಗಳು ಭಾರತೀಯ ಸಂಸ್ಕೃತಿಯ ಜೀವಂತ ಪ್ರತೀಕವೆನಿಸಿವೆ. ಇವುಗಳ ಪರಂಪರೆ ತುಂಬಾ

ಪ್ರಾಚೀನವೆನಿಸಿದೆ. ಪ್ರಾಚೀನ ಕಾಲದಲ್ಲಿ ನಡೆದಿರಬಹುದಾದ ಸಂಗತಿಗಳನ್ನು ತಿಳಿಸುವುದರಿಂದ ನಮ್ಮ ಸಂಸ್ಕೃತಿಯ ಮಹತ್ವದ ಗ್ರಂಥಗಳಲ್ಲಿನ ಸಾರಸರ್ವಸ್ವ ಇವುಗಳಲ್ಲಿ ಪಡಿಮೂಡಿರುತ್ತವೆ. ಹೀಗಾಗಿ ಇವು ಭಾರತೀಯ ಸಂಸ್ಕೃತಿಯ ಕೋಶಗಳೆನಿಸಿವೆ.

ಮುರುಘಾ ಪರಂಪರೆಯ ಶ್ರೇಷ್ಠ ಚಂಪೂ ಕೃತಿ ಮುರಿಗೆಯ ಶಾಂತವೀರರ 'ಹಮ್ಮೀರಕಾವ್ಯ'. ಇದಕ್ಕೆ 'ರಾಜೇಂದ್ರ ವಿಜಯ'ವೆಂಬ ಹೆಸರೂ ಉಂಟು. ೯ ಪ್ರಕರಣಗಳಲ್ಲಿ ಕಂದ, ವಚನ, ಗದ್ಯ, ಖ್ಯಾತ ಕರ್ನಾಟಕ ವೃತ್ತಗಳ ಬಳಕೆಯೊಂದಿಗೆ ಚಂಪೂ ಶೈಲಿಯಲ್ಲಿ ರಚನೆಯಾಗಿದೆ. ಪ್ರಥಮ ಪ್ರಕರಣದಲ್ಲಿ ೬೭ ಪದ್ಯಗಳಿವೆ. ಮೊದಲ ಪದ್ಯ ಹಾಗೂ ಕೊನೆಯ ಪದ್ಯ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿವೆ. ದ್ವಿತೀಯ ಪ್ರಕರಣವು ಕಂದ ಪದ್ಯದಿಂದ ಪ್ರಾರಂಭ. ಒಟ್ಟು ೧೨೪ ಪದ್ಯವನ್ನೊಳಗೊಂಡಿದೆ. ಕೊನೆಯ ಪದ್ಯ ಶಾರ್ದೂಲ ವಿಕ್ರೀಡಿತ ವೃತ್ತದಲ್ಲಿ ತೃತೀಯ ಪ್ರಕರಣದಲ್ಲಿ ೬೧ ಪದ್ಯಗಳಿವೆ. ಇದು ಕಂದ್ಯಪದ್ಯದಿಂದ ಪ್ರಾರಂಭವಾಗಿ ಶಾರ್ದೂಲ ವಿಕ್ರೀಡಿತವೃತ್ತದಿಂದ ಕೊನೆಯಾಗಿದೆ. ಚತುರ್ಥ ಪ್ರಕರಣವು ಕಂದ ಪದ್ಯದಿಂದ ಪ್ರಾರಂಭವಾಗಿ ಸ್ರಗ್ಧರಾ ವೃತ್ತದಿಂದ ಕೊನೆಯಾಗಿದೆ. ಇದರಲ್ಲಿ ೫೪ ಪದ್ಯಗಳಿವೆ. ೫೪ ಪದ್ಯಗಳುಳ್ಳ ಷಷ್ಠಮ ಪ್ರಕರಣವು ಕಂದದಿಂದ ಆರಂಭವಾಗಿ ಶಾರ್ದೂಲ ವಿಕ್ರೀಡಿತದಿಂದ ಕೊನೆಯಾಗುತ್ತದೆ. ಸಪ್ತಮ ಪ್ರಕರಣವು ಕಂದದಿಂದ ಆರಂಭವಾಗಿ ಮತ್ತೇಭ ವಿಕ್ರೀಡಿತ ವೃತ್ತದಿಂದ ಕೊನೆಯಾಗಿದೆ. ಇದರಲ್ಲಿ ೬೯ ಪದ್ಯಗಳಿವೆ. ಅಷ್ಟಮ ಪ್ರಕರಣವು ಕಂದದಿಂದ ಆರಂಭವಾಗಿ ಮತ್ತೇಭ ವಿಕ್ರೀಡಿತ ವೃತ್ತದಲ್ಲಿ ಕೊನೆಯಾಗಿದೆ. ಇದರಲ್ಲಿ ೯೦ ಪದ್ಯಗಳಿವೆ. ನವಮ ಪ್ರಕರಣದಲ್ಲಿ ೨೦ ಪದ್ಯಗಳಿವೆ. ಕಂದದಿಂದ ಆರಂಭವಾಗಿ ಶಾರ್ದೂಲ ವಿಕ್ರೀಡಿತ ವೃತ್ತದಿಂದ ಮುಗಿಯುತ್ತದೆ. ಉದಾ:

ಪ್ರಥಮ ಪ್ರಕರಣದ ಆದಿಯ ಪದ್ಯ :

"ಶ್ರೀ ಮತ್ಕಾಂಡಜಜಾಂಡ ಮಂಡಲ ಪಿಂಚಂಡಾಮ್ನಾಯ ವಾಜಿಸ್ಥರಂ
ಭೂಮಿ ದ್ರೌರ್ಮಿಕನಾಮಯಾಳಿ ಹರ ಶಿಷ್ಟಾಪಾಲ ದುಷ್ಟಾರ್ದನಂ
ಸೋಮಂ ಪ್ರಾಂಜುಳನೂರ್ಜಿತಂ ಜಯತು ನಿತ್ಯಾನಂದ ಮೌನೀಂದ್ರ ಹೃ-
ದ್ಧಾಮಂ ನಿರ್ಜರ ಚಕ್ರವರ್ತಿ ಮಹಿಮಂ ಸ್ವಾಮೇಷ್ಟಲಿಂಗೇಶ್ವರಂ".

ಅಲ್ಲಮ ಪ್ರಭುಗಳ ಗುರುಗಳಾದ ಪಟ್ಟದಕಲ್ಲಿನ ಅನಿಮಿಷದೇವರ ಚರಿತೆಯನ್ನು ಒಳಗೊಂಡ ಈ ಕೃತಿಯಲ್ಲಿ ಕವಿಯ ಪ್ರತಿಭೆ ಪಾಂಡಿತ್ಯಗಳು ಉಜ್ವಲವಾಗಿ ಪ್ರಕಟವಾಗಿವೆ.

ಮುರುಘಾ ಪರಂಪರೆಯಲ್ಲಿಯ ಚಂಪೂ ರೂಪದಲ್ಲಿ ರಚನೆಯಾದ ಇನ್ನೊಂದು ಮಹತ್ವದ ಕೃತಿಯೆಂದರೆ ಇಮ್ಮಡಿ ಮುರಿಗಾ ಗುರುಸಿದ್ಧರ ಹಾಲಾಸ್ಯ ಪುರಾಣ ಸೋದೆಯ ಸದಾಶಿವರಾಜ ವರ್ಣಕದಲ್ಲಿ ಹೇಳಿದ ಹಾಲಾಸ್ಯ ಪುರಾಣವನ್ನು ಆಕರವಾಗಿಟ್ಟುಕೊಂಡು ೪ ಕಾಂಡ, ೬೬ ಆಶ್ವಾಸ,

೩೬೩೭ ಪದ್ಯಗಳಲ್ಲಿ ವಿಸ್ತಾರವಾಗಿ ನಿರೂಪಿಸಲಾಗಿದೆ. ವೃತ್ತ, ಕಂದ, ಗದ್ಯ, ರಗಳೆ, ತ್ರಿಪದಿ ಮೊದಲಾದ ಛಂದೋಬಂಧಗಳು ಇದರಲ್ಲಿ ಸಮಾವೇಶಗೊಂಡಿವೆ.

ಕಾವ್ಯವು ಸಂಪ್ರದಾಯದಂತೆ ಸಮುದ್ರದ ವರ್ಣನೆಯಿಂದ ಪ್ರಾರಂಭವಾಗುತ್ತದೆ. ನಂತರದಲ್ಲಿ ರಜತಪರ್ವತ, ಶಿವನ ಆಸ್ಥಾನ ವರ್ಣನೆಗಳಲ್ಲಿ ಮುಂದುವರೆದು ಭೂಲೋಕಕ್ಕೆ ಬಂದು ಮುಖ್ಯ ಕಥೆಯ ವಿವರಣೆಗೆ ತೊಡಗುತ್ತಾರೆ. ಕೃತಿಯ ವಸ್ತುವನ್ನು ಕೆಳಗಿನ ಪದ್ಯದಲ್ಲಿ ಹೀಗೆ ಹಿಡಿದಿಟ್ಟಿದ್ದಾನೆ.

ಹಾಲಾಸ್ಯಮೀ ಪುರಾಣಂ
ಕಾಲಾಸ್ಯ ಭಯಂಕರಂ ಹರಂ ಸುಂದರನೀ
ಲೀಲಾಸ್ಯಮಿದಕಧಿಪನೆನೆ
ಲಾಲಸ್ಯಮೆನೆಯ್ದೆ ಮಾಡದಿರ್ಪನದಾವಂ . . . (ಹಾಲಾಸ್ಯ ಪುರಾಣ)

ಕವಿ ಇಲ್ಲಿ ಹಾಲಾಸ್ಯ ಕ್ಷೇತ್ರದ ಮಹಿಮೆಯನ್ನು ವಿವರಿಸುವುದರ ಜೊತೆಗೆ ಮೀನಾಕ್ಷಿ ಸುಂದರರ ೬೪ ಲೀಲೆಗಳನ್ನು ವರ್ಣಿಸಿದ್ದಾನೆ.

೧) ಪ್ರಥಮ ಕಾಂಡ – ಕೃತಯುಗದ ೧೬ ಲೀಲೆಗಳು
೨) ದ್ವಿತೀಯ ಕಾಂಡ – ತ್ರೇತಾಯುಗದ ೧೬ ಲೀಲೆಗಳು
೩) ತೃತೀಯ ಕಾಂಡ – ದ್ವಾಪರಯುಗದ ೧೬ ಲೀಲೆಗಳು
೪) ಚತುರ್ಥ ಕಾಂಡ – ಕಲಿಯುಗದ ೧೬ ಲೀಲೆಗಳು

ಹಾಲಾಸ್ಯ ಪುರಾಣದಲ್ಲಿ ಪ್ರತಿಪಾದಿತವಾದ ರಸಗಳಲ್ಲಿ ಭಕ್ತಿರಸಕ್ಕೆ ಪ್ರಥಮಸ್ಥಾನ ಮೀಸಲಾಗಿದೆ. ಕಾವ್ಯಾರಂಭದಲ್ಲಿ ಶಿವನನ್ನು, ಕಾವ್ಯಾಂತದಲ್ಲಿ ಶಿವ, ಪಾರ್ವತಿ, ತೋಂಟದ ಸಿದ್ಧಲಿಂಗ ಯತಿಗಳನ್ನು ಭಕ್ತಿಪೂರ್ವಕವಾಗಿ ಸ್ತುತಿಸಿದ್ದಾನೆ. ಭಕ್ತಿಯ ಜೊತೆಗೆ ಉಳಿದ ರಸಗಳೂ ಹಿತಮಿತವಾಗಿ ಪ್ರತಿಪಾದನೆಗೊಂಡಿದೆ. ಈ ಕೃತಿಯಲ್ಲಿ ೧೬೫ಕ್ಕೂ ಹೆಚ್ಚು ಛಂದೋಬಂಧಗಳನ್ನು ಬಳಸಲಾಗಿದೆ. ಉದಾ – ಅಂಬನಿ, ಅಕ್ಕರಿಕೆ, ಅಚಲಜಿಹ್ವಾವಿಲಾಸ, ಅಚ್ಚುತಕ, ಅನಂತ, ಅನವದ್ಯ, ಅಭ್ರಕ, ಅಮಳ, ಅಮಳವಿತಾನ, ಅರವಿಂದ, ಉತ್ಪಲಮಾಲೆ, ಉತ್ಸಾಹ, ಉದಯ, ಉದಾತ ಇತ್ಯಾದಿ ಹೀಗೆ ಇವುಗಳಲ್ಲಿ ಈವರೆಗೆ ರಚಿತವಾದ ಬೇರೆ ಯಾವ ಕನ್ನಡ ಕಾವ್ಯಗಳಲ್ಲಿಯೂ ಬಳಕೆಯಾಗದ, ಹಾಲಾಸ್ಯ ಪುರಾಣದಲ್ಲಿ ಮಾತ್ರ ಪ್ರಯೋಗವಾದ ಈ ಕವಿಯೇ ಸ್ವತಃ ಸೃಷ್ಟಿಸಿರಬಹುದಾದ ಛಂದೋಬಂಧಗಳು ಸಮಾವೇಶಗೊಂಡಿವೆ. ಅವುಗಳ ಹೆಸರುಗಳು ಹೀಗಿವೆ: – ೧) ಛಂದೋವೃತ್ತ ೨೨ ಅಕ್ಷರ ಹೊಂದಿದೆ. ೨) ಚಂದ್ರಕಾಂತ – ೨೧ ಅಕ್ಷರ, ೩) ಕಾಂತ – ೧೬ ಅಕ್ಷರ, ೪) ತೋಟಕ – ೨೫ ಅಕ್ಷರ, ೫) ಕುಸುಮ ಶರನಿತಿಶಯ – ೩೩ ಅಕ್ಷರ, ೬) ಜನೋದಯ – ೪

ಅಕ್ಷರ, ೭) ನಿಮಾತಿಶಯ – ೭ ಅಕ್ಷರ, ೮) ಪ್ರೇಮ – ೪ ಅಕ್ಷರ, ೯) ಅನಂತ – ೫ ಅಕ್ಷರ, ೧೦) ಉಪಮ – ೧೨ ಅಕ್ಷರ, ೧೧) ಪೃಥ್ವಿ – ೧೭ ಅಕ್ಷರವನ್ನೊಳಗೊಂಡಿವೆ.

ಹೀಗೆ ಮುರುಘಾ ಪರಂಪರೆಯಲ್ಲಿ ಚಂಪೂ ಸಾಹಿತ್ಯ ರೂಪದಲ್ಲಿ ರಚಿತವಾದ ಹಮ್ಮೀರ ಕಾವ್ಯ ಮತ್ತು ಹಾಲಾಸ್ಯ ಪುರಾಣ ಅತ್ಯಂತ ಶ್ರೇಷ್ಠ ಕೃತಿಗಳೆನಿಸಿವೆ.

೪. ಷಟ್ಪದಿ :

ಹಮ್ಮೀರ ಕಾವ್ಯ, ಹಾಲಾಸ್ಯ ಪುರಾಣದಂತ ಹಿರಿಯ ಗಾತ್ರದ ಪ್ರೌಢ ಚಂಪೂ ಕಾವ್ಯವನ್ನು ರಚಿಸಿದ ಮುರುಘಾ ಪರಂಪರೆಯ ಕವಿಗಳು ಷಟ್ಪದಿ, ಕಂದ, ತ್ರಿಪದಿ, ಚೌಪದಿ, ತಾರಾವಳಿಗಳಂಥ ದೇಶಿರೂಪಗಳಲ್ಲಿ ಲಘುಕೃತಿಗಳನ್ನು ರಚಿಸಲು ಮುಂದಾದುದು ಇವರ ಪ್ರಯೋಗಶೀಲತೆ ಹಾಗೂ ದೇಶಿನಿಷ್ಠತೆಗಳಿಗೆ ನಿರ್ದಶನವೆನಿಸಿದೆ. ಹಾಗೆಯೇ ತಮ್ಮ ಕೃತಿಗಳು ಸರ್ವರಿಗೂ ಸುಲಭಸಾಧ್ಯವಾಗಬೇಕೆಂಬ ಜನಪರ ಧೋರಣೆಯೂ ಕಾರಣವಾಗಿದೆ.

ಈ ಪರಂಪರೆಯ ಕವಿಗಳು ರಚಿಸಿರುವ ಲಘು ಕೃತಿಗಳಲ್ಲಿ ಷಟ್ಪದಿಗಳಿಗೆ ಅಗ್ರಸ್ಥಾನ. ವಾರ್ಧಕ ಷಟ್ಪದಿಯಲ್ಲಿ ರಚನೆಯಾದ ಇಮ್ಮಡಿ ಮುರಿಗಾ ಗುರುಸಿದ್ಧರ ೮ ಕೃತಿಗಳು, ಭಾಮಿನಿ, ವಾರ್ಧಕ, ಪರಿವರ್ಧಿನಿ ಷಟ್ಪದಿಗಳಲ್ಲಿ ರಚನೆಯಾದ ಮುರಿಗೆಯ ಶಾಂತವೀರರ ೪ ಕೃತಿಗಳು, ವಾರ್ಧಕ ಷಟ್ಪದಿಯಲ್ಲಿ ರಚನೆಯಾದ ಜ್ವಲಕಂಠ ಮಹಾಂತಸ್ವಾಮಿಯ ಕೃತಿ, ೫೦೮ ವಾರ್ಧಕ ಷಟ್ಪದಿಯನ್ನು ಬಳಸಿ ರಚಿಸಿದ ಹಾಗಲವಾಡಿ ಮುದ್ವೀರಸ್ವಾಮಿಯ 'ಶಿವತತ್ವ ಸುಜ್ಞಾನಪ್ರದೀಪಿಕೆ' ಕೃತಿ ೨೦೬೪ ವಾರ್ಧಕ ಷಟ್ಪದಿ ಪದ್ಯಗಳನ್ನು ಒಳಗೊಂಡು ರಚನೆಯಾದ ಮಹಾದೇವ ಕವಿಯ "ಮಹಾಲಿಂಗೇಂದ್ರವಿಜಯ" ಕೃತಿಗಳೇ ಸಾಕ್ಷಿ. ಈ ಎಲ್ಲಾ ಕೃತಿಗಳನ್ನು ಅನುಲಕ್ಷಿಸಿದಾಗ ಮುರುಘಾ ಪರಂಪರೆಯ ಬಹುತೇಕ ಕವಿಗಳು ವಾರ್ಧಕ ಷಟ್ಪದಿಯ ಪ್ರಿಯರಾಗಿದ್ದರೆಂದು ತಿಳಿದು ಬರುತ್ತದೆ. ಎಲ್ಲಾ ಕೃತಿಗಳು ಶಿವಸ್ತುತಿ, ವೀರಶೈವ ತತ್ವ ಪ್ರತಿಪಾದನೆಯ ಜೊತೆಗೆ ಚಾರಿತ್ರಿಕ ಸಂಗತಿಗಳಿಗೆ ಆದ್ಯತೆ ನೀಡಿವೆ.

ಇಮ್ಮಡಿ ಮುರಿಗಾ ಗುರುಸಿದ್ಧರ 'ಪಂಚಾಶಿಕೆ' ಶಿವಪಾರಮ್ಯ ಹಾಗೂ ವೀರಶೈವ ಧರ್ಮದ ತಾತ್ವಿಕಾಂಶವನ್ನು ಪ್ರತಿಪಾದಿಸಿರುವ ಕೃತಿ. ಇದು ೧೩ಸಂಧಿ, ೬೮೮ ಭಾಮಿನಿ ಷಟ್ಪದಿಯನ್ನೊಳಗೊಂಡಿದೆ. ಪ್ರತಿ ಸ್ಕಂದದ ಆದಿ–ಅಂತ್ಯ ಪದ್ಯಗಳಲ್ಲಿ ಶಿವನನ್ನು, ನಂತರದಲ್ಲಿ ತೋಂಟದ ಸಿದ್ಧಲಿಂಗರನ್ನು ಸ್ತುತಿಸಲಾಗಿದೆ. ಪ್ರತಿಸಂಧಿಯ ಅಂತ್ಯದಲ್ಲಿ –

"ಇದು ಪರಮ ಶಿವತತ್ವ ಕೋವಿದ
ಹೃದಯ ಬಂಧ ಹರ್ಷಾಮೃತಾರ್ಣವ
ವಿದಿತ ಪೂರ್ಣಶಶಾಂಕ ಸಾಧಕ ವಿತ್ತಿಮುಖ ಮುಕುರ

ಸದರವಾದಪವರ್ಗ ಸಾಮ್ರಾ

ಜ್ಯದ ಮಹಾಪಟ್ಟಾಭಿಷೇಕ

ಪ್ರದವಿದೊಂದನೆಯಧಿಕರಣ ಪಂಚಾಶಿಕಾಗಮದಿ" ಎಂಬ ಪದ್ಯವಿದೆ. (ಪಂಚಾಶಿಕೆ)

ಕ್ಲಿಷ್ಟವೆನಿಸುವ ತಾತ್ವಿಕ ವಿಷಯಗಳನ್ನು ಸಂಭಾಷಣೆಯ ರೂಪದಲ್ಲಿ ತೀರಾ ಸರಳವಾಗಿ ನಿರೂಪಿಸಿದ್ದಾರೆ.

ತನ್ನ ನಿಜವನ್ನು ತಿಳಿದು ಷಟ್ಸ್ಥಲ ಬ್ರಹ್ಮದಲ್ಲಿ ಏಕತ್ವವನ್ನು ಹೊಂದಿ ಜೀವನ್ಮುಕ್ತನಾಗಿ ಸಂಚರಿಸುವ ಕ್ರಮವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು 'ಮಿಶ್ರಾರ್ಪಣ' ಎಂಬ ೫ ವಾರ್ಧಕ ಷಟ್ಪದಿಯನ್ನೊಳಗೊಂಡ ಲಘುಕೃತಿಯಲ್ಲಿ ಅತ್ಯಂತ ಸರಳವಾಗಿ ನಿರೂಪಿಸಿದ್ದಾರೆ.

ಭಾಮಿನಿ ಷಟ್ಪದಿಯಲ್ಲಿ ರಚನೆಯಾದ 'ಯೋಗಕಲಾಪಸಾರ' ಕೃತಿಯಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧರು ಶಿವಯೋಗದ ಸ್ವರೂಪ ಮಹತ್ವ ಹಾಗೂ ಆಚರಣೆಯ ವಿಧಾನಗಳನ್ನು ೧೨೮ ಷಟ್ಪದಿಗಳಲ್ಲಿ ವಿವರಿಸಿದ್ದಾರೆ. ಇವುಗಳನ್ನು ಐದು ಪಟಲಗಳಾಗಿ ವಿಭಜಿಸಲಾಗಿದೆ. ಪಟಲ ಒಂದರಲ್ಲಿ ೧೧, ಪಟಲ ಎರಡರಲ್ಲಿ ೨೩೩, ಪಟಲ ಮೂರರಲ್ಲಿ ೨೩೧, ಪಟಲ ನಾಲ್ಕರಲ್ಲಿ ೩೧, ಐದನೆ ಪಟಲದಲ್ಲಿ ೩೭ ಪದ್ಯಗಳಿವೆ. ಪ್ರತಿಪಟಲದ ಅಂತ್ಯದಲ್ಲಿ –

ಇದು ನಿಖಿಳ ಶಿವಯೋಗ ಸಂಕುಳ

ಹೃದಯ ಭೂಷಣ ಹೃತಕುತೋಷಣ

ಸದಮಲ ಚಿದಾನಂದರೂಪ ಪ್ರಚಾರತರಬೋಧೆ

ಮುದವನರಿಪ ಯೋಗಸಾರದೊ

ಳುದಿತ ಮೂಲ ಮಹತ್ವ ದರ್ಶನ

ದೊದವ ಪೇಳುವುದಗಜೆಯೊಲಿಸುವಂದನೆಯ ಪಟಲ

ಎಂಬ ಷಟ್ಪದಿ ಪದ್ಯವಿದೆ. ಈ ಕೃತಿಯು ಶಿವ ಪಾರ್ವತಿಯರ ಸಂಭಾಷಣೆಯ ರೂಪದಲ್ಲಿ ನಿರೂಪಿತವಾಗಿದೆ.

'ಶಿವಲಿಂಗೇಶ್ವರಾ' ಎಂಬ ಅಂಕಿತದಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧರು 'ಶಿವಲಿಂಗ ಮಹಿಮಾ ಷಟ್ಪದಿ' ಎಂಬ ಕೃತಿ ರಚಿಸಿದ್ದಾರೆ. ಇದರಲ್ಲಿ ಶಿವನಲೀಲಾ ವಿಲಾಸಗಳು, ಅವನ ಅಪ್ರತಿಮತ್ವ, ಭಕ್ತವತ್ಸಲತೆ, ಕರುಣಾಮೃತತ್ವ, ಸತ್ಕೃಪಾಸಿಂಧುತ್ವ ಇತ್ಯಾದಿ ವಿಷಯಗಳನ್ನು ೧೦೫ ವಾರ್ಧಕ ಷಟ್ಪದಿಗಳಲ್ಲಿ ವಿವರಿಸಿದ್ದಾರೆ.

ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತವಾಗಿರುವ ಕೃತಿ 'ಶಿವರಹಸ್ಯ' ೪ ಕಾಂಡ, ೧೦೧ ಸಂಧಿ, ೩೩೩೦ ಭಾಮಿನಿ ಷಟ್ಪದಿಯಲ್ಲಿ ರಚನೆಯಾಗಿದೆ. ಸಂಸ್ಕೃತ ಸ್ಕಾಂದ ಪುರಾಣದಲ್ಲಿ

ಹೇಳಲಾಗಿರುವ ಶಿವನಪುತ್ರ ಷಣ್ಮುಖಸ್ವಾಮಿಯ ಮಹಿಮೆಯನ್ನು ಕನ್ನಡದಲ್ಲಿ ಪುರಾಣ ರೂಪದಲ್ಲಿ ಹೇಳಿರುವುದಾಗಿ ಕವಿ ತಿಳಿಸಿದ್ದಾನೆ. ಪ್ರತಿ ಅಧ್ಯಾಯದ ಕೊನೆಯಲ್ಲಿ –

ಶಿವರಹಸ್ಯ ಪುರಾಣದೊಳು ಸಂ
ಭವಸುಕಾಂಡದೊಳೊಂದನೆಯ ಸಂ
ಸ್ತವನದಧ್ಯಾಯದಲ್ಲಿ ಮುನಿಗಣಕ್ಕೆ ಸೂತಮುನಿ
ಪ್ರವಿಮಳಾತ್ಮ ಸ್ಕಂದ ಮಹಿಮೆಯ
ನವನಿಯೊಳು ಬಿತ್ತರಿಸಿದನು ದು
ಶ್ಚವನಸುತ ಶರದನಾಯಕನ ಶಂಕರನ ಕೃಪೆಯಿಂದ

ಎಂದು ಹೇಳಿರುವನು.

ಮುರಿಗಾ ಶಾಂತವೀರರು 'ನೀಲಾಂಬಿಕಾ ಲಲಿತ ಪಂಚವಿಂಶತಿ' ಎಂಬ ಕೃತಿಯಲ್ಲಿ ಬಸವಣ್ಣನವರ ಪತ್ನಿ ನೀಲಾಂಬಿಕೆಯ ಸ್ತುತಿಯನ್ನು ಮಾಡಿದ್ದಾರೆ. ಭಾಮಿನಿ ಹಾಗೂ ವಾರ್ಧಕ ಷಟ್ಪದಿಗಳಲ್ಲಿ ರಚಿತವಾದ ಇದರಲ್ಲಿ ಒಟ್ಟು ೨೫ ಷಟ್ಪದಿಗಳಿವೆ.

'ವೈರಾಗ್ಯ ಷಟ್ಪದಿ' ಸಂಕಲನ ರೂಪದ ಕೃತಿ. ಇದರಲ್ಲಿ ೧೦೧ ವಾರ್ಧಕ ಷಟ್ಪದಿಗಳಿವೆ. ಇಲ್ಲಿನ ೯೮ ಷಟ್ಪದಿಗಳು ಮುಖಭೋಳು ಸಿದ್ಧರಾಮನ ಷಟ್ಸ್ಥಲ ತಿಲಕದಲ್ಲಿಂದ ಆಯ್ದುಕೊಂಡುವಾಗಿವೆ.

'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ' ಷಟ್ಪದಿ ರೂಪದಲ್ಲಿ ರಚನೆಯಾಗಿದೆ. ಒಟ್ಟು ೨೪ ವಾರ್ಧಕ, ಪರಿವರ್ಧಿನಿ ಹಾಗೂ ಭಾಮಿನಿ ಷಟ್ಪದಿಗಳನ್ನೊಳಗೊಂಡಿದೆ.

ವೀರಶೈವ ಸಿದ್ಧಾಂತ ವಿವರಣೆಯ ವಸ್ತುವನ್ನೊಳಗೊಂಡ 'ಏಕೋನವಿಂಶತಿ ಪದ' ಕೃತಿಯನ್ನು ಮುರಿಗೆ ಶಾಂತವೀರರು ೨೧ ವಾರ್ಧಕ ಷಟ್ಪದಿಗಳಲ್ಲಿ ನಿರೂಪಿಸಿದ್ದಾರೆ.

ವೀರಶೈವದ ತತ್ವಸ್ವರೂಪ ಕುರಿತು ಹಾಗಲವಾಡಿ, ಮುದ್ವೀರಸ್ವಾಮಿಯವರು 'ಶಿವತತ್ವ ಸುಜ್ಞಾನ ಪ್ರದೀಪಿಕೆ' ಎಂಬ ಕೃತಿ ರಚಿಸಿದ್ದಾರೆ. ಇದರಲ್ಲಿ ೫೦೮ ವಾರ್ಧಕ ಷಟ್ಪದಿಗಳಿವೆ. ಜೊತೆಗೆ ಶ್ಲೋಕಗಳೂ ಸಮಾವೇಶಗೊಂಡಿವೆ.

ಮಹಾದೇವ ಕವಿಯ "ಮಹಾಲಿಂಗೇಂದ್ರ ವಿಜಯ" ಒಂದು ಹಿರಿಯ ಗಾತ್ರದ ಷಟ್ಪದಿ ಕಾವ್ಯ. ೨೦ ಅಧ್ಯಾಯ ೨೦೬೪ ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ೨೧ನೆಯ ಜಗದ್ಗುರು ಮಹಾಲಿಂಗರ ಜೀವನ-ಸಾಧನೆ-ಸಿದ್ಧಿಗಳು ಈ ಕಾವ್ಯದ ಮುಖ್ಯವಸ್ತು. ಅದಕ್ಕೆ ಪೂರಕವಾಗಿ ಈ ಪೀಠ ಪರಂಪರೆಯಲ್ಲಿ ಆಗಿ ಹೋದ ಹಿಂದಿನ ಜಗದ್ಗುರುಗಳ ಚರಿತ್ರೆ ಹಾಗೂ

ನಂತರದ ೨೨ನೆಯ ಜಗದ್ಗುರುಗಳ ಸಂಕ್ಷಿಪ್ತ ಪರಿಚಯ ಮಾಡಲಾಗಿದೆ. ಬೃಹತ್ ಗಾತ್ರದ ಈ ಕಾವ್ಯವನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ.

೫. ಚೌಪದ :

ಚೌಪದನಗಳು ಕನ್ನಡ ಜನಪದ ಸಾಹಿತ್ಯದ ಒಂದು ವಿಶಿಷ್ಟ ಪ್ರಕಾರ. ಇವನ್ನು ನೀಳ್ಗವನಗಳೆಂದೂ, ಕಥನ ಕವನಗಳೆಂದೂ ಕರೆಯಬಹುದು. ಕಥಾ ನಿರೂಪಣೆಗಾಗಿ ಚೌಪದಿಯನ್ನು ಬಳಸಿಕೊಂಡ ಚೌಪದನಕಾರರು ಆಯ್ದುಕೊಂಡ ವಸ್ತು ವೈವಿಧ್ಯಮಯವಾಗಿದೆ. ಅಲ್ಲಿ ಕಥೆ ಇದೆ. ಪಾತ್ರ ಸೃಷ್ಟಿಯಿದೆ. ತತ್ವಭೋದೆ ಇದೆ. ಒಗಟಿಗೆ ಇಂಬಿದೆ. ಶಾಸ್ತ್ರದ ಬಿಗುವಿನಲ್ಲಿ ಕಾವ್ಯದ ಮಾಧುರ್ಯವಿದೆ.

ಕ್ರಿ.ಶ. ೧೪೩೦ರಲ್ಲಿ ಬಾಳಿದ ಸಪ್ತಕಾವ್ಯದ ಗುರುಬಸವನು ರಚಿಸಿದ 'ಅವಧೂತಗೀತೆ' ಚೌಪದಿಛಂದಸ್ಸಿನಲ್ಲಿ ರಚಿತವಾಗಿದೆ. ಗ್ರಂಥದ ಆದಿಯಲ್ಲಿ ಬಸವಸ್ತುತಿ ಬಂದಿದ್ದು ಚೌಪದನದುದ್ದಕ್ಕೂ ಅವಧೂತ ಪಂಥದ ಲಕ್ಷಣವನ್ನು ಹೇಳಲಾಗಿದೆ. ಇದರಲ್ಲಿ ೧೦೧ ಚೌಪದಿಗಳಿರುವದರಿಂದ ಅದನ್ನು ಶತಕವೆಂದು ಕರೆಯುವುದುಂಟು. ಕರಸ್ಥಲದ ನಾಗಲಿಂಗ ಮತ್ತು ಸಪ್ತಕಾವ್ಯದ ಗುರುಬಸವರು 'ದ್ವಾದಶಾನುಪ್ರೇಕ್ಷೆ'ಯನ್ನು ರಚಿಸಿದ 'ಕಲ್ಯಾಣ ಕೀರ್ತಿ'(೧೪೪)ಗಿಂತಲೂ ಪೂರ್ವದವರು. ಆದ್ದರಿಂದ ವೀರಶೈವ ಕವಿಗಳೇ ಚೌಪದನ ಸಾಹಿತ್ಯಕ್ಕೆ ಮೊತ್ತ ಮೊದಲಿಗರೆನಿಸಿದ್ದಾರೆ. ವೀರಶೈವ ಚೌಪದನಕಾರರ ನಂತರ ಬಾಳಿದವರು ಹರಿದಾಸರು. ಅವರ ಹಾಡುಗಳಲ್ಲಿ ಚೌಪದಿಯ ಬಳಕೆ ಅಲ್ಲಲ್ಲಿ ಆಗಿದ್ದರೂ ಚೌಪದನಗಳನ್ನು ಅವರು ಬರೆದಿಲ್ಲ.

ಇಮ್ಮಡಿ ಮುರಿಗಾ ಗುರುಸಿದ್ಧರ ಅಪ್ರಕಟಿತ ಕೃತಿಗಳಲ್ಲಿ ಒಂದು-'ಸ್ಕಂದಕಲ್ಯಾಣ'. ವಿವಿಧ ದೇಶೀಛಂದೋಬಂಧಗಳಲ್ಲಿ ರಚಿತವಾದ ಈ ಕೃತಿಯ ಅಪೂರ್ಣ ಹಸ್ತಪ್ರತಿಯು ಮೂರು ಸಾವಿರ ಮಠದ ಹಸ್ತಪ್ರತಿ ಸಂಗ್ರಹದಲ್ಲಿ ಇರುವುದಾಗಿ ತಿಳಿದುಬಂದಿದೆ. ಕೃತಿಯ ಮೊದಲ ಸಂಧಿಯಾದ 'ಚೌಪದಿ ವರ್ಣದ ಶಿವಸ್ತೋತ್ರ' ವೃತ್ತಗಳಲ್ಲಿ ರಚಿತವಾದ ಸ್ಕಂದ ಕಲ್ಯಾಣದಲ್ಲಿನ 'ಶಿವಸ್ತೋತ್ರ' ಮತ್ತು ದ್ವಿಪದಿಯಲ್ಲಿ ರಚಿತವಾದ 'ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರ' ಈ ಮೂರು ಬಿಡಿ ಭಾಗಗಳು ಮಾತ್ರ ಈಗ ಪ್ರಕಟವಾಗಿವೆ.

ಉಪಲಬ್ಧವಾಗಿರುವ ಭಾಗಗಳಿಂದ ಕೆಳಗಿನ ವಿಷಯಗಳನ್ನು ಸಂಗ್ರಹಿಸಬಹುದು. ಚೌಪದಿ ವರ್ಣದ ಶಿವಸ್ತೋತ್ರದಲ್ಲಿ ೩೬ ಚೌಪದಿಗಳಿವೆ.

'ನಂದಿಕೇತನ ನಾಕಕುಂತಳ ಸುರನಾಗ
ಮಂದಿರ ನುತಜನ ಮಂದಾರ
ಚಂದಿರದಲೆಯ ಚರಣನೇತ್ರ ಶಿವಲಿಂಗ
ಚಂದಾದೆ ಶರಣಂಗೆಮಣಿಯೊಲಿದು

ಎಂದು ಶಿವಸ್ತುತಿಯೊಂದಿಗೆ ಕಾವ್ಯ ಪ್ರಾರಂಭವಾಗುತ್ತದೆ ಶಿವನ ಒಂದೊಂದು ಲೀಲೆಗಳನ್ನು ವಿವರಿಸುತ್ತಾ ಕಾವ್ಯ ಮುಂದುವರೆದು –

ಶಿವಮುನೀಶನ ದೃಷ್ಟಿಯೊಳಗೆ ಜನಿಸಿವ್ಯಾಧ
ಧವನ ತನುಜೆಯಾದ ಲವಲಿಯ
ಸವಿನಯದಿಂದೆ ಕೈವಿಡಿದ ಕಲ್ಯಾಣವು
ವವನಿಯೊಳನುವಾಗಿ ಮೆರೆಯಲಿ

ಎಂದು ಕೃತಿಯ ವಸ್ತುವನ್ನು ವಿವರಿಸಿದ್ದಾರೆ. ಸ್ಕಂದ ಕಲ್ಯಾಣದಲ್ಲಿನ ಶಿವಸ್ತೋತ್ರದಲ್ಲಿ ೧೨ ವೃತ್ತಗಳಿವೆ. ಉತ್ಪಲಮಾಲೆ, ಚಂಪಕಮಾಲೆ, ಮತ್ತೇಭವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಮಲ್ಲಿಕಾ ಮಾಲೆ ವೃತ್ತಗಳಲ್ಲಿ ಶಿವಸ್ತೋತ್ರ ಮಾಡಲಾಗಿದೆ.

ಕಗ್ಗದ ವೀರಮಾಸ್ತೇರ ದ್ವಿಪದಿ ಸ್ತೋತ್ರವು ದ್ವಿಪದಿಯಾಗಿದ್ದರೂ ಇದು ನಾಲ್ಕು ಸಾಲುಗಳ ಒಂದೊಂದು ನುಡಿಗಳಲ್ಲಿದೆ. ಇದರಲ್ಲಿ ೧೧ ನುಡಿಗಳಿವೆ. ಯುದ್ಧದಲ್ಲಿ ಹೋರಾಡಿ ವೀರಮರಣವನ್ನಪ್ಪಿ ಸ್ವರ್ಗವಾಸಿಯಾದ ಕವಿಯನ್ನು ಕುರಿತಾಗಿ ಆತನ ಪತ್ನಿಯರು ಶೋಕಿಸುವ ಒಂದು ದುಃಖ ಪ್ರಸಂಗದ ವಿವರಣೆಯಿದೆ.

ಉದಾ:-

ತಿದ್ದಿದ ಮೀಸೆಯ ಮುದ್ದು ಮೊಗದ ಚತುರ
ಸುದ್ದಿಯ ಹೇಳದೆ ಸಗ್ಗಕ್ಕೆ
ಸುದ್ದಿಯ ಹೇಳದೆ ಸಗ್ಗಕ್ಕೆ ಹೋದರೆ
ಎದ್ದು ಬಾರದೆ ನಿನ್ನ ಬಿಡುವೆನೆ

ಎನ್ನುವಲ್ಲಿ ಆತನ ಸುಕುಮಾರತೆಯನ್ನೂ, 'ನಲ್ಲನೆ ನೀ ನನ್ನ ಸೊಲ್ಲನಾಲಿಸು ಎದ್ದು ಬಾರದೆ ನಿನ್ನ ಬಿಡುವೆನೆ' ಎಂಬಲ್ಲಿ ಅವರ ದುಃಖದ ಆಳವನ್ನು ಕಾಣಬಹುದು.

ಅಪೂರ್ಣವಾಗಿ ದೊರೆತ ಈ ಕೃತಿ ಸಮಗ್ರವಾಗಿ ದೊರೆಯುವ ವರೆಗೆ ಇದರ ನಿಶ್ಚಿತ ಸ್ವರೂಪ ತಿಳಿಯುವುದಿಲ್ಲ.

೬. ತಾರಾವಳಿ :

ವೀರಶೈವ ಲಘುಸಾಹಿತ್ಯ ಪ್ರಕಾರಗಳಲ್ಲಿ ತಾರಾವಳಿಯೂ ಒಂದು. ತಾರಾವಳಿ ಎಂದರೆ ನಕ್ಷತ್ರಗಳ ಸಾಲು ಎಂದರ್ಥ. ಆಗಸದಲ್ಲಿ ಪ್ರಕಾಶಮಾನವಾಗಿ ಮಿನುಗುವ ೨೭ ನಕ್ಷತ್ರ ಮಾಲಿಕೆಗಳಂತೆ ೨೭ ನುಡಿಗಳಿಂದ ಕೂಡಿದ ವಿಶಿಷ್ಟ ಸಾಹಿತ್ಯ ಪ್ರಕಾರ ತಾರಾವಳಿ ಎಂದು ಹೇಳಬಹುದು. 'ಕೇವಲ ೨೭ ಪದ್ಯಗಳಲ್ಲಿ ಓರ್ವ ಮಹಿತ ವ್ಯಕ್ತಿಯ, ಓರ್ವ ಮಹಿತಳ, ಪೂಜ್ಯ

ವಸ್ತುವಿನ ಸಮಗ್ರ ವಿಚಾರವನ್ನು ಸಂಕ್ಷಿಪ್ತವಾಗಿ ಅಣಿಮುತ್ತುಗಳಂತಹ ಸುಶ್ರಾವ್ಯ ತಾಳಬದ್ಧ ಕಾವ್ಯವಾಣಿಯಲ್ಲಿ ಮೆರೆದು ಮುಗಿಸತಕ್ಕ ಸಾಹಿತ್ಯಕ್ಕೆ 'ತಾರಾವಳಿ ಸಾಹಿತ್ಯ' ಎಂದು ಕರೆಯಲಾಗಿದೆ.[೧]

ಅಷ್ಟಕ ಶತಕಗಳಂತೆ ಕೇವಲ ದೇವತಾಸ್ತುತಿಗಾಗಿ ಸೋತ್ರ ರೂಪದಲ್ಲಿ ಹುಟ್ಟಿಕೊಂಡ ಇದನ್ನು ಕನ್ನಡಕ್ಕೆ ತಂದು ಹುಲುಸಾಗಿ ಬೆಳೆಸಿದ ಶ್ರೇಯಸ್ಸು ವೀರಶೈವರಿಗೆ ಸಲ್ಲುತ್ತದೆ. ಈ ವಿಶಿಷ್ಟ ಬಗೆಯ ಸಾಹಿತ್ಯ ಪ್ರಕಾರವು ಬಳಕೆಗೆ ಬಂದುದು ಪ್ರೌಢದೇವರಾಯನ ಕಾಲದಲ್ಲಿ. ಸದ್ಯದ ಮಟ್ಟಿಗೆ ತಾರಾವಳಿ ಸಾಹಿತ್ಯಕ್ಕೆ ಆದಿಕೃತಿ ಮತ್ತು ಅಗ್ರಕೃತಿ ಎಂದರೆ ನೂರೊಂದು ವಿರಕ್ತರಲ್ಲಿ ಒಬ್ಬನಾದ ಕರಸ್ಥಲನಾಗಿದೇವನು ರಚಿಸಿದ 'ಮಡಿವಾಳಯ್ಯನ ತಾರಾವಳಿ'. ತಾರಾವಳಿ ಪ್ರಕಾರದ ಎಲ್ಲ ಲಕ್ಷಣಗಳನ್ನು ಇದು ಒಳಗೊಂಡಿದೆ. ಹೀಗೆ ೧೫ನೆಯ ಶತಮಾನದಲ್ಲಿ ಕನ್ನಡದಲ್ಲಿ ಹುಟ್ಟಿದ ತಾರಾವಳಿ ಸಾಹಿತ್ಯ ಅಲ್ಲಿಂದ ಮುಂದೆ ೧೯ನೆಯ ಶತಮಾನದವರೆಗೂ ಉಳಿದ ಲಘುಸಾಹಿತ್ಯ ಪ್ರಕಾರಗಳ ಜೊತೆಗೆ ಸರಿದೊರೆಯಾಗಿ ಬೆಳೆದು ಬಂದಿದೆ. ಅದರಲ್ಲೂ ೧೫, ೧೬, ೧೭ ಶತಮಾನಗಳು ತಾರಾವಳಿಯ ಸುಗ್ಗಿಯ ಕಾಲವೆನಿಸಿವೆ.

ವಸ್ತುವಿನ ದೃಷ್ಟಿಯಿಂದ ತಾರಾವಳಿಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು.

೧) ಸ್ತುತಿ ರೂಪದ ತಾರಾವಳಿಗಳು

೨) ಜಾತ್ರೆ, ಪೂಜೆ, ಪಲ್ಲಕ್ಕಿ ವರ್ಣನಾಪರ ತಾರಾವಳಿಗಳು

೩) ತತ್ವ ಪ್ರಧಾನ ತಾರಾವಳಿಗಳು

೪) ಐತಿಹಾಸಿಕ ಸಂಗತಿಗಳನ್ನೊಳಗೊಂಡ ತಾರಾವಳಿಗಳು

ಇವುಗಳಲ್ಲಿ ಪ್ರಮುಖವಾಗಿ ಶಿವಸ್ತುತಿ, ಗಣಸ್ತುತಿ, ಶರಣಸ್ತುತಿ, ವಿರಕ್ತರ ಸ್ತುತಿ ಎಂದು ಉಪಭಾಗಗಳನ್ನು ಕಲ್ಪಿಸಬಹುದು.[೨]

ವಿರಕ್ತರ ಸ್ತುತಿಪರವಾದ ಕೃತಿಗೆ ಒಂದು ಅತ್ಯುತ್ತಮ ನಿದರ್ಶನ ಇಮ್ಮಡಿ ಮುರಿಗಾ ಗುರುಸಿದ್ಧರ 'ಮುರಿಗೆ ತಾರಾವಳಿ'. ತಾರಾವಳಿ ಪ್ರಕಾರದ ಎಲ್ಲ ಲಕ್ಷಣಗಳನ್ನೊಳಗೊಂಡ ಈ ಕೃತಿ ತಾರಾವಳಿ ಸಾಹಿತ್ಯದಲ್ಲಿಯೇ ಎದ್ದು ಕಾಣುವ ವೈಶಿಷ್ಟ್ಯವನ್ನು ಪಡೆದಿದೆ. ಪ್ರಾರಂಭದಲ್ಲಿ ಕೃತಿಯ ವಿಶೇಷತೆಯನ್ನು ಎತ್ತಿ ತೋರುವ ಶಾರ್ದೂಲ ವಿಕ್ರೀಡಿತ ವೃತ್ತವಿದೆ.

ಬಣ್ಣಿಸಲಳವೆ ನಿಮ್ಮನು ಜಯಶೀಲ ಮು
ಕ್ಕಣ್ಣ ಮುರಿಗೆಯ ಶ್ರೀ ಶಾಂತವೀರೇಶ್ವರ
ಬಣ್ಣಿಸಲಳವೆ ನಿಮ್ಮ ॥ಪ॥

ಎಂಬ ಪಲ್ಲವಿಯೊಂದಿಗೆ ಕೃತಿಯನ್ನು ಪ್ರಾರಂಭಿಸಲಾಗಿದೆ. ನಂತರದಲ್ಲಿ ೧೮, ೧೯, ೨೦ ಪಾದಗಳನ್ನೊಳಗೊಂಡ ನುಡಿಗಳು ರಗಳೆ ರೂಪದಲ್ಲಿವೆ. ಪ್ರತಿನುಡಿಯಲ್ಲಿಯೂ ಆದಿಪ್ರಾಸ

ನಿತ್ಯವಾಗಿದೆ. ಕೊನೆಯ ನುಡಿಯಲ್ಲಿ ಶಿವಲಿಂಗೇಶ ಎಂಬ ಅಂಕಿತವಿದೆ. ಕೃತಿಯ ಅಂತ್ಯದಲ್ಲಿ ಫಲಶ್ರುತಿಯನ್ನು ಒಳಗೊಂಡ ಮತ್ತೊಂದು ಶಾರ್ದೂಲ ವಿಕ್ರೀಡಿತ ವೃತ್ತವಿದೆ. ಚಿತ್ರದುರ್ಗ ಬೃಹನ್ಮಠ ಪೀಠದ ಪ್ರಥಮ ಗುರುಗಳಾದ ಶ್ರೀಶಾಂತವೀರೇಶ್ವರರ ಘನ ವ್ಯಕ್ತಿತ್ವದ ಚಿತ್ರಣವೇ ಮುರಿಗೆ ತಾರಾವಳಿಯ ವಸ್ತು. ಗುರುಗಳ ಲೋಕೋದ್ಧಾರ, ಭಕ್ತೋದ್ಧಾರ ಕ್ರಮವನ್ನೂ ಕಾರುಣ್ಯಮಯೀ ಲೋಕಯಾತ್ರೆಯನ್ನು ಅವರ ವ್ಯಕ್ತಿತ್ವದ ಹಲವು ಮುಖಗಳನ್ನು ಆತ್ಮೀಯವಾಗಿ ಪರಿಚಯಿಸಿದ್ದಾರೆ.

ಹಮ್ಮೀರ ಕಾವ್ಯದ ವಸ್ತುವನ್ನೇ ಒಳಗೊಂಡಿರುವ ಮುರಿಗೆಯ ಶಾಂತವೀರರ 'ಮನುರಾಜೇಂದ್ರ ತಾರಾವಳಿ'ಯಲ್ಲಿ ಹಮ್ಮೀರ ಬಿರುದಾಂಕಿತ ಅರಸನ ಭಕ್ತಿಯ ಚರಿತ್ರೆಯನ್ನು ನಿರೂಪಿಸಿದ್ದಾರೆ. ಕೃತಿ ಪ್ರಾರಂಭದಲ್ಲಿ –

ಸ್ತುತಿಸಲೆನ್ನಳವೆ ನಿಮ್ಮತಿಳಿಯ ಮಹಿಮೆ(ಯ)
ಕ್ಷಿತಿವರ ಹಮ್ಮೀರರಾಜೇಂದ್ರ ತೇಜನೆ"

ಎಂಬ ಪಲ್ಲವಿಯೊಂದಿಗೆ ಪ್ರಾರಂಭವಾಗಿ ೧೧ ಪದ ಹಾಗೂ ಅಂತ್ಯದಲ್ಲಿ ೪ ಕಂದ ಪದ್ಯಗಳನ್ನೊಳಗೊಂಡಿದೆ. "ಯೋಗಿವರ ಕರುಣ ಮುರಿಗೆಯ ನಾಗರಪತಿಭರಣ" ಎಂಬ ಅಂಕಿತದಲ್ಲಿ ರಚನೆಯಾಗಿದೆ.

"ಮುರಿಗೆಯ ರಾಯ" ಎಂಬ ಅಂಕಿತದಲ್ಲಿ ರಚಿತವಾದ ಮುರಿಗೆಯ ಶಾಂತವೀರರ ಕಟ್ಟಿಗೆಯ ತಾರಾವಳಿಯು –

ಅಮಮ ಕಟ್ಟಿಗೆಯೆಂದು ಮಹಿಮೆಯನರಿಯದೆ
ಕ್ರಮಗೆಟ್ಟು ನುಡಿವಿರಿ ಕಾಕ ಪೋಕರು ನೀವು
ಅಮಮ ಕಟ್ಟಿಗೆಯೆಂದದಾ ॥ಪ॥

ಎಂಬ ಪಲ್ಲವಿಯೊಂದಿಗೆ ಕೃತಿ ಪ್ರಾರಂಭವಾಗಿ ೫ ಪದಗಳಿಂದ ಕೂಡಿದೆ. ಕಟ್ಟಿಗೆಯ ವಿವಿಧ ಪ್ರಯೋಜನಗಳನ್ನು ವಿವರಿಸುವ ಕೃತಿ ಇದಾಗಿದೆ.

ಪಾಲ್ಕುರಿಕೆ ಸೋಮನಾಥನ 'ಗಣಸಹಸ್ರನಾಮ' ಎಂಬ ಕೃತಿಯನ್ನು ಆಕರವಾಗಿಟ್ಟುಕೊಂಡು ಜ್ವಲಕಂಠ ಮಹಾಂತ ಸ್ವಾಮಿಗಳು "ಶಿವಗಣ ಸಹಸ್ರ ತಾರಾವಳಿ"ಯನ್ನು ರಚಿಸಿದ್ದಾರೆ. ಹೆಸರೇ ಸೂಚಿಸುವಂತೆ ಶಿವಗಣಗಳ ಸ್ತುತಿ ಈ ಕೃತಿಯ ವಸ್ತುವಾಗಿದೆ. ಇದರಲ್ಲಿ ಪಲ್ಲವಿ, ೨೯ ನುಡಿ ೫ ಕಂದ ಹಾಗೂ ಅಂತ್ಯದಲ್ಲಿ ಗದ್ಯವಿದೆ.

೭. ನಾಂದ್ಯ :

ವೀರಶೈವ ಲಘು ಕಾವ್ಯ ಪ್ರಕಾರಗಳಲ್ಲಿ 'ನಾಂದ್ಯ'ವೂ ಒಂದು. ಕಾವ್ಯದ ಆರಂಭದಲ್ಲಿ ಸಾಂಪ್ರದಾಯಿಕವಾಗಿ ಬರುವ ಪ್ರಾರ್ಥನೆಗಳ ಜೊತೆಗೆ ಕಾವ್ಯದ ಒಳಗೂ ಕೂಡ ಸಂದರ್ಭೋಚಿತವಾಗಿ ಬರುವ ಪ್ರಾರ್ಥನಾ ಪದ್ಯಗಳನ್ನು ಸೇರಿಸಿದ ಕೃತಿಗಳನ್ನು 'ನಾಂದ್ಯಗಳು' ಎಂದು ಕರೆಯಲಾಗುತ್ತದೆ. ಜನರನ್ನು ಭಕ್ತಿಭಾವದಲ್ಲಿ ಬಂಧಿಸಿ ಅವರನ್ನು ತನ್ಮಯರನ್ನಾಗಿ ಮಾಡುವಲ್ಲಿ ಈ ನಾಂದ್ಯಗಳು ಯಶಸ್ವಿಯಾಗುತ್ತವೆ.

ಕೆಲವು ಕವಿಗಳು ನಿಯತವಾಗಿ ತಮ್ಮ ಕಾವ್ಯದ ಪ್ರತಿಸಂಧಿಯ ಆರಂಭ ಹಾಗೂ ಅಂತ್ಯದಲ್ಲಿ ಪ್ರಾರ್ಥನಾ ಪದ್ಯಗಳನ್ನು ಅಳವಡಿಸಿರುವುದೂ ಉಂಟು. ಷಡಕ್ಷರದೇವ ತನ್ನ ಮೂರು ಕೃತಿಗಳಲ್ಲಿ ಆಶ್ವಾಸಾರಂಭದಲ್ಲಿ ಶಿವಲಿಂಗ ಸ್ತುತಿಯನ್ನೂ, ಆಶ್ವಾಸಾಂತ್ಯದಲ್ಲಿ ಪಾರ್ವತಿ ಸ್ತುತಿಯನ್ನು ಕ್ರಮವಾಗಿ ಸೇರಿಸಿರುವುದನ್ನು ಇಲ್ಲಿ ಉದಾಹರಿಸಬಹುದು. ಉತ್ಕೃಷ್ಟವಾದ ಹಾಗೂ ತೇಜಃಪುಂಜವಾದ ಇಂಥ ಪ್ರಾರ್ಥನೆಗಳನ್ನು ಕಂಡು ಆಕರ್ಷಿತರಾದ ಕೆಲವು ಸಂಕಲನಕಾರರು ಇವುಗಳನ್ನು ಪ್ರತ್ಯೇಕವಾಗಿ ಬರೆದಿಟ್ಟುಕೊಂಡು, ಅಂಥ ಕೃತಿಗಳಿಗೆ ನಾಂದ್ಯಗಳು ಎಂದು ಹೆಸರಿಸಿ ಪ್ರಸಾರಗೊಳಿಸುತ್ತ ಬಂದುದು ಕಂಡುಬರುತ್ತದೆ. ಇದು ಮುಂದೆ ಒಂದು ಪರಂಪರೆಯಾಗಿ ಬೆಳೆದು ನಿಂತುದು ವೀರಶೈವ ಕಾವ್ಯ ಕ್ಷೇತ್ರದಲ್ಲೆ ಎದ್ದು ಕಾಣುವ ಅಂಶವಾಗಿದೆ. ಇವು ಆಯಾ ಕಾವ್ಯದ ಹೆಸರಿನಲ್ಲಿ ಪ್ರಚಾರವಾಗಿವೆ.

ಉದಾ : ಗುರುರಾಜ ಚಾರಿತ್ರ್ಯದ ನಾಂದ್ಯ, ಸೋಮನಾಥ ಕಾವ್ಯದ ನಾಂದ್ಯ, ಸಿದ್ಧೇಶ್ವರ ಪುರಾಣದ ನಾಂದ್ಯ, ಸೌಂದರ್ಯ ಪುರಾಣದ ನಾಂದ್ಯ, ಬಸವೇಶ್ವರ ಪುರಾಣದ ನಾಂದ್ಯ ಇತ್ಯಾದಿ.

ಹೀಗೆ ಬೆಳೆದು ಬಂದಿರುವ ನಾಂದ್ಯಗಳ ಸಂಗ್ರಹಗಳನ್ನು ನೋಡಿದರೆ ಇವುಗಳ ಜನಪ್ರಿಯತೆಯ ಅರಿವಾಗುತ್ತದೆ. ಪ್ರಾರ್ಥನಾ ಪದ್ಯಗಳನ್ನು ಸಂಗ್ರಹಿಸುವುದು ಅವುಗಳನ್ನು ಜನತೆಯಲ್ಲಿ ಪ್ರಸಾರ ಮಾಡುವದು ಪುಣ್ಯದ ಕೆಲಸವೆಂಬ ಭಾವನೆ ಬೆಳೆದು ಬಂದಿದೆ. ಅವುಗಳನ್ನು ಬರೆದು ಓದಿ ಕೇಳಿದವರಿಗೆ ಶುಭವಿದೆ ಎಂಬ ವಿಶ್ವಾಸವೂ ಕಾಣುತ್ತದೆ.[೩] ನಾಂದ್ಯಗಳಲ್ಲಿ ಎರಡು ರೀತಿಗಳನ್ನು ಗುರುತಿಸಬಹುದಾಗಿದೆ. ಒಂದು ಈಗಾಗಲೇ ರಚಿತವಾದ ಹಿರಿಯ ಕಾವ್ಯಗಳಲ್ಲಿಯ ಸ್ತುತಿ ಪದ್ಯಗಳನ್ನು ಆಯ್ದು ಜೋಡಿಸಿದವು. ಎರಡು ಕೇವಲ ಸ್ತುತಿಪದ್ಯಗಳನ್ನೇ ಸ್ವತಃ ಬರೆದು ಅವುಗಳಿಗೆ ನಾಂದ್ಯ ಎಂದು ಕರೆದಿರುವುದು. ಇಮ್ಮಡಿ ಮುರಿಗಾ ಶಿವಯೋಗಿಗಳ 'ಶಿವಲಿಂಗನಾಂದ್ಯ ಹಾಗೂ ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ', ಮುರಿಗೆಯ ಶಾಂತವೀರರ 'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ', ಜ್ವಲಕಂಠ ಮಹಾಂತಸ್ವಾಮಿಯವರ 'ಮುರಿಗೆ ಸ್ವಾಮಿಗಳ ನಾಂದ್ಯ', ಕಂಪಿನಂಜಯ್ಯನ 'ಕಂಪಿನಂಜಯ್ಯನ ನಾಂದ್ಯ' ಈ ಕೃತಿಗಳು ಎರಡನೆಯ ಮಾದರಿಗೆ ಸೇರುತ್ತವೆ.

ಷಟ್ಪದಿ ಸಾಹಿತ್ಯದಲ್ಲಿ ರಚನೆಯಾದ 'ಶಿವಲಿಂಗ ನಾಂದ್ಯ' ಕೃತಿಯಲ್ಲಿ ಇಮ್ಮಡಿ ಮುರಿಗಾ ಗುರುಸಿದ್ಧರು ಶಿವನ ಲೀಲಾವಿಲಾಸಗಳನ್ನು, ಅಪ್ರತಿಮತ್ವವನ್ನು ವರ್ಣಿಸಿದ್ದಾರೆ.

"ಓಲೆ ನಾಗರಸುತ್ತು ಮೂಗುತಿ
ಶಾಲಿ ಸಮ್ಮದ ಹಾದಕೆಬಳಿ ಫಣಿ
ಮೇಲೆನಿಪ ಕೈದಾತಿ ಮಲ್ಲಿಗೆಮಾಲೆ ತಲೆಸರವು
ಕಾಲಕತ್ತುರಿಯುಣ್ಣು ಭಸಿತ ವಿ
ಶಾಲ ರೇಖೆಯು ತುರುಬು ಕೆಂಜೆಡೆ
ಲೋಲ ಪಂಕಜ ಶೂಲವೆಸೆವರೆವಣ್ಣ ಪೊರೆಯಮಾ".

ಇಮ್ಮಡಿ ಮುರಿಗಾ ಗುರುಸಿದ್ಧರ ನಾಂದ್ಯ ರೂಪದ "ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ' ಕೃತಿಯಲ್ಲಿ ೨೪ ಷಟ್ಪದಿಗಳಿವೆ. ಇಲ್ಲಿಯ ಪ್ರತಿಯೊಂದು ಷಟ್ಪದಿಗೂ ಅಜ್ಞಾನ ಕರ್ತೃ ಬರೆದ ಪ್ರತಿಪದಾರ್ಥ ಟೀಕೆಯಿದೆ. ಗುರು ಮುರಿಗಾ ಶಾಂತವೀರರನ್ನು ಹಾಗೂ ಶಿವನನ್ನು ಇಲ್ಲಿ ಅತ್ಯಂತ ಭಕ್ತಿಯಿಂದ ಸ್ತುತಿಸಿದ್ದಾರೆ.

ನಾಂದ್ಯ ಪ್ರಕಾರದ ಎಲ್ಲ ವಿಶಿಷ್ಟತೆಯನ್ನೊಳಗೊಂಡ ಮುರಿಗೆಯ ಶಾಂತವೀರರ 'ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ' ಕೃತಿಯು ಸಿರಿಗೆಯ ಬೃಹನ್ಮಠದ ಸಂಗ್ರಹದಲ್ಲಿ ಉಪಲಬ್ಧವಾಗಿದೆ. ಇದು ಒಟ್ಟು ೨೪ ಷಟ್ಪದಿಗಳನ್ನು ಹೊಂದಿದೆ. ಕೃತಿಯ ಪ್ರಾರಂಭದಲ್ಲಿ –

ಶ್ರೀಮದಭ್ರಾಳಕಂ ಭ್ರಾಜಿತಾಭ್ರರಸ ಭೃ
ದ್ಧಾಮನಿಧಿ ಧವಳರುಗ್ಧೊಮಕೇತಕ್ಷಸ
ದ್ಯೋಮ ಹೃದ್ಭೀಮಭಿತ್ಕಾ ಮಜಿದ್ದೇಮಾದ್ರಿ ಧರ್ಮಕೃತ್ಕರ್ಮಭೇದಿ
ಭ್ರಾಮಕೋದ್ಧತ ಪಂಚಮೇಧ್ರಾ ಭ್ರ ವೈತ್ಯಾದಿ
ಭೂಮಿಭಾರಕ ಬಲಾಬರ್ವಗರ್ವಾಪಹಾ
ಸ್ವಾಮಿ ಶಾಶ್ವತ ಮಹತ್ತ್ರೇಮಿ ಪಾಲಯ ಸದಾ ಶ್ರೀ ಶಾಂತವೀರೇಶ್ವರಾ . . . .

(ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ)

ಎಂಬ ವಾರ್ಧಕ ಷಟ್ಪದಿಯಿದೆ. ಇದಕ್ಕೆ ಅಜ್ಞಾತ ಕೃತ ಟೀಕೆಯೊಂದು ಲಭ್ಯವಾಗಿದೆ.

ಜ್ವಲಕಂಠಮಹಾಂತಸ್ವಾಮಿಗಳು ನಾಂದ್ಯರೂಪದಲ್ಲಿ ರಚಿಸಿದ 'ಮಹಾಂತ ಸ್ವಾಮಿಗಳು ನಿರೂಪಿಸಿದ ನಾಂದ್ಯ'ಕ್ಕೆ 'ಅಯ್ಯನವರ ನಾಂದ್ಯ', 'ಮುರಿಗೆಯ ಶಾಂತವೀರೇಶ್ವರನ ಪಂಚ ವಿಶಂತಿ ಸ್ತೋತ್ರ' ಎಂದೂ ಕರೆಯಲಾಗುತ್ತದೆ. ೨೫ ಷಟ್ಪದಿಗಳಲ್ಲಿ ಗುರು ಶಾಂತವೀರರ ಸ್ತುತಿಯನ್ನು

ಭಕ್ತಿಭಾವದಿಂದ ರಚಿಸಿದ್ದಾರೆ. ಪ್ರತಿ ಷಟ್ಪದಿಯಲ್ಲೂ ಶಾಂತವೀರ ಅಥವಾ ಮುರಿಗಿದೇವ ಎಂಬ ಅಂಕಿತ ಇರುತ್ತದೆ.

ಕಂಪಿನಂಜಯ್ಯ ನಾಂದ್ಯ ರೂಪದಲ್ಲಿ ರಚಿಸಿದ 'ಕಂಪಿನಂಜಯ್ಯನ ನಾಂದ್ಯ'ಕ್ಕೆ 'ಮುರಿಗೆಯ ಸ್ವಾಮಿಗಳ ಸ್ತೋತ್ರ ನಾಂದ್ಯ' ಎಂಬ ಭಿನ್ನ ಹೆಸರೂ ಉಂಟು. ೨೫ ಷಟ್ಪದಿಗಳಿರುವ ಈ ಕೃತಿಯ ವಸ್ತು ಗುರು ಮುರಿಗೆ ಶಾಂತವೀರರ ಸ್ತುತಿ.

೮. ಕಂದ :

ಕನ್ನಡ ಸಾಹಿತ್ಯದಲ್ಲಿ 'ಕಂದ' ಅತ್ಯಂತ ಪ್ರಚುರವಾದ ಮಾತ್ರಾ ಛಂದಸ್ಸಿನ ಬಂಧ. ಹಳಗನ್ನಡ ಸಾಹಿತ್ಯದಿಂದ ಹೊಸಗನ್ನಡ ಸಾಹಿತ್ಯದವರೆಗೆ ಇದರ ವ್ಯಾಪ್ತಿ ವೈವಿಧ್ಯಗಳು ಹಬ್ಬಿಕೊಂಡಿವೆ. ಪ್ರಾಚೀನ ಚಂಪೂ ಕೃತಿಗಳಲ್ಲಿ ಇದರದೇ ಮೇಲುಗೈ. ಇದು ಶಾಸ್ತ್ರಗಾರರಿಗೂ ಪ್ರಿಯವಾದ ಬಂಧವಾಗಿದೆ. ಕಾವ್ಯ, ಅಲಂಕಾರ, ವ್ಯಾಕರಣ, ನಿಘಂಟು, ಹಯಶಾಸ್ತ್ರ, ಶಕುನ ಶಾಸ್ತ್ರದಂತಹ ಗ್ರಂಥಗಳಲ್ಲೂ ಇದರ ಪ್ರಯೋಗವಾಗಿದೆ. ಕನ್ನಡದಲ್ಲಿ ಕಂದದ ಇತಿಹಾಸ ಪ್ರಾರಂಭವಾಗುವುದು ಶಾಸನಗಳಿಂದ. ನರಸಿಂಹರಾಜಪುರದ ಸಿಂಗಣಗದ್ದೆ ಜೈನಮಠದಲ್ಲಿ ದೊರೆತ ಗಂಗ ಶ್ರೀ ಪುರುಷನ ಕಾಲದ (೭೨೬-೭೭೮) ಎರಡು ಕಂದಗಳು ಈಗಿನ ಮಟ್ಟಿಗೆ ಕನ್ನಡ ಪ್ರಾಚೀನ ಕಂದಗಳು. ಕವಿರಾಜ ಮಾರ್ಗ ಕೃತಿಯ ನಂತರ ಕನ್ನಡ ಸಾಹಿತ್ಯದಲ್ಲಿ ಕಂದ ವಿಪುಲವಾಗಿ ಹಾಗೂ ಪ್ರಧಾನ ಛಂದಸ್ಸಾಗಿ ಬಳಕೆಯಾಗಿದೆ. ಕವಿರಾಜಮಾರ್ಗ ಕೃತಿಯಲ್ಲಿ ೪೧೮ ಕಂದ ಪದ್ಯಗಳಿವೆ. ಅನಂತರ ಪಂಪ, ಪೊನ್ನ, ರನ್ನ, ನಾಗವರ್ಮ, ಹರಿಹರ ಜನ್ನ ಅನೇಕ ಕವಿಗಳು ತಮ್ಮ ಕೃತಿಯಲ್ಲಿ ಕಂದವನ್ನು ಬಳಸಿದ್ದಾರೆ. ಇವರ ಸಾಲಿನಲ್ಲೇ ಮುರುಘಾ ಪರಂಪರೆಯ ಮುರಿಗೆ ಶಾಂತವೀರ ಕವಿಗಳು ೫೫ ಕಂದ ಪದ್ಯವನ್ನೊಳಗೊಂಡ "ಪ್ರಭುಲಿಂಗ ಕಂದ" ಎಂಬ ಕೃತಿ ರಚಿಸಿದ್ದಾರೆ. ಶಿವಯೋಗ ನಿರೂಪಣೆಯ ವಸ್ತುವನ್ನೊಳಗೊಂಡ ಈ ಕೃತಿಯಲ್ಲಿ ಪ್ರತಿ ಕಂದವೂ ಪ್ರಾಯಿಕವಾಗಿ 'ರಾಜಲಿಂಗ ಪ್ರಭುವೇ' ಎಂದು ಮುಗಿಯುತ್ತದೆ. ಈ ಕೃತಿಗೆ ಪರ್ವತ ಶಿವಯೋಗಿಗಳ (ಕ್ರಿ.ಶ. ೧೭೦೦) ಹಾಗೂ ಅಜ್ಞಾತ ಕೃತ ಟೀಕೆಗಳಿವೆ.

ಕೃತಿಯ ಪ್ರಾರಂಭ ಪದ್ಯ -

ಶ್ರೀ ಮತ್ಸಮಂತಮಂತ್ರ
ಸ್ತೋಮಪ್ರಭುಲಿಂಗ ರಾಜಕರಕಂಜ ಪುರ
ಸ್ವಾಮಿಸ್ವತಂತ್ರ ನಿಜ ನೀ -
ಸ್ಸೀಮಾತುಳ ಶಾಂತವೀರ ಶಿವ ಜಯರುದ್ರಾ

ಎಂದು ಆರಂಭವಾಗಿ ಪ್ರತಿಯೊಂದು ಕಂದಕ್ಕೂ ಟೀಕೆಯನ್ನು ಬರೆಯಲಾಗಿದೆ. ತಾತ್ಪರ್ಯವನ್ನು ಕೊಡಲಾಗಿದೆ. ಕೊನೆಯ ಪದ್ಯದಲ್ಲಿ ಪ್ರಭುಲಿಂಗ ಕಂದದ ಮಹಿಮೆಯ ಕುರಿತು ತಿಳಿಸಲಾಗಿದೆ. ಉದಾಹರಣೆಗಾಗಿ –

ಪ್ರಭುಲಿಂಗದ ಬಾವನ್ನದ
ಶುಭನುಡಿಗಳ ಪಠಿಸಿ ಕೋಪತಾಪನಿಷೇದಾ
ದಿಭವಪ್ರಕೃತಿಗಳಳಿದ
ವಿಭವದ ನಿಜಭಕ್ತಿ ಮುಕ್ತಿ ಸುಖಪದಮಕ್ಕುಂ

ಶಿವಯೋಗ ನಿರೂಪಣೆಯ ಜೊತೆಗೆ ಪ್ರಭುಲಿಂಗ ಕಂದ ಕೃತಿಯನ್ನು ಓದುವುದರಿಂದ ನಿಜವಾದ ಭಕ್ತಿ, ಮುಕ್ತಿ, ಸುಖ ಸಂಪತ್ತು ಪಡೆಯಬಹುದೆಂದು ಸಮಾಪ್ತಿ ಪದ್ಯದಲ್ಲಿ ಹೇಳಲಾಗಿದೆ.

೯. ಯಕ್ಷಗಾನ :

"ದೊಡ್ಡ ದೊಡ್ಡ ತತ್ವಗಳನ್ನು ಜನಸಾಮಾನ್ಯರಿಗೆ ಸರಳ, ಸುಲಭ ರೀತಿಯಲ್ಲಿ ಬೋಧಿಸುವ ಸಾಧನ ಮಾರ್ಗವೇ ಯಕ್ಷಗಾನ. ಯಕ್ಷಗಾನ ಪ್ರಾಚೀನಕಲೆ ಎಂಬ ಅಭಿಪ್ರಾಯವಿದ್ದರೂ ದೊರೆತ ಆಧಾರಗಳಿಂದ ಹೇಳುವುದಾದರೆ ೧೫-೧೬ನೇ ಶತಮಾನದಲ್ಲಿ ಯಕ್ಷಗಾನ ಉಗಮ ಹೊಂದಿದೆ. ಮುಖ್ಯವಾಗಿ ತಮ್ಮ ಧರ್ಮದ ತತ್ವ ವಿವೇಚನೆ, ಶೀಲನೀತಿಗಳನ್ನು ವಿವರಿಸುವ ಉದ್ದೇಶದಿಂದ ರಚಿತವಾದುದು. ವಿಶೇಷವಾಗಿ ವೀರಶೈವ ಕವಿಗಳು ಇದನ್ನು ವೀರಶೈವ ಧರ್ಮದ ತತ್ವಗಳನ್ನು ಅರ್ಥೈಸಲು ವೀರಶೈವ ಸಮಾಜ, ಸಂಸ್ಕೃತಿ ಮತ್ತು ಧರ್ಮದ ಘಟಕಗಳ ಪರಸ್ಪರ ಹೊಂದಾಣಿಕೆಯ ಸ್ವರೂಪವನ್ನು ರೂಪಿಸಲು ಉಪಯೋಗಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಶರಣರ ವಚನಗಳನ್ನು, ಜೀವನ ಚರಿತ್ರೆಗಳನ್ನು ಆಧಾರವಾಗಿರಿಸಿಕೊಂಡು ರಚಿಸಿದ ಅನೇಕ ಯಕ್ಷಗಾನ ಪ್ರಸಂಗಗಳಿವೆ. ಕಟ್ಟಿಗೆಹಳ್ಳಿ ಸಿದ್ಧಲಿಂಗನ ಮಡಿವಾಳಯ್ಯನವರ ಚರಿತ್ರೆ, ದುರದುಂಡೀಶನ ಪ್ರಭುದೇವರ ಯಕ್ಷಗಾನ, ಕಾರಭಾಸಗಿ ರೇವಣಸಿದ್ಧಯ್ಯ ಸ್ವಾಮಿಯ ಜಗಜ್ಯೋತಿ ಬಸವೇಶ್ವರ ಮೊದಲಾದ ಯಕ್ಷಗಾನ ಪ್ರಸಂಗಗಳಲ್ಲಿ ಶರಣರ ಜೀವನ ಚರಿತ್ರೆಯ ಮೂಲಕ ವೀರಶೈವ ಧರ್ಮದ ತತ್ವ ನೀತಿಗಳನ್ನು ಪ್ರತಿಪಾದಿಸಿದ್ದಾರೆ."[೪] ಈ ಪರಂಪರೆಯಲ್ಲಿ ಬರುವಂಥವರು ಮುರುಘಾ ಪರಂಪರೆಯ ಕವಿಗಳಾದ ಇಮ್ಮಡಿ ಮುರಿಗಾ ಗುರುಸಿದ್ಧರು ಬಿಜ್ಜಮಹಾದೇವಿ ಚಾರಿತ್ರ್ಯ ಮತ್ತು ಶಿವಜಲಂಧರ ಕೃತಿಗಳು ಇವರ ಯಕ್ಷಗಾನದ ಮಹತ್ವದ ಕೃತಿಗಳಾಗಿವೆ.

ಇಮ್ಮಡಿ ಮುರಿಗಾ ಗುರುಸಿದ್ಧರು ರಚಿಸಿದ ಬಿಜ್ಜಮಹಾದೇವಿ ಚಾರಿತ್ರ್ಯ ಅಪ್ರಕಟಿತ ಕೃತಿಯಲ್ಲಿ ಶಿವಶರಣೆ ಅಮ್ಮವ್ವೆಯ ಕಥೆ ಚಾರಿತ್ರ್ಯ ನಿರೂಪಿತವಾಗಿದೆ. ಇಲ್ಲಿ ಯಕ್ಷಗಾನ ರೂಪದಲ್ಲಿ ಶಿವಶರಣೆಯೊಬ್ಬಳ ಕೃತಿ ರಚಿಸಿರುವುದು ಮಹತ್ವಪೂರ್ಣವೆನಿಸಿದೆ. ಬಿಜ್ಜಾವರದ ಕದಿರಕಾಯಕದವಳಾದ ಅಮ್ಮವ್ವೆಯು ಶಿವನನ್ನೆ ಮಗನಾಗಿ ಪಡೆಯಲು ಬಯಸಿದಾಗ ಅವಳ

ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪ ಧರಿಸಿದ ಶಿವನು ಕಾಯಿಲೆಯಿಂದ ನರಳುವುದಕ್ಕೆ ಪ್ರಾರಂಭಿಸುವನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯನ್ನೆತ್ತಿ ಕೊರಳನ್ನು ಕತ್ತರಿಸಿಕೊಳ್ಳಲು ಮುಂದಾದಾಗ ಶಿವ ಪ್ರತ್ಯಕ್ಷನಾಗಿ ಅವಳನ್ನು ಕೈಲಾಸಕ್ಕೆ ಕರೆದೊಯ್ಯುವ ಸನ್ನಿವೇಶವನ್ನು ಸುಂದರವಾಗಿ ಚಿತ್ರಿಸಿದ್ದಾರೆ.[೫]

'ಶಿವಜಲಂಧರ' ಎಂಬ ಯಕ್ಷಗಾನವನ್ನು ಇಮ್ಮಡಿ ಮುರಿಗಾ ಗುರುಸಿದ್ಧರು ಚನ್ನಬಸವಪುರಾಣವನ್ನು ಆಧಾರವಾಗಿಟ್ಟುಕೊಂಡು ರಚಿಸಿದ್ದಾರೆ. ಅಪ್ರಕಟಿತವಾಗಿರುವ ಇದರ ಹಸ್ತಪ್ರತಿಯು ಧರ್ಮಸ್ಥಳದ ಹಸ್ತಪ್ರತಿಭಂಡಾರದಲ್ಲಿರುವುದಾಗಿ ತಿಳಿದುಬಂದಿದೆ.

೧೦. ಕೊರವಂಜಿ ಸಾಹಿತ್ಯ :

ಇಮ್ಮಡಿ ಮುರಿಗಾ ಗುರುಸಿದ್ಧರು ದೇಶಿರೂಪದಲ್ಲಿ ಬರೆದ ಮತ್ತೊಂದು ಲಘುಕಾವ್ಯ 'ಕೊರವಂಜಿ ಕಟ್ಟಳೆ'. ಕನ್ನಡ ಸಾಹಿತ್ಯದ ಪ್ರಕಾರಗಳಲ್ಲಿ ಕೊರವಂಜಿ ಸಾಹಿತ್ಯವು ಒಂದು. ಕೊರವಂಜಿ ಸಾಹಿತ್ಯಕ್ಕೆ ತನ್ನದೇ ಆದ ಪರಿಭಾಷೆಯಿದೆ. ತನ್ನದೇ ಆದ ಪ್ರತ್ಯೇಕ ವೈಶಿಷ್ಟ್ಯವಿದೆ. ಪ್ರಾಪಂಚಿಕ ಭಾಷೆಯಲ್ಲಿ ಪಾರಮಾರ್ಥಿಕ ಭಾವವನ್ನು ಪ್ರಕಟಿಸುವ ಪರಿಣತೆಯಿದೆ. ಕಾವ್ಯಗಳು ಉಪನಿಷತ್ತುಗಳು, ಪುರಾಣಗಳು ಸಾಧಿಸುವ ಗುರಿಯನ್ನು ಈ ಕೊರವಂಜಿ ಸಾಹಿತ್ಯವೊಂದೇ ಸಾಧಿಸಬಲ್ಲದು. ಸಾಂಸಾರಿಕ ದೃಶ್ಯಗಳನ್ನು ದೈವಿಸ್ವರೂಪಕ್ಕೆ ರೂಪಿಸುವ ಅನುಭಾವಿಕ ಕೌಶಲ್ಯವಿದೆ. ಜೀವಭಾವಗಳಲ್ಲಿ ಶಿವಾನುಭಾವವನ್ನು ತುಂಬುವ ಶಕ್ತಿಯಿದೆ.[೬]

ಕೊರವಂಜಿ ಸಾಹಿತ್ಯವನ್ನು ಸೃಷ್ಟಿಸಿದವರು ಶಿವಕವಿಗಳು, ಶಿವಾನುಭಾವಿಗಳು. ಶಿವನ ಒಲುಮೆಗಾಗಿ ಉಗ್ರ ತಪಸ್ಸು ಮಾಡುತ್ತಿರುವ ಗಿರಿಜೆಯನ್ನು ಪರೀಕ್ಷಿಸಲು ಶಿವನು ತಳೆದ ಹಲವಾರು ವೇಷಗಳಲ್ಲಿ ಕೊರವಂಜಿ ವೇಷವೂ ಒಂದು. ತತ್ವದ ತಳಹದಿಯ ಮೇಲೆ ಜೀವನದ ಹಲವು ಬಗೆಗಳನ್ನು ರೂಪಿಸುವುದೇ ಈ ಸಾಹಿತ್ಯದ ವೈಶಿಷ್ಟ್ಯವಾಗಿದೆ. ಈ ಸಾಹಿತ್ಯದ ಅಂಶಗಳನ್ನು ಇಮ್ಮಡಿ ಮುರಿಗಾ ಗುರುಸಿದ್ಧರ 'ಕೊರವಂಜಿ ಕಟ್ಟಳೆ' ಕೃತಿಯಲ್ಲಿ ಕಾಣಬಹುದಾಗಿದೆ. ಪ್ರಸ್ತುತ ಕೃತಿಯಲ್ಲಿ ಗುರುಶಾಂತೇಶ್ವರನೇ ಕೊರವಂಜಿ ವೇಷದಲ್ಲಿ ಕಲ್ಯಾಣಪುರಕ್ಕೆ ಬಂದು ಶರಣ ಸತಿಯರಿಗೆ ಕಣಿ ಹೇಳುವ ರೀತಿಯಲ್ಲಿ ವೀರಶೈವ ಧರ್ಮತತ್ವಗಳನ್ನು ಹೇಳುವಂತೆ ನಿರೂಪಿಸಲಾಗಿದೆ. ಕೃತಿಯು ಗದ್ಯ-ಪದ್ಯ ಮಿಶ್ರವಾಗಿದೆ. ಪದ್ಯಗಳು ರಾಗ-ತಾಳ ಸಮನ್ವಿತವಾಗಿವೆ. ಗದ್ಯಕ್ಕೆ ವಚನವೆಂದು ಕರೆಯಲಾಗಿದೆ. ಆರಂಭದಲ್ಲಿ ಶಿವಸ್ತುತಿ ಇದೆ. ಲಿಂಗಪತಿಯಾದ ಶಾಂತವೀರರು ಕಲ್ಯಾಣದ ಶರಣ ಸತಿಯರಿಗೆ ವೀರಶೈವ ತತ್ವವನ್ನು ಬೋಧಿಸಿದ ವಿವರ ಈ ಕೃತಿಯ ವಸ್ತುವಾಗಿದೆ. ಅಂತ್ಯದಲ್ಲಿ ಗುರುಮುಖದಿಂದ ಇದನ್ನು ಅರಿತು ಅರ್ಥೈಸಿಕೊಂಡವರು ಶಿವಲಿಂಗದಲ್ಲಿ ಒಂದಾಗುವರೆಂಬ ಫಲಶೃತಿ ಇದೆ. ಕೃತಿಯ ಪ್ರಾರಂಭದಲ್ಲಿ ಬರುವ ಕೊರವಂಜಿಯ ವರ್ಣನೆ ಹೀಗಿದೆ –

ಉರವನಪ್ಪಿದೆ ಕೂಸು ಸೀರೆಯನುಟ್ಟು ಬಿಗಿದು
ತುರಬಿನೊಳಿರದೆ ಮಲ್ಲಿಗೆಯರಲಮಾಲೆಯ ತಳೆದು ನಯದೆ,
ಕಣ್ಗೊಳಂಜನರೇಖೆಯನು ತಾನೊಲಿದು ತಿರ್ದಿ ನೊಸಲೊಳು
ಸಣ್ಣನಹ ಸಿತಭಸಿತ ತಿಲಕವನಾಂತು ಮತ್ತೆ . . . .

ಬಲಗೈಯಲ್ಲಿ ನಾಗಬೆತ್ತವನು ಹಿಡಿದು ಕಲ್ಯಾಣಪುರಕೆ ಬಂದು ಶರಣಸತಿಯರ ಮನೆಮುಂದೆ ನಿಂತು 'ಎಳೆಯ ಅವ್ವಗಳಿರಾ' ಎಂದು ಸ್ನೇಹದಿಂದ ಅವರನ್ನು ಕರೆದು 'ಕೈಯ ನೋಡುವೆನಿಲ್ಲಿ ಬಾರೆ ನಿನ್ನ ಮೈಯೊಳಿರ್ದುದ ಪೇಳ್ವೆ' ಎನ್ನುತ್ತಾ 'ಮಾದೇವಿ'ಗೆ ಕಣಿ ಹೇಳಲು ಪ್ರಾರಂಭಿಸವಳು.

ಇಮ್ಮಡಿ ಮುರಿಗಾ ಗುರುಸಿದ್ಧರು ಜನಸಾಮಾನ್ಯರಿಗೆ ತಿಳಿಯುವ ಹಾಗೆ ಕೊರವಂಜಿ ಭಾಷೆಯಲ್ಲಿ ವೀರಶೈವ ಷಟ್‌ಸ್ಥಲ ತತ್ವಗಳನ್ನು ಹೇಳಿರುವುದು ವೈಶಿಷ್ಟ್ಯಪೂರ್ಣವೆನಿಸಿದೆ.

೧೧. ನಿಘಂಟು :

ನಿಘಂಟು ಅಥವಾ ಕೋಶ ಎಂದರೆ 'ಶಬ್ದಗಳ ಸಂಗ್ರಹ' ಎಂದು ಹೇಳಬಹುದು. "ಕೋಶ ಶಬ್ದ ಪರ್ಯಾಯ ಜ್ಞಾಪಕ ಗ್ರಂಥ' ಎಂದು ಮೇದಿನಿಕಾರನೂ, "ಏಕಾರ್ಥವಾಚಿನಾಂ ಪರ್ಯಾಯ ಶಬ್ದಾನಾಂ ಸಂಘ ; ಯತ್ರಪ್ರಾಯೇಣಉಪದಿಶ್ಯತೇ ತತ್ವ ನಿಘಂಟು ಶಬ್ದಃ ಪ್ರಸಿದ್ಧ" ಎಂದು ಸಾಯಣನೂ ನಿಘಂಟು ಪದದ ಅರ್ಥವನ್ನು ವಿವರಿಸಿದ್ದಾನೆ.[೭]

ಕೋಶಕ್ಕೆ ಭಾರತದಲ್ಲಿ ಐತಿಹಾಸಿಕ ಪ್ರಾಚೀನತೆ ಮಾತ್ರವಲ್ಲದೆ ಅನ್ಯಾದೃಶ್ಯವಾದ ಒಂದು ವಿಶಿಷ್ಟಸ್ಥಾನವೂ ದೊರೆತಿದೆ. ಕನ್ನಡದಲ್ಲಿಯೂ ಇದಕ್ಕೆ ತನ್ನದೇ ಆದ ಪರಂಪರೆಯಿದೆ. ಕ್ರಿ.ಶ. ೧೦ನೆಯ ಶತಮಾನದ 'ರನ್ನ' ಕವಿಯ 'ರನ್ನಕಂದ' ಕನ್ನಡ ಭಾಷೆಯಲ್ಲಿ ರಚಿತವಾದ ಮೊದಲ ನಿಘಂಟು. ಇದರಲ್ಲಿ ೪೫ ಪದ್ಯಗಳಿವೆ. ಇವುಗಳಲ್ಲಿ ನಾಲ್ಕು ಚಂಪಕಮಾಲಾ ವೃತ್ತಗಳನ್ನು ಬಿಟ್ಟರೆ ಉಳಿದೆಲ್ಲವು ಕಂದಪದ್ಯಗಳು. ಪ್ರತಿಯೊಂದು ಪದ್ಯವು 'ಕವಿರತ್ನಾ' ಎಂದು ಮುಗಿಯುತ್ತದೆ.

೧೨೬೦ರಲ್ಲಿದ್ದ ಕೇಶಿರಾಜನು ರಚಿಸಿದ 'ಶಬ್ದಮಣಿದರ್ಪಣ' ಎಂಬ ವ್ಯಾಕರಣ ಗ್ರಂಥ. ಇದರಲ್ಲಿ ೧೮೧ ಶಬ್ದಗಳಿಗೆ ನಾನಾರ್ಥಗಳನ್ನು, ೯೮೫ ಧಾತುಗಳ ಅರ್ಥವನ್ನು ೨೩೩ ಪ್ರಾಚೀನ ಕವಿಗಳು ಉಪಯೋಗಿಸುವ ಅರ್ಥವನ್ನು ಹೀಗೆ ಒಟ್ಟು ೧೩೯೯ ಶಬ್ದಗಳಿಗೆ ಅರ್ಥ ಸೂಚಿಸಲಾಗಿದೆ.

೧೪೦೦ರಲ್ಲಿ ರಚಿತವಾದ 'ಕರ್ನಾಟಕ ನಿಘಂಟು'ವಿನ ಕರ್ತೃ ಯಾರೆಂದು ತಿಳಿದುಬಂದಿಲ್ಲ. ೯೮ ಪದ್ಯಗಳಲ್ಲಿ ವಿವಿಧ ಛಂದಸ್ಸಿನಲ್ಲಿ ಮೊದಲ ಸಲ 'ಕೋಶ' ಶಬ್ದಕ್ಕೆ ಬದಲಾಗಿ "ನಿಘಂಟು"

ಎಂಬ ಶಬ್ದವನ್ನು ಪ್ರಯೋಗಿಸಿದೆ. ಈ ನಿಘಂಟು ಪದ್ಯರೂಪದಲ್ಲಿದ್ದು ೧೪೧೬ ಶಬ್ದಗಳ ಅರ್ಥಗಳನ್ನು ಇಲ್ಲಿ ಪರಿಚಯಿಸಲಾಗಿದೆ.

ಬೊಮ್ಮರಸನ 'ಚತುರಾಸ್ಯ ನಿಘಂಟು; ಹಿಂದೆ ವಿದ್ವಾಂಸರು ವಿಶೇಷವಾಗಿ ಉಪಯೋಗಿಸುತ್ತಿದ್ದ ನಿಘಂಟು. ಇದರಲ್ಲಿ ಸುಮಾರು ೨೧೩ ಕಂದ ಪದ್ಯಗಳಿವೆ. ಇದಾದ ನಂತರ ಸುಮಾರು ನೂರು ವರ್ಷಗಳ ತರುವಾಯ ಲಿಂಗಮಂತ್ರಿಯೆಂಬ ವಿದ್ವಾಂಸರು ೧೦೦ ವಾರ್ಧಕ ಷಟ್ಪದಿಯಲ್ಲಿ 'ಕಬ್ಬಿಗರ ಕೈಪಿಡಿ' ಎಂಬ ನಿಘಂಟನ್ನು ರಚಿಸಿರುವನು. ಪ್ರಥಮ ಬಾರಿಗೆ ನಿಘಂಟಿಗೆ ಷಟ್ಪದಿಯನ್ನು ಉಪಯೋಗಿಸಿದ ಕೀರ್ತಿ ಈತನದು.

ಕ್ರಿ.ಶ. ೧೬ನೆಯ ಶತಮಾನದಲ್ಲಿ ವಿರಕ್ತ ತೋಂಟದಾರ್ಯನು ರಚಿಸಿದ 'ಕರ್ನಾಟಕ ಶಬ್ದಮಂಜರಿ' ಎಂಬುದು ಹಳಗನ್ನಡ ಪದಗಳ ನಿಘಂಟು. ವೀರಶೈವ ಕವಿಗಳ ಗ್ರಂಥಗಳಲ್ಲಿ ಬರುವ ಕನ್ನಡ ಪದಗಳನ್ನೂ ತತ್ಸಮ, ತದ್ಭವಗಳನ್ನೂ ಆಯಾ ಕವಿಗಳ ಉದಾಹರಣೆಗಳನ್ನು ಒಟ್ಟು ೧೨೦ ವಾರ್ಧಕ ಷಟ್ಪದಿಯಲ್ಲಿ ಸೆರೆ ಹಿಡಿದಿಟ್ಟಿದ್ದಾನೆ.

೧೬ನೆಯ ಶತಮಾನದಲ್ಲಿ ಮತ್ತೆರಡು ನಿಘಂಟುಗಳು ಸಿದ್ಧವಾದವು. ೧) ಶೃಂಗಾರ ಕವಿಯ 'ಕರ್ನಾಟಕ ಸಂಜೀವನಂ'. ೩೫ ಪದ್ಯಗಳೂ ಇವೆ. ೨) 'ಭಾರತ ನಿಘಂಟು' ಕುಮಾರ ವ್ಯಾಸಭಾರತದಲ್ಲಿ ಬರುವ ಅಪ್ಪಪದಗಳಿಗೆ ಅರ್ಥಗಳನ್ನು ಸೂಚಿಸುವ ೬೭ ಪದ್ಯಗಳ ನಿಘಂಟು ಇದಾಗಿದೆ. ದೇಶಿಯ ಪದಗಳ ಅರ್ಥವನ್ನು ತಿಳಿಸುವ ಇವೆರಡೂ ಮುಖ್ಯವಾದ ನಿಘಂಟುಗಳಾಗಿವೆ.

ಕ್ರಿ.ಶ. ೧೭ನೆಯ ಶತಮಾನದಲ್ಲಿದ್ದ ಸೂರ್ಯಕವಿಯು ರಚಿಸಿದ ೨೭೧ ಕಂದ ಪದ್ಯಗಳ 'ಕವಿ ಕಂಠಹಾರ' ಪ್ರಾಚೀನ ಕನ್ನಡ ನಿಘಂಟುಗಳಲ್ಲಿ ಒಂದಾಗಿದೆ.[೮]

ಇವರೆಲ್ಲರ ನಂತರದಲ್ಲಿ ನಿಘಂಟುವಿನ ರಚನಾಕಾರರ ಸ್ಥಾನ ದೊರೆತಿರುವುದು ಮುರುಘಾ ಪರಂಪರೆಯ ಕವಿಗಳಾದ ಮುರಿಗೆಯ ಶಾಂತವೀರರಿಗೆ ಹಾಗೂ ಇಮ್ಮಡಿ ಮುರಿಗಾ ಗುರುಸಿದ್ಧರಿಗೆ. ಈ ಇಬ್ಬರೂ ಕವಿಗಳು 'ಶಬ್ದರತ್ನಾಕರ' ಎಂಬ ನಿಘಂಟು ರಚಿಸಿದ್ದಾರೆ. ಶಬ್ದರತ್ನಾಕರ ಹೆಸರೇ ಸೂಚಿಸುವಂತೆ ಶಬ್ದವೆಂಬ ರತ್ನಗಳಿಗೆ ನಾನಾರ್ಥಗಳನ್ನು ಸೂಚಿಸುವ ಒಂದು ಸಾಗರ. ಇದರಲ್ಲಿ ೩೦ ಕಂದಪದ್ಯಗಳಿದ್ದು, ಸುಮಾರು ೧೬ ಶಬ್ದಗಳಿಗೆ ನಾನಾರ್ಥಗಳನ್ನು ಸೂಚಿಸಿದ್ದಾರೆ. ಪ್ರತಿ ಪದ್ಯ 'ಶಬ್ದಾಗಮದೊಳ್' ಎಂದು ಮುಕ್ತಾಯವಾಗುತ್ತದೆ. ಒಂದೊಂದು ಶಬ್ದಕ್ಕೆ ವಿವಿಧಾರ್ಥ, ಪರ್ಯಾಯಾರ್ಥಗಳನ್ನು ಸೂಚಿಸುವುದು ಇವರ ಕೋಶಗಳ ಉದ್ದೇಶವಾಗಿದೆ. ಇಲ್ಲಿ ಬರುವ ೧೬ ಪದಗಳು ಅವುಗಳಿಗೆ ಕೊಟ್ಟ ವಿವಿಧ ಅರ್ಥಗಳ ವಿವರ ಕೆಳಗಿನಂತಿವೆ –

ಕಮಲಮೆನೆ ಭುವನಮಕ್ಕುಂ
ಕಮಲಂ ಜಲ ಸೂರ್ಯ ಶಶಿಯು ಕರಿಹಯಮಕ್ಕುಂ

ಕಮಲಮೆನೆ ಕುಮುದಮಕ್ಕುಂ

ಕಮಲಾ ತಾ ಕಮಲಮಕ್ಕು ಶಬ್ದಾಗಮದೊಳ್

ಇಲ್ಲಿ ಕಮಲ ಎಂಬ ಒಂದೇ ಶಬ್ದಕ್ಕೆ ೧೭ ಅರ್ಥಗಳನ್ನು ಕೊಡಲಾಗಿದೆ. ಇವುಗಳಲ್ಲಿ ವಾಚ್ಯಾರ್ಥ, ಉಪಮಾರ್ಥ, ಬೆಡಗಿನಾರ್ಥ ಹಾಗೂ ಸಂದರ್ಭಾರ್ಥಗಳು ಸಮಾವೇಶವಾಗಿವೆ. ಹೀಗೆ ೧೬ ಪದಗಳಿಗಾಗಿ ವಿವಿಧಾರ್ಥಗಳನ್ನು ಕೊಡಲಾಗಿದೆ.

ಉದಾಹರಣೆಗಾಗಿ –

೧) ಕಮಲ– ಭುವನ, ಜಲ, ಸೂರ್ಯ, ಶಶಿ, ಕರಿ, ಹಯ, ಕರ, ಕುಮುದ, ತುಂಬಿ, ಬಳಿ, ಕದನ, ಗಿರಿ, ದನ, ಕಾಂತಿ ಇತ್ಯಾದಿ.

೨) ಕುಮುದ– ಸೂರ್ಯ, ಜಲ, ಶಶಿ, ಸಿಂಹ, ಕಣ್ಣು, ಕೊಳ, ವನಗಿರಿ, ಶುಭ್ರ, ಕೋಗಿಲೆ, ಸತಿ–ಪುರುಷರು.

೩) ಕರಿ– ಕಣ್ಣುಗಿರಿ, ಕಾಂತಿ, ಹಯ, ಗಜ, ಕಪ್ಪು, ಕನ್ನಡಿ, ಕಮಲ, ಕಸ್ತೂರಿ, ಸರ್ಪ, ಕೀರ್ತಿ.

೪) ಕಂಕಣ– ಕಣ್ಣು, ಉದಕ, ಬಳಿ, ಕಾಂತಿ, ಮುಡಿ, ಕದನ, ಕಡಗ, ನವಿಲು, ಕಾರ್ಯ

ಹೀಗೆ ಕಮಲ, ಕುಮುದ, ಕರಿ, ಕಂಕಣ, ಅಮೃತ, ದಳ, ಸುರುಚಿರ, ಶ್ರೀಧರ, ವನ, ಭೀಮ, ಸೋಮ, ಅಕ್ಷಯ, ಬಾಣ, ಮಂಡಿ, ಆರಡಿ, ಅಜ ೧೬ ಶಬ್ದಗಳಿಗೆ ನಾನಾರ್ಥಗಳನ್ನು ಸೂಚಿಸಿದ್ದಾರೆ.

೧೨. ಟೀಕಾಸಾಹಿತ್ಯ :

ಕೃತಿಯ ಹೃದಯವನ್ನು ತೆರೆದು ತೋರಿಸುವ ಸಾಹಿತ್ಯ ರೂಪವೇ ಟೀಕಾಸಾಹಿತ್ಯ ಇದರಲ್ಲಿ ಅನೇಕ ವಿಧಾನಗಳಿವೆ. ಅವುಗಳಿಗೆ ಟೀಕೆ, ಟಿಪ್ಪಣಿ, ವ್ಯಾಖ್ಯಾನ, ಭಾಷ್ಯ ವಿವರಣೆ ಎಂದು ಹೆಸರುಗಳಿವೆ. ಭಾರತೀಯ ಸಾಹಿತ್ಯದಲ್ಲಿ ಪ್ರಾಕೃತ ಕೃತಿಗಳಿಗೆ ಬರೆದ ಟೀಕಾ ಸಾಹಿತ್ಯ ವಿಪುಲವಾಗಿ ದೊರೆಯುತ್ತದೆ. ಉದಾ: ಪಂತಜಲಿಯ ಮಹಾಭಾಷ್ಯ, ಸಾಯಣಾಚಾರ್ಯರ ವೇದಭಾಷ್ಯ ಇತ್ಯಾದಿ. ಹಾಗೆಯೇ ಕನ್ನಡದಲ್ಲಿಯೂ ಟೀಕಾಸಾಹಿತ್ಯ ವಿಪುಲವಾಗಿ ದೊರೆಯುತ್ತದೆ.

ವಾತುಲತಂತ್ರ ಟೀಕೆ, ವೀರಮಾಹೇಶ್ವರಾಚಾರ ಸಾರೋದ್ಧಾರ ಟೀಕೆ, ಸಿದ್ಧಾಂತ ಶಿಖಾಮಣಿ ಟೀಕೆ, ಶಿವಯೋಗ ಪ್ರದೀಪಿಕೆ ಟೀಕೆ, ಶ್ರೀ ರುದ್ರಭಾಷ್ಯಟೀಕು, ಶಿವಾನುಭವ ಸೂತ್ರ ಟೀಕು, ಸಾರಸ್ವತ ವ್ಯಾಕರಣ ಟೀಕು, ಪುರುಷಸೂಕ್ತ ಟೀಕು, ಕೈವಲ್ಯಸಾರ ಟೀಕು, ಯಜುರ್ವೇದ ಭಾಷ್ಯ ಟೀಕು, ವೀರಮಾಹೇಶ್ವರಾಚಾರ ಸಂಗ್ರಹ ವ್ಯಾಖ್ಯಾನ, ವಿಶೇಷಾರ್ಥ ಪ್ರಕಾಶಿಕೆ ಟೀಕು, ಮಲಯರಾಜ ಸ್ತೋತ್ರ ಟೀಕು, ಮಲ್ಹಣ ಸ್ತೋತ್ರ ಟೀಕು, ಮಹಿಮ್ನ ಸ್ತೋತ್ರ ಟೀಕು ಇತ್ಯಾದಿ ಟೀಕಾ ಗ್ರಂಥಗಳು

ವೀರಶೈವರಿಂದ ಹುಟ್ಟಿಕೊಂಡಿವೆ. ಅದರಲ್ಲಿಯೂ ವೀರಶೈವದ ದ್ವಿತೀಯ ಘಟ್ಟದ ನೂರೊಂದು ವಿರಕ್ತರ ಮತ್ತು ಏಳನೂರೊಂದು ವಿರಕ್ತರ ಅವಧಿಯಲ್ಲಿ ವಿಪುಲವಾಗಿ ಬೆಳೆಯಿತು.

ಶರಣರ ವಚನಗಳನ್ನು ಅದರಲ್ಲಿಯೂ ಬೆಡಗಿನ ವಚನಗಳನ್ನು ಸಾಮಾನ್ಯರಿಗೆ ಅರ್ಥೈಸಿಕೊಡುವ ಪ್ರಯತ್ನವನ್ನು ಟೀಕಾ ಸಾಹಿತ್ಯ ಮಾಡುತ್ತದೆ. ಹೀಗೆ ವಚನಗಳಿಗೆ ಟೀಕೆ ಬರೆಯುವ ಸಂಪ್ರದಾಯ ಮುಂದುವರೆದಂತೆ ನಂತರದಲ್ಲಿ ವೀರಶೈವ ಕಾವ್ಯಶಾಸ್ತ್ರಗಳಿಗೂ ಟೀಕೆ ಬರೆಯುವುದು ಬೆಳೆದು ಬಂದಿತು. ಟೀಕಾಸಾಹಿತ್ಯದಲ್ಲಿ – ಪ್ರಭುದೇವರ ಟೀಕಿನ ವಚನ, ಬೆಡಗಿನ ವಚನ ಟೀಕೆ, ಅಕ್ಕಮಹಾದೇವಿಯ ಸೃಷ್ಟಿಯ ವಚನ ಟೀಕು, ಚೆನ್ನಬಸವೇಶ್ವರನ ಪದ ಮಂತ್ರಗೋಪ್ಯ ಟೀಕೆ, ಪ್ರಭುದೇವರ ಸೃಷ್ಟಿಯ ವಚನ ಟೀಕೆ, ಚೆನ್ನಬಸವೇಶ್ವರನ ಕರಣಹಸಿಗೆ ಟೀಕೆ, ಪ್ರಭುದೇವರ ಮಂತ್ರ್ಯಗೋಪ್ಯ ಟೀಕು, ಚೆನ್ನಬಸವೇಶ್ವರನ ಮಿಶ್ರಾರ್ಪಣ ಟೀಕು, ಬಸವಣ್ಣನವರ ವಚನ ಟೀಕು, ಷಟ್ಸ್ಥಲ ಜ್ಞಾನಸಾರಾಮೃತದ ಬೆಡಗಿನ ವಚನದ ಟೀಕು, ಬಸವರಾಜ ದೇವರ ಷಟ್ಸ್ಥಲ ವಚನದ ಬೆಡಗಿನ ಟೀಕು, ಲಿಂಗಲೀಲಾ ವಿಲಾಸ ಗ್ರಂಥದ ವ್ಯಾಖ್ಯಾನ, ಏಕೋತ್ತರ ಶತಸ್ಥಲ ಟೀಕೆ, ಮನೋವಿಜಯವ್ಯಾಖ್ಯಾನ, ಶಬ್ದಮಣಿ ದರ್ಪಣ ಟೀಕೆ ಇನ್ನೂ ಮುಂತಾದ ಕೃತಿಗಳು ಬಂದಿವೆ. ಈ ರೀತಿಯಾಗಿ ಬೆಳೆದು ಬಂದ ಟೀಕಾ ಸಾಹಿತ್ಯ ಪರಂಪರೆಯಲ್ಲಿ ಮುರುಘಾ ಪರಂಪರೆಯ ಕವಿಗಳು ಪ್ರಮುಖವಾದ ಸ್ಥಾನವನ್ನು ಪಡೆದಿದ್ದಾರೆ.

ಮುರುಘಾ ಪರಂಪರೆಯಲ್ಲಿಯೇ ಉನ್ನತ ಮಟ್ಟದ ಟೀಕಾಕಾರನಾಗಿದ್ದ ಸೋಮಶೇಖರ ಶಿವಯೋಗಿಯು ಬಸವಣ್ಣನವರ ಷಟ್ಸ್ಥಲ ವಚನ ಸಂಪುಟದಿಂದ ೩೪೭ ಬೆಡಗಿನ ವಚನಗಳನ್ನಾಯ್ದು ಟೀಕೆ ಬರೆದುದು "ಸಚ್ಚಿದಾನಂದ ನಿತ್ಯ ಪರಿಪೂರ್ಣ ಅವಿರಳ ಪರಂಜ್ಯೋತಿ ಲೀಲಾವಿಗ್ರಹ ಮೂರ್ತಿಯಾದ ಶ್ರೀ ಸೋಮಶೇಖರ ಲಿಂಗಚರಣಾರವಿಂದ ಮಕರಂದ – ಸಪಾನ ಮತ್ತ ಮಧುಕರಾಯಮಾನ ಸೋಮಶೇಖರ ಶಿವಯೋಗಿ ಕೃತ ಬಸವರಾಜದೇವರ ಷಟ್ಸ್ಥಲದ ವಚನದ ಬೆಡಗಿನ ಟೀಕು ಪರಿಸಮಾಪ್ತ ಮಂಗಳ ಮಹಾಶ್ರೀ ಶ್ರೀ ......" ಎಂಬ ಗದ್ಯ ಖಂಡದಿಂದ ಸ್ಪಷ್ಟವಾಗುತ್ತದೆ. ತೀರ ಕ್ವಚಿತ್ತಾಗಿ ಒಂದು ವಚನಕ್ಕೆ ಎರಡು ಅರ್ಥ ಬರೆದುದೂ ಕಂಡುಬರುತ್ತದೆ. (೯೨೯). ಸಾಮಾನ್ಯವಾಗಿ ಪ್ರತಿಪದಾರ್ಥ ಬರೆದ ಇಲ್ಲವೆ ವ್ಯಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ಟೀಕಾ ಲೇಖನ ಪದ್ಧತಿಯನ್ನು ಇಟ್ಟುಕೊಂಡರೂ ಕೆಲವು ಸಲ ಇವುಗಳ ಮಿಶ್ರಣವೂ ಎಡೆಪಡೆದಿದೆ.

ಸೋಮಶೇಖರ ಶಿವಯೋಗಿ ತೋಂಟದ ಸಿದ್ಧಲಿಂಗರ ೭೦೧ ವಚನಗಳಲ್ಲಿ ೧೫೨ ಬೆಡಗಿನ ವಚನಗಳನ್ನು ಮಾತ್ರ ಆಯ್ದುಕೊಂಡು ಟೀಕೆಯನ್ನು ಬರೆದಿದ್ದಾನೆ. ಆಯಾ ಸ್ಥಲಗಳಿಂದ ಆಯ್ದುಕೊಂಡ ವಚನಗಳ ಸಂಖ್ಯಾ ವಿವರ ಹೀಗಿದೆ – ಪಿಂಡಜ್ಞಾನ ಸ್ಥಲ–೧೫, ಸಂಸಾರಹೇಯಸ್ಥಲ–೨೦, ಮಹೇಶ್ವರಸ್ಥಲ–೧, ಪ್ರಸಾದಿಸ್ಥಲ–೭, ಪ್ರಾಣಲಿಂಗಿಸ್ಥಲ–೫೬, ಶರಣಸ್ಥಲ–೨೮, ಐಕ್ಯಸ್ಥಲ–೨೫.

ಇಲ್ಲಿ ಆರಂಭದಲ್ಲಿ ವಚನಗಳ ಪೂರ್ಣ ಪಾಠವನ್ನು ಕೊಡದೆ ಒಮ್ಮೆಲೆ ಅದರಲ್ಲಿನ ವಾಕ್ಯಗಳನ್ನು ಎತ್ತಿಕೊಂಡು ಟೀಕೆಯನ್ನು ಬರೆಯುತ್ತಾ ಸಾಗಲಾಗಿದೆ. ಇದು ಮುಖ್ಯವಾಗಿ ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ಟೀಕೆಯಾಗಿದೆ. ಕ್ವಚಿತ್ತಾಗಿ ಒಂದೆರಡು ವಚನಗಳಲ್ಲಿ ಪಾತ್ರ ಕೆಲವು ಪದಗಳಿಗೆ ಪ್ರತಿಪದಾರ್ಥ ಟೀಕೆಯನ್ನೂ ಬರೆಯಲಾಗಿದೆ. (೧೫೪, ೫೬೪) ವಾಕ್ಯವನ್ನು ಹಿಮ್ಮೆಟ್ಟಿಸಿ ಬರೆದ ಟೀಕೆಯಲ್ಲಿ ಕೆಲವು ವಾಕ್ಯಗಳಿಗೆ ಎರಡು ಅರ್ಥವನ್ನು ಬರೆದುದುಂಟು (೧೨೫, ೧೪೩, ೩೨೨, ೩೯೯, ೩೭೯, ೪೩೪). ಎರಡನೆಯ ಅರ್ಥ ಬರೆಯುವುದಕ್ಕಿಂತ ಮೊದಲು 'ಮತ್ತಂ' ಎಂಬ ಪದ ಬಳಸಲಾಗಿದೆ. ಇನ್ನು ಕೆಲವು ವಚನಗಳಿಗೆ ಕೇವಲ ತಾತ್ಪರ್ಯಾರ್ಥ ಬರೆಯಲಾಗಿದೆ (೨೨೮, ೩೯೧, ೬೦೧). ಇಲ್ಲಿ ತಾತ್ಪರ್ಯಾರ್ಥ ಎಂದರೆ ಇಡೀ ವಚನಕ್ಕೆ ಬರೆದ ಸಾರರೂಪದ ಟೀಕೆ ಎಂಬುದಾಗಿದೆ. ಇದರ ಕೊನೆಯಲ್ಲಿ 'ಎಂಬುದೀ ವಚನದ ತಾತ್ಪರ್ಯಾರ್ಥ' ಎಂದು ಬರೆಯಲಾಗಿದೆ.

೩) ಭಾಷೆ :

ಮನುಷ್ಯನಿಗೆ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಇರುವ ಏಕೈಕ ಮಾಧ್ಯಮ ಎಂದರೆ ಭಾಷೆ. ಅದು ನಮ್ಮ ಸಂಸ್ಕೃತಿಯ ಮುಖ್ಯವಾಹಕವಾಗಿದೆ. ಭಾಷೆ ಕೇವಲ ವ್ಯವಹಾರ ಸಾಧನ ಮಾತ್ರವಲ್ಲ. ಅದು ಸಾಹಿತ್ಯ-ಆಧ್ಯಾತ್ಮ ಅನುಭಾವ ಮಾಧ್ಯಮವೂ ಆಗಿ ಕಾರ್ಯ ಮಾಡುತ್ತದೆ. ಭಾಷಾ ವ್ಯವಸ್ಥೆಯಲ್ಲಿ ಒಡಮೂಡುವ ಕಲೆಯೇ ಸಾಹಿತ್ಯವಾಗಿದೆ.

ಸಾಹಿತ್ಯದಲ್ಲಿ ಭಾಷೆಯ ಬಳಕೆ-ಭಾವಾಭಿವ್ಯಕ್ತಿಯ ಯೋಗ್ಯ ಸಾಧನವಾಗಿದೆ. ಕವಿಗೆ ತನ್ನ ಭಾವಾನುಭಾವಗಳನ್ನು, ಭಾವಾವೇಶಗಳನ್ನು ವ್ಯಕ್ತಪಡಿಸಲು ಭಾಷೆ ಸಹಾಯಕವಾಗುತ್ತದೆ. ನಿತ್ಯಪರಿವರ್ತನಾಶೀಲವಾದ ಅದು ಆಯಾ ಕಾಲಘಟ್ಟದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತದೆ.

ಈ ಹಿನ್ನೆಲೆಯಲ್ಲಿ ಮುರುಘಾ ಪರಂಪರೆಯ ಕವಿಗಳ ಭಾಷಾ ಪ್ರಯೋಗವನ್ನು ಗಮನಿಸಿದರೆ ಅವರು ಉಭಯಭಾಷಾ ವಿಶಾರದರಾಗಿದ್ದ ಅವರು ಮಾರ್ಗ-ದೇಶಿ ಭಾಷೆಗಳೆರಡನ್ನು ತಮ್ಮ ಕಾವ್ಯಗಳಲ್ಲಿ ಬಳಸಿಕೊಂಡಿದ್ದಾರೆ. ಚಂಪೂ, ಷಟ್ಪದಿಯಂಥ ದೀರ್ಘ ಕಾವ್ಯಗಳಲ್ಲಿ ಸಂಸ್ಕೃತ ಭಾಷೆಯ ಪ್ರಾಬಲ್ಯ ಕಂಡುಬಂದರೆ, ಸ್ತೋತ್ರರೂಪದ ಲಘುಕೃತಿಗಳಲ್ಲಿ ಪ್ರಾದೇಶಿಕ ದೇಶಿ ಭಾಷೆಯ ಸೊಗಡು ಹೆಚ್ಚಾಗಿ ಕಾಣಬರುತ್ತದೆ. ಪಂಚಾಶಿಕೆ, ಶಿವಲಿಂಗ ಷಟ್ಪದಿ ಮೊದಲಾದ ಕೃತಿಗಳಲ್ಲಿ ನಿರೋಷ್ಠ್ಯಪದ, ಗುಣಿತಾಕ್ಷರ ಪದ, ಸರ್ವಲಘು ತಲೆಕಟ್ಟಿನ ಪದ, ಅಚಲಜಿಹ್ವಾಪದ, ಮಾತ್ರಿಕಾಮಾಲ ಈ ಬಗೆಯ ಪದ್ಯಗಳು ಬಳಕೆಯಾಗಿದ್ದು, ಈ ಕೃತಿ ಕರ್ತೃಗಳಿಗಿದ್ದ ಸಂಸ್ಕೃತದ ಮೇಲಿನ ಪ್ರಭುತ್ವ ವೇದ್ಯವಾಗುತ್ತದೆ. ಮಹಾಲಿಂಗೇಂದ್ರವಿಜಯದಂಥ ಕೃತಿಗಳಲ್ಲಿ ಮಾರ್ಗ-ದೇಶಿ ಭಾಷಾಶೈಲಿ ಮಿಶ್ರಣ ಎದ್ದು ತೋರುತ್ತದೆ.

ಹಾಲಾಸ್ಯ ಪುರಾಣದಲ್ಲಿ ಮೀನಾಕ್ಷಿ ಸುಂದರೇಶ್ವರರ ೬೪ ಲೀಲೆಗಳನ್ನು ವಿವರಿಸುವಲ್ಲಿ ಕವಿಯ ಭಾಷಾ ಪ್ರೌಢಿಮೆ, ಪಾಂಡಿತ್ಯ, ವ್ಯಾಕರಣಶುದ್ಧಿ, ವರ್ಣನಾ ಕೌಶಲ್ಯ, ಛಂದೋ ವೈವಿಧ್ಯತೆಗಳು ಮೇಳವಿಸಿರುವ ಮೂಲಕ ಇದೊಂದು ಉತ್ಕೃಷ್ಟ ಕಾವ್ಯವಾಗುವಂತೆ ಮಾಡಿವೆ. 'ಶಬ್ದರತ್ನಾಕರ' ಕೃತಿಯಂತೂ ಕವಿಯ ಭಾಷಾ ಪ್ರೌಢಿಮೆಗೆ ಹಿಡಿದ ಕನ್ನಡಿಯಾಗಿದೆ. ಒಂದು ಪದದ ವ್ಯಾಚಾರ್ಥ, ಸೂಚ್ಯಾರ್ಥ, ಸಂದರ್ಭಾರ್ಥ ಹಾಗೂ ವಿವಿಧಾರ್ಥಗಳನ್ನು ಹೇಳುವ ಮೂಲಕ ತಮ್ಮ ಪಾಂಡಿತ್ಯವನ್ನು ಮೆರೆದಿದ್ದಾನೆ.

ಮುರುಘಾ ಪರಂಪರೆಯ ಸಾಹಿತ್ಯದಲ್ಲಿ ಬಳಕೆಗೊಂಡಿರುವ ಭಾಷೆಯ ಸ್ವರೂಪವನ್ನು ಈ ಕೆಳಗಿನ ಉದಾಹರಣೆಗಳಿಂದ ಕಂಡುಕೊಳ್ಳಬಹುದು.

ಸಂಸ್ಕೃತ ಭಾಷೆ –

ರುಂಡ್ರಾಡಿಡ್ಡರಿ ಭೂಢ್ನಿ ರೂಢ್ಯ ಮಕೃಡುಡ್ವಾಢೋತ್ತಮಾಂಗ ಪ್ರಭೋ
ತ್ರಿಡ್ರಾಡ್ರಾಜಹುತಾಕನೇಕ್ಷಣ ಮೃಕಂಡಿಷ್ವ ಪ್ರದೋದ್ಯನ್ಮೃಡ
ಭ್ರಾಡ್ರಾಮಾಂಚಿತ ಪಾಂಡವಾಸ್ತ್ಯದ ದುರೊಡೋತ್ಪುಂಡರೀಕಾರ್ಧನಾ
ತೃಡ್ರಾಹಿತ್ಯ ಜುಡುಷ್ಯಧೀತವಚನ ಶ್ರೀ ಸುಂದರೇಶಾವಮೂಂ....... (ಹಾಲಾಸ್ಯ ಪುರಾಣ)

ಸಂಸ್ಕೃತ ಭಾಷೆ –

ತೃಡ್ಯಡ್ಯಡ್ಯಜ್ಜಿಷ್ನ ವಿಭೌ ವಿಷಮ
ಮೇಡ್ರಮಿತೋಟ್ಟಟ ಭೀತ ಸುಹರಣ ಭ
ರಾಡ್ರಕದ್ಯಕ್ಸ್ವಭುಕ್ಷ್ಯಂ ಕಿತಪದ್ದಿಕ್ಪಟ ತೂರ್ಣಗಭು
ಗ್ರೂಡ್ರಸ ಭಾರತಿ ಹಿತಕೃತ ಜಿತ ಕೃಟ್
ದ್ವಿಚ್ರಗದದನೇಭೃದ್ಧ್ವಂಸನ ದುಃಯ್ಯುಮ
ರಾಡ್ರಿಮ ಶುಭ್ರಭೃತ್ರಿಡ್ಬಾದ್ವದ್ರಾಂಕಭ್ರಕಚೂಡ (ಮುರಿಗೆ ಸ್ವಾಮಿಗಳು ನಿರೂಪಿಸಿದ ನಾಂದ್ಯ)

ಕನ್ನಡ ಭಾಷೆ –

ಒಂದು ತಲೆವಾಗಿಲೊಳ್ ಸತಿ
ನಿಂದಿರ್ದಲೆ ಮಂತ್ರಿಗಳಿರ ನಿಮ್ಮಭಿಮತಮಂ
ಸಂದುದದಾವುದದಂ ನಾಂ
ಚಂದದೆ ಬಲ್ಲಿಂ ಸಮಂತು ಕೊಟ್ಟಪೆನುಸಿರಿರಿ...... (ಹಾಲಾಸ್ಯ ಪುರಾಣ)

ಸಂಸ್ಕೃತ – ಕನ್ನಡ ಮಿಶ್ರಭಾಷೆ –

ಢಮಢಮವೆನಿಸಿ ಢಮಾಮಿಯ ರಭಸದೆ
ಯಮನ ಕೋಣನರೊಯ್ಯು ದುರ್ಗಿಯ ಸಿಂಹನ

ಸುಮಹಿತ ರಭಸವ ಹಳಿವ ಹೆಗ್ಗಾಳೆಯ
ಸುಮರದ ಭೀಕರ ರೂಪದ ಸಾಧನ
ಸಮಕಟ್ಟಿನಗ್ಗದ ಕುದುರೆಗಳೊಬ್ಬುಳಿ
ಧುಮುಕಿ ನಿಂದುವೆ ಬಂದು ಛೀ ಛೀ ಯೆನುತೆ (ಹಾಲಾಸ್ಯ ಪುರಾಣ)

ಉರ್ದು ಸಂಸ್ಕೃತ ಭಾಷೆಯ ಮಿಶ್ರಣ –

"ಅಲ್ಲಾ ಖುದಾಜಿ ತುಮಾರೆ ಬೇಟಾ ಕಾ ಬೇಟ
ಸಲ್ಲಾಮಾಲೀಕುಂ ಮಾಯಯ್ಯ ಮಿಪಾದಸ
ಪಂಡಿತಾ ನೋ ವಚನಂ ಸಾವಧಾನೇನ
ಮಂಡನಂ ಶ್ರೋತವ್ಯಮಧುನಾ ಸಮಿಚಿನ" (ಮುರಿಗೆ ತಾರಾವಳಿ)

ಕೊರವಂಜಿ ಭಾಷೆ :

"ಮೂಢ ಪಡುವಣದೆಸೆಯ ತೊಡಗಿ ಪದಿನೆಂಟೆಳೆಯ
ನಾಡಿ ಸೆಳೆಯೆ ತೆಂಕ ಬಡಗಲದರಂತೆ
ರಚಿಸಿ ಪದಿನೇಳು ಸಾಲಹವದರ ನಡುವೆ ಇಹ
ಶುಚಿತರದ ಸಾಲ ಮೀಸಲನಿರಿಸೆಯಮ್ಮ . . . ." (ಕೊರವಂಜಿ ಕಟ್ಟಳೆ)

"ವಿನುತ ಪೂರ್ಣೋದರಿ ವಿರಿಜೆ ಶಾಲ್ಮಲಿಯು
ಘನ ಚಾರುತರ ಲೋಲಾಕ್ಷಿಯು ವರ್ತುಳಾಕ್ಷಿ
ದೀರ್ಘಘೋಣಿಯು ದೀರ್ಘಮುಖಿಯು ಗೋಮುಖಿಯು
ದೀರ್ಘ ಜಿಹ್ವೆಯು ಕುಂಡೋದರಿಯುರ್ಧ್ವ ಕೇಳಿ . . . ."
"ವಿಕೃತಮುಖಿಯು ಜ್ವಾಲಾಮುಖಿಯಲ್ಕಿಮುಖಿಯು
ಸುಕೃತೆ ಶ್ರೀಮುಖಿ ವಿದ್ಯಾಮುಖಿಯು ತಾನಿವರು" (ಕೊರವಂಜಿ ಕಟ್ಟಳೆ)

ಕೊರವಂಜಿ ತನ್ನ ನಿಜಸ್ವರೂಪ ತೋರಿಸುವಲ್ಲಿ, ಶಕ್ತಿಯರ ನೆಲೆಯನ್ನು ಕುರಿತು ಹೇಳುವಾಗ ಕವಿಯು ಪಾಂಡಿತ್ಯ ಪೂರ್ಣ ಭಾಷೆಯನ್ನು ಬದಿಗೊತ್ತಿ ಜನಸಾಮಾನ್ಯರಿಗೆ ತಿಳಿಯುವಂತೆ ಸರಳ ಭಾಷೆಯನ್ನು ಬಳಸಿದ್ದಾನೆ.

ಸಂಭಾಷಣಾ ರೂಪ :

ಮುರಿಗಾ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ಬಹುತೇಕ ಕೃತಿಗಳು ಶಿವನ ಲೀಲಾವಿಲಾಸಗಳನ್ನು ವರ್ಣನೆ ಮಾಡುವ ವಸ್ತುಗಳನ್ನೊಳಗೊಂಡಿದ್ದರಿಂದ ಶಿವ–ಪಾರ್ವತಿಯರ ಸಂಭಾಷಣೆಯ ರೂಪವನ್ನು ಹಲವಾರು ಕೃತಿಗಳಲ್ಲಿ ಬಳಸಲಾಗಿದೆ. ಉದಾಹರಣೆಗಾಗಿ –

'ಅಗಜೆ ಕೇಳಾ ಮೂಲ ಮಂತ್ರವೆ
ಸೊಗಯಿಪುದು ಲಿಂಗ ಸ್ವರೂಪದೆ
ಸುಗಮವೆಂತೆನೆ ಬಿಂದುಪೀಠವು ನಾದವದೆ ಲಿಂಗ
ನಿಗಮಸಿದ್ಧವಿದೆನ್ನ ರೂಪೆಂ
ದಗಲದರಿವೆ ಮುಕ್ತನಾತನೆ
ಜಗದೊಳಣಿಮಾದ್ಯಷ್ಟಸಿದ್ಧಿಗಳೆಯ್ದೆ ದೊರೆದಪವು"

ಎಂದು ಮೂಲ ಮಂತ್ರದ ಮಹಿಮೆಯನ್ನು ಶಿವಪಾರ್ವತಿಗೆ ಹೇಳುತ್ತಿರುವುದನ್ನು 'ಯೋಗಕಲಾಪಸಾರ' ಕೃತಿಯಲ್ಲಿ ಕಾಣಬಹುದು.

ಹಾಗೆಯೇ ಮುನಿಸಮೂಹವು ಕೇಳಿದ ಪ್ರಶ್ನೆಗಳಿಗೆ ಉತ್ತರ ರೂಪವಾಗಿ ಸೂತಮುನಿಗಳು ಶಿವಪುರಾಣವನ್ನು, ಶಿವನ ಲೀಲಾವಿಲಾಸಗಳನ್ನು, ಗೌರಿಕುಮಾರನ ಚರಿತ್ರೆಯ ಕಥಾವಸ್ತುಗಳನ್ನು ಒಳಗೊಂಡ ಬಹುತೇಕ ಕೃತಿಗಳು ಲಭ್ಯವಾಗುತ್ತವೆ.

ಹೀಗೆ ಇನ್ನೂ ಅನೇಕ ಉದಾಹರಣೆಗಳನ್ನು ಗಮನಿಸಿದರೆ ಮುರುಘಾ ಪರಂಪರೆಯ ಕವಿಗಳು ಭಾಷೆಯನ್ನು ಲೀಲಾಜಾಲವಾಗಿ ಬಳಸಿಕೊಳ್ಳಬಲ್ಲ ಸಾಮರ್ಥ್ಯವನ್ನು ಪಡೆದವರಾಗಿದ್ದರು ಎಂದು ತಿಳಿಯುತ್ತದೆ. ಮುರುಘಾ ಪರಂಪರೆಯ ಎಲ್ಲಾ ಕವಿಗಳು ತಮ್ಮ ಸಮಕಾಲೀನ ಭಾಷೆಯನ್ನು, ಪದ ಪ್ರಯೋಗಗಳನ್ನು ಉಚಿತವಾಗಿ ಬಳಸಿಕೊಂಡು ಕೃತಿ ಹೆಚ್ಚು ಆತ್ಮೀಯವಾಗುವಂತೆ ಮಾಡಿದ್ದಾರೆ. ಇಲ್ಲಿ ಬರುವ ಗುಣಿತಾಕ್ಷರ ಪದ, ಸರ್ವಲಘು ತಲೆಕಟ್ಟಿನ ಪದ, ನಿರೋಷ್ಟ ಪದ, ಅಚಲಜಿಹ್ವಾಪದ, ಮಾತ್ರಿಕಾಮಾಲ ಪದ್ಯಗಳು ಕವಿಗಳಿಗಿರುವ ಸಂಸ್ಕೃತದ ಮೇಲಿನ ಪಾಂಡಿತ್ಯವನ್ನು ತೋರಿಸಿಕೊಡುತ್ತದೆ. ಉದಾಹರಣೆಗಾಗಿ –

ಗುಣಿತಾಕ್ಷರದ ಪದಗಳು –

ಕರುಣಿ ಕಾಮಿತದ ಕಿರಿದೌರಿಷ್ಪ್ರೋತ್ತಮಾಂಗ ಮೃಗ
ಧರ ಸುಕಿಲ್ರದ್ಯುಮಣಿ ನಯನ ಕುಸುಮಾಸ್ತ್ರ ಸಂ
ಹರ ಕೂರ್ಮ ಖರ್ಪರ ವಿಭೂಷಿತೋರಸ್ಥಲ ಖಕೇಶ ಕೈಲಾಸನಿಲಯ
ಪರಮಕೋಮಲಮೂರ್ತಿ ಕೌತುಹಲೋರು ವಿ
ಸ್ಫುರಿತ ಚಾರಿತ್ರ ಕರಿಜಾಸನ ಶಿರೋಹಸ್ತ
ಗರಳಗಳ ಲಸಿತತ್ರಿ ವಿಷ್ಟಪೌಕಸ್ತುತ ಜಯೇಷ್ಟ ಶಿವಲಿಂಗೇಶ್ವರಾ......

(ಶಿವಲಿಂಗಮಹಿಮಾ ಷಟ್ಪದಿ)

ಸರ್ವಲಘು ತಲೆಕಟ್ಟಿನ ಪದ –

ಮದನ ಮದಧರ ಮಘವ ಗತಗದ ಸಭಗಗಮನ
ಪದನಯನ ದನದರತ ಕರಕರದ ಕನಕನಗ
ಸದನನಯ ವಚನ ಗರಧರ ಕರಶರಭ ಗಗನನಗರ ವನದಹನದಹನ
ಸದಯ ಶರಭವ ಸರಸ ಸತತ ಶಮಶಮನ ಹರ
ಮದಘ ಘನಪವನ ದಶವದನ ಮದಹನನ ನರ
ಕದನಯುತ ಕಮನತಮ ವರಭವ ನರಮರಮಸಮವನನಮದ ಮರದರಪ ......

(ಶಿವಲಿಂಗಮಹಿಮಾ ಷಟ್ಪದಿ)

ನಿರೋಷ್ಠ ಪದ –

ಜಲಧಿಶಯನ ರನಯನಾಂಘ್ರಿ ಜಲಜ ಜಗದಾಧಾರ
ಲಲಿತಶಾರದ ನಿಜ ಶರಣನಿಕರ ಸಂತಾನ
ಚಲಿತಗರಗಲಿ ಗಾನರಸಲೀನ ಹೃದಯ ಶರ ಜನನ ಜನಕಾಂತಕಾರಿ
ಕಲಶಜಾರ್ಜಿತಚರಣ ಕನದಗ ಶರಾಸನ ಸ
ಕಲ ಕಲಾನಿಧಿ ದಯಾಕರ ಕಾಳಿಕಾಕಾಂತ
ತಲಿ ರಕ್ಷಿಸಯ್ಯ ದಶಶತ ದಿನೇಶಾಕಾರ ಸಾರಚಾರಿತ್ರ ಚಿತ್ರಾ".

(ಶಿವಲಿಂಗಮಹಿಮಾ ಷಟ್ಪದಿ)

ಅಚಲಾಜಿಹ್ವಾ ಪದ –

ಭೂಮಿ ಕುಶ ಪಾವಕಾಶಾಯಜ್ವಾಬ್ಜಸುಖ
ಸೋಮಜವಿಕಾಯ ಕಾಯಜ ವಿಜಯ ವಾಮಾಂಗ
ವಾಮವಾಸವಭವಾ ಜೀಯ್ಯ ಹಯವಾಹಸಖ ಸಾಹಸಾಂಕ ಗುಹಾಶಯಾ
ಸಾಮಗೇಯ ವಿಮಾಯ ಗಾರಿಗೇಯ ಮೋಹಭವ
ಭೀಮಶಿಖಬೀಜ ಭೀಮಾಪಹ ಮಹಾವಿಭವ
ಸೀಮ ಹೇಮ ಗಚೌಪಾಘ ಜಿಹ್ವಗ ಖಗಪ ಪಾಹಿಮಾ ಶಿವಲಿಂಗೇಶ್ವರಾ.

(ಶಿವಲಿಂಗಮಹಿಮಾ ಷಟ್ಪದಿ)

ಮಾತ್ರಿಕಾಮಾಲ –

ಕರಿವೈರಿ ಖಟ್ವಾಂಗಿ ಗಳಿತಾಪ ಜ್ಞಾವಿಭೇದಿ
ಚರುಭುಕ್ತಛಂದ್ಯದ ವಿರಾಶಿ ಜನಿಸಂಹಾರಿ
ಝುರಿಪು ಇರಿರಾಜಿ ಗಂಗಾಜೂಟ ನೀಲಕಂಠ ನಿಬಿಡ ದೃಢ ಸುಪ್ರವೀಣ
ದರಿತೇಷ್ಟ ನಮಿತಾಹಿಪ ಫಣಾಳಿ ನೃತ್ಯ ಬಹು
ಬರಿತಾಮಯಧ್ವರಿಸಿ ರಲವಮಿತ್ರಾಕ್ಷಶಪ್ರದಾಯಿ ಸಪಿತ ಪ್ರಹಿಸತಾ.

(ಶಿವಲಿಂಗಮಹಿಮಾ ಷಟ್ಪದಿ)

ಜಾಣ್ಣುಡಿಗಳ ಬಳಕೆ –

ಮುರುಘಾ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ವಿಫುಲವಾಗಿ ಜಾಣ್ಣುಡಿಗಳ ಬಳಕೆಯಾಗಿದೆ. ಇದರಿಂದ ಕಾವ್ಯಕ್ಕೆ ವಿಶೇಷ ಸತ್ವ–ಧ್ವನಿ ಉಂಟಾಗಿದೆ. ಉದಾಹರಣೆಗಾಗಿ "ಮುಂಗಯ್ಯ ಕಂಕಣಕ್ಕೆ ಕನ್ನಡಿಯದೇಕೆ? ತಮ್ಮಕ್ಕನಳಿಯದವನೆಯ್ದೆ ಸೆರೆಮನೆಯೊಳಿಹ ಬೊಮ್ಮಕ್ಕನಂ ಬಲ್ಲನೇ?"

ಮೋಟುಮರ ಗಾಳಿಮಿಂಡ,

ಮೀಸೆಯನ್ನು ಕೀಳುವಾಗಿಲ್ಲದಿಹ ಕೋಪವದು

ಮೋಸದಿಂ ಶಪ್ಪಮಂ ಕೀಳುವಾಗೊದಗಿದುದೆ?

ಹುಲಿಯ ಬಣ್ಣವ ನೋಡಿ ನರಿ ಮಯ್ಯಸುಟ್ಟು ಕೊಂಡು ಸತ್ತಂತೆ

ತಾ ಕಳ್ಳೆ ಹೆರರ ನಂಬುವಳಲ್ಲ

ಬಾಯಪ್ರಸಾದ ಗಂಜಿಯಬೋನವೆಂಬಂತೆ

ನುಂಗಿದ ತುಳ್ತಿಗೆ ರುಚಿಯ ಸಂಗಳಿಸಿದೊಡುಂಟೆ

ಸೇರದ ನಾಯಿಗಳ್ ನಿಂತೊಡೆ ಚಾರು ವಿವಾಹದ ಸುಲಗ್ನಮದು ಕೆಡುವುದೆ

ಸಾವಿನಕಾಲಕ್ಕಂತ್ಯಣವೊಂದೆ ಭಾವಿಸೆ ವಜ್ರ

ಅರಸು ಕಟ್ಟಿದ ಮೇಲೆ ತೀರ್ದಮದಾಟ

ಹಾವಿನ ಬಾಯ ಕಪ್ಪೆ,

ಹಸಿದು ಹಾರುವ ನೊಣಕ್ಕೆ ಆಸೆ ಮಾಡಿದಂತೆ.

ಸಂವಾದಿ ಪದಗಳ ವಿವರಣೆ –

ಮುರಿಗಾ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ಒಂದು ಶಬ್ದಕ್ಕೆ ಹಲವಾರು ಸಂವಾದಿ ಪದಗಳನ್ನು ಕೊಟ್ಟಿರುವುದೊಂದು ವಿಶೇಷವಾಗಿದೆ. ಉದಾಹರಣೆಗಾಗಿ –

ರುದ್ರಾಕ್ಷಿ :– ರುದ್ರನೇತ್ರರತ್ನ, ಮರಹರನಯನಮಣಿ, ಮಿಡಚ್ಚ

ಹಂದಿ :– ವರಾಹ, ಸೂಕರ, ಕ್ರೋಢ, ಕಿಟಿ, ಪೋತ್ರ, ಕಿರಿ ಪಂದಿ.

ನರಿ :– ಶಿವ, ಜಂಬುಕ, ಸೃಗಾಲ, ಫೇರು, ಕ್ರೋಷ್ಟು, ಸಕ, ಮೋಟ,

ಸಮಕಾಲೀನ ಭಾಷೆಯಲ್ಲಿರುವ ದೇಶಿ ಪದಗಳಿಗೆ – ವೈನ, ಒಂದಿರು, ದಿಮಾಕು, ಮಂಡಿಯ ಗೋವು, ಕೊರ್ಚು, ಸೊಬಾರ, ಟೋಕಿಸು, ಮೂಸಂಜೆ, ಸೊರಹು ಇತ್ಯಾದಿ ಇವುಗಳ ಜೊತೆಗೆ ಕೆಲವು ಅನ್ಯ ದೇಶೀಯ ಪದಗಳನ್ನು ನೇರವಾಗಿ ಇಲ್ಲವೆ ಕನ್ನಡ ಪ್ರತ್ಯಯಗಳನ್ನು ಸೇರಿಸಿ ಬಳಸಿದ್ದಾರೆ. ಹೀಗೆ ಮಾರ್ಗದೇಶಿ–ಅನ್ಯದೇಶಿಪದಗಳ ಮಿಶ್ರಣವನ್ನು ಇವರ ಕೃತಿಗಳಲ್ಲಿ ಕಾಣಬಹುದು.

ಛಂದಸ್ಸು :

ಮುರುಘಾ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ಕಂದ, ವೃತ್ತ, ರಗಳೆ, ತ್ರಿಪದಿ, ಗದ್ಯ, ವಚನ, ಚೂರ್ಣಿಕೆಗಳೆಂದು ಹೀಗೆ ಅಕ್ಷರ-ಮಾತ್ರಾ-ಅಂಶ ಛಂದಸ್ಸಿನ ಹಲವು ಛಂದೋಬಂಧಗಳನ್ನು ಬಳಸಲಾಗಿದೆ. ಉದಾಹರಣೆಗಾಗಿ ಹಾಲಾಸ್ಯ ಪುರಾಣದಲ್ಲಿರುವಷ್ಟು ಛಂದೋ ಪ್ರಯೋಗಗಳು ಕನ್ನಡದ ಬೇರೆ ಯಾವ ಗ್ರಂಥದಲ್ಲಿಯೂ ಬಳಕೆಯಾಗಿಲ್ಲವೆಂದು ಹೇಳಬಹುದು. ಇಲ್ಲಿ ೧೬೫ಕ್ಕೂ ಹೆಚ್ಚಿನ ಛಂದೋಬಂಧಗಳನ್ನು ಬಳಸಿರುವುದು ಈ ಕೃತಿಯ ವಿಶೇಷತೆಯಾಗಿದೆ. ಉದಾಹರಣೆಗಾಗಿ – ಅಂಬನಿ, ಅಕ್ಕರಿಕೆ, ಅಮಳ, ಅಮಳವಿತಾನ, ಅರವಿಂದ, ಅರ್ಕಮರೀಚಿ, ಇಂದು, ವದನಾ, ಇಂದ್ರವಜ್ರ, ಉತ್ಪಲಮಾಲೆ, ಉತ್ಸಾಹ, ಉತ್ಸಾಹರಗಳೆ, ಉತ್ಸುಕ, ಉದಯ, ಉದಾತ್ತ, ಉಪಮ, ಉಪೇಂದ್ರ ವಜ್ರ ಕಂದ, ಕನಕಾಬ್ಜಿನಿ, ಕಲ್ಯಾಣ, ಕವಿರಾಜವಿರಾಜಿತ, ಕಾಂಚನಮಾಲೆ, ಕಾಂತ, ಕುಮುದ, ಕುಸುಮಶರನಿರತಿಶಯ, ಕುಸುಮಾಂಘ್ರಪ, ಕೋಮಳ, ಕ್ರೌಂಚಪದ, ಖಚರಪ್ಲುತ, ಗಂಧಶಾಲಿನಿ, ಚಂದ್ರಕಾಂತ, ಚಂದ್ರಿಕಾ, ಚಂದ್ರಿಕೆ, ಚಂಪಕಮಾಲೆ, ಚತುರ್ದಳು, ಚಾಮರ, ಚಿತ್ರಪದ, ಚೂರ್ಣಿಕ, ಚೂತಕುಜ, ಛಂದೋವೃತ್ತ, ಜಗದ್ವಿಭೂತಿ, ಜನಹಿತ ಹೀಗೆ ಇನ್ನೂ ಮುಂತಾದವುಗಳ ಜೊತೆಗೆ, ಈವರೆಗೆ ರಚಿತವಾದ ಬೇರೆ ಯಾವ ಕನ್ನಡ ಕಾವ್ಯಗಳಲ್ಲಿಯೂ ಬಳಕೆಯಾಗದ, ಹಾಲಾಸ್ಯ ಪುರಾಣದಲ್ಲಿ ಮಾತ್ರ ಪ್ರಯೋಗವಾದ, ಇಮ್ಮಡಿ ಮುರಿಗಾ ಗುರುಸಿದ್ಧರೇ ಸ್ವತಃ ಸೃಷ್ಟಿಸಿರಬಹುದಾದ ಛಂದೋಬಂಧಗಳ ಹೆಸರುಗಳು ಹೀಗಿವೆ –

೧) **ಛಂದೋವೃತ್ತ** : ಇದರ ಲಕ್ಷಣ ರ, ನ, ಭ, ಮ, ಸ, ಸ, ಲ, ಗ ಎಂದಿದೆ. ೨೨ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತವನ್ನು ೫ ಸಾರಿ ಪ್ರಯೋಗಿಸಿದ್ದಾರೆ.

೨) **ಚಂದ್ರಕಾಂತ** : ೨೧ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತ ಬೇರೆ ಯಾವ ಛಂದೋ ಗ್ರಂಥಗಳಲ್ಲಿಯೂ ಬಳಕೆಯಾಗಿಲ್ಲ. ಇದರ ಲಕ್ಷಣ ರ, ನ, ಭ, ಭ, ಭ, ರ.

೩) **ಕಾಂತ** : ೧೬ ಅಕ್ಷರಗಳನ್ನೊಳಗೊಂಡ ಈ ಛಂದೋಬಂಧವೂ ಬೇರೆ ಯಾವ ಛಂದೋಗ್ರಂಥಗಳಲ್ಲಿಯೂ ಬಳಕೆಯಾಗಿಲ್ಲವಾದರೂ ನಾಗವರ್ಮ ಇದನ್ನು ಲಲಿತಪದವೆಂದೂ, ಜಯಕೀರ್ತಿಯು ಕಮಲಪಾದವೆಂದೂ ಕರೆದಿದ್ದಾರೆ.

೪) **ತೋಟಕ** : ಒಂದೇ ಹೆಸರಿನ ಎರಡು ವೃತ್ತಗಳು ಬಳಕೆಯಾಗಿವೆ. ಇವುಗಳಲ್ಲಿ ೧೨ ಅಕ್ಷರಗಳನ್ನೊಳಗೊಂಡ ವೃತ್ತ ಪ್ರಸಿದ್ಧವಾದ ತೋಟಕದೊಂದಿಗೆ ಹೋಲಿಕೆಯಾಗುತ್ತದೆ. ೨೫ ಅಕ್ಷರಗಳನ್ನೊಳಗೊಂಡ ನ, ಜ, ನ, ಸ, ನ, ನ, ಭ, ಭ, ಗ ಎಂಬ ಗಣಗಳನ್ನು ಹೊಂದಿದೆ. ತೋಟಕ ಎಂಬ ವೃತ್ತ ಪ್ರಥಮ ಬಾರಿಗೆ ಬಳಕೆಯಾಗಿದೆ.

೫) **ಕುಸುಮ ಶರ ನಿತಿಶಯ** : ೩೩ ಅಕ್ಷರ ಸಂಖ್ಯೆಗಳನ್ನೊಳಗೊಂಡಿದ್ದು, ನ, ನ, ನ, ನ, ನ, ನ, ನ, ನ, ಭ, ಯ ಗಣಗಳನ್ನು ಹೊಂದಿದೆ. ಈ ವೃತ್ತ ಇದುವರೆಗಿನ ಯಾವ ಛಂದೋ ಗ್ರಂಥಗಳಲ್ಲಿಯೂ ಬಳಕೆಯಾಗಿರುವುದಿಲ್ಲ.

೬) **ಜನೋದಯ** : ೪ ಅಕ್ಷರ ಸಂಖ್ಯೆಯನ್ನೊಳಗೊಂಡ ಈ ವೃತ್ತ ಈ ಮೊದಲಿನ ಯಾವ ಗ್ರಂಥಗಳಲ್ಲಿಯೂ ಬಳಕೆಯಾಗಿರುವುದಿಲ್ಲ. ಭರತ, ಜಯಕೀರ್ತಿಯರು ಈ ಛಂದಸ್ಸನ್ನು 'ಜಯಾ' ಎಂದೂ, 'ವೀರಭದ್ರನು ಸುಕಾಂತಿ' ಎಂದೂ ಕರೆದಿದ್ದಾರೆ.

೭) **ನಿಮಾತಿಶಯ** : ೭ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮನಲ್ಲಿ 'ವಿನಮ್ರ' ಎಂದು ಹೆಸರಿದೆ. ಹಾಲಾಸ್ಯ ಪುರಾಣದಲ್ಲಿ ಈ ವೃತ್ತವನ್ನು ೬ ಕಡೆ ಪ್ರಯೋಗಿಸಲಾಗಿದೆ.

೮) **ಪ್ರೇಮ** : ೪ ಅಕ್ಷರಗಳನ್ನು ಹೊಂದಿರುವ ಈ ವೃತ್ತಕ್ಕೆ ನಾಗವರ್ಮ 'ಶಕ್ರ' ಎಂದೂ, ಜಯಕೀರ್ತಿ 'ಗೀತ' ಎಂದೂ, ಗುಣಚಂದ್ರನು 'ಕನ್ಯಾ' ಎಂದೂ ಕರೆದಿದ್ದಾರೆ. ನಾಗವರ್ಮನಲ್ಲಿ ಭ, ಲ, ಗ, ಗಣದ ಪ್ರೇಮ ವೃತ್ತಕ್ಕಿಂತ ಇದು ಭಿನ್ನವಾಗಿದೆ.

೯) **ಅನಂತ** : ೫ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ನಾಗವರ್ಮ 'ನಂದ; ಎಂದು ಜಯಕೀರ್ತಿ, ಕೇದಾರಭಟ್ಟ ಸತಿ ಎಂದು ಕರೆದಿರುವರು.

೧೦) **ಉಪಮ** : ೧೨ ಅಕ್ಷರಗಳನ್ನೊಳಗಿಂಡ ಈ ವೃತ್ತ ನಾಗವರ್ಮನ ಇಂದ್ರ ವಂಶಕ್ಕೆ ಸರಿ ಹೋಗುತ್ತದೆ.

೧೧) **ಪೃಥ್ವಿ** : ೧೭ ಅಕ್ಷರಗಳನ್ನೊಳಗೊಂಡ ಪೃಥ್ವಿ ಎಂಬ ವೃತ್ತ ಪ್ರಸಿದ್ಧವಾಗಿದ್ದರೂ ಸಹಿತ ಕವಿ ಇಲ್ಲಿ ೧೩ ಅಕ್ಷರಗಳನ್ನೊಳಗೊಂಡ ಈ ವೃತ್ತಕ್ಕೆ ಪ್ರಥ್ವಿ ಎಂಬ ಹೆಸರಿಟ್ಟು ೩ ಪ್ರಯೋಗ ಮಾಡಿರುವನು.

ಹೀಗೆ ೧೬೫ಕ್ಕೂ ಹೆಚ್ಚಿನ ಛಂದೋಬಂಧಗಳನ್ನು ಬಳಸಿರುವುದು ಈ ಪರಂಪರೆಯ ಸಾಹಿತ್ಯ ಕೃತಿಗಳ ವೈಶಿಷ್ಟ್ಯವಾಗಿದೆ.

ಅಲಂಕಾರಗಳ ಬಳಕೆ :

ಮುರುಘಾ ಪರಂಪರೆಯ ಸಾಹಿತ್ಯ ಕೃತಿಗಳಲ್ಲಿ ಅಲಂಕಾರಗಳ ಬಳಕೆ ವಿಫುಲವಾಗಿದೆ. ಕವಿಯ ಭಾಷೆಯನ್ನೂ, ಶೈಲಿಯನ್ನೂ ಅಪೂರ್ವವಾಗಿ ರೂಪಿಸತಕ್ಕವು ಉಪಮೆ, ದೃಷ್ಟಾಂತ, ರೂಪಕಾದಿ ಅಲಂಕಾರಗಳು. ಉದಾಹರಣೆಗಾಗಿ – 'ಹಾಲಾಸ್ಯ ಪುರಾಣ'ದಲ್ಲಿ ಉಪಮೆಗಳಿಗೆ ಪ್ರಥಮ ಪ್ರಾಶಸ್ತ್ಯ ಒದಗಿದೆ. ಅವುಗಳಲ್ಲಿ ಕವಿ ತನ್ನ ಅಭಿಪ್ರಾಯವನ್ನು ಪ್ರಭಾವಶಾಲಿಯಾಗಿ ಪ್ರತಿಬಿಂಬಿಸಿದ್ದಾನೆ."ಬಗೆದಂ ವೃತ್ರಾಭಿದಂ ಮೂಜಗದ ತಲೆಗೆ ಕಲ್ಲಾಗಿ, ಸರಿವಳೆಯಂತ್ಯದೊಳಂಬರಸ್ಥ ಶಶಿಯಂತೆ, ಮರನ ಬುಡಕೆರೆಯ ನೀರಂ ತರು ಶಾಖೆಗಳೆಲ್ಲ ಮಾಟುವಂದದಿನ್, ನಡೆನಡೆ

ಪೋಗೇಣಂಗಳ್ ತಾವೆಂತೋಡುವವಡವಿಗೆ ಕಡುಬರದಿನವರವೋಲ್, ಕೂಡಿದ ಕಾಗೆಗಳ ಮೇಳದಿಂದೆ ಮರದಿಂದೆ ಝುಲ್ಲನೆ ಕೆದರ್ದು ಪಾರ್ವಪೊಲಾಕ್ಷಣಂ, ತಡೆಯದೆ ತುಪ್ಪುಳುದರಿದ ಕೋಳಿಗಳಂದದೆ ಗುಳ್ಮೆಗಳಂ ಕಂಡು ತವಕಂ ಮಿಗಲ್ ತೆರೆದು, ಈಚಲಪುಳುಮದು ನೆಲದೊಳ್ ಗೋಚರಿಸುತೆ ಗಳಿಗೆಯೊಳಗೆ ನೆಗೆದಾಡುವವೊಲ್, ಸಿರಿಗಂಗಂಡಾನೆಂಯ ಪರಿಯಿಂ ಎಂಬಂಥ ಮಾತುಗಳು ಕವಿಯ ದೃಷ್ಟಾಂತ ಶಕ್ತಿಗೆ, ಉಪಮಾ ಚಾತುರ್ಯಕ್ಕೆ ಸಾಕ್ಷಿಯಾಗಿವೆ.

೪) ಚಾರಿತ್ರಿಕ ಅಂಶಗಳು :

ವೀರಶೈವ ಧರ್ಮದ ತಾತ್ವಿಕಾಂಶಗಳನ್ನು ಪ್ರತಿಪಾದಿಸುವ, ಶಿವನ ಲೀಲಾ-ವಿಲಾಸಗಳನ್ನು ಉತ್ಕಟಭಕ್ತಿಯಿಂದ ವರ್ಣಿಸುವ ವಸ್ತುಗಳನ್ನೊಳಗೊಂಡ ಮುರುಘಾ ಪರಂಪರೆಯ ಕೃತಿಗಳಲ್ಲಿ ಚಾರಿತ್ರಿಕ ಅಂಶಗಳು ಒಳಗೊಂಡಿವೆ. ಮಹಾಲಿಂಗೇಂದ್ರವಿಜಯ, ಮನುರಾಜೇಂದ್ರವಿಜಯ ಅಥವಾ ಹಮ್ಮೀರ ಕಾವ್ಯ, ಮುರಿಗೆಯ ತಾರಾವಳಿ, ಬಿಜ್ಜಮಹಾದೇವಿಚಾರಿತ್ರ್ಯ ಈ ಕೃತಿಗಳಲ್ಲಿ ಚಾರಿತ್ರಿಕ ಅಂಶಗಳನ್ನು ಗುರುತಿಸಬಹುದಾಗಿದೆ.

ಈ ಉಲ್ಲೇಖಗಳಲ್ಲಿ ಐತಿಹಾಸಿಕ ಸತ್ಯಗಳು ಇಲ್ಲವೇ ಇಲ್ಲ. ಆದರೆ ಇವುಗಳ ಬಗೆಗೆ ಇನ್ನಷ್ಟು ಶೋಧ ನಡೆದು ಖಚಿತ ನಿರ್ಣಯಗಳು ಸ್ಥಾಪಿತವಾಗಬೇಕಾಗಿದೆ.

'ಮುರಿಗೆಯ ತಾರಾವಳಿ'ಯಲ್ಲಿ ಬರುವ ಅನೇಕ ರಾಜರುಗಳ ಉಲ್ಲೇಖ ಆಗಿನ ಕಾಲದ ರಾಜಕೀಯ ಪರಿಸ್ಥಿತಿಯ ಸ್ಥೂಲ ವಿವರವನ್ನು ನೀಡುವುದರೊಂದಿಗೆ ಅರಮನೆ-ಗುರುಮನೆಗಳ ಸಂಬಂಧವನ್ನು ತೋರ್ಪಡಿಸುತ್ತದೆ. ಶ್ರೀ ಗುರುವಿನ ಕೃಪಾಶೀರ್ವಾದಕ್ಕೆ ಪಾತ್ರರಾದ ರಾಜರುಗಳೆಂದರೆ- ಮೈಸೂರಿನ ದೊಡ್ಡ ದೇವರಾಜ, ಚಿಕ್ಕ ದೇವರಾಜ, ಭಾಗೇಯ ನಗರದ ಕುತುಬ್ ಬಾದಷಾ, ಮಹಾರಾಷ್ಟ್ರದ ಛತ್ರಪತಿ ಶಿವಾಜಿ, ಹರಪನಹಳ್ಳಿಯ ಬಸವಂತ ಭೂಪಾಲ, ಗದುಗಿನ ಡಾಕಿನಿ ದೇಸಾಯಿ, ಸೋದೆಯ ಸದಾಶಿವ ಭೂಪತಿ, ಗುತ್ತೊಳಲಪುರದ ಹನುಮರಾಯ, ಫಣಿಪುರದ ಪ್ರವೀರಭೂಪತಿ, ಲಕ್ಷ್ಮೇಶ್ವರದ ಕೆಂಚಣಗೌಡ, ಬೇತೂರು, ಅಣಿಜಾಪುರಗಳ ಅಧಿಪತಿಗಳು, ಚಿತ್ರದುರ್ಗದ ಭರಮನಾಯಕ ಇತ್ಯಾದಿ ವಿವರಣೆಗಳಿಂದಾಗಿ ಮುರಿಗೆ ತಾರಾವಳಿ ಚಾರಿತ್ರಿಕ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ.

ಶಾಂತವೀರರ ವಯೋಮಾನ, ಚಿತ್ರದುರ್ಗಕ್ಕೆ ಅವರು ಬಂದ ಕಾಲಮಾನ, ಅವರು ಅಲ್ಲಿಯೇ ನೆಲೆಸಲು ನಿರ್ಧರಿಸಿದುದಕ್ಕೆ ಒದಗಿ ಬಂದ ಸಂದರ್ಭ. ಬೆಟ್ಟದ ಮೇಲಿನ ೩೬೦ ಕಂಬಗಳ ಬೃಹತ್ ಮಠದ ನಿರ್ಮಾಣ, ಶಾಂತವೀರರ ಅಂತ್ಯಕಾಲ, ಸಮಕಾಲೀನ, ಸಮೀಪಕಾಲೀನ ವಿಷಯಗಳು, ಸ್ಪಷ್ಟವಾಗಿ ಮೂಡಿಬಂದಿವೆ. ಈ ಮೂಲಕ ಈ ಕೃತಿಯೊಂದು ವಿಶ್ವಾಸಾರ್ಹ ಚಾರಿತ್ರಿಕ ಕೃತಿಯಾಗಿದೆ.

'ರಾಜೇಂದ್ರ ವಿಜಯ' ಎಂಬ ಪರ್ಯಾಯ ನಾಮವನ್ನು ಹೊಂದಿದ 'ಹಮ್ಮೀರ ಕಾವ್ಯ'ದ ವಸ್ತುವನ್ನೇ 'ಮನುರಾಜೇಂದ್ರ ತಾರಾವಳಿ' ಒಳಗೊಂಡಿದೆ. ಅಲ್ಲಮಪ್ರಭುಗಳ ಗುರುಗಳಾದ ಪಟ್ಟದಕಲ್ಲಿನ ಅನಿಮಿಷದೇವರ ಚರಿತ್ರೆಯನ್ನು ಒಳಗೊಂಡಿದೆ.

ಶ್ರೀಪ್ರಭುದೇವರು ಗೊಗ್ಗಯ್ಯನಿಗೆ ಈ ಮನುರಾಜೇಂದ್ರನ ಚರಿತ್ರೆಯನ್ನು ಬೋಧಿಸುತ್ತಾರೆ. ಪ್ರಣಾವಾವತಾರನಾದ ಶ್ರೀ ಮನುರಾಜನ ಸ್ಥೂಲ ಪರಿಚಯ – ಶ್ರೀ ಮನುರಾಜನು ಪ್ರಣಾವಾವತಾರನು, ಮಂತ್ರರಾಜ, ಹಮ್ಮೀರ ರಾಜೇಂದ್ರ ಮತ್ತು ಅನಿಮಿಷ ಎಂಬ ಹೆಸರುಗಳೂ ಈತನಿಗಿರುತ್ತವೆ. ಈತನು ಅಯೋನಿಜನು. ತಂದೆ–ತಾಯಿಗಳು ಪಟ್ಟದಕಲ್ಲಿನಲ್ಲಿ ಆಳುತ್ತಿದ್ದ ತ್ರೈಲೋಕ್ಯ ಚೂಡಾಮಣಿರಾಯ – ಮಹಾದೇವಿ ರಾಣಿಯರು. ಈ ಪಟ್ಟದಗಲ್ಲು (ಪಟ್ಟದಕಲ್ಲು) ಪುರಾತನ ಕಾಲದಿಂದಲೂ ಪ್ರಖ್ಯಾತ ರಾಜಧಾನಿಯೆನಿಸಿತ್ತು. ಈ ನಗರದಲ್ಲಿ ನವನಂದರೂ, ದಶಗುಪ್ತರಾಯರು, ವಿಂಶತಿಮೌರಿ (ಮೌರ್ಯ) ರಾಯರೂ, ಸಪ್ತವಿಂಶತಿ ರಾಜೇಂದ್ರರೂ ಮತ್ತು ವಿಂಶತಿ ಚಾಳುಕ್ಯರಾಯರೂ ಆಯಾ ರಾಜವಂಶೋದ್ಧಾರಕರಾಗಿ ಆಳಿ ಹೋಗಿರುವರು ಎಂದು ಪಟ್ಟದಕಲ್ಲನ್ನು ಆಳಿದ ರಾಜರ ಬಗ್ಗೆ ಉಲ್ಲೇಖಿಸಲಾಗಿದೆ.

ಜೊತೆಗೆ ಹಮ್ಮೀರ ರಾಜನ ಬಾಲ್ಯ, ಯೌವ್ವನ, ಕಾಂಭೋಜರಾಜ ಪುತ್ರಿ ಗೌರಿಯೊಡನೆ ವೈಭವದ ವಿವಾಹ, ಹಮ್ಮೀರ ರಾಜನ ಕಡುಶಿವಲಿಂಗ ನಿಷ್ಠೆ ಹಾಗೂ ಉಂಟಾದ ಕಡುದಾಹ ಹೀಗೆ ಗೊಗ್ಗಯ್ಯನಿಗೆ ಶ್ರೀ ಪ್ರಭುವು ಅನಿಮಿಷ (ಮನುರಾಜನ)ನ ವಿಚಾರವನ್ನು ವಿವರಿಸಿ ಬೋಧಿಸುತ್ತಾನೆ.

ಮೊದಲು ಭೂಲೋಕದಲ್ಲಿ ಕಾಂಚೀನಗರದ ದೊರೆಯು ಅಂತರವಿಲ್ಲದೆ ವೈಷ್ಣವ ಮತ ಸ್ವೀಕರಿಸಿ ಹಮ್ಮಿಂದಿರಲು, ಅಲ್ಲಿಗೆ ಪರಮ ನಿಶ್ಚಿಂತರಾದ ರೇವಣಸಿದ್ಧರು ಆಗಮಿಸಿ ಮಹಿಮೆಗಳನ್ನು ತೋರಿ, ವೈಷ್ಣವ ಮತವನ್ನು ನಿರಾಕರಿಸಿದರು. ಅಲ್ಲದೆ ನಂಬೆಣ್ಣ, ಜೇರಮರಾಯ ಪಾಂಡ್ಯರು, ನಿಡುಮಾರದೇವರು ಹಾಗೂ ಮುಂಚಿನ ಭದ್ರಾಯುರಾಜ, ಸತ್ಯಸಂಧನಾದ ಸತ್ಯೇಂದ್ರ ಚೋಳಾದಿ ನವಚೋಳರೇ ಮೊದಲಾದ ಅನಂತ ಭೂಪತಿಗಳು ಶಿವಧರ್ಮಾಸಕ್ತರಾಗಿ ಆಳಿದ್ದಾರೆ. ಇದು ಗುರುಗಳ ಪೂರ್ವ ಚರಿತ್ರೆ, ಮುಂದೆ ಪ್ರಭು ಸೋದರ ಅಜಗಣ್ಣನು ಶಿವಮಂತ್ರದಲ್ಲಿ ಐಕ್ಯವಾದುದಕ್ಕೆ ದುಃಖಿಸುತ್ತಿದ್ದ ಮುಕ್ತಾಯಕ್ಕನ ದುಃಖ ಶಮನ ಮಾಡಿದರು. ಅಲ್ಲಿಂದ ಅನುಪಮಸಿದ್ಧರಾಮಯ್ಯನ ತೊಡಕಿನ ಹಠಯೋಗವನ್ನು ಮತ್ತು ಶೈವಪೂಜೆಯನ್ನು ಬಿಡಿಸಿ ಆತನನ್ನು ತನ್ನೊಂದಿಗೆ ಕಲ್ಯಾಣನಗರಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಚೆನ್ನಬಸವಣ್ಣನವರಿಂದ ದೀಕ್ಷೆಯನ್ನು ಕೊಡಿಸಿದನು. ಇಂದುಧರನ ಮಲೆದುರ್ಗ, ಶ್ರೀಗಿರಿಗೆ ಹೋಗಿ, ಗೋರಕ್ಷಕನಿಗೆ ನಿಜವಿತ್ತು, ಕಲ್ಯಾಣಕ್ಕೆ ಬಂದು ಶೂನ್ಯ ಸಿಂಹಾಸನದಲ್ಲಿ ಮಂಡಿಸಿ, ಬಸವಣ್ಣನ ಭಕ್ತಿಯನ್ನು ಕೈಕೊಂಡು ಮರುಳುಶಂಕರನಿಗೆ ಅನುಗ್ರಹವಿತ್ತು, ಕಲ್ಯಾಣದ ಭವಿಷ್ಯವನ್ನು ಉಸುರಿ, ಪ್ರಭುವು ಕೈಲಾಸಕ್ಕೆ ದಯಮಾಡಿಸಿದ ಇತ್ಯಾದಿ ವಿವರಣೆಗಳಿಂದಾಗಿ

'ಹಮ್ಮೀರಕಾವ್ಯ', 'ಮನುರಾಜೇಂದ್ರ ತಾರಾವಳಿ' ಚಾರಿತ್ರಿಕ ದೃಷ್ಟಿಯಿಂದ ತನ್ನದೇ ಆದ ಮಹತ್ವವನ್ನು ಪಡೆದಿವೆ.

ಮಹದೇವ ಕವಿಯ 'ಮಹಾಲಿಂಗೇಂದ್ರ ವಿಜಯ' ಇದೊಂದು ಹಿರಿಯಗಾತ್ರದ ಷಟ್ಪದಿ ಕಾವ್ಯ. ೩೦ ಅಧ್ಯಾಯ ೨೦೬೪ ವಾರ್ಧಕ ಷಟ್ಪದಿ ಪದ್ಯಗಳನ್ನೊಳಗೊಂಡಿದೆ. ಮುರುಘಾ ಸಂಪ್ರದಾಯದ ೨೧ನೆಯ ಜಗದ್ಗುರು ಮಹಾಲಿಂಗರ ಜೀವನ-ಸಾಧನೆ-ಸಿದ್ಧಿಗಳು ಈ ಕಾವ್ಯದ ಮುಖ್ಯ ವಸ್ತುವಾಗಿದೆ. ಅದಕ್ಕೆ ಪೂರಕವಾಗಿ ಈ ಪೀಠ ಪರಂಪರೆಯಲ್ಲಿ ಆಗಿ ಹೋದ ಹಿಂದಿನ ಜಗದ್ಗುರುಗಳ ಚರಿತ್ರೆ ಹಾಗೂ ನಂತರದ ೨೨ನೆಯ ಜಗದ್ಗುರುಗಳ ಸಂಕ್ಷಿಪ್ತ ಪರಿಚಯವೂ ಇಲ್ಲಿದೆ. ಬೃಹತ್ ಗಾತ್ರದ ಈ ಕಾವ್ಯವನ್ನು ಮೂರು ಭಾಗಗಳಲ್ಲಿ ವಿಂಗಡಿಸಲಾಗಿದೆ.

ಮೊದಲನೆಯದಾಗಿ - ಪ್ರಾರಂಭದ ೧೨ ಹಾಗೂ ಕೊನೆಯ ಆರು ಒಟ್ಟು ೧೮ ಸಂಧಿಗಳಲ್ಲಿ ಈ ಕಾವ್ಯದ ಕೇಂದ್ರ ವ್ಯಕ್ತಿಯಾದ ಮಹಾಲಿಂಗ ಜಗದ್ಗುರುಗಳ ಚರಿತ್ರೆಗೆ ಮೀಸಲಾಗಿದೆ.

ಎರಡನೆಯದಾಗಿ - ೧೩ ರಿಂದ ೨೪ನೆಯ ಸಂಧಿಯವರೆಗೆ ಒಟ್ಟು ೧೨ ಸಂಧಿಗಳಲ್ಲಿ ಚೆನ್ನಬಸವಣ್ಣನಿಂದ ಹಿಡಿದು ಮಹಾಲಿಂಗ ಜಗದ್ಗುರುವಿನವರೆಗಿನ ಶೂನ್ಯ ಸಿಂಹಾಸನ ಸಂಪ್ರದಾಯದ ೨೦ ಜಗದ್ಗುರುಗಳ ಸಂಕ್ಷಿಪ್ತ ಜೀವನ ಪರಿಚಯವನ್ನು ಮಾಡಿಕೊಡಲಾಗಿದೆ. ಮಹಾಲಿಂಗನಂತಹ ಮಹನೀಯನೋರ್ವನ ಉದಾತ್ತ ಚರಿತ್ರೆಯನ್ನು ನಿರೂಪಿಸುತ್ತದೆ. ಮೂರನೆಯದಾಗಿ - ೨೨ನೆಯ ಪಟ್ಟದ ರುದ್ರಸ್ವಾಮಿಗಳ ಪರಿಚಯದ ತೀರ ಸಂಕ್ಷಿಪ್ತ ಚರಿತ್ರೆಯಿದೆ.

ಮಹಾಲಿಂಗೇಂದ್ರವಿಜಯವು ಪುರಾಣ ಸ್ವರೂಪದೊಂದಿಗೆ ಐತಿಹಾಸಿಕ ಮಹತ್ವವನ್ನು ಹೊಂದಿದ ಕೃತಿ. ಮಹಾಲಿಂಗನ ಜೀವನ ಕಥೆಯನ್ನು ಹೇಳುತ್ತ ಮಧ್ಯ ಮಧ್ಯ ಉಪಕಥೆಗಳ ಮಾದರಿಯಲ್ಲಿ ತಮಿಳುನಾಡಿನ ಶೈವ ಸಂತರ, ಬಸವಾದಿ ಪ್ರಥಮರ ಉಪಾಖ್ಯಾನಗಳು ಉತ್ತಮ ರೀತಿಯಲ್ಲಿ ಹೆಣಿಕೆಗೊಂಡಿದೆ. ಮಹಾಲಿಂಗನು ಶಿಶುವಾಗಿದ್ದಾಗ ಅವನ ತಾಯಿ ಬಸವಾಂಬೆ ಅವನನ್ನು ಲಾಲಿಸಿ-ಪಾಲಿಸಿದಳೆಂಬಲ್ಲಿ ಬಿಜ್ಜಮಹಾದೇವಿಯ ಕಥೆಯನ್ನು ಮಹಾಲಿಂಗ ದೀಕ್ಷಾಗುರುವಾದ ರುದ್ರಶಿವಯೋಗಿಯು ಭೂತದಯಾಪರನೆಂಬಲ್ಲಿ ದಸರಯ್ಯನ ಕಥೆಯನ್ನೂ, ಆ ರುದ್ರಶಿವಯೋಗಿಯ ಸನ್ನಿಧಿಯಲ್ಲಿ ಮಹಾಲಿಂಗನ ಶಿಷ್ಯವೃತ್ತಿ ಅಸದೃಶವಾಗಿತ್ತೆಂಬಲ್ಲಿ ಗುರುಭಕ್ತಾಂಡರಿಯ ಕಥೆಯನ್ನೂ, ಮಹಾಲಿಂಗನು ಬೀತ ಮಾವಿನಮರ ಹಣ್ಣು ಬಿಡುವಂತೆ ಮಾಡಿದನೆಂಬಲ್ಲಿ ವ್ಯಾಸನ ತೋಳಿನ ಪುರಾಣ ಪ್ರಸಂಗವನ್ನೂ, ಮಹಾಲಿಂಗನ ಪಾದೋದಕ ಮಹಿಮೆಯಿಂದ ಭಕ್ತೆಯೊಬ್ಬಳಿಗೆ ಸುಖ ಪ್ರಸವವಾಯಿತೆಂಬಲ್ಲಿ ವೇಮನಾರಾಧ್ಯರ ಕಥೆಯನ್ನೂ, ಮಹಾಲಿಂಗನು ಕುರುಡು ಕುದುರೆಯೊಂದಕ್ಕೆ ಕಣ್ಣಿತ್ತನೆಂಬಲ್ಲಿ ಕಣ್ಣಪ್ಪನ ಕಥೆಯನ್ನೂ, ಅವನು ಅಕಾಲದಲ್ಲಿ ಮಳೆ ಬರಿಸಿದನೆಂಬಲ್ಲಿ ಚಾರಮ-ಚೋಳ-ಪಾಂಡ್ಯರ ಕಥೆಗಳನ್ನೂ, ಅವನನ್ನು

ಸವಣೂರಿನಲ್ಲಿ ಪ್ರತಿಭಟಿಸಿದ ವೈದಿಕರ ಗರ್ವಭಂಗವಾಯಿತೆಂಬಲ್ಲಿ ತಿರುಜ್ಞಾನ ಸಂಬಂಧದ ಕಥೆಯನ್ನೂ ವಿಸ್ತಾರವಾಗಿಯೇ ಹೇಳಿರುವನು. ಹೀಗೆ ಕಥೆಯೊಳಗೆ ಕಥೆ, ಉಪಕಥೆ ಈ ಮುಮ್ಮರಿನಿರಿಗೆಯಿಂದ ಮಹಾಲಿಂಗೇಂದ್ರವಿಜಯ ಪುರಾಣವೆಂದೂ ಪ್ರಸಿದ್ಧಗೊಂಡಿದೆ. ಮಹಾಲಿಂಗನ ಜೀವನ ವೃತ್ತಾಂತವನ್ನು ವಿವರಿಸುವುದರಿಂದ ಜೀವನ ಚರಿತ್ರೆಯೂ, ಶೂನ್ಯ ಸಿಂಹಾಸನದ ಪರಂಪರೆಯ ವಿವರ ವಿಚಾರದಿಂದ ಚರಿತ್ರೆಯೂ, ದಸರಯ್ಯ, ಬಿಜ್ಜಮಹಾದೇವಿ ಮುಂತಾದ ಪುರಾತನರ ಪ್ರಸಂಗದಿಂದ ಪುಣ್ಯಕಥಾಮೃತವೂ, ಬಸವಣ್ಣ, ಪ್ರಭುದೇವ, ಚೆನ್ನಬಸವಣ್ಣ, ತೋಂಟದ ಸಿದ್ಧಲಿಂಗ, ಮುರುಗೇಶ, ದುರದುಂಡಿ ಗುರುಗಳು, ನಿಡಸೋಸಿ ಬಸವಣ್ಣ ಸ್ವಾಮಿಗಳು, ಮಹಾಲಿಂಗಪುರದ ಮಲ್ಲಿಕಾರ್ಜುನದೇವರು ಮುಂತಾದವರ ಕಥಾಮಹತ್ವದಿಂದ ವೀರಶೈವ ಮಹಾಪುರಾಣವೂ, ಅಷ್ಟಾವರಣ, ಷಟ್ಸ್ಥಲ ಮುಂತಾದವುಗಳ ನಿರೂಪಣೆಯೊಂದಿಗೆ ತಾತ್ವಿಕಾಂಶವುಳ್ಳ ಕೃತಿಯಾಗಿಯೂ 'ಮಹಾಲಿಂಗೇಂದ್ರ ವಿಜಯ'ವು ಅನೇಕ ದೃಷ್ಟಿಯಿಂದ ಅತ್ಯಂತ ವೈಶಿಷ್ಟ್ಯಪೂರ್ಣವಾದ ಕೃತಿಯಾಗಿದೆ.

'ಬಿಜ್ಜಮಹಾದೇವಿಚಾರಿತ್ರ್ಯ'ದಲ್ಲಿ ಬಿಜ್ಜಾವರದ ಕದಿರಕಾಯಕದವಳಾದ ಅಮ್ಮವ್ವೆಯ ಚರಿತ್ರೆ ಹೇಳಲಾಗಿದೆ. ಅಮ್ಮವ್ವೆಯು ಶಿವನನ್ನೇ ಮಗನನ್ನಾಗಿ ಪಡೆಯಲು ಬಯಸಿದಾಗ ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪ ಶಿವನು ಖಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡಿದನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯನ್ನೆತ್ತಿ ಕೊರಳನ್ನು ಕತ್ತರಿಸಿಕೊಳ್ಳಲು ಹೋದಾಗ ಶಿವ ಪ್ರತ್ಯಕ್ಷನಾಗಿ ಕೈಲಾಸಕ್ಕೆ ಕರೆದೊಯ್ಯುವನು. ಯಕ್ಷಗಾನ ರೂಪದಲ್ಲಿ ಶಿವಶರಣೆಯೊಬ್ಬಳ ಚಾರಿತ್ರ್ಯ ನಿರೂಪಣೆ ಮಾಡಿರುವುದು ಮಹತ್ವಪೂರ್ಣವೆನಿಸಿದೆ.

ಅಡಿ ಟಿಪ್ಪಣಿಗಳು :

---

[೧] ತಾರಾವಳಿ ಸಾಹಿತ್ಯ – ಡಾ. ವೀರಣ್ಣ ರಾಜೂರ, ಗೌರವ ಅಭಿನಂದನ ಗ್ರಂಥ, ಪು.ಸಂ. ೪೨೮.

[೨] ಅದೇ ಪುಟ ಸಂಖ್ಯೆ ೪೨೩–೪೫೦.

[೩] ನಾಂದ್ಯ ಸಾಹಿತ್ಯ – ಶ್ರೀ ಟಿ.ಆರ್. ಮಹದೇವಯ್ಯ, ಪು.ಸಂ. ೨೧೩–೨೨೫.

[೪] ಯಕ್ಷಗಾನ ಸಾಹಿತ್ಯ – ಡಾ. ಅಂಬಳಿಕೆ ಹಿರಿಯಣ್ಣ, ಗೌರವ – ಎಸ್.ಎಸ್.ಭೂಸನೂರಮಠ ಅಭಿನಂದನ ಗ್ರಂಥ, ಪು.ಸಂ. ೪೯೮.

[೫] ಡಾ.ಎಸ್. ವಿದ್ಯಾಶಂಕರ್ – ಇಮ್ಮಡಿ ಮುರಿಗಾ ಗುರುಸಿದ್ಧರ ಕೃತಿಗಳು, ಪ್ರಸ್ತಾವನೆ, ಪು.೨೯.

[೬] ಕೊರವಂಜಿ ಸಾಹಿತ್ಯ – ಡಾ.ಜ.ಚ.ನಿ. ಪು.೭

[೭] ಅಮರಸಿಂಹನ ಅಮರಕೋಶ– ಪು.೭, ಭೂಮಿಕೆ.

[೮] ಕನ್ನಡ ನಿಘಂಟುಗಳ ಕಿರುಚರಿತ್ರೆ, ಪ್ರ – ಪ್ರೊ.ಜಿ.ವೆಂಕಟಸುಬ್ಬಯ್ಯ ಪು. ೬೯–೭೦.

ಅಧ್ಯಾಯ : ಆರು

ಸಮಾರೋಪ

ಅಧ್ಯಾಯ – ೬

ಸಮಾರೋಪ

ತೋಂಟದ ಸಿದ್ಧಲಿಂಗರ ಶಿಷ್ಯ ಪರಂಪರೆಯಲ್ಲಿ ಪ್ರಮುಖರೆನಿಸಿದ ಮುರಿಗಾ ಶಾಂತವೀರರಿಂದ ಮುರುಘಾ ಸಮಯ ಪ್ರಾರಂಭವಾಗುತ್ತದೆ. ಇದೇ ಮುಂದೆ ಇಮ್ಮಡಿ ಮುರಿಗಾ ಗುರುಸಿದ್ಧರಿಂದ ಮುಂದುವರೆದುಕೊಂಡು ಬರುತ್ತದೆ. ಹೀಗೆ ಶಿಷ್ಯ-ಪ್ರಶಿಷ್ಯರಿಂದ ಬೆಳೆದು ಬಂದ ಮುರುಘಾ ಸಮಯವೇ "ಮುರುಘಾ ಪರಂಪರೆ"ಯಾಗಿ ರೂಪ ತಳೆದಿದೆ. ಈ ಮುರುಘಾ ಪರಂಪರೆಯಲ್ಲಿ ಬರುವ ಪ್ರಮುಖ ಕವಿಗಳನ್ನು ಅವರ ಕೃತಿಗಳನ್ನು ಆಧಾರವಾಗಿಟ್ಟುಕೊಂಡು ಮುರುಘಾ ಪರಂಪರೆಯ ಸಾಹಿತ್ಯವನ್ನು ಅವಲೋಕಿಸಲಾಗಿದೆ. ಅಂತಿಮವಾಗಿ ಈ ಅಧ್ಯಾಯದಲ್ಲಿ ಒಟ್ಟೂ ಸಾಹಿತ್ಯವನ್ನು ಸ್ಥೂಲವಾಗಿ ಸಮೀಕ್ಷಿಸಿ, ಅದರ ವಿಶೇಷತೆಯನ್ನು ಎತ್ತಿ ಹೇಳಿ ಕನ್ನಡ ಸಾಹಿತ್ಯಕ್ಕೆ ಅದರ ಕೊಡುಗೆ ಏನೆಂಬುದನ್ನು ವಿವರಿಸಲಾಗಿದೆ.

ಜಗದ್ಗುರು ಪ್ರತಿಷ್ಠೆಯನ್ನು ಹೊಂದಿದ ಮುರುಘಾ ಪರಂಪರೆಯು ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕ್ಷೇತ್ರಗಳಿಗೆ ಅನನ್ಯ ಕೊಡುಗೆಯನ್ನು ಕೊಟ್ಟು ತುಂಬಾ ಪ್ರಸಿದ್ಧಿಯನ್ನು ಪಡೆದಿದೆ. ಚಿತ್ರದುರ್ಗದ ಬೃಹನ್ಮಠ ಈ ಸಂಪ್ರದಾಯದ ಮೂಲಮಠ ಮಹಾಶರಣ ಅಲ್ಲಮಪ್ರಭುವಿನಿಂದ ಆರಂಭವಾಗಿ, ಚೆನ್ನಬಸವಣ್ಣನಿಂದ ಮುಂದುವರೆದು ಮತ್ತೆ ಅನೇಕರಿಂದ ನಡೆದು ಸಾಗಿದ ಶೂನ್ಯಪೀಠ ಪರಂಪರೆಯ ಸಾಲಿಗೆ ಚಿತ್ರದುರ್ಗದ ಬೃಹನ್ಮಠವು ಸೇರುತ್ತದೆ. ಶರಣರು ಪ್ರತಿಪಾದಿಸಿದ ಶೂನ್ಯತತ್ವ ಮಾರ್ಗದಲ್ಲಿಯೇ ಈ ಪೀಠಪರಂಪರೆಯು ಸಾಗಿಕೊಂಡು ಬಂದಿದೆ. ಇದು ಕಾಲದಿಂದ ಕಾಲಕ್ಕೆ ಅನೇಕ ಶಾಖಾಮಠಗಳನ್ನು ಸೃಷ್ಟಿಸುತ್ತ ಬಂದಿದ್ದು, ಅವು ನಾಡಿನ ಉದ್ದಗಲಕ್ಕೂ ಹಬ್ಬಿಕೊಂಡಿವೆ. ರಾಜ್ಯದಲ್ಲಿ ಮಾತ್ರವಲ್ಲ ಹೊರರಾಜ್ಯಗಳಲ್ಲಿ ಸ್ಥಾಪನೆಯಾಗಿರುವ ಮುರುಘಾ ಪರಂಪರೆಯ ಮಠಗಳ ಕಾರ್ಯವೂ ಶ್ಲಾಘನೀಯವಾಗಿದೆ.

ಕನ್ನಡ ಸಾಹಿತ್ಯದ ಪ್ರೇರಣೆಯಲ್ಲಿ ಅರಮನೆಯಷ್ಟೇ ಪ್ರಮುಖ ಸ್ಥಾನ ಪಡೆದಿರುವವು ಗುರುಮನೆಗಳು. ಪ್ರಾಚೀನ ಕಾಲದಿಂದಲೂ ಸಾಹಿತ್ಯ ಕ್ಷೇತ್ರಕ್ಕೆ ಮಠಗಳ ಕೊಡುಗೆ ಅಪಾರವಾಗಿದೆ. ಮಠಾಧಿಪತಿಗಳು ಸ್ವತಃ ಸಾಹಿತ್ಯ ರಚಿಸುವುದು ಮಾತ್ರವಲ್ಲ ಸಾಹಿತ್ಯದ ಪೋಷಕರೂ ಆಗಿ ಸೇವೆ ಸಲ್ಲಿಸುವ ಮೂಲಕ ಕನ್ನಡ ಸಾಹಿತ್ಯಕ್ಕೆ ಉಜ್ವಲ ಭವಿಷ್ಯವನ್ನು ಒದಗಿಸಿಕೊಟ್ಟಿದ್ದಾರೆ. ಸಾಹಿತ್ಯದ ಮೂಲಕ ಧರ್ಮಪ್ರಸಾರ, ಧರ್ಮಪ್ರಚಾರ ಕಾರ್ಯವನ್ನು ಕೈಗೊಂಡಿದ್ದಾರೆ. ಧರ್ಮ ಮತ್ತು ಕಾವ್ಯಧರ್ಮಗಳ ಬೆಳವಣಿಗೆಗೆ ಸಾಕಷ್ಟು ಪರಿಶ್ರಮಿಸಿದ್ದಾರೆಂದು ಹೇಳಬಹುದು. ಈ ಎಲ್ಲ ಅಂಶಗಳಿಗೂ ಪ್ರತಿನಿಧಿಗಳಾಗುವರು ಮುರುಘಾ ಪರಂಪರೆಯ ಮಠಗಳು ಮತ್ತು ಮಠಾಧ್ಯಕ್ಷರು.

ಮುರುಘಾ ಪರಂಪರೆಯಲ್ಲಿ ಬರುವ ಪ್ರಮುಖ ಮಠಗಳೆಂದರೆ ಚಿತ್ರದುರ್ಗದ ಬೃಹನ್ಮಠ, ಧಾರವಾಡ ಮುರುಘಾಮಠ, ಅಥಣಿಯ ಶಿವಯೋಗೀಶ್ವರ ಮಠ, ಮುಳಗುಂದದ ಗವಿಮಠ, ಬೆಂಗಳೂರಿನ ಸರ್ಪಭೂಷಣಮಠ, ದಾವಣಗೆರೆಯ ವಿರಕ್ತಮಠ, ಮಾದಾಪುರದ ಮುರುಘಾಮಠ, ಸೋಮವಾರಪೇಟೆಯ ಅಬ್ಬಿಮಠ, ಕೊಲ್ಲಾಪುರದ ಚಿತ್ರದುರ್ಗಮಠ, ಆನಂದಪುರದ ಮುರುಘರಾಜೇಂದ್ರಮಠ ಇವುಗಳ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕೊಡುಗೆಯೂ ಗಮನಾರ್ಹವೆನಿಸಿದೆ.

ಮುರುಘಾ ಪರಂಪರೆಯ ಮೂಲಮಠ ಚಿತ್ರದುರ್ಗದ ಬೃಹನ್ಮಠ. ೧೭ನೆಯ ಶತಮಾನದಲ್ಲಿ ಶ್ರೀ ಮುರಿಗಾ ಶಾಂತವೀರರ ಧಾರ್ಮಿಕ ಕ್ರಿಯಾಶಕ್ತಿ ಹಾಗೂ ಬಿಚ್ಚುಗತ್ತಿ ಭರಮನಾಯಕನ ಇಚ್ಛಾಶಕ್ತಿಗಳು ಕಾರಣವಾಗಿ ಚಿತ್ರದುರ್ಗದಲ್ಲಿ ೩೬೦ ಅಂಕಣದ ಬೃಹನ್ಮಠ ಸ್ಥಾಪನೆಯಾಗುತ್ತದೆ. ಕ್ಷಾತ್ರತೇಜ ಹಾಗೂ ಧಾರ್ಮಿಕ ತೇಜಗಳನ್ನು ಹೊಂದಿದ ಈ ಬೃಹನ್ಮಠದ ಶೂನ್ಯಪರಂಪರೆ, ಇದರ ಜಗದ್ಗುರುಗಳು ಅವರ ವೈಯಕ್ತಿಕ ಸಾಧನೆ, ಸಿದ್ಧಿ, ತಪಃಶಕ್ತಿ, ಆಧ್ಯಾತ್ಮಿಕ ಶಕ್ತಿ, ಕರ್ತೃತ್ವ ಶಕ್ತಿಗಳು ಅನುಕರಣೀಯವಾಗಿವೆ. ಅನುಭಾವಿಗಳೂ, ಶಿವಯೋಗಿಗಳೂ ಆಗಿರುವ ಮುರಿಗಾ ಶಾಂತವೀರರಿಂದ ಪ್ರಾರಂಭಿಸಿ ಸಧ್ಯದ ಡಾ. ಶಿವಮೂರ್ತಿಸ್ವಾಮಿಗಳವರೆಗಿನ ಪೀಠಾಧ್ಯಕ್ಷರ ಸಾಹಿತ್ಯಿಕ ಸೇವೆಯೂ ಮಹತ್ವದ್ದಾಗಿದೆ. ಹೀಗೆ ಬೃಹನ್ಮಠವು ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಕೊಡುಗೆಗೆ ಮಾತ್ರ ಮೀಸಲಾಗದೆ ಅದರ ಸಾಹಿತ್ಯಿಕ ಸೇವೆಯೂ ದಾಖಲಾರ್ಹವಾಗಿದೆ.

ಒಟ್ಟಾರೆಯಾಗಿ ಮುರುಘಾ ಸಂಪ್ರದಾಯದ ಮಠಗಳು ಧರ್ಮತತ್ವ ಪ್ರಸಾರದ ಜೊತೆಗೆ ಸಾಹಿತ್ಯ ಪ್ರಸಾರ ಕಾರ್ಯವನ್ನು ನಿರಂತರವಾಗಿ ಮಾಡುತ್ತ ಬಂದಿವೆ. ಪ್ರಾಚೀನ ಕಾಲದಲ್ಲಿ ಬಸವಾದಿ ಶರಣರ ಮತ್ತು ವೀರಶೈವ ಕವಿಗಳ ಕೃತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸುವ, ಪ್ರತಿಗೊಳಿಸುವ ಕಾರ್ಯವನ್ನು ಮಾಡಿದರೆ, ಆಧುನಿಕ ಕಾಲದಲ್ಲಿ ಅವುಗಳನ್ನು ಪರಿಷ್ಕರಿಸಿ, ಪ್ರಕಟಿಸುವ ಕಾರ್ಯವನ್ನು ತುಂಬ ನಿಷ್ಠೆಯಿಂದ ಮಾಡುತ್ತ ಬಂದಿವೆ. ಈ ದೃಷ್ಟಿಯಿಂದ ನೋಡಿದಾಗ ಚಿತ್ರದುರ್ಗ ಬೃಹನ್ಮಠದ

ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ, ಧಾರವಾಡ ಮುರುಘಾಮಠದ ಬಾಲಲೀಲಾಮಹಾಂತ ಶಿವಯೋಗೀಶ್ವರ ಗ್ರಂಥಮಾಲೆ, ಆನಂದಪುರಮಠದ ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆಗಳು ಮಾಡಿದ ಹಾಗೂ ಮಾಡುತ್ತಿರುವ ಕಾರ್ಯ ಸ್ಮರಣೀಯವೆನಿಸಿವೆ. ಮಠಗಳು ಮಾತ್ರವಲ್ಲ ಮಠಾಧ್ಯಕ್ಷರಾದವರ ಸಾಹಿತ್ಯ ಕೊಡುಗೆಯೂ ಅನುಪಮವಾಗಿದೆ. ಮುರುಘಾ ಸಮಯದ ಮೂಲಕರ್ತೃಗಳಾದ ಮುರಿಗಾ ಶಾಂತವೀರರು, ಇಮ್ಮಡಿ ಮುರಿಗಾ ಗುರುಸಿದ್ಧರು ಇದೇ ಪರಂಪರೆಯಲ್ಲಿ ಬರುವ ಜಯದೇವ ಸ್ವಾಮಿಗಳು, ಜಯವಿಭವ ಸ್ವಾಮಿಗಳು, ಮಲ್ಲಿಕಾರ್ಜುನ ಸ್ವಾಮಿಗಳು, ಡಾ. ಶಿವಮೂರ್ತಿ ಶರಣರುಗಳ ಸಾಹಿತ್ಯಿಕ ಕೊಡುಗೆಯೂ ಮಹತ್ವದ್ದಾಗಿದೆ. ಬೃಹನ್ಮಠದ ಸದ್ಯದ ಪೀಠಾಧ್ಯಕ್ಷರಾದ ಶಿವಮೂರ್ತಿ ಶರಣರ ಒಟ್ಟು ಸಾಹಿತ್ಯವನ್ನು ಅವಲೋಕಿಸಿದರೆ ಅದುವೆ ಒಂದು ಮಹಾಪ್ರಬಂಧದ ವಸ್ತುವಾಗುವಷ್ಟಿದೆ. ಹೀಗೆ ಈ ಪೀಠ ಪರಂಪರೆಯಲ್ಲಿ ಬರುವ ಪೂಜ್ಯರಲ್ಲಿ ಕೆಲವು ತಮ್ಮ ಪೂಜೆ, ಅನುಷ್ಠಾನ, ತಪಸ್ಸಿದ್ಧಿ, ಧರ್ಮ, ತತ್ವಬೋಧೆಯ ಮೂಲಕ ಸುತ್ತಲ ಪರಿಸರವನ್ನು ಸಂಸ್ಕಾರಗೊಳಿಸಿ ನಾಡಿನಲ್ಲಿ ನೆಮ್ಮದಿಯನ್ನುಂಟು ಮಾಡಲು ಪ್ರಯತ್ನಿಸಿದರೆ, ಮತ್ತೆ ಕೆಲವರು ತಮ್ಮ ಪ್ರತಿಭೆ, ಪಾಂಡಿತ್ಯ, ಅನುಭಾವದರ್ಶನ ಸೃಜನಶೀಲತೆಯ ಮೂಲಕ ಸಾಹಿತ್ಯ ಸೃಷ್ಟಿಗೈದಿದ್ದಾರೆ. ಅನೇಕ ಅಮೂಲ್ಯ ಕೃತಿಗಳನ್ನು ಕೊಡುಗೆಯಾಗಿ ಕೊಟ್ಟಿದ್ದಾರೆ.

ಮುರುಘಾ ಪರಂಪರೆಯ ಕವಿಗಳು ವೀರಶೈವ ಧರ್ಮದ ಪ್ರಚಾರಕರಾಗಿ, ಪ್ರಸಾರಕರಾಗಿ, ಉನ್ನತ ಜೀವನ ಮೌಲ್ಯಗಳ ಪ್ರತಿಪಾದಕರಾಗಿ ತಮ್ಮನ್ನು ಗುರುತಿಸಿಕೊಂಡಿದ್ದಾರೆ. ಈ ಸಮಯವು ಕೇವಲ ಧಾರ್ಮಿಕವಾಗಿ ಮಾತ್ರವಲ್ಲ, ಸಾಹಿತ್ಯಿಕವಾಗಿಯೂ ಶ್ರೇಷ್ಠತೆಯನ್ನು ಹೊಂದಿದೆ. ಮುರುಘಾ ಪರಂಪರೆಯ ಕವಿಗಳು, ಶಿವಯೋಗಿಗಳು, ಜ್ಞಾನಿಗಳು, ವಿದ್ವಾಂಸರು, ಷಟ್ಸ್ಥಲಬ್ರಹ್ಮಿಗಳೂ ಆಗಿದ್ದಾರೆ. ಈ ಮೂಲಕ ಧಾರ್ಮಿಕ ಹಾಗೂ ಸಾಹಿತ್ಯಿಕ ಕ್ಷೇತ್ರಗಳೆರಡರಲ್ಲೂ ಸಿದ್ಧಿ-ಪ್ರಸಿದ್ಧಿಯನ್ನು ಪಡೆದಿದ್ದಾರೆ. ಇವರು ಚಂಪೂ, ವಚನ, ಸ್ವರವಚನ, ಷಟ್ಪದಿ, ಟೀಕೆ, ನಾಂದ್ಯ, ಪುರಾಣ, ಯಕ್ಷಗಾನ, ಕೊರವಂಜಿ ಸಾಹಿತ್ಯ, ನಿಘಂಟು, ತಾರಾವಳಿ ಸಾಹಿತ್ಯ ಪ್ರಕಾರಗಳಲ್ಲಿ ಕೃತಿ ರಚನೆ ಮಾಡಿದ್ದಾರೆ. ಇವರ ಬಹುಶ್ರುತತ್ವ, ಪ್ರತಿಭೆ-ಪಾಂಡಿತ್ಯ, ಉಭಯಭಾಷಾಜ್ಞಾನ, ದೇಶಿ-ಮಾರ್ಗ ಸಮನ್ವಯದೃಷ್ಟಿಗಳು ಇವರ ಕೃತಿಗಳಲ್ಲಿ ಬಿಂಬಿತವಾಗಿವೆ.

ಮುಖ್ಯವಾಗಿ ಮುರಿಗಾ ಶಾಂತವೀರರು, ಇಮ್ಮಡಿ ಮುರಿಗಾ ಗುರುಸಿದ್ಧರು, ಸೋಮಶೇಖರ ಶಿವಯೋಗಿ, ಹಾಗಲವಾಡಿ ಮುದ್ವೀರಸ್ವಾಮಿ, ಜ್ವಲಕಂಠ ಮಹಾಂತಸ್ವಾಮಿ, ಕಂಪಿನಂಜಯ್ಯ, ಮಹದೇವಕವಿ, ಈ ೭ ಜನ ಪ್ರಮುಖ ಕವಿಗಳು ಹಾಗೂ ಅವರ ಕೃತಿಗಳನ್ನು ಅಧ್ಯಯನಕ್ಕೆ ಅಳವಡಿಸಿದಾಗ ಕಂಡು ಬಂದ ಅಂಶಗಳು -

ಮುರಿಗಾ ಶಾಂತವೀರರು - ಮುರುಘಾ ಸಂಪ್ರದಾಯದ ಮೂಲ ಕರ್ತೃಗಳು. ಚಿತ್ರದುರ್ಗ ಬೃಹನ್ಮಠದ ಪ್ರಥಮ ಪೀಠಾಧ್ಯಕ್ಷರು, ವೀರಶೈವ ಧರ್ಮನಿಷ್ಠರು, ಕನ್ನಡ-ಸಂಸ್ಕೃತ ಉಭಯಭಾಷಾ

ಪಂಡಿತರು, ತತ್ವಸಾಹಿತ್ಯ ಸಿದ್ಧಾಂತ ನಿಷ್ಣಾತರು, ಅನುಭಾವಿಗಳು, ಸೃಜನಶೀಲ ಕವಿಗಳು ಆಗಿದ್ದು, ಒಟ್ಟು ೧೭ ಕೃತಿಗಳನ್ನು ರಚಿಸಿದ್ದಾರೆ.

ಇಮ್ಮಡಿಮುರಿಗಾ ಗುರುಸಿದ್ಧರು : ಮುರುಘಾ ಪರಂಪರೆಯ ಬಹುಮುಖ್ಯ ಕವಿಗಳು. ಮುರಿಗಾ ಶಾಂತವೀರರ ಶಿಷ್ಯರು; ಬೃಹನ್ಮಠದ ಎರಡನೆಯ ಪೀಠಾಧ್ಯಕ್ಷರು. ಗುರುವನ್ನು ಮೀರಿಸುವ ದೃಷ್ಟಿಯಲ್ಲಿ ಸಾಹಿತ್ಯ ಕೃಷಿ ಕೈಗೊಂಡಿರುವ ಇವರು ಒಟ್ಟು ೨೬ ಕೃತಿಗಳನ್ನು ರಚಿಸಿದ್ದಾರೆ. ಅವುಗಳಲ್ಲಿ ಕನ್ನಡ ೨೩, ಸಂಸ್ಕೃತ ೩. "ಹಾಲಾಸ್ಯ ಪುರಾಣ"ವನ್ನು ಚಂಪೂ ರೂಪದಲ್ಲಿ ರಚಿಸಿರುವ ಇವರು ಕನ್ನಡ ಸಾಹಿತ್ಯದಲ್ಲಿ ಷಡಕ್ಷರದೇವನ ತರುವಾಯದ ವೀರಶೈವ ಚಂಪೂಕವಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ. ಚಾಮರಸನ ಪ್ರಭುಲಿಂಗಲೀಲೆಯನ್ನು ಸಂಸ್ಕೃತ ಭಾಷೆಯಲ್ಲಿ "ಪ್ರಭುಲೀಲಾ" ಎಂಬ ಹೆಸರಿನಲ್ಲಿ ಪರಿವರ್ತಿಸಿದ್ದಾರೆ. ಚಂಪೂ, ವಚನ, ಷಟ್ಪದಿ, ಚೌಪದಿ, ವೃತ್ತ, ಸ್ತೋತ್ರ, ನಾಂದ್ಯ, ತಾರಾವಳಿ, ಯಕ್ಷಗಾನ, ಕೊರವಂಜಿ ಸಾಹಿತ್ಯ ನಿಘಂಟು ಸಾಹಿತ್ಯ, ಹೋಳಿಪದ, ಮಿಶ್ರಾರ್ಪಣ, ಪಂಚಾಶಿಕೆ, ಮಂತ್ರಗೋಪ್ಯ, ಕರಣಹಸಿಗೆ ಹೀಗೆ ವಿವಿಧ ರೂಪಗಳಲ್ಲಿ ಸಾಹಿತ್ಯ ರಚಿಸಿದ್ದಾರೆ. ಹಾಲಾಸ್ಯ ಪುರಾಣದಂಥ ಒಂದೇ ಕೃತಿಯಲ್ಲಿ ೧೬೫ಕ್ಕೂ ಹೆಚ್ಚು ಬಗೆಯ ಛಂದೋಪ್ರಯೋಗ ಮಾಡಿದ್ದಾರೆ. ಇದು ಕವಿಯ ಸಂಗ್ರಹಶಕ್ತಿ, ಔಚಿತ್ಯಪ್ರಜ್ಞೆ, ಬಹುಶ್ರುತತ್ವ ಭಾಷಾಪ್ರಭುತ್ವ ಹಾಗೂ ಛಂದೋಪರಿಣತಿಯನ್ನು ಎತ್ತಿ ತೋರಿಸುತ್ತದೆ. ಬೃಹತ್ ಕಥಾಸಾಗರದಂತಿರುವ ಈ ಕಾವ್ಯವನ್ನು ಯಾವುದೇ ದೃಷ್ಟಿಕೋನದಿಂದ ನೋಡಿದರೂ ಇಮ್ಮಡಿ ಮುರಿಗಾಗುರುಸಿದ್ಧರು ಒಬ್ಬ ಮಹಾಕವಿ, ವೀರಶೈವ ಚಂಪೂಕವಿ ಎಂಬುದು ಸಾಬೀತಾಗುತ್ತದೆ.

ಇಮ್ಮಡಿಮುರಿಗಾ ಗುರುಸಿದ್ಧರ ವಚನ, ಸ್ವರವಚನ, ಷಟ್ಪದಿ, ಶೂನ್ಯಮಂತ್ರಗೋಪ್ಯ, ಕೈವಲ್ಯ ಸೋಪಾನನಮ್ಯೆಕೋತ್ತರ ಶತಸ್ಥಲ, ಪಂಚಾಶಿಕೆ, ಶಿವರಹಸ್ಯ ಪುರಾಣ, ಮುರಿಗೆ ಸ್ವಾಮಿಗಳ ನಾಂದ್ಯ, ಕೊರವಂಜಿ ಕಟ್ಟಳೆ, ಶಬ್ದರತ್ನಾಕರ, ಬಿಜ್ಜಮಹಾದೇವಿ ಚಾರಿತ್ರ್ಯ ಈ ಎಲ್ಲ ಕೃತಿಗಳೂ ಒಂದೊಂದು ವಿಶೇಷತೆಯನ್ನು ಒಳಗೊಂಡಿವೆ. ಮುಖ್ಯವಾಗಿ ಶಿವನಲೀಲಾವಿಲಾಸ, ಶಿವಪಾರಮ್ಯ, ಗುರುಸ್ತುತಿ, ಶಿವಸ್ತುತಿ, ಅಷ್ಟಾವರಣ, ಪಂಚಾಚಾರ, ವೀರಶೈವಧರ್ಮದ ತಾತ್ವಿಕಾಂಶಗಳನ್ನು ಎತ್ತಿ ಹೇಳುತ್ತವೆ. ಚರಿತ್ರೆಯನ್ನು ನಿರೂಪಿಸುತ್ತವೆ. ಭಾಷಾಪ್ರೌಢಿಮೆಯನ್ನು ಹಾಗೂ ವಸ್ತು, ರೂಪ ವೈವಿಧ್ಯಗಳನ್ನು ಒಳಗೊಂಡಿವೆ ಎಂದು ಹೇಳಬಹುದು.

ಜ್ವಲಕಂಠ ಮಹಾಂತಸ್ವಾಮಿ : ಮುರುಘಾ ಪರಂಪರೆಯ ಕವಿಗಳಲ್ಲಿ ಈತನೂ ಒಬ್ಬ. ಮುರಿಗಾ ಶಾಂತವೀರರ ಶಿಷ್ಯನಾದ ಈತ ಒಟ್ಟು ಆರು ಕೃತಿಗಳನ್ನು ರಚಿಸಿದ್ದಾನೆ. ಅವು ನಾಂದ್ಯ, ಸ್ತೋತ್ರ, ತಾರಾವಳಿ ಹಾಗೂ ಷಟ್ಪದಿ ರೂಪಗಳಲ್ಲಿವೆ.

ಕಂಪಿನಂಜಯ್ಯ : ಮುರಿಗಾ ಶಾಂತವೀರರ ಶಿಷ್ಯನೇ ಆದ ಈತ ಈ ಪರಂಪರೆಯ ಪ್ರಮುಖ ನಾಂದ್ಯಕಾರನೆನಿಸಿದ್ದಾನೆ. ವಿಶೇಷವಾಗಿ ವೀರಶೈವ ಕಾವ್ಯಗಳ ಆರಂಭದಲ್ಲಿ ಬರುವ ಸ್ತುತಿ ಪದ್ಯಗಳನ್ನು ನಾಂದ್ಯಗಳೆಂದು ಕರೆಯಲಾಗುತ್ತದೆ. ಇವುಗಳನ್ನು ಸಂಕಲಿಸುವುದು ಒಂದು ಪರಂಪರೆಯಾಗಿಯೇ ನಡೆದು ಬಂದಿದೆ. ಅಂಥ ಸಂಕಲನಕಾರರಲ್ಲಿ ಕಂಪಿನಂಜಯ್ಯ ಪ್ರಮುಖನೆನಿಸಿದ್ದಾನೆ. ಈತ ಇತರ ಕಾವ್ಯಗಳ ಸ್ತುತಿ ಪದ್ಯ ಸಂಕಲನಗೊಳಿಸುವುದರ ಜೊತೆಗೆ ತಾನೇ ಗುರುಸ್ತುತಿ, ಶಿವಸ್ತುತಿ ಪದ್ಯಗಳನ್ನು ರಚಿಸಿರುವುದು ವಿಶೇಷವೆನಿಸಿದೆ. ಈತ ಒಟ್ಟು ೪ ಚಿಕ್ಕ ಚಿಕ್ಕ ಕೃತಿಗಳನ್ನು ರಚಿಸಿದ್ದು, ಅವೆಲ್ಲವೂ ಸ್ತುತಿರೂಪದಲ್ಲಿಯೇ ಇವೆ.

ಸೋಮಶೇಖರ ಶಿವಯೋಗಿ : ಇಮ್ಮಡಿ ಮುರಿಗಾ ಗುರುಸಿದ್ಧರ ಶಿಷ್ಯ. ಈತ ಮುರುಘಾ ಪರಂಪರೆಯ ಪ್ರಮುಖ ಟೀಕಾಕಾರನೆನಿಸಿದ್ದಾನೆ. ಬೆಡಗಿನ ವಚನಗಳಿಗೆ ಟೀಕೆ ಬರೆಯುವುದರಲ್ಲಿ ನಿಷ್ಣಾತನಾದ ಈತ ಬಸವಣ್ಣನವರ ೩೪೭ ವಚನಗಳಿಗೆ ಹಾಗೂ ತೋಂಟದ ಸಿದ್ಧಲಿಂಗರ ೧೫೨ ವಚನಗಳಿಗೆ ಟೀಕೆ ಬರೆದಿರುವನು. ಅಪಾರವಾದ ಶಾಸ್ತ್ರ ಪಾಂಡಿತ್ಯ ಪಡೆದು ವೇದ, ಉಪನಿಷತ್ತು, ಆಗಮ, ಪುರಾಣ, ತರ್ಕ, ಯೋಗ ಇತ್ಯಾದಿ ಗ್ರಂಥಗಳ ಅಧ್ಯಯನದಿಂದ ಜ್ಞಾನ ಸಂಪಾದಿಸಿದ ಈತ ಶಿಷ್ಟಭಾಷೆಯಲ್ಲಿ ವಚನಗಳಿಗೆ ತಾತ್ವಿಕಾರ್ಥದ ಟೀಕೆಯನ್ನು ರಚಿಸಿ ಉನ್ನತ ಮಟ್ಟದ ಟೀಕಾಕಾರನೆನಿಸಿದ್ದಾನೆ.

ಹಾಗಲವಾಡಿ ಮುದ್ವೀರಸ್ವಾಮಿ : ಮುರುಘಾ ಪರಂಪರೆಯ ಪ್ರಮುಖ ಸ್ವರವಚನಕಾರ. ಈತ ರಾಜಗುರು, ಅನುಭಾವಿ, ಶಿವಯೋಗಿ ಹಾಗೂ ತತ್ವಪ್ರಧಾನ ಸಾಹಿತ್ಯ ಸೃಷ್ಟಿ ಮಾಡಿದ ಉತ್ತಮ ಕವಿ ಎಂದು ಗುರುತಿಸಲ್ಪಡುತ್ತಾನೆ. ವಚನ, ಸ್ವರವಚನಗಳನ್ನು ಬರೆದಿರುವ ಈತ "ಶಿವತತ್ವ ಸುಜ್ಞಾನ ಪ್ರದೀಪಿಕೆ" ಎಂಬ ಷಟ್ಪದಿಕಾವ್ಯವನ್ನೂ ರಚಿಸಿದ್ದಾನೆ. ೧೩೦ ಕ್ಕೂ ಹೆಚ್ಚು ಸ್ವರವಚನಗಳನ್ನು ರಚಿಸಿದ್ದಾನೆ. ಇಲ್ಲಿ ಶಾಂಭವಯೋಗದ ವಿವರಣೆಗೆ ಒತ್ತು ನೀಡಿರುವನು. ಸ್ವರವಚನಗಳು ತತ್ವಪ್ರಧಾನವಾಗಿದ್ದರೂ ಮೃದು ಮಧುರಭಾವ, ಆತ್ಮೀಯಶೈಲಿ, ಲೋಕಾನುಭವ ಹಾಗೂ ನೀತಿಯನ್ನೊಳಗೊಂಡು ಜನಪ್ರಿಯವೆನಿಸಿವೆ.

ಮಹದೇವ ಕವಿ : ಅದ್ವೈತ ವಿದ್ಯಾಕುಶಲನೂ, ಉಭಯಭಾಷಾ ಪಂಡಿತನೂ, ವೀರಶೈವ ಸಿದ್ಧಾಂತ ನಿಪುಣನೂ ಆಗಿದ್ದಾನೆ. ಈತ ಎರಡು ಕೃತಿಗಳನ್ನು ರಚಿಸಿದ್ದಾನೆ. ಇವುಗಳಲ್ಲಿ "ಮಹಾಲಿಂಗೇಂದ್ರವಿಜಯ"ವು ಪ್ರಕಟಗೊಂಡಿದೆ. ಈ ಒಂದೇ ಕೃತಿಯಿಂದ ಈತ ಒಬ್ಬ ಉತ್ತಮ ಪುರಾಣಕಾರ, ಚರಿತ್ರಕಾರ ಎಂದು ಗುರುತಿಸಿಕೊಂಡಿದ್ದಾನೆ. ಚಿತ್ರದುರ್ಗ ಬೃಹನ್ಮಠದ ೨೧ನೆಯ ಜಗದ್ಗುರು ಮಹಾಲಿಂಗರ ಜೀವನ-ಸಾಧನೆ-ಸಿದ್ಧಿಗಳನ್ನು ಹೇಳುವುದು ಈ ಕೃತಿಯ ಉದ್ದೇಶವಾಗಿದ್ದರೂ ಇದರ ಜೊತೆಗೆ ಹಿಂದಿನ ೨೦ ಜನ ಪೀಠಾಧ್ಯಕ್ಷರ ಜೀವನ ಚರಿತೆಯನ್ನೂ

ಸಂಕ್ಷಿಪ್ತವಾಗಿ ವಿವರಿಸಲಾಗಿದೆ. ಶೂನ್ಯಪೀಠದ ಪರಂಪರೆಯನ್ನು ವಿಶೇಷವಾಗಿ ವಿವರಿಸುವ ಈ ಕೃತಿ ಅತ್ಯಂತ ಮಹತ್ವದ್ದೆನಿಸಿದೆ.

ಹೀಗೆ ಉಜ್ವಲ ಪರಂಪರೆಯನ್ನು ಹೊಂದಿದ ಮುರುಘಾ ಪರಂಪರೆಯ ಸಾಹಿತ್ಯ ವಿಶಿಷ್ಟವೂ, ವೈವಿಧ್ಯವೂ ಆಗಿದೆ. ವೀರಶೈವ ಸಾಹಿತ್ಯ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗುವಲ್ಲಿ ಈ ಕವಿಗಳು ಸಾಕಷ್ಟು ಶ್ರಮಿಸಿದ್ದಾರೆ. ತಮ್ಮ ಹಿಂದಿನ ಕವಿ-ಕಾವ್ಯ ಪರಂಪರೆಯ ಪ್ರಭಾವಕ್ಕೊಳಗಾಗಿಯೂ ತಮ್ಮ ಸೃಜನಾತ್ಮಕ ಪ್ರತಿಭೆ-ಪಾಂಡಿತ್ಯಗಳಿಂದ ಸ್ವಂತಿಕೆಯನ್ನು ಮೆರೆದಿದ್ದಾರೆ. ಕೃತಿಸಂಖ್ಯೆ ಹಾಗೂ ವೈವಿಧ್ಯಮಯ ಸಾಹಿತ್ಯರೂಪಗಳ ದೃಷ್ಟಿಯಿಂದ ವಿಶೇಷವೆನಿಸಿದ್ದಾರೆ. ಅಪ್ರತಿಮ ಪಾಂಡಿತ್ಯ, ಅನುಭಾವದರ್ಶನ ಹಾಗೂ ಸೃಜನಶೀಲತೆಗಳನ್ನು ಅಳವಡಿಸಿಕೊಂಡ ಇವರ ಕೃತಿಗಳು ಜನಮನದ ಕಾಳಿಕೆಯನ್ನು ಕಳೆಯುವಲ್ಲಿ, ಸಂಸ್ಕೃತಿ ಪ್ರಸಾರ ಮಾಡುವಲ್ಲಿ, ವೀರಶೈವ ಧರ್ಮತತ್ವ ಪ್ರಚಾರ ಮತ್ತು ಪ್ರಸಾರಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸಿವೆ. ಕನ್ನಡ ಸಾಹಿತ್ಯದ ಎಲ್ಲ ಸಾರಸತ್ವವನ್ನು ಹೀರಿಕೊಂಡು ವೈವಿಧ್ಯಮಯ ರೂಪಗಳಲ್ಲಿ ಮೈದಳೆದ ಈ ಸಾಹಿತ್ಯವನ್ನು ಒಟ್ಟಾಗಿ ವಸ್ತು, ರೂಪ, ಭಾಷೆ ಹಾಗೂ ಚಾರಿತ್ರಿಕ ಅಂಶಗಳ ಹಿನ್ನೆಲೆಯಲ್ಲಿ ಮೌಲ್ಯಮಾಪನಕ್ಕೆ ಒಳಪಡಿಸಲಾಗಿದೆ.

ವಸ್ತುವಿನ ದೃಷ್ಟಿಯಿಂದ ನೋಡಿದರೆ ಮುರುಘಾ ಪರಂಪರೆಯ ಕವಿಗಳ ಕಾವ್ಯಗಳು ವೀರಶೈವ ಧರ್ಮದ ತಾತ್ವಿಕಾಂಶಗಳು, ಶಿವನ ಲೀಲಾವಿಲಾಸಗಳು, ಗುರುಸ್ತುತಿ, ಶಿವಸ್ತುತಿ, ಶಿವಗಣಗಳ ಸ್ತುತಿ, ಶಿವಪಾರಮ್ಯ, ಶಿವಯೋಗದ ಸ್ವರೂಪ, ಮಹತ್ವ ಹಾಗೂ ಆಚರಣೆಯ ವಿಧಾನಗಳನ್ನು ಒಳಗೊಂಡಿವೆ. ಶಿವಪುತ್ರ ಷಣ್ಮುಖಸ್ವಾಮಿಯ ಮಹಿಮೆ, ಅಲ್ಲಮಪ್ರಭುವಿನ ಗುರುಗಳಾದ ಅನಿಮಿಷದೇವರ ಚರಿತೆ, ಗುರುಮುರಿಗಾ ಶಾಂತವೀರರ ಸ್ತುತಿ, ಮೀನಾಕ್ಷಿ-ಸುಂದರರ ೬೪ ಲೀಲೆಗಳು, ಚಿತ್ರದುರ್ಗ ಬೃಹನ್ಮಠದ ಪೀಠ ಪರಂಪರೆ ಹಾಗೂ ಪೀಠಾಧಿಪತಿಗಳ ಚರಿತ್ರೆಯನ್ನು ಆಧಾರವಾಗಿಟ್ಟುಕೊಂಡ ಧಾರ್ಮಿಕ, ಐತಿಹಾಸಿಕ, ಪೌರಾಣಿಕ ಹಾಗೂ ಚಾರಿತ್ರಿಕ, ತಾತ್ವಿಕ, ಸ್ತೋತ್ರಪ್ರಧಾನ ವಸ್ತು ಇಲ್ಲಿ ಪ್ರಮುಖವಾಗಿವೆ. ಈ ಮೂಲಕ ವಚನಕಾರರ ಹಾಗೂ ವೀರಶೈವ ಕವಿಗಳ ದೃಷ್ಟಿ-ಧೋರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ. ಸಮಕಾಲೀನ ಅರಸರ ಹಾಗೂ ಸಾಮಾಜಿಕ ಸಂಗತಿಗಳ ಉಲ್ಲೇಖಗಳು ಅನೇಕ ಕೃತಿಗಳಲ್ಲಿ ಅಳವಟ್ಟಿವೆ.

ಸಾಹಿತ್ಯ ರಚನೆಯ ಅಭಿವ್ಯಕ್ತಿಗೆ ಮಾಧ್ಯಮವಾದ ರೂಪದ ದೃಷ್ಟಿಯಿಂದಲೂ ಮುರುಘಾ ಪರಂಪರೆಯ ಕವಿಗಳು ಸಾಕಷ್ಟು ವೈವಿಧ್ಯತೆಯನ್ನು ಮೆರೆದಿದ್ದಾರೆ. ಪಾಂಡಿತ್ಯ ಮೆರೆಯಲು ಚಂಪೂ ಹಾಗೂ ಷಟ್ಪದಿ ರೂಪಗಳಲ್ಲಿ ಪ್ರೌಢಕಾವ್ಯಗಳನ್ನು ರಚಿಸಿದರೆ, ಜನಮನವನ್ನು ತಟ್ಟಲು ಯಕ್ಷಗಾನ, ಜಾನಪದ ಧಾಟಿಯಲ್ಲಿ ಲಘು ಕೃತಿಗಳನ್ನು ರಚಿಸಿದ್ದಾರೆ. ವೀರಶೈವ ಧರ್ಮದ ತಾತ್ವಿಕಾಂಶಗಳನ್ನು ಪ್ರತಿಪಾದಿಸುವುದಕ್ಕಾಗಿ, ಶಿವನ ಲೀಲಾವಿಲಾಸ, ಶಿವಯೋಗದ ಸ್ವರೂಪ, ಮಹತ್ವ, ಶಿವಪಾರಮ್ಯ ಈ

ಮೊದಲಾದ ಅಂಶಗಳನ್ನು ಎತ್ತಿ ಹೇಳಲು ವಚನ, ಸ್ವರವಚನ, ಕಂದ, ಷಟ್ಪದಿ, ನಾಂದ್ಯ, ಸ್ತೋತ್ರದಂತಹ ಸಾಹಿತ್ಯ ಪ್ರಕಾರಗಳನ್ನು ಬಳಸಿಕೊಂಡಿದ್ದಾರೆ. ತಾರಾವಳಿ ಷಟ್ಪದಿ ರೂಪಗಳಲ್ಲಿ ಚಾರಿತ್ರಿಕ ಅಂಶಗಳನ್ನು ಅಳವಡಿಸುವ ಮೂಲಕ ತಮ್ಮ ಕೃತಿಗಳನ್ನು ಇತಿಹಾಸ ರಚನೆಗೆ ಆಕರಗಳಾಗುವಂತೆ ಮಾಡಿದ್ದಾರೆ. ಒಟ್ಟಾರೆಯಾಗಿ ಮುರುಘಾ ಪರಂಪರೆಯ ಸಾಹಿತ್ಯ ರೂಪಗಳನ್ನು ಚಂಪೂ, ವಚನ, ಸ್ವರವಚನ, ಷಟ್ಪದಿ, ಕಂದ, ದಂಡಕ, ಚೌಪದಿ, ಟೀಕೆ, ನಿಘಂಟು, ಉದ್ಧರಣೆ, ನಾಂದ್ಯ, ಕೊರವಂಜಿ ಪದ, ಹೋಳಿಪದ, ಯಕ್ಷಗಾನ ಎಂದು ಗುರುತಿಸಲಾಗಿದೆ.

ಸಾಹಿತ್ಯದಲ್ಲಿ ಭಾಷೆಯ ಬಳಕೆ ಭಾವಾಭಿವ್ಯಕ್ತಿಯ ಯೋಗ್ಯ ಸಾಧನವಾಗಿದೆ. ನಿತ್ಯಪರಿವರ್ತನಶೀಲವಾದ ಭಾಷೆಯು ಆಯಾ ಕಾಲಘಟ್ಟದ ಪ್ರತಿನಿಧಿಯಾಗಿ ಕಾರ್ಯ ನಿರ್ವಹಿಸುತ್ತದೆ. ಈ ಹಿನ್ನೆಲೆಯಲ್ಲಿ ಮುರುಘಾ ಪರಂಪರೆಯ ಕವಿಗಳು ಉಭಯಭಾಷಾ ವಿಶಾರದರಾಗಿದ್ದಾರೆ. ಮಾರ್ಗ–ದೇಶಿ ಭಾಷೆಗಳೆರಡನ್ನೂ ಬಳಸಿಕೊಂಡಿದ್ದಾರೆ. ಚಂಪೂ ಷಟ್ಪದಿಯಂತಹ ದೀರ್ಘ ಕಾವ್ಯಗಳು ಸಂಸ್ಕೃತಭೂಯಿಷ್ಠವೆನಿಸಿದರೂ ಲಘುಕೃತಿಗಳಲ್ಲಿ ಪ್ರಾದೇಶಿಕ ದೇಶಿ ಭಾಷೆಯ ಸೊಗಡನ್ನು ಕಾಣುತ್ತೇವೆ. ಭಾಷಾ ಪ್ರಯೋಗದಲ್ಲಿ ಇವರ ಸಾಧನೆ–ಸಿದ್ಧಿ–ಔಚಿತ್ಯ ಜ್ಞಾನಗಳು ಅಪೂರ್ವವೆನಿಸಿವೆ. ಪಂಚಾಶಿಕೆ, ಶಿವಲಿಂಗ ಷಟ್ಪದಿ ಮೊದಲಾದ ಕೃತಿಗಳಲ್ಲಿ ನಿರೋಷ್ಠ್ಯಪದ, ಗುಣಿತಾಕ್ಷರ ಪದ, ಸರ್ವಲಘು ತಲೆಕಟ್ಟಿನ ಪದ, ಅಚಲಜಿಹ್ವಾಪದ, ಮಾತ್ರಿಕಾಮಾಲ ಈ ಬಗೆಯ ಪದ್ಯಗಳು ಕವಿಗಳ ಸಂಸ್ಕೃತ ಪಾಂಡಿತ್ಯವನ್ನು ಎತ್ತಿ ತೋರಿಸುತ್ತವೆ. ಮಹಾಲಿಂಗೇಂದ್ರವಿಜಯದಂಥ ಕೃತಿಯಲ್ಲಿ ಕವಿಪ್ರತಿಭೆ ಮಿಂಚಿ, ಚರಿತ್ರೆಯ ವಿವರಣೆಯಲ್ಲಿಯೂ ಕಾವ್ಯಸತ್ವವನ್ನು ಪ್ರಕಟಿಸಲು ಭಾಷೆ ಸಹಕಾರಿಯಾಗಿದೆ. ನಿಘಂಟು ಕೃತಿಗಳು ಇವರ ಭಾಷಾ ಪ್ರೌಢಿಮೆಗೆ ಸಾಕ್ಷಿಯಾಗಿವೆ. ಈ ಸಾಹಿತ್ಯದಲ್ಲಿ ಬಳಕೆಯಾದ ಭಾಷೆಯನ್ನು ಸಂಸ್ಕೃತ ಭಾಷೆ, ಕನ್ನಡ ಭಾಷೆ, ಉರ್ದು ಭಾಷೆ, ಕೊರವಂಜಿ ಭಾಷೆ, ಸಂಭಾಷಣಾರೂಪದ ಭಾಷೆ, ಸಂವಾದಿ ಪದ ಬಳಕೆ, ಗಾದೆ ಮಾತುಗಳ ಬಳಕೆ, ನಾಣ್ಣುಡಿಗಳ ಬಳಕೆ, ಛಂದೋಬಂಧಗಳ ಬಳಕೆ, ಅಲಂಕಾರಗಳ ಬಳಕೆ ಇವುಗಳ ಹಿನ್ನೆಲೆಯಲ್ಲಿ ಗುರುತಿಸಬಹುದು.

ವೀರಶೈವ ಧರ್ಮದ ತಾತ್ವಿಕಾಂಶಗಳನ್ನು ಪ್ರತಿಪಾದಿಸುವ, ಶಿವನ ಲೀಲಾವಿಲಾಸಗಳನ್ನು ಉತ್ಕಟಭಕ್ತಿಯಿಂದ ವರ್ಣಿಸುವ ವಸ್ತುವನ್ನೊಳಗೊಂಡ ಮುರುಘಾ ಪರಂಪರೆಯ ಕೃತಿಗಳಲ್ಲಿ ಚಾರಿತ್ರಿಕ ಅಂಶಗಳೂ ಅಡಕವಾಗಿವೆ. ಮಹಾಲಿಂಗೇಂದ್ರವಿಜಯ, ಮನುರಾಜೇಂದ್ರವಿಜಯ ಅಥವಾ ಹಮ್ಮೀರ ಕಾವ್ಯ, ಮುರಿಗೆ ತಾರಾವಳಿ, ಬಿಜ್ಜಮಹಾದೇವಿ ಚಾರಿತ್ರ್ಯ ಈ ಕೃತಿಗಳಲ್ಲಿ ಚಾರಿತ್ರಿಕ ಅಂಶಗಳನ್ನು ಗುರುತಿಸಬಹುದಾಗಿದೆ.

"ಮುರಿಗೆ ತಾರಾವಳಿ" ಚಾರಿತ್ರಿಕ ದೃಷ್ಟಿಯಿಂದ ತನ್ನದೇ ಆದ ವೈಶಿಷ್ಟ್ಯವನ್ನು ಹೊಂದಿದೆ. ಈ ಕೃತಿಯಲ್ಲಿ ಶಾಂತವೀರರ ವಯೋಮಾನ, ಚಿತ್ರದುರ್ಗಕ್ಕೆ ಅವರು ಬಂದ ಕಾಲಮಾನ, ಅವರು

ಅಲ್ಲಿಯೇ ನೆಲೆಸಲು ನಿರ್ಧರಿಸಿದುದಕ್ಕೆ ಒದಗಿ ಬಂದ ಸಂದರ್ಭ, ಬೆಟ್ಟದ ಮೇಲಿನ 260 ಅಂಕಣದ ಬೃಹತ್ ಮಠದ ನಿರ್ಮಾಣ, ಶಾಂತವೀರರ ಅಂತ್ಯಕಾಲ, ಸಮಕಾಲೀನ ಸಮೀಪಕಾಲೀನ ವಿಷಯಗಳು ಸ್ಪಷ್ಟವಾಗಿ ಮೂಡಿಬಂದಿವೆ. ಹೀಗೆ ಈ ಎಲ್ಲ ಅಂಶಗಳನ್ನೊಳಗೊಂಡ ಈ ಕೃತಿಯೊಂದು ವಿಶ್ವಾಸಾರ್ಹ ಚಾರಿತ್ರಿಕ ಕೃತಿಯಾಗಿದೆ.

"ರಾಜೇಂದ್ರವಿಜಯ" ಎಂಬ ಪರ್ಯಾಯನಾಮವನ್ನು ಹೊಂದಿದ ಹಮ್ಮೀರ ಕಾವ್ಯದ ವಸ್ತುವನ್ನೇ "ಮನುರಾಜೇಂದ್ರ ತಾರಾವಳಿ" ಒಳಗೊಂಡಿದೆ. ಎರಡೂ ಕೃತಿಗಳು ಅಲ್ಲಮಪ್ರಭುಗಳ ಗುರುಗಳಾದ ಪಟ್ಟದಕಲ್ಲಿನ ಅನಿಮಿಷದೇವರ ಚರಿತ್ರೆಯನ್ನು ಹೇಳುತ್ತವೆ.

ಪ್ರಭುದೇವರು ಗೊಗ್ಗಯ್ಯನಿಗೆ ಈ ಮನುರಾಜೇಂದ್ರನ ಚರಿತ್ರೆಯನ್ನು ಬೋಧಿಸುತ್ತಾರೆ. ಪ್ರಣವಾವತಾರನಾದ ಶ್ರೀಮನುರಾಜನ ಸ್ಥೂಲಪರಿಚಯ, 'ಹಮ್ಮೀರ' ನಾಮಾಂಕಿತನಾದ ಈತನ ಬಾಲ್ಯ, ಯೌವ್ವನ, ಕಾಂಭೋಜರಾಜನ ಪುತ್ರಿ ಕಾಂತಾಗೌರಿಯೊಡನೆ ವೈಭವದ ವಿವಾಹ, ಹಮ್ಮೀರನ ಶಿವಲಿಂಗ ನಿಷ್ಠೆ, ಅವನಿಗುಂಟಾದ ಶಿವಲಿಂಗದ ಕಡುದಾಹ ಈ ಎಲ್ಲ ಅಂಶಗಳನ್ನು ಗೊಗ್ಗಯ್ಯನಿಗೆ ಪ್ರಭುದೇವರು ವಿವರಿಸಿ ಬೋಧಿಸುತ್ತಾರೆ. ಹೀಗೆ ಅನಿಮಿಷದೇವರ ಚರಿತ್ರೆಯನ್ನು ಹೇಳುವ ಮೂಲಕ "ಹಮ್ಮೀರಕಾವ್ಯ" ಹಾಗೂ "ಮನುರಾಜೇಂದ್ರ ತಾರಾವಳಿ" ಕೃತಿಗಳು ಚಾರಿತ್ರಿಕ ದೃಷ್ಟಿಯಿಂದ ತಮ್ಮದೇ ಆದ ಮಹತ್ವವನ್ನು ಪಡೆದಿವೆ.

ಮಹದೇವಕವಿಯ "ಮಹಲಿಂಗೇಂದ್ರವಿಜಯ"ಕ್ಕೆ ಮುರುಘಾ ಸಂಪ್ರದಾಯದ 21ನೆಯ ಜಗದ್ಗುರು ಮಹಾಲಿಂಗರ ಜೀವನ-ಸಾಧನೆ-ಸಿದ್ಧಿಗಳು ಮುಖ್ಯ ವಸ್ತುವಾಗಿವೆ. ಅದಕ್ಕೆ ಪೂರಕವಾಗಿ ಈ ಪೀಠ ಪರಂಪರೆಯಲ್ಲಿ ಆಗಿ ಹೋದ 20 ಜಗದ್ಗುರುಗಳ ಚರಿತ್ರೆ, ನಂತರದ 22ನೆಯ ಜಗದ್ಗುರುಗಳ ಚರಿತ್ರೆಯನ್ನು ಒಳಗೊಂಡ ಈ ಕೃತಿ ಬೃಹತ್ ಗಾತ್ರದ ಮಹತ್ವದ ಚಾರಿತ್ರಿಕ ಕಾವ್ಯ ಶೂನ್ಯ ಸಿಂಹಾಸನದ ಚೆನ್ನಬಸವಣ್ಣನಿಂದ ಹಿಡಿದು ಮಹಾಲಿಂಗ ಜಗದ್ಗುರುವಿನ ವರೆಗೂ ಒಟ್ಟು 20 ಜಗದ್ಗುರುಗಳ ಜೀವನ ಚರಿತ್ರೆಯನ್ನು ವಿವರಿಸಲಾಗಿದೆ.

"ಬಿಜ್ಜಮಹಾದೇವಿ ಚಾರಿತ್ರ"ದಲ್ಲಿ ಬಿಜ್ಜಾವರದ ಕದಿರಕಾಯಕದವಳಾದ ಅಮ್ಮವ್ವೆಯ ಚರಿತ್ರೆಯನ್ನು ಹೇಳಲಾಗಿದೆ. ಅಮ್ಮವ್ವೆಯು ಶಿವನನ್ನೇ ಮಗನನ್ನಾಗಿ ಪಡೆಯಲು ಬಯಸಿದಾಗ ಅವಳ ಭಕ್ತಿಯನ್ನು ಪರೀಕ್ಷಿಸಲು ಶಿಶುರೂಪದ ಶಿವನು ಖಾಯಿಲೆಯಿಂದ ನರಳುವುದಕ್ಕೆ ಪ್ರಾರಂಭ ಮಾಡಿದನು. ಅಮ್ಮವ್ವೆ ದುಃಖದಿಂದ ಶಿವಲಿಂಗದ ಎದುರಿಗೆ ಹೋಗಿ ತನ್ನ ತಪ್ಪನ್ನು ತಿಳಿಸೆಂದು ಕತ್ತಿಯನ್ನೆತ್ತಿ ಕೊರಳನ್ನು ಕತ್ತರಿಸಿಕೊಳ್ಳಲು ಹೋದಾಗ ಶಿವ ಪ್ರತ್ಯಕ್ಷವಾಗಿ ಕೈಲಾಸಕ್ಕೆ ಕರೆದೊಯ್ಯುವನು. ಯಕ್ಷಗಾನ ರೂಪದಲ್ಲಿ ಶಿವಶರಣೆಯೊಬ್ಬಳ ಚಾರಿತ್ರ್ಯ ನಿರೂಪಣೆ ಮಾಡಿರುವುದು ಇಲ್ಲಿ ಮಹತ್ವಪೂರ್ಣವೆನಿಸಿದೆ.

"ಪ್ರಭುಲೀಲಾ" ಸಂಸ್ಕೃತ ಭಾಷೆಯಲ್ಲಿ ರಚಿತವಾದ ಈ ಕೃತಿ ಅಲ್ಲಮಪ್ರಭುವಿನ ಜೀವನ ಚರಿತ್ರೆಯನ್ನೇ ಕಾವ್ಯ ವಸ್ತುವಾಗಿಸಿಕೊಂಡಿದೆ. ಇಲ್ಲಿ ಸತ್ಯಸ್ವರೂಪಿಯೂ, ಲಿಂಗರೂಪಿಯೂ ಆದ ಅಲ್ಲಮನು ಭೂಮಿಯಲ್ಲಿ ಅವತರಿಸಿದ ರೀತಿ, ಅವನ ಬಾಲ್ಯದ ವರ್ಣನೆ, ಮಾಯೆಯ ಜನನ, ರಾಜಕೀರ್ತಿ ವರ್ಣನೆ, ತಪೋದೇಶವರ್ಣನೆ, ಅಲ್ಲಮನ ಪುರಪ್ರವೇಶ ಮೊದಲಾದ ವಿಷಯಗಳು ಅಡಕವಾಗಿವೆ. ಒಟ್ಟಿನಲ್ಲಿ ವೀರಶೈವರಲ್ಲಿ ವೈರಾಗ್ಯ ಮೂರ್ತಿಯೆಂದು ಹೆಸರು ಪಡೆದ ಶೂನ್ಯಸಿಂಹಾಸನದ ಆದ್ಯಗುರುವಾದ ಅಲ್ಲಮಪ್ರಭುವಿನ ಜೀವನಚರಿತ್ರೆಯನ್ನು ವಿವರಿಸುವ ಈ ಕಾವ್ಯವೂ ಚಾರಿತ್ರಿಕ ಕಾವ್ಯವೆಂದು ಹೇಳಬಹುದು.

ಹೀಗೆ ಮುರುಘಾ ಪರಂಪರೆಯ ಕವಿಗಳು ತಮ್ಮ ಕೃತಿಗಳಲ್ಲಿ ಮುರಿಗಾ ಶಾಂತವೀರ, ಅಲ್ಲಮಪ್ರಭು, ಅನಿಮಿಷದೇವ, ಬಿಜ್ಜಮಹಾದೇವಿ, ಮಹಲಿಂಗ ಜಗದ್ಗುರು ಹಾಗೂ ಶೂನ್ಯಸಿಂಹಾಸನದ 20 ಜಗದ್ಗುರುಗಳ ಚರಿತ್ರೆಯನ್ನು ವಿವರಿಸಿದ್ದಾರೆ. ಈ ಮೂಲಕ ಈ ಕೃತಿಗಳು ಮಹತ್ವಪೂರ್ಣ ಚಾರಿತ್ರಿಕ ಅಂಶಗಳ ಆಕರವಾಗಿವೆ ಎಂದು ಹೇಳಬಹುದು.

ಈ ಎಲ್ಲ ಅಂಶಗಳನ್ನು ಕ್ರೋಡೀಕರಿಸಿ ಮುರುಘಾ ಪರಂಪರೆಯ ಸಾಹಿತ್ಯದ ವೈಶಿಷ್ಟ್ಯಗಳನ್ನು ಹೀಗೆ ಸಂಗ್ರಹಿಸಬಹುದು.

1) ಮುರುಘಾ ಪರಂಪರೆಯ ಸಾಹಿತ್ಯ ಉಜ್ವಲವಾಗಿದೆ. ಸಂಖ್ಯೆಯ ದೃಷ್ಟಿಯಿಂದ ವಿಫುಲವಾಗಿದೆ. ವೈವಿಧ್ಯಮಯ ವಸ್ತು-ರೂಪಗಳನ್ನು ಹೊಂದಿದೆ. ಶ್ರೀಮಂತಿಕೆಯಿಂದ ಕೂಡಿದೆ.

2) ಮುರುಘಾ ಪರಂಪರೆಯಲ್ಲಿ ಬರುವ ಕವಿಗಳು ಉಭಯಭಾಷಾವಿಶಾರದರಾಗಿದ್ದು, ಕನ್ನಡ-ಸಂಸ್ಕೃತ ಎರಡೂ ಭಾಷೆಗಳಲ್ಲಿ ಉತ್ತಮ ಸಾಹಿತ್ಯ ರಚಿಸಿದ್ದಾರೆ. ಮಾರ್ಗ-ದೇಶಿ ಭಾಷೆಗಳೆರಡನ್ನೂ ಸಮನಾಗಿ ಬಳಸಿಕೊಂಡಿದ್ದಾರೆ.

3) ಮುರುಘಾ ಪರಂಪರೆಯ ಕವಿಗಳ ಸಾಹಿತ್ಯದ ವಸ್ತು ಹೆಚ್ಚಾಗಿ ಧಾರ್ಮಿಕ, ತಾತ್ವಿಕ, ಸ್ತೋತ್ರಪ್ರಧಾನವಾಗಿದೆ ಜೊತೆಗೆ ಪೌರಾಣಿಕ, ಚಾರಿತ್ರಿಕ ವಸ್ತುವಿಗೂ ಎಡೆಕೊಡುವ ಮೂಲಕ ವಚನಕಾರರ ಹಾಗೂ ವೀರಶೈವ ಕವಿಗಳ ದೃಷ್ಟಿ-ಧೋರಣೆಗಳನ್ನು ಮುಂದುವರೆಸಿಕೊಂಡು ಬಂದಿದ್ದಾರೆ.

4) ಮುರುಘಾ ಪರಂಪರೆಯ ಸಾಹಿತ್ಯದಲ್ಲಿ ದೀರ್ಘ ಕಾವ್ಯಗಳಿಗಿಂತ ಲಘು ಕೃತಿಗಳ ಸಂಖ್ಯೆ ಹೆಚ್ಚಾಗಿದೆ.

5) ಮುರುಘಾ ಪರಂಪರೆಯ ಸಾಹಿತ್ಯದಲ್ಲಿ ಬಳಕೆಯಾದ ಸಾಹಿತ್ಯ ರೂಪಗಳನ್ನು ಚಂಪೂ, ವಚನ, ಸ್ವರವಚನ, ಷಟ್ಪದಿ, ಚೌಪದಿ, ದಂಡಕ, ಕಂದ, ನಿಘಂಟು, ತಾರಾವಳಿ, ಟೀಕೆ, ಉದ್ಧರಣೆ, ನಾಂದ್ಯ, ಯಕ್ಷಗಾನ, ಕೊರವಂಜಿ ಸಾಹಿತ್ಯ ಹಾಗೂ ಹೋಳಿಪದ ಎಂದು ವಿಂಗಡಿಸಬಹುದು.

6) ಮುರುಘಾ ಪರಂಪರೆಯ ಸಾಹಿತ್ಯದಲ್ಲಿ ಸಮಕಾಲೀನ ಅರಸರ ಹಾಗೂ ಸಾಮಾಜಿಕ ಸಂಗತಿಗಳು ಉಲ್ಲೇಖವಾಗಿದ್ದು, ಇವು ಚಾರಿತ್ರಿಕ ಮಹತ್ವವನ್ನು ಪಡೆದು, ಇತಿಹಾಸ ರಚನೆಗೆ ದಾಖಲಾರ್ಹವಾದ ಆಕರಗಳಾಗಿವೆ.

7) ಮುರುಘಾ ಪರಂಪರೆಯ ಸಾಹಿತ್ಯ ಕೇವಲ ಕೃತಿರಚನೆಗೆ ಮಾತ್ರ ಮೀಸಲಾಗದೆ, ಇಲ್ಲಿ ಬರುವ ಮಠಗಳು ಮತ್ತು ಮಠಾಧ್ಯಕ್ಷರು ಪ್ರಾಚೀನ ವೀರಶೈವ ಸಾಹಿತ್ಯ ಕೃತಿಗಳ ಹಸ್ತಪ್ರತಿ ಸಂಗ್ರಹ, ಹಸ್ತಪ್ರತಿ ನಕಲು, ಪ್ರತಿನಕಲು ಕಾರ್ಯಗಳನ್ನು ನಿರಂತರವಾಗಿ ನಡೆಸಿಕೊಂಡು ಬಂದಿರುವರು. ಅಲ್ಲದೆ ಗ್ರಂಥಗಳ ಪರಿಷ್ಕರಣೆ, ಪ್ರಕಟಣೆ ಕಾರ್ಯವನ್ನು ಕೈಗೊಳ್ಳುವ ಮೂಲಕ ಅಪಾರ ವೀರಶೈವ ಸಾಹಿತ್ಯ ಬೆಳಕಿಗೆ ಬರುವಂತೆ ಮಾಡಿದ್ದಾರೆ. ಜೊತೆಗೆ ಅನೇಕ ಸಾಹಿತಿಗಳು ಈ ದಿಸೆಯಲ್ಲಿ ಕಾರ್ಯ ಮಾಡಲು ಪ್ರೋತ್ಸಾಹಿಸಿದ್ದಾರೆ.

8) ಮುರುಘಾ ಪರಂಪರೆಯ ಸಾಹಿತ್ಯದ ಕವಿಗಳನ್ನು ಚಂಪೂ ಕವಿಗಳೂ, ವಚನಕಾರರು, ಸ್ವರವಚನಕಾರರು, ಷಟ್ಪದಿಕಾರರು, ತಾರಾವಳಿಕಾರರು, ನಾಂದ್ಯಕಾರರು, ಟೀಕಾಕಾರರು ಎಂದು ವಿಶೇಷವಾಗಿ ಗುರುತಿಸಬಹುದು. ಅಲ್ಲದೆ ಕನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೃತಿ ರಚಿಸುವ ಮೂಲಕ ಕನ್ನಡ ಸಾಹಿತ್ಯದ ಸಮೃದ್ಧಿಗೆ ಬೆಳವಣಿಗೆಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆಂದು ಹೇಳಬಹುದು.

ಅಂತಿಮವಾಗಿ ಹೇಳುವುದಾದರೆ ಈ ಪರಂಪರೆಯ ಸಾಹಿತ್ಯದ ಸಮಗ್ರಶೋಧ ಇನ್ನೂ ಆಗಬೇಕಾಗಿದೆ. ಈಗ ದೊರೆತ ಕೃತಿಗಳಲ್ಲಿ ಅರ್ಧಕ್ಕಿಂತ ಕಡಿಮೆ ಪ್ರಕಟವಾಗಿವೆ. ಇನ್ನೂ ಅಪ್ರಕಟಿತವಾದ ಸಾಹಿತ್ಯದ ಪ್ರಮಾಣವೇ ಅಧಿಕವಾಗಿದೆ. ಅವೆಲ್ಲ ಪ್ರಕಟವಾಗಿ ಮೌಲ್ಯಮಾಪನಗೊಂಡಾಗ ಈ ಪರಂಪರೆಯ ಸಾಹಿತ್ಯದ ನಿಜವಾದ ಸತ್ವ, ಶ್ರೀಮಂತಿಕೆ, ಮೌಲಿಕತೆಗಳು ಮನದಟ್ಟಾಗುತ್ತವೆ.

ಅನುಬಂಧಗಳು

೧) ಮುರುಘಾ ಪರಂಪರೆಯ ಮಠಗಳು

೨) ಹಾಲಾಸ್ಯ ಪುರಾಣದ ಅರವತ್ತ್ನಾಲ್ಕು ಲೀಲೆಗಳು

೩) ಮಹಲಿಂಗೇಂದ್ರ ವಿಜಯದ – ಶೂನ್ಯಪೀಠ ಪರಂಪರೆ

೪) ಶ್ರೀ ಮುರುಘರಾಜೇಂದ್ರ ಗ್ರಂಥಮಾಲೆಯ ಪ್ರಕಟಣೆಗಳು

೫) ಎಸ್.ಜೆ.ಎಂ. ವಿದ್ಯಾಪೀಠದ ಶೈಕ್ಷಣಿಕ ಸಂಸ್ಥೆಗಳು

ಮುರುಘಾ ಸಮಯದ ಮಠಗಳು

(೭೯) ಕಲ್ಮಠ – ಸವಣೂರಿನ ಪಶ್ಚಿಮಭಾಗ ಪುಟ–೧೨೭೭

(೮೦) ವಿರಕ್ತಮಠ – ಹತ್ತಿಮತ್ತೂರು, ಸವಣೂರು ತಾ. ಪುಟ–೧೨೭೯

(೮೧) ಅಕ್ಕಿಮಠ – ಅಗಡಿ, ಹಾವೇರಿ ತಾ. ಪುಟ–೧೨೮೩

(೮೨) ವಿರಕ್ತಮಠ – ಗುತ್ತಲ ಹಾವೇರಿ ತಾ. ಪುಟ–೧೨೮೭

(೮೩) ವಿರಕ್ತಮಠ – ಉಪ್ಪುಹುಣಸೆ, ಹಾನಗಲ್ಲ ತಾ. ಪುಟ–೧೩೦೧

(೮೪) ವಿರಕ್ತಮಠ – ಚಿಕ್ಕೆರೂರು, ಹಿರೇಕೆರೂರು ತಾ. ಪುಟ–೧೩೧೧

(೮೫) ಮುರುಘಾಮಠ – ಮಡ್ಲೂರು, ಹಿರೇಕೆರೂರು ತಾ. ಪುಟ–೧೩೧೪

(ಕರ್ನಾಟಕದ ವೀರಶೈವ ಮಠಗಳು – ಚಂದ್ರಶೇಖರ ನಾರಣಾಪುರ ಕೃತಿ ಆಧಾರಿತ)

ಹಾಲಾಸ್ಯ ಪುರಾಣದ ಅರವತ್ನಾಲ್ಕು ಲೀಲೆಗಳು

.೧) ಕೃತಯುಗದ ಲೀಲೆಗಳು :

೧. ಇಂದ್ರಾನುಗ್ರಹ ಲೀಲೆ

೨. ಐರಾವತಶಾಪವಿಮೋಚನಲೀಲೆ

೩. ಕದಂಬವನಪುರ ನಿರ್ಮಾಣ ಲೀಲೆ

೪. ತಟಾತಕಾ ಜನನಿಲೀಲೆ

೫. ತಟಾತಕಾ ಕಲ್ಯಾಣಲೀಲೆ

೬. ಪತಂಜಲಿ ದೃಷ್ಟನರ್ತನ ಲೀಲೆ

೭. ಕುಂಡೋದರಾನ್ನಭಕ್ಷಣ ಲೀಲೆ

೮. ಕುಂಡಕುಕಿದರ್ಶಿತಾನ್ನಗರ್ತನಾದಿ ಲೀಲೆ

೯. ಸಪ್ತಸಾಗರಾಯನ ಲೀಲೆ

೧೦. ಮಲಯಧ್ವಜದರ್ಶನ ಲೀಲೆ

೧೧. ಕುಮಾರೋತ್ಪತ್ತಿ ಲೀಲೆ

೧೨. ಉಗ್ರಪಾಂಡ್ಯವಲಯಾಧ್ಯಾಯುಧ ತ್ರಯದಾನ ಲೀಲೆ

೧೩. ಶಕ್ತಿಸಾಗರತಾಡನಲೀಲೆ

೧೪. ಇಂದ್ರಮೌಳಿಭೇದನ ಲೀಲೆ

೧೫. ಮೇರುಕಾಂಚನಾಪಹರಣ ಲೀಲೆ

೧೬. ವೇದಾರ್ಥಬೋಧನ ಲೀಲೆ

೨) ತ್ರೇತಾಯುಗದ ಲೀಲೆಗಳು :

೧. ರಾಜಕಿರೀಟ ಮಣಿಪ್ರಧಾನ ಲೀಲೆ

೨. ಮೇಘಸಾಗರಪಾನ ಲೀಲೆ

೩. ಮೇಘೈಕೋನವಿಂಶತ್ಯತಿ ವೃಷ್ಟಿ ನಿವಾರಣ ಲೀಲೆ

೪. ಸಿದ್ಧಚರಿತ ಲೀಲೆ

೫. ಶಿಲಾಗಜೇಕ್ಷು ಪ್ರಧಾನಲೀಲೆ

೬. ನಗ್ನಹಸ್ತಿಹನನ ಲೀಲೆ

೭. ದ್ವಿಜಕನ್ಯಾರ್ತಿಹರಣಲೀಲೆ

೮. ವೃತ್ಯಸ್ತನೃತ್ತಲೀಲೆ

೯. ದ್ವಿಜವನಿತಾವಧ ನಿರೂಪಣ ಲೀಲೆ

೧೦. ಪಿತೃಘ್ನದೋಷನಿವಾರಣ ಲೀಲೆ

೧೧. ಅಂಕವಿಜಯ ಲೀಲೆ

೧೨. ನಗ್ನಸರ್ಪಹನನ ಲೀಲೆ

೧೩. ನಗ್ನಧೇನುಪತನ ಲೀಲೆ

೧೪. ಸೇನಾದರ್ಶನ ಲೀಲೆ

೧೫. ಹೇಮನೀವಿ ಪ್ರಧಾನಲೀಲೆ

೧೬. ವಲಯ ವಿಕ್ರಯಲೀಲೆ

೩) ದ್ವಾಪರಯುಗದ ಲೀಲೆಗಳು :

೧. ಅಷ್ಟಸಿದ್ಧ್ಯುಪದೇಶ ಲೀಲೆ

೨. ಕಾಂತಾರಚ್ಛೇದಿ ಚೋಳಾರ್ಥದ್ವಾರ ಭೇದನ ಲೀಲೆ

೩. ಪಾಂಡ್ಯಸೇನಾಪಾನೀಯ ಪ್ರಧಾನಲೀಲೆ

೪. ಗಸವಾದ ಪ್ರದರ್ಶನ ಲೀಲೆ

೫. ಚೋಳಸೇನಾಪ್ರತಾಪನ ಲೀಲೆ

೬. ಶೂದ್ರಾಕ್ಷತ ಮೂತಪ್ರಧಾನಲೀಲೆ

೭. ವೈಶ್ಯಮಾತುಳಭಾವನಾ ಲೀಲೆ

೮. ವರಗುಣಪಾಂಡ್ಯ ಬ್ರಹ್ಮಹತ್ಯ

ವಿನಾಶನಲೀಲೆ

೯. ಕಾಷ್ಟಭಾರಧಾರಣ ಲೀಲೆ

೧೦. ಪತ್ರಿಕಾ ಲೇಖನ ಲೀಲೆ

೧೧. ಭದ್ರಫಲಕಪ್ರಧಾನ ಲೀಲೆ

೧೨. ಭದ್ರಸ್ತ್ರೀಜಯಪ್ರದ ಲೀಲೆ

೧೩. ವರಾಹಶಿಸುಸ್ತನ್ಯಪ್ರಧಾನ ಲೀಲೆ

೧೪. ಕ್ರೋಡಶಿಶುಸಚಿವತ್ಸ ಪ್ರಧಾನ ಲೀಲೆ

೧೫. ಭಾರದ್ವಾಜ ಮೃತ್ಯುಂಜಯೋಪದೇಶ ಲೀಲೆ

೧೬. ಕೋಯೆಷ್ಟಮುಕ್ತಿಪ್ರಧಾನ ಲೀಲೆ

೪) ಕಲಿಯುಗದ ಲೀಲೆಗಳು :

೧. ಪುರಸೀಮಾಪ್ರದರ್ಶನ ಲೀಲೆ

೨. ಚೋಳಸೇನಾಪ್ರಭುಜನ ಲೀಲೆ

೩. ಸಂಘಫಲಕ ಪ್ರಧಾನಲೀಲೆ

೪. ದ್ವಜಾರ್ಯಪ್ರಧಾನಲೀಲೆ

೫. ನತ್ಕೀರಕರಕ್ಷಣ ಲೀಲೆ

೬. ನತ್ಕೀರ ಸೂತ್ರೋಪದೇಶ ಲೀಲೆ

೭. ಪ್ರಬಂಧ ತಾರತ್ಮಯ ನಿರ್ಣಯಲೀಲೆ

೮. ಉತ್ತರಹಾಲಾಸ್ಯ ಪ್ರಾದುರ್ಭಾವ ಲೀಲೆ

೯. ಕೈವರ್ತಕನ್ನಿಕಾ ಕಲ್ಯಾಣಲೀಲೆ

೧೦. ವಾತಮರೀಶ್ವರ ಜ್ಞಾನದೀಕ್ಷಾ ಕಾರಣಲೀಲೆ

೧೧. ತುರಂಗ ವಿಕ್ರಯಲೀಲೆ

೧೨. ನದ್ಯಾಕರ್ಷಣ ಲೀಲೆ

೧೩. ಪಿಷ್ಟಮೃದ್ಧರಣ ಲೀಲೆ

೧೪. ಪಾಂಡ್ಯಜ್ವರಶಮನಲೀಲೆ

೧೫. ನಗ್ನಶೂಲಾರೋಹಣ ಲೀಲೆ

೧೬.ಶಂಭುಕೂಪಶಮಿವೃಕ್ಷಾನಯನ ಲೀಲೆ

ಶೂನ್ಯಪೀಠ ಪರಂಪರೆ ('ಮಹಲಿಂಗೇಂದ್ರ ವಿಜಯ' ಕೃತಿಯ ಪ್ರಕಾರ)

(೧)	ಚೆನ್ನಬಸವಣ್ಣ*	ಉಳುಮೆ
(೨)	ತೋಂಟದಸಿದ್ಧಲಿಂಗ	ಎಡೆಯೂರು
(೩)	ನಿರಕ್ಷರದ ಬೋಳಬಸವ	ಮದ್ದಗಿರಿ
(೪)	ಸಿದ್ಧವೀರಸ್ವಾಮಿಗಳು	ಗುಮ್ಮಳಾಪುರ
(೫)	ಗೂಳೂರು ಸಿದ್ಧವೀರಸ್ವಾಮಿಗಳು	ಗುಮ್ಮಳಾಪುರ
(೬)	ಗಗನದ ಸ್ವಾಮಿಗಳು	ಭೈರವನದುರ್ಗ
(೭)	ಕಟ್ಟಿಗೆಹಳ್ಳಿ ಸಿದ್ಧಲಿಂಗಸ್ವಾಮಿಗಳು	ತಿಳುವಳ್ಳಿ
(೮)	ಮುರಿಗೇಂದ್ರ ರಾಜೇಂದ್ರರು	ಚಿತ್ರದುರ್ಗ
(೯)	ಇಮ್ಮಡಿ ಗುರುಸಿದ್ಧ ಸ್ವಾಮಿಗಳು	ಆನಂದಪುರ
(೧೦)	ಸ್ವಾದಿ ಚೆನ್ನಬಸವಸ್ವಾಮಿಗಳು	ಮಾಗಡಿ
(೧೧)	ಶಿರಹಟ್ಟಿ ಸಿದ್ಧಲಿಂಗಸ್ವಾಮಿಗಳು	ಚಂಗಡಹಳ್ಳಿ
(೧೨)	ಗುರುಪಾದ ದೇಶಿಕರು	ಗುರುಮಠಕಲ್ಲು
(೧೩)	ಮೂರುಸಾವಿರದ ಗುರುಪಾದದೇಶಿಕರು	ಚಿತ್ರದುರ್ಗ
(೧೪)	ಮೂರುಸಾವಿರದ ಸಿದ್ಧಲಿಂಗಸ್ವಾಮಿಗಳು	ಹಿರೇಮಾಗಡಿ
(೧೫)	ಒಪ್ಪತ್ತಿನ ಚೆನ್ನವೀರಸ್ವಾಮಿಗಳು	ತಿಳವಳ್ಳಿ
(೧೬)	ವ್ಯಾಕರಣದ ಸಿದ್ಧಲಿಂಗ ಸ್ವಾಮಿಗಳು	ಹಿರೇಮಾಗಡಿ
(೧೭)	ನೈಘಂಟಿನ ಸಿದ್ಧಬಸವ ಸ್ವಾಮಿಗಳು	ಹಾವೇರಿ
(೧೮)	ಸಣ್ಣಬರಹದ ರಾಚನುಡಿ ಸ್ವಾಮಿಗಳು	ಚಿತ್ರದುರ್ಗ
(೧೯)	ಸಾವಳಿಗೆ ಗುರುಶಾಂತ ಸ್ವಾಮಿಗಳು	ಚಿತ್ರದುರ್ಗ
(೨೦)	ಸಣ್ಣಬರಹದ ಚೆನ್ನವೀರ ಸ್ವಾಮಿಗಳು	ಚಿತ್ರದುರ್ಗ
(೨೧)	ಮಹಾಲಿಂಗ ಸ್ವಾಮಿಗಳು	ಶಿರಸಂಗಿ
(೨೨)	ಹೆಬ್ಬಾಳು ರುದ್ರಸ್ವಾಮಿಗಳು*	ಚಿತ್ರದುರ್ಗ
(೨೩)	ಬ್ಯಾಡಗಿ ಮುಪ್ಪಿನೇಂದ್ರ ಸ್ವಾಮಿಗಳು	ಬ್ಯಾಡಗಿ
(೨೪)	ಜಯದೇವಸ್ವಾಮಿಗಳು	ದಾವಣಗೆರೆ
(೨೫)	ಜಯವಿಭವ ಸ್ವಾಮಿಗಳು	ಚಿತ್ರದುರ್ಗ
(೨೬)	ಮಲ್ಲಿಕಾರ್ಜುನ ಸ್ವಾಮಿಗಳು	ಹೊಳಲ್ಕೆರೆ

[* ಮಹಲಿಂಗೇಂದ್ರ ವಿಜಯದ ಕರ್ತೃವಿನ ಪ್ರಕಾರ ಚೆನ್ನಬಸವಣ್ಣನು ಶೂನ್ಯಸಿಂಹಾಸನದ ಮೊದಲನೇ ಪಟ್ಟಧ್ಯಕ್ಷ. ಪ್ರಭುದೇವನು ಶೂನ್ಯಸಿಂಹಾಸನದ ಪರಂಪರೆಯನ್ನು ಪ್ರವರ್ತಿಸಿದವನೇ ಹೊರತು, ಅದರ ಸಾಂಸ್ಥಿಕ ಅಧ್ಯಕ್ಷನಲ್ಲ. ಹೀಗಾಗಿ ಚೆನ್ನಬಸವಣ್ಣನಿಂದ ಹೆಬ್ಬಾಳು ರುದ್ರಸ್ವಾಮಿಗಳವರೆಗೆ ಶೂನ್ಯಪೀಠ ಪರಂಪರೆಯನ್ನು ಗುರುತಿಸಿದ್ದಾನೆ.]

ಶ್ರೀ ಮುರುಘ ರಾಜೇಂದ್ರ ಗ್ರಂಥಮಾಲೆಯ ಪ್ರಕಟಣೆಗಳು

ಅರಿವಿನ ಗುರು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಆತ್ಮನಿರೀಕ್ಷಣೆ (ಬಸವಣ್ಣನವರ ವಚನಗಳ ಭಾವಾರ್ಥ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಅಂತರಾಳ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಬೆಳಕಿನೆಡೆಗೆ (ನಾಟಕ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಭರವಸೆಯ ಬದುಕು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಚಿಂತನ ತರಂಗ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಈ ಜನ್ಮ ಬಳಿಕಲ್ಲ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಹಬ್ಬಗಳ ಆಚರಣೆಯಲ್ಲಿ ಹೊಸ ದೃಷ್ಟಿಕೋನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಜಗವ ಸುತ್ತಿದೆ (ಪ್ರವಾಸ ಕಥನ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಝೇಂಕಾರ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಕಲ್ಯಾಣ ಮಹೋತ್ಸವ ಪದ್ಧತಿ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಕಾಯಕಯೋಗಿ ನುಲಿಯ ಚಂದಯ್ಯ ವಚನಗಳು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಕಾಯಕನಿಧಿ ಮೇದಾರ ಕೇತಯ್ಯ ವಚನಗಳು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಮಾನವನೇ ಮಹಾದೇವ (ಶಿವಯೋಗ ಧ್ಯಾನ-ಕನ್ನಡ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಮಾನವ್ ಹೀ ಮಹದೇವ್ (ಶಿವಯೋಗ ಧ್ಯಾನ-ಹಿಂದಿ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಮುಗಿಲ ಮಿಂಚು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ನಿಮ್ಮೊಂದಿಗೆ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ನಮ್ಮ ಸುತ್ತ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ನಿಜದುದಯ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ನಿಜಾಚರಣೆ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ನಿರಾಳದ ನಿಲುವು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಪರಿವರ್ತನೆಯ ಪಥ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಶಬ್ದಗೊಳಗಣ ನಿಶ್ಶಬ್ದ (ರೂಪಕಗಳ ಗ್ರಂಥ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಸುಳಿಯೊಡೆದ ಬೆಳೆ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಶರಣ ಸೂತ್ರ (ವಚನಗಳ ಅರ್ಥವಿವರಣೆ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಸಾಂತ್ವನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಅಗ್ನಿಗಾನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಜೇನು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಕ್ರಾಂತಿಯ ಕನಸು	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಸಂದೇಹ ಸಮಾಧಾನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಪ್ರಭಾವಳಿ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ವಿದ್ಯಮಾನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಅಭಿವೃದ್ಧಿಯ ಹಾದಿಗೆ ಮುಳ್ಳಿನ ಹಾಸಿಗೆ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಸಹಜ ಶಿವಯೋಗ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ಉತ್ತಮ ನಾಳೆಯ ನಿರೀಕ್ಷೆ	– ಶ್ರೀ ಶಿವಮೂರ್ತಿ ಮುರುಘಾ ಶರಣರು
ವಚನಕ್ರಾಂತಿ (ವಚನಗಳ ಸಂಕಲನ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ವಚನ ಶ್ರೀ (ವಚನಗಳ ಸಂಕಲನ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ವಚನ ವರ್ತಮಾನ (ವಚನಗಳ ವಿಮರ್ಶೆ)	– ಶ್ರೀ ಶಿವಮೂರ್ತಿ ಮುರುಘಾ ಶರಣರು
ವಚನ ಸುಮನ	– ಶ್ರೀ ಶಿವಮೂರ್ತಿ ಮುರುಘಾ ಶರಣರು
FLORAL OFFERINGS	– ಶ್ರೀ ಶಿವಮೂರ್ತಿ ಮುರುಘಾ ಶರಣರು

TOWARDS TRANSFORMATION – ಶ್ರೀ ಶಿವಮೂರ್ತಿ ಮುರುಘಾ ಶರಣರು
REFLECTION ON RELIGION SOCIETY – ಶ್ರೀ ಶಿವಮೂರ್ತಿ ಮುರುಘಾ ಶರಣರು

ಶ್ರೀ ಶಿವಮೂರ್ತಿ ಮುರುಘಾ ಶರಣರ ಜೀವನ ಚರಿತ್ರೆ ಗ್ರಂಥಗಳು :

ಭೂಮಿಯೊಳಗಣ ಬೀಜ – ಶ್ರೀಮತಿ ಡಿ. ಯಶೋಧ ರಾಜಶೇಖರಪ್ಪ
ಬಯಲಗಳಿಕೆಯತ್ತ – ಪ್ರೊ.ಸಿ. ಚಂದ್ರಯ್ಯನಾಯ್ಡು
ಬಸವ ಬೆಳೆ – ಡಾ. ಸಿದ್ದಣ್ಣ ಲಂಗೋಟಿ
ನಿಮ್ಮ ಚಮ್ಮಾವುಗೆಯ ಭಂಟ – ಪ್ರೊ. ಬಿ.ಎಂ. ಶರಭೇಂದ್ರಯ್ಯ
ಶಿವಯೋಗ ಸುಖ – ಶ್ರೀ ಸಿದ್ಧರಾಮಶರಣರು ಬೆಲ್ದಾಳ
ಶಬ್ದ ಸೋಪಾನ – ವಿರೂಪಾಕ್ಷಪ್ಪ ಕೋರಗಲ್ಲ
ತಾಯಿಗಾದ ನೋವು – ಶ್ರೀಮತಿ ಸಿ.ಬಿ. ಶೈಲಾ ಜಯಕುಮಾರ್

ಬಸವತತ್ವ ಆಚರಣೆ ಗ್ರಂಥಗಳು :

ಬಸವತತ್ವ ಪ್ರದೀಪಿಕೆ – ಶ್ರೀ ಸಿದ್ಧರಾಮ ಶರಣರು ಬೆಲ್ದಾಳ

ಚಿಂತನ ಗ್ರಂಥಗಳು

ಅಂತರಂಗ ಬಹಿರಂಗ ಭಾಗ-೫ – ಸಂತೋಷಕುಮಾರ ಗುಲ್ವಾಡಿ

ಪ್ರಾಚೀನ ವಚನ ಧರ್ಮಗ್ರಂಥಗಳು :

ಶಿವಗಣ ಪ್ರಸಾದಿ ಮಹದೇವಯ್ಯ ದೇವರು ಸೇರಿಸಿದ ಶೂನ್ಯಸಂಪಾದನೆ – ಸಂ॥ ಎಲ್. ಬಸವರಾಜು
ವೀರಶೈವ ತತ್ವಪ್ರಕಾಶ (ತತ್ವಾಚರಣೆ) – ಸಂ॥ ಎಲ್. ಬಸವರಾಜು

ಪ್ರಾಚೀನ ಕೃತಿ ಸಮುಚ್ಚಯಗಳು :

ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಕೃತಿಗಳು – ಸಂ॥ ಎಸ್. ವಿದ್ಯಾಶಂಕರ್
ಮುರಿಗಾ ಶಾಂತವೀರ ಸ್ವಾಮಿಗಳ ಕೃತಿಗಳು – ಸಂ॥ ಎಸ್. ಶಿವಣ್ಣ
ಮುರಿಗಾ ಶಾಂತವೀರಸ್ವಾಮಿ ಸ್ತೋತ್ರ ಕರಂಡ – ಸಂ॥ ಎಸ್. ಶಿವಣ್ಣ

ಪ್ರಾಚೀನ ಧರ್ಮ ಕಾವ್ಯಗಳು :

ಮಹಾಲಿಂಗೇಂದ್ರ ವಿಜಯ – ಸಂ. ಎಲ್. ಬಸವರಾಜು
ಶಿವಶರಣ ವಿಲಾಸ ಯಕ್ಷಗಾನ – ಸಂ॥ ಬಿ. ನಂಜುಂಡಪ್ಪ

ವೈದಿಕ ವಿವರಣ ಗ್ರಂಥಗಳು :

ನಾಸದೀಯ ಸೂಕ್ತ – (ವಿವರಣ) ಟಿ.ಎನ್. ಮಲ್ಲಪ್ಪ
ಶ್ವೇತಾಶ್ವತರೋಪನಿಷತ್ – (ವಿವರಣ) ಟಿ.ಎನ್. ಮಲ್ಲಪ್ಪ
ಮುಂಡಕೋಪನಿಷತ್ – (ವಿವರಣ) ಟಿ.ಎನ್. ಮಲ್ಲಪ್ಪ
ಕಠೋಪನಿಷತ್ – (ವಿವರಣ) ಟಿ.ಎನ್. ಮಲ್ಲಪ್ಪ
ಮಾಂಡೂಕ್ಯೋಪನಿಷತ್ – (ವಿವರಣ) ಟಿ.ಎನ್. ಮಲ್ಲಪ್ಪ
ಬ್ರಹ್ಮಸೂತ್ರ ದರ್ಶನ – (ವಿವರಣ) ಟಿ.ಎನ್. ಮಲ್ಲಪ್ಪ
ಪುರುಷಸೂಕ್ತ – (ವಿವರಣ) ಟಿ.ಎನ್. ಮಲ್ಲಪ್ಪ
ಭಗವದ್ಗೀತಾ – (ವಿವರಣ) ಟಿ.ಜಿ. ಸಿದ್ದಪ್ಪಾರಾಧ್ಯ

ಪ್ರಾಚೀನ ಲೌಕಿಕ ಶಾಸ್ತ್ರಗಳು :

ಶಬ್ದಮಣಿದರ್ಪಣಂ (ಕೇಶಿರಾಜ ವ್ಯಾಕರಣ)	–	ಸಂ॥ ಎಲ್. ಬಸವರಾಜು
ವೃತ್ತರತ್ನಾಕರ (ಕರ್ಣಾಟಕ ವೃತ್ತಿ)	–	ಸಂ॥ ಕೃಷ್ಣಪರಮೇಶ್ವರ ಭಟ್ಟ
ಶಿವತತ್ವ ರತ್ನಾಕರ ಹಸ್ತಪ್ರತಿ ಸೂಚಿ –೧	–	ಸಂ॥ ಎಸ್. ಶಿವಣ್ಣ

ಶರಣ ವಚನಾಗಮ ಸಂಕಲನ ಗ್ರಂಥಗಳು :

ವಚನಉಪನಿಷತ್	–	ಟಿ.ಎನ್. ಮಲ್ಲಪ್ಪ
ಶರಣಗೀತಾ (ಸಂಸ್ಕೃತಾನುವಾದ)	–	ಟಿ.ಜಿ. ಸಿದ್ದಪ್ಪಾರಾಧ್ಯ
ಬಸವಗೀತಾ (ಸಂಸ್ಕೃತಾನುವಾದ)‘	–	ಟಿ.ಜಿ. ಸಿದ್ದಪ್ಪಾರಾಧ್ಯ
ಶಿವಪೂಜಾ ವಚನ ಸಂಗ್ರಹ	–	ಶ್ರೀ ಶಿವಮೂರ್ತಿ ಮುರುಘಾ ಶರಣರು
ಮಾದಾರ ಚನ್ನಯ್ಯ ದೇವರ ವಚನಗಳು	–	ಪಿ.ಎಂ. ಗಿರಿರಾಜು
ಮಧುವರಸ ದೇವರ ಆಯ್ದ ೩೦ ವಚನಗಳು	–	ಪಿ.ಎಂ. ಗಿರಿರಾಜು
ಹಡಪದ ಅಪ್ಪಣ್ಣ ದೇವರ ಆಯ್ದ ೨೫ ವಚನಗಳು	–	ಪಿ.ಎಂ. ಗಿರಿರಾಜು
ಚನ್ನಬಸವೇಶ್ವರ ದೇವರ ಆಯ್ದ ೩೦ ವಚನಗಳು	–	ಪಿ.ಎಂ. ಗಿರಿರಾಜು

ಸಂದರ್ಭ ಸಂಕಲನ ಗ್ರಂಥಗಳು :

ಜಂಗಮ ಜ್ಯೋತಿ	–	ಸಂ॥ ಜಿ.ಎಸ್. ಸಿದ್ಧಲಿಂಗಯ್ಯ
ಚಿನ್ಮೂಲಾದ್ರಿ ಚೇತನ	–	ಸಂ॥ ಶಿವಕುಮಾರ್ ಇ.
ಮಾನಸಿಕ	–	ಸಂ॥ ಮೊ. ವಿರೂಪಾಕ್ಷಪ್ಪ ಕೋರಗಲ್

ಸಂಕೀರ್ಣ ಗ್ರಂಥಗಳು :

ಅಷ್ಟಾವರಣ		
ಶ್ರೀ ಬಸವೇಶ್ವರ ೧೦೮ ವಚನಗಳು		
ಗಂಡುಗಲಿ ಮದಕರಿ ನಾಯಕ	–	ಸಂ॥ ಬಿ.ಎಲ್. ವೇಣು
ರಾಜಾ ಬಿಚ್ಚುಗತ್ತಿಭರಮಣ್ಣನಾಯಕ	–	ಸಂ॥ ಬಿ.ಎಲ್. ವೇಣು
ವಚನಾಂಜಲಿ	–	ಸಂ॥ ಎಸ್.ಎಂ. ವೀರಭದ್ರಯ್ಯ

ಎಸ್.ಜೆ.ಎಂ. ವಿದ್ಯಾಪೀಠದ ಶೈಕ್ಷಣಿಕ ಸಂಸ್ಥೆಗಳು

೧) ವೈದ್ಯಕೀಯ ಹಾಗೂ ತಾಂತ್ರಿಕ ಶಿಕ್ಷಣ ಸಂಸ್ಥೆಗಳು :

೧. ಎಸ್.ಜೆ.ಎಂ. ದಂತವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ, ಚಿತ್ರದುರ್ಗ.
೨. ಎಸ್.ಜೆ.ಎಂ. ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯ, ಚಿತ್ರದುರ್ಗ.
೩. ಎಸ್.ಜೆ.ಎಂ. ತಂತ್ರಜ್ಞಾನ ಮಹಾವಿದ್ಯಾಲಯ, ಚಿತ್ರದುರ್ಗ.
೪. ಎಸ್.ಜೆ.ಎಂ. ಪಾಲಿಟೆಕ್ನಿಕ್, ಚಿತ್ರದುರ್ಗ.
೫. ಎಸ್.ಜೆ.ಎಂ. ಪಾಲಿಟೆಕ್ನಿಕ್, ಚಳ್ಳಕೆರೆ.
೬. ಎಸ್.ಜೆ.ಎಂ. ಪಾಲಿಟೆಕ್ನಿಕ್, ಬೀರೂರು.
೭. ಎಸ್.ಜೆ.ಎಂ. 'ಬಿ' ಫಾರ್ಮಸಿ ವಿದ್ಯಾಲಯ, ಚಿತ್ರದುರ್ಗ.
೮. ಎಸ್.ಜೆ.ಎಂ. 'ಡಿ' ಫಾರ್ಮಸಿ ವಿದ್ಯಾಲಯ, ಚಿತ್ರದುರ್ಗ.
೯. ಎಸ್.ಜೆ.ಎಂ. ಶಿಕ್ಷಣ ಮಹಾವಿದ್ಯಾಲಯ, ಶಿರ್ಶಿ.
೧೦. ಎಸ್.ಜೆ.ಎಂ. ಸಂಗೀತ, ನೃತ್ಯ ಮತ್ತು ನಾಟಕಶಾಲೆ, ಚಿತ್ರದುರ್ಗ.
೧೧. ಎಸ್.ಜೆ.ಎಂ. ಕೈಗಾರಿಕಾ ತರಬೇತಿ ಸಂಸ್ಥೆ, ಚಿತ್ರದುರ್ಗ.
೧೧. ಎಸ್.ಜೆ.ಎಂ. ಕೈಗಾರಿಕಾ ತರಬೇತಿ ಸಂಸ್ಥೆ, ಚಳ್ಳಕೆರೆ.
೧೨. ಎಸ್.ಜೆ.ಎಂ. ಕೈಗಾರಿಕಾ ತರಬೇತಿ ಸಂಸ್ಥೆ, ಬೀರೂರು.

೨) ಪ್ರಥಮ ದರ್ಜೆ ಹಾಗೂ ಪದವಿಪೂರ್ವ ಕಾಲೇಜುಗಳು :

೧. ಎಸ್.ಜೆ.ಎಂ. ಕಲಾ, ವಿಜ್ಞಾನ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಚಿತ್ರದುರ್ಗ.
೨. ಎಸ್.ಜೆ.ಎಂ. ಮಹಿಳಾ ಪ್ರಥಮದರ್ಜೆ ಕಾಲೇಜು, ಚಿತ್ರದುರ್ಗ.
೩. ಎಸ್.ಜೆ.ಎಂ. ಪ್ರಥಮದರ್ಜೆ ಕಾಲೇಜು, ತರೀಕೆರೆ.
೪. ಎಸ್.ಜೆ.ಎಂ. ಮಹಿಳಾ ಪ್ರಥಮದರ್ಜೆ ಕಾಲೇಜು, ರಾಣೆಬೆನ್ನೂರ.
೫. ಎಸ್.ಜೆ.ಎಂ. ಮಹಿಳಾ ಪ್ರಥಮದರ್ಜೆ ಕಾಲೇಜು, ಹೊಳಲ್ಕೆರೆ.
೬. ಎಸ್.ಜೆ.ಎಂ. ಸಂಜೆ ಕಾಲೇಜು, ಚಿತ್ರದುರ್ಗ.
೭. ಎಸ್.ಜೆ.ಎಂ. ಮಹಾಂತ ಪ್ರಥಮದರ್ಜೆ ಕಾಲೇಜು, ಧಾರವಾಡ.
೮. ಎಸ್.ಜೆ.ಎಂ. ಪ್ರಥಮದರ್ಜೆ ಕಾಲೇಜು, ರಾಮಗಿರಿ.
೯. ಎಸ್.ಜೆ.ಎಂ. ಪ್ರಥಮದರ್ಜೆ ಕಾಲೇಜು, ಚಿಕ್ಕಜಾಜೂರು.
೧೦. ಎಸ್.ಜೆ.ಎಂ. ಕಾನೂನು ಕಾಲೇಜು, ಚಿತ್ರದುರ್ಗ.
೧೧. ಎಸ್.ಜೆ.ಎಂ. ವೃತ್ತಿ ಶಿಕ್ಷಣಸಂಸ್ಥೆ, ಚಿತ್ರದುರ್ಗ.
೧೨. ಎಸ್.ಜೆ.ಎಂ. ಪದವಿಪೂರ್ವ ಕಾಲೇಜು, ಹಾವೇರಿ.
೧೩. ಎಸ್.ಜೆ.ಎಂ. ಮಹಿಳಾ ಪದವಿಪೂರ್ವ ಕಾಲೇಜು, ರಾಣೆಬೆನ್ನೂರ.
೧೪. ಬಾಪೂಜಿ ಪದವಿಪೂರ್ವ ಕಾಲೇಜು, ಭರಮಸಾಗರ.
೧೫. ಶ್ರೀ ಬೃಹನ್ಮಠ ಪದವಿಪೂರ್ವ ಕಾಲೇಜು, ಚಿತ್ರದುರ್ಗ.
೧೬. ಶ್ರೀ ಪ್ರಸನ್ನ ರಾಮೇಶ್ವರ ಪದವಿಪೂರ್ವ ಕಾಲೇಜು, ಬೆಲಗೂರು.
೧೭. ಶ್ರೀ ಮಹಾದೇವ ಮೈಲಾರ ಪದವಿಪೂರ್ವ ಕಾಲೇಜು, ಹೆಬ್ಬಾಳು.

೩) ಪ್ರೌಢಶಾಲೆಗಳು :

೧. ಶ್ರೀ ಬೃಹನ್ಮಠ ಪ್ರೌಢಶಾಲೆ, ಚಿತ್ರದುರ್ಗ.
೨. ಎಸ್.ಜೆ.ಎಂ. ಪ್ರೌಢಶಾಲೆ, ಸೋಮವಾರಪೇಟೆ.
೩. ಎಸ್.ಜೆ.ಎಂ. ಪ್ರೌಢಶಾಲೆ, ಬೀರೂರು.
೪. ಎಸ್.ಜೆ.ಎಂ. ಪ್ರೌಢಶಾಲೆ, ಹಾವೇರಿ.
೫. ಎಸ್.ಜೆ.ಎಂ. ಬಾಲಕಿಯರ ಪ್ರೌಢಶಾಲೆ, ತ್ಯಾವಣಗಿ.

೬. ಎಸ್.ಜೆ.ಎಂ. ಪ್ರೌಢಶಾಲೆ, ಹೊಳಲ್ಕೆರೆ.
೭. ಎಸ್.ಜೆ.ಎಂ. ಬಾಲಕಿಯರ ಪ್ರೌಢಶಾಲೆ, ಚಿಕ್ಕಜಾಜೂರು.
೮. ಎಸ್.ಜೆ.ಎಂ. ಪ್ರೌಢಶಾಲೆ, ಹೊಸದುರ್ಗ.
೯. ಎಸ್.ಜೆ.ಎಂ. ಪ್ರೌಢಶಾಲೆ, ಮಾದಾಪುರ.
೧೦. ಎಸ್.ಜೆ.ಎಂ. ಪ್ರೌಢಶಾಲೆ, ಹೊಳಲ್ಕೆರೆ.
೧೧. ಶ್ರೀ ಬಕ್ಕೇಶ್ವರ ಪ್ರೌಢಶಾಲೆ, ದಾವಣಗೆರೆ.
೧೨. ಶ್ರೀ ಬಸವೇಶ್ವರ ಪ್ರೌಢಶಾಲೆ, ಆಲದಕಟ್ಟೆ.
೧೩. ಶ್ರೀ ಫಲಹಾರೇಶ್ವರ ಪ್ರೌಢಶಾಲೆ, ಅಸೂಟಿ.
೧೪. ಎಸ್.ವ್ಹಿ.ಎಸ್. ಪ್ರೌಢಶಾಲೆ, ಐಮಂಗಲ.
೧೫. ಬಾಪೂಜಿ ಗ್ರಾಮಾಂತರ ಪ್ರೌಢಶಾಲೆ, ಭರಮಸಾಗರ.
೧೬. ಶ್ರೀಮತಿ ಯಶೋಧಮ್ಮ ನಾಗತಿ ಬಾಲಕಿಯರ ಪ್ರೌಢಶಾಲೆ, ತರಿಕೇರೆ.
೧೭. ದೊರೆ ವೀರರಾಜೇಂದ್ರ ಪ್ರೌಢಶಾಲೆ, ಭರಮಸಾಗರ.
೧೮. ಶ್ರೀ ರುದ್ರೇಶ್ವರ ಪ್ರೌಢಶಾಲೆ, ಹೆಬ್ಬಾಳು.
೧೯. ಪ್ರಿಯದರ್ಶಿನಿ ಬಾಲಕಿಯರ ಪ್ರೌಢಶಾಲೆ, ಚಿತ್ರದುರ್ಗ.
೨೦. ದಶರಥ ರಾಮೇಶ್ವರ ಪ್ರೌಢಶಾಲೆ, ಗುಡ್ಡದನೇರಲಕೇರೆ.
೨೧. ಎಂ.ಎಂ. ಪ್ರೌಢಶಾಲೆ, ಮೋಟೆಬೆನ್ನೂರ.
೨೨. ಬಸವೇಶ್ವರ ಪ್ರೌಢಶಾಲೆ, ಮತ್ತೋಡು.
೨೩. ಭಾರತಮಾತಾ ಆಂಗ್ಲ ಮಾಧ್ಯಮ ಶಾಲೆ, ತುಮಕೂರು.

೪) ಅಂಗವಿಕಲ ಮಕ್ಕಳ ಶಾಲೆಗಳು :

೧. ಶ್ರೀ ವೀರಭದ್ರೇಶ್ವರ ಮಕ್ಕಳ ಪಾಠಶಾಲೆ, ಹಾವೇರಿ.
೨. ಶ್ರೀ ವೀರಭದ್ರೇಶ್ವರ ಅಂಗವಿಕಲ ಮಕ್ಕಳ ಪಾಠಶಾಲೆ, ಹರಪನಹಳ್ಳಿ.
೩. ಶ್ರೀ ವೀರಭದ್ರೇಶ್ವರ ಅಂಗವಿಕಲ ಮಕ್ಕಳ ಪಾಠಶಾಲೆ, ಹೊಸದುರ್ಗ.
೪. ಶ್ರೀ ವಿನಾಯಕ ಅಂಗವಿಕಲ ಮಕ್ಕಳ ಪಾಠಶಾಲೆ, ಹಿರಿಯೂರು.
೫. ಶ್ರೀ ತಿಪ್ಪೇರುದ್ರಸ್ವಾಮಿ ಅಂಗವಿಕಲ ಮಕ್ಕಳ ಪಾಠಶಾಲೆ, ಜಗಳೂರು.
೬. ಶ್ರೀ ಸಿದ್ಧಗಂಗಾ ಅಂಗವಿಕಲ ಮಕ್ಕಳ ಪಾಠಶಾಲೆ, ಕ್ಯಾತಸಂದ್ರ.

೫) ಪ್ರಾಥಮಿಕ ಮತ್ತು ಶಿಶುವಿಹಾರಗಳು :

೧. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಭರಮಸಾಗರ.
೨. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಸೋಮವಾರಪೇಟೆ.
೩. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ.
೪. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಬೃಹನ್ಮಠ, ಚಿತ್ರದುರ್ಗ.
೫. ಎಸ್.ಜೆ.ಎಂ. ಪ್ರಾಥಮಿಕ ಶಾಲೆ, ಚಳ್ಳಕೆರೆ.
೬. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕಜಾಜೂರು.
೭. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಹಾವೇರಿ.
೮. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಖರ್ಜಗಿ.
೯. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ.
೧೦. ಎಸ್.ಜೆ.ಎಂ. ಶಿಶುವಿಹಾರ, ಚಿತ್ರದುರ್ಗ.
೧೧. ಎಸ್.ಜೆ.ಎಂ. ಶಿಶುವಿಹಾರ, ಹಾವೇರಿ.
೧೨. ಎಸ್.ಜೆ.ಎಂ. ಶಿಶುವಿಹಾರ, ಭರಮಸಾಗರ.
೧೩. ಎಸ್.ಜೆ.ಎಂ. ಹಿರಿಯ ಪ್ರಾಥಮಿಕ ಶಾಲೆ, ಮಾಯಕೊಂಡ.
೧೪. ಅರುಣೋದಯ ಹಿರಿಯ ಪ್ರಾಥಮಿಕ ಶಾಲೆ, ಹೊಳಲ್ಕೆರೆ.
೧೫. ಶ್ರೀ ಶಕ್ತಿ ಹಿರಿಯ ಪ್ರಾಥಮಿಕ ಶಾಲೆ, ಚಿತ್ರದುರ್ಗ.

೧೬. ಶ್ರೀದೇವಿ ಲಕ್ಕಮ್ಮ ಹಿರಿಯ ಪ್ರಾಥಮಿಕ ಶಾಲೆ, ಮಾಳಪನಹಟ್ಟಿ.
೧೭. ಶ್ರೀ ಚನ್ನಕೇಶವ ಹಿರಿಯ ಪ್ರಾಥಮಿಕ ಶಾಲೆ, ಕಸವನಹಳ್ಳಿ.
೧೮. ಶ್ರೀ ಮಾರುತಿ ಹಿರಿಯ ಪ್ರಾಥಮಿಕ ಶಾಲೆ, ಗೌರಿಪುರ.
೧೯. ಶ್ರೀ ಮಾರಿಕಾಂಬಾ ಹಿರಿಯ ಪ್ರಾಥಮಿಕ ಶಾಲೆ, ಬಿದರಿಕೆರೆ.
೨೦. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಗಟ್ಟನಕಟ್ಟೆ.
೨೧. ಶ್ರೀ ಆಂಜನೇಯ ಹಿರಿಯ ಪ್ರಾಥಮಿಕ ಶಾಲೆ, ನಿಬಗೂರು.
೨೨. ಎಸ್.ಜೆ.ಎಂ. ರಂಗನಾಥ ಹಿರಿಯ ಪ್ರಾಥಮಿಕ ಶಾಲೆ, ತಾರೇಹಳ್ಳಿ.
೨೩. ಶ್ರೀ ಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಮಲೆಮಾಚಿಕೆರೆ.
೨೪. ಶ್ರೀ ಬಸವೇಶ್ವರ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕರಕೆರೆ.
೨೫. ಶ್ರೀ ಗುರುಸಿದ್ಧೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಮುಷ್ಠಿಗರಹಳ್ಳಿ.
೨೬. ಶ್ರೀ ಲಕ್ಕಮ್ಮ ಪ್ರಾಥಮಿಕ ಶಾಲೆ, ಜೆ.ಸಿ.ಆರ್. ಕಾಲನಿ.
೨೭. ಶ್ರೀ ಶಂಭುಲಿಂಗೇಶ್ವರ ಪ್ರಾಥಮಿಕ ಶಾಲೆ, ಅಸಿಗೋಡ.
೨೮. ಶ್ರೀ ಆಂಜನೇಯ ಪ್ರಾಥಮಿಕ ಶಾಲೆ, ಬಿಳಿಚೋಡು.
೨೯. ಶ್ರೀ ಮುಷ್ಟೂರೇಶ್ವರ ಪ್ರಾಥಮಿಕ ಶಾಲೆ, ಮುಷ್ಟೂರು.
೩೦. ಶ್ರೀ ಚೌಡೇಶ್ವರ ಪ್ರಾಥಮಿಕ ಶಾಲೆ, ಮ್ಯಾಸರಹಟ್ಟಿ.
೩೧. ಡಾ॥ ಅಂಬೇಡ್ಕರ ಹಿರಿಯ ಪ್ರಾಥಮಿಕ ಶಾಲೆ, ಪಲ್ಲಾಗಟ್ಟೆ.
೩೨. ಶ್ರೀ ಚನ್ನಬಸವೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಗುಮ್ಮನೂರು.
೩೩. ಶ್ರೀ ದುರ್ಗಾಂಬಿಕಾ ಪ್ರಾಥಮಿಕ ಶಾಲೆ, ಅಣಜಿ.
೩೪. ಶ್ರೀ ಚೌಡೇಶ್ವರಿ ಪ್ರಾಥಮಿಕ ಶಾಲೆ, ದಾವಣಗೆರೆ.
೩೫. ಶ್ರೀ ಹರಿಹರೇಶ್ವರ ಪ್ರಾಥಮಿಕ ಶಾಲೆ, ಹರಿಹರ.
೩೬. ಶ್ರೀ ವಿನಾಯಕ ಪ್ರಾಥಮಿಕ ಶಾಲೆ, ಆದಿವಾಲ
೩೭. ಶ್ರೀ ದುರ್ಗಾಂಬಿಕಾ ಹಿರಿಯ ಪ್ರಾಥಮಿಕ ಶಾಲೆ, ಹೊಸದುರ್ಗ.
೩೮. ಜ್ಞಾನವಾಹಿನಿ ಹಿರಿಯ ಪ್ರಾಥಮಿಕ ಶಾಲೆ, ರಾಮಗಿರಿ.
೩೯. ದುರ್ಗಾಂಬಿಕಾ ಹಿರಿಯ ಪ್ರಾಥಮಿಕ ಶಾಲೆ, ಹೊಸದುರ್ಗ.
೪೦. ಶ್ರೀ ರುದ್ರೇಶ್ವರ ಹಿರಿಯ ಪ್ರಾಥಮಿಕ ಶಾಲೆ, ಹೆಬ್ಬಾಳು.
೪೧. ಶಕ್ತಿ ಆಂಗ್ಲ ಮಾಧ್ಯಮ ಶಾಲೆ, ಚಿತ್ರದುರ್ಗ.
೪೨. ಭಾರತಮಾತಾ ಆಂಗ್ಲ ಮಾಧ್ಯಮ ಶಾಲೆ, ತುಮಕೂರು.
೪೩. ಭಾರತಮಾತಾ ಆಂಗ್ಲ ಮಾಧ್ಯಮ ಶಿಶುವಿಹಾರ, ತುಮಕೂರು.

೬) ಗ್ರಂಥಾಲಯಗಳು :

೧. ಎಸ್.ಜೆ.ಎಂ. ವಾಚನಾಲಯ, ಬೃಹನ್ಮಠ, ಚಿತ್ರದುರ್ಗ.
೨. ಎಸ್.ಜೆ.ಎಂ. ವಾಚನಾಲಯ, ಮಠದಕುರುಬರಹಟ್ಟಿ, ಚಿತ್ರದುರ್ಗ.
೩. ಎಸ್.ಜೆ.ಎಂ. ಸಂಶೋಧನಾ ಗ್ರಂಥಾಲಯ, ಚಿತ್ರದುರ್ಗ.
೪. ಎಸ್.ಜೆ.ಎಂ. ಹಸ್ತಪ್ರತಿ ಭಂಡಾರ, ಬೃಹನ್ಮಠ, ಚಿತ್ರದುರ್ಗ.

ಪರಾಮರ್ಶನ ಗ್ರಂಥಗಳು
ಮತ್ತು
ಲೇಖನಗಳು

ಪರಾಮರ್ಶನ ಗ್ರಂಥಗಳು

೧. **ಮುರಿಗಾ ಶಾಂತವೀರರ ಕೃತಿಗಳು** – ಸಂ. ಎಸ್. ಶಿವಣ್ಣ, ಪ್ರ – ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೯.

೨. **ಮುರಿಗೆ ಶಾಂತವೀರಸ್ವಾಮಿಗಳ ಸ್ತೋತ್ರಕರಂಡ** – ಸಂ. ಎಸ್. ಶಿವಣ್ಣ, ಪ್ರ – ಶ್ರೀ ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೮೪.

೩. **ಹಮ್ಮೀರ ಕಾವ್ಯ ಸಂಗ್ರಹ**, ಸಂ. ಎಂ.ಎಸ್. ಸುಂಕಾಪುರ, ರೇಣುಕಾ ಪ್ರಕಾಶನ, ಧಾರವಾಡ.

೪. **ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಕೃತಿಗಳು** – ಸಂ. ಡಾ॥ ಎಸ್. ವಿದ್ಯಾಶಂಕರ, ಪ್ರ – ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೮.

೫. **ಇಮ್ಮಡಿ ಮುರಿಗಾ ಗುರುಸಿದ್ಧ ಶಿವಯೋಗಿಯ ಐದು ಕೃತಿಗಳು** – ಸಂ. ಡಾ॥ ಬಿ.ಆರ್. ಹಿರೇಮಠ, ಪ್ರ – ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಶಿವಮೊಗ್ಗ, ೧೯೮೮.

೬. **ಮುರಿಗೆ ತಾರಾವಳಿ** – ಸಂ. ಎಂ.ಎಸ್. ಬಸವರಾಜಯ್ಯ, ಶಿವಧರ್ಮ ಗ್ರಂಥಮಾಲಾ, ಮೈಸೂರು, ೧೯೭೬

೭. **ಪ್ರಭುಲೀಲಾ** – ಸಂ. ಜಿ. ಮರುಳಸಿದ್ಧಯ್ಯಾ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೬೬.

೮. **ಇಮ್ಮಡಿ ಮುರಿಗಾ ಗುರುಸಿದ್ಧ ಸ್ವಾಮಿಗಳ ಸ್ವರವಚನಗಳು** – ಸಂ. ಎಸ್. ಶಿವಣ್ಣ, ಪ್ರ – ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಶಿವಮೊಗ್ಗ, ೧೯೯೫.

೯. **ಹಾಲಾಸ್ಯ ಪುರಾಣ** – ಸಂ. ಜಿ.ಜಿ. ಮಂಜುನಾಥನ್, ಪ್ರ – ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು, ೧೯೭೫.

೧೦. **ಕೈವಲ್ಯ ಸೋಪಾನ ನಾಮ್ನೈಕೋತ್ತರ ಶತಸ್ಥಲ** – ಸಂ. ಜಿ.ಎ. ಶಿವಲಿಂಗಯ್ಯ, ಪ್ರ – ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ಶಿವಮೊಗ್ಗ, ೧೯೮೯.

೧೧. **ತಾರಾವಳಿ ಸಂಪುಟ–೧** – ಎಂ.ಎಸ್. ಬಸವರಾಜಯ್ಯ, ಶಿವಧರ್ಮ ಗ್ರಂಥಮಾಲಾ, ಮೈಸೂರು, ೧೯೮೭

೧೨. **ಇಮ್ಮಡಿ ಮುರಿಗಾ ಗುರುಸಿದ್ಧ** – ಎ. ಚೆನ್ನಪ್ಪ, ಪಿಎಚ್.ಡಿ. ಮಹಾಪ್ರಬಂಧ.

೧೩. **ಇಮ್ಮಡಿ ಮುರಿಗಾ ಗುರುಸಿದ್ಧ : ಜೀವನ–ಸಾಹಿತ್ಯ** – ಮಪ್ಪಾ ಬಸನಗೌಡರ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೧೪. **ಮಹಲಿಂಗೇಂದ್ರ ವಿಜಯ** – ಸಂ. ಎಲ್. ಬಸವರಾಜು, ಬೃಹನ್ಮಠ ಸಂಸ್ಥಾನ, ಚಿತ್ರದುರ್ಗ, ೧೯೭೧.

೧೫. **ಶಿವಲಿಂಗ ಚಾರಿತ್ರ** – ಸಂ. ಎಂ.ಜಿ. ನಂಜುಂಡಾರಾಧ್ಯ, ಪ್ರ – ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಗ್ರಂಥ ಭಂಡಾರ, ಬೆಂಗಳೂರು, ೧೯೬೬.

೧೬. **ವೀರಶೈವ ತಾರಾವಳಿ ಸಂಪುಟ** – ಸಂ. ಡಾ॥ ವೀರಣ್ಣ ರಾಜೂರ, ಪ್ರ – ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೪.

೧೭. **ಹಾಗಲವಾಡಿ ಮುದ್ವೀರಸ್ವಾಮಿಯ ಸ್ವರವಚನಗಳು** – ಸಂ. ಡಾ॥ ವೀರಣ್ಣ ರಾಜೂರ, ಪ್ರ – ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೮೯.

೧೮. **ಶ್ರೀ ತೋಂಟದ ಸಿದ್ಧಲಿಂಗೇಶ್ವರ ಸಮಗ್ರ ಸಾಹಿತ್ಯ ಸಂಪುಟ-೧,** ಸಂ: ಡಾ. ವೀರಣ್ಣ ರಾಜೂರ, ಪ್ರ - ಕರ್ನಾಟಕ ಸರ್ಕಾರ ಧಾರ್ಮಿಕ ದತ್ತಿ ಇಲಾಖೆ, ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಕ್ಷೇತ್ರ, ಎಡೆಯೂರು.

೧೯. **ಬಸವಣ್ಣನವರ ಟೀಕಿನ ವಚನ** - ಸಂ. ಡಾ॥ ಎಂ.ಎಂ. ಕಲಬುರ್ಗಿ, ಪ್ರ - ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೧.

೨೦. **ತೋಂಟದ ಸಿದ್ಧಲಿಂಗೇಶ್ವರರ ಷಟ್‌ಸ್ಥಲ ಜ್ಞಾನಸಾರಾಮೃತ ಬೆಡಗಿನ ವಚನದ ಟೀಕು** - ಸಂ. ಡಾ॥ ಬಿ.ವಿ. ಶಿರೂರ, ಪ್ರ - ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ.

೨೧. **ಷಟ್‌ಸ್ಥಲ ಜ್ಞಾನಸಾರಾಮೃತ ಟೀಕೆ** - ಸಂ. ಎಸ್. ವಿದ್ಯಾಶಂಕರ, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೧೯೮೭.

೨೨. **ಚಿನ್ಮೂಲಾದ್ರಿ ಸ್ಮರಣ ಸಂಚಿಕೆ** - ಸಂ. ಜಿ. ಶಿವಕುಮಾರ, ರಜತ ಮಹೋತ್ಸವ ಸಮಿತಿ, ಬೃಹನ್ಮಠ, ಚಿತ್ರದುರ್ಗ, ೧೯೮೯.

೨೩. **ಜಂಗಮ ಜ್ಯೋತಿ ಸ್ಮರಣ ಸಂಚಿಕೆ** - ಸಂ. ಜಿ.ಎಸ್. ಸಿದ್ಧಲಿಂಗಯ್ಯ, ಪ್ರ - ಬೃಹನ್ಮಠ ಸಂಸ್ಥಾನ, ಶತಮಾನೋತ್ಸವ ಸಮಿತಿ, ಚಿತ್ರದುರ್ಗ, ೧೯೭೫.

೨೪. **ಗೌರವ** - ಸಂ. ಬಿ.ವಿ. ಶಿರೂರು, ಪ್ರ - ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯ ಮಠ, ಗದಗ, ೧೯೮೬.

೨೫. **ದಾಸೋಹ ಸಿರಿ** - ಸಂ. ಚನ್ನಪ್ಪ ಎರೆಸೀಮೆ, ಪ್ರ - ಹಳೆಯ ವಿದ್ಯಾರ್ಥಿಗಳ ಸಂಘ, ಶ್ರೀ ಸಿದ್ಧಗಂಗಾಕ್ಷೇತ್ರ, ತುಮಕೂರು, ೧೯೯೭.

೨೬. **ಕರ್ನಾಟಕದಲ್ಲಿ ವೀರಶೈವ ಮಠಗಳು** - ಚಂದ್ರಶೇಖರ ನಾರಣಾಪುರ, ಸಂಪುಟ-೧, ಗೆಳೆಯ ಪ್ರಕಾಶನ, ಬೇಲೂರು ರಸ್ತೆ, ಚಿಕ್ಕಮಂಗಳೂರು, ೧೯೯೪.

೨೭. **ಕನ್ನಡ ಸಾಹಿತ್ಯ ಮತ್ತು ಮಠಗಳು** - ಡಾ॥ ಕೆ. ರವೀಂದ್ರನಾಥ.

೨೮. **ಷಟ್‌ಸ್ಥಲ ಶಿವಾಯಣ** - ಸಂ. ಎಂ.ಎಂ. ಕಲಬುರ್ಗಿ, ತೋಂಟದಾರ್ಯ ಮಠ, ಗದಗ, ೧೯೯೯.

೨೯. **ಭೂಷಣ** - ಸಂ. ಎಂ. ಚಿದಾನಂದಮೂರ್ತಿ, ಸಿ.ಯು. ಮಂಜುನಾಥ, ಪ್ರ - ಸರ್ಪಭೂಷಣ ಶಿವಯೋಗೀಶ್ವರಮಠ, ಬೆಂಗಳೂರು, ೧೯೯೯.

೩೦. **ಕಲ್ಯಾಣ ಸಂಗಮ** -

೩೧. **ಕಲ್ಯಾಣದ ಹಾದಿ** - ಸಂ. ಡಾ. ಸಿದ್ಧಲಿಂಗ ಪಟ್ಟಣಶೆಟ್ಟಿ, ಶ್ರೀ ಮ.ನಿ.ಪ್ರ. ತೋಂಟದ ಡಾ. ಸಿದ್ಧಲಿಂಗ ಮಹಾಸ್ವಾಮಿಗಳವರ ರಜತಮಹೋತ್ಸವ ಸಮಿತಿ, ಜಗದ್ಗುರು ತೋಂಟದಾರ್ಯಮಠ, ಗದಗ, ೧೯೯೯.

೩೨. **ಸಂಶೋಧನ** - ಸಂ. ಲಕ್ಷ್ಮಣ್ ತೆಲಗಾವಿ, ಚಿದಾನಂದಮೂರ್ತಿ ಅಭಿನಂದನ ಸಮಿತಿ, ಬೆಂಗಳೂರು.

೩೩. **ಸಂಶೋಧನ ಸಂಪುಟ** - ಸಂ. ಎಚ್. ದೇವಿರಪ್ಪ, ಶಿವಕುಮಾರ ಪ್ರಕಾಶನ, ಬೆಂಗಳೂರು, ೧೯೮೪.

೩೪. **ಸಂಶೋಧನೆಯ ಸಿರಿ** – ಡಿ.ವಿ. ಪರಶಿವಮೂರ್ತಿ, ಗುಣನಿಧಿ ಪ್ರಕಾಶನ, ಬೆಂಗಳೂರು, ೧೯೯೬.

೩೫. **ಸಾರಂಗ ಶ್ರೀ** – ಸಂ. ಎಂ.ಎಂ. ಕಲಬುರ್ಗಿ, ಶ್ರೀ ಚೆನ್ನವೀರಸ್ವಾಮೀಜಿ ಪ್ರತಿಷ್ಠಾನ ಸಾರಂಗಮಠ, ಸಿಂಧಗಿ, ೧೯೯೪.

೩೬. **ಸಿದ್ಧಗಂಗಾ ಶ್ರೀ** – ಸಂ. ಎಸ್.ವಿದ್ಯಾಶಂಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೩೭. **ಸುಧಾರ್ಣವ** – ಬಿ.ವಿ. ಮಲ್ಲಾಪುರ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿಮಠ, ಬೆಳಗಾಂ, ೧೯೯೮.

೩೮. **ಹರಿತಿಸಿರಿ** – ಸಂ. ಲಕ್ಷ್ಮಣ್ ತೆಲಗಾವಿ, ವಾಲ್ಮೀಕಿ ಸಾಹಿತ್ಯ ಸಂಪದ ಹರ್ತಿಕೋಟೆ, ಚಿತ್ರದುರ್ಗ, ೧೯೮೭

೩೯. **ಕರ್ನಾಟಕ ಕವಿಚರಿತೆ ಸಂಪುಟ–೧, ೨** – ಆರ್. ನರಸಿಂಹಾಚಾರ್ಯ, ಪ್ರ – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೦. **ತೋಂಟದ ಸಿದ್ಧಲಿಂಗ ಶಿವಯೋಗಿಗಳ ಷಟ್ಸ್ಥಲಜ್ಞಾನಸಾರಾಮೃತ** – ಹಿರೇಮಠ ಆರ್.ಸಿ., ಪ್ರ – ಶ್ರೀ ಮುರುಘಾಮಠ, ಧಾರವಾಡ, ೧೯೬೪.

೪೧. **ಬಸವಸ್ತೋತ್ರದ ವಚನಗಳು –೨, ವಚನಸಂಕಲನ ಸಂಪುಟ–೧,** ಸಂ. ಹಿರೇಮಠ ಬಿ.ಆರ್. ಪ್ರ – ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೦.

೪೨. **ವೀರಶೈವ ಸಾಹಿತ್ಯ ಮತ್ತು ಇತಿಹಾಸ ಭಾಗ–೨,** ಸಂ. ಬಿ. ಶಿವಮೂರ್ತಿಸ್ವಾಮಿಗಳು, ಪ್ರ – ಶರಣ ಸಾಹಿತ್ಯ ಕಾರ್ಯಾಲಯ, ಬೆಂಗಳೂರು, ೧೯೬೯.

೪೩. **ವೀರಶೈವ ಸಾಹಿತ್ಯ ಸಮೀಕ್ಷೆ** – ಸಂ. ಸದಾನಂದ ಕನವಳ್ಳಿ, ಪ್ರ – ಮಹಾಕವಿ ಪಂಪಪ್ರಕಾಶನ, ಲಕ್ಷ್ಮೇಶ್ವರ, ೧೯೭೬

೪೪. **ಷಟ್ಸ್ಥಲ ಪ್ರಭೆ** – ಆರ್.ಸಿ. ಹಿರೇಮಠ, ಪ್ರ – ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೬೬

೪೫. **ಕನ್ನಡ ನಿಘಂಟುಶಾಸ್ತ್ರ ಪರಿಚಯ** – ಜಿ. ವೆಂಕಟಸುಬ್ಬಯ್ಯ, ಪ್ರ – ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೩.

೪೬. **ಅಮರಸಿಂಹನ ಅಮರಕೋಶ** – ಸಂ. ರಂಗನಾಥ ಶರ್ಮಾ ಎನ್., ಪ್ರ – ಕಾವ್ಯಾಲಯ ಪ್ರಕಾಶಕರು, ಮೈಸೂರು, ೧೯೭೫.

೪೭. **ಶಿವಾನುಭವ ಶಬ್ದಕೋಶ** – ಫ.ಗು. ಹಳಕಟ್ಟಿ, ಪ್ರ – ಸಮಾಜ ಪುಸ್ತಕಾಲಯ, ಧಾರವಾಡ, ೧೯೪೨.

೪೮. **ಬಸವಕೋಶ**

೪೯. **ವಚನ ಪರಿಭಾಷಾ ಪದಕೋಶ** – ಸಂ. ಎಸ್. ವಿದ್ಯಾಶಂಕರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು, ೧೯೯೩.

೫೦. **ವಚನಸಾಹಿತ್ಯ ದ್ವಿತೀಯ ಘಟ್ಟ** – ಎಸ್. ವಿದ್ಯಾಶಂಕರ, ಸರ್ಪಭೂಷಣ ಶಿವಯೋಗೀಶ್ವರ ಮಠ, ಬೆಂಗಳೂರು, ೧೯೯೯.

೫೧. **ವಚನಗಳಲ್ಲಿ ವೀರಶೈವಧರ್ಮ** – ಎಚ್. ತಿಪ್ಪೇರುದ್ರಸ್ವಾಮಿ, ಪ್ರ – ಡಿ.ವಿ.ಕೆ. ಮೂರ್ತಿ, ಮೈಸೂರು, ೧೯೬೯.

೫೨. **ಕೊರವಂಜಿ ಸಾಹಿತ್ಯ** – ಜ.ಚ.ನಿ., ಪ್ರ– ಶ್ರೀಶೈಲ ಜಗದ್ಗುರು ನಿಡುಮಾಮಿಡಿ ಪುಸ್ತಕ ಭಂಡಾರ, ನಂ.೪೯, ಬಸವನಗುಡಿ, ಬೆಂಗಳೂರು–೪.

೫೩. **ಹಾಗಲವಾಡಿ ನಾಯಕರು** – ಡಿ.ಎನ್. ಯೋಗೀಶ್ವರಪ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯.

೫೪. **ಸ್ವಾದಿ ಅರಸು ಮನೆತನ** – ಸಂ. ಎಂ.ಎಂ. ಕಲಬುರ್ಗಿ, ಅ. ಸುಂದರ, ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೫.

೫೫. **ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ** – ಸಂ. ಎಂ.ಎಂ. ಕಲಬುರ್ಗಿ ಮತ್ತು ಬಿ.ಎಸ್. ರಾಮಭಟ್ಟ, ಪ್ರ – ಮಲೆನಾಡ ವೀರಶೈವ ಅಧ್ಯಯನ ಸಂಸ್ಥೆ, ಆನಂದಪುರ, ೧೯೯೪.

೫೬. **ಚಂದ್ರವಳ್ಳಿ** – ಸಂ. ಎಂ.ವಿ. ಶ್ರೀನಿವಾಸ್, ಲಕ್ಷ್ಮಣ ತೆಲಗಾವಿ, ಜಿಲ್ಲಾ ಇತಿಹಾಸ ಸಂಶೋಧನ ಮಂಡಲಿ, ಚಿತ್ರದುರ್ಗ, ೧೯೭೬.

೫೭. **ಸಂಪಾದನಾ ಸಮಯ** – ವಿಜಯಶ್ರೀ ಹಿರೇಮಠ, ಲಿಂಗಾಯತ ಅಧ್ಯಯನ ಸಂಸ್ಥೆ, ಶ್ರೀವಿರಕ್ತಮಠ, ದೇಶನೂರು.

೫೮. **ಚೀಲಾಳ ಸಮಯ** – ಎಸ್.ವಿ. ಮನಗುಂಡಿ, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೪.

೫೯. **ಮುರುಘಾ ಸಮಯ** – ಪಿ.ಎ. ಪೋಲೀಸ್‌ಪಾಟೀಲ, ಅಪ್ರಕಟಿತ ಎಂ.ಫಿಲ್. ಪ್ರಬಂಧ.

೬೦. **ನಿರಂಜನ ವಂಶರತ್ನಾಕರ ಭಾಗ–೧** – ಸಂ. ಫ.ಗು. ಹಳಕಟ್ಟಿ, ಶಿವಾನುಭವ ಗ್ರಂಥಮಾಲೆ, ವಿಜಾಪುರ, ೧೯೩೨.

೬೧. **ನಿರಂಜನವಂಶರತ್ನಾಕರ ಭಾಗ–೨** – ಸಂ. ಚೆನ್ನಮಲ್ಲಿಕಾರ್ಜುನ, ಸದ್ಧರ್ಮದೀಪಿಕೆ, ಹಾವೇರಿ, ೧೯೩೮.

೬೨. **ಪ್ರೌಢದೇವರಾಯನ ಕಾಲದ ಕನ್ನಡ ಸಾಹಿತ್ಯ** – ಶಿವಾನಂದ ವಿರಕ್ತಮಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮.

೬೩. **ಮಾರ್ಗ ಸಂಪುಟ ೧–೨** – ಎಂ.ಎಂ. ಕಲಬುರ್ಗಿ, ವಿರೇಶ್ ಆ್ಯಂಡ್ ಕಂಪನಿ, ಹನುಮಂತನಗರ, ಬೆಂಗಳೂರು, ೧೯೮೮.

೬೪. **ಯಕ್ಷಗಾನ – ಹಸ್ತಪ್ರತಿಗಳ ವಿವರಣಸೂಚಿ**, ಸಂ. ಗೌ.ಮ. ಉಮಾಪತಿಶಾಸ್ತ್ರಿ, ಪ್ರ – ಶ್ರೀ ಮಂಜುನಾಥೇಶ್ವರ ಪುಸ್ತಕ ಪ್ರಕಾಶನ ಮಾಲೆ, ಉಜಿರೆ, ದಕ್ಷಿಣಕನ್ನಡ ಜಿಲ್ಲೆ, ೧೯೯೩.

೬೫. **ವೀರಶೈವ ಅಪ್ರಕಟಿತ ಗ್ರಂಥಸೂಚಿ** – ಎಸ್. ಶಿವಣ್ಣ, ಪ್ರ – ಜಗದ್ಗುರು ತೋಂಟದಾರ್ಯಮಠ, ಗದಗ, ೧೯೮೨.

೬೬. **ಕನ್ನಡ ಅಧ್ಯಯನ ಪೀಠದ ಹಸ್ತಪ್ರತಿ ಸೂಚಿ** – ಸಂಪುಟ–೧, ೬, ೮, ೯.

೬೭. **ಶಾಸನಗಳಲ್ಲಿ ಶಿವಶರಣರು** – ಎಂ.ಎಂ. ಕಲಬುರ್ಗಿ, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೮.

೬೮. **ಸಾಮಾನ್ಯರಿಗೆ ಸಾಹಿತ್ಯ ಚರಿತ್ರೆ**, ಲೇ-ಕಾಳೇಗೌಡ ನಾಗವಾರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೭೫.

೬೯. **ಸಾಹಿತ್ಯ ಮತ್ತು ಸಮಕಾಲೀನ ವಾಸ್ತವತೆ** – ಎಚ್. ತಿಪ್ಪೇರುದ್ರಸ್ವಾಮಿ, ಚಾಮುಂಡಿ ಎಂಟರ್ ಪ್ರೈಸಿಸ್, ಮೈಸೂರು, ೧೯೭೯.

೭೦. **ಕನ್ನಡ ಸಾಹಿತ್ಯ ಚರಿತ್ರೆ** – ಸಂ. ರಂ.ಶ್ರೀ ಮುಗಳಿ, ಗೀತಾಬುಕ್ ಹೌಸ್, ಮೈಸೂರು, ೧೯೯೯.

೭೧. **ಕನ್ನಡ ನಿಘಂಟು ಸಂಪುಟ-೨**, ಸಂ. ಎನ್. ಬಸವಾರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೯೩.

೭೨. **ಸಂಕ್ಷಿಪ್ತ ಕನ್ನಡ ನಿಘಂಟು** – ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೯೭೭

೭೩. **ಶ್ರೀವತ್ಸ ನಿಘಂಟು** – ಟಿ.ವಿ. ವೆಂಕಟಾಚಲಶಾಸ್ತ್ರಿ, ಶಾರದ ಮಂದಿರ, ಮೈಸೂರು, ೧೯೭೧.

೭೪. **ಸಚಿತ್ರ ಕನ್ನಡ** – ಕನ್ನಡ ಕಸ್ತೂರಿಕೋಶ – ಪಂಡಿತ ಚೆ.ಎ. ಕವಲಿ, ರಾಮಾಶ್ರಯ ಬುಕ್ ಡಿಪೋ, ಧಾರವಾಡ, ೧೯೯೪.

೭೫. **ಸಂಕೀರ್ಣ ವಚನ ಸಂಪುಟ-೬**, ಸಂ. ಎಸ್. ಶಿವಣ್ಣ, ಪ್ರ – ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩.

೭೬. **ಸಂಕೀರ್ಣ ವಚನ ಸಂಪುಟ-೮**, ಸಂ. ಡಾ॥ ವೀರಣ್ಣ ರಾಜೂರ, ಪ್ರ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು, ೧೯೯೩.

೭೭. **ವೀರಶೈವ ಹಸ್ತಪ್ರತಿ ಪುಷ್ಪಿಕೆಗಳು** – ಸಂ. ಎಸ್. ಶಿವಣ್ಣ, ಪ್ರ – ವೀರಶೈವ ಅಧ್ಯಯನ ಸಂಸ್ಥೆ, ತೋಂಟದಾರ್ಯಮಠ, ಗದಗ, ೧೯೯೪.

೭೮. **ನೂರು ಶೋಧ** – ಡಾ. ವೀರಣ್ಣ ರಾಜೂರ, ಶುಭಮುದ್ರಣ ಪ್ರಕಾಶನ, ಬೆಂಗಳೂರು, ೨೦೦೭.

೭೯. **ಶಬ್ದ ಸಂಪುಟ** – ಡಾ. ಎಸ್. ವಿದ್ಯಾಶಂಕರ, ಪ್ರಕಟಣೆ: ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು, ೨೦೦೮.

ಲೇಖನಗಳು

೧) ಮುರಿಗಾ ಶಾಂತವೀರರು – ಜಿ.ಜಿ. ಮಂಜುನಾಥನ್
ಹರಿತಿಸಿರಿ

೨) ಮುರಿಗಾ ಸಂಪ್ರದಾಯ ಮತ್ತು ಕೆಳದಿ ಹಾಗೂ ಕೊಡಗಿನ ಅರಸರು
– ಬಿ. ರಾಜಶೇಖರಪ್ಪ
ಹರಿತಿಸಿರಿ

೩) ಮಠಗಳ ಹಿನ್ನೆಲೆ – ಡಾ॥ ಬಿ.ವ್ಹಿ. ಮಲ್ಲಾಪುರ
ಸುಧಾರ್ಣವ

೪) ಶಾಸನಗಳಲ್ಲಿ ಮುರಿಗಾ ಸಮಯ, ಮುರಿಗಾಮಠ ಮತ್ತು ಮುರಿಗಾಸ್ವಾಮಿಗಳು
– ಡಾ॥ ಬಿ.ವ್ಹಿ. ಮಲ್ಲಾಪುರ
ಸುಧಾರ್ಣವ

೫) ಚೀಲಾಳ ಸಮಯ – ಡಾ॥ ಎಂ.ಎಂ. ಕಲಬುರ್ಗಿ
ಕರ್ನಾಟಕ ಭಾರತಿ,
ಸಂಪುಟ–೩೪,
ಸಂಚಿಕೆ –೪.

೬) ಇಮ್ಮಡಿ ಗುರುಸಿದ್ಧ ವಿರಚಿತ ಅಪ್ರಕಟಿತ ಸ್ವರವಚನಗಳು ಹಾಗೂ ಸ್ಕಂದಕಲ್ಯಾಣದೊಳಗಣ ಚೌಪದಿ ವರ್ಣದ ಶಿವಸ್ತೋತ್ರ
– ಶಿವಣ್ಣ ಎಸ್ (ಸಂ.)
ಚಿನ್ಮೂಲಾದ್ರಿ ಚೇತನ

೭) ಇಮ್ಮಡಿ ಗುರುಸಿದ್ಧ ಸ್ವಾಮಿಗಳ ಸ್ಕಂದಕಲ್ಯಾಣದಲ್ಲಿನ ಶಿವಸ್ತೋತ್ರ
– ಶಿವಣ್ಣ ಎಸ್. (ಸಂ.)
ಬಸವಪಥ, ಸಂಪುಟ–೧೧,
ಸಂಚಿಕೆ–೧೩.

೮) ಸ್ಕಂದಕಲ್ಯಾಣಾಂತರ್ಗತ ಕಗ್ಗದ ವೀರಮಾಸ್ತೇರ ದ್ವಿಪದಿಸ್ತೋತ್ರ
– ಶಿವಣ್ಣ ಎಸ್. (ಸಂ)
ಸಾಧನೆ : ಸಂಪುಟ–೧೮,
ಸಂಚಿಕೆ–೧, ೨. ೧೯೮೯.

೯) ಶಿವರಹಸ್ಯ – ಶಿವಣ್ಣ ಎಸ್. (ಸಂ)
ಬಸವಪಥ, ಸಂಪುಟ–೪,
ಸಂಚಿಕೆ–೩, ಮೇ ೧೯೮೨.

೧೦) ಮಂತ್ರಗೋಪ್ಯ ಸಾಹಿತ್ಯ – ಗಿರಿರಾಜು ಪಿ.ಎಂ.
ಗೌರವ

೧೧) ಸ್ವರವಚನ ಸಾಹಿತ್ಯ – ಡಾ॥ ಎಂ.ಎಂ. ಕಲಬುರ್ಗಿ
ಗೌರವ

೧೨) ಏಕೋತ್ತರ ಶತಸ್ಥಲಸಾಹಿತ್ಯ – ಶಿವಲಿಂಗಯ್ಯ ಜಿ.ವಿ.
ಗೌರವ

೧೩) ಮಿಶ್ರಾರ್ಪಣ ಸಾಹಿತ್ಯ – ಡಾ॥ ಬಿ.ವಿ. ಮಲ್ಲಾಪುರ
ಗೌರವ

೧೪) ನಾಂದ್ಯ – ಸ್ತೋತ್ರ ಸಾಹಿತ್ಯ – ಟಿ.ಆರ್. ಮಹದೇವಯ್ಯ
ಗೌರವ

೧೫) ತಾರಾವಳಿ ಸಾಹಿತ್ಯ – ಡಾ॥ ವೀರಣ್ಣ ರಾಜೂರ
ಗೌರವ

೧೬) ಯಕ್ಷಗಾನ ಸಾಹಿತ್ಯ – ಅಂಬಳಿಕೆ ಹಿರಿಯಣ್ಣ
ಗೌರವ

೧೭) ಚಿತ್ರದುರ್ಗದ ಶ್ರೀ ಬೃಹನ್ಮಠದ ಸಾಂಸ್ಕೃತಿಕ ಕೊಡುಗೆ
– ಟಿ.ಆರ್. ಮಹದೇವಯ್ಯ
ದಾಸೋಹ ಸಿರಿ

೧೮) ಧಾರವಾಡದ ಶ್ರೀ ಮುರುಘಾ ಮಠದ ಕೊಡುಗೆ
– ಪ್ರೊ. ಪಂಚಾಕ್ಷರಿ ಹಿರೇಮಠ
ದಾಸೋಹ ಸಿರಿ

೧೯) ಮುಳಗುಂದದ ಗವಿಮಠದ ಸಾಂಸ್ಕೃತಿಕ ಕೊಡುಗೆ
– ಟಿ.ಆರ್. ಮಹದೇವಯ್ಯ
ದಾಸೋಹ ಸಿರಿ

೨೦) ಶ್ರೀ ಸರ್ಪಭೂಷಣ ಶಿವಯೋಗೀಶ್ವರ ಮಠದ ಕೊಡುಗೆ
– ಡಾ॥ ಡಿ.ಪಿ. ಪರಶಿವಮೂರ್ತಿ
ದಾಸೋಹ ಸಿರಿ

೨೧) ಕೊಡಗಿನ ವೀರಶೈವ ಮಠಗಳ ಕೊಡುಗೆ
– ಎಂ.ಜಿ. ನಾಗರಾಜ್
ದಾಸೋಹ ಸಿರಿ

೨೨) ಮುರುಘರಾಜೇಂದ್ರ ಬೃಹನ್ಮಠ ಚಿತ್ರದುರ್ಗ
– ಡಾ॥ ಬಿ. ರಾಜಶೇಖರಪ್ಪ
ಕಲ್ಯಾಣ ಸಂಗಮ

೨೩) ಮುರುಘರಾಜೇಂದ್ರ ಬೃಹನ್ಮಠ ಚಿತ್ರದುರ್ಗ
– ಬಿ. ರಾಜಶೇಖರಪ್ಪ
ಕಲ್ಯಾಣದ ಹಾದಿ

೨೪) ಮುರುಘಾಮಠ, ಧಾರವಾಡ.– ಡಾ॥ ಚೆನ್ನಕ್ಕ ಪಾವಟೆ
ಕಲ್ಯಾಣದ ಹಾದಿ

೨೫) ಮುದ್ವೀರಸ್ವಾಮಿ "ಶಿವತತ್ವ ಸುಜ್ಞಾನ ಪ್ರದೀಪಿಕೆ"
– ಡಾ॥ ವೀರಣ್ಣ ರಾಜೂರ
ನೂರು ಶೋಧ

೨೬) ಇಮ್ಮಡಿ ಮುರಿಗಾ ಗುರುಸಿದ್ಧ – ಡಾ॥ ಎಸ್. ವಿದ್ಯಾಶಂಕರ
ಶಬ್ದ ಸಂಪುಟ.

ಛಾಯಾಚಿತ್ರಗಳು



ಮುರುಘರಾಜೇಂದ್ರ ಬೃಹನ್ಮಠ ಚಿತ್ರದುರ್ಗ



ಬೆಟ್ಟದ ಮೇಲೆ ಇರುವ ೩೬೦ ಅಂಕಣದ ಬೃಹತ್‌ಮಠ, ಚಿತ್ರದುರ್ಗ



ಶ್ರೀ ಮುರಿಗಾ ಶಾಂತವೀರರ ಗದ್ದುಗೆ ಚಿತ್ರದುರ್ಗ



ಶ್ರೀ ಇಮ್ಮಡಿ ಮುರಿಗಾ ಗುರುಸಿದ್ದರ ಗದ್ದುಗೆ ಆನಂದಪುರ



ಶ್ರೀ ಮಹಾಲಿಂಗ ಸ್ವಾಮಿಗಳು



ಶ್ರೀ ಜಯದೇವಸ್ವಾಮಿಗಳು



ಶ್ರೀ ಜಯವಿಭವ ಸ್ವಾಮಿಗಳು



ಶ್ರೀ ಮಲ್ಲಿಕಾರ್ಜುನ ಸ್ವಾಮಿಗಳು



ಬೃಹನ್ಮಠದ ಪೀಠಾಧ್ಯಕ್ಷರಾದ ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು
ಚಿತ್ರದುರ್ಗ